ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನದ ಆಯಾಮಗಳು

(2016-17ನೇ ಸಾಲಿನ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಓಬಳಪ್ಪ ಕೆ.ಎ.

ಮಾರ್ಗದರ್ಶಕರು
ಡಾ. ರಹಮತ್ ತರೀಕೆರೆ
ಪ್ರಾಧ್ಯಾಪಕರು

ಭಾಷಾ ನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೭

773

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನದ ಆಯಾಮಗಳು

(೨೦೧೬-೧೭ನೇ ಸಾಲಿನ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಓಬಳಪ್ಪ ಕೆ.ಎ.

ಮಾರ್ಗದರ್ಶಕರು

ಡಾ. ರಹಮತ್ ತರೀಕೆರೆ

ಪ್ರಾಧ್ಯಾಪಕರು

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೭

ಮಾರ್ಗದರ್ಶಕರ ದೃಢೀಕರಣ ಪತ್ರ

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನದ ಆಯಾಮಗಳು ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಓಬಳಪ್ಪ ಕೆ.ಎ.** ಅವರು ನನ್ನ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ: 04-02-2012

ಸ್ಥಳ: ವಿದ್ಯಾರಣ್ಯ

ಡಾ. ರಹಮತ್ ತರೀಕೆರೆ
ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನದ ಆಯಾಮಗಳು ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ರಹಮತ್ ತರೀಕೆರೆ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾ ನಿಕಾಯದ **ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ** ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: ೦೫-೦೨-೨೦೧೨
ಸ್ಥಳ: ವಿದ್ಯಾರಣ್ಯ

ಓಬಳಪ್ಪ ಕೆ.ವಿ.
ಸಂಶೋಧನ ವಿದ್ಯಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ ಮತ್ತು ಮಹತ್ವ, ವಿಧಾನ, ಆಕರಗಳು ಹಾಗೂ ವ್ಯಾಪ್ತಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ ಮತ್ತು ಮಹತ್ವ, ವಿಧಾನ, ಆಕರಗಳು ಹಾಗೂ ವ್ಯಾಪ್ತಿ

ಪ್ರವೇಶಿಕೆ

ಭಾರತವು ಹಲವಾರು ಮತ ಜಾತಿ ಜನಾಂಗಗಳನ್ನು ಹೊಂದಿದ್ದು, ಬಹು ಸಂಸ್ಕೃತಿಗಳ ತವರಾಗಿದೆ. ಇಲ್ಲಿ ಹಿಂದೂ ಕ್ರೈಸ್ತ ಇಸ್ಲಾಂ ಬೌದ್ಧ ಜೈನ ಸಿಖ್ಖ್ ಇತ್ಯಾದಿಯಾಗಿ ಹಲವಾರು ಧರ್ಮಗಳು ನೆಲೆಸಿವೆ. ಭಾರತದಲ್ಲಿ ಬೌದ್ಧಧರ್ಮವನ್ನು ಒಳಗೊಂಡಂತೆ ಹೊಸ ಧರ್ಮಗಳು ಹುಟ್ಟಿವೆ. ಇದಕ್ಕೆ ಪ್ರಮುಖ ಕಾರಣ ಭಾರತದ ಬ್ರಾಹ್ಮಣವಾದ ಹಾಗೂ ವೈದಿಕ ಪುರೋಹಿತಶಾಹಿ ವ್ಯವಸ್ಥೆಯಾಗಿದೆ. ಇದು ಶತಮಾನಗಳಿಂದ ಅಸಮಾನತೆಯ ಶ್ರೇಣಿಕೃತ ವ್ಯವಸ್ಥೆಯನ್ನು ರೂಪಿಸಿಕೊಂಡು ಎಲ್ಲ ವರ್ಗಗಳ ಮೇಲೆ ತನ್ನ ಅಧಿಪತ್ಯವನ್ನು ಸ್ಥಾಪಿಸಿಕೊಂಡು ಬಂದಿದೆ. ದುಡಿಯುವ ಸಾಮಾನ್ಯ ಜನತೆಯನ್ನು ಅಮಾನವೀಯ ನೆಲೆಯಲ್ಲಿ ಶೋಷಣೆಗೆ ಗುರಿಪಡಿಸಿದೆ. ಧರ್ಮ ಮತ್ತು ದೇವರ ಹೆಸರಿನಲ್ಲಿ ತಾರತಮ್ಯ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವುದಕ್ಕೆ ಪುರಾಣ, ಸ್ಮೃತಿ ಮುಂತಾದ ಧರ್ಮಗ್ರಂಥಗಳನ್ನು ರಚಿಸಿಕೊಂಡಿದೆ. ಇಂಥ ಚಾರಿತ್ರಿಕ ಸನ್ನಿವೇಶದಲ್ಲಿ ರೈತಾಪಿ ಹಾಗೂ ತಳಸಮುದಾಯಗಳ ಆಶಾಕಿರಣವಾಗಿ ಬುದ್ಧನು ನೊಂದವರ ಪರವಾದ ಪ್ರತಿ ಧರ್ಮವನ್ನು ಸೃಷ್ಟಿಸಿದನು. ಆ ಮೂಲಕವಾಗಿ ಬೌದ್ಧಧರ್ಮವು ತನ್ನ ಅಸ್ತಿತ್ವವನ್ನು ಪಡೆಯಿತು.

ಅಮಾನವೀಯವಾದ ಪುರೋಹಿತಶಾಹಿ ವ್ಯವಸ್ಥೆಯಿಂದ ಬೇಸತ್ತ ಹಾಗೂ ಪರ್ಯಾಯ ಸಮಾಜವನ್ನು ಬಯಸುವಂತಹ ಜನ ಸಮುದಾಯಗಳು ಬೌದ್ಧಧರ್ಮದ ಮೊರೆ ಹೊಕ್ಕವು. ಬುದ್ಧನ ಮೂಲಕ ಹೊಸ ಬದುಕನ್ನು ನಿರ್ಮಿಸಿಕೊಳ್ಳಲು ಯತ್ನಿಸಿದವು. ಬೌದ್ಧಧರ್ಮವನ್ನು ಈ ಸಮುದಾಯಗಳು ಆಯ್ದುಕೊಳ್ಳುವುದಕ್ಕೆ ಪ್ರಮುಖ ಕಾರಣವೆಂದರೆ, ಅದರಲ್ಲಿದ್ದ ಕರುಣೆ ವೈಚಾರಿಕತೆ ಹಾಗೂ ಸಮಾನತೆಯ ಅವಕಾಶಗಳು. ಹೀಗಾಗಿಯೇ ಕ್ರಿ.ಪೂ.ಯುಗದಲ್ಲಿನ ಬುದ್ಧನ ಸಂದೇಶಗಳಿಗೆ ಇಪ್ಪತ್ತೊಂದನೆಯ ಶತಮಾನದ ಶೋಷಿತ ಸಮುದಾಯಗಳು ಈಗಲೂ ಸ್ಪಂದಿಸುತ್ತಿರುವುದು. ವರ್ತಮಾನದಲ್ಲೂ ಹೆಚ್ಚು ಜನರು ಬುದ್ಧನ ವಿಚಾರಗಳನ್ನು ಆಶ್ರಯಿಸುತ್ತಿದ್ದಾರೆ. ಬುದ್ಧನ ಚಿಂತನೆಗಳು ಬದಲಾದ ಕಾಲದಲ್ಲಿ ಮರುಹುಟ್ಟು ಪಡೆದುಕೊಂಡು ಆಯಾ ಕಾಲದ ಸಾಮಾಜಿಕ ಸನ್ನಿವೇಶಗಳಿಗೆ ಸ್ಪಂದಿಸುತ್ತಿರುವುದು ಮಹತ್ವದ ಸಂಗತಿಯಾಗಿದೆ.

ಕರ್ನಾಟಕದ ಆರೂಢ ಪರಂಪರೆ, ಶರಣ ಚಳವಳಿ, ನಾಥಪರಂಪರೆ ಹಾಗೂ ಆಧುನಿಕ ವಿಚಾರವಾದಗಳು ಬೌದ್ಧದರ್ಶನದಿಂದ ಪರೋಕ್ಷವಾದ ಪ್ರೇರಣೆ ಪಡೆದುಕೊಂಡಿವೆ. ದಲಿತ ಚಳವಳಿಯ ಪ್ರಮಥರಾದ ಬಿ.ಆರ್.ಅಂಬೇಡ್ಕರ್‌ರವರು ದಲಿತರು ಹೊಸ ಬದುಕನ್ನು ಪಡೆದುಕೊಳ್ಳಬೇಕಾದರೆ ಬುದ್ಧನ ವಿಚಾರಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಭಾವಿಸಿದರು. ಹೀಗೆ ಬೌದ್ಧ ಚಿಂತನೆಗಳು ಭಾರತದ ತಳ ಸಮುದಾಯಗಳ ಸಾಮಾಜಿಕ ಬದುಕಿನಲ್ಲಿ ಶತಮಾನಗಳ ಕಾಲದಿಂದಲೂ ಪರ್ಯಾಯ ಸಮಾಜದ ಕನಸುಗಳನ್ನು ಬಿತ್ತುತ್ತಲೇ ಇವೆ.

ವೈದಿಕ ಪುರೋಹಿತಶಾಹಿಯು ಸಕಲ ಜೀವಿಗಳನ್ನು ಸಮಾನತೆಯ ನೆಲೆಯಲ್ಲಿ ಕಂಡುಕೊಂಡ ಬುದ್ಧನನ್ನು ತನ್ನ ದಶಾವತಾರ ಕಲ್ಪನೆಗೆ ಸೇರಿಸಿಕೊಂಡಿದೆ. ಆ ಮೂಲಕ ಬುದ್ಧನ ತರುವಾಯದಲ್ಲಿ ಬೌದ್ಧಧರ್ಮದಲ್ಲಿ ಇದ್ದಂತಹ ಸಹಜ ತತ್ವಗಳನ್ನು ಪುರೋಹಿತಶಾಹಿಯು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡು ಬಂದಿದೆ. ವೈದಿಕ ತಂತ್ರಗಾರಿಕೆಯನ್ನು ವಿರೋಧಿಸಿದ ಬುದ್ಧನನ್ನು ವೈದಿಕತೆಯೊಳಗೆ ಬಂದಿಸುವ ಎಲ್ಲ ಮಾರ್ಪಾಡುಗಳನ್ನು ನಡೆಸಿಕೊಂಡು ಬುದ್ಧನ ಮೂಲ ಚಿಂತನೆಗಳನ್ನು ಮರೆಮಾಚುವ ಪ್ರಯತ್ನ ಮಾಡಿರುವುದು ಕಂಡುಬರುತ್ತದೆ. ಇಂದು ಪ್ರಚಲಿತದಲ್ಲಿರುವ ಎಲ್ಲ ಆಚರಣೆ ಕ್ರಿಯೆಗಳು ಬುದ್ಧನ ಚಿಂತನೆಗಳಿಗೆ ವಿರುದ್ಧವಾದವುಗಳಾಗಿವೆ. ಇತ್ತೀಚಿನ ಚಿಂತಕರು ತಮ್ಮ ವಿಚಾರವಾದದಿಂದ ಬುದ್ಧನ ಮೂಲ ಆಶಯಗಳನ್ನು ಚರ್ಚೆ, ಸಂವಾದ, ಸಂಶೋಧನೆಗಳ ಮೂಲಕ ಶೋಧಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ.

ಬುದ್ಧನ ತರುವಾಯದಲ್ಲಿ ಬೌದ್ಧಧರ್ಮವು ಆತನ ಅನುಯಾಯಿಗಳಿಂದ ಹಲವಾರು ಪಂಗಡಗಳಾಗಿ ಹೊಡೆದು ಹೋಗಿದೆ. ಆರಂಭ ಘಟ್ಟದಲ್ಲಿ ಇದ್ದಂತಹ ಹೀನಯಾನದಲ್ಲಿನ ಅನುಯಾಯಿಗಳಲ್ಲಿ ಬಿರುಕು ಕಾಣಿಸಿಕೊಂಡು ಮಹಾಯಾನ ಪಂಥವಾಗಿ ಕವಲೊಡೆಯಿತು. ಇಲ್ಲಿ ಬುದ್ಧನ ತತ್ವ ಚಿಂತನೆಗಳು ಪರಸ್ಪರ ವಿರುದ್ಧವಾಗಿ ಆಚರಣೆಗೆ ಬಂದವು. ಮೂರ್ತಿಪೂಜೆ, ಆರಾಧನ ಕ್ರಮವನ್ನು ವಿರೋಧಿಸಿದ ಬುದ್ಧನನ್ನು ದೇವಾಲಯ ಕಟ್ಟಿ ಮೂರ್ತಿಯಾಗಿ ಆರಾಧಿಸುವ ಕ್ರಮವನ್ನು ಮಹಾಯಾನ ಪಂಥದ ಅನುಯಾಯಿಗಳು ಆರಂಭಿಸಿದರು. ಇಲ್ಲಿ ಪುರೋಹಿತಶಾಹಿಯು ತನ್ನ ಪ್ರವೇಶವನ್ನು ಪಡೆದುಕೊಂಡು ಸಾಮಾನ್ಯ ಜನರ ಭಾಷೆಯಾದ ಪಾಳಿಗೆ ಬದಲಾಗಿ ಸಂಸ್ಕೃತ ಪ್ರವೇಶಿಸಿತು. ಇಲ್ಲಿ ಸಂಸ್ಕೃತ ಭೂಹಿಷ್ಟವಾದ ಶ್ಲೋಕಗಳು ಆರಂಭಗೊಂಡು, ಜನಸಾಮಾನ್ಯರಿಂದ ಈ ಧರ್ಮವು ಬಹುದೂರ ಸರಿಯತೊಡಗಿತ್ತು. ನಂತರ ಈ ಪಂಗಡವು ಸಹ ಹಲವು ಪಂಥಗಳಾಗಿ ವಜ್ರಯಾನ, ತಂತ್ರಯಾನ, ಮಂತ್ರಯಾನದಂತಹ ಪಂಥಗಳಾಗಿ ಬಹಿರಾಚರಣೆಯು ಇಲ್ಲಿ ತಲೆದೋರಿರುವುದು ಕಂಡುಬರುತ್ತದೆ.

ಬುದ್ಧನ ನಿರ್ವಾಣದ ತರುವಾಯ ಆತನ ತತ್ವ ಸಿದ್ಧಾಂತಗಳು ಸಂಪೂರ್ಣವಾಗಿ ಮೂಲಭೂತವಾದವನ್ನು ತಲುಪಿವೆ. ಹೀಗಾಗಿ ಬುದ್ಧನ ಜೊತೆಯಲ್ಲಿಯೇ ಬೌದ್ಧಧರ್ಮ ಅವನತಿಯನ್ನು ಕಂಡುಕೊಂಡಿತು. ಈಗ ಇರುವ ಬೌದ್ಧಧರ್ಮಕ್ಕೂ ಬುದ್ಧ ಪ್ರತಿಪಾದಿಸಿದ ಧರ್ಮಕ್ಕೂ ಯಾವುದೇ ಹೊಂದಾಣಿಕೆ ಇಲ್ಲ. ಆದ್ದರಿಂದ ಪ್ರಸ್ತುತದಲ್ಲಿ ಪ್ರಚಲಿತವಿರುವ ಬೌದ್ಧಧರ್ಮದ ನಿಲುವುಗಳು

ಸಂಪೂರ್ಣವಾಗಿ ಪುರೋಹಿತಶಾಹಿಯಂತೆ ಇವೆ ಎಂಬ ವಾದಗಳು ಕಂಡಬರುತ್ತವೆ. ಬುದ್ಧ ಋಣಾತ್ಮಕತೆಯಿಂದ ತನ್ನ ಚಿಂತನೆಗಳನ್ನು ಆರಂಭಿಸಿ ಧನಾತ್ಮಕತೆಯೆಡೆಗೆ ಕೊಂಡೊಯ್ಯುತ್ತಿದ್ದ. ದೇವರಿಲ್ಲ ಸ್ವರ್ಗ ನರಕಗಳಿಲ್ಲ ಎಂದು ಪ್ರತಿಪಾದಿಸುವ ಮೂಲಕ ದೇವರಿಲ್ಲದ ಮಾನವ ಧರ್ಮವನ್ನು ಸೃಷ್ಟಿಸಿದ. ಆದರೆ ಇಂದಿನ ಬೌದ್ಧಧರ್ಮದ ಚಿಂತನೆಗಳು ಧನಾತ್ಮಕತೆಯಿಂದ ಋಣಾತ್ಮಕತೆಯೆಡೆಗೆ ಸಾಗುತ್ತಿವೆ. ದೇವರು, ಧರ್ಮದ ಹೆಸರಿನಲ್ಲಿ ಮೂಲಭೂತವಾದವನ್ನು ಪ್ರತಿಪಾದಿಸುವ ಬಗೆಗೆ ವಿಚಾರಗಳು ವ್ಯಕ್ತವಾಗುತ್ತಿವೆ.

ಬೌದ್ಧಧರ್ಮದಲ್ಲಿನ ಸರ್ವಸಮಾನತೆಯ ತತ್ವಗಳಿಂದ ಈ ಧರ್ಮವು ಜಗತ್ತಿನ ಹಲವಾರು ರಾಷ್ಟ್ರಗಳಲ್ಲಿ ತನ್ನ ಪ್ರಭಾವವನ್ನು ಪಡೆದುಕೊಂಡಿದೆ. ಬಹುತೇಕ ಚಿಂತಕರು ಬೌದ್ಧಧರ್ಮ ಯಾವುದೇ ರಕ್ತಪಾತವಿದಲ್ಲದೆ ಶಾಂತಿಯುತವಾಗಿ ಬಾಳಿಬದುಕಿದ ಧರ್ಮ ಎಂಬುದಾಗಿ ವಾದಿಸುತ್ತಾರೆ. ಹಾಗೆಯೇ ಕ್ರೌರ್ಯವನ್ನು ತೊರೆದು ಮೂಲಭೂತವಾದದಿಂದ ಹೊರಗುಳಿದ ಧರ್ಮವೆಂದರೆ ಅದು ಬೌದ್ಧಧರ್ಮ ಎಂದು ಪ್ರತಿಪಾದಿಸುತ್ತಿರುವುದು ಕಂಡುಬರುತ್ತದೆ. ಆದರೆ ಇಂದು ಬೌದ್ಧಧರ್ಮದ ಅನುಯಾಯಿಗಳು ಕೂಡ ರಕ್ತಪಾತದಂತಹ ಹಿಂಸಾತ್ಮಕ ಕ್ರಿಯೆಗೆ ತೊಡಗಿರುವುದು ಕಂಡುಬರುತ್ತದೆ. ಬೌದ್ಧಚಿಂತಕರಾದ ಸುಲಕ್ ಸಿವರಕ್ಸ್ ಅವರು ಅಭಿಪ್ರಾಯಪಡುವಂತೆ "ಇವತ್ತು ಜಗತ್ತಿನ ಪ್ರತಿಧರ್ಮವೂ ತನ್ನ ಮೂಲ ಬೋಧನೆಗಳನ್ನು ಮರು ಓದಿಕೊಳ್ಳಬೇಕು. ತನ್ನನ್ನು ತಾನು ಪ್ರಸ್ತುತಗೊಳಿಸಿಕೊಳ್ಳಬೇಕು. ಬೌದ್ಧಧರ್ಮವೂ ಇದರಿಂದ ಹೊರತಲ್ಲ. ಶ್ರೀಲಂಕಾ ಮತ್ತಿತರ ದೇಶಗಳಲ್ಲಿ ಬುದ್ಧಿಸಂ ಅನ್ನು ಪ್ರಭುತ್ವವು ಅಧಿಕಾರದ ಉಪಕರಣದಂತೆ ಬಳಸುತ್ತದೆ" ಎಂಬುದಾಗಿ ತಿಳಿಸಿದ್ದಾರೆ. ಇಂದು ಈ ಧರ್ಮವು ಕೂಡ ರಕ್ತಪಾತದಂತಹ ಕ್ರಿಯೆಗೆ ಮುಂದಾಗಿರುವುದು ಇದುವರೆಗಿನ ಬೌದ್ಧಧರ್ಮದ ಪರವಾದ ಚಿಂತಕರ ವಿಚಾರಗಳನ್ನು ತಲೆ ಕೆಳಗೆ ಮಾಡಿರುವುದು ಕಂಡುಬರುತ್ತದೆ.

ಇಂದು ಜಗತ್ತಿನ ಧರ್ಮಗಳ ಮೇಲಿನ ಅಧ್ಯಯನಗಳನ್ನು ಸೂಕ್ಷ್ಮವಾಗಿ ಅವಲೋಕನ ಮಾಡಿದರೆ ಬೌದ್ಧಧರ್ಮದ ಮೇಲೆ ನಡೆದಿರುವಷ್ಟು ಅಧ್ಯಯನಗಳು ಬೇರಾವುದೇ ಧರ್ಮಗಳ ಮೇಲೆ ನಡೆದಿರುವುದು ಕಂಡುಬರುವುದಿಲ್ಲ. ಜಾಗತಿಕ ಶಾಂತಿಯನ್ನು ಬಯಸಿ ಬಹುತೇಕ ರಾಷ್ಟ್ರಗಳು ಬುದ್ಧನ ಅಹಿಂಸ ಸಿದ್ಧಾಂತವನ್ನು ಅನುಸರಿಸುತ್ತಿರುವುದು ಕಂಡುಬರುತ್ತದೆ. ಇಂದು ಕ್ರೈಸ್ತಧರ್ಮದ ದಟ್ಟ ಪ್ರಭಾವವಿರುವಂತಹ ಆಸ್ಟ್ರೇಲಿಯಾದಲ್ಲಿ ಬೌದ್ಧಧರ್ಮವು ಎರಡನೇ ಧರ್ಮವಾಗಿ ತನ್ನ ಮಹತ್ವವನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ. ಇತ್ತೀಚಿನ ದಿನಗಳಲ್ಲಿ ಭಾರತದ ಎಡಪಂಥೀಯ ಚಿಂತಕರು ತಮ್ಮ ಜಾಗೃತ ಕಲ್ಪನೆಯಿಂದ ಬೌದ್ಧಧರ್ಮದತ್ತ ಮುಖಮಾಡುತ್ತಿರುವುದು ಕಂಡುಬರುತ್ತದೆ. ಇವರು ಬೌದ್ಧಧರ್ಮವನ್ನು ಮತ್ತೇ ಈ ನೆಲದಲ್ಲಿ ಮರುಸ್ಥಾಪಿಸಿ, ಸಾಮಾನ್ಯ ಜನರಲ್ಲಿ ಈ ಧರ್ಮದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿರುವುದು ತಿಳಿದುಬರುತ್ತದೆ.

ವೈದಿಕ ಧರ್ಮದ ನಿಲುವುಗಳಿಂದ ಬೇಸತ್ತ ಬಾಬಾಸಾಹೇಬ್ ಅಂಬೇಡ್ಕರರು ಬೌದ್ಧಧರ್ಮಕ್ಕೆ ಮತಾಂತರ ಹೊಂದಿದ ದಿನದಿಂದ ಪ್ರಸ್ತುತದವರೆಗೂ ಪ್ರತಿವರ್ಷ ದಲಿತರು ಮತಾಂತರಕ್ಕೆ ಮುಂದಾಗುತ್ತಿದ್ದಾರೆ. ಈ ಕ್ರಿಯೆಗೆ ದಲಿತ ಸಂಘರ್ಷ ಸಮಿತಿಗಳು, ದಲಿತಪರ ಹೋರಾಟಗಳು

ಸಹಕಾರ ನೀಡುತ್ತಿವೆ. ಇಲ್ಲಿನ ಮತಾಂತರ ಪ್ರಕ್ರಿಯೆಗೆ ಅಂಬೇಡ್ಕರರ ನೇರ ಪ್ರಭಾವ ಕಂಡುಬರುತ್ತದೆ. ಆದರೆ ಇಲ್ಲಿ ಮತಾಂತರ ಹೊಂದಿದವರಿಗೆ ಧರ್ಮವನ್ನು ಅರ್ಥೈಸಿಕೊಳ್ಳುವುದಕ್ಕೆ ಸೂಕ್ತ ವೇದಿಕೆಗಳಿಲ್ಲ. ಅಂಬೇಡ್ಕರ್ ಮತಾಂತರಗೊಂಡರು ಎಂಬ ಕಾರಣಕ್ಕೆ ಇಲ್ಲಿ ಮತಾಂತರಗಳಾಗುತ್ತಿವೆ. ಆದರೆ ಅಂಬೇಡ್ಕರರ ಈ ಕ್ರಿಯೆಯ ಹಿಂದಿನ ಪ್ರಮುಖ ಉದ್ದೇಶ ಯಾವುದಾಗಿತ್ತು ಎಂಬುದರ ಕುರಿತ ಆಲೋಚನೆಗಳು ಇಲ್ಲಿ ಕಂಡುಬರುವುದಿಲ್ಲ. ಇಲ್ಲಿ ಮತಾಂತರಗೊಂಡವರಿಗೂ ಹಿಂದಿನ ಸ್ಥಿತಿಗೂ ಯಾವುದೇ ವ್ಯತ್ಯಾಸಗಳಿಲ್ಲ. ತಮ್ಮ ಜೀವನದಲ್ಲಿ ಮತಾಂತರದಿಂದ ಯಾವುದೇ ಬದಲಾವಣೆಗಳಾಗಿಲ್ಲ ಎಂಬುದು ಬಹುತೇಕ ನವಬೌದ್ಧರ ಮಾತಾಗಿದೆ. ಬಹುತೇಕ ಚಿಂತಕರು ಇಲ್ಲಿ ಬೌದ್ಧಧರ್ಮದ ಬಗ್ಗೆ ಹಾಗೂ ಅಂಬೇಡ್ಕರರ ಬಗ್ಗೆ ಆಲೋಚಿಸುವಂತೆ, ದಲಿತರ ಜೀವನದ ಬಗ್ಗೆ ಯಾವುದೇ ಚಿಂತನೆಗಳನ್ನು ವ್ಯಕ್ತಪಡಿಸುತ್ತಿರುವುದು ಕಂಡುಬರುತ್ತಿಲ್ಲ.

ಬಹುತೇಕ ಕನ್ನಡ ಚಿಂತಕರು ವೈದಿಕ ಪುರೋಹಿತಶಾಹಿಯನ್ನು ವಿರೋಧಿಸುವುದಕ್ಕೆ ಬೌದ್ಧಧರ್ಮವನ್ನು ಅಸ್ತ್ರವಾಗಿ ಬಳಸಿಕೊಂಡಿದ್ದಾರೆ. ಇವರಿಗೆ ಸಾಮಾನ್ಯ ಜನರ ಜೀವನ ಹಾಗೂ ಅವರಲ್ಲಿ ಜಾಗೃತಿ ಮೂಡುವುದಕ್ಕಿಂತ ಹೆಚ್ಚಾಗಿ ತಮ್ಮ ವಾದವನ್ನು ಮಂಡಿಸುವುದೇ ಪ್ರಮುಖವಾಗಿ ಕಂಡುಬರುತ್ತದೆ. ಇಲ್ಲಿ ದಲಿತರು ಹೋರಾಟ ಹಾಗೂ ಚಳವಳಿಗಳಿಗೆ ಒಂದು ವಸ್ತುವಾಗಿದ್ದಾರೆಯೇ ವಿನಃ ದಲಿತಪರವಾದ ನಿಲುವುಗಳ ಕೊರತೆ ಎದ್ದುಕಾಣುವುದನ್ನು ಗಮನಿಸಬಹುದಾಗಿದೆ. ಇದರಿಂದ ಬಹುತೇಕ ಚಳವಳಿ ಹಾಗೂ ಸಂಘಟನೆಗಳು ಉಳ್ಳವರ ಪಾಲಾಗುತ್ತಿದ್ದು, ಸಾಮಾನ್ಯ ದಲಿತರು ದಲಿತಪರ ಚಳವಳಿಗಳಿಂದಲೇ ತುಳಿತಕ್ಕೊಳಗಾಗುತ್ತಿರುವುದು ಕಂಡುಬರುತ್ತದೆ. ಇಂದಿನ ದಲಿತರನ್ನು ಶೋಷಣೆ ಮಾಡುತ್ತಿರುವವರು ಕೇವಲ ಪುರೋಹಿತಶಾಹಿಗಳಲ್ಲ. ದಲಿತ ಮುಖವಾಡ ಧರಿಸಿದ ಬಲಿತ ದಲಿತರು ಕೂಡ ದಮನಿತ ದಲಿತರನ್ನು ಹತ್ತಿಕ್ಕುವುದಕ್ಕೆ ಮುಂದಾಗಿರುವುದು ಕಂಡುಬರುತ್ತದೆ.

ಬಾಬಾ ಸಾಹೇಬ ಅಂಬೇಡ್ಕರ್ ಬೌದ್ಧಧರ್ಮವನ್ನು ಸ್ವೀಕರಿಸಿರುವುದನ್ನು ಎಡಪಂಥೀಯ ಚಿಂತಕರು ಮುಕ್ತವಾಗಿ ಸ್ವಾಗತಿಸಿದ್ದಾರೆ. ಆದರೆ ಬಲಪಂಥೀಯ ಮನಸ್ಸುಗಳು ಅಂಬೇಡ್ಕರರ ಈ ಕ್ರಮವನ್ನು ಟೀಕೆಗೆ ಗುರಿಪಡಿಸಿರುವುದು ಕಂಡುಬರುತ್ತದೆ. ಇವರ ದೃಷ್ಟಿಯಲ್ಲಿ ಅಂಬೇಡ್ಕರ್ ತಮ್ಮ ಜೀವನದ ಅಂತಿಮ ಘಟ್ಟದಲ್ಲಿ ಬೌದ್ಧಧರ್ಮಕ್ಕೆ ಮತಾಂತರಗೊಂಡಿರುವುದು ಸೇಡಿನ ಭಾವನೆಯಿಂದ ಮಾತ್ರ, ಬೌದ್ಧಧರ್ಮದಲ್ಲಿರುವ ಉತ್ತಮ ಅಂಶಗಳನ್ನು ಮನಗಂಡು ಅಲ್ಲ ಎಂಬುದು ಬಲಪಂಥೀಯರ ವಾದವಾಗಿದೆ. ಆದರೆ ಎಡಪಂಥೀಯ ಚಿಂತಕರು ಇದಕ್ಕೆ ಸೂಕ್ತವಾದ ಪ್ರತಿಕ್ರಿಯೆ ನೀಡುವ ಮೂಲಕ ಬಾಬಾಸಾಹೇಬರ ನಿಲುವುಗಳನ್ನು ಸಮರ್ಥಿಸಿಕೊಳ್ಳುವ ಕಾರ್ಯವನ್ನು ನಡೆಸುತ್ತಿರುವುದು ಕಂಡುಬರುತ್ತದೆ.

ಕರ್ನಾಟಕದ ಸಂದರ್ಭದಲ್ಲಿ ಪ್ರಸ್ತುತ ದಿನಮಾನಗಳಲ್ಲಿ ಬೌದ್ಧಧರ್ಮ, ದರ್ಶನ ಹಾಗೂ ಅಂಬೇಡ್ಕರರ ನಿಲುವುಗಳ ಕುರಿತಾಗಿ ಹೊಸ ಹೊಸ ಚರ್ಚೆ, ಸಂವಾದಗಳು ನಡೆಯುತ್ತಲೆ ಇವೆ. ಬದಲಾದ ಚಾರಿತ್ರಿಕ ಸನ್ನಿವೇಶಗಳಿಗೆ ಈ ಇಬ್ಬರು ದಾರ್ಶನಿಕರನ್ನು ಮರು ಓದಿಗೆ ಒಳಪಡಿಸುವ ಕ್ರಮಗಳು ಫಲವಾಗಿ ನಡೆಯುತ್ತಿವೆ. ವರ್ತಮಾನದ ಹಲವಾರು ಸಮಸ್ಯೆ ಹಾಗೂ ತಲ್ಲಣಗಳಿಗೆ ಬುದ್ಧ ಮತ್ತು ಅಂಬೇಡ್ಕರರತ್ತ ಬಹುತೇಕ ಚಿಂತಕರು ಮುಖಮಾಡಿರುವುದು ಕಂಡುಬರುತ್ತದೆ.

ಕನ್ನಡ ಚಿಂತನ ಸಾಹಿತ್ಯ ಮತ್ತು ಬೌದ್ಧ ಧರ್ಮ

ಕನ್ನಡ ಸಾಹಿತ್ಯವು ಕಾವ್ಯ, ಸಣ್ಣಕತೆ, ಕಾದಂಬರಿ, ನಾಟಕ ಎಂಬ ಹಲವಾರು ಪ್ರಕಾರಗಳಲ್ಲಿ ಮೂಡಿದ್ದು, ಅದರಲ್ಲಿ ಚಿಂತನ ಸಾಹಿತ್ಯವು ಕೂಡ ಒಂದು ಪ್ರಮುಖ ಪ್ರಕಾರವಾಗಿದೆ. ಇಂತಹ ಚಿಂತನ ಸಾಹಿತ್ಯವನ್ನು ಶಂಬಾ ಜೋಷಿ, ಕುವೆಂಪು, ಪಂಡಿತ ತಾರಾನಾಥ, ಡಿ.ವಿ.ಜಿ. ಶಿವರಾಮ ಕಾರಂತ, ಎ.ಎನ್.ಮೂರ್ತಿರಾವ್, ಯು.ಆರ್.ಅನಂತಮೂರ್ತಿ, ಬಿ.ಕೃಷ್ಣಪ್ಪ, ದೇವನೂರ ಮಹಾದೇವ, ಬರಗೂರು ರಾಮಚಂದ್ರಪ್ಪ, ಸಿದ್ಧಲಿಂಗಯ್ಯ, ಸಿ.ಕೆ.ಮಹೇಶ್, ಅರವಿಂದ ಮಾಲಗತ್ತಿ ಮುಂತಾದ ಚಿಂತಕರು ತಮ್ಮ ಸುತ್ತಮುತ್ತಲಿನ ದೇಶದ ಹಾಗೂ ಜಾಗತಿಕ ಆಗು-ಹೋಗುಗಳನ್ನು ಆಧಾರವಾಗಿಟ್ಟುಕೊಂಡು ಸೃಷ್ಟಿಸಿದರು. ಅವರ ಚಿಂತನ ಸಾಹಿತ್ಯಕ್ಕೆ ಜಗತ್ತಿನ ಬೇರೆ ಬೇರೆ ದಾರ್ಶನಿಕರು, ಸಮಾಜ ಸುಧಾರಕರು ಪ್ರೇರಕರಾಗಿದ್ದಾರೆ. ಮುಖ್ಯವಾಗಿ ಬುದ್ಧ, ಬಸವಣ್ಣ, ಕಾರ್ಲ್‌ಮಾರ್ಕ್ಸ್, ಪೆರಿಯಾರ್, ರಾಮಮನೋಹರ ಲೋಹಿಯಾ ಮುಂತಾದ ಚಿಂತಕರ ಪ್ರಭಾವ ಇವರ ಹಿಂದಿದೆ.

ಕನ್ನಡ ಚಿಂತನ ಸಾಹಿತ್ಯಕ್ಕೆ ಮುಖ್ಯ ಪ್ರೇರಣೆಯಾಗಿ ಬುದ್ಧನ ಚಿಂತನೆಗಳು ಕೆಲಸ ಮಾಡಿರುವುದಕ್ಕೆ ಒಂದು ವಿಶಿಷ್ಟ ಆಯಾಮವಿದೆ. ಕನ್ನಡ ಚಿಂತನ ಸಾಹಿತ್ಯದಲ್ಲಿರುವ ಬೌದ್ಧ ಚಿಂತನೆಗಳು ಜಾತಿ, ಅಸ್ಪೃಶ್ಯತೆ, ವರ್ಗ ಅಸಮಾನತೆಯನ್ನು ವಿರೋಧಿಸಿ, ವೈದಿಕ ಪುರೋಹಿತಶಾಹಿ ಮೌಲ್ಯಗಳ ವಿರುದ್ಧ ಹೋರಾಟ ಮಾಡಿ, ಆರೋಗ್ಯ ಪೂರ್ಣ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಿವೆ. ವೈಜ್ಞಾನಿಕ ಮತ್ತು ವೈಚಾರಿಕ ಚಿಂತನೆಗಳನ್ನು ಅಳವಡಿಸಿಕೊಳ್ಳಲು ನೆರವಾಗಿವೆ. ಹೀಗೆ ಆಧುನಿಕ ಕನ್ನಡ ಚಿಂತನ ಸಾಹಿತ್ಯವು ಬೌದ್ಧದರ್ಶನವನ್ನು ತನ್ನಲ್ಲಿ ಅಂತರ್ಗತ ಮಾಡಿಕೊಂಡು ಹೊಸ ಹೊಸ ವಿನ್ಯಾಸದಲ್ಲಿ ಅಭಿವ್ಯಕ್ತಿಗೊಳ್ಳುತ್ತ ಬಂದಿದೆ.

ಬೌದ್ಧ ದರ್ಶನವನ್ನು ಬ್ರಾಹ್ಮಣವಾದಿ ಹಿಂದೂಧರ್ಮಕ್ಕೆ ಪರ್ಯಾಯವಾಗಿ ನೋಡುವ ಚಿಂತನೆಗಳು ನಮ್ಮಲ್ಲಿವೆ. ಬೌದ್ಧಧರ್ಮವನ್ನು ಪರ್ಯಾಯ ಜೀವನ ವಿಧಾನ ಎಂದು ನೋಡುವ ಚಿಂತನೆಗಳೂ ಇವೆ. ಮೊದಲನೆಯ ಮಾದರಿಯು ಬೌದ್ಧದರ್ಶನ ಮತ್ತು ಚಿಂತನೆಗಳಿಗೆ ಹೆಚ್ಚು ಮಹತ್ವ ನೀಡದೆ ಅದರ ಧಾರ್ಮಿಕ ಆಚರಣೆಗಳಿಗೆ ಹೆಚ್ಚು ಒತ್ತು ನೀಡುತ್ತದೆ. ಎರಡನೇ ಮಾದರಿಯು ಅದರ ಆಚಾರ ಭಾಗಕ್ಕಿಂತ ವಿಚಾರಕ್ಕೆ ಹೆಚ್ಚು ಆದ್ಯತೆ ನೀಡುತ್ತದೆ. ಈ ಎರಡೂ ನೆಲೆಗಳಲ್ಲಿಯೂ ವಿಚಾರಗಳು ವ್ಯಕ್ತವಾಗಿವೆ. ಕೆಲವು ಕನ್ನಡ ಚಿಂತಕರು ಬೌದ್ಧಧರ್ಮವನ್ನು ಕೇವಲ ಶೈಕ್ಷಣಿಕ ಅಗತ್ಯಕ್ಕಾಗಿ ಅಧ್ಯಯನ ಮಾಡಿದ್ದು, ಇವರು ಬೌದ್ಧದರ್ಶನದ ಬಗ್ಗೆ ವೈಯಕ್ತಿಕವಾಗಿ ಧಾರ್ಮಿಕ ನಂಬಿಕೆಯ ಭಾವನೆಯನ್ನು ಹೊಂದಿರುವುದಿಲ್ಲ. ಬೌದ್ಧಧರ್ಮದ ಸಹಚರರೂ ಆಗಿರುವುದಿಲ್ಲ. ಆದರೂ ಇವರು ತಮ್ಮ ಬೌದ್ಧಧರ್ಮದ ಅಧ್ಯಯನದಿಂದ ಹಲವಾರು ಚಿಂತನೆಗಳನ್ನು ಹುಟ್ಟಿ ಹಾಕಿದ್ದಾರೆ.

ಬುದ್ಧನ ಚಿಂತನೆಗಳು ಕರ್ನಾಟಕದ ಆದಿಮ ಜನಾಂಗದ ಜೀವನ ಕ್ರಮದಲ್ಲಿ ಈಗಾಗಲೇ ಇವೆ. ಉದಾ: ಕರ್ನಾಟಕದ 'ಮಾದಿಗ' ಜನಾಂಗವು ಹಿಂದೆ ಬೌದ್ಧರಾಗಿದ್ದರು. ತಮ್ಮ ಆಹಾರ

ಮತ್ತು ವೃತ್ತಿಗಳ ಕಾರಣಕ್ಕಾಗಿ ಅವರು ವೈದಿಕರಿಂದ ಅಸ್ಪೃಶ್ಯರಾದರು. ಅವರ ಜೀವನ ಪದ್ಧತಿಯಲ್ಲಿ ಈಗಲೂ ಬೌದ್ಧ ದರ್ಶನವಿದೆ. ಅದನ್ನು ಹೊಸದಾಗಿ ಅಳವಡಿಸಿಕೊಳ್ಳುವ ಅಗತ್ಯವಿಲ್ಲವೆಂದು ಭಾವಿಸುವ ವಿದ್ವಾಂಸರು ಇದ್ದಾರೆ. 'ಬುದ್ಧನೆಡೆಗೆ ಮರಳಿ ಮನೆಗೆ' ಎಂಬ ಘೋಷ ವಾಕ್ಯ ಹುಟ್ಟಿದ್ದು ಈ ನೆಲೆಯಲ್ಲಿಯೆ. ಈ ಅಧ್ಯಯನಕಾರರು ಮತ್ತು ಚಿಂತಕರು ಜನಪದ ಪುರಾಣಗಳನ್ನು ಇಟ್ಟುಕೊಂಡು ಸಂಶೋಧನೆ ಮಾಡಿದ್ದಾರೆ. ಅದು ಕೂಡ ಕನ್ನಡ ಚಿಂತನ ಸಾಹಿತ್ಯಕ್ಕೆ ಹೊಸ ಆಯಾಮವನ್ನು ಸೇರಿಸಿದೆ.

ವೈದಿಕ ಸನಾತನವಾದವು ಬುದ್ಧನ ಬಗ್ಗೆ ಮಾಡಿರುವ ಚಿಂತನೆಗಳು ಬುದ್ಧನನ್ನು ನಿರಾಕರಿಸುವ, ಇಲ್ಲವೆ ಬುದ್ಧ ಮತ್ತು ಬೌದ್ಧದರ್ಶನದ ಬಗ್ಗೆ ಕಟುವಾದ ಮತ್ತು ನೇತ್ಯಾತ್ಮಕ ನೆಲೆಯಲ್ಲಿ ವಿಮರ್ಶೆ ಮಾಡಿದೆ. ಈ ಪುರೋಹಿತಶಾಹಿ ಚಿಂತನೆಯ ಆಳದಲ್ಲಿ ಅಂಬೇಡ್ಕರ್ ದಲಿತ ವಿರೋಧಿ ನೆಲೆಯಲ್ಲಿ ಈ ವಿಚಾರಧಾರೆಗಳು ವ್ಯಕ್ತವಾಗಿವೆ. ಕರ್ನಾಟಕದ ಸಾಮಾಜಿಕ ಮತ್ತು ರಾಜಕೀಯ ಚಳವಳಿಗಳು ತಮ್ಮ ಚಳವಳಿಯ ಅಗತ್ಯಕ್ಕಾಗಿ ಬುದ್ಧ, ಬಸವ, ಮಾರ್ಕ್ಸ್, ಲೋಹಿಯಾ ಮುಂತಾದ ದಾರ್ಶನಿಕರನ್ನು ಅನುಸಂಧಾನ ಮಾಡುವ, ಮರು ವ್ಯಾಖ್ಯಾನಿಸುವ ಹಾಗೂ ಮರುಹುಟ್ಟಿಸಿಕೊಳ್ಳುವ ಭಾಗವಾಗಿಯೂ ಕೂಡ ಬೌದ್ಧ ಚಿಂತನ ಸಾಹಿತ್ಯವು ನಿರ್ಮಾಣವಾಗಿದೆ. ಬೌದ್ಧಧರ್ಮವನ್ನು ಪ್ರಚಾರ ಮಾಡುವ ಭಾಗವಾಗಿ ಬೇರೆ ಬೇರೆ ಬೌದ್ಧ ಸಂಸ್ಥೆಗಳು ಸೃಷ್ಟಿಸಿರುವ ಸಾಹಿತ್ಯವು ಕನ್ನಡ ಬೌದ್ಧ ಚಿಂತನ ಸಾಹಿತ್ಯಕ್ಕೆ ಕಾರಣವಾಗಿದೆ.

ಬೌದ್ಧದರ್ಶನವನ್ನು ಇಪತ್ತೊಂದನೇ ಶತಮಾನದ ವರ್ತಮಾನದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನೆಲೆಯಲ್ಲಿ ಸ್ವೀಕರಿಸಿಕೊಂಡಿರುವುದು ಕಂಡುಬರುತ್ತದೆ. ಇಲ್ಲಿ ಭಾರತೀಯ ಚಿಂತಕರು ಧರ್ಮವನ್ನು ಪಾಶ್ಚಿಮಾತ್ಯರ ವಿಚಾರಧಾರೆಗಳ ಮೂಲಕ ಬೌದ್ಧ ಚಿಂತನೆಗಳನ್ನು ಸ್ವೀಕರಿಸುತ್ತಿರುವುದು ಕಂಡುಬರುತ್ತವೆ. ಕನ್ನಡ ಚಿಂತನ ಸಾಹಿತ್ಯದಲ್ಲಿ ವ್ಯಕ್ತವಾಗಿರುವ ಬಹುತೇಕ ಚಿಂತನೆಗಳು ಪಾಶ್ಚಿಮಾತ್ಯಕರ ವಿಚಾರಗಳಿಂದ ಪ್ರಭಾವ ಪಡೆದುಕೊಂಡವುಗಳಾಗಿವೆ. ಪಾಶ್ಚಿಮಾತ್ಯರ ವಿಚಾರಗಳ ಅಡಿಯಲ್ಲಿ ಬೌದ್ಧಚಿಂತನೆಗಳನ್ನು ತಮ್ಮ ಅಗತ್ಯಗಳಿಗೆ ತಕ್ಕಂತೆ ಹೊಸ ಬಗೆಯಲ್ಲಿ ಸ್ವೀಕರಿಸುತ್ತಿರುವುದು ಕಂಡುಬರುತ್ತದೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಬಹುತೇಕವಾಗಿ ಬುದ್ಧನ ತತ್ವಗಳನ್ನು ಆರಾಧನ ನೆಲೆಯಲ್ಲಿ ಸ್ವೀಕರಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಇದಕ್ಕೆ ಪ್ರಮುಖ ಕಾರಣವೆಂದರೆ, ಇಲ್ಲಿ ಬಹುತೇಕ ಚಿಂತಕರು ಎಡಪಂಥೀಯರಾಗಿದ್ದು, ಬಾಬಾಸಾಹೇಬ್ ಅಂಬೇಡ್ಕರರ ಮಾರ್ಗದಲ್ಲಿಯೇ ಬುದ್ಧನನ್ನು ಅಪ್ಪಿಕೊಂಡಿರುವುದಾಗಿದೆ. ಇದು ಕೇವಲ ಆರಾಧನೆಗಷ್ಟೇ ಸೀಮಿತವಾಗದೆ, ಈ ನಾಡಿನ ತಳಸಮುದಾಯಗಳು ತಮ್ಮ ಆಸ್ಮಿತೆಯ ಹುಡುಕಾಟಕ್ಕೆ ತಮ್ಮನ್ನು ತೊಡಗಿಸಿಕೊಂಡಿರುವುದು ಕಂಡುಬರುತ್ತದೆ. ಭಾರತದ ದಲಿತ ಸಮುದಾಯವು ಮೂಲದಲ್ಲಿ ರಾಜಮನೆತನಗಳಾದ ನಾಗ ಮಾತಂಗಗಳಾಗಿದ್ದು, ಬೌದ್ಧ ಅನುಯಾಯಿಗಳಾಗಿದ್ದವರು. ಆದ್ದರಿಂದ ಇವರ ಸಮಾನತೆಯನ್ನು ಸಹಿಸದ ಪುರೋಹಿತಶಾಹಿಯು ತಮ್ಮನ್ನು ಗುಲಾಮಗಿರಿಗೆ ತಳ್ಳಿದೆ ಎಂಬ ಹೊಸ ಹೊಸ ಚಿಂತನೆಗಳನ್ನು ಕನ್ನಡದ ವೈಚಾರಿಕ ಚಿಂತಕರು ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಹಾಗೆಯೇ ಸಿಂಧೂ ಬಯಲಿನ ನಾಗರೀಕತೆಯ

ಕಾಲದಲ್ಲಿ ಈ ಸಂಸ್ಕೃತಿಗಳು ಭವ್ಯವಾದ ಬದುಕನ್ನು ಕಟ್ಟಿಕೊಂಡಿರುವ ಬಗ್ಗೆ ಹಲವಾರು ಪುರಾವೆಗಳ ಮೂಲಕ ತಮ್ಮ ವಿಚಾರಗಳನ್ನು ಸಮರ್ಥಿಸಿಕೊಳ್ಳುವುದು ಇಲ್ಲಿ ಕಂಡುಬರುತ್ತದೆ.

ಕನ್ನಡ ಚಿಂತನ ಸಾಹಿತ್ಯದ ಬೆಳವಣಿಗೆಗೆ ಹಲವಾರು ಶ್ರೇಷ್ಠ ದಾರ್ಶನಿಕರಗಳು ಪ್ರಭಾವ ಬೀರಿರುವುದು ಕಂಡುಬರುತ್ತದೆ. ಆದರೆ ಅತಿ ಹೆಚ್ಚು ಪ್ರಭಾವ ಬೀರಿರುವ ದಾರ್ಶನಿಕರಲ್ಲಿ ಬುದ್ಧ ಮೊದಲನೆಯವನಾಗಿ ಕಂಡುಬರುತ್ತಾನೆ. ವೈಚಾರಿಕ ಚಿಂತನೆಗಳು ಮೊದಲು ಪ್ರಾರಂಭವಾಗುವುದೇ ಬುದ್ಧನ ವಿಚಾರಗಳ ತಳಹದಿಯ ಮೇಲೆ ಎನ್ನುವಷ್ಟು ಬೌದ್ಧ ತತ್ವಗಳು ವಿಚಾರ ಸಾಹಿತ್ಯದ ಮೇಲೆ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಇಲ್ಲಿ ಬುದ್ಧನ ವಿಚಾರಗಳ ಅಡಿಯಲ್ಲಿ ಹಲವಾರು ದಾರ್ಶನಿಕರ ತತ್ವ ಚಿಂತನೆಗಳನ್ನು ತೌಲನಿಕ ಅಧ್ಯಯನಕ್ಕೆ ಗುರಿಪಡಿಸಿರುವುದು ಕಂಡುಬರುತ್ತದೆ. ಭಾರತದ ಸಾಮಾಜಿಕ ಸಮಸ್ಯೆಗಳನ್ನು ಅಧ್ಯಯನಕ್ಕೆ ಗುರಿಪಡಿಸುವಾಗ ಅವುಗಳ ಪರಿಹಾರ ಕಂಡುಕೊಳ್ಳಲು ಬುದ್ಧನ ತತ್ವ-ಚಿಂತನೆಗಳತ್ತ ಮುಖ ಮಾಡಿರುವುದನ್ನು ಬಹುತೇಕ ವೈಚಾರಿಕ ಚಿಂತಕರ ವಿಚಾರಗಳಿಂದ ತಿಳಿಯಬಹುದಾಗಿದೆ.

ಭಾರತದಲ್ಲಿನ ಪ್ರಸ್ತುತ ಸಮಸ್ಯೆಗಳಾದ ಜಾಗತಿಕರಣ, ಯುದ್ಧ ನೀತಿ, ಭಯೋತ್ಪಾದನೆ ಆರ್ಥಿಕ ನೀತಿಯಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನೆಲೆಯಲ್ಲಿ ಬೌದ್ಧ ಚಿಂತನೆಗಳು ಕನ್ನಡದಲ್ಲಿ ಕಂಡುಬರುತ್ತವೆ. ಕನ್ನಡದ ಬಹುತೇಕ ಚಿಂತಕರು ಜಾಗತಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನೆಲೆಯಲ್ಲಿ ಬೌದ್ಧ ಚಿಂತನೆಗಳತ್ತ ಮುಖಮಾಡಿರುವುದು ಕಂಡುಬರುತ್ತದೆ. ಕ್ರಿ.ಪೂ.ಆರನೇ ಶತಮಾನದ ಚಿಂತನೆಗಳು ಕ್ರಿ.ಶ.ಇಪ್ಪತ್ತೊಂದನೇ ಶತಮಾನದ ಸಾಮಾಜಿಕ ಸನ್ನಿವೇಶಕ್ಕೆ ಸ್ಪಂದಿಸುತ್ತಿರುವ ಅಂಶಗಳು ಕನ್ನಡ ವಿಚಾರ ಸಾಹಿತ್ಯದಲ್ಲಿ ಕಂಡುಬರುತ್ತವೆ. ಈ ಚಿಂತನೆಗಳು ಸರ್ವ ಮಾನವರನ್ನು ಸಮಾನತೆಯಿಂದ ಕಾಣುತ್ತವೆ. ಆದರೆ ಈ ಚಿಂತನೆಗಳನ್ನು ಸ್ವೀಕರಿಸುವವರು ಬಹುತೇಕ ಎಡಪಂಥೀಯರಾಗಿ ಕಂಡುಬರುತ್ತಾರೆ. ಭಾರತದ ಸಂದರ್ಭದಲ್ಲಿ ಧಾರ್ಮಿಕ ರಾಜಕಾರಣದಿಂದ ಕೆಲವು ವರ್ಗಗಳು ಬುದ್ಧನ ಚಿಂತನೆಗಳನ್ನು ಸಾರಸಗಟಾಗಿ ವಿರೋಧಕ್ಕೆ ಗುರಿಪಡಿಸಿರುವುದು ಕಂಡುಬರುತ್ತದೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ಚಿಂತನೆಗಳನ್ನು ಎಡಪಂಥೀಯರು ಅರ್ಥೈಸುವ ಕ್ರಮಕ್ಕೂ, ಬಲಪಂಥೀಯರ ದೃಷ್ಟಿಕೋನಕ್ಕೂ ಭಿನ್ನತೆಗಳಿವೆ. ತಳವರ್ಗದಿಂದ ಬಂದಂತಹ ಎಡಪಂಥೀಯರಲ್ಲೂ ಏಕತೆಯ ನಿಲುವುಗಳಿಲ್ಲ. ಇಲ್ಲಿ ಕೆಲವು ಚಿಂತಕರು ಅಸ್ಪೃಶ್ಯತೆಯಂತಹ ಸಾಮಾಜಿಕ ಅಸಮಾನತೆಗೆ ಬುದ್ಧನ ಚಿಂತನೆಗಳನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. ಇವರು ವೈದಿಕ ಪುರೋಹಿತಶಾಹಿಯ ನಿಲುವುಗಳನ್ನು ವಿರೋಧಿಸಲು ಬೌದ್ಧ ಚಿಂತನೆಗಳನ್ನು ಅಸ್ತ್ರವಾಗಿ ಬಳಸಿಕೊಂಡಿರುವುದು ಕಂಡುಬರುತ್ತದೆ. ಬೌದ್ಧಚಿಂತನೆಗಳ ಅಡಿಯಲ್ಲಿ ಹಲವಾರು ಚಳವಳಿ, ಹೋರಾಟ, ಸಂಘಟನೆಗಳ ಅಡಿಯಲ್ಲಿ ತಮ್ಮ ಹಕ್ಕುಗಳನ್ನು ಪಡೆಯಲು ಶ್ರಮಿಸುತ್ತಿರುವುದು ಕಂಡುಬರುತ್ತದೆ. ಮತ್ತೆ ಕೆಲವು ಚಿಂತಕರುಗಳು ಬುದ್ಧನನ್ನು ಪ್ರತಿಮೆಯಾಗಿಸಲು ಹೊರಟಿರುವ ಕ್ರಮಗಳನ್ನು ವಿರೋಧಿಸಿ ಸಹಜವಾದ ನೆಲೆಯಲ್ಲಿ ಸಾಮಾನ್ಯ ಜನರಿಗೆ ಆತನ ತತ್ವ ಸಿದ್ಧಾಂತಗಳ

ಮೂಲಕ ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿಕೊಂಡಿರುವುದು ಕಂಡುಬರುತ್ತವೆ. ಇವರಿಗೆ ಬುದ್ಧನ ವಿಚಾರಗಳು ಸ್ಥಾಪಿತ ಮೌಲ್ಯಗಳಾಗುವುದರ ಹಿಂದಿನ ಆತಂಕಗಳು ಕಾಡುತ್ತಿರುವುದು ಕಂಡುಬರುತ್ತದೆ. ಇಲ್ಲಿ ಬುದ್ಧ ಬಳಕೆದಾರರ ಸರಕಾಗಬಾರದು ಎಂಬುದು ಇವರ ಪ್ರಮುಖ ಆಶಯವಾಗಿದೆ. ಹೀಗೆ ವಿಭಿನ್ನ ನೆಲೆಯಲ್ಲಿ ಎಡಪಂಥೀಯ ಚಿಂತನೆಗಳು ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುತ್ತವೆ.

ಕನ್ನಡ ವಿಚಾರ ಸಾಹಿತ್ಯದಲ್ಲಿ ಕಂಡುಬರುವ ಬಲಪಂಥೀಯ ಚಿಂತನೆಗಳು ಬುದ್ಧನನ್ನು ವೈದಿಕ ಧರ್ಮದೊಂದಿಗೆ ತಳುಕು ಹಾಕುವ ನೆಲೆಯಲ್ಲಿ ಕಂಡುಬರುತ್ತವೆ. ಇವರು ಅಂಬೇಡ್ಕರ್ ಅಪ್ಪಿಕೊಂಡ ಕ್ರಮವನ್ನು ವಿರೋಧಕ್ಕೆ ಗುರಿಪಡಿಸಿರುವುದನ್ನು ಗಮನಿಸಬಹುದಾಗಿದೆ. ಈ ಬಲಪಂಥೀಯ ಚಿಂತಕರು ಬುದ್ಧನನ್ನು ಕೇವಲ ಧರ್ಮ ಪ್ರವರ್ತಕನಾಗಿ ಸ್ವೀಕರಿಸುತ್ತಾರೆಯೇ ಹೊರತು ವೈಚಾರಿಕ ಚಿಂತಕನಾಗಿ ಸ್ವೀಕರಿಸುವುದಿಲ್ಲ. ಆದ್ದರಿಂದ ಅಂಬೇಡ್ಕರರ ವಿಚಾರಗಳನ್ನು ಸಂಪೂರ್ಣವಾಗಿ ವಿರೋಧಕ್ಕೆ ಗುರಿಪಡಿಸಿರುವುದು ಕಂಡುಬರುತ್ತದೆ. ಆ ಮೂಲಕ ಈ ಪಂಥದವರು ಬುದ್ಧನನ್ನು ಪಲಾಯನವಾದಿ ಎನ್ನುವ ನೆಲೆಯಲ್ಲಿ ಪ್ರಚಾರ ಮಾಡುವುದು ಕಂಡುಬರುತ್ತದೆ.

ಭಾರತದಲ್ಲಿ ಇಂದು ಎಲ್ಲಾ ದಾರ್ಶನಿಕರನ್ನು ಜಾತಿ ನೆಲೆಯಲ್ಲಿ ಗುರುತಿಸಲಾಗಿದ್ದು, ಆಯಾ ಜಾತಿಯವರು ತಮ್ಮ ಜಾತಿಯ ಸಂಕೇತವಾಗಿ ಈ ದಾರ್ಶನಿಕರನ್ನು ಗುರುತಿಸಿಕೊಳ್ಳುತ್ತಿದ್ದಾರೆ. ಉದಾ: ವಾಲ್ಮೀಕಿಯನ್ನು ಬೇಡ ಸಮುದಾಯ, ಕನಕದಾಸನನ್ನು ಕುರುಬ ಜನಾಂಗ, ಬಸವಣ್ಣನನ್ನು ಲಿಂಗಾಯತರು ಇತ್ಯಾದಿಯಾಗಿ. ಇದರಂತೆ ಇಂದು ಬುದ್ಧನನ್ನು ಹೊಲೆಯರು ತಮ್ಮ ಜಾತಿಯ ಸಂಕೇತವಾಗಿ ಬಳಸಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ಇದರಿಂದ ದಲಿತರಲ್ಲಿಯೇ ಭಿನ್ನತೆಗಳು ತಲೆದೊರುತ್ತಿವೆ. ಅಂಬೇಡ್ಕರರು ಭಾರತದ ಅಸ್ಪೃಶ್ಯತೆಯಂತಹ ಅನಿಷ್ಟ ಪದ್ಧತಿಯಿಂದ ಬಳಲುತ್ತಿರುವ ಜನತೆಗೆ ಜಾಗೃತಿ ಮೂಡಿಸಲು ಬೌದ್ಧಧರ್ಮವನ್ನು ಸ್ವೀಕರಿಸಿದರು. ಆದರೆ ಇಂದು ಈ ಸಮಾನತೆಯ ಧರ್ಮವು ಕೂಡ ಒಂದು ಸಮುದಾಯ ಅಥವಾ ಜಾತಿ ಸೂಚಕವಾದ ಪ್ರತಿಮೆಯಾಗುತ್ತಿರುವ ಬಗ್ಗೆ ಕನ್ನಡದ ಬಹುತೇಕ ಚಿಂತಕರು ವಿರೋಧ ವ್ಯಕ್ತಪಡಿಸುತ್ತಿರುವುದು ಕಂಡುಬರುತ್ತದೆ. ಬುದ್ಧ ನೊಂದವರು, ಅಸಮಾನತೆಗೆ ಒಳಗಾದವರಿಗೆ ಜೀವದನಿ ನೀಡಿದ ಮಹಾಪುರುಷ, ಆದರೆ ಅಂತಹ ಚೇತನವನ್ನು ಒಂದು ಜಾತಿಗೆ ಸೀಮಿತಗೊಳಿಸುತ್ತಿರುವ ಕ್ರಮವನ್ನು ವೈಚಾರಿಕ ಚಿಂತಕರು ವಿರೋಧಿಸುತ್ತಿದ್ದಾರೆ. ಇವರು ಅಂಬೇಡ್ಕರರ ಮೂಲ ಆಶಯಗಳಿಗೆ ಅನುಗುಣವಾಗಿ ಬುದ್ಧನನ್ನು ಸ್ವೀಕರಿಸುವ ಆಲೋಚನೆ ವ್ಯಕ್ತಪಡಿಸುತ್ತಿದ್ದಾರೆ. ಆದ್ದರಿಂದ ಬುದ್ಧನನ್ನು ಕೇವಲ ಒಂದು ಜಾತಿಗೆ ಸೀಮಿತಗೊಳಿಸುವ ಕ್ರಮಕ್ಕೆ ಇವರಲ್ಲಿ ವಿರೋಧಗಳಿವೆ.

ಬೌದ್ಧಧರ್ಮದ ವಿಭಿನ್ನ ಆಯಾಮಗಳನ್ನು ಕನ್ನಡ ಚಿಂತನ ಸಾಹಿತ್ಯವು ತೆರೆದು ತೋರಿಸುತ್ತದೆ. ಈ ಚಿಂತನ ಸಾಹಿತ್ಯವು ಸೃಜನಶೀಲತೆಗಿಂತ ಹೆಚ್ಚಾಗಿ ವಾಸ್ತವದ ಸನ್ನಿವೇಶವನ್ನು ಜೀವಂತವಾಗಿ ಸೆರೆಹಿಡಿಯುವ ಶಕ್ತಿಯನ್ನು ಹೊಂದಿದೆ. ಆ ಮೂಲಕ ಸಾಮಾಜಿಕ ಸಮಸ್ಯೆಗಳನ್ನು ಗುರುತಿಸುವುದರ

ಜೊತೆಗೆ ಅದಕ್ಕೆ ಸೂಕ್ತ ಪರಿಹಾರ ಕ್ರಮಗಳನ್ನು ಇದು ಕೈಗೊಳ್ಳುವ ನೆಲೆಯಲ್ಲಿ ತನ್ನ ಕಾರ್ಯ ಮುಂದುವರೆಸುತ್ತಿದೆ.

ಅಧ್ಯಯನದ ಉದ್ದೇಶ ಮತ್ತು ಮಹತ್ವ

ಕನ್ನಡ ಚಿಂತನ ಸಾಹಿತ್ಯದಲ್ಲಿ ಅಪಾರ ಪ್ರಮಾಣದಲ್ಲಿರುವ ವಿಚಾರ ಸಾಹಿತ್ಯವು ಬೌದ್ಧ ದರ್ಶನದಿಂದ ತನ್ನ ಪ್ರೇರಣೆಯನ್ನು ಪಡೆದುಕೊಂಡಿದೆ. ಇಲ್ಲಿ ಹಲವಾರು ವಿಷಯಗಳಾದ ಅಸ್ಪೃಶ್ಯತೆ, ಅಸಮಾನತೆ, ಹಿಂಸೆ, ಸಾವು-ನೋವು, ಮಹಿಳೆ ಮುಂತಾದ ವಿಷಯಗಳ ಕುರಿತು ಚರ್ಚೆ ಹಾಗೂ ವಿಶ್ಲೇಷಣೆಗಳು ಕಂಡುಬರುತ್ತವೆ. ಅಂತಹ ವಿಷಯಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಪ್ರಸ್ತುತ ಪ್ರಬಂಧವು ಒಳಗೊಂಡಿದೆ.

ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಾದ ಕಾವ್ಯ, ಸಣ್ಣಕತೆ, ಕಾದಂಬರಿ, ಪ್ರವಾಸ ಸಾಹಿತ್ಯದಲ್ಲಿ ಅಂತರ್ಗತವಾಗಿರುವ ಬೌದ್ಧ ದರ್ಶನವನ್ನು ಕುರಿತ ಅಧ್ಯಯನ ಕೆಲಮಟ್ಟಿಗೆ ಆಗಿವೆ. ಆದರೆ ಕನ್ನಡ ಚಿಂತನ ಸಾಹಿತ್ಯದ ಮೇಲೆ ಸಾಕಷ್ಟು ಅಧ್ಯಯನಗಳು ಆಗಿಲ್ಲ. ದಲಿತ ಸಮುದಾಯವನ್ನು ಒಳಗೊಂಡಂತೆ ಹಲವಾರು ತಳಸಮುದಾಯಗಳು ತಮ್ಮ ಪರ್ಯಾಯ ಬದುಕನ್ನು ರೂಪಿಸಿಕೊಳ್ಳಲು ಬೌದ್ಧಧರ್ಮದ ಕಡೆ ಚಲನೆ ಪ್ರಾರಂಭಿಸಿವೆ. ಸದ್ಯದ ಸಮಯದಲ್ಲಿ ಈ ವಿಷಯವನ್ನು ಅಧ್ಯಯನ ಮಾಡುವುದು ಹೆಚ್ಚು ಸೂಕ್ತವಾಗಿದೆ. ಇಂದು ಹುಟ್ಟುತ್ತಲಿರುವ ಹೊಸ ಜನಪರ ಚಳವಳಿಗಳು ತಾತ್ವಿಕ ಹಿನ್ನೆಲೆಗಾಗಿ ಬೌದ್ಧದರ್ಶನದ ಕಡೆ ಗಮನ ಹರಿಸುತ್ತಿವೆ. ಆದ್ದರಿಂದ ಪ್ರಸ್ತುತ ಪ್ರಬಂಧದಲ್ಲಿ ಕನ್ನಡ ಚಿಂತನ ಸಾಹಿತ್ಯದ ಬಗ್ಗೆ ಅಧ್ಯಯನ ಮಾಡುವುದು ಸೂಕ್ತವೆಂದು ಭಾವಿಸಲಾಗಿದೆ.

ಕರ್ನಾಟಕದಲ್ಲಿ ಈಗ ದಲಿತರು ದೊಡ್ಡ ಪ್ರಮಾಣದಲ್ಲಿ ಬೌದ್ಧಧರ್ಮದತ್ತ ಚಲಿಸುತ್ತಿದ್ದಾರೆ. ದಲಿತ ಸಂಘಟನೆಗಳು ಧರ್ಮ ದೀಕ್ಷೆ ಕಾರ್ಯಕ್ರಮಗಳನ್ನು ಅಂಬೇಡ್ಕರ್ ದೀಕ್ಷೆ ತೆಗೆದುಕೊಂಡ ದಿನದಂದು ರಾಜ್ಯದ ನಾನಾ ಭಾಗಗಳಲ್ಲಿ ಏರ್ಪಡಿಸುತ್ತವೆ. ಇದೊಂದು ಚಳವಳಿಯಾಗಿ ಬೆಳೆಯುತ್ತಿದೆ. ದೇವನೂರು ಮಹಾದೇವರಂತಹ ಲೇಖಕರು ಇದಕ್ಕೆ ಬೆಂಬಲವಾಗಿ ನಿಂತಿದ್ದಾರೆ. ಈ ಚಲನೆಯು ಕರ್ನಾಟಕದ ಸಾಮಾಜಿಕ, ಧಾರ್ಮಿಕ ವಲಯಗಳಲ್ಲಿ ಒಂದು ಸಂಚಲನವನ್ನು ಮೂಡಿಸುತ್ತಿದೆ. ಈ ಸಂಚಲನೆಯ ಹಿಂದೆ ಕನ್ನಡದ ಚಿಂತಕರು ಬೌದ್ಧದರ್ಶನದ ಹಿನ್ನೆಲೆಯಲ್ಲಿ ಮಾಡುತ್ತಿರುವ ಪುನರ್ ವಿಶ್ಲೇಷಣೆ, ಮರುಚಿಂತನೆ, ವ್ಯಾಖ್ಯಾನ, ಚರ್ಚೆ ಮುಂತಾದವುಗಳಿವೆ. ಈ ಹಿನ್ನೆಲೆಯಲ್ಲಿ ಕನ್ನಡ ಚಿಂತನೆಗಳ ಪಾತ್ರವನ್ನು ತಿಳಿದುಕೊಳ್ಳುವುದು ಸಾಹಿತ್ಯ ಮತ್ತು ಶೈಕ್ಷಣಿಕ ಅಗತ್ಯ ಮಾತ್ರವಾಗಿಲ್ಲ. ಅದು ರಾಜಕೀಯ ಸಾಮಾಜಿಕ ಮತ್ತು ಧಾರ್ಮಿಕವಾಗಿ ಮಹತ್ವ ಹೊಂದಿದ ಸಂಗತಿಯಾಗಿದೆ.

ಕನ್ನಡದಲ್ಲಿ ಜಗತ್ತಿನ ಬೇರೆ ಬೇರೆ ಧರ್ಮಗಳ ವಿಮರ್ಶೆ ಮತ್ತು ವಿಶ್ಲೇಷಣೆಯ ಕಾರ್ಯ ನಡೆಯುತ್ತಿದೆ. ಕರ್ನಾಟಕದ ಧರ್ಮಗಳನ್ನು ಇಪ್ಪತ್ತನೇ ಶತಮಾನದ ಕನ್ನಡ ಚಿಂತನೆಯು ವರ್ತಮಾನ ಮತ್ತು ಚರಿತ್ರೆಯ ಆಧಾರದಿಂದ ಅಧ್ಯಯನಕ್ಕೆ ಗುರಿಪಡಿಸಿದೆ. ಈ ರೀತಿಯ ವಿಧಾನವು ತೌಲನಿಕ ಅಧ್ಯಯನವಾಗುತ್ತದೆ. ಹೀಗೆ ಕನ್ನಡ ಚಿಂತನ ಸಾಹಿತ್ಯವನ್ನು ಅಧ್ಯಯನ ಮಾಡುವಾಗ ಬೌದ್ಧಧರ್ಮದ

ಜೊತೆಗೆ ಇತರ ಧರ್ಮಗಳ ತೌಲನಿಕ ಅಧ್ಯಯನವನ್ನು ಕೈಗೊಂಡಿದ್ದಾರೆ. ಈ ತೌಲನಿಕ ಅಧ್ಯಯನದಿಂದ ಆಯಾ ಧರ್ಮಗಳ ಇತಿ–ಮಿತಿಯನ್ನು ಹೇಳುತ್ತಾ ಬಂದಿದ್ದಾರೆ. ಕನ್ನಡ ಚಿಂತಕರು ಪುರೋಹಿತಶಾಹಿ ವೈದಿಕ ಧರ್ಮವನ್ನು ನಿರಾಕರಿಸುತ್ತಲೆ ಬಂದಿದ್ದಾರೆ. ಆದರೆ ಮನುಷ್ಯ ಕೇಂದ್ರಿತವಾದ ಬೌದ್ಧ ಧರ್ಮವನ್ನು ತನ್ನ ಎದುರಾಳಿ ಎಂದು ತಿಳಿದುಕೊಂಡಿಲ್ಲ. ಕನ್ನಡ ಪ್ರಗತಿಪರ ಚಿಂತನೆಯು ಧರ್ಮಗಳ ವಿಶ್ಲೇಷಣೆಯಲ್ಲಿ ಆಸ್ತಿಕ, ದೈವ ಕೇಂದ್ರಿತ ಧರ್ಮಗಳನ್ನು ಒಂದು ತೆರನಾಗಿ ನೋಡಿದೆ. ಆದರೆ ನಾಸ್ತಿಕ, ಮನುಷ್ಯ ಕೇಂದ್ರಿತ ಧರ್ಮಗಳನ್ನು ಬೇರೆ ನೆಲೆಯಲ್ಲಿ ಗ್ರಹಿಸಿದೆ. ಕನ್ನಡ ಚಿಂತನ ಸಾಹಿತ್ಯವು ದೈವ ಕೇಂದ್ರಿತ ಮತ್ತು ಮಾನವ ಕೇಂದ್ರಿತ, ಆತ್ಮ ಕೇಂದ್ರಿತ ಮತ್ತು ದೇಹ ಕೇಂದ್ರಿತ, ಭೌತವಾದಿ ಮತ್ತು ಭಾವನಾವಾದಿ ನೆಲೆಯಲ್ಲಿ ಧರ್ಮ ಮತ್ತು ದರ್ಶನಗಳನ್ನು ವಿಮರ್ಶೆ ಮಾಡುತ್ತ ಬಂದಿದೆ. ಈ ಹಿನ್ನೆಲೆಯಲ್ಲಿ ಅದು ಬೌದ್ಧಧರ್ಮವನ್ನು ಬೇರೆ ಧರ್ಮಗಳ ಜೊತೆಗಿಟ್ಟು ಹೇಗೆ ವಿಶ್ಲೇಷಣೆ ಮಾಡಿದೆ ಎಂಬುದನ್ನು ಅಧ್ಯಯನ ಮಾಡುವ ಉದ್ದೇಶವನ್ನು ಪ್ರಸ್ತುತ ಪ್ರಬಂಧವು ಹೊಂದಿದೆ.

ಕನ್ನಡ ಚಿಂತನ ಸಾಹಿತ್ಯವು ಭಾರತದ ನಾಸ್ತಿಕ ಮೂಲದ ಬೌದ್ಧದರ್ಶನದೊಂದಿಗೆ ಅನುಸಂಧಾನ ಮಾಡಿದೆ. ಹಾಗೆಯೇ ಪಾಶ್ಚಿಮಾತ್ಯ ವಿದ್ವಾಂಸರ ನಾಸ್ತಿಕವಾದಿ ವಿಚಾರಧಾರೆಗಳೊಂದಿಗೂ ಅನುಸಂಧಾನ ಮಾಡಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಚಿಂತನ ಸಾಹಿತ್ಯವು ಬೌದ್ಧದರ್ಶನ ಮತ್ತು ಪಾಶ್ಚಿಮಾತ್ಯ ವಿಚಾರಗಳೊಂದಿಗೆ ಅನುಸಂಧಾನ ಮಾಡಿರುವ ಬಗೆಯನ್ನು ಹಾಗೂ ಈ ಅನುಸಂಧಾನದ ಮೂಲಕ ಮರುಹುಟ್ಟು ಪಡೆದುಕೊಂಡಿರುವುದನ್ನು ತಿಳಿಯುವುದು ಮಹತ್ವದ ಸಂಗತಿಯಾಗಿದೆ.

ದಲಿತರು ಪ್ರತಿವರ್ಷ ಅಂಬೇಡ್ಕರ್ ಜಯಂತಿ ಹಾಗೂ ಬೌದ್ಧಪೂರ್ಣಿಮೆ ದಿನದಂದು ಲಕ್ಷಾಂತರ ಜನರು ಬೌದ್ಧಧರ್ಮಕ್ಕೆ ಮತಾಂತರ ಹೊಂದುತ್ತಿದ್ದಾರೆ. ಹೀಗೆ ಮತಾಂತರಗೊಂಡವರಿಗೆ ನಂತರದ ದಿನಗಳಲ್ಲಿ ಈ ಧರ್ಮವನ್ನು ಹೇಗೆ ಸ್ವೀಕರಿಸಬೇಕು ಎಂಬುದರ ಬಗ್ಗೆ ಯಾವುದೇ ಮಾರ್ಗದರ್ಶನವಿಲ್ಲ. ಬೌದ್ಧಧರ್ಮವನ್ನು ಅರ್ಥಮಾಡಿಕೊಳ್ಳುವುದಕ್ಕೆ ಇವರಿಗೆ ಸೂಕ್ತ ವೇದಿಕೆಯ ಕೊರತೆ ಕಂಡುಬರುತ್ತಿದೆ. ಆದ್ದರಿಂದ ಕರ್ನಾಟಕದಲ್ಲಿನ ನವಬೌದ್ಧರಾದ ದಲಿತರು ಎದುರಿಸುತ್ತಿರುವ ಸಮಸ್ಯೆಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಪ್ರಸ್ತುತ ಪ್ರಬಂಧವು ಒಳಗೊಂಡಿದೆ.

ಕರ್ನಾಟಕದ ದಲಿತ ಸಂಘರ್ಷ ಸಮಿತಿಗಳು ಅಂಬೇಡ್ಕರ್ ವಿಚಾರಗಳಿಂದ ಜಾಗೃತಗೊಂಡು ಬೌದ್ಧಧರ್ಮದತ್ತ ಮುಖಮಾಡುತ್ತಿವೆ. ಇಲ್ಲಿ ಹಲವಾರು ಸಂಘಟನೆಗಳು ಸಾಮಾನ್ಯ ದಲಿತರನ್ನು ಮುಂದು ಮಾಡಿಕೊಂಡು ಸಂಘಟನೆ, ಚಳವಳಿಗಳ ಮೂಲಕ ಜಾಗೃತಿ ಮೂಡಿಸುತ್ತಿವೆ. ಆದರೆ ಇಲ್ಲಿ ದಲಿತರಲ್ಲಿ ಯಾವುದೇ ಪ್ರಗತಿಯಾಗಿರುವುದು ಕಂಡುಬರುವುದಿಲ್ಲ. ದಲಿತರ ಸವಲತ್ತುಗಳನ್ನು ಬಲಿತ ದಲಿತರೇ ಕಿತ್ತುಕೊಳ್ಳುವ ಸನ್ನಿವೇಶವು ಇಂದು ನಿರ್ಮಾಣಗೊಂಡಿದೆ. ಬೌದ್ಧಧರ್ಮದ ಹೆಸರಿನಲ್ಲಿ ದಲಿತರಲ್ಲಿಯೇ ಹಲವಾರು ಬಿರುಕುಗಳು ನಿರ್ಮಾಣಗೊಂಡಿವೆ. ಪ್ರಸ್ತುತದಲ್ಲಿನ ಈ ವೈರುಧ್ಯಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಪ್ರಸ್ತುತ ಪ್ರಬಂಧವು ಒಳಗೊಂಡಿದೆ.

ಕರ್ನಾಟಕದಲ್ಲಿ ಪುರೋಹಿತಶಾಹಿಗೆ ಪರ್ಯಾಯವಾದ ನೆಲೆಯಲ್ಲಿ ಈ ನಾಡಿನ ತಳಮೂಲ ಸಮುದಾಯಗಳ ಪರವಾದ ಬೌದ್ಧಧರ್ಮದತ್ತ ವಿಚಾರವಾದಿಗಳು ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಈ ವೈಚಾರಿಕ ಚಿಂತಕರು ಬುದ್ಧನನ್ನು ದಾರ್ಶನಿಕ ಪುರುಷನಾಗಿ ಸ್ವೀಕರಿಸಿಕೊಂಡಿದ್ದು, ಸಾಮಾನ್ಯ ಜನರ ಬದುಕಿನಲ್ಲಿ ಅಡಗಿರುವ ಮೌಢ್ಯತೆಯನ್ನು ತೊಲಗಿಸಿ, ಸಮಾನತೆಯನ್ನು ಪ್ರತಿಪಾದಿಸಲು ಬೌದ್ಧ ಚಿಂತನೆಗಳನ್ನು ಅಪ್ಪಿಕೊಳ್ಳುತ್ತಿದ್ದಾರೆ. ಈ ಚಿಂತನೆಗಳ ಹಿಂದಿನ ತಾತ್ವಿಕ ದೃಷ್ಟಿಕೋನಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಪ್ರಸ್ತುತ ಪ್ರಬಂಧವು ಒಳಗೊಂಡಿದೆ.

ಬೌದ್ಧಧರ್ಮದ ಕುರಿತು ಕನ್ನಡದ ವಿಚಾರವಾದಿಗಳಲ್ಲಿ ಹಲವಾರು ವೈರುಧ್ಯಗಳಿವೆ. ಬೌದ್ಧಧರ್ಮ ಹಾಗೂ ಬುದ್ಧನ ಧಮ್ಮ ಎಂಬ ವಿಷಯಗಳನ್ನು ಸಾಕಷ್ಟು ಚರ್ಚೆಗೆ ಗುರಿಪಡಿಸಿರುವುದು ಕಂಡುಬರುತ್ತದೆ. ಈ ಚರ್ಚೆಯ ಪ್ರಮುಖ ಆಶಯವನ್ನು ತಿಳಿಯುವ ಹಾಗೂ ಇದಕ್ಕೆ ವೈಚಾರಿಕ ಚಿಂತಕರು ನೀಡುವ ಸಮರ್ಥನೆಗಳ ಹಿಂದಿನ ತಾತ್ವಿಕ ನಿಲುವುಗಳನ್ನು ಅಧ್ಯಯನಕ್ಕೆ ಗುರಿಪಡಿಸುವುದು ಈ ಪ್ರಬಂಧದ ಪ್ರಮುಖ ಉದ್ದೇಶವಾಗಿದೆ.

ಬೌದ್ಧಧರ್ಮದ ತತ್ವಗಳ ಅಡಿಯಲ್ಲಿ ರೂಪಿತವಾಗಿರುವ ಹಲವಾರು ಸಂಘಟನೆ, ಹೋರಾಟ, ಚಳವಳಿಗಳು ಬುದ್ಧನನ್ನು ಪ್ರತಿಮೆಯಾಗಿಟ್ಟುಕೊಂಡು, ಬುದ್ಧನ ಮೂಲ ಆಶಯಗಳಿಗೆ ವಿರುದ್ಧವಾದ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವುದರ ಬಗ್ಗೆ ಬಹುತೇಕ ಚಿಂತಕರು ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಿದ್ದಾರೆ. ಇಂತಹ ಚಿಂತನೆಗಳ ಹಿಂದಿನ ತಾತ್ವಿಕ ನೆಲೆಗಳನ್ನು ಅಧ್ಯಯನಕ್ಕೆ ಒಳಪಡಿಸುವುದು.

ಬುದ್ಧನ ನಂತರ ಬೌದ್ಧಧರ್ಮವು ಹಲವಾರು ಶಾಖೆಗಳಾಗಿ ಬೆಳೆದುಬಂದಿದೆ. ಇಲ್ಲಿ ಬೌದ್ಧಧರ್ಮದ ಒಂದು ಪಂಥವು ಮತ್ತೊಂದು ಪಂಥದ ತತ್ವ ಸಿದ್ಧಾಂತಗಳನ್ನು ತಿರಸ್ಕಾರಕ್ಕೆ ಗುರಿಪಡಿಸಿರುವುದು ಕಂಡುಬರುತ್ತದೆ. ಬುದ್ಧನ ಮೂಲ ಆಶಯಗಳಿಗೆ ಬದಲಾಗಿ, ಪುರೋಹಿತಶಾಹಿ ಕ್ರಮವನ್ನು ಅಳವಡಿಸಿಕೊಂಡು ಬೌದ್ಧಧರ್ಮವನ್ನು ಮುನ್ನೆಡೆಸಿಕೊಂಡು ಬಂದಿದ್ದಾರೆ. ಇಲ್ಲಿ ವೈದಿಕ ಸನಾತನವಾದವು ತನ್ನ ಅಸ್ತಿತ್ವದ ಉಳಿವಿಗಾಗಿ ಬೌದ್ಧಧರ್ಮವನ್ನು ತನ್ನಲ್ಲಿ ಸೇರ್ಪಡಿಸಿಕೊಂಡು ಬೆಳೆದು ಬಂದಿದೆ. ಪ್ರಸ್ತುತದಲ್ಲಿ ಆಚರಣೆಯಲ್ಲಿರುವ ಬೌದ್ಧಧರ್ಮವು ಬುದ್ಧನ ಮೂಲ ಆಶಯಗಳಿಗೆ ಸಂಪೂರ್ಣ ವಿರುದ್ಧವಾಗಿರುವುದು ಕಂಡುಬರುತ್ತದೆ. ಈ ಕುರಿತು ಕನ್ನಡದ ಬಹುತೇಕ ಚಿಂತಕರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಈ ಚಿಂತನಧಾರೆಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಪ್ರಸ್ತುತ ಪ್ರಬಂಧವು ಒಳಗೊಂಡಿದೆ.

ಪ್ರಸ್ತುತ ಜಾಗತಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಪಂಚದ ಬಹುತೇಕ ಬುದ್ಧಿ ಜೀವಿಗಳು ಬೌದ್ಧ ಚಿಂತನೆಗಳತ್ತ ಆಕರ್ಷಿತರಾಗುತ್ತಿದ್ದಾರೆ. ಜಾಗತಿಕ ಶಾಂತಿ ಹಾಗೂ ಪ್ರಸ್ತುತ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ನೆಲೆಯಲ್ಲಿ ಈ ಬುದ್ಧಿಜೀವಿಗಳು ತಮ್ಮದೇ ಆದಂತಹ ಹೊಸ ಹೊಸ ಮಾದರಿಗಳನ್ನು ಅನುಸರಿಸುವ ಮೂಲಕ ಬೌದ್ಧಧರ್ಮದ ಪ್ರಚಾರಕ್ಕೆ ಮುಂದಾಗಿರುವುದು ಕಂಡುಬರುತ್ತದೆ. ಇಂತಹ ಸಂದರ್ಭದಲ್ಲಿ ಬೌದ್ಧಧರ್ಮದ ಆಶಯಗಳನ್ನು ಭಾರತದಂತಹ ಜಾತಿ

ಆಧಾರಿತ ದೇಶಗಳಲ್ಲಿ ಈತನ ಮಾನವೀಯ ಮೌಲ್ಯಗಳ ಕುರಿತು ಸಾಮಾನ್ಯ ಜನರಿಗೆ ಅರಿವು ಮೂಡಿಸುವುದು ಮಹತ್ವದ ಸಂಗತಿಯಾಗಿದೆ.

ವರ್ತಮಾನದ ಆರ್ಥಿಕ ಮಾರುಕಟ್ಟೆಯು ಸೃಷ್ಟಿಸಿರುವ ಸಂಕೀರ್ಣ ಆರ್ಥಿಕ, ಸಾಮಾಜಿಕ, ರಾಜಕೀಯ ವ್ಯವಸ್ಥೆಯ ಈ ಕಾಲದಲ್ಲಿ ಬೌದ್ಧಧರ್ಮದ ವ್ಯಾಖ್ಯೆಗಳು ಬದಲಾಗಬೇಕು; ಅಷ್ಟೇ ಅಲ್ಲ, ಜಗತ್ತಿನ ಎಲ್ಲ ಧರ್ಮಗಳೂ ತಮ್ಮ ಮೂಲತತ್ವಗಳನ್ನು ಈ ಕಾಲ್ಕಕೆ ತಕ್ಕಂತೆ ಬದಲಾವಣೆ ಮಾಡಿಕೊಳ್ಳಬೇಕು ಎನ್ನುವ ಹೊಸ ಹೊಸ ಚಿಂತನೆಗಳು ರೂಪ ತಾಳುತ್ತಿವೆ. ಆದ್ದರಿಂದ ಪ್ರಸ್ತುತ ಅಧ್ಯಯನವು ಈ ಚಿಂತನೆಗಳ ಹಿಂದಿನ ತಾತ್ವಿಕ ಆಯಾಮಗಳನ್ನು ಗುರುತಿಸುವ ಉದ್ದೇಶವನ್ನು ಒಳಗೊಂಡಿರುತ್ತದೆ.

ಸಮಕಾಲೀನ ಜಗತ್ತಿನಲ್ಲಿ ಬೌದ್ಧಧರ್ಮವನ್ನು ಪ್ರಸ್ತುತಗೊಳಿಸಲು ಮೂಲ ಬೋಧನೆಗಳನ್ನು ಹಾಗೇ ಉಳಿಸಿಕೊಳ್ಳಬೇಕು. ಆದರೆ ಆ ನೈತಿಕ ಮೌಲ್ಯಗ್ಳನ್ನು ಇವತ್ತಿನ ಸಮಾಜಕ್ಕೆ ಹೊಂದಿಕೊಳ್ಳುವಂತೆ ಪರಿವರ್ತಿಸಿಕೊಳ್ಳಬೇಕು. ಆಯಾ ಕಾಲದ ಸಾಮಾಜಿಕ ಸನ್ನಿವೇಶಗಳಿಗೆ ತಕ್ಕಂತೆ ಬೌದ್ಧಧರ್ಮದ ತತ್ವಗಳನ್ನು ಆರೋಗ್ಯಕರವಾದ ರೀತಿಯಲ್ಲಿ ಪರಿವರ್ತಿಸಿಕೊಂಡಾಗ ಮಾತ್ರ ಸಾಮಾನ್ಯ ಜನ ವರ್ಗಕ್ಕೆ ತಲುಪುತ್ತದೆ ಎಂಬ ಮಹತ್ವದ ಚಿಂತನೆಗಳನ್ನು ಬೌದ್ಧ ವಿಚಾರವಾದಿಗಳು ವ್ಯಕ್ತಪಡಿಸಿದ್ದಾರೆ. ಇದರ ಮಹತ್ವವನ್ನು ತಿಳಿಯುವುದು ಪ್ರಮುಖವಾಗಿ ಕಂಡುಬರುತ್ತದೆ.

ಅಧ್ಯಯನ ವಿಧಾನ

ಪ್ರಸ್ತುತ ಅಧ್ಯಯನವು ಕರ್ನಾಟಕದ ಬೌದ್ಧದರ್ಶನವು ಹಲವಾರು ಜನಪರ ಚಳವಳಿಗಳೊಂದಿಗೆ ಹೇಗೆ ತನ್ನ ಸಂಬಂಧ ಕಲ್ಪಿಸಿಕೊಂಡಿದೆ ಎಂಬುದನ್ನು ಪರಿಶೀಲನೆ ಮಾಡುವ ಉದ್ದೇಶ ಹೊಂದಿದೆ. ಕನ್ನಡ ಚಿಂತನ ಸಾಹಿತ್ಯದಲ್ಲಿ ಬೇರೆ ಬೇರೆ ಚಿಂತಕರ ಮೇಲೆ ಬೌದ್ಧದರ್ಶನದ ಪ್ರೇರಣೆಯು ಹೇಗೆ ಪ್ರಭಾವ ಬೀರಿದೆ ಎಂಬುದನ್ನು ತೌಲನಿಕವಾಗಿ ನೋಡಲು ಈ ಅಧ್ಯಯನ ಬಯಸುತ್ತದೆ. ಬೇರೆ ಬೇರೆ ಕನ್ನಡ ಚಿಂತಕರ ವೈಚಾರಿಕ ಪ್ರೇರಣೆಯ ಹಿನ್ನೆಲೆಗೆ ಹೋಗಿ, ಅವರು ಬೌದ್ಧದರ್ಶನವನ್ನು ಯಾವ ನೆಲೆಯಿಂದ ಗ್ರಹಿಸಿಕೊಂಡು ಸಾಹಿತ್ಯ ರಚನೆ ಮಾಡಿದ್ದಾರೆ ಎಂಬುದನ್ನು ಅಧ್ಯಯನ ಮಾಡಲು ಆಶಿಸುತ್ತದೆ. ಕೆಲವು ಕನ್ನಡದ ಚಿಂತಕರು ಬೌದ್ಧದರ್ಶನವನ್ನು ಕುರಿತು ಭಿನ್ನಮತವನ್ನು ವ್ಯಕ್ತಪಡಿಸುವ, ಇಲ್ಲವೆ ನಿರಾಕರಿಸುವ ಪ್ರಯತ್ನ ಮಾಡುತ್ತಾರೆ. ಭಿನ್ನಮತ ಮತ್ತು ನಿರಾಕರಣೆಗೆ ಕಾರಣವನ್ನು ಶೋಧಿಸುವ ಕೆಲಸವನ್ನು ಪ್ರಸ್ತುತ ಪ್ರಬಂಧದಲ್ಲಿ ಮಾಡಲಾಗುವುದು.

ಬೌದ್ಧ ದರ್ಶನವು ಬೇರೆ ಬೇರೆ ಚಿಂತಕರಲ್ಲಿ ಸಮಕಾಲೀನ ತುರ್ತಿನಲ್ಲಿ ಹೇಗೆ ಮರು ಹುಟ್ಟನ್ನು ಪಡೆದುಕೊಂಡಿದೆ ಎಂಬುದನ್ನು ಶೋಧಿಸುವ ಕಾರ್ಯವನ್ನು ಈ ಅಧ್ಯಯನದಲ್ಲಿ ಅನುಸರಿಸಲಾಗುವುದು. ಕನ್ನಡ ಚಿಂತನ ಸಾಹಿತ್ಯವು ಪ್ರಸ್ತುತ ಪ್ರಬಂಧದ ಆಕರವಾಗಿದ್ದರೂ ಕಾವ್ಯ, ಸಣ್ಣಕತೆ, ಕಾದಂಬರಿ, ಮಹಾಕಾವ್ಯ, ನಾಟಕ ಮುಂತಾದ ಆಕರಗಳನ್ನು ಪ್ರಾಸಂಗಿಕವಾಗಿ ಚರ್ಚಿಸುತ್ತ,

ಆ ಚರ್ಚೆಯನ್ನು ಕನ್ನಡ ಚಿಂತನ ಸಾಹಿತ್ಯದ ಚರ್ಚೆ ಮತ್ತು ವಿಶ್ಲೇಷಣೆಗಳಲ್ಲಿ ಪೂರಕವಾಗಿ ಬಳಸಿಕೊಳ್ಳಲಾಗುವುದು.

ಬೇರೆ ಬೇರೆ ಕನ್ನಡ ಚಿಂತಕರು ಬೌದ್ಧ ದರ್ಶನವನ್ನು ಅನುಸಂಧಾನ ಮಾಡಿರುವ ವಿಧಾನಗಳಲ್ಲಿ ಹಲವಾರು ವ್ಯತ್ಯಾಸ ಕಂಡುಬರುತ್ತವೆ. ಅಂತಹ ವ್ಯತ್ಯಾಸಗಳನ್ನು ಪ್ರಸ್ತುತ ಪ್ರಬಂಧದಲ್ಲಿ ಗಮನಿಸಲಾಗುವುದು. ಮೂಲ ಬೌದ್ಧದರ್ಶನವನ್ನು ಕನ್ನಡದ ಸಂದರ್ಭದಲ್ಲಿ ನೇರವಾಗಿ ದಾಖಲಿಸಲಾಗಿದೆಯೋ, ಇಲ್ಲವೆ ಕನ್ನಡದ ಸಾಮಾಜಿಕ ಸನ್ನಿವೇಶಕ್ಕೆ ಹೊಂದಿಕೊಳ್ಳುವಂತಹ ಸೃಜನಶೀಲತೆಯನ್ನು ಅಳವಡಿಸಿಕೊಳ್ಳಲಾಗಿದೆಯೋ ಎಂಬ ಅಂಶವನ್ನು ಅಧ್ಯಯನ ಮಾಡಲಾಗುವುದು. ಚರಿತ್ರೆಯ ಒಂದು ಕಾಲಘಟ್ಟದಲ್ಲಿ ನಿರ್ಮಾಣವಾದಂತಹ ಬೌದ್ಧದರ್ಶನವು ಸಮಕಾಲೀನ ತುರ್ತಿನಲ್ಲಿ ಮರು ಹುಟ್ಟನ್ನು ಪಡೆಯುತ್ತಿದೆ. ಆದ್ದರಿಂದ ಇಂತಹ ಸಮಕಾಲೀನ ಸಂದರ್ಭದಲ್ಲಿ ಈ ವಿಷಯವನ್ನು ಅಧ್ಯಯನ ಕೈಗೊಳ್ಳಲಾಗುವುದು.

ಕನ್ನಡಕ್ಕೆ ಬೇರೆ ಬೇರೆ ಭಾಷೆಗಳಿಂದ ಬೌದ್ಧ ಸಾಹಿತ್ಯವು ಅನುವಾದ ರೂಪದಲ್ಲಿ ಬಂದಿದೆ. ಅದು ಕನ್ನಡದ ಬೌದ್ಧ ಚಿಂತನೆಯನ್ನು ಪರೋಕ್ಷವಾಗಿ ಪ್ರಭಾವಿಸುತ್ತದೆ ಮತ್ತು ಪ್ರೇರೇಪಿಸುತ್ತದೆ. ಅದನ್ನು ಪ್ರಾಸಂಗಿಕವಾಗಿ ಈ ಅಧ್ಯಯನದಲ್ಲಿ ಚರ್ಚೆಗೆ ಒಳಪಡಿಸಲಾಗುವುದು.

ಆಕರಗಳು ಹಾಗೂ ವ್ಯಾಪ್ತಿ

ಅ) ಆಧುನಿಕ ಕನ್ನಡ ಸಾಹಿತ್ಯದ ಪ್ರಕಾರಗಳಾದ ಕಾವ್ಯ, ಮಹಾಕಾವ್ಯ, ನಾಟಕ ಮುಂತಾದವುಗಳಲ್ಲಿ ಬೌದ್ಧದರ್ಶನವು ವಿಭಿನ್ನ ರೂಪಾಂತರಗಳಲ್ಲಿ ವ್ಯಕ್ತವಾಗಿದೆ. ಕತೆ, ಕಾದಂಬರಿಗಳಲ್ಲಿ ಬೌದ್ಧ ದರ್ಶನವು ವಿರಳವಾಗಿ ಕಂಡುಬರುತ್ತದೆ, ನಾಟಕ, ಮಹಾಕಾವ್ಯಗಳಲ್ಲಿ ಇವು ಹೆಚ್ಚಾಗಿ ವ್ಯಕ್ತವಾಗಿವೆ. ಆದರೆ ಪ್ರಸ್ತುತ ಅಧ್ಯಯನವು ಕನ್ನಡ ಚಿಂತನ ಸಾಹಿತ್ಯವನ್ನು ಪ್ರಮುಖ ಆಕರವಾಗಿ ಪರಿಗಣಿಸುತ್ತದೆ. ಈ ಚಿಂತನ ಸಾಹಿತ್ಯದಲ್ಲಿ ಬಿಡಿಬಿಡಿ ಲೇಖನಗಳು, ಜೀವನ ಚರಿತ್ರೆಗಳು, ಸಂಶೋಧನ ಬರಹಗಳು, ಚರಿತ್ರೆಯ ಗ್ರಂಥಗಳು, ಬೌದ್ಧದರ್ಶನ ಕುರಿತ ಗ್ರಂಥಗಳು, ಬುದ್ಧನ ಜಾತಕ ಕತೆಗಳು ಸೇರುತ್ತವೆ.

ಆ) ಬುದ್ಧನ ಜೀವನದಲ್ಲಿ ನಡೆದಂತಹ ಘಟನೆಗಳ ಮರು ವಿಶ್ಲೇಷಣೆ, ಬೌದ್ಧದರ್ಶನವನ್ನು ಆಧಾರವಾಗಿಟ್ಟುಕೊಂಡು ವಿವಿಧ ಚಿಂತಕರು ಮಾಡಿರುವ ತೌಲನಿಕ ಬರಹಗಳನ್ನು (ಉದಾಹರಣೆಗೆ: ಬುದ್ಧ-ಬಸವ, ಬುದ್ಧ-ಅಲ್ಲಮ, ಬುದ್ಧ-ಮಾರ್ಕ್ಸ್, ಬುದ್ಧ-ಲೋಹಿಯಾ, ಬುದ್ಧ-ಅಂಬೇಡ್ಕರ್ ಇತ್ಯಾದಿ) ಇಲ್ಲಿ ಪ್ರಮುಖ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ.

ಇ) ಕೆಲವು ಚಿಂತಕರು ತಮ್ಮ ವೈಯಕ್ತಿಕ ಅನುಭವಗಳನ್ನು ಬುದ್ಧನ ಚಿಂತನೆಗಳೊಂದಿಗೆ ಬೆರೆಸಿ ಕೃತಿ ರಚಿಸಿದ್ದಾರೆ. ಅಂತಹ ಕೃತಿಗಳನ್ನು ಸಹ ಆಕರಗಳಾಗಿ ಇಟ್ಟುಕೊಂಡು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಈ) ಕನ್ನಡ ಚಿಂತನ ಸಾಹಿತಿಗಳನ್ನು ಒಳಗೊಂಡಂತೆ ಬೇರೆ ಬೇರೆ ಜ್ಞಾನಶಿಸ್ತಿನ ಹಿನ್ನಲೆಯ ಚಿಂತಕರು ಮಾಡಿರುವ ಚಿಂತನೆಗಳನ್ನು ಈ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗುವುದು.

ಉ) ಕ್ರಿ.ಶ.೧೯೫೬ ಅಕ್ಟೋಬರ್ ೧೪ರಂದು ಅಂಬೇಡ್ಕರ್ ಬೌದ್ಧಧರ್ಮ ದೀಕ್ಷೆಯನ್ನು ಕೈಗೊಂಡರು. ಈ ಹಿನ್ನೆಲೆಯಲ್ಲಿ ೧೯೫೬ರಿಂದ ಪ್ರಸ್ತುತದ ತನಕ ಪ್ರಕಟವಾಗಿರುವ ಕನ್ನಡ ಚಿಂತನ ಸಾಹಿತ್ಯವನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗುವುದು.

* * *

ಅಧ್ಯಾಯ: ಎರಡು

ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ

೧. ಮುನ್ನುಡಿ ಮತ್ತು ಬೆನ್ನುಡಿಗಳಲ್ಲಿ ಬೌದ್ಧ ವಿಚಾರ ಸಾಹಿತ್ಯ ಕುರಿತ ಅಧ್ಯಯನಗಳು

೨. ಸಂಶೋಧನ ಬರಹಗಳು ಹಾಗೂ ವಿಮರ್ಶಾ ಲೇಖನಗಳಲ್ಲಿ ಬೌದ್ಧ ಸಾಹಿತ್ಯ ಕುರಿತ ಅಧ್ಯಯನಗಳು

ಅಧ್ಯಾಯ : ಎರಡು

ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧದರ್ಶನದ ಆಯಾಮಗಳು ಎಂಬ ವಿಷಯವನ್ನು ಸಂಶೋಧನೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಪ್ರಸ್ತುತ ವಿಷಯಕ್ಕೆ ಪೂರಕವಾಗಿ ಇದುವರೆಗೂ ಕನ್ನಡ ವಿಚಾರ ಸಾಹಿತ್ಯ (ಚಿಂತನಾ ಸಾಹಿತ್ಯ)ದಲ್ಲಿ ಬೌದ್ಧಧರ್ಮ ಹಾಗೂ ಬೌದ್ಧದರ್ಶನ ಸಾಹಿತ್ಯ ಕುರಿತು ನಡೆದಿರುವ ಅಧ್ಯಯನಗಳನ್ನು ಸಮೀಕ್ಷೆಗೆ ಒಳಪಡಿಸಲಾಗುವುದು. ಆದರೆ ಇದುವರೆಗೂ ಕನ್ನಡದಲ್ಲಿ ಬೌದ್ಧವಿಚಾರ ಸಾಹಿತ್ಯದ ಮೇಲೆ ನಡೆದಿರುವ ಅಧ್ಯಯನಗಳು ತುಂಬ ವಿರಳವಾಗಿವೆ. ಕನ್ನಡ ಸಾಹಿತ್ಯದಲ್ಲಿ ಬೌದ್ಧಧರ್ಮ ಹಾಗೂ ದರ್ಶನಕ್ಕೆ ಸಂಬಂಧಿಸಿದ ಕೃತಿಗಳು ಸಾಕಷ್ಟು ಪ್ರಕಟಗೊಂಡಿವೆ. ಹಾಗೆ ನೋಡಿದರೆ ಜಗತ್ತಿನ ಎಲ್ಲ ಧರ್ಮಗಳಿಗಿಂತ ಹೆಚ್ಚು ವೈಚಾರಿಕ ಸಾಹಿತ್ಯದ ಹಿನ್ನೆಲೆಯಲ್ಲಿ ಚರ್ಚೆಗೆ ಗುರಿಯಾಗಿರುವುದು ಬೌದ್ಧದರ್ಶನವಾಗಿದೆ. ಆದರೆ ಕನ್ನಡದಲ್ಲಿ ಇದುವರೆಗೂ ಪ್ರಕಟವಾಗಿರುವ ಬೌದ್ಧವಿಚಾರ ಸಾಹಿತ್ಯಗಳ ಮೇಲೆ ನಡೆದಿರುವ ಸಂಶೋಧನೆಗಳು ಅಥವಾ ಅಧ್ಯಯನಗಳು ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತವೆ. ಆದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಪೂರಕವಾದ ನೆಲೆಯಲ್ಲಿ ಲಭ್ಯವಿರುವ ಬೌದ್ಧ ವೈಚಾರಿಕ ಕೃತಿಗಳಲ್ಲಿ ಕಂಡುಬರುವ ಮುನ್ನುಡಿ, ಬೆನ್ನುಡಿ, ಕೃತಿ ವಿಮರ್ಶೆ ಹಾಗೂ ಸಂಶೋಧನಾ ಬರಹಗಳನ್ನು ಇಲ್ಲಿ ಅಧ್ಯಯನಕ್ಕೆ ತೊಡಗಿಸಿಕೊಳ್ಳಲಾಗಿದೆ. ಅವುಗಳನ್ನು ಈ ಮುಂದಿನಂತೆ ಚರ್ಚಿಸಲಾಗಿದೆ.

೧. ಮುನ್ನುಡಿ ಮತ್ತು ಬೆನ್ನುಡಿಗಳಲ್ಲಿ ಬೌದ್ಧ ವಿಚಾರ ಸಾಹಿತ್ಯ ಕುರಿತ ಅಧ್ಯಯನಗಳು

ಬೌದ್ಧಧರ್ಮ ವಿಚಾರ ಸಾಹಿತ್ಯದ ಕುರಿತಾಗಿ ಮುನ್ನುಡಿ ಮತ್ತು ಬೆನ್ನುಡಿಗಳಲ್ಲಿನ ತಾತ್ವಿಕ ನಿಲುವುಗಳನ್ನು ಇಲ್ಲಿ ಅಧ್ಯಯನಕ್ಕೆ ಗುರಿಪಡಿಸಲಾಗಿದೆ. ಇಲ್ಲಿ ಅಧ್ಯಯನದ ಅನುಕೂಲದ ದೃಷ್ಟಿಯಿಂದ ಪ್ರತಿಯೊಂದು ಕೃತಿಯನ್ನು ಮೂರು ಹಂತಗಳಲ್ಲಿ ವಿಭಾಗ ಮಾಡಿಕೊಳ್ಳಲಾಗಿದೆ. ಮೊದಲ ಭಾಗದಲ್ಲಿ ಮೂಲ ಕೃತಿ ಹಾಗೂ ಕೃತಿಕಾರನ ತಾತ್ವಿಕ ನಿಲುವುಗಳನ್ನು ಚರ್ಚಿಸಲಾಗುವುದು. ನಂತರ ಎರಡನೇ ಭಾಗದಲ್ಲಿ ಕೃತಿಯ ಬಗ್ಗೆ ಮುನ್ನುಡಿಕಾರರು ಮತ್ತು ಬೆನ್ನುಡಿಕಾರರು ತಳೆದಿರುವ ತಾತ್ವಿಕ ದೃಷ್ಟಿಕೋನವನ್ನು ಚರ್ಚೆಗೆ ಗುರಿಪಡಿಸಲಾಗುವುದು. ಮೂರನೇ ಭಾಗದಲ್ಲಿ ಮೂಲ ಕೃತಿಕಾರರು, ಮುನ್ನುಡಿಕಾರರು ಹಾಗೂ ಬೆನ್ನುಡಿಕಾರರುಗಳ ನಿಲುವುಗಳ ತಾತ್ವಿಕ ಹಿನ್ನಲೆಯನ್ನು ಗುರುತಿಸುವ ನೆಲೆಯಲ್ಲಿ ಅಧ್ಯಯನ ಮಾಡಲಾಗುವುದು. ಇಲ್ಲಿ ಮೂಲ ಕೃತಿಕಾರರನ್ನು ಕೃತಿಕಾರರೆಂದು, ಮೂಲಕೃತಿಯನ್ನು ಅಧ್ಯಯನಕ್ಕೆ

ಗುರಿಪಡಿಸಿರುವ ಮುನ್ನುಡಿ ಹಾಗೂ ಬೆನ್ನುಡಿಕಾರರನ್ನು ಲೇಖಕರೆಂದು ಗುರುತಿಸಿಕೊಳ್ಳಲಾಗಿದೆ. ಅಧ್ಯಯನದ ಸಂದರ್ಭದಲ್ಲಿ ಗೊಂದಲವಾಗದಂತೆ ಈ ಕ್ರಮವನ್ನು ಅನುಸರಿಸಲಾಗಿದೆ.

ಅ) ಸಿ.ಕೆ.ಮಹೇಶರವರ 'ದಲಿತ ಚರಿತ್ರೆ ಮತ್ತು ಬುದ್ಧಧರ್ಮ' ಎಂಬ ಕೃತಿಗೆ ಎಲ್.ಲೋಕೇಶ್‌ರವರು ಮುನ್ನುಡಿ ಬರೆದಿದ್ದಾರೆ. ಈ ಕೃತಿಯಲ್ಲಿ ಕೃತಿಕಾರರಾದ ಸಿ.ಕೆ.ಮಹೇಶ್‌ರವರು ಬುದ್ಧಧರ್ಮದ ಮೂಲಕವೇ ದಲಿತರ ಅಸ್ತಿತ್ವವನ್ನು ಗುರುತಿಸುವ ಪ್ರಯತ್ನಕ್ಕೆ ಮುಂದಾಗಿರುವುದು ಕಂಡುಬರುತ್ತದೆ. ಸಿಂಧೂ ನಾಗರಿಕತೆಯಲ್ಲಿ ಕಂಡುಬರುವ ಅವೈದಿಕ ಪರಂಪರೆಯ ನಾಗ ಮತ್ತು ಮಾತಂಗ ಪರಂಪರೆಗಳೆ ಈ ನಾಡಿನ ತಳಮೂಲ ಸಂಸ್ಕೃತಿಗಳಾಗಿವೆ. ನಿಸರ್ಗ ಸಹಜವಾದ ಇವರು ಬೌದ್ಧ ಅನುಯಾಯಿಯಾಗಿದ್ದವರು. ವೈದಿಕ ಪರಂಪರೆಯನ್ನು ವಿರೋಧಿಸಿ, ಮಾನವ ಸಹಜ ಧರ್ಮವಾದ ಬೌದ್ಧಧರ್ಮವನ್ನು ಅವಲಂಬಿಸಿದ ಇವರನ್ನು ವೈದಿಕರು ಅಸ್ಪೃಶ್ಯರು ಎಂಬುದಾಗಿ ನಡೆಸಿಕೊಂಡು ಬಂದಿದ್ದಾರೆ ಎಂಬುದು ಕೃತಿಕಾರರ ನಿಲುವಾಗಿದೆ.

'ದಲಿತ ಚರಿತ್ರೆ ಮತ್ತು ಬುದ್ಧಧರ್ಮ' ಕೃತಿಗೆ ಮುನ್ನುಡಿಯನ್ನು ಬರೆದಿರುವ ಎನ್.ಲೋಕೇಶ್ ಅವರು ತಾಳಿರುವ ನಿಲುವುಗಳು ಈ ಮುಂದಿನಂತೆ ಗುರುತಿಸಲಾಗಿದೆ.

೧) ಅಂಬೇಡ್ಕರರು ದಲಿತರ ಚರಿತ್ರೆಯನ್ನು ಹೇಳುವಾಗ ನಾಗ ಮತ್ತು ಮಾತಂಗ ಪರಂಪರೆಗಳ ಇತಿಹಾಸವನ್ನು ಕುರಿತು ಸ್ಪಷ್ಟ ಚಿತ್ರಣ ನೀಡುವುದಿಲ್ಲ. ಆದರೆ ಸಿ.ಕೆ.ಮಹೇಶ್‌ರವರು ಅಂಬೇಡ್ಕರರ ಅಸ್ಪಷ್ಟ ಚಿತ್ರಣಕ್ಕೆ ಸ್ಪಷ್ಟವಾದ ಕುರುಹುಗಳನ್ನು ಒದಗಿಸಿದ್ದಾರೆ. ಆ ಮೂಲಕ ಜಂಬೂದ್ವೀಪದ ಯಜಮಾನ್ಯವು ಅಖಂಡವಾಗಿ ಬೆಳೆದು ಬಂದಿದೆ. "ಪಥಭ್ರಷ್ಟಗೊಂಡ ಕ್ಷತ್ರಿಯರು ಶೂದ್ರರಾದಂತೆ, ಅಲೆಮಾರಿ ಆದಿವಾಸಿ ಜನಾಂಗವೇ ಆರ್ಯಪೂರ್ವ ಭಾರತದ ಮೂಲ ನಿವಾಸಿಗಳು ಮತ್ತು ಮುಂದೆ ಅವರು ಅಸ್ಪೃಶ್ಯರಾಗುವ ದಬ್ಬಾಳಿಕೆಗೆ ತುತ್ತಾದವರೆಂದು ಅಂಬೇಡ್ಕರರ ನಿಲುವನ್ನು ಒಪ್ಪಿರುವ ಮಹೇಶ್ ಈ ಚಿಂತನೆಯನ್ನು ಆಧಾರ ಸಮೇತ ವಿಸ್ತರಣೆಗೊಳಿಸುವ ಮತ್ತು ಖಚಿತಗೊಳಿಸುವ ಪ್ರಯತ್ನ ಮಾಡುವುದು ಈ ಪುಸ್ತಕದ ವೈಶಿಷ್ಟ್ಯ" ಎಂಬುದಾಗಿ ಲೇಖಕರು ತಿಳಿಸಿದ್ದಾರೆ.

೨) ಸಿ.ಕೆ.ಮಹೇಶ್ ಅವರು ಕೈಗೊಂಡಿರುವ ಚರಿತ್ರೆ ಹುಡುಕಾಟವು ಸಂಶೋಧನಾತ್ಮಕ ಮಾದರಿಯದಾದರೂ, ಅದು ಪ್ರಾರಂಭವಾಗುವುದು 'ಗೃಹೀತ' ನೆಲೆಯಿಂದ. ಈ ಗೃಹೀತ ನೆಲೆಯು ಪ್ರಾಮಾಣಿಕ ಮತ್ತು ವಾಸ್ತವ ನೆಲೆಯಲ್ಲಿ ತನ್ನ ಸಂಶೋಧನೆಯನ್ನು ಮುಂದುವರೆಸಿದೆ ಎಂಬ ತೀರ್ಮಾನಕ್ಕೆ ಲೇಖಕರು ಬಂದಿರುವುದು ತಿಳಿದುಬರುತ್ತದೆ.

೩) ಕೃತಿಕಾರರು ದಲಿತ ಚರಿತ್ರೆಯನ್ನು ರೂಪಿಸಿಕೊಳ್ಳಬೇಕೆಂಬ ನೆಲೆಯಲ್ಲಿ ಅಧ್ಯಯನಕ್ಕೆ ಮುಂದಾಗಿದ್ದಾರೆ. ವಲಸೆ ಬಂದಂತಹ ಆರ್ಯರಿಗೆ ಭವ್ಯ ಇತಿಹಾಸವಿರುವಾಗ, ಈ ನಾಡಿನ ಮೂಲ ನಿವಾಸಿಗಳಿಗೆ ಅವರಿಗಿಂತ ಭವ್ಯವಾದ ಇತಿಹಾಸವಿರಲೇಬೇಕು ಎಂಬ ಆಶಯ ಹೊತ್ತು ನವಚರಿತ್ರೆಯ ಶೋಧನೆಗೆ ಮುಂದಾಗಿದ್ದಾರೆ. ಆ ಮೂಲಕ ಇಲ್ಲಿನ ಮೂಲ ನಿವಾಸಿಗಳಾದ

ನಾಗ ಮತ್ತು ಮಾತಂಗ ರಾಜಮನೆತನಗಳು ಪ್ರಬಲ ಆಡಳಿತ ನಡೆಸಿರುವ ಸಾಧ್ಯತೆ ಇದೆ ಎಂಬುದಾಗಿ ಲೇಖಕರು ಸಮರ್ಥಿಸಿಕೊಂಡಿದ್ದಾರೆ.

೪) ಕೃತಿಕಾರರು ಎರಡು ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸಿದ್ದಾರೆ. ಒಂದು, ಈಗಾಗಲೇ ಇರುವ ಸ್ಥಾಪಿತ ಕಥನಗಳ ಮರು ಪರಿಶೀಲನೆ. ಎರಡು, ಅವುಗಳ ಹಿಂದಿನ ನಿಲುವುಗಳನ್ನು ಪ್ರಶ್ನಿಸುತ್ತಲೇ ಅವುಗಳನ್ನು ಭಂಜಕಗೊಳಿಸಿ ಹೊಸತನ್ನು ಸ್ಥಾಪಿಸುವುದು. ಈ ನೆಲೆಯಲ್ಲಿ ವಿಸ್ಮೃತಿಗೆ ಸಂದಿರುವ ಮತ್ತು ಅಂಚಿಗೆ ತಳ್ಳಲ್ಪಟ್ಟಿರುವ ಪ್ರಧಾನ ಮೌಲ್ಯಗಳನ್ನು ಕೇಂದ್ರ ನೆಲೆಗೆ ತರುವ ಚಿಂತನೆ ನಡೆಸಿದ್ದಾರೆ. ಸಂಸ್ಕೃತ ಸಾಹಿತ್ಯದ ದೌರ್ಜನ್ಯದಿಂದ ಮೂಲೆಗುಂಪಾಗಿರುವ ಈ ನಾಡಿನ ಮೂಲ ಬೇರುಗಳನ್ನು ಬೆಳಕಿಗೆ ತಂದು, ಜಂಬೂ ದ್ವೀಪಕ್ಕೂ ಮತ್ತು ಬುದ್ಧನಿಗೂ ಇರುವ ನಿಕಟ ಸಂಬಂಧವನ್ನು ಗುರುತಿಸಿರುವ ಕೃತಿಕಾರರ ಕ್ರಮವನ್ನು ಲೇಖಕರು ಮುಕ್ತವಾಗಿ ಸ್ವೀಕರಿಸಿದ್ದಾರೆ.

೫) ಕೃತಿಕಾರರು ಪ್ರಧಾನ ಮತ್ತು ಅಧೀನ ಸಂಸ್ಕೃತಿ, ಯಜಮಾನ್ಯ ಮತ್ತು ಉಪಸಂಸ್ಕೃತಿ ಎಂಬ ವೈರುಧ್ಯವನ್ನು ನಿರಾಕರಿಸುತ್ತಾರೆ. ಯಾವುದನ್ನು ಉಪಸಂಸ್ಕೃತಿ, ಅಧೀನ ಸಂಸ್ಕೃತಿ ಎಂದು ಕರೆಯಲಾಗುವುದೋ ಅದೇ ಮಹಾಸಂಸ್ಕೃತಿ ಮತ್ತು ಮೂಲಸಂಸ್ಕೃತಿ ಎಂಬ ಕೃತಿಕಾರರ ನಿಲುವುಗಳನ್ನು ಲೇಖಕರು ಸಮರ್ಥಿಸಿದ್ದಾರೆ.

೬) ಬೌದ್ಧಧರ್ಮವು ಅಖಂಡ ಭಾರತವನ್ನು ವ್ಯಾಪಿಸಿದ್ದ ವಿವರಗಳ ಹಿನ್ನೆಲೆಯಿಂದ ನೋಡುವುದಾದರೆ, ಈ ದೇಶದ ಇತಿಹಾಸಕ್ಕೆ ಬೌದ್ಧ ಸಾಹಿತ್ಯವೇ ಮೂಲ ಆಧಾರವಾಗಬೇಕು. ಆದರೆ ವೈದಿಕ ಆಕರಗಳ ಪಾತಳಿಯ ಮೇಲೆ ರೂಪಿತವಾಗಿರುವುದರಿಂದ ಮನುಷ್ಯನನ್ನು ಒಡೆದು ನೋಡುವ ದೃಷ್ಟಿಕೋನ ಪಡೆದುಕೊಂಡಿತು. ಆದ್ದರಿಂದ ಕೇಂದ್ರ ಸ್ಥಾನಪಲ್ಲಟಗೊಂಡಿದೆ ಎಂಬ ಸಿ.ಕೆ.ಮಹೇಶ್‌ರವರ ನಿಲುವನ್ನೇ ಲೇಖಕರು ಸ್ವೀಕರಿಸಿಕೊಂಡಿದ್ದಾರೆ.

೭) ಬುದ್ಧನ ಧಾರ್ಮಿಕ ದೃಷ್ಟಿಯ ನೆಲೆಯ ಮೇಲೆ ರೂಪಿತವಾಗಿದ್ದ ಜಂಬೂ ದ್ವೀಪದ ಇತಿಹಾಸ ಹಾಗೆಯೇ ಮುಂದುವರೆದುಕೊಂಡು ಬಂದಿದ್ದರೆ ಇಂದು ಭಾರತ ಅಸಮಾನತೆಯಿಂದ ಕೂಡಿಯೇ ಇರುತ್ತಿರಲಿಲ್ಲ. ಆದರೆ ವೈದಿಕಧರ್ಮ ಮತ್ತು ನಂತರ ಕಾಲದ ಇಸ್ಲಾಂಧರ್ಮಗಳ ಆಕ್ರಮಣದಿಂದ ಮೂಲನಿವಾಸಿಗಳನ್ನು ಜಾತಿಯ ಹೆಸರಿನಲ್ಲಿ ಬಂಧಿಸಲಾಗಿದೆ. ಆದ್ದರಿಂದ ಬೌದ್ಧಧರ್ಮದ ತಾತ್ವಿಕ ನೆಲೆಯ ಮೇಲೆ ಇಂದು ಭಾರತವನ್ನು ರೂಪಿಸಬೇಕಿದೆ ಎಂಬ ಕೃತಿಕಾರರ ನಿಲುವನ್ನು ಲೇಖಕರು ಎತ್ತಿ ಹಿಡಿದಿದ್ದಾರೆ.

ಇಲ್ಲಿ ಲೇಖಕರು ವ್ಯಕ್ತಪಡಿಸಿರುವ ನಿಲುವುಗಳು ಕೃತಿಕಾರರ ಚಿಂತನೆಗಳಿಗೆ ಸಮರ್ಥನೆಯಾಗಿ ಕಂಡುಬರುತ್ತವೆ. ಎಲ್ಲ ಅಂಶಗಳನ್ನು ಮುಕ್ತವಾಗಿ ಸ್ವೀಕರಿಸುವ ಬಗೆಯು ಆರಾಧನಾ ಮಾದರಿಯಾಗುವ ಸಾಧ್ಯತೆಗಳಿವೆ. ಲೇಖಕರು ಎತ್ತಿ ಹಿಡಿದಿರುವ ಸಿ.ಕೆ.ಮಹೇಶ್‌ರವರ ಸಂಶೋಧನಾ ಮಾದರಿಗಳು, ಅಂಬೇಡ್ಕರರ ವಿಚಾರಗಳಿಗೆ ಇವರು ನೀಡುವ ತಾತ್ವಿಕ ಸಮರ್ಥನೆಗಳು, ಪುರಾಣಗಳನ್ನು ಭಂಜನೆಗೆ

ಗುರಿಪಡಿಸಿ ವೈಚಾರಿಕ ಅಂಶಗಳನ್ನು ಹೊರಹಾಕುವ ಕ್ರಮ ಹಾಗೂ ಈ ನಾಡಿನ ತಳಮೂಲ ಸಂಸ್ಕೃತಿಯನ್ನು ಬೌದ್ಧಧರ್ಮದ ಮಾನವೀಯತೆಯೊಂದಿಗೆ ಗುರುತಿಸುವ ಕ್ರಮಗಳ ಬಗ್ಗೆ ಇಲ್ಲಿ ಚಕಾರವಿಲ್ಲ. ಆದರೆ ಇಲ್ಲಿ ಲೇಖಕರು ಕೃತಿಕಾರರ ಎಲ್ಲ ನಿಲುವುಗಳನ್ನು ಸಮರ್ಥಿಸುವುದರಲ್ಲಿ ಕೆಲವು ಪ್ರಶ್ನೆಗಳು ಮೂಡುತ್ತವೆ. ಲೇಖಕರು ಸಿ.ಕೆ.ಮಹೇಶ್‌ರವರು ತಮ್ಮ ಚಿಂತನೆಗಳನ್ನು ಗೃಹೀತ ನೆಲೆಯಿಂದ ಪ್ರಾರಂಭಿಸುತ್ತಾರೆ ಎಂಬುದಾಗಿ ಗುರುತಿಸುತ್ತಾರೆ. ಆದರೆ ಈ ಗೃಹೀತ ನೆಲೆಯ ಸಂಶೋಧನೆಯಿಂದ ಆಗಬಹುದಾದ ಏಕಮುಖಿ ಧೋರಣೆಗಳು ಇಲ್ಲಿ ಚರ್ಚಾರ್ಹವಾಗಿವೆ. ಕೃತಿಕಾರರು ಎಲ್ಲವನ್ನು ಬೌದ್ಧಧರ್ಮದ ಮುಖಾಂತರವೇ ಗುರುತಿಸುವ ಪ್ರಯತ್ನಕ್ಕೆ ಮುಂದಾಗಿದ್ದಾರೆ. ಎಲ್ಲ ತಳಮೂಲ ಸಂಸ್ಕೃತಿಗಳ ವಿಮೋಚನೆಗೆ ಬೌದ್ಧಧರ್ಮವೇ ಅಂತಿಮ ಎಂಬ ಪ್ರಬಲವಾದ ಧೋರಣೆ ಕೃತಿಕಾರರಲ್ಲಿ ಕಂಡುಬರುತ್ತದೆ. ಇಲ್ಲಿ ಕೃತಿಕಾರರು ಬೌದ್ಧಧರ್ಮವನ್ನು ಒಪ್ಪಿತ ನೆಲೆಯಲ್ಲಿ ಸ್ವೀಕರಿಸಿರುವುದರಿಂದ ಈ ಧರ್ಮದಲ್ಲಿನ ಅಪಾಯಕಾರಿ ಅಂಶಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಆದರೆ ಲೇಖಕರು ಇದೇ ಮಾದರಿ ಅನುಸರಿಸುವುದರಿಂದ ಇದರಿಂದ ಸಂಭವಿಸಬಹುದಾದ ಅಪಾಯಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ.

ಭಾರತದಲ್ಲಿ ಬೌದ್ಧಧರ್ಮ ಜೀವ ತಳೆಯುವ ಪೂರ್ವದಲ್ಲಿ ಸಿಂಧೂ ನಾಗರಿಕತೆಯ ಜನರು ಪ್ರಕೃತಿ ಆರಾಧಕರಾಗಿದ್ದರು. ಇವರು ಮಾತೃಮೂಲ ಸಂಸ್ಕೃತಿಯ ಪ್ರತಿಪಾದಕರಾಗಿದ್ದರು ಎಂಬುದು ತಿಳಿದುಬರುತ್ತದೆ. ಹೊರಗಿನಿಂದ ಬಂದ ಆರ್ಯರು ಮೂಲನಿವಾಸಿಗಳ ಮೇಲೆ ಪಿತೃಪ್ರಧಾನ ಸಂಸ್ಕೃತಿಯ ಮೌಲ್ಯಗಳನ್ನು ಬಲವಂತವಾಗಿ ಹೇರಲು ಪ್ರಯತ್ನಿಸಿದಾಗ, ಈ ನೀತಿಯನ್ನು ಭಾರತದ ಅನೇಕ ನಾಸ್ತಿಕವಾದಿ ಪಂಥಗಳು ವಿರೋಧಿಸಿರುವುದು ಕಂಡುಬರುತ್ತದೆ. ಅವುಗಳಲ್ಲಿ ಚಾರ್ವಾಕರು, ಲೋಕಾಯತರು, ಶಾಕ್ತರು, ಅಜೀವಿಕ ಪಂಥದವರು ಪ್ರಮುಖವಾಗಿ ಕಂಡುಬರುತ್ತಾರೆ. ಈ ಎಲ್ಲ ಪಂಥಗಳ ಪ್ರಭಾವದಿಂದ ಬುದ್ಧ ತನ್ನ ದರ್ಶನವನ್ನು ವ್ಯಕ್ತಪಡಿಸಿರುವ ಸಾಧ್ಯತೆಗಳಿವೆ. ಆದರೆ ಇದರ ಬಗ್ಗೆ ಎಲ್ಲಿಯೂ ಪ್ರಸ್ತಾಪಿಸದೆ ಅಂಬೇಡ್ಕರ್ ಕಂಡುಕೊಂಡ ಬೌದ್ಧಧರ್ಮದಿಂದಲೇ ಸಿ.ಕೆ.ಮಹೇಶ್‌ರವರು ತಮ್ಮ ವಾದವನ್ನು ಪ್ರತಿಪಾದಿಸಿರುವುದು ಇಲ್ಲಿ ತಿಳಿದುಬರುತ್ತದೆ. ಇಲ್ಲಿ ಲೇಖಕರು ಕೂಡ ಕೃತಿಕಾರರ ನಿಲುವನ್ನು ಎತ್ತಿ ಹಿಡಿಯುವ ಮೂಲಕ ಬೌದ್ಧಧರ್ಮವನ್ನು ಸಂಪೂರ್ಣವಾಗಿ ಸ್ವೀಕಾರದ ನೆಲೆಯಲ್ಲಿ ಅಪ್ಪಿಕೊಂಡಿರುವುದು ಕಂಡುಬರುತ್ತದೆ.

"ಬೌದ್ಧಧರ್ಮದಲ್ಲಿನ ಮಾರಕ ಪ್ರವೃತ್ತಿಗಳು ವಜ್ರಯಾನ ಪಂಥದಂತಹ ಬೌದ್ಧ ಸಂಸ್ಥೆಗಳಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು. ಆದರೆ ಅಂಬೇಡ್ಕರ್ ಆಯ್ಕೆ ಮಾಡಿಕೊಂಡಿದ್ದು ಉಗಮ ಕಾಲದಲ್ಲಿನ ಬೌದ್ಧಮತದ ಮಾನವೀಯತೆ ಮತ್ತು ಸಮಾನತೆಗಳನ್ನು."[೨] ಆದರೆ ಇಂದು ಸಮಾನತೆಯನ್ನು ಬೌದ್ಧಧರ್ಮದಿಂದಲೇ ಕಂಡುಕೊಳ್ಳಬೇಕು ಎಂಬ ಲೇಖಕರ ನಿಲುವುಗಳು ಗೊಂದಲಕಾರಿಯಾಗಿವೆ. ಬುದ್ಧನ ತರುವಾಯ ಬೌದ್ಧಧರ್ಮವು ಒಡೆದು ಹೋಗಿ ಹೀನಯಾನದಲ್ಲಿ ಹದಿಮೂರು ಪಂಗಡಗಳು, ಮಹಾಯಾನದಲ್ಲಿ ಮೂರು ಪಂಗಡಗಳಾಗಿದ್ದವು. ಇವರಲ್ಲಿಯೇ ಇರುವ ಪರಸ್ಪರ ಭಿನ್ನಮತಗಳು ಶಮನಗೊಂಡಿಲ್ಲ. ಒಂದು ಪಂಥ ಮತ್ತೊಂದು ಪಂಥವನ್ನು ಅಸಮಾನತೆಯಿಂದ ನಡೆಸಿಕೊಂಡು

ಬಂದಿದೆ. ವಾಸ್ತವ ಹೀಗಿರುವಾಗ ಭಾರತದಲ್ಲಿ ಯಾವ ಪ್ರಕಾರದ ಬೌದ್ಧಧರ್ಮವನ್ನು ಆಚರಣೆಗೆ ತರಬೇಕು ಎಂಬ ಪ್ರಶ್ನೆ ಎದುರಾಗುತ್ತದೆ. ಪ್ರಸ್ತುತದಲ್ಲಿ ಇರುವ ಬೌದ್ಧಧರ್ಮವು ಪುರೋಹಿತಶಾಹಿ ಮಾದರಿಯಲ್ಲಿಯೇ ಕಾರ್ಯಪ್ರವೃತ್ತವಾಗಿದೆ. ಇಂತಹ ಸಂದರ್ಭದಲ್ಲಿ ಇದರಿಂದ ಶೋಷಣೆಗೆ ಗುರಿಯಾಗಿರುವ ದಲಿತರಿಗೆ ಯಾವುದೇ ಸ್ಪಂದನೆ ಸಿಗುತ್ತಿಲ್ಲ. ಭಾರತದಲ್ಲಿ ಬೌದ್ಧಧರ್ಮದ ಅವನತಿಗೆ ವೈದಿಕ, ಇಸ್ಲಾಂ ಧರ್ಮಗಳಷ್ಟೇ ಕಾರಣವಲ್ಲ. ಬೌದ್ಧಧರ್ಮದೊಳಗಿನ ಆಂತರಿಕ ಕಲಹವು ಕೂಡ ಕಾರಣವಾಗಿದೆ. ಬೌದ್ಧ ವಿಚಾರಗಳನ್ನು ಅಧ್ಯಯನಕ್ಕೆ ತೊಡಗಿಸಿರುವ ಲೇಖಕರು ಮುಕ್ತ ನೆಲೆಯಲ್ಲಿ ನಿಂತು ನೋಡಿದಾಗ ಮಾತ್ರ ತಮ್ಮಲ್ಲಿರುವ ದೋಷಗಳ ಅರಿವಾಗುತ್ತದೆ. ಇಲ್ಲದೆ ಹೋದರೆ ಇತರ ಧರ್ಮಗಳನ್ನು ದೂರುವುದರ ಮೂಲಕ ತಮ್ಮಲ್ಲಿನ ದೋಷಗಳನ್ನು ನಿರಾಕರಿಸುವುದು ಕಂಡುಬರುತ್ತದೆ. ಇಲ್ಲಿ ಲೇಖಕರು ಕೂಡ ಕೆಲವು ಸಂದರ್ಭದಲ್ಲಿ ವಾಸ್ತವವನ್ನು ಮರೆಮಾಚುವ ಮೂಲಕ ಸ್ವೀಕಾರಾರ್ಹ ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸಿದ್ದಾರೆ.

ಆ) ಸಿ.ಕೆ.ಮಹೇಶ್ ಅವರ 'ದಲಿತ ಚರಿತ್ರೆ ಮತ್ತು ಬುದ್ಧಧಮ್ಮ' ಕೃತಿಗೆ ಎಸ್.ಎಸ್.ಹಿರೇಮಠ್ ಅವರು ಬೆನ್ನುಡಿ ಬರೆದಿದ್ದಾರೆ. ಲೇಖಕರು ಮಾತೃ ಸಂಸ್ಕೃತಿಯ ನಾಗ ಮತ್ತು ಮಾತಂಗ ವಂಶಗಳ ಇತಿಹಾಸದ ಮೂಲ ಬೌದ್ಧನೆಲೆಯನ್ನು ನಿರ್ಮಾಣ ಮಾಡಲು ಹೊರಟಿರುವ ಕೃತಿಕಾರರ ತಾತ್ವಿಕ ನಿಲುವುಗಳನ್ನು ಸಮರ್ಥಿಸಿಕೊಂಡಿದ್ದಾರೆ. ಆದರೆ ಬೌದ್ಧಧರ್ಮವನ್ನು ಹೊರತುಪಡಿಸಿ ಹಿಟ್ಲರ್, ಮಾವೋ, ಲೆನಿನ್ನರನ್ನು ಒಂದೇ ಮಾನದಂಡದಿಂದ ಅಳೆಯುವ ಕೃತಿಕಾರರ ನಿಲುವುಗಳಿಗೆ ವಿರೋಧ ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಇಲ್ಲಿ ಲೇಖಕರು ಜಾತಿ ಅಸಮಾನತೆಯಿಂದ ಹೊರಗೆ ನಿಂತು ಒಂದು ಸಮಾಜವನ್ನು ಅಧ್ಯಯನಕ್ಕೆ ಗುರಿಪಡಿಸುವುದು ಕಂಡುಬರುತ್ತದೆ. ಕೃತಿಕಾರರು ಜಾತಿಯ ನೆಲೆಯಿಂದ ಉಂಟಾಗಿರುವ ಅಸ್ಪೃಶ್ಯತೆಯ ಬಿಡುಗಡೆಗಾಗಿ ತುಡಿಯುವ ಸಂದರ್ಭದಲ್ಲಿ ಬೌದ್ಧಧರ್ಮದ ತಾತ್ವಿಕತೆಯೇ ಪ್ರಮುಖವಾಗುತ್ತದೆ. ಉಳಿದ ದಾರ್ಶನಿಕರ ತತ್ವ-ಚಿಂತನೆಗಳು ಪರಕೀಯವಾಗಿ ಕಂಡುಬರುತ್ತವೆ. ಆದರೆ ಲೇಖಕರು ವರ್ಗ ಅಸಮಾನತೆಯ ನೆಲೆಯಲ್ಲಿ ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸುತ್ತಾರೆ. ಇವರ ತಾತ್ವಿಕ ಚಿಂತನೆಯ ಮೇಲೆ ಗಾಢವಾದ ಪ್ರಭಾವ ಬೀರಿರುವುದು ಮಾರ್ಕ್ಸ್‌ವಾದಿ ಚಿಂತನೆಗಳಾಗಿವೆ. ಆದ್ದರಿಂದ ಬೌದ್ಧಧರ್ಮವನ್ನು ಹೊರತುಪಡಿಸಿ ಉಳಿದ ಲೆನಿನ್, ಮಾವೋರ ಕ್ರಮಗಳನ್ನು ವಿರೋಧಿಸುವ ಬಗ್ಗೆ ಲೇಖಕರಲ್ಲಿ ವಿರೋಧ ಕಂಡುಬರುತ್ತದೆ.

ಇ) ಓಬಳೇಶ್‌ಘಟ್ಟಿಯವರ 'ಬುದ್ಧನ ಧರ್ಮ ಮತ್ತು ಇತರ ಧರ್ಮಗಳ ಒಂದು ವಿವೇಚನೆ' ಎಂಬ ಕೃತಿಗೆ ಕೆ.ಎಸ್.ಭಗವಾನ್ ಅವರು ಮುನ್ನುಡಿ ಬರೆದಿದ್ದಾರೆ. ಓಬಳೇಶ್‌ಘಟ್ಟಿಯವರು ತಮ್ಮ ವೈಚಾರಿಕ ಚಿಂತನೆಗಳನ್ನು ಈ ಕೃತಿಯಲ್ಲಿ ವ್ಯಕ್ತಪಡಿಸಿದ್ದಾರೆ. ಈ ಕೃತಿಯಲ್ಲಿ ಗಮನಿಸಬಹುದಾದ ಪ್ರಮುಖ ಅಂಶಗಳೆಂದರೆ, ಕೃತಿಕಾರರು ಬೌದ್ಧಧರ್ಮದ ತಾತ್ವಿಕತೆಯೊಂದಿಗೆ ಇನ್ನುಳಿದ ಧರ್ಮಗಳ ಆಶಯಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿದ್ದಾರೆ. ಈ ತೌಲನಿಕ ಕ್ರಮದಲ್ಲಿ ಬೌದ್ಧಧರ್ಮದ ವೈಚಾರಿಕ ನಿಲುವುಗಳನ್ನು ವೈಭವೀಕರಿಸುವ ಮೂಲಕ ಇತರ ಧರ್ಮಗಳನ್ನು ವಿಡಂಬನೆಗೆ

ಗುರಿಪಡಿಸಿರುವುದು ಕಂಡುಬರುತ್ತದೆ. ಕೃತಿಕಾರರು ಎಡಪಂಥೀಯ ಚಿಂತಕರಾಗಿದ್ದು, ತಳಸಮುದಾಯಗಳಿಗೆ ಬೌದ್ಧಧರ್ಮವು ಜೀವಪರವಾಗಿ ನಿಲ್ಲುವ ಅಂಶಗಳನ್ನು ಗುರುತಿಸಿದ್ದಾರೆ. ಆದರೆ ಇತರ ಧರ್ಮಗಳಲ್ಲಿ ಇರುವ ಆದರ್ಶ ಮೌಲ್ಯಗಳನ್ನು ಸಾರಸಗಟಾಗಿ ವಿರೋಧಕ್ಕೆ ಗುರಿಪಡಿಸಿರುವುದು ಇಲ್ಲಿ ವ್ಯಕ್ತವಾಗುತ್ತದೆ.

ಓಬಳೇಶ್‌ಘಟ್ಟಿಯವರ 'ಬುದ್ಧನ ಧಮ್ಮ ಮತ್ತು ಇತರ ಧರ್ಮಗಳ ಒಂದು ವಿವೇಚನೆ' ಎಂಬ ಕೃತಿಯ ಮುನ್ನುಡಿಯಲ್ಲಿ ಕೆ.ಎಸ್.ಭಗವಾನರು ಗುರುತಿಸಿರುವ ಪ್ರಮುಖ ಅಂಶಗಳನ್ನು ಈ ಮುಂದಿನಂತೆ ಗುರುತಿಸಲಾಗಿದೆ.

೧) ಪ್ರಸ್ತುತ ದಿನಮಾನಗಳಲ್ಲಿ ಮೂಲಭೂತವಾದಿಗಳು ಹೆಚ್ಚಾಗುತ್ತಿದ್ದಾರೆ. ಆದ್ದರಿಂದ ಧರ್ಮದ ಬಗೆಗಿನ ವಿಶ್ಲೇಷಣೆಯು ತುಂಬ ಅಪಾಯಕಾರಿಯಾದದು, ಇದು ಜೇನುಹುಟ್ಟಿಗೆ ಕಲ್ಲು ಹೊಡೆದಂತೆ. ಇದರಿಂದ ತಪ್ಪಿಸಿಕೊಳ್ಳುವುದು ತುಂಬ ಕಷ್ಟ. ಒಂದು ಧರ್ಮದಲ್ಲಿನ ಅವೈಜ್ಞಾನಿಕತೆಯನ್ನು ಎತ್ತಿಹಿಡಿದರೆ ಮೂಲಭೂತವಾದಿಗಳ ಕ್ರೌರ್ಯಕ್ಕೆ ಗುರಿಯಾಗಬೇಕಾಗುತ್ತದೆ ಎಂಬುದು ಲೇಖಕರ ನಿಲುವಾಗಿದೆ.

೨) ಈ ಕೃತಿಯನ್ನು ಅಧ್ಯಯನ ಮಾಡಿರುವ ಭಗವಾನರು ಬೌದ್ಧಧರ್ಮವನ್ನು ಹೊರತುಪಡಿಸಿ ಉಳಿದ ಧರ್ಮಗಳನ್ನು ವಿಡಂಬನೆಗೆ ಗುರಿಪಡಿಸಿರುವ ಕೃತಿಕಾರರ ನಿಲುವುಗಳಿಗೆ ಸಮರ್ಥನೆ ನೀಡಿರುವುದು ಇಲ್ಲಿ ಕಂಡುಬರುತ್ತದೆ.

ಇಲ್ಲಿ ಕೆ.ಎಸ್.ಭಗವಾನರ ವಿಚಾರಗಳನ್ನು ಗಮನಿಸಿದಾಗ, ಅವರು 'ಶಂಕರಾಚಾರ್ಯ ಮತ್ತು ಪ್ರತಿಗಾಮಿತನ' ಕೃತಿ ರಚನೆಯ ಸಂದರ್ಭದಲ್ಲಿ ಹಿಂದೂ ಮೂಲಭೂತವಾದಿಗಳಿಂದ ಅನುಭವಿಸಿರಬಹುದಾದ ಯಾತನೆಯನ್ನು ಇಲ್ಲಿ ಹಂಚಿಕೊಂಡಿದ್ದಾರೆ. ಮೂಲಭೂತವಾದಿಗಳಿಗೆ ತಮ್ಮಲ್ಲಿನ ನ್ಯೂನ್ಯತೆಯ ಅರಿವಾಗುವುದು ಕಷ್ಟ. ತಾವು ನಂಬಿದ ಆಶಯಗಳಿಗೆ ಸ್ವಲ್ಪ ಚ್ಯುತಿಯಾದರು ದೊಡ್ಡ ಗಲಭೆಯನ್ನು ಪ್ರಾರಂಭಿಸುತ್ತಾರೆ. ಆದರೆ ಇಲ್ಲಿ ವೈಚಾರಿಕ ಚಿಂತಕರಾದ ಭಗವಾನರು ಕೂಡ ಬುದ್ಧಧರ್ಮವನ್ನು ಆರಾಧನಾತ್ಮಕವಾಗಿ ಒಪ್ಪಿಕೊಂಡಿರುವುದು ಕಂಡುಬರುತ್ತದೆ. ಹಿಂದೂ ಧರ್ಮ, ಕ್ರೈಸ್ತಧರ್ಮ ಹಾಗೂ ಇಸ್ಲಾಂಧರ್ಮಗಳಲ್ಲಿ ಅಡಗಿರಬಹುದಾದ ಮೂಲಭೂತವಾದವನ್ನು ಗುರುತಿಸುವ ಇವರು ಬುದ್ಧನ ತರುವಾಯ ಬೌದ್ಧಧರ್ಮವು ಕೂಡ ವೈದಿಕ ಪುರೋಹಿತಶಾಹಿಯ ಜಡ ಸ್ವರೂಪವನ್ನು ಪಡೆದುಕೊಂಡಿದೆ. ಇದನ್ನು ಮರೆಮಾಚುವ ಅಂಶಗಳು ಇವರ ಚಿಂತನೆಗಳಲ್ಲಿ ಕಂಡುಬರುತ್ತವೆ. ಪ್ರತಿಯೊಂದು ಧರ್ಮಗಳು ಕೂಡ ಆರಂಭಿಕ ಹಂತದಲ್ಲಿ ತನ್ನದೇ ಆದ ಉತ್ತಮ ದರ್ಶನವನ್ನು ಮೈಗೂಢಿಸಿಕೊಂಡು ಬಂದಿವೆ. ಆದರೆ ನಂತರ ಅವುಗಳ ಅನುಯಾಯಿಗಳ ಕ್ರಿಯಾ ವಿಧಾನಗಳಿಂದ ಜಡ ಸ್ವರೂಪವನ್ನು ಪಡೆದುಕೊಂಡಿವೆ. ಇದಕ್ಕೆ ಬೌದ್ಧಧರ್ಮವು ಹೊರತಲ್ಲ. ಈ ಕುರಿತು ಭಾರತದ ದಾರ್ಶನಿಕ ಚಿಂತಕರಾದ ಓಶೋ ಸ್ಪಷ್ಟವಾಗಿ ಹೇಳುತ್ತಾರೆ "ನನ್ನ ಮಟ್ಟಿಗೆ ಬೌದ್ಧಧರ್ಮವು ಗೌತಮ ಬುದ್ಧನೊಡನೆಯೇ ಸತ್ತು ಹೋಯಿತು. ಈಗ ಬೌದ್ಧಧರ್ಮ ಎಂದು ಏನು ಉಳಿದಿದೆಯೋ ಅದಕ್ಕೂ ಬುದ್ಧನಿಗೂ ಏನು ಸಂಬಂಧವಿಲ್ಲ"[೩] ಎಂಬುದಾಗಿ ತಿಳಿಸುತ್ತಾರೆ.

ಹೀಗಿರುವಾಗ ಇಂದು ಭಗವಾನರು ಒಪ್ಪಿಕೊಂಡಿರುವ ಬೌದ್ಧಧರ್ಮಕ್ಕೂ ಇತರೆ ಧರ್ಮಗಳಿಗೂ ಯಾವುದೇ ವ್ಯತ್ಯಾಸಗಳು ಕಂಡುಬರುವುದಿಲ್ಲ.

ಈ ಕೃತಿಗೆ ಜ.ಹೋ.ನಾರಾಯಣಸ್ವಾಮಿಯವರು ಬೆನ್ನುಡಿ ಬರೆದಿದ್ದಾರೆ. ಇವರು "ಜಗತ್ತಿನ ದಾರ್ಶನಿಕರಲ್ಲಿ ಗೌತಮಬುದ್ಧ ಒಬ್ಬನೇ ಮೂಲಭೂತವಾದದಿಂದ ಹೊರಗುಳಿದವನು" ಎಂಬುದಾಗಿ ತಿಳಿಸಿದ್ದಾರೆ. ಇವರು ಕೂಡ ಬುದ್ಧನ ಆಚೆಗಿರುವ ಹಲವಾರು ದಾರ್ಶನಿಕರನ್ನು ಗುರುತಿಸುವಲ್ಲಿ ವಿಫಲವಾಗಿರುವುದು ಕಂಡುಬರುತ್ತದೆ. ಇಲ್ಲಿ ಬುದ್ಧನನ್ನು ಮಾತ್ರ ಎತ್ತಿ ಹಿಡಿದು ಇತರ ದಾರ್ಶನಿಕರನ್ನು ತಿರಸ್ಕಾರಕ್ಕೆ ಗುರಿಪಡಿಸುವುದು ಕೂಡ ಪೂರ್ವಾಗ್ರಹ ಪೀಡನೆಯಾಗುವ ಸಾಧ್ಯತೆ ಇದೆ. "ತರ್ಕದಿಂದ ಯಾವುದು ಸಿದ್ಧವಾಗುತ್ತದೆಯೋ ಅದನ್ನು ಮಾತ್ರ ಸ್ವೀಕರಿಸುವುದನ್ನು ಬುದ್ಧ ಕಲಿಸಿದನು".[೪] ಇಂದು ನಾವು ಬೌದ್ಧಧರ್ಮವನ್ನು ಕೂಡ ತರ್ಕದ ನೆಲೆಯಲ್ಲಿ ಗಮನಿಸಿದಾಗ ಮಾತ್ರ ಅದರ ನೈಜತೆ ಅರ್ಥವಾಗುತ್ತದೆ. ಇಲ್ಲದೆ ಹೋದರೆ ಇನ್ನೊಂದು ಧರ್ಮವನ್ನು ಕನಿಷ್ಟಗೊಳಿಸಿ, ಬೌದ್ಧಧರ್ಮವನ್ನು ಕುರುಡಾಗಿ ಸ್ವೀಕರಿಸಿದಂತಾಗುತ್ತದೆ.

೩) ಎಂ.ಮರಿಸ್ವಾಮಿಯವರ 'ಬೆಳಕಿನ ಧಮ್ಮ' ಕೃತಿಗೆ ಕಾಳೇಗೌಡ ನಾಗವಾರ ಅವರು ಮುನ್ನುಡಿಯನ್ನು ಬರೆದಿದ್ದಾರೆ. ಇಲ್ಲಿ ಲೇಖಕರು ಅಧ್ಯಯನಕ್ಕೆ ಗುರಿಪಡಿಸಿರುವ ಪ್ರಮುಖ ಅಂಶಗಳನ್ನು ಈ ಮುಂದಿನಂತೆ ತಿಳಿಯಬಹುದಾಗಿದೆ.

ಅ) ಹಿಂದೂ ಧರ್ಮದಲ್ಲಿನ ಮೂಲಭೂತವಾದದಿಂದ ನೊಂದ ಅಂಬೇಡ್ಕರರು ಬೌದ್ಧಧರ್ಮವನ್ನು ಸ್ವೀಕರಿಸಿ, ತಳವರ್ಗದ ಜನತೆಯಲ್ಲಿ ಜಾಗೃತಿ ಮೂಡಿಸಿರುವ ಬಗ್ಗೆ ಕೃತಿಕಾರರು ಮಂಡಿಸಿದ ಚಿಂತನೆಗಳನ್ನು ಲೇಖಕರು ಸಮರ್ಥಿಸಿಕೊಂಡಿದ್ದಾರೆ. ಭಾರತೀಯ ಮೂಲದ ಬೌದ್ಧಧರ್ಮಕ್ಕೆ ಚಾಲನೆ ನೀಡಿದ ಅಂಬೇಡ್ಕರರ ಬಗ್ಗೆ ಇವರಿಗೆ ಅಭಿಮಾನವಿದೆ.

ಆ) ಅಧುನಿಕ ಯುಗದಲ್ಲಿಯೂ ಪುರೋಹಿತಶಾಹಿಯು ಒಡ್ಡುತ್ತಿರುವ ಸವಾಲುಗಳಿಗೆ ಬುದ್ಧನ ತತ್ವ-ಚಿಂತನೆಗಳು ಪ್ರತಿಯಾಗಿ ಸವಾಲೊಡ್ಡುತ್ತಿರುವ ಬಗ್ಗೆ ಕೃತಿಕಾರರು ಗುರುತಿಸಿರುವ ಅಂಶಗಳನ್ನು ಲೇಖಕರು ಎತ್ತಿ ಹಿಡಿದಿದ್ದಾರೆ.

ಇ) ಇಲ್ಲಿ ಕೃತಿಕಾರರು ಬೌದ್ಧಧರ್ಮದ ಬಗ್ಗೆ ಉತ್ತಮ ಅಂಶಗಳನ್ನು ಗುರುತಿಸಿದ್ದರೂ, ಅವು ಮತ್ತೊಂದೆಡೆ ಬುದ್ಧನ ಚಿಂತನೆಗಳನ್ನು ಸಾಂಸ್ಥೀಕರಣಗೊಳಿಸುವ ಆತಂಕ ಭಾವ ಲೇಖಕರಲ್ಲಿ ವ್ಯಕ್ತವಾಗುತ್ತದೆ. ಆದ್ದರಿಂದ ಬುದ್ಧನ ತತ್ವ-ಚಿಂತನೆಗಳು ಮುಕ್ತ ನೆಲೆಯಲ್ಲಿ ಸಾಮಾನ್ಯ ಜನತೆಗೆ ತಲುಪಬೇಕೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಇಲ್ಲಿ ಲೇಖಕರು ಗುರುತಿಸಿರುವ ಅಂಶಗಳು ಸಮರ್ಥನಿಯವಾಗಿವೆ. ಅಂಬೇಡ್ಕರ್ ಬೌದ್ಧಧರ್ಮವನ್ನು ಸ್ವೀಕರಿಸಿ ದಲಿತರಲ್ಲಿ ಹೊಸ ಜಾಗೃತಿ ಮೂಡಿಸಿದ್ದಾರೆ. ಆದರೆ ಇಂದಿನ ದಲಿತಪರ ಸಂಘಟನೆಗಳು ಆ ಮಾರ್ಗದಲ್ಲಿ ಮುನ್ನಡೆಯಲು ಸಂಪೂರ್ಣವಾಗಿ ಅಂಬೇಡ್ಕರರನ್ನು ಅವಲಂಬಿಸಿರುವಂತೆ ಕಂಡುಬರುತ್ತವೆ. ಇಲ್ಲಿ ಅಂಬೇಡ್ಕರ್ ಕೇವಲ ಮಾರ್ಗದಾತ ಎಂಬುದನ್ನು

ಅರ್ಥೈಸಿಕೊಳ್ಳಬೇಕಿದೆ. ಆಧುನಿಕ ಯುಗದಲ್ಲಿಯೂ ಪುರೋಹಿತಶಾಹಿಯು ತನ್ನ ಸ್ವರೂಪವನ್ನು ಚಾಚು ತಪ್ಪದೆ ಪಾಲಿಸುತ್ತ ಬಂದಿದೆ. ಈ ವೈದಿಕರ ತಂತ್ರಗಳನ್ನು ಬುದ್ಧನ ಸರಳ ಜ್ಞಾನದ ಮೂಲಕ ತೊಡೆದುಹಾಕುವ ಬದಲು ವೈದಿಕರಂತೆಯೇ ಬೌದ್ಧಧರ್ಮೀಯರು ಪುರೋಹಿತಶಾಹಿಯನ್ನು ಮೈಗೂಡಿಸಿಕೊಂಡಿರುವುದು ಕಂಡುಬರುತ್ತದೆ. ಈ ಕಾರಣದಿಂದಲೇ ಲೇಖಕರು ಬೌದ್ಧಧರ್ಮ ಸಾಂಸ್ಥೀಕರಣಗೊಳ್ಳುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ.

೪) ಸಿ.ಎನ್.ಶೆಟ್ಟಿಯವರ 'ಗೌತಮಬುದ್ಧ ಬುದ್ಧಧರ್ಮ' ಎಂಬ ಕೃತಿಗೆ ನಗರಿ ಬಾಬಯ್ಯನವರು ಮುನ್ನುಡಿ ಬರೆದಿದ್ದಾರೆ. ಇಲ್ಲಿ ಲೇಖಕರು ವ್ಯಕ್ತಪಡಿಸಿರುವ ಪ್ರಮುಖ ಅಂಶಗಳೆಂದರೆ, ವೈದಿಕ ಪುರೋಹಿತಶಾಹಿಯು ಇದುವರೆಗೂ ಕಾಪಾಡಿಕೊಂಡು ಬಂದಿರುವ ಮೌಲ್ಯಗಳನ್ನು ಸಿ.ಎನ್.ಶೆಟ್ಟಿಯವರ ಈ ಕೃತಿ ಭಂಜನಗೊಳಿಸಿದೆ. ವಿಚಾರವಾದ ಬ್ರಾಹ್ಮಣ್ಯದ ಪರಮಶತ್ರು. ಮೂಢನಂಬಿಕೆಗಳು ಇಲ್ಲವಾದರೆ ಬ್ರಾಹ್ಮಣ್ಯಕ್ಕೆ ಅಸ್ತಿತ್ವವೇ ಇರುವುದಿಲ್ಲ. ಆದ್ದರಿಂದ ಬುದ್ಧನ ವಿಚಾರವಾದವನ್ನು ಬ್ರಾಹ್ಮಣಶಾಹಿಯು ವಿರೋಧಿಸುತ್ತದೆ. "ಗೌತಮಬುದ್ಧ ತನ್ನ ತೀವ್ರ ಹುಡುಕಾಟದಿಂದ ತನ್ನ ಕಾಲದ ಜೀವನ ಸತ್ಯಗಳನ್ನು ಸ್ಪಷ್ಟವಾಗಿ ಸಮಾಜದ ಮುಂದಿಟ್ಟ ಚರಿತ್ರೆಯ ವಿದ್ಯಾರ್ಥಿಯು ಹೌದು. ಈ ಕಾರಣದಿಂದ ಡಾ.ಬಾಬಾಸಾಹೇಬ್ ಅಂಬೇಡ್ಕರರು ಉಪಯುಕ್ತವಾಗುವಂತೆ ಬೌದ್ಧಧರ್ಮವನ್ನು ಸ್ವೀಕರಿಸಿ ಬ್ರಾಹ್ಮಣ್ಯಕ್ಕೆ ಧಿಕ್ಕಾರ ತೋರಿದರು".[೫] ಸಾಮಾಜಿಕ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಸಿ.ಎನ್.ಶೆಟ್ಟಿಯವರು ಸತ್ಯವನ್ನು ನಿರ್ಭೀತಿಯಿಂದ ಹೊರಹಾಕುವ ಪ್ರಯತ್ನ ಮಾಡಿದ್ದಾರೆ. ಆ ಮೂಲಕ ಜಿಡ್ಡುಗಟ್ಟಿದ ಪುರೋಹಿತಶಾಹಿಯನ್ನು ಬೌದ್ಧ ಚಿಂತನೆಗಳ ಮೂಲಕ ವಿಮರ್ಶೆಗೆ ಗುರಿಪಡಿಸಿದ್ದಾರೆ ಎಂಬುದಾಗಿ ಲೇಖಕರು ತಿಳಿಸಿದ್ದಾರೆ.

ಇಲ್ಲಿ ಲೇಖಕರು ಗುರುತಿಸಿರುವಂತೆ ಸಿ.ಎನ್.ಶೆಟ್ಟಿಯವರು ತಮ್ಮ ವೈಚಾರಿಕ ಚಿಂತನೆಗಳ ಮೂಲಕ ವೈದಿಕ ಪುರೋಹಿತಶಾಹಿಯನ್ನು ವಿಮರ್ಶೆಗೆ ಗುರಿಪಡಿಸಿದ್ದಾರೆ. ಪುರಾಣ, ಸ್ಮೃತಿಗಳನ್ನು ಭಂಜನೆ ಮಾಡಿದ್ದಾರೆ. ಆದರೆ ಬೌದ್ಧಧರ್ಮವು ಇಂದು ಪುರೋಹಿತಶಾಹಿಯ ಮಾದರಿಯಲ್ಲಿಯೇ ಮುಂದುವರೆಯುತ್ತಿದೆ. ಅಂಬೇಡ್ಕರ್ ಬೌದ್ಧಧರ್ಮ ಸ್ವೀಕರಿಸಿದ ಕಾರಣ ಇಂದು ಲಕ್ಷಾಂತರ ದಲಿತರು ಬೌದ್ಧಧರ್ಮ ಸ್ವೀಕರಿಸುತ್ತಿದ್ದಾರೆ. ಆದರೆ ಈ ನವಬೌದ್ಧರಿಗೆ ಸ್ಪಂದಿಸುವಂತಹ ಯಾವ ಮಾದರಿಯು ಬೌದ್ಧಧರ್ಮದಲ್ಲಿ ಇಂದು ಕಂಡುಬರುವುದಿಲ್ಲ. ಇದರ ಬಗ್ಗೆ ಕೃತಿಕಾರರಾಗಲಿ, ಲೇಖಕರಾಗಲಿ ಯಾವುದೇ ಚಕಾರ ಎತ್ತಿರುವುದು ಕಂಡುಬರುವುದಿಲ್ಲ. ಇವರು ಕೂಡ ಬೌದ್ಧಧರ್ಮವನ್ನು ಸ್ವೀಕಾರದ ನೆಲೆಯಲ್ಲಿ ಕಂಡುಕೊಂಡಿದ್ದು, ವೈದಿಕ ಪುರೋಹಿತಶಾಹಿಯನ್ನು ವಿಮರ್ಶೆಗೆ ಒಳಪಡಿಸಲು ಬೌದ್ಧಧರ್ಮವನ್ನು ಅಸ್ತ್ರವಾಗಿ ಬಳಸಿಕೊಳ್ಳುತ್ತಿರುವುದಾಗಿ ಕಂಡುಬರುತ್ತದೆ.

೫) ಓ.ರಾಜಣ್ಣ ಹಾಗೂ ಜೆ.ಬಿ.ಶಿವಸ್ವಾಮಿಯವರು ರಚಿಸಿರುವ 'ಬುದ್ಧಧಮ್ಮ ಹಾಗೂ ಸಾಮಾಜಿಕ ಚಿಂತನೆಗಳು' ಎಂಬ ಕೃತಿಗೆ ಕೆ.ಎಸ್.ಭಗವಾನ್ ಅವರು ಮುನ್ನುಡಿ ಬರೆದಿದ್ದಾರೆ. ಇಲ್ಲಿ ಲೇಖಕರು ಗುರುತಿಸಿರುವ ಪ್ರಮುಖ ನಿಲುವುಗಳನ್ನು ಈ ಮುಂದಿನಂತೆ ತಿಳಿಯಬಹುದಾಗಿದೆ.

ಅ) ಕರ್ನಾಟಕದಲ್ಲಿ ಇತ್ತೀಚೆಗೆ ಬುದ್ಧಧರ್ಮದ ಬಗ್ಗೆ ಹೆಚ್ಚು ಆಸಕ್ತಿ ಕಂಡುಬರುತ್ತಿವೆ. ಇದಕ್ಕೆ ಬಹುಪಾಲು ನೆಪ ಕರ್ನಾಟಕ ದಲಿತ ಸಂಘರ್ಷ ಸಮಿತಿ ಹಾಗೂ ಅಂಬೇಡ್ಕರ್ ಜೀವನ ಹೋರಾಟ ತತ್ವಗಳ ಹಿನ್ನಲೆಯುಳ್ಳ ವಿವಿಧ ಸಂಘಟನೆಗಳ ಕಾರ್ಯಚಟುವಟಿಕೆಗಳು ಎಂಬುದಾಗಿ ಲೇಖಕರು ತಿಳಿಸಿದ್ದಾರೆ.

ಆ) ಬುದ್ಧನ ಬೋಧಿಸಿದ ಧರ್ಮ ನಿಜವಾದ ಪ್ರಜಾಪ್ರಭುತ್ವವಾದಿಯಾದದ್ದು. ಪ್ರಜಾಪ್ರಭುತ್ವದ ಬುನಾದಿಯಾದ ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ ಮತ್ತು ಸಾಮಾಜಿಕ ನ್ಯಾಯಗಳನ್ನು ಇಲ್ಲಿ ಪೋಷಿಸಿಕೊಂಡು ಬರಲಾಗಿದ್ದು, ದೈವಕೇಂದ್ರಿತವಲ್ಲದ ಮಾನವ ಕೇಂದ್ರಿತ ನೆಲೆಯಲ್ಲಿ ತನ್ನ ನಿಲುವನ್ನು ಬೌದ್ಧಧರ್ಮ ಒಳಗೊಂಡಿದೆ ಎಂಬ ಕೃತಿಕಾರರ ನಿಲುವುಗಳಿಗೆ ಭಗವಾನರು ಸಮರ್ಥನೆ ನೀಡಿದ್ದಾರೆ.

ಇ) ಬುದ್ಧನು ಸ್ತ್ರೀಯರನ್ನು ತನ್ನ ಧಮ್ಮಕ್ಕೆ ಸೇರಿಸಿಕೊಳ್ಳದೆ ಇರುವ ಬಗ್ಗೆ ಲೇಖಕರು ಸಮರ್ಥನೆ ನೀಡಿದ್ದಾರೆ. ಸಂಘಕ್ಕೆ ಸ್ತ್ರೀಯರನ್ನು ಸೇರಿಸುವಿಕೆಗೆ ಬುದ್ಧ ಮೊದಲು ಒಪ್ಪದಿರುವುದಕ್ಕೆ ಬುದ್ಧನ ಇಂದ್ರಿಯ ನಿಗ್ರಹ ಮತ್ತು ಸಂಯಮ ಎಲ್ಲರಿಗೂ ಸಾಧ್ಯವಾಗಲಾರದು. ಭಿಕ್ಷುಗಳು ಮತ್ತು ಭಿಕ್ಷುಣಿಯರು ಇರುವ ಕಡೆ ಆಕರ್ಷಣೆ ಉಂಟಾಗಿ ಅಪಖ್ಯಾತಿ ಬರಬಹುದು ಎಂಬ ಶಂಕೆಯಿಂದ ಬುದ್ಧ ಪ್ರಾರಂಭದಲ್ಲಿ ಒಪ್ಪಿಗೆ ಕೊಡಲು ತಡಮಾಡಿರಬಹುದು ಎಂಬುದು ಲೇಖಕರ ನಿಲುವಾಗಿದೆ.

ಇಲ್ಲಿ ಲೇಖಕರು ಗುರುತಿಸಿರುವಂತೆ ಕರ್ನಾಟಕದಲ್ಲಿ ಇಂದು ಬೌದ್ಧಧರ್ಮ ಹೆಚ್ಚು ಪ್ರಚಾರವನ್ನು ಪಡೆದುಕೊಳ್ಳುವುದಕ್ಕೆ ದಲಿತ ಸಂಘರ್ಷ ಸಮಿತಿ, ಅಂಬೇಡ್ಕರ್ ಪರ ಸಂಘಟನೆಗಳ ಕಾರ್ಯಚಟುವಟಿಕೆಗಳೇ ಪ್ರಮುಖ ಕಾರಣ ಎಂಬುದಾಗಿ ತಿಳಿಸಿದ್ದಾರೆ. ಈ ಚಿಂತನೆಗೆ ಪ್ರಮುಖ ಕಾರಣವೆಂದರೆ, ಲೇಖಕರು ದಲಿತಪರ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದರಿಂದ ಬೌದ್ಧಧರ್ಮವನ್ನು ಅನುಸರಿಸುತ್ತಿರುವ ಬಗ್ಗೆ ಈ ಆಲೋಚನೆ ವ್ಯಕ್ತಪಡಿಸಿದ್ದಾರೆ. ಆದರೆ ದಲಿತಪರ ಸಂಘಟನೆಗಳು ಬೌದ್ಧಧರ್ಮದ ಕುರಿತು ಅಂಬೇಡ್ಕರ್ ಮತಾಂತರ ಹೊಂದಿದ ಮಾದರಿಯನ್ನು ಅನುಸರಿಸುತ್ತಿದ್ದಾರೆಯೇ ವಿನಾ ಬೌದ್ಧ ದರ್ಶನದ ಬಗ್ಗೆ ಇಲ್ಲಿ ಯಾವುದೇ ಆಲೋಚನ ವಿಧಾನಗಳು ಕಂಡುಬರುತ್ತಿಲ್ಲ. ಹಾಗೆಯೇ ಕರ್ನಾಟಕದಲ್ಲಿ ವೈಚಾರಿಕ ಚಿಂತಕರು ಬೌದ್ಧ ದರ್ಶನ ಕುರಿತು ನಡೆಸಿರುವ ವಿಚಾರಗಳನ್ನು ಇಲ್ಲಿ ಗೌಣಗೊಳಿಸಲಾಗಿದೆ. ಬುದ್ಧ ಪ್ರತಿಪಾದಿಸಿದ ಪ್ರಜಾಪ್ರಭುತ್ವ ಮೌಲ್ಯಗಳು ಅತ್ಯಂತ ಮಹತ್ವಪೂರ್ಣವಾಗಿವೆ. ಆದರೆ ಸ್ತ್ರೀಯರ ಬಗ್ಗೆ ಬುದ್ಧ ತೋರಿದ ನಿಲುವು ಸೂಕ್ತವಾದುದಲ್ಲ. ಇಲ್ಲಿ ಈ ಬಗ್ಗೆ ಲೇಖಕರ ನಿಲುವುಗಳನ್ನು ಗಮನಿಸಿದರೆ ಸಾಮಾಜಿಕ ಸಮಾನತೆಗಿಂತ ಧರ್ಮವನ್ನು ರಕ್ಷಿಸುವುದೇ ಪ್ರಮುಖವಾಗಿರುವಂತೆ ಕಂಡುಬರುತ್ತದೆ. ಆದ್ದರಿಂದ ಸ್ತ್ರೀಯರ ಬಗೆಗೆ ಬುದ್ಧ ತಾಳಿರುವ ನಿಲುವುಗಳ ಬಗ್ಗೆ ಲೇಖಕರು ವ್ಯಕ್ತಪಡಿಸುವ ವಿಚಾರಗಳು ಸಮಂಜಸವಾಗಿಲ್ಲ. ಮುಂದುವರೆದು ಬೌದ್ಧಧರ್ಮ ಮತ್ತು ಬುದ್ಧಧರ್ಮ ಎಂಬ ಪದಗಳಲ್ಲಿ ಯಾವುದು ಸಮಂಜಸವಾದುದು ಎಂಬುದನ್ನು ಚರ್ಚೆಗೆ ಗುರಿಪಡಿಸಿದ್ದಾರೆ.

೬) ಸುಷ್ಮಾ ಎನ್.ಹಾಗರಗಿಯವರ 'ಕನ್ನಡದಲ್ಲಿ ಬೌದ್ಧ ಸಾಹಿತ್ಯ' ಎಂಬ ಕೃತಿಗೆ ಪ್ರೊ.ವಸಂತ ಕುಷ್ಟಗಿ ಅವರು ಮುನ್ನುಡಿ ಬರೆದಿದ್ದಾರೆ. ಇಲ್ಲಿ ಲೇಖಕರು ಗುರುತಿಸಿರುವ ಪ್ರಮುಖ ಅಂಶಗಳು ಈ ಮುಂದಿನಂತಿವೆ.

ಅ) ಬೌದ್ಧ ತತ್ವವು ಇಂದು ಜನಪ್ರಿಯವಾಗಿರಲು ಪ್ರಮುಖ ಕಾರಣ ಸಾಮಾನ್ಯ ಜನತೆಗೆ ಸುಲಭವಾಗಿ ತಿಳಿಯುವ ಭಾಷೆಯಲ್ಲಿ ಸರಳವಾಗಿ ಬೋಧಿಸಿರುವುದಾಗಿದೆ. ಆದ್ದರಿಂದ ಇಂದು ಬೌದ್ಧ ಅನುಯಾಯಿಗಳು ಸಂಸ್ಕೃತಮಯವಾದ ಭಾಷೆಯನ್ನು ಬಳಸುತ್ತಿರುವುದರಿಂದ ಇದು ಜನಸಾಮಾನ್ಯರಿಗೆ ಸೂಕ್ತ ಸಂವಹನಗೊಳ್ಳುತ್ತಿಲ್ಲ ಎಂಬುದಾಗಿ ಲೇಖಕರು ತಿಳಿಸಿದ್ದಾರೆ.

ಆ) ಬುದ್ಧನ ತತ್ವ-ಚಿಂತನೆಗಳು ಧರ್ಮ ಸ್ವರೂಪಕ್ಕಿಂತ ಪ್ರಮುಖವಾಗಿ ದರ್ಶನವಾಗಿ ದೇಶ-ವಿದೇಶಗಳಲ್ಲಿ ತನ್ನ ಅಸ್ತಿತ್ವವನ್ನು ಪಡೆದುಕೊಂಡು ಜನತೆಯ ಬದುಕಿಗೆ ಸ್ಪಂದಿಸುತ್ತಿವೆ. ಆದ್ದರಿಂದ ಇಂದಿನ ಬೌದ್ಧ ಚಿಂತನೆಗಳು ಸ್ಥಾಪಿತ ನೆಲೆಯಿಂದ ಹೊರಬಂದು ಮುಕ್ತ ನೆಲೆಯಲ್ಲಿ ಜನತೆಗೆ ಸ್ಪಂದಿಸಬೇಕಾದ ಅಗತ್ಯತೆಯನ್ನು ಇಲ್ಲಿ ಎತ್ತಿಹಿಡಿಯಲಾಗಿದೆ.

ಇ) ಬೌದ್ಧ ಸಾಹಿತ್ಯವು ಪ್ರಾಚೀನ ಕಾಲದ ಸಾಹಿತ್ಯದಿಂದ ಇಂದಿನ ಮೊಬೈಲ್ ಭಾಷೆಯವರೆಗೂ ತನ್ನ ವ್ಯಾಪ್ತಿಯನ್ನು ಮುಂದುವರೆಸಿದ್ದು, ಸೃಜನಾತ್ಮಕವಾಗಿ ಜನತೆಯಲ್ಲಿ ನೆಲೆಸಿರುವ ಬಗ್ಗೆ ಲೇಖಕರಿಗೆ ಹೆಮ್ಮೆ ಇದೆ.

ಈ) ಇಪ್ಪತ್ತೊಂದನೇ ಶತಮಾನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದ ಸೃಷ್ಟಿಯಾಗುತ್ತಿರುವ ಜಾಗತಿಕ ಕೋಮುಗಲಭೆ ಹಾಗೂ ಯುದ್ಧ ತಂತ್ರದಂತಹ ಅಪಾಯಕಾರಿ ನೀತಿಯಿಂದ ಬಿಡುಗಡೆಗೊಳ್ಳಲು ಬುದ್ದನ ತತ್ವ-ಚಿಂತನೆಗಳು ಹೆಚ್ಚು ಪ್ರಚಾರಗೊಳ್ಳಬೇಕಿದೆ ಎಂಬುದು ಲೇಖಕರ ನಿಲುವಾಗಿದೆ.

ಇಲ್ಲಿ ಲೇಖಕರು ಗುರುತಿಸಿರುವಂತೆ ಇಂದು ಸಾಮಾನ್ಯ ಜನತೆಗೆ ಬೌದ್ಧಧರ್ಮವನ್ನು ಅರ್ಥಮಾಡಿಕೊಳ್ಳುವಂತಹ ವ್ಯವಸ್ಥೆ ನಮ್ಮಲ್ಲಿ ಕಂಡುಬರುತ್ತಿಲ್ಲ. ಹಾಗೆಯೇ ಬೌದ್ಧದರ್ಶನವೆಂದು ಸ್ವೀಕರಿಸಬಹುದಾದ ನಿಲುವು ಮಹತ್ವಪೂರ್ಣವಾಗಿದೆ. ಬುದ್ಧನ ಅಹಿಂಸಾ ನೀತಿಯು ಜಾಗತಿಕ ಶಾಂತಿಯನ್ನು ಸಾರುವ ಮಂತ್ರವಾಗಿದೆ ಎಂಬ ಲೇಖಕರ ನಿಲುವು ಅರ್ಥಪೂರ್ಣವಾಗಿದೆ. ಆದರೆ ಇಲ್ಲಿ ಒಂದು ಪ್ರಶ್ನೆ ಎದುರಾಗುತ್ತದೆ. ಬೌದ್ಧ ದರ್ಶನವನ್ನು ಸ್ಥಾಪಿತ ನೆಲೆಯಿಂದ ಬಿಡಿಸಿಕೊಳ್ಳಬೇಕೆಂಬ ಆಶಯವನ್ನು ವ್ಯಕ್ತಪಡಿಸುವ ಲೇಖಕರು ಗುಲ್ಬರ್ಗದ ಬೌದ್ಧ ವಿಹಾರದ ಆಚರಣೆಗಳು ಹಾಗೂ ಅದಕ್ಕೆ ಸಹಕಾರ ನೀಡುತ್ತಿರುವ ರಾಜಕಾರಣಿಗಳನ್ನು ತುಂಬು ಹೃದಯದಿಂದ ಮೆಚ್ಚಿಕೊಂಡಿದ್ದಾರೆ. ಆದ್ದರಿಂದ ಸೂಕ್ಷ್ಮ ನೆಲೆಯಲ್ಲಿ ಗಮನಿಸಿದಾಗ ಲೇಖಕರ 'ವಿಚಾರ ಮತ್ತು ಆಚಾರ'ಗಳಲ್ಲಿ ವೈರುಧ್ಯಾತ್ಮಕ ನಿಲುವುಗಳು ಗೋಚರಿಸುತ್ತವೆ.

೨) ಸಂಶೋಧನಾ ಬರಹಗಳು ಹಾಗೂ ವಿಮರ್ಶಾ ಲೇಖನಗಳಲ್ಲಿ ಬೌದ್ಧ ವಿಚಾರ ಸಾಹಿತ್ಯ ಕುರಿತ ಅಧ್ಯಯನಗಳು

ಅ) ಸುಷ್ಮಾ ಎನ್. ಹಾಗರಗಿಯವರು 'ಕನ್ನಡದಲ್ಲಿ ಬೌದ್ಧ ಸಾಹಿತ್ಯ' ಎಂಬ ಸಂಶೋಧನಾ ಕೃತಿಯಲ್ಲಿ ಒಟ್ಟಾರೆಯಾಗಿ ಕನ್ನಡ ಸಾಹಿತ್ಯದಲ್ಲಿ ಪ್ರಕಟವಾಗಿರುವ ಸಾಹಿತ್ಯ ಕೃತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದಾರೆ. ಒಟ್ಟಾರೆಯಾಗಿ ಪ್ರಾಚೀನ ಕನ್ನಡ ಸಾಹಿತ್ಯದಿಂದ ಆರಂಭಗೊಂಡು ಆಧುನಿಕ ಕನ್ನಡ ಸಾಹಿತ್ಯದಲ್ಲಿ ರಚಿತವಾಗಿರುವ ಎಲ್ಲ ಬೌದ್ಧ ಸಾಹಿತ್ಯ ಕೃತಿಗಳನ್ನು ಸಂಶೋಧನೆಗೆ ಒಳಪಡಿಸಿದ್ದಾರೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಾದ ಕತೆ, ಕಾವ್ಯ, ಕಾದಂಬರಿ, ನಾಟಕ, ಪ್ರಬಂಧ, ಜನಪದ ಸಾಹಿತ್ಯ, ವಿಚಾರ ಸಾಹಿತ್ಯ ಹೀಗೆ ಹಲವಾರು ಪ್ರಕಾರಗಳನ್ನು ಸಂಶೋಧನ ವ್ಯಾಪ್ತಿಯೊಳಗೆ ಗುರುತಿಸಿಕೊಂಡಿದ್ದಾರೆ. ಈ ಪ್ರಕಾರಗಳಲ್ಲಿ ಯಾವುದಾದರೂ ಒಂದು ಪ್ರತ್ಯೇಕ ವಿಷಯವನ್ನು ಕುರಿತು ಸಂಶೋಧನೆಗೆ ಗುರಿಪಡಿಸಿದ್ದರೆ ನಿರ್ಧಿಷ್ಟವಾದ ಅಧ್ಯಯನಕ್ಕೆ ಸಹಕಾರಿಯಾಗುತ್ತಿತ್ತು. ಎಲ್ಲ ಪ್ರಕಾರಗಳನ್ನು ಸಂಶೋಧನೆಗೆ ಆಯ್ದುಕೊಂಡಿರುವುದರಿಂದ ಇದು ಪರಿಚಯಾತ್ಮಕ ಮಾದರಿಯಾಗಿ ಕಂಡುಬರುತ್ತದೆ. ಇಲ್ಲಿ ಪ್ರಮುಖವಾಗಿ ಸಂಶೋಧನೆಗೆ ಅಗತ್ಯವಾದ ವಿಶ್ಲೇಷಣೆ ಮತ್ತು ವ್ಯಾಖ್ಯಾನಗಳ ಕೊರತೆ ಎದ್ದು ಕಾಣುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ 'ಕನ್ನಡ ಚಿಂತನ ಸಾಹತಿಯದಲ್ಲಿ ಬೌದ್ಧದರ್ಶನದ ಆಯಾಮಗಳು' ಎಂಬ ಶೀರ್ಷಿಕೆ ಅಡಿಯಲ್ಲಿ ಸಂಶೋಧನೆಯನ್ನು ಪ್ರಾರಂಭಿಸಲಾಗಿದೆ. ಇಲ್ಲಿ ವಿಚಾರ ಸಾಹಿತ್ಯ (ಚಿಂತನ ಸಾಹಿತ್ಯ) ಕ್ಷೇತ್ರವನ್ನು ಪ್ರತ್ಯೇಕವಾಗಿ ಗುರುತಿಸಿಕೊಂಡಿದ್ದು, ಇಲ್ಲಿ ರಚಿತವಾಗಿರುವ ಸಾಹಿತ್ಯ ಕೃತಿಗಳನ್ನು ವಿಶ್ಲೇಷಣೆ ಮತ್ತು ವ್ಯಾಖ್ಯಾನ ಮಾಡುವ ಮೂಲಕ ಬೌದ್ಧದರ್ಶನದ ಆಯಾಮಗಳನ್ನು ಗುರುತಿಸುವುದಕ್ಕೆ ಹೆಚ್ಚಿನ ಮಹತ್ವ ನೀಡಲಾಗುವುದು. ಹಾಗೆಯೇ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ವಿವಿಧ ಬೌದ್ಧ ವಿದ್ವಾಂಸರಿಂದ ಮಾಹಿತಿ ಸಂಗ್ರಹಿಸಿಕೊಳ್ಳುವ ಮೂಲಕ, ವರ್ತಮಾನದ ಬೌದ್ಧದರ್ಶನದ ಕುರಿತಾದ ಪರ–ವಿರೋಧ ನಿಲುವುಗಳನ್ನು ಇಲ್ಲಿ ಅಧ್ಯಯನಕ್ಕೆ ಗುರಿಪಡಿಸಲಾಗುವುದು.

ಆ) ಸಿ.ಕೆ.ಮಹೇಶ್ ಅವರ 'ಧರ್ಮಾಂತರ' ಕೃತಿಯ ಕುರಿತು ಸಣ್ಣರಾಮ ಅವರು 'ಅಭಿಪ್ರಾಯ: ಪರಂಪರೆಯೊಂದಿಗೆ ಸಂಘರ್ಷ' ಎಂಬ ಲೇಖನದಲ್ಲಿ ಈ ಕೃತಿಯನ್ನು ವಿಮರ್ಶೆಗೆ ಗುರಿಪಡಿಸಿದ್ದಾರೆ. ಇಲ್ಲಿ ಲೇಖಕರ ನಿಲುವುಗಳನ್ನು ತಿಳಿಯುವ ಮುನ್ನ ಮೂಲ ಕೃತಿಕಾರರ ನಿಲುವುಗಳನ್ನು ತಿಳಿಯುವುದು ಹೆಚ್ಚು ಸೂಕ್ತವಾಗಿದೆ. ಇಲ್ಲಿನ ಕೃತಿಕಾರರ ನಿಲುವುಗಳು ಈ ಮುಂದಿನಂತಿವೆ;

೧) ವೈದಿಕ ಧರ್ಮ ಭಾರತ ಮೂಲ ನಿವಾಸಿಗಳನ್ನು ದೈಹಿಕ ಹಾಗೂ ಮಾನಸಿಕ ದಾಸರನ್ನಾಗಿ ಮಾಡಿತ್ತು. ಬೌದ್ಧಧರ್ಮವು ಈ ದಾಸ್ಯತ್ವವನ್ನು ತೊಡೆದು ಹಾಕಿ ಸತ್ಯ ಹಾಗೂ ಜ್ಞಾನದ ದಾರಿ ತೋರಿತು. ಈ ಕಾರಣದಿಂದ ವೈದಿಕರು ಬೌದ್ಧಧರ್ಮವನ್ನು ದೇಶಾಂತರಗೊಳಿಸಿದರು.

೨) ವೈದಿಕ ಧರ್ಮದ ಪರ್ಯಾಯ ಹೆಸರು 'ಹಿಂದೂ' ಎಂಬುದಾಗಿದೆ. ಆದ್ದರಿಂದ ಈ ನಾಡಿನ ತಳಮೂಲ ಜನಾಂಗಗಳು ಹಿಂದೂಗಳಲ್ಲ.

೩) ವೈದಿಕ ಧರ್ಮದ ಜೊತೆ ಸೇರಿ ಇಸ್ಲಾಂ ಧರ್ಮವು ಕೂಡ ಇಲ್ಲಿನ ಬೌದ್ಧಧರ್ಮಿಯರ ಸಂಹಾರಕ್ಕೆ ಮುಂದಾಗಿದೆ ಎಂಬುದು ಕೃತಿಕಾರರ ನಿಲುವಾಗಿದೆ.

ಕೃತಿಕಾರರ ನಿಲುವುಗಳನ್ನು ಕುರಿತ ಲೇಖಕರ ನಿಲುವುಗಳನ್ನು ನಾವು ಈ ಮುಂದಿನಂತೆ ತಿಳಿಯಬಹುದಾಗಿದೆ. ಇಲ್ಲಿ ಲೇಖಕರು ಕೃತಿಕಾರರ ಬಹುತೇಕ ವಿಚಾರಗಳನ್ನು ಮುಕ್ತವಾಗಿ ಒಪ್ಪಿಕೊಂಡಿರುವುದಾಗಿ ಕಂಡುಬರುತ್ತದೆ. ಇದಕ್ಕೆ ಪ್ರಮುಖ ಕಾರಣ ಈ ಇಬ್ಬರು ಕೂಡ ಎಡಪಂಥೀಯ ಚಿಂತನೆಗಳನ್ನು ಮೈಗೂಢಿಸಿಕೊಂಡು ಬಂದವರಾಗಿದ್ದಾರೆ. ಆದ್ದರಿಂದ ಕೃತಿಕಾರರ ವಿಚಾರಗಳು ಇವರಿಗೆ ಒಪ್ಪಿತವಾಗಿಯೇ ಕಂಡುಬರುತ್ತವೆ. ಲೇಖಕರು ವ್ಯಕ್ತಪಡಿಸಿರುವ ವಿಚಾರಗಳಲ್ಲಿ ವೈದಿಕರು ಈ ನಾಡಿನ ತಳಮೂಲ ಜನಾಂಗವನ್ನು ದಾಸ್ಯಕ್ಕೆ ಗುರಿಪಡಿಸಿರುವ ಬಗೆ, ವೀರಶೈವ ಧರ್ಮದ ತಾತ್ವಿಕತೆಯು ಬೌದ್ಧಧರ್ಮದ ಸಾರವಾಗಿರುವುದು ವಾಸ್ತವವಾಗಿದೆ. ಆದರೆ ಸಿ.ಕೆ.ಮಹೇಶ್ ಅವರ ಎಲ್ಲ ವಿಚಾರಗಳನ್ನು ಮುಕ್ತವಾಗಿ ಸ್ವೀಕರಿಸಿರುವಲ್ಲಿ ಕೆಲವು ಪ್ರಶ್ನೆಗಳು ಎದುರಾಗುತ್ತವೆ. ವೈದಿಕ ಪುರೋಹಿತಶಾಹಿಯು ಭಾರತದಲ್ಲಿ ಜನ್ಮತಳೆದ ಬೌದ್ಧಧರ್ಮದ ಅವನತಿಗೆ ಕಾರಣವಾಯಿತು ಎಂಬುದು ಲೇಖಕರ ವಾದವಾಗಿದೆ. ಆದರೆ ಇದು ವಾಸ್ತವವಿರಬಹುದು. ಇಲ್ಲಿ ವೈದಿಕ ಧರ್ಮದ ತಂತ್ರಗಾರಿಕೆಯೊಂದೆ ಭಾರತದಲ್ಲಿ ಬೌದ್ಧಧರ್ಮ ಕಣ್ಮರೆಯಾಗಲು ಕಾರಣವೇ ಎಂಬ ಪ್ರಶ್ನೆ ಎದುರಾಗುತ್ತದೆ. ಇದಕ್ಕೆ ಬೌದ್ಧಧರ್ಮದ ಒಳಗಿನ ಬಿರುಕುಗಳು ಕೂಡ ಕಾರಣವಾಗಿರುವ ಸಾಧ್ಯತೆಗಳಿವೆ. "ಶಾತವಾಹನರು, ಬೌದ್ಧರಿಗೂ, ಜೈನರಿಗೂ ಪ್ರೋತ್ಸಾಹ ನೀಡಿದರು. ವೈದಿಕ ಧರ್ಮಕ್ಕೆ ಮಾನ್ಯತೆ ಇತ್ತು. ಆದರೂ ಶಾತವಾಹನರ ಆಳ್ವಿಕೆಯ ಕಾಲದಲ್ಲಿ ಬೌದ್ಧರೂ ಹಿನ್ನೆಲೆಗೆ ಸರಿಯ ತೊಡಗಿದ್ದರು. ಬೌದ್ಧ ಭಿಕ್ಷುಕರು ವರ್ತಕರ ಜೊತೆ, ಕೃಷಿಕರ ಜೊತೆ ಸಂಬಂಧವನ್ನು ಬೆಳೆಸಿ ವಿಹಾರಗಳನ್ನು ಕಟ್ಟಿಕೊಂಡು ವಿರಾಮದ ಜೀವನಕ್ಕೆ ಅಂಟಿಕೊಂಡರು. ಬೌದ್ಧರ ಈ ವಿಹಾರಗಳು ಆರಂಭದಲ್ಲಿ ಭೋಗದ ತಾಣಗಳಾಗಿ ನಂತರ ಸಂಪತ್ತುಗಳ ನೆಲೆಯಾಗಿ ರೂಪಗೊಂಡವು. ಬುದ್ಧನ ಸಿದ್ಧಾಂತಗಳು ಬೌದ್ಧ ಭಿಕ್ಷುಕರಲ್ಲಿ ಬೇರೆ ಸ್ವರೂಪವನ್ನು ಪಡೆದವು".[೬] ಇದರಿಂದ ಜನತೆಗೆ ಬೌದ್ಧಧರ್ಮದ ಒಲವುಗಳು ಕಡಿಮೆಯಾಗಿರುವ ಸಾಧ್ಯತೆಗಳಿವೆ. ಎಂಬುದು ಹಲವು ಚಿಂತಕರ ವಾದವಾಗಿದೆ. ಹೀಗಾಗಿ ಇದಕ್ಕೆ ವೈದಿಕರ ತಂತ್ರಗಾರಿಕೆಯೊಂದೆ ಬೌದ್ಧಧರ್ಮದ ಅವನತಿಗೆ ಕಾರಣವಾಗಿದೆ ಎಂಬ ಧೋರಣೆಯು ಎಷ್ಟು ಸಮಂಜಸವಾದುದು ಎಂಬ ಪ್ರಶ್ನೆಯು ಇಲ್ಲಿ ಎದುರಾಗುತ್ತದೆ.

ಇಲ್ಲಿ ಲೇಖಕರು ವೈದಿಕ ಧರ್ಮದ ಪರ್ಯಾಯ ಪದ ಹಿಂದೂಧರ್ಮ. ಆದ್ದರಿಂದ ಈ ನಾಡಿನ ಮೂಲ ಜನಾಂಗ ಹಿಂದೂಗಳಲ್ಲ ಎಂಬ ವಾದವನ್ನು ಮಂಡಿಸಿದ್ದಾರೆ. ಇಲ್ಲಿ ಹಲವಾರು ಗೊಂದಲಗಳು ಎದುರಾಗುತ್ತವೆ. ಸಿಂಧೂ ನಾಗರಿಕತೆಯ ಜನತೆಯನ್ನು ನಂತರದಲ್ಲಿ ಪ್ರಾದೇಶಿಕ ನೆಲೆಯಲ್ಲಿ ಹಿಂದೂಗಳೆಂದು ಕರೆದಿರುವ ಸಾಧ್ಯತೆಗಳಿವೆ. ಈ ಪದವು ಸಿಂಧೂ ಪ್ರಾಂತ್ಯದ ಜನರಿಗೆ

ಸಂಬಂಧಿಸಿದ್ದಾಗಿದೆ. ಸಾಮಾನ್ಯ ಜನತೆಗೆ ನಾವು ಹಿಂದುಗಳಲ್ಲ ಎಂಬುದಾಗಿ ತಿಳಿಸಿದರೆ ಅವರು ಗೊಂದಲಕ್ಕೆ ಒಳಗಾಗುವ ಸಾಧ್ಯತೆಗಳಿವೆ. ಇದುವರೆಗೂ ನಾವು ಬೆಳೆದುಕೊಂಡು ಬಂದಿರುವ ಧರ್ಮವನ್ನು ಅಷ್ಟು ಸುಲಭವಾಗಿ ತಿರಸ್ಕರಿಸಲು ಅವರಿಗೆ ಸಾಧ್ಯವಿಲ್ಲ. ಇಂದು ನಾವು ಹಿಂದೂ ಮೂಲಭೂತವಾದವನ್ನು ತಿರಸ್ಕರಿಸಬೇಕೆ ಹೊರತು, ಹಿಂದೂಧರ್ಮವನ್ನು ತಿರಸ್ಕರಿಸುವುದು ಸಮಂಜಸವಲ್ಲ. ಆದ್ದರಿಂದ ಲೇಖಕರ ಕೆಲವು ವಿಚಾರಗಳು ಇಲ್ಲಿನ ಸಾಮಾನ್ಯ ಜನತೆಗೆ ಗೊಂದಲಕಾರಿಯಾಗುವ ಸಾಧ್ಯತೆಗಳಿವೆ.

ಇ) ಬರಗೂರು ರಾಮಚಂದ್ರಪ್ಪನವರು ತಮ್ಮ 'ಮರ್ಯಾದಸ್ಥ ಮನುಷ್ಯರಾಗೋಣ' ಎಂಬ ಕೃತಿಯಲ್ಲಿ ಸಿ.ಕೆ.ಮಹೇಶ್‌ರವರ 'ಧರ್ಮಾಂತರ' ಕೃತಿಯನ್ನು ವಿಮರ್ಶೆಗೆ ಒಳಪಡಿಸಿದ್ದಾರೆ. ಇಲ್ಲಿ ಸಿ.ಕೆ.ಮಹೇಶ್‌ರವರ ಬೌದ್ಧ ಚಿಂತನೆಗಳಿಗೆ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಇವರು ಗುರುತಿಸಿರುವ ಪ್ರಮುಖ ಅಂಶಗಳೆಂದರೆ, ಕೃತಿಕಾರರು ಭಾರತದ ಎಲ್ಲ ಧರ್ಮಗಳನ್ನು ಏಕಮುಖಿ ದೃಷ್ಟಿಕೋನದ ಮೂಲಕ ವಿಮರ್ಶೆಗೆ ಗುರಿಪಡಿಸಿದ್ದಾರೆ. ಆದರೆ ಬೌದ್ಧಧರ್ಮವನ್ನು ಇದರಿಂದ ಹೊರತುಪಡಿಸಿದ್ದಾರೆ. ಕೃತಿಕಾರರು ಬೌದ್ಧ ಧರ್ಮವನ್ನು ಸಮರ್ಥಿಸುವ ಮೂಲಕ ಉಳಿದೆಲ್ಲ ಧರ್ಮಗಳ ಸಾರವನ್ನು ಗೌಣವಾಗಿಸುವ ಅಂಶಗಳು ಕಂಡುಬರುತ್ತವೆ. ಈ ಧರ್ಮದಲ್ಲಿಯು ಬುದ್ಧನ ತರುವಾಯ ಮೂಲಭೂತವಾದ ಮನೆ ಮಾಡಿಕೊಂಡಿದೆ. ಇಂತಹ ಅಂಶಗಳನ್ನು ಮರೆಮಾಚುವ ಕೆಲಸವನ್ನು ಕೃತಿಕಾರರು ಮಾಡಿದ್ದಾರೆ ಎಂಬುದು ವಿಮರ್ಶಕರ ನಿಲುವಾಗಿದೆ. "ಧರ್ಮದೊಳಗಿನ ಚಲನಶೀಲತೆಗೂ ಧರ್ಮದಾಚೆಗಿನ ಚಲನಶೀಲತೆಗೂ ಇರುವ ಅಂತರದ ಅರಿವು ಮಹೇಶ್ ಅವರಲ್ಲಿದೆ. ಹೀಗಾಗಿ ದೇವರಿಂದ ದೂರವಿದ್ದು ಬೌದ್ಧಧರ್ಮದ ಹೊರತಾಗಿ ಉಳಿದೆಲ್ಲ ಧರ್ಮಗಳೂ ಇಲ್ಲಿ ವಿಮರ್ಶೆಗೊಳಪಡುತ್ತವೆ. ಬೌದ್ಧಧರ್ಮದ ವಿಷಯಗಳು ವಿಶ್ಲೇಷಣೆಯ ಹಂತದಲ್ಲಿ ನಿಲ್ಲುತ್ತವೆ".[೭] ಎಂಬುದು ಲೇಖಕರ ನಿಲುವಾಗಿದೆ. ಬೌದ್ಧ ಧರ್ಮದಲ್ಲಿಯೂ ಇರುವ ಪರ–ವಿರೋಧ ನಿಲುವುಗಳನ್ನು ಮುಕ್ತವಾಗಿ ಚಿಂತನೆಗೆ ಗುರಿಪಡಿಸಿದಾಗ ಮಾತ್ರ ಈ ಚಿಂತನೆಗಳು ಆರೋಗ್ಯಕರವಾಗಿರುತ್ತವೆ. ಇಲ್ಲದೆ ಹೋದರೆ ಏಕಮುಖಿಯಾಗುವ ಸಾಧ್ಯತೆಗಳಿವೆ ಎಂಬುದಾಗಿ ಲೇಖಕರು ತಿಳಿಸಿದ್ದಾರೆ.

ಇಲ್ಲಿ ಜಾತಿಯ ನೆಲೆಗಟ್ಟಿನಲ್ಲಿಯೇ ಸಮಾಜ ಹಾಗೂ ಧರ್ಮಗಳನ್ನು ಗ್ರಹಿಸುವ ಕೃತಿಕಾರರಿಗೆ ಬೌದ್ಧಧರ್ಮ ಶ್ರೇಷ್ಠವಾಗುತ್ತದೆ. ಉಳಿದ ಧರ್ಮಗಳು ಅಸಮಾನತೆಯ ಆಗರವಾಗಿ ಕಂಡುಬರುತ್ತವೆ. ಕೃತಿಕಾರರ ಈ ಚಿಂತನೆಗಳ ಹಿಂದೆ ಅಂಬೇಡ್ಕರರ ಪ್ರಭಾವ ಹೆಚ್ಚಾಗಿ ಕಂಡುಬರುತ್ತದೆ. ಬಾಬಾಸಾಹೇಬರು ಬೌದ್ಧಧರ್ಮವನ್ನು ವಿಶ್ಲೇಷಣೆ ಮಾಡಿರುವ ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ಮುಂದುವರೆಸಿದ್ದಾರೆ. ಬರಗೂರು ರಾಮಚಂದ್ರಪ್ಪನವರು ಬಾಬಾಸಾಹೇಬರ ಚಿಂತನೆಯೊಡನೆ ಮಾರ್ಕ್ಸ್‌ವಾದದಿಂದ ಹೆಚ್ಚು ಪ್ರಭಾವಿತರಾದವರು. ಹೀಗಾಗಿ ಬಾಬಾಸಾಹೇಬರು ಬೌದ್ಧಧರ್ಮಕ್ಕೆ ಮತಾಂತರಗೊಂಡಿರುವುದು ಕೂಡ ಸೇಡಿನ ಭಾವನೆಯಿಂದ ಎಂಬುದಾಗಿ ಗ್ರಹಿಸುತ್ತಾರೆ. "ಅಂಬೇಡ್ಕರ್ ಅವರು ಬೌದ್ಧಧರ್ಮವನ್ನು ಸ್ವೀಕರಿಸಿದ್ದು, ವಿರೋಧ ಹಾಗೂ ವಿಷಾದಗಳ ಕ್ರಮವೆಂದೇ ನನ್ನ ಗ್ರಹಿಕೆ. ಹಿಂದೂಧರ್ಮದ ಬಗ್ಗೆ ಇದ್ದ ವಿರೋಧದ ನೆಲೆಯಲ್ಲಿ ಹುಟ್ಟಿದ ಒಂದು ವಿಷಾದದ ಕ್ರಮವಾಗಿ ಅಂಬೇಡ್ಕರ್ ಬೌದ್ಧ

ಮತಾವಲಂಬಿಯಾದರು. ಹಿಂದೂಧರ್ಮದಲ್ಲಿ ಸಾಯಲಾರೆ ಎಂಬ ಮಾತನ್ನು ಉಳಿಸಿಕೊಂಡರು"[೯] ಎಂಬುದು ಇವರ ನಿಲುವಾಗಿದೆ.

ಇಲ್ಲಿ ಬರಗೂರು ರಾಮಚಂದ್ರಪ್ಪನವರಿಗೆ ಅಂಬೇಡ್ಕರ್ ವಾದಕ್ಕಿಂತ ಮುಖ್ಯವಾಗುವುದು ವರ್ಗ ಅಸಮಾನತೆಯನ್ನು ತೊಡೆದು ಹಾಕುವ ಮಾರ್ಕ್ಸ್‌ವಾದವೆ ಪ್ರಮುಖವಾಗಿ ಕಂಡುಬರುತ್ತದೆ. ಇದರಿಂದ ಪ್ರಪಂಚದ ಎಲ್ಲ ಧರ್ಮಗಳಲ್ಲಿಯೂ ಅಸಮಾನತೆ ಹಾಗೂ ಮೂಲಭೂತವಾದವಿರುವಂತೆ, ಬೌದ್ಧಧರ್ಮದಲ್ಲಿಯೂ ಅಡಗಿರಬಹುದಾದ ಮೂಲಭೂತವಾದಿ ನಿಲುವುಗಳ ಕಡೆ ಇವರು ಗಮನಹರಿಸಿರುವುದು ಕಂಡುಬರುತ್ತದೆ. ಆದ್ದರಿಂದ ಸಿ.ಕೆ.ಮಹೇಶ್‌ರವರ ಚಿಂತನೆಗಳು ಬಾಬಾಸಾಹೇಬರ ಸೈದ್ಧಾಂತಿಕ ನೆಲೆಯಿಂದ ಪ್ರೇರಣೆ ಪಡೆದುಕೊಂಡರೆ, ಬರಗೂರು ರಾಮಚಂದ್ರಪ್ಪನವರ ಚಿಂತನೆಗಳು ಮಾರ್ಕ್ಸ್‌ವಾದಿ ನೆಲೆಯಿಂದ ಪ್ರಭಾವಿತವಾದವುಗಳಾಗಿವೆ. ಈ ಇಬ್ಬರು ವಿಚಾರವಾದಿಗಳ ಸೈದ್ಧಾಂತಿಕ ನಿಲುವುಗಳಲ್ಲಿ ವೈರುಧ್ಯಗಳು ಕಂಡುಬಂದರು ಸಹ, ಇವರ ಚಿಂತನೆಗಳು ಸಾಮಾಜಿಕ ಸಮಾನತೆಯನ್ನು ಪ್ರತಿಪಾದಿಸುತ್ತವೆ.

ಈ) ಪಿ.ಲಂಕೇಶ್ ಅವರು 'ಟೀಕೆ ಟಿಪ್ಪಣಿ–೩' ಎಂಬ ಕೃತಿಯಲ್ಲಿ ಕೆ.ಎಸ್.ಭಗವಾನ್‌ರವರ 'ಶಂಕರಾಚಾರ್ಯರು ಮತ್ತು ಪ್ರತಿಗಾಮಿತನ' ಎಂಬ ಕೃತಿಯನ್ನು ವಿಮರ್ಶೆಗೆ ಗುರಿಪಡಿಸಿದ್ದಾರೆ. ಇಲ್ಲಿ ಲೇಖಕರು ವ್ಯಕ್ತಪಡಿಸಿರುವ ನಿಲುವುಗಳೆಂದರೆ, "ಶಂಕರಾಚಾರ್ಯ ಮತ್ತು ಪ್ರತಿಗಾಮಿತನ ಎಂದು ತನ್ನ ಪುಸ್ತಕಕ್ಕೆ ಹೆಸರು ಕೊಟ್ಟು ಬರೆಯುವವನಿಗೆ ತನ್ನ ಬಗ್ಗೆಯೇ ಅನುಮಾನಗಳಿರುವುದಿಲ್ಲ. ಶಂಕರಾಚಾರ್ಯ ಪ್ರತಿಗಾಮಿ ಎಂದೇ ಇಟ್ಟುಕೊಳ್ಳೋಣ; ನಿಮ್ಮೊಡನಿರುವ ಅನೇಕ ವಿದ್ವಾಂಸರು ಅದನ್ನು ಕಂಡುಕೊಂಡು ಪ್ರಮಾಣಗಳೊಂದಿಗೆ ತೋರಿಸಿದರೆಂದೇ ನಂಬೋಣ. ಇದು ಶಂಕರಾಚಾರ್ಯರಲ್ಲಿ ಇರಬಹುದಾದ ಬೌದ್ಧಿಕತೆ, ವಿಚಾರ ಸೂಕ್ಷ್ಮತೆ ಮುಂತಾದ್ದರಿಂದ ನಮ್ಮನ್ನು ದೂರ ಇಡುವಂತಾಗಬಾರದು. ಭಂಡತನ ಎಲ್ಲದಕ್ಕಿಂತ ಅಪಾಯಕಾರಿಯಾದದ್ದು. ಭಂಡತನದಿಂದ ನಮ್ಮ ಮನಸ್ಸಿನ ಹರಿತ ಕಮ್ಮಿಯಾಗುತ್ತದೆ; ಗ್ರಹಿಸುವ ಶಕ್ತಿ ಉಡುಗಿ ಹೋಗುತ್ತದೆ. ಗ್ರಹಿಸುವ ಶಕ್ತಿ ಕಳೆದುಕೊಂಡವನು ಮೆಚ್ಚುವ ಕೃತಿಗಳ ಬಗ್ಗೆ ಕೂಡ ಯಾರಿಗೂ ಆಸಕ್ತಿ ಹುಟ್ಟುವುದಿಲ್ಲ"[೧೦] ಎಂಬುದಾಗಿ ತಿಳಿಸಿದ್ದಾರೆ.

ಶಂಕರಚಾರ್ಯರು ಧರ್ಮದ ವಿಷಯದಲ್ಲಿ ಕ್ರೌರ್ಯವನ್ನು ಮೆರೆದಿರಬಹುದು. ಆದರೆ ಅವರಲ್ಲಿರುವ ಬೌದ್ಧಿಕತೆ ಹಾಗೂ ವಿಚಾರ ಸೂಕ್ಷ್ಮತೆಗಳನ್ನು ಸಾರಸಗಟಾಗಿ ತಿರಸ್ಕಾರ ಮಾಡಿರುವ ಕೃತಿಕಾರರ ನಿಲುವುಗಳಿಗೆ ಲೇಖಕರು ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಲೇಖಕರ ದೃಷ್ಟಿಯಲ್ಲಿ ಪ್ರತಿಯೊಬ್ಬರಲ್ಲಿಯೂ ಉದಾತ್ತ ಗುಣಗಳಿರುವಂತೆ, ನ್ಯೂನ್ಯತೆಗಳು ಇರುತ್ತವೆ. ನಾವು ಆಯ್ದುಕೊಳ್ಳಬೇಕಾಗಿರುವುದು ಒಬ್ಬ ವ್ಯಕ್ತಿಯಲ್ಲಿ ಇರಬಹುದಾದ ಬೌದ್ಧಿಕ ವಿಚಾರ ಸೂಕ್ಷ್ಮತೆಗಳನ್ನು ಎಂಬುದಾಗಿ ಸಮರ್ಥಿಸಿಕೊಂಡಿದ್ದಾರೆ. ಹಾಗೆಯೇ ಮುಂದುವರೆದು ಕೃತಿಕಾರರಲ್ಲಿ ಯಾವುದೇ ಅನುಮಾನಗಳಿರುವಂತೆ ಕಂಡುಬರುವುದಿಲ್ಲ ಎಂಬುದಾಗಿ ಪ್ರಶ್ನೆಯೊಡ್ಡಿದ್ದಾರೆ. ಕೃತಿಕಾರನು ತನ್ನಲ್ಲಿಯ ಅನುಮಾನಗಳನ್ನು ವಿಮರ್ಶೆಗೆ ಗುರಿಪಡಿಸಿಕೊಂಡಿದ್ದರೆ ಹೀಗೆ ಶಂಕರಾಚಾರ್ಯರಿಗೆ 'ಪ್ರತಿಗಾಮಿ' ಎಂದು ಹೆಸರು ಕೊಡುತ್ತಿರಲಿಲ್ಲ ಎಂಬುದು ಲೇಖಕರ ನಿಲುವಾಗಿದೆ. ಹೀಗಾಗಿ ಇಲ್ಲಿ ಭಗವಾನರ ಈ ಧೋರಣೆಗಳನ್ನು ತೀವ್ರವಾಗಿ ವಿರೋಧಕ್ಕೆ ಗುರಿಪಡಿಸಿದ್ದಾರೆ.

ಕೆ.ಎಸ್.ಭಗವಾನರು ತಮ್ಮ ವಿಚಾರಗಳ ಮೂಲಕ ಶಂಕರಾಚಾರ್ಯರಲ್ಲಿ ಅಡಗಿರುವ ಪ್ರತಿಗಾಮಿತನವನ್ನು ಹಾಗೂ ಬೌದ್ಧಧರ್ಮದ ಅವನತಿಗೆ ಶಂಕರಾಚಾರ್ಯರು ಕೈಗೊಂಡಿರುವ ತಂತ್ರಗಾರಿಕೆಯ ಅಂಶಗಳನ್ನು ಸಮಾಜದ ಮುಂದಿರಿಸಿದ್ದಾರೆ. ಆದರೆ ಪಿ.ಲಂಕೇಶ್‌ರವರು ಇಲ್ಲಿ ಶಂಕರಾಚಾರ್ಯರಲ್ಲಿ ಅಡಗಿರುವ ವಿಚಾರ ಸೂಕ್ಷ್ಮತೆಯನ್ನು ಸಮರ್ಥಿಸುವುದಕ್ಕೆ ಮುಂದಾದಂತಿದೆ. ಲಂಕೇಶ್‌ರವರು ವೈದಿಕತೆಯನ್ನು ವಿರೋಧಪಡಿಸಿದರು ಕೂಡ ಇಲ್ಲಿ ಶಂಕರಾಚಾರ್ಯರನ್ನು ಸಮರ್ಥಿಸಿಕೊಳ್ಳುವಲ್ಲಿ ಯಾವುದೇ ಸ್ಪಷ್ಟ ಆಧಾರಗಳನ್ನು ನೀಡಿರುವುದು ಕಂಡುಬರುವುದಿಲ್ಲ. ಕೃತಿಕಾರರನ್ನು ವಿಮರ್ಶೆ ಮಾಡುವ ಪ್ರಮುಖ ಉದ್ದೇಶವಿರುವಂತೆ ಇವರ ಚಿಂತನೆಗಳು ಮೂಡಿಬಂದಿವೆ.

ಉ) ಸೀ.ಚ.ಯತೀಶ್ವರ ಅವರು ಸಂಪಾದಿಸಿರುವ 'ಶಂಕರಾಚಾರ್ಯ ಮತ್ತು ಪ್ರತಿಗಾಮಿತನ ಕೃತಿ ಸಮೀಕ್ಷೆ' ಎಂಬ ಕೃತಿಯಲ್ಲಿ ಕೆ.ಎಸ್.ಭಗವಾನರ ವಿಚಾರಗಳಿಗೆ ಹಲವಾರು ಚಿಂತಕರು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಇವುಗಳಲ್ಲಿ ಬಹುತೇಕ ಚಿಂತನೆಗಳು ಬೌದ್ಧದರ್ಶನಕ್ಕೆ ಸಂಬಂಧಿಸಿವೆ. ಇಲ್ಲಿನ ಕೆಲವು ಚಿಂತಕರು ಕೆ.ಎಸ್.ಭಗವಾನರ ಬೌದ್ಧ ಚಿಂತನೆಗಳನ್ನು ಅಧ್ಯಯನಕ್ಕೆ ಗುರಿಪಡಿಸಿರುವುದು ಕಂಡುಬರುತ್ತದೆ. ಅವುಗಳು ಈ ಮುಂದಿನಂತಿವೆ.

೧) ಗುರುಪಾದ ಮರಿಗುದ್ದಿಯವರು 'ಅನನ್ಯ ಚಿಂತನೆಗಳ ದಾರ್ಶನಿಕ ಕೃತಿ' ಎಂಬ ಲೇಖನದಲ್ಲಿ ವ್ಯಕ್ತಪಡಿಸಿರುವ ನಿಲುವುಗಳು ಈ ಮುಂದಿನಂತಿವೆ; "ಶಂಕರಾಚಾರ್ಯ ದೇಶದ ನಾಲ್ಕು ಕಡೆಗಳಲ್ಲಿ ಮಠಗಳನ್ನು ಸ್ಥಾಪಿಸಿದನಷ್ಟೆ. ಹೀಗೆ ಮಠಗಳನ್ನು ಕಟ್ಟಿ ಧರ್ಮ, ತತ್ವದ ಚರ್ಚೆ, ಪ್ರಚಾರ ಮಾಡುವುದನ್ನು ಭಾರತದಲ್ಲಿ ಮೊದಲು ಆರಂಭಿಸಿದವರು ಬೌದ್ಧರು. ಬೌದ್ಧರನ್ನು ಎಲ್ಲ ತರದಲ್ಲಿ ವಿರೋಧಿಸಿದ ಶಂಕರಾಚಾರ್ಯ ಅವರ ಮಠ ಕಲ್ಪನೆಯನ್ನು ವಿರೂಪಗೊಳಿಸಿ, ಕೆಲವರಿಗೆ ಮಾತ್ರ ಅಲ್ಲಿ ಪ್ರವೇಶ ಒದಗಿಸಿದನು. ಇದನ್ನು ಮುಂದೆ ಮಾಧ್ವರು, ವೀರಶೈವರು, ಮುಸ್ಲಿಮರು, ಕ್ರಿಶ್ಚಿಯನ್ನರು ಅನುಸರಿಸಿದರು. ಬೌದ್ಧರ ಮಠಗಳಿಗೂ ಇತರರ ಎಲ್ಲ ಮಠಗಳಿಗೂ ಇರುವ ವ್ಯತ್ಯಾಸವಿದು. ಬುದ್ಧನದು ಜಾತಿ ಮತಗಳ ಸಂಕುಚಿತತೆಯನ್ನು ಹೋಗಲಾಡಿಸಿ ಸರ್ವಸಮಾನತೆ ಮತ್ತು ಸೌಹಾರ್ದ ಸಹಬಾಳ್ವೆಯನ್ನು ಆಗು ಮಾಡಿಸುವ ಪ್ರಯತ್ನವಾಗಿತ್ತು. ಆದರೆ ಈ ಎಲ್ಲಾ ಮಠಗಳ ಉದ್ದೇಶ ತಮ್ಮ ಜಾತಿ-ಕೋಮುಗಳನ್ನು ಬೆಳಸುವುದೇ ಆಗಿದೆ".[೧೦] ಆದ್ದರಿಂದ ಅಸಮಾನತೆ ಹಾಗೂ ಕೋಮುಭಾವನೆಯನ್ನು ಸೃಷ್ಟಿಸುತ್ತಿರುವ ವೈದಿಕ ಮಠ ಪರಿಕಲ್ಪನೆಯನ್ನು ನಿರ್ಮೂಲನೆ ಮಾಡಬೇಕೆಂಬುದು ಇವರ ನಿಲುವಾಗಿದೆ.

ಭಾರತದಿಂದ ಬುದ್ಧಧರ್ಮ ಕಣ್ಮರೆಯಾಗಲು ಮತ್ತು ವಿದೇಶಗಳಲ್ಲಿ ಅದು ಪ್ರಸಾರವಾಗಲು ಶಂಕರಾಚಾರ್ಯರು ಮತ್ತು ಆತನ ಅನುಯಾಯಿಗಳು ಕಾರಣವೆಂಬ ಕೃತಿಕಾರರ ನಿಲುವುಗಳಿಗೆ ಸಮರ್ಥನೆಯನ್ನು ನೀಡಿದ್ದು, ಬುದ್ಧನ ನಂತರದಲ್ಲಿ ಬೌದ್ಧಧರ್ಮದಲ್ಲಿ ಸೃಷ್ಟಿಯಾಗಿರುವ ಮೂಲಭೂತವಾದವನ್ನು ತಮ್ಮ ವಿಚಾರಗಳಲ್ಲಿ ಎತ್ತಿಹಿಡಿದಿದ್ದಾರೆ. ಕೆಲವು ಸಂದರ್ಭಗಳಲ್ಲಿ ಕೃತಿಕಾರರಲ್ಲಿರುವ ಏಕಮುಖಿ ಧೋರಣೆಗಳನ್ನು ಮೀರಿ, ತಮ್ಮದೇ ಆದ ವಿಚಾರಗಳನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ.

ಐ) ಬಂಜಗೆರೆ ಜಯಪ್ರಕಾಶ್ ಅವರು 'ಅಚ್ಚಳಿಯದೆ ಪ್ರಭಾವ ಬೀರಿದ ಕೃತಿ' ಎಂಬ ಲೇಖನದಲ್ಲಿ ಭಗವಾನರ ವಿಚಾರಗಳಿಗೆ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಮಾರ್ಕ್ಸ್‌ವಾದದ ಪ್ರಭಾವದಿಂದ ಕಮ್ಯುನಿಸ್ಟ್ ತತ್ವಗಳಲ್ಲಿ ಹೆಚ್ಚು ಆಸಕ್ತಿಯುಳ್ಳ ಲೇಖಕರಿಗೆ ಭಗವಾನರ ವಿಚಾರಗಳು ಹೆಚ್ಚು ಸ್ವೀಕಾರಾರ್ಹವಾಗಿವೆ. ಆದ್ದರಿಂದ ಭಗವಾನರ ವಿಚಾರಗಳು ಇವರ ಮೇಲೆ ಸಾಕಷ್ಟು ಪ್ರಭಾವ ಬೀರಿರುವುದಾಗಿ ಕಂಡುಬರುತ್ತದೆ. ಮಾರ್ಕ್ಸ್‌ವಾದವನ್ನು ಭಾರತದ ಸಂದರ್ಭದಲ್ಲಿ ಅರ್ಥೈಸುವುದಾದರೆ ಭಾರತದಲ್ಲಿ ನಡೆಯುತ್ತಿರುವ ಹಾಗೂ ನಡೆದಿರುವ ಆಕ್ರಮಣಗಳನ್ನು ತಿಳಿಯುವುದು ಸೂಕ್ತ. ಇಲ್ಲದೆ ಹೋದರೆ ಭಾರತದ ಸಂದರ್ಭದಲ್ಲಿ ಮಾರ್ಕ್ಸ್‌ವಾದವನ್ನು ಹೇಗೆ ಕಾರ್ಯರೂಪಕ್ಕೆ ತಂದುಕೊಳ್ಳಬೇಕು ಎಂಬುದು ತಿಳಿಯುವುದಿಲ್ಲ. ಆದ್ದರಿಂದ ಲೇಖಕರಿಗೆ ಭಾರತದ ಚರಿತ್ರೆಯಲ್ಲಿ ಅಡಗಿರುವ ಇನ್ನೊಂದು ಕರಾಳ ಮುಖದ ಪರಿಚಯ ಭಗವಾನರ ಕೃತಿಯ ಮೂಲಕ ಪರಿಚಯವಾಯಿತೆಂದು ಇಲ್ಲಿ ತಿಳಿಯಪಡಿಸಿದ್ದಾರೆ. "ಅಂಬೇಡ್ಕರ್ ಅವರನ್ನು ಹೆಚ್ಚು ಕಾಡಿಸಿದವರು ಬುದ್ಧ ಮತ್ತು ಮಾರ್ಕ್ಸ್. ಬುದ್ಧನು ಅಂಬೇಡ್ಕರ್ ಅಂತರಂಗಕ್ಕೆ ಸೇರಿದ್ದರೆ, ಕಾರ್ಲ್‌ಮಾರ್ಕ್ಸ್ ಬಹಿರಂಗದಿಂದ ಅಂತರಂಗವನ್ನು ಕೆಣಕುವ ಸೂಜಿಗಲ್ಲಾಗಿದ್ದ. ಬುದ್ಧನ ಚಿಂತನೆಯಲ್ಲೇ ಮಾರ್ಕ್ಸ್ ಚಿಂತನೆಯ ನೆಲೆಗಳನ್ನು ಗುರುತಿಸಿ ಬುದ್ಧನ ಮಹತ್ವವನ್ನು ದಾಖಲಿಸಿದರು. ಆದರೆ ಅವರು ಮಾರ್ಕ್ಸ್‌ವಾದವನ್ನು ಎಂದೂ ಸಂಪೂರ್ಣವಾಗಿ ನಿರಾಕರಿಸಲಿಲ್ಲ." ಇಲ್ಲಿಯೂ ಕೂಡ ಲೇಖಕರು ಭಗವಾನರ ಬೌದ್ಧ ಚಿಂತನೆಗಳು ಹಾಗೂ ಅವರ ಹೋರಾಟದ ನೆಲೆಗಳನ್ನು ಮಾರ್ಕ್ಸ್‌ವಾದದ ಅಡಿಯಲ್ಲಿ ಪ್ರತಿಪಾದಿಸಿರುವುದು ಕಂಡುಬರುತ್ತದೆ. ಇಲ್ಲಿ ಲೇಖಕರು ಮಾರ್ಕ್ಸ್‌ವಾದವೊಂದೆ ಅಂತಿಮವೆಂದು ಭಾವಿಸದೆ, ಸಾಂದರ್ಭಿಕವಾಗಿ ಪ್ರಸ್ತುತ ಸಮಾಜಕ್ಕೆ ಪೂರಕವಾದ ನೆಲೆಯಲ್ಲಿ ಅಂಬೇಡ್ಕರ್‌ವಾದ ಮತ್ತು ಮಾರ್ಕ್ಸ್‌ವಾದಗಳ ಮಹತ್ವವನ್ನು ಜೊತೆ ಜೊತೆಯಲ್ಲಿಯೇ ಗುರುತಿಸುವ ಪ್ರಯತ್ನಕ್ಕೆ ಮುಂದಾಗಿರುವುದು ಕಂಡುಬರುತ್ತದೆ.

ಈ ಎಲ್ಲಾ ಲೇಖಕರ ಚಿಂತನೆಗಳು ಕೆ.ಎಸ್.ಭಗವಾನರ ವಿಚಾರಗಳನ್ನು ಮುಕ್ತ ನೆಲೆಯಲ್ಲಿ ಸ್ವೀಕರಿಸಿರುವುದು ಕಂಡುಬರುತ್ತದೆ. ಇತ್ತೀಚಿನ ದಿನಗಳಲ್ಲಿ ಎಡಪಂಥೀಯ ಚಿಂತನೆಗಳಿಂದ ಜಾಗೃತರಾಗಿರುವ ಈ ಚಿಂತಕರುಗಳು ವೈದಿಕ ಪುರೋಹಿತಶಾಹಿಯ ದೌರ್ಜನ್ಯವನ್ನು ಮಟ್ಟಹಾಕಲು ಬೌದ್ಧ ತತ್ವಗಳನ್ನು ಅಸ್ತ್ರವಾಗಿ ಬಳಸಿಕೊಂಡಿದ್ದು, ವಿಚಾರವಾದದ ನೆಲೆಯಲ್ಲಿ ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ.

ಊ) ಎಂ.ಚಿದಾನಂದ ಮೂರ್ತಿಯವರು 'ಕನ್ನಡದಲ್ಲಿ ಬೌದ್ಧ ಸಾಹಿತ್ಯ- ಪ್ರೊ.ವೆಂಕಣ್ಣಯ್ಯನವರ ವಾದ ಎಷ್ಟು ದೃಢ' ಎಂಬ ಲೇಖನದಲ್ಲಿ ಬೌದ್ಧ ಚಿಂತನೆಗಳನ್ನು ವಿಮರ್ಶೆಗೆ ಗುರಿಪಡಿಸಿದ್ದಾರೆ. ವೆಂಕಣ್ಣಯ್ಯನವರ ಪ್ರಕಾರ ಕರ್ನಾಟಕದಲ್ಲಿ ಬೌದ್ಧಧರ್ಮ ತನ್ನ ಅಸ್ತಿತ್ವವನ್ನು ಪಡೆದುಕೊಂಡು, ಸಾಕಷ್ಟು ಪ್ರಚಲಿತವಾಗಿರುವ ಕಾರಣ ಕನ್ನಡದ ಆದಿಕವಿಗಳು ಬೌದ್ಧರೇ ಆಗಿರಬೇಕು ಎಂಬ ವಾದವನ್ನು ಮಂಡಿಸುತ್ತಾರೆ. ಇದಕ್ಕೆ ಚಿದಾನಂದಮೂರ್ತಿಯವರು ಪ್ರಬಲವಾದ ವಿರೋಧವನ್ನು ವ್ಯಕ್ತಪಡಿಸುತ್ತಾರೆ. ಇವರ ಪ್ರಕಾರ "ಬೌದ್ಧ ಧರ್ಮವು ಒಂದು ಅಲ್ಪಸಂಖ್ಯಾತರ ಧರ್ಮವಾಗಿದ್ದು, ಅಲ್ಲಲ್ಲಿ ತನ್ನ ಕೇಂದ್ರಗಳನ್ನು ಸ್ಥಾಪಿಸಿಕೊಂಡಿತ್ತು ಎಂದು ಹೇಳಬಹುದೇ ಹೊರತು. ಅದು ರಾಜರಿಂದ

ಪೋಷಣೆ ಪ್ರೋತ್ಸಾಹ ಪಡೆಯುವಂತಹ ಧರ್ಮ ಎಂದೂ ಆಗಿರಲಿಲ್ಲವೆಂದೂ, ಬೌದ್ಧ ವಿದ್ವಾಂಸರು ಕನ್ನಡದಲ್ಲಿ ಗ್ರಂಥ ರಚನೆಗಾಗಲಿ, ಸಾಹಿತ್ಯ ರಚನೆಗಾಗಲಿ ಎಂದೂ ಯತ್ನಿಸಲಿಲ್ಲ ಎಂದೂ ಸದ್ಯಕ್ಕೆ ಖಚಿತವಾಗಿ ಹೇಳಬಹುದಾಗಿದೆ. 'ಬಹುಶಃ ಬೌದ್ಧರೇ ಕನ್ನಡ ಭಾಷೆಗೆ ಆದಿಕವಿಗಳು' ಎಂಬ ವೆಂಕಣ್ಣಯ್ಯನವರ ಹೇಳಿಕೆಯು ಆಕರ್ಷಕವಾಗಿರುವಷ್ಟು ವಾಸ್ತವವಾಗಿಲ್ಲ ಎಂದು ಹೇಳಬೇಕಾಗಿದೆ"[೧೧] ಎಂಬುದಾಗಿ ತಿಳಿಸಿದ್ದಾರೆ.

ಇಲ್ಲಿ ವಿಮರ್ಶಕರು ವೆಂಕಣ್ಣಯ್ಯನವರ ವಿಚಾರವನ್ನು ಸಾರಸಗಟಾಗಿ ತಿರಸ್ಕಾರಕ್ಕೆ ಗುರಿಪಡಿಸಿದ್ದಾರೆ. ಪ್ರಾಚೀನ ಕಾಲದಿಂದಲೂ ಕರ್ನಾಟಕದ ಜನಸಾಮಾನ್ಯರಲ್ಲಿ ಬೌದ್ಧಧರ್ಮದ ಪ್ರಭಾವವಿರುವುದು ಕಂಡುಬರುತ್ತದೆ. ಹಾಗೆಯೇ ಈ ಧರ್ಮವು ಕರ್ನಾಟಕದಲ್ಲಿ ತನ್ನ ಅಸ್ತಿತ್ವವನ್ನು ಹೊಂದಿರುವುದಕ್ಕೆ ಹಲವಾರು ಕುರುಹುಗಳು ಕಂಡುಬರುತ್ತವೆ. ಇವುಗಳನ್ನು ಆಧಾರವಾಗಿಟ್ಟುಕೊಂಡು ವೆಂಕಣ್ಣಯ್ಯನವರು ತಮ್ಮ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಹಿರಿಯ ವಿದ್ವಾಂಸರೊಬ್ಬರ ವಿಚಾರವನ್ನು ಮುಕ್ತವಾಗಿ ಪರೀಕ್ಷೆಗೊಳಪಡಿಸದೆ ವಿಮರ್ಶಕರು ತಿರಸ್ಕಾರಕ್ಕೆ ಗುರಿಪಡಿಸಿದ್ದಾರೆ. ಇಲ್ಲಿ ವಿಮರ್ಶಕರಾದ ಚಿದಾನಂದಮೂರ್ತಿಯವರಿಗೆ ವೀರಶೈವ ಮಹತ್ವಪೂರ್ಣವಾದಷ್ಟು ಬೌದ್ಧಧರ್ಮವು ಮಹತ್ವಪೂರ್ಣವಾಗಿ ಕಂಡುಬರುವುದಿಲ್ಲ. "ಬುದ್ಧನ ಮಾರ್ಗವನ್ನು ಅನುಸರಿಸಿಯೆ ನೈತಿಕತೆಯ ಆಧಾರದ ಮೇಲೆ ಧರ್ಮದ ಇನ್ನೊಂದು ಕವಲನ್ನು ತೆರೆದವನು ಬಸವಣ್ಣ"[೧೨] ಎಂಬ ವಾದವು ಹೆಚ್ಚು ಪ್ರಚಲಿತದಲ್ಲಿದೆ. ಆದರೆ ಇಲ್ಲಿ ವಿಮರ್ಶಕರಿಗೆ ಬೌದ್ಧಧರ್ಮವು ತಿರಸ್ಕೃತ ಧರ್ಮವಾಗಿ ಕಂಡುಬರುತ್ತದೆ. ಇವರು ಈಗಾಗಲೇ ವೀರಶೈವ ಧರ್ಮವೇ ಶ್ರೇಷ್ಠವೆಂದು ಪ್ರತಿಪಾದಿಸಲು ಹೊರಟಿದ್ದು, ಬೌದ್ಧಧರ್ಮದ ಪ್ರಭಾವದಿಂದ ವೀರಶೈವ ಧರ್ಮ ಅವತರಿಸಿತು ಎಂಬ ವಾದವನ್ನು ಒಪ್ಪಿಕೊಳ್ಳಲು ತಯಾರಿಲ್ಲದ ಮನಸ್ಥಿತಿಯನ್ನು ರೂಪಿಸಿಕೊಂಡಿದ್ದಾರೆ. ಇದಕ್ಕೆ ಕಾರಣ ಬೌದ್ಧಧರ್ಮದಿಂದ ವೀರಶೈವ ಧರ್ಮದ ಮೌಲ್ಯಗಳು ಮೂಲೆಗುಂಪಾಗುವ ಸಾಧ್ಯತೆಗಳಿವೆ ಎಂಬ ಅನುಮಾನವು ಇವರಲ್ಲಿ ಮನೆಮಾಡಿದಂತಿದೆ. ಹಾಗೆಯೇ ಕರ್ನಾಟಕದಲ್ಲಿ ಇಂದು ಹೆಚ್ಚು ಪ್ರಭಾವಶಾಲಿ ವರ್ಗವು ವೀರಶೈವರೇ ಆಗಿರುವ ಕಾರಣದಿಂದ ಬೌದ್ಧಧರ್ಮದ ಮಹತ್ವವನ್ನು ಇಲ್ಲಿ ತಿರಸ್ಕಾರಕ್ಕೆ ಗುರಿಪಡಿಸುವ ಮೂಲಕ ವೀರಶೈವ ಧರ್ಮದ ಪರವಾದ ದನಿಯು ಇವರ ಚಿಂತನೆಗಳಲ್ಲಿ ಕಂಡುಬರುತ್ತದೆ.

ಕೊನೆ ಟಿಪ್ಪಣಿಗಳು

೧) ಸಿ.ಕೆ.ಮಹೇಶ್, ದಲಿತ ಚರಿತ್ರೆ ಮತ್ತು ಬುದ್ಧಧಮ್ಮ, ಪು-ix

೨) ಮ.ನ.ಜವರಯ್ಯ, ಗಾಂಧಿ ಮತ್ತು ಅಂಬೇಡ್ಕರ್, ಪು.–೦೭

೩) ಮೂಡ್ನಾಕೂಡು ಚಿನ್ನಸ್ವಾಮಿ (ಸಂ), ಮರಳಿ ಮನೆಗೆ, ಪ್ರಭುಶಂಕರ, ಪು–೪೪

೪) ಮೂಡ್ನಾಕೂಡು ಚಿನ್ನಸ್ವಾಮಿ, ಒಂದು ಕೊಡ ಹಾಲಿನ ಸಮರ, ಪು–೫೬

೫) ಕೆ.ಬಾಲಗೋಪಾಲ್, ಪ್ರಾಚೀನ ಭಾರತದ ಚರಿತ್ರೆ, ಪು–೧೧೬

೬) ಅಮರೇಶ ನುಗಡೋಣಿ, ತತ್ವಪದ ಸಾಹಿತ್ಯ ಅಧ್ಯಯನ,ಪು–೮, ೯

೭) ಬರಗೂರು ರಾಮಚಂದ್ರಪ್ಪ, ಮರ್ಯಾದಸ್ಥ ಮನುಷ್ಯರಾಗೋಣ, ಪು-೨೦೧

೮) ಬರಗೂರು ರಾಮಚಂದ್ರಪ್ಪ, ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ, ಪು-೫೫೭

೯) ಪಿ.ಲಂಕೇಶ್ 'ಟೀಕೆ ಟಿಪ್ಪಣಿ-೩, ಪು-೮೦

೧೦) ಸೀ.ಚ.ಯತೀಶ್ವರ (ಸಂ), 'ಶಂಕರಾಚಾರ್ಯ ಮತ್ತು ಪ್ರತಿಗಾಮಿತನ ಕೃತಿ ಸಮೀಕ್ಷೆ', ಪು-೯, ೧೦

೧೧) ಎಂ.ಚಿದಾನಂದಮೂರ್ತಿ, ಹೊಸತು ಹೊಸತು, ಪು-೨೧೧

೧೨) ಮೂಡ್ನಾಕೂಡು ಚಿನ್ನಸ್ವಾಮಿ, ಒಂದು ಕೊಡ ಹಾಲಿನ ಸಮರ, ಪು-೦೯

* * *

ಅಧ್ಯಾಯ: ಮೂರು

ಪ್ರಮುಖ ತಾತ್ವಿಕ ಪರಿಕಲ್ಪನೆಗಳ ಚರ್ಚೆ

೧. ಚಿಂತನ ಸಾಹಿತ್ಯ

೨. ದರ್ಶನ

೩. ಆಯಾಮಗಳು

ಅಧ್ಯಾಯ : ಮೂರು

ಪ್ರಮುಖ ತಾತ್ವಿಕ ಪರಿಕಲ್ಪನೆಗಳ ಚರ್ಚೆ

'ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧದರ್ಶನದ ಆಯಾಮಗಳು' ಎಂಬ ವಿಷಯವನ್ನು ಸಂಶೋಧನೆಗೆ ಆಯ್ದುಕೊಳ್ಳಲಾಗಿದೆ. ಪ್ರಸ್ತುತ ವಿಷಯವನ್ನು ಸಂಶೋಧನೆಗೆ ಗುರಿಪಡಿಸುವ ಮೊದಲು ಇಲ್ಲಿನ ಪ್ರಮುಖ ತಾತ್ವಿಕ ಪರಿಕಲ್ಪನೆಗಳನ್ನು ಅರ್ಥೈಸುವುದು ಸೂಕ್ತವಾಗಿದೆ. ಆದ್ದರಿಂದ ಪ್ರಸ್ತುತ ಅಧ್ಯಾಯದಲ್ಲಿ ಸಂಶೋಧನಾ ವಿಷಯದಲ್ಲಿ ಕಂಡುಬರುವ ಪ್ರಮುಖ ಪರಿಕಲ್ಪನೆಗಳಾದ ಚಿಂತನ ಸಾಹಿತ್ಯ, ಬೌದ್ಧದರ್ಶನ, ಆಯಾಮಗಳು ಎಂಬ ಮೂರು ಪ್ರಮುಖ ಪರಿಕಲ್ಪನೆಗಳ ಚರ್ಚೆಯನ್ನು ಕೈಗೊಳ್ಳಲಾಗುವುದು. ಪ್ರಸ್ತುತ ಅಧ್ಯಯನದ ಮೊದಲ ಹಂತವಾಗಿರುವ ಚಿಂತನ ಸಾಹಿತ್ಯ ಎಂಬ ಭಾಗದಲ್ಲಿ ಚಿಂತನ ಸಾಹಿತ್ಯದ ಅರ್ಥ, ಚಿಂತನ ಸಾಹಿತ್ಯದ ಹಿನ್ನಲೆ, ಚಿಂತನ ಸಾಹಿತ್ಯವು ಬೆಳೆದು ಬಂದ ಬಗೆ, ಅದರ ವ್ಯಾಪ್ತಿ ಮತ್ತು ಸ್ವರೂಪವನ್ನು ಕುರಿತಂತೆ ಅಧ್ಯಯನ ಕೈಗೊಳ್ಳಲಾಗುವುದು. ಹಾಗೆಯೇ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಚಿಂತನ ಸಾಹಿತ್ಯವು ಹೇಗೆ ಪರಿಣಾಮಕಾರಿಯಾಗಿದೆ, ಕನ್ನಡದ ವಿವಿಧ ಚಿಂತಕರು ಈ ಪ್ರಕಾರವನ್ನು ಹೇಗೆ ಬೆಳೆಸಿಕೊಂಡು ಬಂದಿದ್ದಾರೆ ಎಂಬ ಚರ್ಚೆಯನ್ನು ಕೈಗೊಳ್ಳಲಾಗುವುದು. ಕನ್ನಡದ ಚಿಂತನ ಸಾಹಿತ್ಯ ಹಾಗೂ ಬೌದ್ಧದರ್ಶನದ ಅನುಸಂಧಾನದ ನೆಲೆಗಳನ್ನು ಪ್ರಸ್ತುತ ಭಾಗದಲ್ಲಿ ಚರ್ಚಿಸಲಾಗುವುದು.

ನಂತರದ ಭಾಗದಲ್ಲಿ ದರ್ಶನ ಎಂದರೇನು, ಧರ್ಮ ಮತ್ತು ದರ್ಶನಕ್ಕೆ ಇರುವ ಸಾಮ್ಯತೆ ಹಾಗೂ ವ್ಯತ್ಯಾಸಗಳನ್ನು ಇಲ್ಲಿ ಅಧ್ಯಯನ ಮಾಡಲಾಗುವುದು. ಇಲ್ಲಿ ದರ್ಶನ ಎಂಬ ಪರಿಕಲ್ಪನೆಯನ್ನು ಬಿಡಿಸಿಕೊಂಡು ಬೌದ್ಧ ದರ್ಶನದ ಚರ್ಚೆಗೆ ಮುಂದಾಗುವುದು ಹೆಚ್ಚು ಸೂಕ್ತವಾಗಿದೆ. ಇಲ್ಲದೆ ಹೋದರೆ ಬೌದ್ಧದರ್ಶನದಲ್ಲಿ ಬುದ್ಧನ ನಂತರ ಬೆರತು ಹೋಗಿರುವ ಮೂಲಭೂತವಾದವನ್ನು ಬಿಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ದರ್ಶನ ಪರಿಕಲ್ಪನೆಯನ್ನು ಬಿಡಿಸಿಕೊಂಡು ಬುದ್ಧನ ವಿಚಾರಗಳನ್ನು ಚರ್ಚೆಗೆ ಗುರಿಪಡಿಸಲಾಗುವುದು. ಬೌದ್ಧದರ್ಶನವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಬುದ್ಧನ ತತ್ವ ಚಿಂತನೆಗಳು ದರ್ಶನವಾಗಿ, ಪಂಥವಾಗಿ, ಧರ್ಮವಾಗಿ ನಂತರದಲ್ಲಿ ಜಾತಿಯ ಸ್ವರೂಪವನ್ನು ಪಡೆದುಕೊಂಡಿರುವ ಅಂಶಗಳನ್ನು ಇಲ್ಲಿ ಚರ್ಚಿಸಲಾಗುವುದು. ಬೌದ್ಧ ಚಿಂತನೆಗಳನ್ನು ಕುರಿತಂತೆ ಕನ್ನಡದ ವಿವಿಧ ಚಿಂತಕರು ತಮ್ಮದೆ ಆದ ನೆಲೆಗಳಲ್ಲಿ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಅವುಗಳನ್ನು ಪ್ರಸ್ತುತ ಭಾಗದಲ್ಲಿ ಚರ್ಚೆಗೆ ಒಳಪಡಿಸಿಕೊಳ್ಳಲಾಗುವುದು.

ಪ್ರಸ್ತುತ ಅಧ್ಯಾಯದಲ್ಲಿ ಮತ್ತೊಂದು ಪ್ರಮುಖ ಪರಿಕಲ್ಪನೆಯಾದ 'ಆಯಾಮಗಳು' ಎಂಬ ಅಂಶವನ್ನು ಚರ್ಚಿಸಲಾಗುವುದು. ಇಲ್ಲಿ ಬೌದ್ಧದರ್ಶನವನ್ನು ಕೇಂದ್ರವಾಗಿಟ್ಟುಕೊಂಡು ಅದರ ಸುತ್ತ ವ್ಯಕ್ತವಾಗುವ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ, ಆರ್ಥಿಕ ಆಯಾಮಗಳನ್ನು ಇಲ್ಲಿ ಅಧ್ಯಯನ ಮಾಡಲಾಗುವುದು. ಈ ಮೇಲಿನ ಅಂಶಗಳ ಕುರಿತು ವಿವಿಧ ವಿದ್ವಾಂಸರ ಭಿನ್ನ ಧೋರಣೆಗಳ ತಾತ್ವಿಕ ಆಯಾಮಗಳ ಕುರಿತು ಚರ್ಚೆಯನ್ನು ಕೈಗೊಳ್ಳುವ ಉದ್ದೇಶವನ್ನು ಪ್ರಸ್ತುತ ಅಧ್ಯಾಯವು ಒಳಗೊಂಡಿರುತ್ತದೆ.

೧. ಚಿಂತನ ಸಾಹಿತ್ಯ

ಪ್ರಸ್ತುತ ಅಧ್ಯಯನದ ಸಂಶೋಧನ ಕ್ಷೇತ್ರ ಚಿಂತನ ಸಾಹಿತ್ಯವಾಗಿರುತ್ತದೆ. ಚಿಂತನ ಸಾಹಿತ್ಯವನ್ನು ವಿಚಾರ ಸಾಹಿತ್ಯಕ್ಕೆ ಪರ್ಯಾಯ ಪದವಾಗಿ ಬಳಸಲಾಗಿದೆ. ಚಿಂತನೆ ಎಂದರೆ ಯೋಚನೆ, ಆಲೋಚನೆ, ಧ್ಯಾನ, ಉಪಾಸನೆ ಎಂಬ ಅರ್ಥಗಳನ್ನು ಒಳಗೊಂಡಿದೆ. ಪ್ರಪಂಚದಲ್ಲಿನ ಹಲವಾರು ವಸ್ತು, ವಿಷಯಗಳ ಕುರಿತು ನಡೆಯುವ ಚರ್ಚೆ, ಆಲೋಚನೆ, ತರ್ಕ, ವೈಚಾರಿಕ ನಿಲುವುಗಳನ್ನು ಚಿಂತನೆ ಎಂದು ಕರೆಯಲಾಗುವುದು. ಹೀಗೆ ಚರ್ಚೆ, ತರ್ಕಗಳ ಮೂಲಕ ಒಡಮೂಡುವ ಸಾಹಿತ್ಯವು ಚಿಂತನ ಸಾಹಿತ್ಯ ಅಥವಾ ವಿಚಾರ ಸಾಹಿತ್ಯವಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ವಿಚಾರ ಸಾಹಿತ್ಯ ಎಂಬ ಪರಿಕಲ್ಪನೆಯನ್ನು ಚಿಂತನ ಸಾಹಿತ್ಯ ಎಂಬುದಾಗಿ ಬಳಸಿಕೊಳ್ಳಲಾಗಿದೆ. ಆದ್ದರಿಂದ ವಿಚಾರ ಸಾಹಿತ್ಯ ಹಾಗೂ ಚಿಂತನ ಸಾಹಿತ್ಯದ ನಡುವೆ ಯಾವುದೇ ಭಿನ್ನತೆಗಳು ಇರುವುದಿಲ್ಲ.

ಚಿಂತನ ಸಾಹಿತ್ಯದ ಇತಿಹಾಸವನ್ನು ಗಮನಿಸುವುದಾದರೆ ಅದು ಇಂದು ನಿನ್ನೆಯದಲ್ಲ. ಅದು ಸಾವಿರಾರು ವರ್ಷಗಳ ಇತಿಹಾಸವನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿದೆ. ಭಾರತದ ಸಂದರ್ಭದಲ್ಲಿ ಈ ಪ್ರಕಾರವು ಕ್ರಿಸ್ತ ಪೂರ್ವದಲ್ಲಿಯೇ ತನ್ನ ಅಸ್ತಿತ್ವವನ್ನು ಪಡೆದುಕೊಂಡಿರುವುದು ತಿಳಿದು ಬರುತ್ತದೆ. ವೈದಿಕ ಧರ್ಮದ ವಿರುದ್ಧ ಬಂಡಾಯದ ದನಿ ಎತ್ತಿದವನು ಮೊದಲು ಬುದ್ಧ ಎಂಬುದು ಹಲವಾರು ಚಿಂತಕರ ವಾದವಾಗಿದೆ. ಆದರೆ ಬುದ್ಧನಿಗಿಂತಲೂ ಪೂರ್ವದಲ್ಲಿ ಹಲವಾರು ದಾರ್ಶನಿಕರು ತಮ್ಮ ವೈಚಾರಿಕ ನಿಲುವುಗಳ ಮೂಲಕ ವೈದಿಕ ಪುರೋಹಿತಶಾಹಿಗೆ ಸವಾಲೆಸಗಿರುವುದು ಇತಿಹಾಸದಿಂದ ತಿಳಿದು ಬರುತ್ತದೆ. ಆದರೆ ಈ ದಾರ್ಶನಿಕರ ಸಿದ್ಧಾಂತಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಇಲ್ಲದಿರುವುದರಿಂದ ಬಹುತೇಕ ವಿದ್ವಾಂಸರು ಬುದ್ಧನಿಂದಲೇ ವೈಚಾರಿಕತೆಯನ್ನು ಗುರುತಿಸುವುದು ಕಂಡುಬರುತ್ತದೆ.

ಭಾರತದ ಸಂದರ್ಭದಲ್ಲಿ ಈ ಚಿಂತನ ಅಥವಾ ವಿಚಾರ ಪ್ರಕಾರವು ಬೆಳೆದು ಬಂದ ಬಗೆಯನ್ನು ಗಮನಿಸುವುದಾದರೆ, "ಈ ವಿಚಾರ ಪ್ರವಾಹ ಮೂರು ಪ್ರಮುಖ ವಿಧಗಳಲ್ಲಿ ರೂಪುಗೊಂಡಿತೆಂದು ಈ ಕಾಲದ ಚರಿತ್ರೆ ತೋರಿಸುತ್ತದೆ. ಮೊದಲನೆಯದನ್ನು ಸ್ವಭಾವವಾದ ಎಂದೆನ್ನಬಹುದು. ಮತ್ತೆರಡೆಂದರೆ ಜೈನ ಮತ್ತು ಬೌದ್ಧಧರ್ಮಗಳು. ಇವುಗಳಲ್ಲಿ ಒಂದು ಸದಾ ಕಾಲದಲ್ಲೂ ಭಾರತಕ್ಕೆ ಸೀಮಿತಗೊಂಡಿತು, ಮತ್ತೊಂದು ವಿಶ್ವಧರ್ಮವಾಗಿ ಪರಿಣಾಮಗೊಂಡಿತು. ಪ್ರತಿಯೊಂದು ವಿಚಾರ ಸಾಹಿತ್ಯವು ತನ್ನದೇ ಆದ ವಿಚಾರ ಸಾಹಿತ್ಯವನ್ನು ಪಡೆದಿದ್ದರು ಅವುಗಳ

ಪ್ರಥಮ ಪ್ರವರ್ತಕರು ಬದುಕಿದ್ದ ಕಾಲಕ್ಕೆ ಸೇರಿದವಲ್ಲ. ಬಹಳ ಪ್ರಾಚೀನವಾದ ಸಾಹಿತ್ಯವೆಂದರೂ ಪ್ರವರ್ತಕರ ಕಾಲದ ಹಲವು ಶತಮಾನಗಳ ಅನಂತರದಲ್ಲಿ ಹುಟ್ಟಿಕೊಂಡವು. ಆದರೂ ಅವುಗಳಲ್ಲಿನ ಸಂಪ್ರದಾಯ ಮಾತ್ರ ಬಹಳ ಪ್ರಾಚೀನವಾದದ್ದೇ. ಈ ವಿಚಾರ ಸಾಹಿತ್ಯದ ವಿಶಿಷ್ಟ ಲಕ್ಷಣವೆಂದರೆ ಅದು ಜನಸಾಮಾನ್ಯರು ಬಳಸುತ್ತಿದ್ದ ಪ್ರಾಕೃತ ಭಾಷೆಯಲ್ಲೇ ಇರುವುದು. ಇದರಿಂದ ಆ ಧರ್ಮ ಅಥವಾ ಕ್ರಾಂತಿಗಳು ಸಾಮಾನ್ಯ ಜನರಿಗೆ ಸಂಬಂಧಪಟ್ಟಿತ್ತೇ ವಿನಾಃ ಯಜ್ಞದ ಪರವಾಗಿರಲಿಲ್ಲವೆಂದು ನಮಗೆ ಅರಿವಾಗುತ್ತದೆ."[1] ಇಲ್ಲಿ ವೈದಿಕ ಧರ್ಮದ ವಿರುದ್ಧ ಅವೈದಿಕ ದರ್ಶನಗಳು ಸಾಮಾಜಿಕ ಕ್ರಾಂತಿಯನ್ನು ಉಂಟು ಮಾಡುವ ಹಿನ್ನಲೆಯಲ್ಲಿ ಈ ವಿಚಾರ ಸಾಹಿತ್ಯವು ಕ್ರಿ.ಪೂ.ದಲ್ಲಿಯೇ ಜನ್ಮತಾಳಿರುವುದು ತಿಳಿದುಬರುತ್ತದೆ. ಅನಂತರದಲ್ಲಿ ಈ ಪ್ರಕ್ರಿಯೆಯು ನಿರಂತರವಾಗಿ ತನ್ನ ಪ್ರಭಾವವನ್ನು ಮುಂದುವರಿಸಿಕೊಂಡು ಬಂದಿದೆ. ಕರ್ನಾಟಕದ ಹನ್ನೆರಡನೆಯ ಶತಮಾನದ ವಚನ ಅಥವಾ ಶರಣ ಚಳವಳಿಯು ಸಹ ಈ ವೈಚಾರಿಕ ಹಿನ್ನಲೆಯಲ್ಲಿಯೇ ಬೆಳೆದು ಬಂದಿದೆ. ಭಾರತದಲ್ಲಿ ಜನ್ಮತಳೆದಿರುವಂತಹ ಹಲವಾರು ಸಮಾಜ ಸುಧಾರಣ ಚಳವಳಿಗಳು ವಿಚಾರವಾದದ ನೆಲೆಯಲ್ಲಿಯೇ ಬೆಳೆದು ಬಂದಿರುವುದು ತಿಳಿದುಬರುತ್ತದೆ.

(ಆಧುನಿಕ ಸಂದರ್ಭದಲ್ಲಿ ಚಿಂತನ ಸಾಹಿತ್ಯ ಬೆಳೆದು ಬಂದ ಬಗೆಯನ್ನು ನೋಡುವುದಾದರೆ, ಈ ಪ್ರಕಾರವನ್ನು ಬೆಳಕಿಗೆ ತಂದವರು ಪಾಶ್ಚಿಮಾತ್ಯ ವಿದ್ವಾಂಸರು. ಭಾರತವು ಬ್ರಿಟೀಷ್ ವಸಹಾತುಶಾಹಿ ವಶದಲ್ಲಿದ್ದ ಸಂದರ್ಭದಲ್ಲಿ ತಮ್ಮ ಆಡಳಿತದ ಅನುಕೂಲಕ್ಕಾಗಿ ಬ್ರಿಟೀಷರು ಇಲ್ಲಿನ ಧರ್ಮ, ಸಂಸ್ಕೃತಿಗಳ ಮೇಲೆ ಅಧ್ಯಯನ ನಡೆಸಿದ್ದಾರೆ. "ಪ್ರಾಚೀನ ಭಾರತೀಯ ಚಿಂತನ ಸಂಪ್ರದಾಯ ಆಧುನಿಕ ಅಧ್ಯಯನವು ಪೌರಾತ್ಯ ಅಧ್ಯಯನದೊಂದಿಗೆ (ಓರಿಯಂಟಲಿಸಂ) ಪ್ರಾರಂಭವಾಗುತ್ತದೆ. ಮ್ಯಾಕ್ಸ್‌ಮುಲ್ಲರ್, ಕೀಥ್, ರೈಸ್‌ಡೆವಿಡ್ಸ್ ಮುಂತಾದ ವಿದ್ವಾಂಸರು ಪ್ರಾಚೀನ ಭಾರತೀಯ ಧರ್ಮಗಳ, ಸಾಹಿತ್ಯದ ಅಧ್ಯಯನ ನಡೆಸುತ್ತಾ ಚಿಂತನಾ ಸಂಪ್ರದಾಯದ ಮೇಲೂ ಬೆಳಕು ಚೆಲ್ಲಿದ್ದಾರೆ. ಈ ವಿದ್ವಾಂಸರಿಗೆ ಭಾರತವೆಂಬುದು ಅಗಾಧವಾದ ಆಧ್ಯಾತ್ಮಿಕ ತಿಳುವಳಿಕೆಯನ್ನು ಹುದುಗಿಸಿಕೊಂಡಿರುವ ನಾಡಾಗಿ ಕಾಣಿಸಿತು. ಅದೇ ವೇಳೆಗೆ ಪಾಶ್ಚಾತ್ಯ ರಾಷ್ಟ್ರಗಳು ನಗರೀಕರಣ ಹಾಗೂ ಭೌತಿಕ ಆಕಾಂಕ್ಷೆಗಳಿಂದ ಆಧ್ಯಾತ್ಮಿಕವಾಗಿ ಬರಡಾಗುತ್ತಿವೆ ಎಂಬ ಕಳವಳ ಕೂಡ ಇಂಥ ವಿದ್ವಾಂಸರಲ್ಲಿತ್ತು. ಹಾಗಾಗಿ ಭಾರತೀಯ ಚಿಂತನೆಯನ್ನು ವಿಶಿಷ್ಟವಾದ ಶ್ರದ್ಧೆಯಿಂದ ಅಧ್ಯಯನ ಮಾಡಿದರು."[2] ಹಿಂದೂ ಸನಾತನವಾದಿಗಳಿಂದ ಮರೆಮಾಚಲ್ಪಟ್ಟಿದ್ದಂತಹ ಭಾರತೀಯ ದಾರ್ಶನಿಕತೆಯನ್ನು ಸಂಶೋಧನೆಯ ಮೂಲಕ ಬೆಳಕಿಗೆ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ. ವೈದಿಕ ಧರ್ಮದ ಪ್ರಭಾವದಿಂದ ಅಂಚಿಗೆ ತಳಲ್ಪಟ್ಟು ವಿಸ್ಮೃತಿಗೆ ಗುರಿಯಾಗಿದ್ದ ಬಹುತೇಕ ದರ್ಶನಗಳನ್ನು ಇವರು ಭಾರತೀಯರಿಗೆ ಪರಿಚಯಿಸಿದ್ದಾರೆ. ಆ ಮೂಲಕ ಚಿಂತನ ಪರಂಪರೆಯು ಆಧುನಿಕ ಸ್ವರೂಪದಲ್ಲಿ ಬೆಳೆಯುವುದಕ್ಕೆ ಇವರು ಕಾರಣೀಭೂತರಾಗಿದ್ದಾರೆ.

ಪಾಶ್ಚಿಮಾತ್ಯ ವಿದ್ವಾಂಸರು ರೂಪಿಸಿರುವ ಚಿಂತನ ಸಾಹಿತ್ಯ ಮಾದರಿಯನ್ನು ನಂತರದ ಭಾರತೀಯ ವಿದ್ವಾಂಸರು ಮುಂದುವರೆಸಿಕೊಂಡು ಬಂದಿದ್ದಾರೆ. ಹತ್ತೊಂಭತ್ತನೇ ಶತಮಾನದ

ಅಂತ್ಯದ ವೇಳೆಗೆ ಭಾರತದಲ್ಲಿ ರಾಷ್ಟ್ರೀಯತೆಯ ಉದಯವಾಗುತ್ತಿದ್ದಂತೆಯೇ ಇದುವರೆಗೂ ಪಾಶ್ಚಾತ್ಯ ವಿದ್ವಾಂಸರು ರೂಪಿಸಿದ ವಿಚಾರಗಳ ಅಡಿಯಲ್ಲಿ ಭಾರತದ ತತ್ವಜ್ಞಾನವನ್ನು ದೇಶಿಯ ವಿದ್ವಾಂಸರು ಹೆಗ್ಗಳಿಕೆಯಿಂದ ನಿರೂಪಿಸಿದ್ದಾರೆ. ಭಾರತೀಯ ವಿದ್ವಾಂಸರು ಭಾರತೀಯ ತತ್ವಜ್ಞಾನವನ್ನು ಪ್ರಾಚೀನ ಭಾರತದ ಸಂಸ್ಕೃತಿಯ ಹಿರಿಮೆಯಾಗಿ ನಿರೂಪಿಸಿದ್ದಾರೆ. ಪೌರಾತ್ಯ ದಾರ್ಶನಿಕರಿಂದ ನಿರೂಪಿಸಲ್ಪಟ್ಟ ವಿಚಾರಗಳನ್ನು ಉಪಯೋಗಿಸಿಕೊಂಡು ಭಾರತವು 'ಆಧ್ಯಾತ್ಮ ಪ್ರಧಾನ' ದೇಶ ಎಂಬ ವಿಚಾರವನ್ನು ಪ್ರತಿಪಾದಿಸಿದರು. ಇಲ್ಲಿ ಭಾರತೀಯ ಚಿಂತಕರ ಪ್ರಮುಖ ಉದ್ದೇಶ ಇಲ್ಲಿನ ಜನತೆಯಲ್ಲಿ ರಾಷ್ಟ್ರೀಯತೆಯ ಜಾಗೃತಿ ಮೂಡಿಸುವುದಾಗಿತ್ತು. ಬ್ರಿಟಿಷರಿಂದ ಭಾರತವನ್ನು ಮುಕ್ತಗೊಳಿಸುವುದಕ್ಕೆ ಮೊದಲು ಭಾರತೀಯರಲ್ಲಿ ಜಾಗೃತಿ ಪ್ರಜ್ಞೆ ಉಂಟಾಗಬೇಕಿತ್ತು. ಆದ್ದರಿಂದ ಭಾರತೀಯ ಸಂಸ್ಕೃತಿಯಲ್ಲಿ ಅಡಗಿರುವ ಭಿನ್ನ ಧೋರಣೆಗಳನ್ನು ಹಾಗೂ ಬಂಡಾಯದ ದಾರ್ಶನಿಕ ನಿಲುವುಗಳನ್ನು ಮರೆಮಾಚಿಸುವ ಮೂಲಕ ಇಲ್ಲಿನ ಭವ್ಯ ಪರಂಪರೆಯನ್ನು ಎತ್ತಿ ಹಿಡಿಯುವ ಕೆಲಸ ನಡೆದಿರುವುದು ಕಂಡುಬರುತ್ತದೆ. ಈ ಸಂದರ್ಭದಲ್ಲಿ ಬಹುತೇಕ ವಿದ್ಯಾವಂತ ವರ್ಗವು ಉನ್ನತ ವರ್ಗದವರೇ ಆಗಿರುವ ಕಾರಣದಿಂದ ಬಂಡಾಯದ ನಿಲುವುಗಳನ್ನು ಹತ್ತಿಕ್ಕುವ ಕೆಲಸ ನಡೆದಿದೆ. ವೈದಿಕ ಪರಂಪರೆಯಿಂದಲೇ ಬಂದಿರುವ ಈ ವರ್ಗವು ತಮ್ಮ ಅಸ್ತಿತ್ವದ ಉಳಿವಿಗಾಗಿ ಇಲ್ಲಿ ಶ್ರಮವಹಿಸಿದ್ದಾರೆ. ತಮ್ಮ ವೈದಿಕ ಸಂಸ್ಕೃತಿಗೆ ಧಕ್ಕೆ ಬಂದಾಗ ಅದನ್ನು ಉಳಿಸಿಕೊಳ್ಳಲು ಕೆಲವು ಸುಧಾರಣೆಗಳಿಗೆ ಮುಂದಾಗಿರುವುದು ಕಂಡುಬರುತ್ತದೆ. ಈ ಸಂದರ್ಭದಲ್ಲಿ ಜನ್ಮ ಪಡೆದವುಗಳೇ ಬ್ರಹ್ಮಸಮಾಜ, ಥಿಯೋಸಾಫಿಕಲ್ ಸೊಸೈಟಿ ಮುಂತಾದ ಸುಧಾರಣವಾದಿ ಚಳವಳಿಗಳಾಗಿವೆ. ಈ ಸುಧಾರಣಾ ಚಳವಳಿಗಳು ಬಂಡಾಯ ಧೋರಣೆಯುಳ್ಳ ನಾಸ್ತಿಕವಾದಿ ದಾರ್ಶನಿಕ ನಿಲುವುಗಳನ್ನು ಮರೆಮಾಚಿಸುವ ನೆಲೆಯಲ್ಲಿ ತಮ್ಮ ವಿಚಾರಗಳನ್ನು ಪ್ರತಿಪಾದಿಸುತ್ತ ಬಂದಿವೆ.

ಇಪತ್ತನೇ ಶತಮಾನದ ವೇಳೆಗೆ ಬ್ರಿಟಿಷ್ ಶಿಕ್ಷಣ ನೀತಿಯ ಫಲವಾಗಿ ಎಡಪಂಥೀಯ ಚಿಂತಕರು ಜನ್ಮತಳೆದರು. ಈ ಚಿಂತಕರು ಹಿಂದೆ ನಿರೂಪಿಸಲ್ಪಟ್ಟಿದ್ದ ಆಧ್ಯಾತ್ಮ ಪ್ರಧಾನ ನಿರೂಪಣೆಗಳನ್ನು ಟೀಕೆಗೆ ಗುರಿಪಡಿಸಿದ್ದಾರೆ. ಇಂತಹ ಎಡಪಂಥೀಯ ಚಿಂತಕರಲ್ಲಿ ಚರಿತ್ರೆಯ ವಿಷಯಕ್ಕೆ ಬಂದಾಗ ಡಿ.ಡಿ.ಕೊಸಾಂಬಿ, ತತ್ವಶಾಸ್ತ್ರದ ವಿಷಯದಲ್ಲಿ ದೇವಿಪ್ರಸಾದ್ ಚಟ್ಟೋಪಾಧ್ಯಾಯರು ಪ್ರಮುಖರಾಗಿದ್ದಾರೆ. "ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ನಮ್ಮ ಗತಕಾಲದ ಹಾಗೂ ಪಾರಂಪರಿಕ ತತ್ವಜ್ಞಾನದ ಬಗ್ಗೆ ಪೂಜ್ಯ ಭಾವನೆಯಿಂದಿರುವುದು ಒಂದು ರೀತಿಯಲ್ಲಿ ಅನಿವಾರ್ಯವಾಗಿತ್ತು. ಏಕೆಂದರೆ ಭಾರತೀಯರನ್ನು ಅನಾಗರಿಕರು ಎಂದು ಕೀಳಾಗಿ ಕಾಣುತ್ತಿದ್ದ ಆಂಗ್ಲರ ವಿರುದ್ಧ ಹೋರಾಟ ಮಾಡುತ್ತಿದ್ದ ಸಂದರ್ಭದಲ್ಲಿ ಅವು ಭಾರತೀಯರಿಗೆ ಒಂದು ನೈತಿಕ ಸ್ಥೈರ್ಯ ಮತ್ತು ಆತ್ಮ ವಿಶ್ವಾಸವನ್ನು ನೀಡುತ್ತಿದ್ದವು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಅವುಗಳನ್ನು ವೈಜ್ಞಾನಿಕ ದೃಷ್ಟಿಕೋನದಿಂದ ವಸ್ತುನಿಷ್ಠವಾಗಿ ವಿಶ್ಲೇಷಿಸಬೇಕಾದ ಅವಶ್ಯಕತೆ ಇದೆ. ಜೊತೆಗೆ, ಇವುಗಳ ಬಗ್ಗೆ ಒಂದು ವಿಮರ್ಶಾತ್ಮಕ ದೃಷ್ಟಿಕೋನವನ್ನು ಬೆಳೆಸುವುದು ಮುಖ್ಯವಾಗಿದೆ."[3] ಆದ್ದರಿಂದ ಈ ಎಡಪಂಥೀಯ ಚಿಂತಕರು ತಳಮೂಲ ಸಂಸ್ಕೃತಿಗಳನ್ನು ಆಧಾರವಾಗಿಟ್ಟುಕೊಂಡು ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತ ಬಂದಿದ್ದಾರೆ. ಇವರು ಈ ಹಿಂದಿನ

ವಿಚಾರಗಳನ್ನು ವಿಮರ್ಶೆಗೆ ಒಳಪಡಿಸುವ ಮೂಲಕ ಹೊಸ ಹೊಸ ವಿಚಾರಗಳನ್ನು ಬೆಳಕಿಗೆ ತಂದಿದ್ದಾರೆ. ಆ ಮೂಲಕ ವಿಸ್ಮೃತಿಗೆ ಗುರಿಯಾಗಿದ್ದಂತಹ ವಿಚಾರಗಳಿಗೆ ಜೀವ ನೀಡುವ ಕೆಲಸ ಮಾಡಿದ್ದಾರೆ. ಅಂತಹ ಭಾರತೀಯ ಚಿಂತಕರಲ್ಲಿ ಜ್ಯೋತಿಬಾಪುಲೆ, ಬಾಬಾ ಸಾಹೇಬ್ ಅಂಬೇಡ್ಕರ್, ಸ್ವಾಮಿ ವಿವೇಕಾನಂದ, ಲೋಹಿಯಾ, ಪೆರಿಯಾರ್, ಸ್ವಾಮಿ ಧರ್ಮತೀರ್ಥರು ಪ್ರಮುಖರಾಗಿದ್ದಾರೆ.

ಎಡಪಂಥೀಯ ಚಿಂತಕರು ತಳಸಮುದಾಯಗಳ ನೆಲೆಯಲ್ಲಿ ನಿಂತು, ಜನಸಾಮಾನ್ಯರ ಹಕ್ಕುಗಳಿಗಾಗಿ ಹೋರಾಟ ನಡೆಸಿದ್ದಾರೆ. ಇವರಿಗೆ ಧರ್ಮ ಮತ್ತು ಸಂಸ್ಕೃತಿಯ ಸುಧಾರಣೆಗಿಂತ ಮುಖ್ಯವಾಗಿ ಸಾಮಾಜಿಕ ಸಮಾನತೆಯ ಬದುಕು ಮುಖ್ಯವಾಗಿತ್ತು. ಆದ್ದರಿಂದ ವೈದಿಕ ಪುರೋಹಿತಶಾಹಿ ರೂಪಿಸಿಕೊಂಡು ಬಂದಿರುವ ಧಾರ್ಮಿಕ ಕಟ್ಟಳೆಗಳನ್ನು ಮೀರುವ ಮೂಲಕ ಇವುಗಳನ್ನು ವೈಚಾರಿಕ ನೆಲೆಯಲ್ಲಿ ವಿಮರ್ಶೆಗೆ ಗುರಿಪಡಿಸಿದ್ದಾರೆ. ಆ ಮೂಲಕ ಈ ಎಡಪಂಥೀಯ ಚಿಂತಕರು ತಮ್ಮ ಹಿಂದಿನ ಚರಿತ್ರೆಯತ್ತ ಗಮನ ಹರಿಸಿರುವುದು ಕಂಡುಬರುತ್ತದೆ. ಆದ್ದರಿಂದ ಬಾಬಾಸಾಹೇಬ್ ಅಂಬೇಡ್ಕರರು ಹೇಳುವಂತೆ "ಚರಿತ್ರೆ ಇಲ್ಲದ ಜನಾಂಗ ಚರಿತ್ರೆ ನಿರ್ಮಿಸುವುದಿಲ್ಲ. ಹಾಗೆಯೇ ಚರಿತ್ರೆಯನ್ನು ಮರೆತವರು ಬದುಕನ್ನು ಕಟ್ಟುವುದಿಲ್ಲ" ಎಂಬ ಮಾತಿನಂತೆ ತಮ್ಮ ಹಿಂದಿನ ಚರಿತ್ರೆಯನ್ನು ಶೋಧನೆ ಮಾಡುವ ಮೂಲಕ ತಮ್ಮ ಅಸ್ಮಿತೆಯ ಹುಡುಕಾಟಕ್ಕೆ ಮುಂದಾಗಿರುವುದು ತಿಳಿದು ಬರುತ್ತದೆ. ಈ ಚಿಂತನ ಸಾಹಿತ್ಯವು ಬಲಪಂಥೀಯ ಹಾಗೂ ಎಡಪಂಥೀಯ ವಿಚಾರಗಳ ನಡುವಿನ ಸಂಘರ್ಷದ ಮೂಲಕ ಬೆಳೆದು ಬಂದಿದೆ. ಚಿಂತನ ಸಾಹಿತ್ಯ ಪ್ರಕಾರವು ಹಲವಾರು ಸಂಘಟನೆ, ಹೋರಾಟ, ಚಳವಳಿಗಳಿಗೆ ಪ್ರೇರಕ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಕಂಡುಬರುತ್ತದೆ. ಇದರ ಫಲವಾಗಿ ಇಂದು ಹಲವಾರು ಸಿದ್ಧಾಂತ, ವಾದಗಳು ಅಸ್ತಿತ್ವ ಪಡೆದುಕೊಂಡಿವೆ.

ಎಡಪಂಥೀಯ ಚಿಂತನೆಗಳು ರೂಪಗೊಳ್ಳುವುದು ತರ್ಕದ ಮೂಲಕ. ಈ ತರ್ಕವು ವೈಚಾರಿಕ ನೆಲೆಗಟ್ಟಿನ ಮೇಲೆ ರೂಪಿತವಾಗಿರುತ್ತದೆ. ಆದರೆ ಈ ತರ್ಕವನ್ನು ಬಲಪಂಥೀಯರು ಬಹು ನಯವಾಗಿಯೇ ನಿರಾಕರಿಸುತ್ತಾ ಬಂದಿದ್ದಾರೆ. ಈ ಪ್ರವೃತ್ತಿಯೂ ಕ್ರಿಸ್ತಪೂರ್ವದಿಂದ ಆಧುನಿಕ ಯುಗದ ಪ್ರಸ್ತುತದವರೆಗೂ ಮುಂದುವರೆದುಕೊಂಡು ಬಂದಿದೆ. ತತ್ವಶಾಸ್ತ್ರದ ಮೀಮಾಂಸಕರಾದ ಜಿ.ರಾಮಕೃಷ್ಣ ಅವರು ಹೇಳುವಂತೆ, "ತರ್ಕದಿಂದ ಮೂಡಿಬರುವ ಅಂಶಕ್ಕೂ ವೇದ ವಾಕ್ಯಕ್ಕೂ ವಿರೋಧ ಕಂಡುಬಂದರೆ, ವೇದವಾಕ್ಯವನ್ನು ಸ್ವೀಕರಿಸಿ ತರ್ಕವನ್ನು ನಿಷೇಧಿಸಬೇಕು. ಶಂಕರಾಚಾರ್ಯರಿಂದ ಹಿಡಿದು ಸಂಪ್ರದಾಯವಾದಿಗಳೆಲ್ಲ ಮಾಡಿರುವುದು ಇದನ್ನೆ"[9] ಎಂಬುದಾಗಿ ಪ್ರತಿಪಾದಿಸಿದ್ದಾರೆ. ಇಂತಹ ಮನಸ್ಥಿತಿಯವರಿಗೆ ವೇದವಾಕ್ಯಗಳು ಮುಖ್ಯವೇ ಹೊರತು ವಾಸ್ತವದ ಬದುಕು ಮುಖ್ಯವಾಗುವುದಿಲ್ಲ. ಈ ವರ್ಗಗಳು ಧರ್ಮ, ಸಂಸ್ಕೃತಿಯ ವೈಚಾರಿಕ ನೆಲೆಗಟ್ಟಿನ ಮುಕ್ತ ಚರ್ಚೆಗಳಿಗೆ ಮುಂದಾಗುವುದನ್ನು ತಿರಸ್ಕರಿಸುತ್ತಾರೆ. ಪ್ರಸ್ತುತ ಸಂದರ್ಭದಲ್ಲಿ ಭಗವದ್ಗೀತೆ ಹಾಗೂ ಹಿಂದೂಧರ್ಮ ಗ್ರಂಥಗಳ ಮುಕ್ತ ಚರ್ಚೆಯ ನಿರಾಕರಣೆಯೂ ಕೂಡ ಮೂಲಭೂತವಾದಿ ಬಲಪಂಥೀಯ ಧೋರಣೆಗಳಾಗಿವೆ.

ಕನ್ನಡ ಚಿಂತನ ಸಾಹಿತ್ಯ

ಕನ್ನಡ ಸಾಹಿತ್ಯವು ಹಲವಾರು ಪ್ರಕಾರಗಳಲ್ಲಿ ಬೆಳೆದು ಬಂದಿದೆ. ಅವುಗಳಲ್ಲಿ ಚಿಂತನ ಸಾಹಿತ್ಯ ಅಥವಾ ವಿಚಾರ ಸಾಹಿತ್ಯವೂ ಪ್ರಮುಖವಾಗಿದೆ. ಇಂತಹ ಚಿಂತನ ಸಾಹಿತ್ಯವನ್ನು ಶಂಬಾ ಜೋಶಿ, ಕುವೆಂಪು, ಪಂಡಿತ ತಾರಾನಾಥ್, ಡಿ.ವಿ.ಜಿ, ಶಿವರಾಮ ಕಾರಂತ, ಎ.ಎನ್.ಮೂರ್ತಿರಾವ್, ಯು.ಆರ್.ಅನಂತಮೂರ್ತಿ, ಬಿ.ಕೃಷ್ಣಪ್ಪ, ಬರಗೂರು ರಾಮಚಂದ್ರಪ್ಪ, ಸಿದ್ಧಲಿಂಗಯ್ಯ, ಕೆ.ಎಸ್.ಭಗವಾನ್, ಅರವಿಂದ ಮಾಲಗತ್ತಿ, ಸಿ.ಕೆ.ಮಹೇಶ್ ಮುಂತಾದ ಚಿಂತಕರು ತಮ್ಮ ಸುತ್ತಮುತ್ತಲಿನ ಜಾಗತಿಕ ಆಗು-ಹೋಗುಗಳನ್ನು ಆಧಾರವಾಗಿಟ್ಟುಕೊಂಡು ಸೃಷ್ಟಿಸಿದ್ದಾರೆ. ಇವರ ಚಿಂತನ ಸಾಹಿತ್ಯಕ್ಕೆ ಜಗತ್ತಿನ ಬೇರೆ ಬೇರೆ ದಾರ್ಶನಿಕರು, ಸಮಾಜ ಸುಧಾರಕರು ಹಾಗೂ ಅವರ ತತ್ವ ಸಿದ್ಧಾಂತಗಳು ಪ್ರೇರಕ ಶಕ್ತಿಯಾಗಿವೆ. ಅವುಗಳೆಂದರೆ "ಅಂಬೇಡ್ಕರ್‌ವಾದ, ಲೋಹಿಯಾವಾದ, ಮಾರ್ಕ್ಸ್‌ವಾದ, ಗಾಂಧೀವಾದ, ಪೆರಿಯಾರ್ ವಾದಗಳು, ಇಷ್ಟಲ್ಲದೆ ಕೆಲವು ಚಿಂತಕರಿಗೆ ವೈಯಕ್ತಿಕವಾಗಿ ಸ್ವಾಮಿ ವಿವೇಕಾನಂದ, ಮಾರ್ಕ್ಸ್‌ವಾದಿ ತತ್ವಜ್ಞಾನಿ ದೇವಿಪ್ರಸಾದ್ ಚಟ್ಟೋಪಾಧ್ಯಾಯ, ವಚನಕಾರ ಬಸವಣ್ಣ, ಶ್ರೀಲಂಕೆಯ ವಿಚಾರವಾದಿ ಅಬ್ರಾಹಂ ಕೊವೂರ್, ಪಾಶ್ಚಾತ್ಯ ತತ್ವಜ್ಞಾನಿಗಳಾದ ನಿಶೆ, ರೆಸರ್, ಇಂಗರ್‌ಸಾಲ್, ಶ್ರೀಲಂಕೆಯ ಪೌರ್ವಾತ್ಯವಾದಿ ಆನಂದ ಕುಮಾರಸ್ವಾಮಿ, ಭಾರತೀಯ ಮಾರ್ಕ್ಸ್‌ವಾದಿಯಾದ ಎಮ್.ಎನ್.ರಾಯ್, ಓಶೋ ಮುಂತಾದ ಚಿಂತಕರು ಕೂಡ ಪ್ರಭಾವ ಬೀರಿರುವರು."[೫]

ಕನ್ನಡ ಚಿಂತನ ಸಾಹಿತ್ಯವು ವಿಭಿನ್ನ ಆಯಾಮಗಳಲ್ಲಿ ತನ್ನ ಛಾಪು ಮೂಡಿಸಿದೆ. ಈ ಪ್ರಕಾರವು ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ಹಾಗೂ ವೈಜ್ಞಾನಿಕ ನೆಲೆಯಲ್ಲಿ ಚರ್ಚಿತವಾಗುತ್ತಿರುವುದು ಕಂಡುಬರುತ್ತದೆ. ಈ ಚಿಂತನ ಪ್ರಕಾರವನ್ನು ಅಧ್ಯಯನದ ಅನುಕೂಲಕ್ಕೆ ತಕ್ಕಂತೆ ರಾಷ್ಟ್ರೀಯವಾದಿ ಚಿಂತನೆ, ನಾಸ್ತಿಕ ಚಿಂತನೆ, ಶೈಕ್ಷಣಿಕ ಚಿಂತನೆ, ಸಂಸ್ಕೃತಿ ಚಿಂತನೆ, ದಲಿತ ಚಿಂತನೆ, ಪರಿಸರವಾದಿ ಚಿಂತನೆ, ಸ್ತ್ರೀವಾದಿ ಚಿಂತನೆ ಎಂಬ ವಿಂಗಡಣೆಗಳಾಗಿ ಕನ್ನಡ ಚಿಂತನ ಪ್ರಕಾರವು ಬೆಳೆದುಬಂದಿದೆ. ಎಲ್ಲ ಸಾಮಾಜಿಕ ಸಮಸ್ಯೆಗಳಿಗೆ ಪ್ರತಿಕ್ರಿಯೆ ವ್ಯಕ್ತಪಡಿಸುವ ಈ ಪ್ರಕಾರವು ಇಂದು ಹೆಚ್ಚು ಮನ್ನಣೆಯನ್ನು ಪಡೆದುಕೊಳ್ಳುತ್ತಿದೆ. ಪ್ರಸ್ತುತದಲ್ಲಿ ಈ ಪ್ರಕಾರವು ಎಲ್ಲ ಸಾಹಿತ್ಯ ಪ್ರಕಾರಗಳಿಗಿಂತ ಹೆಚ್ಚು ಜನ ಮನ್ನಣೆಯನ್ನು ಪಡೆದುಕೊಳ್ಳುತ್ತಿದೆ. ಎಲ್ಲ ವಿಚಾರವಂತ ವರ್ಗದ ಜನತೆಯು ಕೂಡ ಚಿಂತನ ಪ್ರಕಾರದತ್ತ ತಮ್ಮ ಗಮನಹರಿಸುತ್ತಿರುವುದು ಕಂಡುಬರುತ್ತದೆ.

೨. ದರ್ಶನ

ಇಂಗ್ಲಿಷಿನ 'ಫಿಲಾಸಫಿ' ಎಂಬ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ದರ್ಶನ' ಎಂಬ ಪದ ಬಳಕೆಯಲ್ಲಿದೆ. ದರ್ಶನ ಎಂಬ ಪದವು ಸಂಸ್ಕೃತ ಮೂಲ 'ದೃಶ್'ನಿಂದ ಬಂದದ್ದು, ಇದರರ್ಥ 'ನೋಡು' ಅಥವಾ 'ದೃಷ್ಟಿ' ಎಂದಾಗುತ್ತದೆ. ದರ್ಶನ ಎಂಬ ಪದವು ನೋಡುವುದು, ಕಾಣುವುದು, ದರುಶನ, ಪರಿಚಯ, ಪರಸ್ಪರ ಮಾತನಾಡು ಎಂಬ ವಿಶಾಲಾರ್ಥಗಳನ್ನು ಒಳಗೊಂಡಿದೆ.

ಪ್ರಾಜ್ಞರು ದರ್ಶನ ಶಬ್ದದ ಉತ್ಪತ್ತಿಯನ್ನು 'ದೃಶ್ಯತೆ ಅನೇನೇತಿ ದರ್ಶನಂ' ಎಂದು ಕರೆದಿದ್ದಾರೆ. ಅಂದರೆ ಯಾವುದರಿಂದ ವಸ್ತುಗಳ ನಿಜ ಸ್ವರೂಪವನ್ನು ನಿರೀಕ್ಷಿಸಿ, ಪರೀಕ್ಷಿಸಿ

ನಿರೂಪಿಸಲಾಗುವುದೋ ಅದೇ ದರ್ಶನ ಎಂಬುದಾಗಿದೆ. ದರ್ಶನವು ಸಾಮಾನ್ಯವಾಗಿ ತನ್ನ ಸುತ್ತಮತ್ತಲಿನ ಸೃಷ್ಟಿಯ ರಹಸ್ಯವನ್ನು ತಿಳಿಯುವ ಕುತೂಹಲವನ್ನು ಹೊಂದಿರುತ್ತದೆ. ಈ ರಹಸ್ಯವನ್ನು ತಿಳಿಯುವ ತವಕವೇ ಇದರ ಉತ್ಪತ್ತಿಗೆ ಕಾರಣವಾಗಿದೆ. "ದರ್ಶನವೆನ್ನುವ ಮಾತಿಗೆ ಕಾಣ್ಕೆಯೆಂದರ್ಥ. ಕಾಣ್ಕೆಯೆಂದರೆ ಸತ್ಯವನ್ನು ಇಂದ್ರಿಯಗಳ ನೆರವಿರದೆ ನೇರವಾಗಿ ಕಂಡುಕೊಳ್ಳುವುದು. ಇರುವುದು ಇದ್ದಂತೆಯೇ ಯಾವುದರಿಂದ ತಿಳಿಯಲು ಬರುವುದೋ ಅದು ದರ್ಶನ."[೬] ಈ ದರ್ಶನ ಎನ್ನುವ ಪರಿಕಲ್ಪನೆಯನ್ನು ಹಲವಾರು ವಿದ್ವಾಂಸರು ವಿಭಿನ್ನ ನೆಲೆಯಲ್ಲಿ ಅರ್ಥೈಸಿರುವುದಾಗಿ ತಿಳಿದುಬರುತ್ತದೆ. "ವ್ಯವಹಾರಿಕ ಪ್ರಪಂಚದಲ್ಲಿ ಹೆಚ್ಚು ರೀತಿಯ ಅನುಭವವುಳ್ಳ ಮನುಷ್ಯ ಅನುಭವಿ ಅನಿಸಿಕೊಂಡರೆ; ಅತೀಂದ್ರಿಯ ವಿಷಯಾರ್ಥದಲ್ಲಿ ಅನುಭಾವಿ ಅನ್ನಿಸಿಕೊಳ್ಳುತ್ತಾನೆ. ಇದು ಅಂತರಂಗದಲ್ಲಿ ಅರಿತು ಬಹಿರಂಗದಲ್ಲಿ ನಡೆಯುವ ಮಾರ್ಗೋಪಾಯದ ಸಂಗಮ ಸುಖ. ಅದನ್ನು ಅನುಭವಿಸಿದವನೇ ತತ್ವ ಚಿಂತಕ, ಅನುಭಾವಿ ದಾರ್ಶನಿಕ."[೭]

ದರ್ಶನವು ತಾನು ಕಂಡ ವಸ್ತು, ವಿಷಯವನ್ನು ಕುರಿತಾಗಿ ಆಳವಾದ ಚಿಂತನೆಯ ಮೂಲಕ ಅರಿಯುವ, ತಿಳಿಯುವ ಪ್ರಯತ್ನ ಮಾಡುತ್ತದೆ. ದರ್ಶನವೆಂದರೆ ಕೇವಲ ನೋಡುವುದಲ್ಲ. ತನ್ನ ಅಂತರ್‌ದೃಷ್ಟಿಯ ಮೂಲಕ ಅರಿಯುವ ಅಥವಾ ಕಾಣುವ ಪ್ರಯತ್ನವಾಗಿದೆ. ಇದನ್ನು 'ಕಾಣ್ಕೆ' ಎಂಬುದಾಗಿಯೂ ಗುರುತಿಸಲಾಗುತ್ತದೆ. "ಭಾರತೀಯ ಪಾರಿಭಾಷಿಕ ಶಬ್ದಗಳಲ್ಲೇ ಹೇಳುವುದಾದರೆ ಎಲ್ಲ ದರ್ಶನಗಳ ಸಾಮಾನ್ಯ ಲಕ್ಷಣವೆಂದರೆ 'ಪ್ರಮಾಣ' ನಿರೂಪಣೆ. ಎಲ್ಲ ದರ್ಶನಗಳು ಪ್ರಮಾಣ ನಿರೂಪಣೆಯಿಂದಲೇ ಆರಂಭವಾಗದಿದ್ದರೂ ಪ್ರಮಾಣ ನಿರ್ಣಯಗಳನ್ನು ಮಾಡುವುದರಲ್ಲಿ ತೊಡಗಿ, ಸರಿಯಾದ 'ಜ್ಞಾನ ಅಥವಾ ಪ್ರಮಾ' ಎನ್ನುವ ಗುರಿಗೆ ಅವು ಸಾಧನಗಳಾಗುತ್ತವೆ ಎನ್ನುವುದನ್ನು ಚರ್ಚಿಸುತ್ತವೆ. ಈ ಪ್ರಮಾಣಗಳು ಹೊಸದಾದ ಜ್ಞಾನವನ್ನು ಸಂಪಾದಿಸುವುದಕ್ಕೆಂದು ಮಾತ್ರವಲ್ಲದೆ, ತಿಳಿದಿರುವ ಜ್ಞಾನದ ಯಥಾರ್ಥತೆಯನ್ನು ಹೇಗೆ ನಿರ್ಧರಿಸಬೇಕು ಎನ್ನುವುದಕ್ಕೂ ಸಹಾಯವಾಗುತ್ತವೆ."[೮]

ದರ್ಶನಗಳನ್ನು ಆಸ್ತಿಕ ಮತ್ತು ನಾಸ್ತಿಕ ದರ್ಶನಗಳು ಎಂಬುದಾಗಿ ವಿಂಗಡಿಸಲಾಗಿದೆ. ಈ ಆಸ್ತಿಕ ಮತ್ತು ನಾಸ್ತಿಕ ದರ್ಶನಗಳು ತಮ್ಮದೇ ಆದ ನಿಯಮಗಳನ್ನು ರೂಪಿಸಿಕೊಂಡು ಪರಸ್ಪರ ಚರ್ಚೆ ನಡೆಸುತ್ತ ಸಾಗಿವೆ. "ಎಲ್ಲ ಭಾರತೀಯ ದರ್ಶನ ಪದ್ಧತಿಗಳು ಇವತ್ತಿಗೂ ತಾರ್ಕಿಕ ನ್ಯಾಯ ಪದ್ಧತಿಯನ್ನು ಅನುಸರಿಸುತ್ತಿವೆ. ಈಗ ಈ ಪದ್ಧತಿಯನ್ನು ತರ್ಕಶಾಸ್ತ್ರ ಎಂದು ಕರೆಯುತ್ತಾರೆ."[೯] ನಮ್ಮಲ್ಲಿ ಈ ದರ್ಶನವನ್ನು ತರ್ಕಶಾಸ್ತ್ರ, ತತ್ವಶಾಸ್ತ್ರ ಎಂಬುದಾಗಿಯು ಕರೆಯುತ್ತಾರೆ. ಆದರೆ ಇಲ್ಲಿ ಮೂಲ ದಾರ್ಶನಿಕರ ಆಶಯಗಳಿಗೂ ಧರ್ಮದಲ್ಲಿ ಅಳವಡಿಸಿಕೊಂಡಿರುವ ವಿಚಾರಗಳಿಗೂ ಭಿನ್ನತೆಗಳಿವೆ. ಇದಕ್ಕೆ ಕಾರಣ ಕಾಲಾನಂತರದಲ್ಲಿ ತಮ್ಮ ಅಗತ್ಯಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡಿರುವ ನಿಯಮಗಳಾಗಿವೆ. ಆದ್ದರಿಂದ ಧರ್ಮದ ವಿಚಾರಗಳು ಮೂಲ ದಾರ್ಶನಿಕರ ವಿಚಾರಧಾರೆಗಳಿಗೆ ವಿರುದ್ಧವಾಗಿ ಕಾರ್ಯಪ್ರವೃತ್ತವಾಗಿವೆ.

ದಾರ್ಶನಿಕರು ತಮ್ಮ ಅನುಭವ, ಅನುಭಾವಗಳನ್ನು ತರ್ಕ, ವಿತರ್ಕಗಳನ್ನು ಚರ್ಚೆಯ ಮೂಲಕ ಬಗೆಹರಿಸಿಕೊಳ್ಳುತ್ತಿದ್ದರು. ಈ ಚರ್ಚೆಯಲ್ಲಿ ಅಂತಿಮವಾಗಿ ಯಾವುದು ಹೆಚ್ಚು ಸೂಕ್ತವೆಂದು

ಕಂಡುಬರುತ್ತದೆಯೋ ಅದನ್ನು ಒಂದು ನಿಯಮವಾಗಿ ರೂಪಿಸಿಕೊಂಡು ಬಂದಿದ್ದಾರೆ. ಪ್ಲೇಟೋ, ಅರಿಸ್ಟಾಟಲ್, ಬುದ್ಧ, ಬಸವಣ್ಣ ಮುಂತಾದ ದಾರ್ಶನಿಕರುಗಳು ಸಾಮಾಹಿಕ ಚರ್ಚೆಯಲ್ಲಿಯೇ ಒಂದು ದಾರ್ಶನಿಕ ನಿಲುವುಗಳನ್ನು ತಾಳಿರುವುದು ತಿಳಿದುಬರುತ್ತದೆ. ಇವರೆಲ್ಲರು ತಮ್ಮ ದಾರ್ಶನಿಕ ನಿಲುವುಗಳನ್ನು ತಮಗಷ್ಟೆ ತಿಳಿದದ್ದನ್ನು ಮಾತ್ರ ವ್ಯಕ್ತಪಡಿಸಿದವರಲ್ಲ. ಸಮುದಾಯದೊಂದಿಗೆ ಬೆರತು ತೀರ್ಮಾನ ಕೈಗೊಂಡಿದ್ದಾರೆ. ಇವರೆಲ್ಲ ಒಂದು ಸಿದ್ಧಾಂತವನ್ನು ಪ್ರತಿಪಾದಿಸುವ ಪೂರ್ವದಲ್ಲಿ ತಮ್ಮ ಸಮಕಾಲೀನ ಚಿಂತಕರೊಂದಿಗೆ ಮುಕ್ತವಾದ ಚರ್ಚೆ, ಗೋಷ್ಠಿ, ಸಂವಾದಗಳನ್ನು ಏರ್ಪಡಿಸುವ ಮೂಲಕ ಅಂತಿಮ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದರು. "ದಾರ್ಶನಿಕತೆ ಕೇವಲ ಬರಹಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಹಲವು ಬಾರಿ ಸಾರ್ವಜನಿಕವಾಗಿಯೂ ಚರ್ಚೆಗಳು ನಡೆಯುತ್ತಿದ್ದವು. ಈ ಸಾರ್ವಜನಿಕ ಚರ್ಚೆಗಳಿಂದಾಗಿಯೇ ಒಂದು ನಿಜವಾದ ತತ್ವಶಾಸ್ತ್ರದ ವಿಧಾನ ಪರಿಷ್ಕಾರಗೊಂಡಿತು" ಎನ್ನುವುದನ್ನು ಶೊರ್ಬಾಟ್ಸ್ಕಿಯಂಥ ವಿದ್ವಾಂಸರು ಗುರುತಿಸುತ್ತಾರೆ. ಈ ದಾರ್ಶನಿಕರ ಮುಕ್ತ ನಿಲುವುಗಳು ಸಮಾಜದ ಎಲ್ಲ ವರ್ಗಗಳಿಗೂ ಅನ್ವಯವಾಗುವಂತಿದ್ದವು.

ಒಂದು ಚಾರಿತ್ರಿಕ ಸಂದರ್ಭದಲ್ಲಿ ಸೃಷ್ಟಿಯಾಗಿರುವಂತಹ ದರ್ಶನಗಳು ನಂತರದ ದಿನಮಾನಗಳಲ್ಲಿ ಹಲವು ಪಂಥಗಳಾಗಿ ಮಾರ್ಪಟ್ಟಿವೆ. "ಸಾಮಾಜಿಕವಾಗಿ ದರ್ಶನವು ಯಾವುದೇ ಪಂಥ ಅಥವಾ ಧರ್ಮವು ಮನುಷ್ಯರ ಬಗ್ಗೆ, ಜೀವನದ ಬಗ್ಗೆ, ಸಮಾಜದ ಬಗ್ಗೆ, ಲೋಕದ ಬಗ್ಗೆ ಇರಿಸಿಕೊಂಡಿರುವ ಲೋಕದೃಷ್ಟಿಯನ್ನು ಒಳಗೊಂಡಿರುತ್ತದೆ. ಹೀಗಾಗಿ ಒಂದು ಪಂಥದ ದಾರ್ಶನಿಕತೆ ಎಂದರೆ ವ್ಯಕ್ತಿ, ಜಗತ್ತು, ಸಮಾಜಗಳನ್ನು ಕುರಿತ ಅದರ ದೃಷ್ಟಿಕೋನವೇ ಆಗಿದೆ. ಆದರೆ ತಾತ್ವಿಕವಾಗಿ ಒಂದು ಪಂಥದ ಲೋಕದೃಷ್ಟಿಗೂ ಅದು ವಾಸ್ತವದಲ್ಲಿ ಅದನ್ನು ಆಚರಣೆ ಮಾಡುತ್ತಿರುವುದಕ್ಕೂ ವ್ಯತ್ಯಾಸ ಇರಬಹುದು. ಎಲ್ಲ ಧರ್ಮ ಹಾಗೂ ಪಂಥಗಳಲ್ಲಿ ತತ್ವ ಆಚರಣೆಗಳ ನಡುವೆ ಬಿರುಕು ಇದ್ದೇ ಇರುತ್ತದೆ. ಇದಕ್ಕೆ ಕಾರಣ, ಮೂಲ ದರ್ಶನಕ್ಕೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ಉಂಟಾಗಿರುವ ಸೇರ್ಪಡೆಗಳು. ಹೊಸ ಚಾರಿತ್ರಿಕ ಸನ್ನಿವೇಶಗಳು ಮೂಲ ದರ್ಶನವನ್ನು ವರ್ತಮಾನದ ಅಗತ್ಯಕ್ಕೆ ತಕ್ಕಂತೆ ಬದಲಿಸಿಕೊಳ್ಳಲು ಒತ್ತಡ ಹಾಕುತ್ತದೆ. ಹೀಗೆ ಸೇರಿಸುವಿಕೆ, ಬದಲಿಸುವಿಕೆಗಳು ನಿರಂತರ ನಡೆಯುತ್ತ ಪಂಥವೊಂದರ ದರ್ಶನವು ಪರಿವರ್ತನೆ ಪಡೆಯುತ್ತ ಹೋಗುತ್ತದೆ."[೧೦]

ದಾರ್ಶನಿಕರ ವಿಚಾರಧಾರೆಗಳು ನಂತರದ ದಿನಗಳಲ್ಲಿ ಪಂಥದ ಸ್ವರೂಪವನ್ನು ಪಡೆದುಕೊಂಡು ಬೆಳೆದುಬಂದಿವೆ. ಈ ಪಂಥವು ಒಂದು ಧರ್ಮದ ಮೂಲಕ ಗುರುತಿಸಿಕೊಳ್ಳುವ ಒಂದು ನಿರ್ದಿಷ್ಟ ಮಾದರಿಯನ್ನು ರೂಪಿಸಿಕೊಂಡಿವೆ. ವಿಶಾಲಾರ್ಥವನ್ನು ಒಳಗೊಂಡಿರುವ ದರ್ಶನವು ಧರ್ಮದ ವ್ಯಾಪ್ತಿಗೆ ಒಳಗಾದಾಗ ಸಂಕುಚಿತವಾಗುತ್ತ ಬಂದಿವೆ. ಈ ಸಂಕುಚಿತ ಧರ್ಮವು ಸಾಂಸ್ಥಿಕ ಸ್ವರೂಪವನ್ನು ಪಡೆದುಕೊಂಡು ತನ್ನ ಮೂಲಭೂತವಾದವನ್ನು ಪ್ರತಿಪಾದಿಸುತ್ತ ಬಂದಿದ್ದು, ಇಲ್ಲಿ ಮೂಲ ದಾರ್ಶನಿಕ ವಿಚಾರಗಳು ಅಂಚಿಗೆ ತಳಲ್ಪಡುತ್ತವೆ. ಹೀಗೆ ಸಾಂಸ್ಥಿಕ ಸ್ವರೂಪವನ್ನು ಪಡೆದುಕೊಂಡ ಧರ್ಮವು ಒಂದು ಜಾತಿಯಾಗಿಯೂ ಮುಂದುವರೆದುಕೊಂಡು ಬಂದಿದೆ. ವಿಶಾಲ ವ್ಯಾಪ್ತಿಯನ್ನು ಪಡೆದುಕೊಂಡ ದರ್ಶನವು ನಂತರದ ದಿನಮಾನಗಳಲ್ಲಿ ಜಾತಿಯಾಗಿ ಮಾರ್ಪಟ್ಟಿರುವ

ನಿದರ್ಶನಗಳು ನಮ್ಮ ಮುಂದೆ ಜೀವಂತವಾಗಿವೆ. ಸ್ಥಾಪಿತ ನೆಲೆಯನ್ನು ಪಡೆದುಕೊಂಡ ಈ ಧರ್ಮದ ಮೂಲಭೂತವಾದಿ ನಿಲುವುಗಳಿಂದ ಇಂದು ಭಯೋತ್ಪಾದನೆ, ಕೋಮುಗಲಭೆಯಂತಹ ಕೃತ್ಯಗಳು ಜಾಗತೀಕ ಮಟ್ಟದಲ್ಲಿ ತನ್ನ ಕ್ರೌರ್ಯವನ್ನು ಮೆರೆಯುತ್ತಿವೆ. ವಿಶ್ವಶಾಂತಿಯನ್ನು ಬಯಸಿ ಜನ್ಮತಾಳಿದ ದಾರ್ಶನಿಕ ವಿಚಾರಧಾರೆಗಳು ಇಂದು ಧರ್ಮದ ಹೆಸರಿನಲ್ಲಿ ಕ್ರೌರ್ಯಕ್ಕೆ ಮುಂದಾಗಿವೆ. ಈ ಧರ್ಮಗಳ ಪ್ರತಿಪಾದಕರು ಮೂಲ ದಾರ್ಶನಿಕರನ್ನು ಪ್ರತಿಮೆಯಾಗಿಟ್ಟುಕೊಂಡು ಆ ದಾರ್ಶನಿಕರ ವಿಚಾರಗಳಿಗೆ ವಿರುದ್ಧವಾಗಿ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವುದು ಕಂಡುಬರುತ್ತದೆ.

ದರ್ಶನ ಮತ್ತು ಧರ್ಮ

ದರ್ಶನದ ಮುಂದುವರೆದ ಅಥವಾ ವಿಕಸಿತ ಭಾಗವಾಗಿ ಧರ್ಮ ಕಂಡುಬಂದರೂ, ತನ್ನ ಆಳದಲ್ಲಿ ಹಲವು ಸೂಕ್ಷ್ಮ ವೈರುದ್ಯಗಳನ್ನು ಒಳಗೊಂಡಿದೆ. ದರ್ಶನ ಅಥವಾ ದಾರ್ಶನಿಕರ ಚಿಂತನೆಗಳನ್ನು ಸ್ಥಾಪಿತಗೊಳಿಸಿ ಕೆಲವು ಮಾರಕ ಪ್ರವೃತ್ತಿಗಳು ಸೃಷ್ಟಿಯಾಗುತ್ತಿರುವುದು ಧರ್ಮದಲ್ಲಿ ಕಂಡು ಬರುತ್ತದೆ. "ಧರ್ಮ ಎನ್ನುವುದು ಜೀವನದ ಹಾಗೂ ಬದುಕಿನ ಒಂದು ನಂಬಿಕೆ ಅಥವಾ ವಿಶ್ವಾಸ. ಮಾನವನ ಅಭ್ಯುದಯ ಮತ್ತು ನ್ಯಾಯ ಸಮ್ಮತವಾದ ವ್ಯವಹಾರಗಳು ಯಾವುದನ್ನು ಅವಲಂಬಿಸಿರುವುದೋ ಅಂಥ ಒಂದು ಗುಣ."[೧೧] ಆದರೆ ಧರ್ಮದ ಮೂಲಭೂತವಾದಿಗಳು ಇದಕ್ಕೆ ಅಪವಾದವೆಂಬಂತೆ ವರ್ತಿಸುವುದು ಕಂಡುಬರುತ್ತದೆ. ಸಾವಿರಾರು ವರ್ಷಗಳ ಹಿಂದೆಯೇ ಕವಿರಾಜಮಾರ್ಗಕಾರ ಹೇಳುವ 'ಕಸವರಮೆಂಬುದು ನೆರೆಸೈರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ' ಎಂಬ ಮಾತು ಆ ಕಾಲದ ವೇಳೆಗೆ ಧರ್ಮದ ಹೆಸರಿನಲ್ಲಿ ನಡೆಯುತ್ತಿರಬಹುದಾದ ಕ್ರೌರ್ಯವನ್ನು ಪ್ರತಿಬಿಂಬಿಸುತ್ತದೆ.

ಜಗತ್ತಿನ ಪ್ರತಿಯೊಂದು ಧರ್ಮಗಳು ಇಂದು ಮತಿಯವಾದಿ ಧೋರಣೆಗಳನ್ನು ಅಳವಡಿಸಿಕೊಂಡು ರಕ್ತಪಾತಕ್ಕೆ ಮುಂದಾಗಿರುವುದು ಕಂಡುಬರುತ್ತದೆ. ಭಾರತದಲ್ಲಿ ಜನ್ಮತಾಳಿದ ಬಹುತೇಕ ದರ್ಶನಗಳು ಹಿಂದೂಧರ್ಮದಲ್ಲಿನ ಮೂಲಭೂತವಾದವನ್ನು ವಿರೋಧಿಸಿ ಜನ್ಮತಾಳಿದವುಗಳಾಗಿವೆ. ಆದ್ದರಿಂದ ಇವುಗಳನ್ನು ಪ್ರತಿದರ್ಶನ ಎಂದು ಕರೆಯಬಹುದು. ಈ ದರ್ಶನಗಳು ಸಾಮಾಜಿಕ ಅಸಮಾನತೆಯನ್ನು ವಿರೋಧಿಸಿ, ಸಮಾನತೆಯ ತತ್ವಗಳನ್ನು ಪ್ರತಿಪಾದಿಸಿವೆ. ಆದರೆ ಈ ದರ್ಶನಗಳು ಮೂಲಭೂತವಾದಿ ಸ್ವರೂಪವನ್ನು ಅಳವಡಿಸಿಕೊಂಡು ಮಾರಕ ಪ್ರವೃತ್ತಿಯನ್ನು ತಾಳಲಿಲ್ಲ. ಮೂಲ ದಾರ್ಶನಿಕ ವಿಚಾರಗಳು ಧರ್ಮದ ಹೆಸರಿನಲ್ಲಿ ಸಾಂಸ್ಥೀಕರಣಗೊಂಡಾಗ ಆಡಳಿತಶಾಹಿಯು ತನ್ನ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಆಕ್ರಮಣಕಾರಿ ನೀತಿಯನ್ನು ಅನುಸರಿಸಿವೆ. ಆ ಮೂಲಕ ರಕ್ತಪಾತದಂತಹ ಅಮಾನುಷ ಕ್ರಿಯೆಗಳಿಗೆ ಮುಂದಾಗಿದೆ.

"ಈಗ ನಾವು ಬಳಸುತ್ತಿರುವ ಅರ್ಥದಲ್ಲಿ ಧರ್ಮ ಎಂಬುದು ಕೇವಲ ಪ್ರಚಾರ ಮಾತ್ರವಾಗಿದೆ; ಆಸ್ತಿಕರ ಹಿತರಕ್ಷಣೆ ಮಾಡುತ್ತಿದೆ; ಆಸ್ತಿ, ಆಧ್ಯಾತ್ಮಿಕ ಶ್ರೇಣೀಕರಣ, ಅಧಿಕಾರಿ ಸ್ತರಗಳನ್ನು ಒಳಗೊಂಡಿದೆ. ಧರ್ಮ ಎಂಬುದು ಕೇವಲ ನಂಬಿಕೆಯ, ಅಂಧ ವಿಶ್ವಾಸದ, ದಿನ ನಿತ್ಯದ ಬದುಕಿಗೆ ಸಂಬಂಧವೇ

ಇಲ್ಲದ ಆಚರಣೆಗಳ ಮೊತ್ತವಾಗಿದೆ."[೨೨] ಇಲ್ಲಿ ಶಾಂತಿ, ಸಹಕಾರ, ಸಹಬಾಳ್ವೆ, ವಿಶ್ವಶಾಂತಿಯಂತಹ ಮೌಲ್ಯಗಳು ಗೌಣವಾಗುತ್ತಿವೆ. ತಮ್ಮ ಸ್ವಾರ್ಥ ಭಾವಗಳನ್ನು ಈಡೇರಿಸಿಕೊಳ್ಳುವ ಅರಾಜಕತೆಯನ್ನು ಸೃಷ್ಟಿಸುವುದು ಈ ಧರ್ಮದಲ್ಲಿ ಕಂಡುಬರುತ್ತದೆ. ಆದ್ದರಿಂದ ಈ ಧರ್ಮಗಳಲ್ಲಿನ ತಾತ್ವಿಕ ನಿಲುವುಗಳು ದಾರ್ಶನಿಕರ ಮೂಲ ಚಿಂತನೆಗಳಿಂದ ಬಹುದೂರ ಸರಿದಿವೆ. ಈ ಧರ್ಮಗಳಲ್ಲಿ ಮನೆಮಾಡಿರುವ ಸ್ಥಾಪಿತ ಮೌಲ್ಯಗಳನ್ನು ಪರಿಷ್ಕರಿಸಿದಾಗ ಮಾತ್ರ ಅದರ ಮೂಲದಲ್ಲಿರುವ ದಾರ್ಶನಿಕ ಮೌಲ್ಯಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಧರ್ಮ ಮತ್ತು ದರ್ಶನಕ್ಕೆ ಇರುವ ವ್ಯತ್ಯಾಸಗಳು ತಿಳಿಯುವುದಿಲ್ಲ. ಈಗಿರುವ ಧರ್ಮದಲ್ಲಿನ ಮೂಲಭೂತವಾದವೇ ಮೂಲ ದಾರ್ಶನಿಕ ವಿಚಾರವೆಂದು ಸ್ವೀಕರಿಸುವಂತಾಗುತ್ತದೆ.

ಧರ್ಮ ಎಂಬ ಪದಕ್ಕೆ ಪ್ರತಿಯೊಂದು ದರ್ಶನಗಳು ತಮ್ಮದೇ ಆದಂತಹ ವಿಶಿಷ್ಟ ಅರ್ಥವನ್ನು ಕಲ್ಪಿಸಿಕೊಂಡು ಬಂದಿವೆ. "ಸಾಂಖ್ಯ ದರ್ಶನದಲ್ಲಿ ಶುಭವಾದ ಚಿತ್ತವಾಸನೆ ಧರ್ಮವೆನಿಸಿಕೊಳ್ಳುತ್ತದೆ; ವೈಶೇಷಿಕ ದರ್ಶನದಲ್ಲಿ ವಿಹಿತ ಕ್ರಿಯಾ ಸಾಧ್ಯವಾದ ಪುರುಷ ಗುಣ ವಿಶೇಷ; ಜೈನ ದರ್ಶನದಲ್ಲಿ ಇದು ಪುಣ್ಯಪುದ್ಗಲ. ಸಾಮಾನ್ಯ ಜನರು 'ದಾನಧರ್ಮ' ಎನ್ನುವಾಗ ಕೆರೆ ತೋಡಿಸುವುದು, ಕೊಳವನ್ನು ಕಟ್ಟುವುದು, ದಾರಿಯಲ್ಲಿ ಮರಗಳನ್ನು ನೆಡುವುದು, ಅನ್ನದಾನ ಮಾಡುವುದು ಮುಂತಾದ ಪರೋಪಕಾರ ಕಾರ್ಯಗಳನ್ನು ಗಮನಿಸುತ್ತಾರೆ"[೨೩] ಆದರೆ ಇಂದಿನ ಧರ್ಮದ ಪರಿಕಲ್ಪನೆಯು ಇವುಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿದೆ. ಬುದ್ಧನು ತಾನು ಕಂಡುಕೊಂಡ ಜ್ಞಾನವನ್ನು ಇತರರಿಗೆ ತಿಳಿಯಪಡಿಸುವುದನ್ನು ಧರ್ಮವೆಂದು ಕಂಡುಕೊಂಡಿದ್ದಾನೆ. ಆತ 'ಧಮ್ಮ' ಎಂಬ ಪದವನ್ನು ಪ್ರಯೋಗಿಸುತ್ತಾನೆ. ಬೌದ್ಧಧರ್ಮವನ್ನು ಅಪ್ಪಿಕೊಂಡ ಬಾಬಾಸಾಹೇಬ್ ಅಂಬೇಡ್ಕರರು ಕೂಡ ಧರ್ಮ ಎಂಬ ಪದವನ್ನು ನಿರಾಕರಿಸಿ ಧಮ್ಮ ಎಂಬ ಪದವು ಹೆಚ್ಚು ಸೂಕ್ತವಾದುದು ಎಂದು ತಿಳಿಸುತ್ತಾರೆ. ಧರ್ಮದ ಅನುಯಾಯಿಗಳ ಸಾಂಸ್ಥೀಕರಣ ಕ್ರಿಯೆಯು ಇಂದು ಧರ್ಮವನ್ನು ರಾಜಕೀಯ ವಸ್ತುವಾಗಿಯೂ ಬಳಸಿಕೊಂಡು ಕೋಮುದ್ವೇಷವನ್ನು ಹುಟ್ಟುಹಾಕುತ್ತಿರುವುದು ಕಂಡುಬರುತ್ತದೆ.

ಧರ್ಮ ಮತ್ತು ದೇವರು

ಧರ್ಮ ಮತ್ತು ದೇವರು ಎಂಬ ಪರಿಕಲ್ಪನೆಗಳನ್ನು ಬಿಡಿಸಿ ನೋಡಿದಾಗ ಈ ಎರಡರ ಮಧ್ಯೆ ಹಲವು ಅಂತರಗಳು ಕಂಡುಬರುತ್ತವೆ. ಧರ್ಮದ ವಿಕಾಸವು ಅಥವಾ ಉಗಮವು ಒಂದು ದಾರ್ಶನಿಕ ಪಂಥದಿಂದ ಜನ್ಮತಾಳಿದೆ. ಇದು ಒಂದು ನಿರ್ದಿಷ್ಟ ವ್ಯಾಪ್ತಿಯನ್ನು ಗುರುತಿಸಿಕೊಂಡು ಬೆಳೆದುಬಂದಿದೆ. ಆದರೆ ದೇವರ ಪರಿಕಲ್ಪನೆಯು ಮನುಷ್ಯನ ವಿಕಾಸದೊಂದಿಗೆ ಬೆಳೆದುಬಂದಿದೆ. ಈ ದೇವರ ವಿಕಾಸದ ಹಿಂದೆ ಯಾವೊಬ್ಬ ದಾರ್ಶನಿಕರ ಸಲಹೆ ಅಥವಾ ಮಾರ್ಗದರ್ಶನಗಳು ಕಂಡುಬರುವುದಿಲ್ಲ. ಪ್ರಕೃತಿಯ ಕೂಸಾದ ಮಾನವ ತನ್ನ ಬದುಕಿಗೆ ಆಸರೆಯಾದ ಪ್ರಕೃತಿಯನ್ನು ದೈವವೆಂದು ಪೂಜಿಸಿಕೊಂಡು, ಆರಾಧಿಸಿಕೊಂಡು ಬಂದಿದ್ದಾನೆ. ಇಲ್ಲಿ ತನ್ನ ನಂಬಿಕೆಗಳನ್ನು

ತಲೆಮಾರಿನಿಂದ ತಲೆಮಾರಿಗೆ ಕಾಪಾಡಿಕೊಂಡು ಬರುವ ಮೂಲಕ ತಮ್ಮದೆ ಆದ ಸಂಸ್ಕೃತಿಯನ್ನು ರೂಪಿಸಿಕೊಂಡಿದ್ದಾನೆ. ಆದರೆ ಧರ್ಮದ ಪರಿಕಲ್ಪನೆಯು ತನ್ನ ಧಾರ್ಮಿಕ ಸಿದ್ಧಾಂತವನ್ನು ಇತರರ ಮೇಲೆ ಹೇರುವ ಪ್ರಯತ್ನ ಮಾಡುತ್ತದೆ. ಈ ಧರ್ಮದ ಪರಿಕಲ್ಪನೆಯು ಹೀಗೆ ಮುಂದುವರೆದು ಆಸ್ತಿಕ ಮತ್ತು ನಾಸ್ತಿಕ ಎಂಬ ಪರಿಕಲ್ಪನೆಗಳು ಸೃಷ್ಟಿಯಾಗಿವೆ. ಆದರೆ ಜನಪದರಲ್ಲಿ ಈ ಭಿನ್ನತೆಗಳು ಕಂಡುಬರುವುದಿಲ್ಲ. ಇವರು ದೇವರನ್ನೇ ನಂಬಿಕೊಂಡು ಅನಾದಿ ಕಾಲದಿಂದಲೂ ತಮ್ಮ ಜೀವನವನ್ನು ಸಾಗಿಸಿಕೊಂಡು ಬಂದಿದ್ದಾರೆ. ಅಸ್ತಿತ್ವವಾದದ ಪಿತಮಹನಾದ ಫ್ರೆಡರಿಕ್ ನೀಷೆ ಹೇಳುವಂತೆ "ದೇವರನ್ನು ಕಳೆದುಕೊಂಡರೆ ಹುಚ್ಚುತನದ ಮೊರೆ ಹೋಗಬೇಕಾಗುತ್ತದೆ. ತಾನು ದೇವರನ್ನು ಕಳೆದುಕೊಂಡೆನೆಂದು ಮನಗಂಡ ಮರುಗಳಿಗೆಯೇ ಇಡೀ ಮನುಷ್ಯ ಜಾತಿ ಹುಚ್ಚು ಹಿಡಿಸಿಕೊಳ್ಳುತ್ತದೆ."[೧೪] ಆದ್ದರಿಂದ ಮಾನವನು ತನ್ನ ಬದುಕಿನೊಂದಿಗೆ ದೇವರ ಪರಿಕಲ್ಪನೆಯನ್ನು ಕಾಪಾಡಿಕೊಂಡು ಬಂದಿದ್ದಾನೆಯೇ ಹೊರತು ಧರ್ಮವನ್ನಲ್ಲ.

ಭಾರತದ ಮೂಲನಿವಾಸಿಗಳಾದ ಆದಿಮ ಜನಾಂಗ ಹಾಗೂ ಬುಡಕಟ್ಟು ಜನಾಂಗಗಳು ಬಹುಸಂಸ್ಕೃತಿಯ ನೆಲೆಯಲ್ಲಿ ತಮ್ಮದೇ ಆದಂತಹ ಸಾಂಸ್ಕೃತಿಕ ದೈವಗಳನ್ನು ಆರಾಧಿಸಿಕೊಂಡು ಬಂದಿದ್ದಾರೆ. ಇವರ ಎಲ್ಲ ದೈವಗಳು ಪ್ರಕೃತಿ ಮೂಲದವಾಗಿರುತ್ತವೆ. ಇಲ್ಲವೇ ತಮ್ಮ ಬದುಕಿಗಾಗಿ ಹೋರಾಡಿ ಮಡಿದ ಸಾಂಸ್ಕೃತಿಕ ನಾಯಕರಾಗಿರುತ್ತಾರೆ. "ಜನಪದರಿಗೆ ದೇವರು ವೈಯಕ್ತಿಕವೂ ಹೌದು, ಸಾಮೂಹಿಕವೂ ಹೌದು. ಜನಪದರು ದೇವರನ್ನು ಧರ್ಮದೊಡನೆ ಗಂಟು ಹಾಕಿ, ಸಮಸ್ಯೆಗಳನ್ನು ಸೃಷ್ಟಿಸಲಿಲ್ಲ. ಜನಪದರಿಗೆ ದೇವರು ಮುಖ್ಯವೇ ಹೊರತು ಧರ್ಮವಲ್ಲ. ಹಾಗೆ ಒಂದು ವೇಳೆ ಧರ್ಮ ಇದ್ದರೆ, ಅದು ಮನುಷ್ಯ ಧರ್ಮ ಮಾತ್ರ. ಮನುಷ್ಯನ ಹಿತಕ್ಕೆ ಧಕ್ಕೆ ಬರುವುದಾದರೆ ಅಂಥ ಧರ್ಮವನ್ನು ಜನಪದರು ಪುರಸ್ಕರಿಸುವುದಿಲ್ಲ."[೧೫] ಜನಪದ ಸಂಸ್ಕೃತಿಗಳ ಮೇಲೆ ವೈದಿಕಧರ್ಮ ಹಾಗೂ ಇತರೆ ಧರ್ಮಗಳು ತಮ್ಮ ಆಕ್ರಮಣಕಾರಿ ಧಾರ್ಮಿಕ ನಿಲುವುಗಳನ್ನು ಬಲವಂತವಾಗಿ ಹೆರುವ ಮೂಲಕ ದಾಸ್ಯಕ್ಕೆ ಗುರಿಪಡಿಸಿರುವುದು ಕಂಡುಬರುತ್ತದೆ. ಜನಪದ ಪರಂಪರೆಗಳು ತಮ್ಮ ನಿತ್ಯ ಬದುಕಿನ ನಡುವೆಯೇ ಒಂದು ಅಮೂಲ್ಯವಾದ ದರ್ಶನವನ್ನು ಕಂಡುಕೊಂಡು ಬಂದಿವೆ. ಕಷ್ಟಪಟ್ಟು ದುಡಿಯುವುದು, ಪರರ ಕಷ್ಟಗಳಲ್ಲಿ ಭಾಗಿಯಾಗುವುದು, ಸಹಕಾರ, ಸಹಬಾಳ್ವೆಯಂತಹ ವಿಶ್ವ ಭ್ರಾತೃತ್ವವನ್ನು ಬೆಳೆಸಿಕೊಂಡು ಬಂದಿವೆ. ಆದ್ದರಿಂದ ಧರ್ಮ ಎನ್ನುವುದು ಒಂದು ವರ್ಗದ ಸೃಷ್ಟಿಯಾಗಿದ್ದು, ಬಹುಸಂಖ್ಯಾತ ತಳಸಮುದಾಯಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಸೃಷ್ಟಿಸಿರುವ ತಂತ್ರವಾಗಿದೆ.

ಬೌದ್ಧ ದರ್ಶನ

ಬುದ್ಧ ತಾನು ಪಡೆದ ಅನುಭವ ಮತ್ತು ಜ್ಞಾನದ ಸಾರವನ್ನು ತನ್ನ ಶಿಷ್ಯರಿಗೆ ಬೋಧಿಸಿದ. ತಾನು ಬೋಧಿಸಿದ ವಿಚಾರವನ್ನು ಸಕಲ ದಿಕ್ಕಿಗೂ ಪ್ರಚಾರಗೊಳಿಸುವಂತೆ ತನ್ನ ಶಿಷ್ಯಂದಿರಿಗೆ ತಿಳಿಯಪಡಿಸಿದ. ಬುದ್ಧನ ವಿಚಾರಗಳನ್ನು ಯಾರ ಮೇಲೂ ಬಲವಂತವಾಗಿ ಹೇರುವಂತಿರಲಿಲ್ಲ.

ಈತನ ವಿಚಾರಗಳು ಸೂಕ್ತ ಎನಿಸಿದರೆ ಮಾತ್ರ ಸ್ವೀಕರಿಸಬಹುದಿತ್ತು. ಒಂದು ಸಿದ್ಧಾಂತವಾಗಿ ಬುದ್ಧ ತನ್ನ ವಿಚಾರಗಳನ್ನು ಯಾರ ಮೇಲೂ ಹೇರುವ ಪ್ರಯತ್ನ ಮಾಡಲಿಲ್ಲ. ಇದು ನಿಮಗೆ ಸರಿ ಎನಿಸಿದರೆ ಮಾತ್ರ ಸ್ವೀಕರಿಸಿ, ಇಲ್ಲದೆ ಹೋದರೆ ತಿರಸ್ಕರಿಸಿ ಎಂಬುದು ಬುದ್ಧನ ದರ್ಶನದ ತಿರುಳಾಗಿತ್ತು. ಬುದ್ಧ ದೇವರ ವಿಚಾರದಲ್ಲಿ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಆಸ್ತಿಕ ಮತ್ತು ನಾಸ್ತಿಕತೆಯನ್ನು ಮೀರಿದ ವಿಚಾರವಾದಿಯಾಗಿದ್ದ. "ವಿಚಾರವಾದಿಯಾದವನು ಎಂದಿಗೂ ನಾಸ್ತಿಕನಾಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ನಾಸ್ತಿಕವಾದ ದೇವರು ಇಲ್ಲ ಎನ್ನುತ್ತದೆ. ಇಲ್ಲ ಎನ್ನುವುದು ತಾನು ಕಂಡಿದ್ದೇನೆ ಎಂಬಂತೆ, ಆದರೆ ಇಲ್ಲ ಎನ್ನುವುದು ಒಂದು ಸತ್ಯದ ಕಾಣುವಿಕೆಯಲ್ಲ. ಬರಿಯ ಕಾಣದಿರುವಿಕೆ ಒಂದು ಜ್ಞಾನವಾಗುವುದಿಲ್ಲ. ನಾಸ್ತಿಕವಾದಿಯ ಪ್ರಕಾರ ದೇವರು ಇಲ್ಲ ಎನ್ನುವುದು ಒಂದು ವಸ್ತುನಿಷ್ಠ ಜ್ಞಾನವಾಗದೆ, ಬರಿಯ ಅಜ್ಞಾನ ಮಾತ್ರ ಆಗುತ್ತದೆ. ಅವನು ಇಲ್ಲ ಎನ್ನುವುದನ್ನು ಇವನು ಹೋಗಿ ನೋಡಿಕೊಂಡು ಬಂದಿದ್ದಾನೆ ಎಂದು ಅರ್ಥವಾಗುತ್ತದೆ. ಹೋಗಿ ಅಂತಹ ನೋಡಿಕೊಂಡು ಬಂದ ಕೆಲಸವೇನನ್ನು ಇವನು ಮಾಡಿಲ್ಲ. ಈಶ್ವರ ಸಾಕ್ಷಾತ್ಕಾರ ಮಾಡಿದವನಾದರೋ ದೇವರು ಇದ್ದಾನೆ ಅನ್ನುವುದನ್ನು ತಾನು ನೋಡಿದ್ದೇನೆ ಎಂದೇ ಹೇಳುತ್ತಾನೆ. ಆದ್ದರಿಂದ ವಿಚಾರವಾದಿಯಾದವನು ಅಜ್ಞೇಯತಾವಾದಿಯಾಗಬಹುದೇ ಹೊರತು ನಾಸ್ತಿಕವಾದಿ ಆಗುವುದಕ್ಕೆ ಸಾಧ್ಯವಿಲ್ಲ."[೧೬] ಇಲ್ಲಿ ಬುದ್ಧನು ಆಸ್ತಿಕನೂ ಅಲ್ಲದ, ನಾಸ್ತಿಕನೂ ಅಲ್ಲದ ಅಜ್ಞೇಯತಾವಾದಿಯಾಗಿ ಕಂಡುಬರುತ್ತಾನೆ. ಆ ಕಾಲದ ಜನರ ಮನಸ್ಸಿನಲ್ಲಿ ಪ್ರಬಲವಾಗಿ ಮನೆಮಾಡಿಕೊಂಡಿದ್ದ ದೇವರ ವಿಚಾರಗಳನ್ನು ಕೆದಕದೆ ಮೌನವಹಿಸಿದ. ಧರ್ಮದ ಹೆಸರಿನಲ್ಲಿ ಸಾಮಾಜದಲ್ಲಿ ಅಸ್ತಿತ್ವದಲ್ಲಿದ್ದ ಅಸಮಾನತೆಗಳನ್ನು ಮೀರಿ, ಸಾಮಾಜಿಕ ಪರಿವರ್ತನೆಗೆ ಮುಂದಾದ ವೈಚಾರಿಕ ದಾರ್ಶನಿಕನಾಗಿ ಬುದ್ಧ ಕಂಡುಬರುತ್ತಾನೆ.

ಬುದ್ಧ ಬದುಕಿದ್ದ ಅವಧಿಯಲ್ಲಿ ಆತನ ವಿಚಾರಗಳು ಯಾವುದೇ ಸ್ಥಾಪಿತ ಮಾದರಿಯನ್ನು ಪಡೆದುಕೊಂಡಿರಲಿಲ್ಲ. ಬುದ್ಧನ ತರುವಾಯ ಆತನು ಪ್ರತಿಪಾದಿಸಿದ ದರ್ಶನವು ಹಲವು ಪಂಥಗಳಾಗಿ ವಿಭಜನೆಯಾಯಿತು. "ಬುದ್ಧನ ತರುವಾಯ ಕೇಂದ್ರಶಕ್ತಿಯ ಕೊರತೆ ಉಂಟಾದ್ದರಿಂದ ಬೌದ್ಧಧರ್ಮದ ಆಚಾರ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿದವು. ಪರಿಣಾಮವಾಗಿ ಬೌದ್ಧಧರ್ಮದಲ್ಲೇ 'ಪಾಲಿ' ಆಕಾರ ಗ್ರಂಥಗಳನ್ನಾಧರಿಸಿದ ಹೀನಯಾನ ಪಂಥವೂ, ಸಂಸ್ಕೃತ ಆಕಾರ ಗ್ರಂಥಗಳನ್ನಾಧರಿಸಿದ ಮಹಾಯಾನ ಪಂಥವೂ ರೂಪುಗೊಂಡವು. ಅನಂತರದ ಶತಮಾನಗಳಲ್ಲಿ ತಾಂತ್ರಿಕತೆಗೆ ಒತ್ತು ನೀಡಿದ ವಜ್ರಯಾನ ಪಂಥವೂ ಬೆಳೆಯಿತು."[೧೭] ಬುದ್ಧನ ನಿರ್ವಾಣದ ನಂತರದಲ್ಲಿ ಪ್ರಾರಂಭವಾದ ಭಿನ್ನಮತಗಳಿಂದ ವಿಭಜನೆಯಾದ ಈ ಪಂಥದ ನಿಲುವುಗಳು ಇಂದಿಗೂ ಏಕತೆಯನ್ನು ಕಂಡುಕೊಂಡಿಲ್ಲ. ಈ ವೈರುಧ್ಯಗಳು ನಿರಂತರವಾಗಿ ಸಾಗಿ ಬಂದಿವೆ. ಬುದ್ಧನು ವೈದಿಕ ಪುರೋಹಿತಶಾಹಿ ಸೃಷ್ಟಿಸಿದ ಹಿಂದೂಧರ್ಮದಲ್ಲಿನ ಸ್ಥಾಪಿತ ಮೌಲ್ಯಗಳಿಗೆ ಪ್ರತಿಯಾಗಿ ತನ್ನ ದರ್ಶನವನ್ನು ವ್ಯಕ್ತಪಡಿಸಿದ. ಆದರೆ ನಂತರದಲ್ಲಿ ಆತ ಪ್ರತಿಪಾದಿಸಿ ದರ್ಶನವೇ ಸ್ಥಾಪಿತ ಮೌಲ್ಯಗಳನ್ನು ರೂಪಿಸಿಕೊಂಡು ಹಿಂದೂ ಮೂಲಭೂತವಾದಿ ಸ್ವರೂಪವನ್ನು ಅಳವಡಿಸಿಕೊಂಡಿರುವುದು ತಿಳಿದುಬರುತ್ತದೆ.

ಬಹುತೇಕ ತತ್ವ ಸಿದ್ಧಾಂತಗಳು ತಮ್ಮ ಧರ್ಮದ ಪ್ರಣಾಳಿಕೆಯಂತಿರುತ್ತವೆ. ಇಲ್ಲಿ ಮನುಷ್ಯನ ಬೌದ್ಧಿಕ ಸ್ವಾತಂತ್ರ್ಯಕ್ಕೆ ಅವಕಾಶವೇ ಇಲ್ಲದಂತೆ ಸಿದ್ಧಾಂತಗಳು ರಚಿತವಾಗಿರುತ್ತದೆ. ಸ್ವಾಮಿ ವಿವೇಕಾನಂದರು ಎಲ್ಲ ತತ್ವ ಸಿದ್ಧಾಂತಗಳನ್ನು ತಮ್ಮ ಹೋರಾಟದ ಆರಂಭಿಕ ಹಂತದಲ್ಲಿ ಅಧ್ಯಯನಕ್ಕೆ ಗುರಿಪಡಿಸುತ್ತಾರೆ. ಆಗ ಅವರು ಗಮನಿಸುವಂತೆ “ಈ ತತ್ವ ಸಿದ್ಧಾಂತಗಳಲ್ಲಿ ಹೆಚ್ಚಿನವೆಲ್ಲ ಬುದ್ಧಿಚಮತ್ಕಾರ, ಕೇವಲ ಬೌದ್ಧಿಕ ರೂಪುರೇಖೆಗಳು ಮಾತ್ರ ಎಂದು, ಈ ಸಿದ್ಧಾಂತಗಳಲ್ಲಿ ಮನುಷ್ಯನ ಭಾವನೆಗಳಿಗೆ ಒಂದು ಸ್ಥಾನವಿಲ್ಲದಿರುವುದನ್ನು ಕಾಣುತ್ತೇವೆ. ಈ ಸಿದ್ಧಾಂತಗಳು ಮನುಷ್ಯನ ಪ್ರತಿಸ್ಪಂದನಾ ಸಾಮರ್ಥ್ಯವನ್ನು ಮನುಷ್ಯನ ಕ್ರಿಯಾತ್ಮಕ ಮತ್ತು ರಚನಾತ್ಮಕ ಸಾಮರ್ಥ್ಯವನ್ನು ಒತ್ತಿ ಹಿಡಿಯುವಂತೆ ಕಾಣುತ್ತಿದೆ. ಇವುಗಳೆಲ್ಲ ವಿಚಾರ ಸ್ವಾತಂತ್ರಕ್ಕೆ ಅವಕಾಶ ಕೊಡದಿರುವ, ಕಣ್ಣು ಮುಚ್ಚಿಕೊಂಡು ನಂಬು ಎಂಬ ಜಾತಿಯ ಸಿದ್ಧಾಂತಗಳು ಎಂದೆನಿಸುತ್ತದೆ”[೧೮] ಎಂಬುದಾಗಿ ತಿಳಿಸಿದ್ದಾರೆ. ಆದ್ದರಿಂದ ಪಾಶ್ಚಾತ್ಯ ತತ್ವಶಾಸ್ತ್ರಜ್ಞರಾದ ಹರ್ಬಟ್ ಸ್ಪೆನ್ಸರ್, ಶೊಪೇನ್ ಹೋವರ್, ಜಾನ್ ಸ್ಟುವರ್ಟ್ ಮಿಲ್ ಮೊದಲಾದವರ ತರ್ಕಶಾಸ್ತ್ರಗಳನ್ನೆಲ್ಲ ಅಧ್ಯಯನ ಮಾಡಿ, ಭಾರತೀಯ ತತ್ವಶಾಸ್ತ್ರವನ್ನು ತೌಲನಿಕವಾಗಿ ಅಧ್ಯಯನ ಮಾಡಿದರು. ಈ ತೌಲನಿಕ ಅಧ್ಯಯನದಿಂದ ತನಗೆ ಸರಿ ಎನಿಸಿದ ವಿಚಾರವನ್ನು ಸ್ವೀಕರಿಸಿ ತಮ್ಮ ಜ್ಞಾನ ಸಾಗರವನ್ನು ವಿಶ್ವದೆದುರು ತೆರೆದಿಟ್ಟ ಕೀರ್ತಿ ವಿವೇಕಾನಂದರಿಗೆ ಸಲ್ಲುತ್ತದೆ.

ಭಾರತದಲ್ಲಿ ಜನ್ಮತಳೆದ ಬೌದ್ಧದರ್ಶನವು ತವರು ನೆಲದಲ್ಲಿಯೇ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ. ಈಗ ತನ್ನ ನೆಲದಲ್ಲಿ ಕಂಡುಬರುವುದು ವಿವಿಧ ಬೌದ್ಧಪಂಥಗಳು ರೂಪಿಸಿಕೊಂಡು ಬಂದ ಸಿದ್ಧಾಂತಗಳಿಂದ ಎಂದರೆ ತಪ್ಪಾಗಲಾರದು. ಈ ಸಿದ್ಧಾಂತಗಳು ಮೂಲ ದಾರ್ಶನಿಕರ ವಿಚಾರಗಳನ್ನು ಮೀರುವ ಪ್ರಯತ್ನ ಮಾಡಿದರು ಕೂಡ ತಮ್ಮೊಳಗೆ ಮೂಲ ದಾರ್ಶನಿಕರ ಸಾರವನ್ನು ಅಡಗಿಸಿಕೊಂಡಿವೆ. ಇಲ್ಲದೆ ಹೋಗಿದ್ದರೆ ಬುದ್ಧ ಸಾಮಾನ್ಯ ಜನರಿಂದ ಬಹುದೂರ ಸರಿದು ಹೋಗುತ್ತಿದ್ದು. ಬುದ್ಧನ ಸಮಕಾಲಿನರಲ್ಲಿ ಬಹುತೇಕ ದಾರ್ಶನಿಕರು ಈ ಸಾಂಸ್ಥೀಕರಣ ಸ್ವರೂಪವನ್ನು ವಿರೋಧಿಸಿ ಪ್ರತಿಪಾದಿಸಿದ ದಾರ್ಶನಿಕ ವಿಚಾರಗಳು ಇಂದು ಜನಸಾಮಾನ್ಯರಿಂದ ಮಾತ್ರವಲ್ಲ ವಿದ್ಯಾವಂತ ವರ್ಗಕ್ಕೂ ಪರಿಚಯವಿಲ್ಲದಂತಾಗಿದೆ. ಬುದ್ಧನ ಕಾಲದಲ್ಲಿಯೇ ‘ಸಂಜಯವಿಲೆತ್ತ ಪುತ್ತ’ ಎಂಬ ದಾರ್ಶನಿಕನಿರುವ ಬಗ್ಗೆ ಉಲ್ಲೇಖಗಳು ಕಂಡುಬರುತ್ತವೆ. ಇವನು ತನ್ನ ಅನುಯಾಯಿಗಳಿಗೆ ಎಂದೂ ಸಾಂಪ್ರದಾಯಿಕ ದೀಕ್ಷೆ ನೀಡುತ್ತಿರಲಿಲ್ಲ. ಈತನ ಪ್ರಮುಖ ಆಶಯವೆಂದರೆ, “ಸುಮ್ಮನೆ ನನ್ನ ಮಾತು ಕೇಳಿರಿ ನನ್ನ ಉಪದೇಶದಂತೆ ಸಾಧನೆ ಮಾಡಬೇಕೆನಿಸಿದರೆ ಸದ್ದಿಲ್ಲದೆ ಸಾಧನೆ ಮಾಡಿರಿ. ಇದಕ್ಕೆಲ್ಲ ದೀಕ್ಷೆಯ ಆಚರಣೆಯ ಅಗತ್ಯವಿದೆಯೇ? ನಾನು ಹೀಗೆ ದೀಕ್ಷೆ ನೀಡುತ್ತ ಹೋದರೆ ನನ್ನ ಮಾತುಗಳು ಸಾಂಸ್ಥಿಕ ರೂಪ ಪಡೆದು ಬಿಡುತ್ತವೆ. ನನ್ನ ಹೆಸರು ಹೇಳಿಕೊಂಡು ತರಹಾವರಿ ಸಮುದಾಯಗಳು ಸಂಘಟಿತವಾಗಲು ಮುಂದಾಗುತ್ತವೆ.”[೧೯] ಇದು ಅತ್ಯಂತ ಅಪಾಯಕಾರಿ ಎಂಬುದು ಆತನ ನಿಲುವಾಗಿತ್ತು. ಹಾಗೆಯೇ ‘ವಿಮಲಕೀರ್ತಿ’ ಎಂಬ ದಾರ್ಶನಿಕನು ಸಹ ಬುದ್ಧನ ಸಮಕಾಲೀನ ಜ್ಞಾನಿಯಾಗಿದ್ದ. ಇವನು ತನ್ನ ನೇರ ಮಾತುಗಳಿಂದ ಆಘಾತವಾಗುವಂತೆ ದಾರ್ಶನಿಕತೆಯನ್ನು ವ್ಯಕ್ತಪಡಿಸುತ್ತಿದ್ದ. ಆದರೆ ಇವರ ವಿಚಾರಗಳು ಸಾಂಸ್ಥೀಕರಣದಿಂದ ಮುಕ್ತವಾಗಿದ್ದವು. ಆದ್ದರಿಂದ

ಇವರ ತರುವಾಯ ಇವರ ದಾರ್ಶನಿಕ ವಿಚಾರಗಳು ವಿಸ್ಮೃತಿಗೆ ಸರಿದಿವೆ. ಆದರೆ ಬುದ್ಧನ ವಿಚಾರಗಳು ಇಂದಿಗೂ ಜನಮಾನಸದಲ್ಲಿ ಉಳಿದಿರುವುದಕ್ಕೆ ಪ್ರಮುಖ ಕಾರಣವೆಂದರೆ, ತನ್ನ ಶಿಷ್ಯರಿಗೆ ದೀಕ್ಷೆ ನೀಡಿ ಸಕಲ ದಿಕ್ಕುಗಳಿಗೂ ತನ್ನ ವಿಚಾರಗಳನ್ನು ಪ್ರಚಾರಗೊಳಿಸುವ ಕಾರ್ಯ ಮಾಡಿರುವುದಾಗಿದೆ. ಈ ಶಿಷ್ಯರುಗಳ ಗುಂಪುಗಳ ಮುಂದೆ ಹಲವು ಪಂಥಗಳಾಗಿ ರೂಪುಗೊಂಡಿವೆ.

ಮೂಲತಃ ಬುದ್ಧನ ದರ್ಶನವು ಧರ್ಮದ ಪರಿಕಲ್ಪನೆಯನ್ನು ಮೀರಿದ ವೈಚಾರಿಕತೆಯನ್ನು ಮೈಗೂಡಿಸಿಕೊಂಡಿತ್ತು. ಈ ವೈಚಾರಿಕ ದರ್ಶನವು ಹಲವು ಪಂಥಗಳಾಗಿ ತನ್ನ ಶಾಖೆಗಳನ್ನು ತೆರೆದುಕೊಂಡಿದೆ. ಈ ಎಲ್ಲ ಪಂಥಗಳ ಒಟ್ಟು ಸಮೂಹವೇ 'ಬೌದ್ಧಧರ್ಮ' ಎಂಬ ಪರಿಕಲ್ಪನೆಯ ಅಡಿಯಲ್ಲಿ ಮುಂದುವರೆದಿದೆ. ಶ್ರೀಮತಿ ಎಂ.ಗೈಜರ್ ಮತ್ತು ಪ್ರೊ. ಡಬ್ಲ್ಯೂ, ಗೈಜರ್ ಅವರು ಧರ್ಮಗಳ ಕುರಿತು ವಿಶ್ಲೇಷಿಸುವ ಸಂದರ್ಭದಲ್ಲಿ 'ಬೌದ್ಧಧರ್ಮ' ಎಂಬ ಪದದ ಕುರಿತು ತಮ್ಮ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ಇವರು "ಬೌದ್ಧಧರ್ಮದಲ್ಲಿ ನಿರ್ದಿಷ್ಟವಾಗಿ ಬಳಕೆಯಾಗಿರುವ 'ಧರ್ಮ' ಎಂಬುದು ತಾಂತ್ರಿಕ ಪದ"[೨೦] ಎಂಬುದಾಗಿ ತಿಳಿಸಿದ್ದಾರೆ. ಇವರ ಪ್ರಕಾರ ಬೌದ್ಧ ಎನ್ನುವುದು ಒಂದು ದರ್ಶನವಾಗಿ ಕಂಡುಬರುತ್ತದೆ. ಈ ದರ್ಶನದ ಪ್ರವರ್ತಕನಾಗಿ ಬುದ್ಧ ಕಂಡುಬರುತ್ತಾನೆ. ಇಲ್ಲಿ 'ಬೋಧಿ' ಎಂಬ ಪದದಿಂದ ಸಿದ್ದಾರ್ಥನಿಗೆ ಬುದ್ಧ ಎಂಬ ಹೆಸರು ಬಂದಿದೆ. 'ಬೋಧಿ' ಎಂದರೆ ಸರಿಯಾದ ಅರಿವು, ತಿಳುವಳಿಕೆ ಎಂದರ್ಥ. ಅಂತಹ ತಿಳುವಳಿಕೆ ಪಡೆದವನೆ ಬುದ್ಧ. ಆತ ಪ್ರಚಾರಪಡಿಸಿದ ದರ್ಶನವೇ ಬೌದ್ಧಧರ್ಮವಾಗಿ ಮುಂದುವರೆದಿದೆ. ಈ ಧರ್ಮವನ್ನು 'ತಥಾಗತ' ಧರ್ಮವೆಂದೂ ಕರೆಯುತ್ತಾರೆ. 'ತಥಾ' ಎಂದರೆ ಸತ್ಯ, 'ಗತ' ಎಂದರೆ ಹೋದವನು. ಹಾಗೇ ಸತ್ಯದ ಕಡೆ ಹೋದವನು ಬುದ್ಧನಾಗಿದ್ದಾನೆ. ಈತನು ತಾನು ಕಂಡ ಸತ್ಯವನ್ನು ಜಗತ್ತಿಗೆ ಸಾರಿದನು.

ಓಶೋ, ಬೌದ್ಧಧರ್ಮವನ್ನು 'ಧರ್ಮವಲ್ಲದ ಧರ್ಮ' ಎಂದು ಗುರುತಿಸಿದ್ದಾರೆ. ಇವರು "ನನ್ನ ಮಟ್ಟಿಗೆ ಬೌದ್ಧಧರ್ಮ ಬುದ್ಧನೊಡನೆಯೇ ಸತ್ತು ಹೋಯಿತು. ಈಗ ಬೌದ್ಧಧರ್ಮ ಎಂದು ಏನು ಉಳಿದಿದೆಯೋ ಅದಕ್ಕೂ ಬುದ್ಧನಿಗೂ ಏನು ಸಂಬಂಧವಿಲ್ಲ"[೨೧] ಎಂಬುದಾಗಿ ತಿಳಿಸಿದ್ದಾರೆ. ಇಂದು ಅಸ್ತಿತ್ವದಲ್ಲಿರುವ ಧರ್ಮವು ಬುದ್ಧನ ಮೂಲ ಆಶಯಗಳಿಗೆ ವಿರುದ್ಧವಾಗಿದೆ. ಆದ್ದರಿಂದ ಓಶೋ ಬುದ್ಧನೊಂದಿಗೆ ಬೌದ್ಧಧರ್ಮ ನಶಿಸಿ ಹೋಯಿತು ಎಂದು ಹೇಳಿದ್ದಾರೆ. ಇಂದು ಬುದ್ಧನ ದಾರ್ಶನಿಕ ನಿಲುವುಗಳು ಧರ್ಮದ ಸಾಂಸ್ಥೀಕರಣ ಸ್ವರೂಪವನ್ನು ಪಡೆದು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿವೆ. ಆದ್ದರಿಂದ ಮಾರ್ಕ್ಸ್‌ವಾದಿಯಾದ ಓಶೋಗೆ ಈ ಧರ್ಮದ ಕ್ರಮವು ಮೂಲ ಆಶಯಗಳಿಗೆ ಭಿನ್ನವಾಗಿ ಕಂಡುಬರುತ್ತವೆ. ಹಾಗಾಗಿ ಇಂದಿನ ಬೌದ್ಧಧರ್ಮದ ಕ್ರಮವನ್ನು ಬುದ್ಧನ ಧರ್ಮದಿಂದ ಬಿಡಿಸಿ ನೋಡುವ ಪ್ರಯತ್ನ ಇವರಲ್ಲಿ ಕಂಡುಬರುತ್ತದೆ.

ಭಾರತದಲ್ಲಿ ಪ್ರಮುಖವಾಗಿ ಎರಡು ನೆಲೆಗಳಲ್ಲಿ ಬುದ್ಧನನ್ನು ಸ್ವೀಕರಿಸುತ್ತಿರುವುದು ಕಂಡುಬರುತ್ತದೆ. ಒಂದು, ಬುದ್ಧನ ವಿಚಾರಗಳಿಂದ ಪ್ರೇರಿತಗೊಂಡು, ಬುದ್ಧನ ವಿಚಾರಗಳನ್ನು ಅನುಸರಿಸುತ್ತಿರುವ

ವೈಚಾರಿಕ ವರ್ಗ. ಈ ವರ್ಗವು ಆಧುನಿಕ ಶಿಕ್ಷಣದಿಂದ ಜಾಗೃತಗೊಂಡಿದ್ದು, ವಿಚಾರವಾದವನ್ನು ಮೈಗೂಡಿಸಿಕೊಂಡಿದೆ. ಇವರಿಗೆ ಬೌದ್ಧಧರ್ಮದಲ್ಲಿನ ಆಚಾರಗಳಿಗಿಂತ ವಿಚಾರವು ಪ್ರಮುಖವಾಗಿ ಕಂಡುಬರುತ್ತದೆ. ಈ ವರ್ಗವು ಬುದ್ಧನ ವಿಚಾರಧಾರೆಗಳ ಮೂಲಕ ವಿಸ್ಮೃತಿಗೆ ಗುರಿಯಾಗಿರುವ ಹಾಗೂ ವೈದಿಕ ಪುರೋಹಿತಶಾಹಿಯಿಂದ ಶೋಷಣೆಗೆ ಒಳಗಾಗಿರುವ ತಮ್ಮ ಸಮುದಾಯದ ಜನಾಂಗವನ್ನು ವಿಮೋಚನೆಯತ್ತ ಕೊಂಡೊಯ್ಯುವ ಚಿಂತನೆಗಳನ್ನು ವ್ಯಕ್ತಪಡಿಸುತ್ತಿವೆ. ಬುದ್ಧನ ಈ ವಿಚಾರವಾದವು ಕೇವಲ ಭಾರತೀಯರಿಗೆ ಮಾತ್ರವಲ್ಲದೆ, ಜಾಗತಿಕ ಮಟ್ಟದಲ್ಲಿಯೂ ಗಮನ ಸೆಳೆಯುತ್ತಿರುವುದು ಕಂಡುಬರುತ್ತದೆ. ಜಗತ್ತಿನ ಹಲವು ಚಿಂತಕರು ವಿಶ್ವಶಾಂತಿಯನ್ನು ಬಯಸಿ ಬುದ್ಧನತ್ತ ಮುಖ ಮಾಡುತ್ತಿರುವುದು ಕಂಡುಬರುತ್ತದೆ. ಎರಡು, ಹಿಂದೂ ಧರ್ಮದಲ್ಲಿನ ಜಾತಿಯ ಅಪಮಾನವನ್ನು ಸಹಿಸದ ವರ್ಗಗಳು ಬಿಡುಗಡೆಯನ್ನು ಬಯಸಿ ಬೌದ್ಧಧರ್ಮದತ್ತ ಮುಖ ಮಾಡುತ್ತಿದ್ದಾರೆ. ಇವರಿಗೆ ಬುದ್ಧನ ವಿಚಾರಗಳಿಗಿಂತ ಆಚಾರವು ಪ್ರಮುಖವಾಗಿ ಕಂಡುಬರುತ್ತದೆ. ಇವರಲ್ಲಿ ಬಹುತೇಕ ಜನಸಂಖ್ಯೆಯು ಅಂಬೇಡ್ಕರ್ ವಿಚಾರಧಾರೆಗಳಿಂದ ಪ್ರಭವಿತರಾಗಿರುವುದು ಕಂಡುಬರುತ್ತದೆ. ಆದ್ದರಿಂದ ಈ ವರ್ಗವು ಪ್ರತಿ ವರ್ಷ ಅಂಬೇಡ್ಕರ್ ಬೌದ್ಧದೀಕ್ಷೆ ತೆಗೆದುಕೊಂಡ ದಿನದಂದು ಹಾಗೂ ಬೌದ್ಧಪೂರ್ಣಿಮೆಯಂದು ಬೌದ್ಧಧರ್ಮಕ್ಕೆ ಮತಾಂತರವಾಗುವುದು ಕಂಡುಬರುತ್ತದೆ. ಈ ಕ್ರಿಯೆಯ ಹಿಂದೆ ದಲಿತ ಪರ ಸಂಘಟನೆಗಳ ಕಾರ್ಯವೈಖರಿಯು ಪ್ರಮುಖವಾಗಿದೆ. ಈ ಎರಡನೇ ವರ್ಗವು ಬುದ್ಧನನ್ನು ವಿಚಾರವಾದಿಯಾಗಿ ನೋಡುವುದಕ್ಕಿಂತ ದೇವರಾಗಿ ಸ್ವೀಕರಿಸುತ್ತಿರುವುದು ಕಂಡುಬರುತ್ತದೆ. ಆದ್ದರಿಂದ ಈ ವರ್ಗವು ಹಿಂದೂಧರ್ಮದ ಮೂರ್ತಿ ಪೂಜೆಯನ್ನು ಇಲ್ಲಿಯು ಮುಂದುವರೆಸುತ್ತದೆ.

ಈ ಎರಡನೇ ನೆಲೆಯ ವರ್ಗವು ಭಾರತದ ಆದಿಮ ಜನಾಂಗವಾಗಿದೆ. ಈ ವರ್ಗಗಳು ಅನಾದಿಕಾಲದಿಂದಲೂ ದೇವರ ಪರಿಕಲ್ಪನೆಯನ್ನು ತಮ್ಮ ಬದುಕಿನೊಂದಿಗೆ ಪಾಲಿಸಿಕೊಂಡು ಬಂದಿದ್ದಾರೆ. ಧರ್ಮ ಎಂಬುದು ಇವರಿಗೆ ಬಹುದೂರ. ದೇವರನ್ನು ಮಾತ್ರ ತಮ್ಮ ಬದುಕಿನ ಒಂದು ಅಂಗವಾಗಿ ಕಾಪಾಡಿಕೊಂಡು ಬಂದಿದ್ದಾರೆ. ಆದರೆ ಬೌದ್ಧಧರ್ಮಕ್ಕೆ ಮತಾಂತರಗೊಂಡಾಗ ಬುದ್ಧನನ್ನು ಸಹ ದೇವರಾಗಿಯೇ ಸ್ವೀಕರಿಸುತ್ತಿರುವುದು ಕಂಡುಬರುತ್ತದೆ. ಈ ವರ್ಗಗಳಿಗೆ ಬೌದ್ಧಧರ್ಮದ ಕುರಿತು ಸರಿಯಾದ ತಿಳುವಳಿಕೆಯ ಕೊರತೆ ನಮ್ಮಲ್ಲಿ ಕಂಡುಬರುತ್ತದೆ. ಭಾರತದಲ್ಲಿ ಈ ಬೆಳವಣಿಗೆಯ ಕ್ರಮದ ನಡುವೆಯೇ ಉನ್ನತ ವರ್ಗದ ಪುರೋಹಿತಶಾಹಿ ಮನಸುಗಳು ತಮ್ಮ ಅಸ್ತಿತ್ವದ ಉಳಿವಿಗಾಗಿ ತಡಕಾಡುತ್ತಿರುವುದು ಕಂಡುಬರುತ್ತದೆ. ಈ ಬಲಪಂಥೀಯ ವರ್ಗವು ತಮ್ಮ ಅಸ್ಮಿತೆಯ ಉಳಿವಿಗಾಗಿ ಬುದ್ಧನೊಂದಿಗೆ ಅನುಸಂಧಾನಕ್ಕೂ ಮುಂದಾಗಿದೆ. ಇವರು ಪ್ರತಿಪಾದಿಸುವಂತೆ "ಬೌದ್ಧ ಸಿದ್ಧಾಂತದ ಮೋಕ್ಷದ ಕಲ್ಪನೆಗೂ, ಅದ್ವೈತ ಸಿದ್ಧಾಂತದ ಮೋಕ್ಷ ಕಲ್ಪನೆಗೂ, ತುಂಬ ಸಾಮ್ಯ ಉಂಟು. ಅದ್ವೈತದ ಮೋಕ್ಷದಲ್ಲಿ ಕಾಣ್ಕೆಯೂ ಇಲ್ಲ, ಕಾಣುವವನೂ ಇಲ್ಲ. ಕಂಡದ್ದೂ ಇಲ್ಲ, ಕೇಳುವವನೂ ಇಲ್ಲ. ಕೇಳಿಸಿದ್ದು ಇಲ್ಲ. ಬರಿಯ ಅಗೋಚರವಾದ ಬ್ರಹ್ಮವೊಂದೆ ಇರುತ್ತದೆ. ಬೌದ್ಧ ಸಿದ್ಧಾಂತದಲ್ಲಿ ಶೂನ್ಯತೆ ಮಾತ್ರವೆ ಇರುವಂತೆ. ಹೀಗೆ ಎಲ್ಲ ಇಂದ್ರಿಯಗಳಿಗೂ ಅತೀತವಾದ ಸ್ಥಿತಿ

ಇದು. ಇದೇ ನಿಜವಾದ ಸ್ಥಿತಿ"[೨೨] ಎಂಬುದಾಗಿ ಬೌದ್ಧದರ್ಶನವನ್ನು ತನ್ನೊಳಗೆ ಬೆಸೆದುಕೊಳ್ಳುವ ಕ್ರಮಕ್ಕೆ ಮುಂದಾಗಿದ್ದಾರೆ.

ವಿಶ್ವಶಾಂತಿಯನ್ನು ಬಯಸಿ ಜನ್ಮತಳೆದ ಬುದ್ಧನ ದಾರ್ಶನಿಕ ವಿಚಾರಧಾರೆಗಳು ನಂತರದ ದಿನಗಳಲ್ಲಿ ಹಲವು ಪಂಥಗಳಾಗಿ, ಧರ್ಮವಾಗಿ ಬೆಳೆದುಬಂದಿದೆ. ಆದರೆ ಈ ಬೌದ್ಧಧರ್ಮ ಭಾರತದ ಸಂದರ್ಭದಲ್ಲಿ ಇಂದು ಜಾತಿಯೊಳಗೆ ಉಪಜಾತಿಯಾಗುವ ಸೀಮಿತ ನೆಲೆಯಲ್ಲಿ ಸಿಲುಕಿಕೊಂಡಿದೆ. ಹಿಂದೂ ಧರ್ಮದಲ್ಲಿನ ಅಸಮಾನತೆಯಿಂದ ಬೇಸತ್ತ ಬಿ.ಆರ್. ಅಂಬೇಡ್ಕರ್‌ರವರು ತಮ್ಮ ಕೊನೆಯ ದಿನಗಳಲ್ಲಿ ಭಾರತದ ತವರು ಧರ್ಮವಾದ ಬೌದ್ಧಧರ್ಮಕ್ಕೆ ಮತಾಂತರಗೊಂಡರು. ನಂತರದಲ್ಲಿ ಇವರ ಪ್ರೇರಣೆಯಿಂದ ಲಕ್ಷಾಂತರ ಜನರು ಬೌದ್ಧಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾರೆ. ಇಲ್ಲಿ ಅಂಬೇಡ್ಕರರ ಪ್ರಮುಖ ಉದ್ದೇಶ ಜಾತಿ ಅಸಮಾನತೆಯಿಂದ ಹೊರಬಂದು ಸ್ವಾಭಿಮಾನದ ಬದುಕನ್ನು ರೂಪಿಸಿಕೊಳ್ಳುವುದಾಗಿತ್ತು. ಆದ್ದರಿಂದ ಬೌದ್ಧಧರ್ಮವನ್ನು ಅಪ್ಪಿಕೊಂಡರು. ಆದರೆ ಇಂದಿನ ದಲಿತ ಸಂಘಟನೆ, ಹೋರಾಟ, ಚಳವಳಿಗಳ ಸ್ವಾರ್ಥ ರಾಜಕಾರಣದಿಂದ ಬುದ್ಧ ಕೇವಲ ಒಂದು ಜಾತಿಯ ಪ್ರತಿಮೆಯಾಗುತ್ತಿರುವ ಸನ್ನಿವೇಶವು ಸೃಷ್ಟಿಯಾಗುತ್ತಿರುವ ಆತಂಕಕಾರಿ ಬೆಳವಣಿಗೆ ಕಂಡುಬರುತ್ತಿದೆ. ಈ ಬೆಳವಣಿಗೆಯನ್ನು ಕುರಿತು ವಿಶಾಲ ಎಡಪಂಥೀಯ ಚಿಂತಕರು ವಿಷಾದವನ್ನು ವ್ಯಕ್ತಪಡಿಸುವುದು ಕಂಡುಬರುತ್ತದೆ. "ಹೊಲೆಯರಲ್ಲಿ ಕೆಲವರು ಛಲವಾದಿ ಸಂಘ ಸ್ಥಾಪಿಸಿ ಹೊಲೆಯರನ್ನು ಮತ್ತೊಂದು ಗೊಂದಲಕ್ಕೆ ನೂಕಿದ್ದಾರೆ. ಇದಲ್ಲದೆ ಈ ಮೂರ್ಖರು ತಮ್ಮ ಸಂಘದ ಲಾಂಛನಕ್ಕೆ ಬುದ್ಧನ ಚಿತ್ರವನ್ನೇ ಬಳಸಿಕೊಂಡಿದ್ದಾರೆ. ಆ ಮೂಲಕ ಬುದ್ಧನನ್ನೇ ಛಲವಾದಿಯನ್ನಾಗಿ ಮಾಡಿದ್ದಾರೆ"[೨೩] ಎಂಬ ಮಾತುಗಳು ಕೇಳಿಬರುತ್ತಿದೆ. ಬಾಬಾಸಾಹೇಬರು ದಲಿತರೆಲ್ಲ ಜಾಗೃತರಾಗಲು ಬೌದ್ಧಧರ್ಮದತ್ತ ತೆರಳಿದರು. ಆದರೆ ಅದೇ ಬೌದ್ಧಧರ್ಮವು ದಲಿತರಲ್ಲಿ ಒಂದು ಜಾತಿಗೆ ಸೀಮಿತವಾಗಿರುವುದರಿಂದ ಇನ್ನುಳಿದ ತಳಸಮುದಾಯದ ಜಾತಿಗಳು ಬುದ್ಧನನ್ನು ಕೂಡ ಅನ್ಯತ ಭಾವದಿಂದ ಕಾಣುವಂತಾಗಿದೆ. ಇದರ ಪರಿಣಾಮವಾಗಿ ಕರ್ನಾಟಕದಲ್ಲಿ ಹೊಲೆಯರು ಬುದ್ಧನನ್ನು ಹಾಗೂ ಅಂಬೇಡ್ಕರರನ್ನು ತಮ್ಮ ಪ್ರತಿಮೆಯಾಗಿಟ್ಟುಕೊಂಡಿದ್ದು, ಮಾದಿಗ ಸಮುದಾಯವು ಬಾಬು ಜಗಜೀವನರಾಮ್ ಹಾಗೂ ಬಸವಣ್ಣ, ಅರಳಯ್ಯರನ್ನು ಪ್ರತಿಮೆಯಾಗಿಟ್ಟುಕೊಂಡು ತಮ್ಮ ಹೋರಾಟಕ್ಕೆ ಮುಂದಾಗಿರುವುದು ಕಂಡುಬರುತ್ತದೆ. ಇಲ್ಲಿ ಈ ಎರಡು ದಲಿತ ಜಾತಿಗಳಲ್ಲೇ ಇಂತಹ ಬಿರುಕುಗಳು ಕಂಡುಬಂದರೆ, ಉಳಿದ ದಲಿತ ಸಮುದಾಯಗಳು ಬುದ್ಧನಿಗೂ ನಮಗೂ ಯಾವುದೇ ಸಂಬಂಧವಿಲ್ಲವೆಂಬಂತೆ ಮೂಗು ಮುರಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಬಾಬಾಸಾಹೇಬರ ತತ್ವ-ಚಿಂತನೆಗಳಿಗೆ ದ್ರೋಹವೆಸಗಿದಂತಾಗುತ್ತದೆ. ದಲಿತ ಸಮುದಾಯದಲ್ಲಿ ಸೃಷ್ಟಿಯಾಗುತ್ತಿರುವ ಈ ಸೂಕ್ಷ್ಮ ಬಿರುಕುಗಳನ್ನೇ ಬಳಸಿಕೊಂಡು ಸನಾತನವಾದಿಗಳು ತಮ್ಮ ಅಟ್ಟಹಾಸವನ್ನು ಮೆರೆಯುವ ಮತ್ತು ದಲಿತರನ್ನು ಹತ್ತಿಕ್ಕುವ ತಂತ್ರಗಳನ್ನು ರೂಪಿಸಿಕೊಳ್ಳುವುದಕ್ಕೆ ವೇದಿಕೆಯೊಂದನ್ನು ರೂಪಿಸಿಕೊಟ್ಟಂತಾಗುತ್ತದೆ. ಆದ್ದರಿಂದ ವಿಚಾರವಂತ ವರ್ಗವು ಈ ಸೂಕ್ಷ್ಮತೆಗಳಿಂತ ಎಚ್ಚೆತ್ತುಕೊಳ್ಳಬೇಕಾದ ಅನಿವಾರ್ಯತೆಯಿದೆ.

ಬುದ್ಧದರ್ಶನ ತನ್ನ ಸರಳ ವಿಚಾರಗಳಿಂದ ಜಗತ್ತಿನ ನಾನಾ ಭಾಗಗಳಲ್ಲಿ ಅಸ್ತಿತ್ವವನ್ನು ಪಡೆದುಕೊಂಡಿದೆ. ನಾಲ್ಕು ಆರ್ಯಸತ್ಯಗಳು ಹಾಗೂ ಅಷ್ಟಾಂಗ ಮಾರ್ಗಗಳ ಮೂಲಕ ಬುದ್ಧನ ದರ್ಶನ ಬೆಳೆದುಬಂದಿದೆ. ಆ ಮೂಲಕ 'ಸ್ವೀಕಾರ ಮತ್ತು ನಿರಾಕರಣ' ತತ್ವಗಳನ್ನು ಅಳವಡಿಸಿಕೊಂಡು ಬೌದ್ಧದರ್ಶನ ತನ್ನ ವಿಕಾಸವನ್ನು ಕಂಡುಕೊಂಡಿದೆ. ಅಲ್ಲಮನು ಸಹ ಈ ಸ್ವೀಕಾರ ಮತ್ತು ನಿರಾಕರಣ ತತ್ವಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಶೂನ್ಯತ್ವವನ್ನು ಪ್ರತಿಪಾದನೆ ಮಾಡಿರುವುದು ಕಂಡುಬರುತ್ತದೆ. ನಂತರದಲ್ಲಿ ಹಲವಾರು ದಾರ್ಶನಿಕರು ಕೂಡ ಬುದ್ಧನ ಈ ವಿಚಾರಗಳಿಂದ ಪ್ರಭಾವಿತರಾಗಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತ ಬಂದಿದ್ದಾರೆ. ಆಧುನಿಕ ಸಂದರ್ಭದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರರು ಕೂಡ ಬೌದ್ಧಧರ್ಮದಲ್ಲಿನ ಈ ಸರಳ ವಿಚಾರಗಳಿಂದ ಪ್ರಭಾವಿತರಾಗಿ ಬೌದ್ಧಧರ್ಮಕ್ಕೆ ಮತಾಂತರಗೊಂಡರು. ಆದರೆ ಅದೇ ಅಂಬೇಡ್ಕರ್ ಅನುಯಾಯಿಗಳ ಸ್ವಾರ್ಥದಿಂದ ಮತ್ತೊಂದು ಮೂಲಭೂತವಾದ ಸೃಷ್ಟಿಯಾಗುತ್ತಿರುವ ಆತಂಕಕಾರಿ ಬೆಳವಣಿಗೆಯು ಕಂಡುಬರುತ್ತಿದೆ. ಆದರೆ ಪ್ರಸ್ತುತದಲ್ಲಿ ಹಲವಾರು ವಿಚಾರವಾದಿಗಳು ಈ ಜಾತಿಯತೆಯನ್ನು ಮೀರಿದ ನೆಲೆಯಲ್ಲಿ ಬುದ್ಧನ ವಿಚಾರಗಳ ಮೊರೆ ಹೋಗುತ್ತಿದ್ದಾರೆ. ಪ್ರಸ್ತುತದಲ್ಲಿನ ಹಲವಾರು ಸಮಸ್ಯೆಗಳಿಗೆ ಬುದ್ಧನ ವಿಚಾರಗಳಿಂದ ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನಗಳು ಸಹ ನಡೆಯುತ್ತಿವೆ. ಆದರೆ ಸ್ವಾರ್ಥ ಹೋರಾಟ, ಸಂಘಟನೆಗಳ ರಾಜಕೀಯವಿರುವಲ್ಲಿ ಬುದ್ಧನ ವಿಚಾರಧಾರೆಗಳು ಸಾಂಸ್ಥೀಕರಣಗೊಳ್ಳುವ ಸನ್ನಿವೇಶವು ನಿರ್ಮಾಣವಾಗುತ್ತಿದೆ.

೩. ಆಯಾಮಗಳು

ಪ್ರಸ್ತುತ ಸಂಶೋಧನೆಯ ಮೂರನೆಯ ಪ್ರಮುಖ ಪರಿಕಲ್ಪನೆಯಾಗಿರುವ 'ಆಯಾಮ' ಎಂಬ ಪದವು ಉದ್ದ, ನೀಳ, ವಿಸ್ತಾರ, ಹರವು, ಸಂಯಮ, ನಿಯಮನ ಎಂಬ ಅರ್ಥಗಳನ್ನು ಒಳಗೊಂಡಿದೆ. ಪ್ರಸ್ತುತ ಅಧ್ಯಯನ ವಿಷಯವಾಗಿರುವ ಬೌದ್ಧದರ್ಶನವನ್ನು ವಿಭಿನ್ನ ತಾತ್ವಿಕ ಆಯಾಮಗಳ ಮೂಲಕ ಅಧ್ಯಯನಕ್ಕೆ ಗುರಿಪಡಿಸಲಾಗುವುದು. ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧದರ್ಶನದ ಕುರಿತಾಗಿ ಹಲವಾರು ಚರ್ಚೆಗಳು ನಡೆದಿವೆ. ಈ ಚರ್ಚೆಗಳ ನೆಲೆಗಳನ್ನು ಈ ಆಯಾಮ ಪರಿಕಲ್ಪನೆಯ ಅಡಿಯಲ್ಲಿ ಗುರುತಿಸಲಾಗುವುದು.

ಪ್ರಸ್ತುತ ಅಧ್ಯಯನದಲ್ಲಿ ಬೌದ್ಧದರ್ಶನವು ಕೇಂದ್ರವಾಗಿರುತ್ತದೆ. ಅದರ ಸುತ್ತ ಹಲವಾರು ಚಿಂತನೆಗಳು ಕನ್ನಡ ವಿಚಾರ ಸಾಹಿತ್ಯದಲ್ಲಿ ಕಂಡುಬರುತ್ತವೆ. ಈ ಚಿಂತನೆಗಳು ತನ್ನದೆ ಆದ ತಾತ್ವಿಕತೆಯನ್ನು ಮೈಗೂಡಿಸಿಕೊಂಡಿರುತ್ತವೆ. ಈ ಬೌದ್ಧ ಚಿಂತನೆಗಳ ಹಿಂದಿನ ಉದ್ದೇಶವನ್ನು ಇಲ್ಲಿ ಗುರುತಿಸಲಾಗುವುದು. ಜಾಗತಿಕ ಧರ್ಮಗಳಲ್ಲಿ ಒಂದಾಗಿರುವ ಬೌದ್ಧಧರ್ಮವು ಆಧುನಿಕ ಸಂದರ್ಭದಲ್ಲಿ ಹೆಚ್ಚು ಹೆಚ್ಚು ಚರ್ಚೆಗೆ ಗುರಿಯಾಗುತ್ತಿದೆ. ಬೌದ್ಧದರ್ಶನವು ಕೇವಲ ಧರ್ಮವಾಗಿ ಮಾತ್ರವಲ್ಲದೆ, ಹಲವಾರು ವಾಸ್ತವದ ಸಮಸ್ಯೆಗಳಿಗೆ ಹೇಗೆ ಸ್ಪಂದಿಸುತ್ತಿವೆ ಎಂಬುದಾಗಿ ಹಲವಾರು ಚಿಂತಕರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಈ ಚಿಂತನೆಗಳ ಹಿಂದಿನ ಹರವು ಅಥವಾ ವಿಸ್ತಾರವಾದ ಪರಿಕಲ್ಪನೆಯನ್ನು ತಿಳಿಯುವುದು ಪ್ರಸ್ತುತ ಅಧ್ಯಯನ ಉದ್ದೇಶವಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಪ್ರಮುಖವಾಗಿ ಸಾಮಾಜಿಕ ಆಯಾಮಗಳು, ಧಾರ್ಮಿಕ ಆಯಾಮಗಳು, ರಾಜಕೀಯ ಆಯಾಮಗಳು ಹಾಗೂ ಆರ್ಥಿಕ ಆಯಾಮಗಳು ಎಂಬ ಪರಿಕಲ್ಪನೆಗಳ ಅಡಿಯಲ್ಲಿ ಕನ್ನಡದ ವಿವಿಧ ಚಿಂತಕರ ವಿಚಾರಧಾರೆಗಳನ್ನು ಅಧ್ಯಯನಕ್ಕೆ ಗುರಿಪಡಿಸಲಾಗುವುದು. ಸಾಮಾಜಿಕ ಆಯಾಮದಲ್ಲಿ ಪ್ರಮುಖವಾಗಿ ಬೌದ್ಧದರ್ಶನವು ಜಾತಿಯತೆ, ಲಿಂಗ ಅಸಮಾನತೆ, ಸಾಮಾಜಿಕ ಅಸಮಾನತೆ ಮುಂತಾದ ವಿಷಯಗಳಿಗೆ ಹೇಗೆ ಸ್ಪಂದಿಸುತ್ತಿದೆ ಎಂಬುದರ ಬಗ್ಗೆ ಬಹುತೇಕ ವಿದ್ವಾಂಸರು ತಮ್ಮದೆ ಆದ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಈ ಚಿಂತಕರ ವಿಚಾರಧಾರೆಗಳ ಹಿಂದಿನ ನಿಲುವು ಹಾಗೂ ಧೋರಣೆಗಳನ್ನು ಈ ಆಯಾಮಗಳ ಅಡಿಯಲ್ಲಿ ಅಧ್ಯಯನಕ್ಕೆ ಗುರಿಪಡಿಸಲಾಗುವುದು. ಧಾರ್ಮಿಕ ಆಯಾಮದಲ್ಲಿ ಬೌದ್ಧದರ್ಶನ ಮತ್ತು ಧರ್ಮದ ನಡುವಿನ ಭಿನ್ನತೆಗಳು, ಧರ್ಮದ ಸಾಂಸ್ಥೀಕರಣ ಸ್ವರೂಪ, ಬೌದ್ಧಧರ್ಮದ ಪ್ರಮುಖ ತಾತ್ವಿಕತೆ, ಆಧುನಿಕ ಸಂದರ್ಭದಲ್ಲಿ ಬೌದ್ಧಧರ್ಮದ ಪ್ರಸ್ತುತತೆಯ ಕುರಿತ ಚಿಂತನೆಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗುವುದು. ರಾಜಕೀಯ ಆಯಾಮಗಳ ಕುರಿತು ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುವ ವಿಚಾರಗಳ ತಾತ್ವಿಕತೆಯನ್ನು ಇಲ್ಲಿ ಅಧ್ಯಯನ ಮಾಡಲಾಗುವುದು. ಬುದ್ಧ ಪ್ರಭುತ್ವದೊಂದಿಗೆ ಹೊಂದಿರುವ ಸಂಬಂಧ, ಅನಂತರದಲ್ಲಿ ರಾಜಮಹಾರಾಜರಿಂದ ಈ ಧರ್ಮಕ್ಕೆ ಸಿಕ್ಕ ಪ್ರೋತ್ಸಾಹ, ವೈದಿಕ ಧರ್ಮದ ರಾಜಕಾರಣದಿಂದ ಬೌದ್ಧಧರ್ಮಕ್ಕೆ ಆದ ನಷ್ಟ, ಪ್ರಸ್ತುತ ರಾಜಕೀಯ ವಾತವರಣದಲ್ಲಿ ಬೌದ್ಧಧರ್ಮದ ಪಾತ್ರಗಳ ಕುರಿತು ಚಿಂತನೆಗಳನ್ನು ವಿವಿಧ ನೆಲೆಯಲ್ಲಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗುವುದು. ಹಾಗೆಯೇ ಬೌದ್ಧದರ್ಶನದ ನೆಲೆಯಲ್ಲಿ ವ್ಯಕ್ತವಾಗುವ ಆರ್ಥಿಕ ಚಿಂತನೆಗಳ ಹಿಂದಿನ ನೆಲೆಯನ್ನು ಇಲ್ಲಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗುವುದು.

ಆಯಾಮಗಳು ಎಂಬ ಪರಿಕಲ್ಪನೆಯ ಅಡಿಯಲ್ಲಿ ಬೌದ್ಧದರ್ಶನದ ಕುರಿತ ವಿಭಿನ್ನ ಚಿಂತನೆಗಳನ್ನು ಇಲ್ಲಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗುವುದು. ಬೌದ್ಧದರ್ಶನದ ಸುತ್ತ ತೆರೆದುಕೊಳ್ಳುವ ವಿಭಿನ್ನ ಚಿಂತನೆಗಳ ಹಿಂದಿನ ತಾತ್ವಿಕತೆಯೆ ಆಯಾಮವಾಗಿರುತ್ತದೆ. ಈ ಆಯಾಮವು ಏಕ ಪ್ರಕಾರವಾಗಿರುವುದಿಲ್ಲ. ಪ್ರತಿಯೊಂದು ಸಿದ್ಧಾಂತಗಳು, ವಾದಗಳು ತಮ್ಮದೇ ಆಯಾಮಗಳ ಅಡಿಯಲ್ಲಿ ವಿಚಾರಗಳನ್ನು ಬಿತ್ತರಿಸುತ್ತವೆ. ಅವುಗಳನ್ನು ಗುರುತಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿರುತ್ತದೆ.

ಕೊನೆ ಟಿಪ್ಪಣಿಗಳು

೧. ಎಂ.ಹಿರಿಯಣ್ಣ, ಭಾರತೀಯ ತತ್ವಶಾಸ್ತ್ರದ ಮೂಲಾಂಶಗಳು, ಅನು: ಕೆ.ಬಿ.ರಾಮಕೃಷ್ಣರಾವ್, ಪುಟ-೩೮,

೨. ವಿಜಯ್ ಪೂಣಚ್ಚ ತಂಬಂಡ (ಸಂ), ಭಾರತದ ಉಪಖಂಡದ ಆಧುನಿಕ ಪೂರ್ವಚರಿತ್ರೆ, ಪುಟ-೨೫೧,

೩. ಟಿ.ಎಸ್.ವೇಣುಗೋಪಾಲ್, ದೇವಿಪ್ರಸಾದ್ ಚಟ್ಟೋಪಾಧ್ಯಾಯ, ಪುಟ-೧೪.

೪. ಜಿ.ಆರ್.ತಿಪ್ಪೇರುದ್ರಸ್ವಾಮಿ (ಸಂ), ವಿಚಾರ ಸಾಹಿತ್ಯ ೨೦೦೦, ಪುಟ-೭೫.

೫. ದೂರಶಿಕ್ಷಣ ಮಾಲೆ-೫, ಕರ್ನಾಟಕ ಚಿಂತನ ಪರಂಪರೆ, ರಹಮತ್ ತರೀಕೆರೆ, ಪುಟ-೨

೬. ಸಾ.ಕೃ.ರಾಮಚಂದ್ರರಾವ್, ದರ್ಶನ ಪ್ರಬಂಧ, ಪುಟ-೯

೭. ಐ.ಜಿ.ಚೌಕಿಮಠ, ಅಲ್ಲಮಪ್ರಭುವಿನ ದಾರ್ಶನಿಕ ಮೀಮಾಂಸೆ, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಪುಟ-೮,

೮. ಎಂ.ಹಿರಿಯಣ್ಣ, ಭಾರತೀಯ ತತ್ವಶಾಸ್ತ್ರದ ಮೂಲಾಂಶಗಳು, ಪುಟ-೪೦

೯. ಸ್ವಾಮಿರಾಮ, ಹಿಮಾಲಯದ ಮಹಾತ್ಮರ ಸನ್ನಿಧಿಯಲ್ಲಿ, ಅನು: ಡಿ.ಕೆ.ಶ್ಯಾಮಸುಂದರ ರಾವ್, ಪುಟ-೩೦೪,

೧೦. ರಹಮತ್ ತರೀಕೆರೆ, ಕರ್ನಾಟಕದ ನಾಥಪಂಥ, ಪುಟ-೨೮

೧೧. ಗೊ.ರು.ರಾಮಚಂದ್ರಪ್ಪ (ಸಂ), ನೂರೊಂದು ಚಿಂತಕರು, ಪುಟ-೩೩

೧೨. ಜೆ.ಕೃಷ್ಣಮೂರ್ತಿ, ಹಿಂಸೆಯನ್ನು ಮೀರಿ, ಅನು: ಓ.ಎಲ್.ನಾಗಭೂಷಣಸ್ವಾಮಿ, ಪುಟ-೫೩,

೧೩. ಪ್ರಭುಶಂಕರ (ಸಂ), ವಿಶ್ವಧರ್ಮ ದರ್ಶನ, ಸಂಪುಟ-೧, ಪುಟ-೫,

೧೪. ಓಶೋ, ಬುದ್ಧ ಮತ್ತು ಪರಂಪರೆ, ಅನು: ಟಿ.ಎನ್.ವಾಸುದೇವಮೂರ್ತಿ, ಪುಟ-೧೪೬-೧೪೭

೧೫. ಡಿ.ಲಿಂಗಯ್ಯ, ಕಾವ್ಯಾನುಭವ, ಪುಟ-೬೬

೧೬. ಸಿ.ಪಿ.ಕೃಷ್ಣಕುಮಾರ್, ಆಯ್ದ ವಿಮರ್ಶ ಪ್ರಬಂಧಗಳು, ಪುಟ-೧೪೩

೧೭. ಎಂ.ಪಿ.ಮಂಜಪ್ಪ ಶೆಟ್ಟಿ (ಸಂ), ತುಂಬಿದ ಕೊಡ, ಪುಟ-೪೧೩

೧೮. ಸ್ವಾಮಿ ಪುರುಷೋತ್ತಮಾನಂದ, ಸ್ವಾಮಿವಿವೇಕಾನಂದರ ಸಮಗ್ರ ಜೀವನ ಚರಿತೆ, ಸಂಪುಟ-೧, ಪುಟ-೧೬೩

೧೯. ಓಶೋ, ಬುದ್ಧ ಮತ್ತು ಪರಂಪರೆ, ಪುಟ-೮೦

೨೦. ಥಿಯೋಡೋರ್ ಶೆರ್‌ಬಾತ್‌ಸ್ಕಿ, ಬೌದ್ಧಧರ್ಮದ ಕೇಂದ್ರ ಪರಿಕಲ್ಪನೆ, ಪುಟ-೧

೨೧. ಮೂಡ್ನಾಕೂಡು ಚಿನ್ನಸ್ವಾಮಿ (ಸಂ), ಮರಳಿಮನೆಗೆ, ಪುಟ-೪೪

೨೨. ಬನ್ನಂಜೆ ಗೋವಿಂದಾಚಾರ್ಯ, ಭಾರತೀಯ ತತ್ವಶಾಸ್ತ್ರದಲ್ಲಿ ನಿರ್ವಾಣ ಪರಿಕಲ್ಪನೆ, ಪುಟ-೮೪೨,

೨೩. ಹೊ.ಬ.ನಾಗಸಿದ್ಧಾರ್ಥ ಹೊಲೆಯಾರ್, ವಿಶ್ವರೂಪ, ಪುಟ-೧೩

* * *

ಅಧ್ಯಾಯ: ನಾಲ್ಕು

ಬೌದ್ಧ ದರ್ಶನದ ವಿವಿಧ ನೆಲೆಗಳು

ಅಧ್ಯಾಯ : ನಾಲ್ಕು

ಬೌದ್ಧ ದರ್ಶನದ ವಿವಿಧ ನೆಲೆಗಳು

೧. ಬುದ್ಧ ದರ್ಶನ ಮತ್ತು ಬುದ್ಧೋತ್ತರ ಬೌದ್ಧಧರ್ಮ

ಬುದ್ಧ ತನ್ನ ಸಮಕಾಲೀನ ಸಮಾಜದಲ್ಲಿ ತಳಮೂಲ ಸಂಸ್ಕೃತಿಗಳ ಮೇಲೆ ಪ್ರತಿಪಾದಿಸಿಕೊಂಡು ಬಂದ ಅಸಮಾನತೆಯನ್ನು ಮೀರುವ ನೆಲೆಯಲ್ಲಿ ತನ್ನ ತತ್ವ ಸಿದ್ಧಾಂತಗಳನ್ನು ಮಂಡಿಸಿದನು. ಬುದ್ಧನ ಈ ತತ್ವ–ಸಿದ್ಧಾಂತಗಳು ಯಾವುದೇ ದೈವಾಂಶ ಸಂಭೂತವಾದ ನೆಲೆಯವಾಗಿರಲಿಲ್ಲ. ಬದುಕಿನ ಸಹಜತೆಯನ್ನು ಪ್ರಾಕೃತಿಕ ನೆಲೆಯಲ್ಲಿ ಪ್ರತಿಪಾದಿಸುವಂತಿದ್ದವು. ಬುದ್ಧ ಯಾರ ಮೇಲೂ ತನ್ನ ವಾದವನ್ನು ಬಲವಂತದಿಂದ ಹೇರುವ ಕಾರ್ಯಕ್ಕೆ ಮುಂದಾಗಿರಲಿಲ್ಲ. ಆಯ್ಕೆ ಸ್ವಾತಂತ್ರ್ಯವನ್ನು ಜನತೆಯ ಮುಂದಿಡುತ್ತಿದ್ದ. ಹಾಗೆಯೇ ನಾವು ಹೇಳುವುದು ಸಾರ್ವಕಾಲೀಕ ಸತ್ಯವೆಂದು ಎಲ್ಲಿಯೂ ಹೇಳುತ್ತಿರಲಿಲ್ಲ. ನಾನು ಹೇಳುತ್ತಿರುವುದು ಈಗಿನ ಸತ್ಯ, ನಂತರದ ಕ್ಷಣ ಮತ್ತು ಕಾಲದಲ್ಲಿ ಬದಲಾಗುವ ಸಾಧ್ಯತೆಯಿದೆ. ಹೀಗಾಗಿ ಯಾವುದನ್ನು ಆಲೋಚಿಸದೆ ಒಪ್ಪಿಕೊಳ್ಳಬೇಡಿ ಎಂಬುದು ಬುದ್ಧನ ಧೋರಣೆಯ ಬಹುಮುಖ್ಯ ಸಾರವಾಗಿತ್ತು. ಆತನು ಧರ್ಮದ ಚೌಕಟ್ಟನ್ನು ಮೀರಿ ನಿಂತು ಮಾನವೀಯತೆ, ಕರುಣೆ, ಮೈತ್ರಿಯನ್ನು ಪ್ರತಿಪಾದಿಸಿದನು. ಸರ್ವಮಾನವರನ್ನು ಸಮಾನವಾಗಿ ಕಂಡು, ಸರ್ವರಲ್ಲೂ ಬುದ್ಧತ್ವವನ್ನು ಗುರುತಿಸಿದನು. ಜನ ಸಾಮಾನ್ಯರ ಬಳಿ ಹೋಗಿ, ಅವರಾಡುವ ಮಾತಿನಲ್ಲಿಯೇ ತಾನು ಕಂಡುಕೊಂಡ ಸತ್ಯವನ್ನು ದರ್ಶನ ಮಾಡಿಸಿದನು. ಹೀಗಾಗಿ ವರ್ಣಧರ್ಮದಿಂದ ಬಸವಳಿದಿದ್ದ ಜನತೆಗೆ ಬುದ್ಧನ ಧರ್ಮವು ಅತ್ಯಂತ ಅಪ್ಯಾಯಮಾನವಾಯಿತು.

ಬುದ್ಧ ತಾನು ಜೀವಿತವಿದ್ದ ಕಾಲದಲ್ಲಿ ತನ್ನದು ಬಂದು ಧರ್ಮವೆಂದು ಎಲ್ಲಿಯೂ ಹೇಳಿಕೊಂಡಿಲ್ಲ. ಜಗತ್ತು ದುಃಖಮಯವಾಗಿದೆ ಎಂಬುದನ್ನರಿತು, ಅದಕ್ಕೆ ಕಾರಣ ಹುಡುಕಲು ಹೋರಾಡಿದನು. ತನ್ನ ನಿರಂತರ ಪರಿಶ್ರಮದ ಫಲವಾಗಿ ದೊರೆತ ಸತ್ಯ ದರ್ಶನವನ್ನು ದೇಶದ ಮೂಲೆ ಮೂಲೆಗೆ ಪ್ರಸರಿಸುವ ಕಾರ್ಯವನ್ನು ಮಾಡಿದನು. ಇದು ಬುದ್ಧ ಕಂಡುಕೊಂಡ ಸತ್ಯ ದರ್ಶನವಾಗಿಯೇ ಪ್ರಚಾರಗೊಂಡಿತು. ಬುದ್ಧನು ತನ್ನ ಸಂಸಾರ, ರಾಜ್ಯ ಹಾಗೂ ಅಧಿಕಾರವನ್ನು ತೊರೆದು, ಲೋಕ ಕಲ್ಯಾಣಕ್ಕಾಗಿ ತನ್ನನ್ನು ಸಮರ್ಪಿಸಿಕೊಂಡವನು. ಈತನು ನಡೆಸಿದ ಧ್ಯಾನವು ಲೋಕದ ಜಂಜಾಟಕ್ಕೆ ಕಾರಣವನ್ನು ಹುಡುಕುವುದಾಗಿತ್ತು. ಬುದ್ಧ ತಾನು ಮನೆಯಿಂದ ಹೊರಬಂದು, ಹಲವು ಸಾಧು ಸಂತರನ್ನು ಹುಡುಕಿಕೊಂಡು ಹೊರಟನು. ಈತನ ಮನಸ್ಸಿನ ತೊಳಲಾಟಕ್ಕೆ ಸೂಕ್ತ

ಉತ್ತರ ಲಭಿಸದೆ ಹೋದಾಗ, ತನ್ನ ಪ್ರಯಾಣವನ್ನು ಮುಂದುವರೆಸುತ್ತಿದ್ದ. ಹೀಗೆ ಮುಂದುವರೆದ ಈತನ ಪಯಣದಲ್ಲಿ ಯಾರಿಂದಲೂ ಸೂಕ್ತವಾದ ಜ್ಞಾನ ದರ್ಶನವಾಗದೆ ಹೋದಾಗ, ಒಂದೆಡೆ ಅರಳಿ ಮರದಡಿ ಕುಳಿತು ಧ್ಯಾನಕ್ಕೆ ತೊಡಗುತ್ತಾನೆ. ಈತನು ಧ್ಯಾನದಲ್ಲಿ ಅನುಸರಿಸಿದ ಬಹುಮುಖ್ಯ ವಿಧಾನವೆಂದರೆ, ತನ್ನ ದೇಹದಲ್ಲಿ ನಡೆಯುವಂತಹ ಸೂಕ್ಷ್ಮ ಸಂವೇದನೆಗಳನ್ನು ಗಮನಿಸುತ್ತ ಹೋದನು. ದೇಹದಲ್ಲಿ ನಡೆಯುವ ಈ ಕ್ರಿಯೆಗಳ 'ಇರುವಿಕೆ', 'ಆಗುವಿಕೆ'ಯನ್ನು ಗಮನಿಸುತ್ತ ಹೋದಂತೆಲ್ಲ ಆತನಿಗೆ ಜ್ಞಾನೋದಯವಾಯಿತು. ದೇಹದಲ್ಲಿ ನಡೆಯುವ ಕ್ರಿಯೆಗಳು ಮತ್ತು ಸಮಾಜದಲ್ಲಿನ ಮಾನವ ಲೋಕದಲ್ಲಿ ನಡೆಯುವ ಕ್ರಿಯೆಗಳಿಗೆ ಅಂತರ್ ಸಂಬಂಧವನ್ನು ಕಲ್ಪಿಸುವ ಮೂಲಕವಾಗಿ, ತಾನು ಕಂಡುಕೊಂಡ ಸತ್ಯದ ದರ್ಶನವನ್ನು ಜನತೆಯ ಮುಂದಿಟ್ಟ.

ಬುದ್ಧ ತಾನು ನಡೆಸಿದ ಸತ್ಯ ದರ್ಶನದ ಹೋರಾಟದಲ್ಲಿ ಕಂಡುಕೊಂಡ ಪ್ರಮುಖ ಅಂಶಗಳೆಂದರೆ,

೧. ಪಂಚಶೀಲಗಳು
೨. ನಾಲ್ಕು ಆರ್ಯಸತ್ಯಗಳು
೩. ಅಷ್ಟಾಂಗ ಮಾರ್ಗ

ಇವುಗಳು ಬುದ್ಧನು ಕಂಡುಕೊಂಡ ದರ್ಶನದ ಭಾಗವಾಗಿವೆ. ಈ ಅಂಶಗಳನ್ನಲ್ಲದೆ ಬುದ್ಧ ಮತ್ತೇನನ್ನು ಇದೇ ಅಂತಿಮವೆಂದು ಬಲವಂತದಿಂದ ಹೇರುವ ಪ್ರಯತ್ನವನ್ನು ಮಾಡಲಿಲ್ಲ. ಈ ಅಂಶಗಳ ಮೂಲಕವಾಗಿ ಮಾನವನ ದುಃಖಕ್ಕೆ ಕಾರಣಗಳನ್ನು ಗುರುತಿಸಿ, ಆ ದುಃಖದಿಂದ ಬಿಡುಗಡೆಗೊಳ್ಳುವ ಮಾರ್ಗವನ್ನು ತೋರಿಸಿಕೊಟ್ಟಿದ್ದಾನೆ. ಈ ಮೂರು ವಿಧಾನಗಳಲ್ಲಿ ಕಂಡುಬರುವ ಪ್ರಮುಖ ಅಂಶಗಳು ಈ ಮುಂದಿನಂತಿವೆ;

೧. ಪಂಚಶೀಲಗಳು

೧) ಅಹಿಂಸೆ
೨) ಸತ್ಯವನ್ನು ನುಡಿಯುವುದು
೩) ಕಳ್ಳತನ ಮಾಡಬಾರದು
೪) ಮದ್ಯಪಾನ ಮಾಡಬಾರದು
೫) ಪರಸ್ತ್ರೀ ಸಂಗ ಮಾಡಬಾರದು

೨. ನಾಲ್ಕು ಆರ್ಯ ಸತ್ಯಗಳು

೧) ಪ್ರಪಂಚವು ದುಃಖದಿಂದ ಕೂಡಿದೆ
೨) ದುಃಖಕ್ಕೆ ಕಾರಣ
೩) ದುಃಖದ ನಿವಾರಣೆ
೪) ದುಃಖವನ್ನು ನಿವಾರಿಸಲು ಅನುಸರಿಸುವ ಅಷ್ಟಾಂಗ ಮಾರ್ಗ

೩. ಅಷ್ಟಾಂಗ ಮಾರ್ಗಗಳು

೧) ಒಳ್ಳೆಯ ನಂಬಿಕೆ
೨) ಒಳ್ಳೆಯ ಆಲೋಚನೆ
೩) ಒಳ್ಳೆಯ ನಡತೆ
೪) ಒಳ್ಳೆಯ ಮಾತು
೫) ಒಳ್ಳೆಯ ಪ್ರಯತ್ನ
೬) ಒಳ್ಳೆಯ ಧ್ಯಾನ
೭) ಒಳ್ಳೆಯ ವಿಚಾರಗಳು
೮) ಒಳ್ಳೆಯ ಜೀವನೋಪಾಯ

ಈ ಮೇಲೆ ಗುರುತಿಸಿದ ಅಂಶಗಳನ್ನು ಕೇಂದ್ರವಾಗಿಟ್ಟುಕೊಂಡು ಬುದ್ಧ ತನ್ನ ದರ್ಶನವನ್ನು ಪ್ರತಿಪಾದಿಸುತ್ತ ಬಂದನು. ಇವುಗಳು ಸರ್ವರಿಂದಲೂ ಒಪ್ಪಿಗೆಯನ್ನು ಪಡೆದುಕೊಂಡಿರುವುದಕ್ಕೆ ಬಹುಮುಖ್ಯವಾದ ಕಾರಣವೆಂದರೆ ಇವುಗಳು ಸರಳವಾಗಿದ್ದು, ವೈಚಾರಿಕ ಆಯಾಮವನ್ನು ಒಳಗೊಂಡಿರುವುದಾಗಿದೆ. ಇದರಿಂದಾಗಿ ಬುದ್ಧನ ಕಾಲದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ರಾಜರಾಧಿಯಾಗಿ ಬಹುಸಂಖ್ಯಾತರು ಬುದ್ಧನಿಗೆ ಶರಣಾದರು. ಬುದ್ಧನ ಈ ಸಮಾನತೆಯ ತತ್ವ ಸಿದ್ಧಾಂತಗಳು ಬ್ರಾಹ್ಮಣಶಾಹಿಯ ಅಸ್ತಿತ್ವಕ್ಕೆ ಪ್ರಬಲವಾದ ಪೆಟ್ಟನ್ನು ನೀಡಿತು. ಬುದ್ಧನು ಬ್ರಾಹ್ಮಣ ವಿರೋಧಿಯಾಗಿರಲಿಲ್ಲ. ಆದರೆ ಬ್ರಾಹ್ಮಣತ್ವದ ವಿರುದ್ಧ ಆತನ ದರ್ಶನವು ಸಮರ ಸಾರಿತು. ಬುದ್ಧನ ಪ್ರಥಮ ಐದು ಜನ ಶಿಷ್ಯರು ಬ್ರಾಹ್ಮಣರೇ ಆಗಿದ್ದರು. ಬುದ್ಧನ ಕಾಲದಲ್ಲಿ ಆತನ ತತ್ವ ಸಿದ್ಧಾಂತಗಳನ್ನು ಒಪ್ಪಿಕೊಂಡ ಉದಾರವಾದಿ ಬ್ರಾಹ್ಮಣರೂ ಬುದ್ಧನ ಶಿಷ್ಯರಾಗಿದ್ದರು.

ಬುದ್ಧೋತ್ತರ ಬೌದ್ಧಧರ್ಮ

ಬುದ್ಧ ತಾನು ಪ್ರತಿಪಾದಿಸಿದ ತತ್ವ-ಸಿದ್ಧಾಂತಗಳನ್ನು ಎಂದು 'ಧರ್ಮ'ದ ವ್ಯಾಪ್ತಿಗೆ ಒಳಪಡಿಸಲಿಲ್ಲ. ಅವನದು ಜನತೆಯ ಬದುಕನ್ನು ಶಾಂತಿ, ಸಮಾನತೆಯಲ್ಲಿ ಮುನ್ನಡೆಸುವ ದರ್ಶನವಾಗಿತ್ತು. ಆದರೆ ಬುದ್ಧನು ಪರಿನಿರ್ವಾಣ ಹೊಂದಿದ ತರುವಾಯ ಅದು 'ಧಾರ್ಮಿಕ' ಚೌಕಟ್ಟನ್ನು ರೂಪಿಸಿಕೊಂಡಿತು. ಬುದ್ಧನ ಧರ್ಮದಲ್ಲಿ ಹಲವು ಶಾಖೆಗಳು ಉಗಮಗೊಂಡವು. ಬುದ್ಧನ ನಂತರ ಬೌದ್ಧಧರ್ಮವು ಹೀನಯಾನ ಮತ್ತು ಮಹಾಯಾನ ಎಂಬ ಎರಡು ಶಾಖೆಗಳಾಗಿ ವಿಂಗಡನೆಯಾಯಿತು. ಈ ಬೆಳವಣಿಗೆಯಿಂದಾಗಿ ಬುದ್ಧನ ದರ್ಶನವು ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು, ಬುದ್ಧನ ತಾತ್ವಿಕತೆಯಿಂದ ಬಹುದೂರ ಸರಿಯಿತು. ಓಶೋ, ಬುದ್ಧನ ತರುವಾಯದಲ್ಲಿ ಬುದ್ಧನ ಧಮ್ಮ ಸತ್ತುಹೋಯಿತು ಎಂದು ಹೇಳುವುದಕ್ಕೆ ನೀಡುವ ಸಮರ್ಥನೆ ಹೀಗಿದೆ: "ನನ್ನ ಮಟ್ಟಿಗೆ ಬೌದ್ಧ ಧರ್ಮವು ಗೌತಮ ಬುದ್ಧನೊಡನೆಯೇ ಸತ್ತು ಹೋಯಿತು. ಈಗ ಬೌದ್ಧಧರ್ಮ ಎಂದು ಏನು ಉಳಿದಿದೆಯೋ ಅದಕ್ಕೂ ಬುದ್ಧನಿಗೂ ಏನು ಸಂಬಂಧವಿಲ್ಲ. ಏಕೆಂದರೆ ಅದು ಅವನ ಮೂಲಭೂತ ಕೊಡುಗೆಯಾದ ನೇತ್ಯಾತ್ಮಕ ದೃಷ್ಟಿಕೋನವನ್ನು ಬಿಟ್ಟುಬಿಟ್ಟಿದೆ."[೧] ಹೀಗೆ ಬುದ್ಧನ ತರುವಾಯ ತನ್ನೆಲ್ಲ

ಮೂಲ ಸ್ವರೂಪವನ್ನು ಕಳೆದುಕೊಂಡು, ಪ್ರತ್ಯೇಕವಾದ ಧರ್ಮದ ನೀತಿ ನಿಯಮಗಳನ್ನು ರೂಪಿಸಿಕೊಂಡು ವಿಭಿನ್ನ ಶಾಖೆಗಳಾಗಿ ಬೌದ್ಧಧರ್ಮವು ಬೆಳೆದುಬಂದಿದೆ.

ಬುದ್ಧನ ತರುವಾಯ ಬೌದ್ಧಧರ್ಮದ ಹಿನಯಾನ ಮತ್ತು ಮಹಾಯಾನ ಶಾಖೆಗಳಲ್ಲಿ ವೈದಿಕ ಮಾದರಿಯ ಕೆಲವು ಆಚರಣೆಗಳು ಅಸ್ತಿತ್ವವನ್ನು ಪಡೆದುಕೊಂಡವು. "ಕ್ರಿ.ಶ. ಪೂರ್ವ ಮತ್ತು ನಂತರದ ಕಾಲದಲ್ಲಿ ನಿರ್ಮಾಣವಾಗುತ್ತಿದ್ದ ಬೌದ್ಧರ ಪೂಜಾ ಗೃಹವಾದ ಸ್ಥೂಪ (ಚೈತ್ಯ) ಮತ್ತು ಮುನಿಗಳ ವಾಸಸ್ಥಳವಾದ ವಿಹಾರಗಳು ಮೊದಲ ಮಾದರಿಗಳು. ಹೀನಯಾನ ಬೌದ್ಧರಲ್ಲಿ ಬುದ್ಧನ ಪ್ರತಿಮೆಯನ್ನಲ್ಲ, ಪೀಠ, ಪಾದಗಳ ಮೂಲಕ ಸಂಕೇತಿಸಿ ಪೂಜಿಸುತ್ತಾರೆ. ಮಹಾಯಾನ ಬೌದ್ಧರು ಮಾನವಾಕೃತಿಯ ಬುದ್ಧನ ಶಿಲ್ಪ ರಚನೆಗೆ ತೊಡಗಿದ್ದರು."[೨] ಆತ್ಮ, ಸ್ವರ್ಗ, ನರಕ, ದೇವರ ಬಗೆಗಿನ ನಂಬಿಕೆಯಿಂದ ದೂರವಿದ್ದ ಬುದ್ಧನ ಮುಂದುವರೆದ ಧರ್ಮವು, ಬುದ್ಧನನ್ನೆ ಆಕೃತಿಯಾಗಿಸಿ ಪೂಜೆಯ ಸ್ವರೂಪವನ್ನು ಪಡೆದುಕೊಂಡಿತು. ಹೀಗೆ ಬೆಳೆದುಬಂದ ಹಿನಯಾನ ಮತ್ತು ಮಹಾಯಾನ ಶಾಖೆಯಲ್ಲಿ ಅಡಿಯಲ್ಲಿ ಹಲವು ಪಂಥಗಳು ಬೆಳೆದುಬಂದಿದೆ. ಅವುಗಳನ್ನು ಈ ಮುಂದಿನಂತೆ ನೋಡಬಹುದು.

೧. ಹೀನಯಾನ

ಬುದ್ಧನು ಪರಿನಿರ್ವಾಣ ಹೊಂದಿದ ತರುವಾದಲ್ಲಿ ಬುದ್ಧನ ದರ್ಶನವು ಹಲವು ಪಂಥಗಳಾಗಿ ಬೆಳೆದು ಬಂದಿದೆ. ಇವುಗಳಲ್ಲಿ ಹೀನಯಾನವು ಒಂದು ಪ್ರಮುಖವಾದ ಪಂಥವಾಗಿದೆ. ಈ ಪಂಥದ ಅಡಿಯಲ್ಲಿ ಎರಡು ಉಪ ಶಾಖೆಗಳು ರೂಪಗೊಂಡಿವೆ. ಅವುಗಳ ಸಾರವನ್ನು ಈ ಮುಂದಿನಂತೆ ನೋಡಬಹುದಾಗಿದೆ.

ಅ) ವೈಭಾಷಿಕ ಬೌದ್ಧ ಪಂಥ

ಹೀನಯಾನದ ಪ್ರತ್ಯೇಕ ಪಂಥವಾದ ವೈಭಾಷಿಕವು ಕ್ರಿ.ಶ. ೧೦೦ರ ಸುಮಾರಿನಲ್ಲಿ ಜನ್ಮತಳೆದಿದೆ. ಇದು ಕನಿಷ್ಕನ ರಾಜಾಶ್ರಯವನ್ನು ಪಡೆದುಕೊಂಡಿತ್ತು. ಇದು ನ್ಯಾಯ ವೈಶೇಷಿಕ ತರಹದ ವಾದವನ್ನು ಮುಂದುವರೆಸಿಕೊಂಡು ಬಂದಿದೆ. ಅಭಿಧಮ್ಮ ಪೀಟಕವೆ ಇದಕ್ಕೆ ಆಧಾರವಾಗಿರುವುದು. "ವೈಭಾಷಿಕರು ವಾಸ್ತವವಾದಿಗಳು. ಬಾಹ್ಯ ಪ್ರಪಂಚದ ವಾಸ್ತವತೆಯನ್ನು ಅವರು ಒಪ್ಪುತ್ತಾರೆ. ಅವರ ಪ್ರಕಾರ ಮಾನಸಿಕ ಮತ್ತು ಅತಿಮಾನಸಿಕ ಪದಾರ್ಥಗಳೆಲ್ಲವೂ ವಾಸ್ತವವೇ"[೩]

ಆ) ಸೌತ್ರಾಂತಿಕ ಬೌದ್ಧ ಪಂಥ

ಸೌತ್ರಾಂತಿಕರು ಅಭಿಧಮ್ಮ ಪೀಟಕದ ಅಧಿಕೃತತೆಯನ್ನು ಒಪ್ಪಿಕೊಳ್ಳುವುದಿಲ್ಲ. ಅವುಗಳೆಲ್ಲ ಮನುಷ್ಯ ರಚನೆಗಳಾವೆ. ಆದ್ದರಿಂದ ಇವು ದೋಷಯುಕ್ತವಾಗಿರುವ ಸಾಧ್ಯತೆ ಇದೆ ಎಂಬುದು ಇವರ ವಾದವಾಗಿದೆ. ಆದ್ದರಿಂದ ಬುದ್ಧನೇ ಸ್ವತಃ ನುಡಿದಂತಹ ಮೂರ್ತರೂಪಗಳಾದ 'ಸೂತ್ರ' ಅಥವಾ 'ಸೂತ್ರಾಂತ'ಗಳನ್ನು ತಮ್ಮ ತಾತ್ವಿಕ ಆಧಾರಗಳೆಂದು ಎತ್ತಿಹಿಡಿಯುತ್ತಾರೆ.

೨. ಮಹಾಯಾನ

ಬುದ್ಧೋತ್ತರ ಬೌದ್ಧ ಧರ್ಮದಲ್ಲಿ ರೂಪ ತಳೆದ ಮಹಾಯಾನ ಪಂಥದಲ್ಲಿ ಹಲವು ಉಪಶಾಖೆಗಳು ಭಿನ್ನ ಆಯಾಮಗಳಲ್ಲಿ ಬೆಳೆದುಬಂದಿವೆ. ಅವುಗಳ ತಾತ್ವಿಕ ನೆಲೆಗಳನ್ನು ಈ ಮುಂದಿನಂತೆ ವಿಶ್ಲೇಷಿಸಲಾಗುವುದು.

ಅ) ಮಾಧ್ಯಮಿಕ ಬೌದ್ಧ ಶಾಖೆ

ಬುದ್ಧೋತ್ತರ ಕಾಲದ ಬೌದ್ಧ ಶಾಖೆಗಳಲ್ಲಿ ಮಧ್ಯಮ ಮಾರ್ಗವು ಒಂದಾಗಿದೆ. ಬುದ್ಧನು ತನ್ನ ಉಪದೇಶಗಳನ್ನು 'ಮಧ್ಯಮ ಪ್ರತಿಪದ', 'ಮಧ್ಯಮ ಮಾರ್ಗ'ವೆಂದು ಕರೆಯುತ್ತಿದ್ದನೆಂದು ತಿಳಿದುಬರುತ್ತದೆ. ಈ ಮಾರ್ಗವನ್ನು ಕ್ರಿ.ಶ. ಎರಡನೇ ಶತಮಾನಕ್ಕೆ ಸೇರಿದ ನಾಗಾರ್ಜುನನು ಹುಟ್ಟಿಹಾಕಿದ್ದಾನೆ. ಇದು ಸತ್, ಅಸತ್, ಶೂನ್ಯವಾದವನ್ನು ಪ್ರತಿಪಾದಿಸುತ್ತದೆ.

ಆ) ಯೋಗಾಚಾರ

ಯೋಗಾಚಾರ ಎಂದರೆ, ಯೋಗವನ್ನು ಪಾಲಿಸುವವರು ಎಂದರ್ಥ. ಮೂಲದಲ್ಲಿ ಅದು ಬಂದು ತಪಸ್ಸಿನ ಭಾಗವಾಗಿದ್ದು, ಉತ್ತರಕಾಲೀನ ಬೌದ್ಧ ಪಂಥಗಳ ಪೈಕಿ ಭಾವನಾವಾದಿ ಶಾಖೆಗಳಲ್ಲಿ ಒಂದನ್ನು ಸೂಚಿಸುವ ವಿಶೇಷಾರ್ಥವನ್ನು ಪಡೆದುಕೊಂಡಿತು. ಜಗತ್ ಶೂನ್ಯವಾದ, ಕ್ಷಣಿಕವಾದ, ಜ್ಞಾನವಾದ, ಧ್ಯಾನದ ಅನುಷ್ಠಾನ, ಜ್ಞಾನ ಸಂಪಾದನೆ, ಯೋಗದಿಂದ ನಿರ್ವಾಣ ಎಂಬ ನಂಬಿಕೆಗಳು ಇದರಲ್ಲಿ ಕಂಡುಬರುತ್ತವೆ.

ಹೀನಯಾನ ಮತ್ತು ಮಹಾಯಾನ ಪಂಥಗಳ ಮುಂದುವರೆದ ರೂಪವಾಗಿ ಬೌದ್ಧ ನೆಲೆಯಲ್ಲಿ ವಜ್ರಯಾನ, ತಂತ್ರಯಾನದಂತಹ ಪಂಥಗಳು ಬೆಳೆದುಬಂದಿವೆ. "ಬೌದ್ಧ ತಾಂತ್ರಿಕ ಮತದ ಉಗಮಕ್ಕೆ ಐತಿಹಾಸಿಕ ಕಾರಣಗಳೂ ಇವೆ. ಪೂರ್ವ ಭಾರತದಲ್ಲಿ ಬುದ್ಧನಿಗೂ ಮುಂಚೆ ಕಿರಾತ, ಯಕ್ಷ, ಗಂಧರ್ವ ಮೊದಲಾದ ಅನಾರ್ಯ ಜನಾಂಗಗಳು ನೆಲೆಸಿದ್ದವು. ಇವು ತುಂಬ ವಿಲಾಸೀ ಜನಾಂಗಗಳು. ಈ ಜಾತಿಗಳ ಜನರು ಕಾಮ, ಮರಣ ಹಾಗೂ ವೃಕ್ಷಗಳನ್ನು ಪೂಜಿಸುತ್ತಿದ್ದರು. ಇವರದ್ದೇ ಒಬ್ಬ ದೇವತೆ ವಜ್ರಪಾಣಿ. ಈ ಯಕ್ಷಪರಂಪರೆ ಭಾರತೀಯ ಸಂಸ್ಕೃತಿಯ ಮೇಲೆ ತನ್ನ ಪ್ರಭಾವವನ್ನು ಬೀರಿತು; ಅದರೊಳಕ್ಕೆ ನುಗ್ಗಿತು. ಅದು ಒಂದೆಡೆ ಪುರಾಣಗಳನ್ನು ಹೊಕ್ಕು ಬಳಸಿದರೆ ಮತ್ತೊಂದೆಡೆ ಬೌದ್ಧಧರ್ಮಕ್ಕೂ ತಲೆ ಹಾಕಿತು. ಇವರ ದೇವತೆ 'ವಜ್ರಪಾಣಿ' ಬೋಧಿಸತ್ವನೆಂದು ಮಾನ್ಯನಾದ."[೪] ಹೀಗೆ ಬೆಳೆದ ಪಂಥಗಳು ಸ್ಥಳೀಯ ಶೈವದೊಂದಿಗೆ ಅನುಸಂಧಾನಕ್ಕೂ ಮುಂದಾಗಿವೆ. ವಚನ ಚಳವಳಿಯ ವೇಳೆಗಾಗಲೇ ಕರ್ನಾಟಕದಲ್ಲಿ ತನ್ನ ನೆಲೆಯನ್ನು ಕಂಡುಕೊಂಡಿದ್ದ ಬೌದ್ಧಧರ್ಮವು ಶೈವ ನೆಲೆಯಲ್ಲಿ ಮಾತ್ರವಲ್ಲದೆ, ವೈಷ್ಣವೀಕರಣಕ್ಕೆ ಒಳಗಾಗಿರುವ ಬಗೆಗೆ ಮಾರಿತಂದೆ ವಚನದಲ್ಲಿ ಈ ರೀತಿಯಾದ ಪ್ರಸ್ತಾಪವಿದೆ:

"ಯೋಗಿ ಪಾಶುಪತಿ ಕಾಳಮುಖ ಈ ಮೂರು ಶೈವಪಕ್ಷವಾಗಿಹವು
ಜೋಗಿ ತ್ರಿದಂಡಿ ಬೌದ್ಧ ಈ ಮೂರು ವಿಷ್ಣು ಪಕ್ಷವಾಗಿಹವು
ಇಂತೀ ಆರು ಅವತಾರಕ್ಕೆ ಸಂಬಂಧವಾಗಿಹವು"[೫]

ಬೌದ್ಧಧರ್ಮವು ವೈದಿಕತೆಯ ತೆಕ್ಕೆಯೊಕ್ಕೆ ಸೇರಿರುವುದು ಮಾರಿತಂದೆಯ ವಚನದಿಂದ ಸಾಬೀತಾಗುತ್ತದೆ. ಅಂದರೆ ವೈದಿಕತೆಯು ಬೌದ್ಧಧರ್ಮದ ಮೇಲೆ ತನ್ನ ಯುದ್ಧತಂತ್ರವನ್ನು ಅನುಸರಿಸಿ, ಭಾರತದಿಂದ ಗಡಿಪಾರು ಮಾಡಲಾಯಿತು ಎಂಬ ವಾದವು ಕನ್ನಡ ಸಾಹಿತ್ಯದಲ್ಲಿದೆ. ವೈದಿಕ ನೆಲೆಯ ಬ್ರಾಹ್ಮಣ ಧರ್ಮವು ಸಮಯಾನುಸಾರವಾಗಿ ಬೌದ್ಧಧರ್ಮವನ್ನು ತನ್ನ ಧಾರ್ಮಿಕ ಚೌಕಟ್ಟಿನಲ್ಲಿ ಸೀಮಿತಗೊಳಿಸಿಕೊಂಡು ಬಂದಿದೆ. ಮಾರಿತಂದೆಯು ೧೨ನೇ ಶತಮಾನದ ಸುಮಾರಿನಲ್ಲಿ ಗುರುತಿಸುವ ಈ ವೈಷ್ಣವ ನೆಲೆಯ ಬೌದ್ಧಧರ್ಮಕ್ಕೆ ದಾಸ ಸಾಹಿತ್ಯದ ಕಾಲಕ್ಕೆ ಸ್ಪಷ್ಟವಾದ ನಿದರ್ಶನಗಳು ಕಂಡುಬರುತ್ತವೆ. ಹೀಗೆ ಬದಲಾದ ಕಾಲದಲ್ಲಿ ಬೌದ್ಧಧರ್ಮವು ವಿವಿಧ ಆಯಾಮಗಳಲ್ಲಿ ಬೆಳೆದುಬಂದಿದೆ.

೨. ಅಂಬೇಡ್ಕರ್ ಬೌದ್ಧ ಚಿಂತನೆಗಳು

ಕನ್ನಡ ಚಿಂತನ ಸಾಹಿತ್ಯದಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ಬೌದ್ಧ ಚಿಂತನೆಗಳನ್ನು ವಿವಿಧ ನೆಲೆಗಳಲ್ಲಿ ಅರ್ಥೈಸುವ ಪ್ರಯತ್ನಗಳು ನಡೆದಿವೆ. ಬೌದ್ಧ ದರ್ಶನವನ್ನು ಕನ್ನಡ ಸಾಹಿತ್ಯದಲ್ಲಿ ನವೋದಯ ಕಾಲಘಟ್ಟದಿಂದಲೂ ಪರಿಚಯಿಸುವ ಕಾರ್ಯ ನಡೆದುಬಂದಿದೆ. ಆದರೆ ಬೌದ್ಧ ದರ್ಶನವು ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ನೆಲೆಯಲ್ಲಿ ಮುಖಾಮುಖಿಯಾಗಿರುವುದು ೭೦ರ ದಶಕದ ತರುವಾಯದಲ್ಲಿ. ಅಂದರೆ ಬಂಡಾಯ ಮತ್ತು ದಲಿತ ಸಾಹಿತ್ಯ ಕಾಲಘಟ್ಟದಲ್ಲಿ ಬಾಬಾಸಾಹೇಬರ ವಿಚಾರಗಳು ಕನ್ನಡದಲ್ಲಿ ಪರಿಚಯವಾಗಿವೆ. ಕರ್ನಾಟಕದ ದಲಿತ ಮಂತ್ರಿಗಳಾದ ಬಿ.ಬಸವಲಿಂಗಪ್ಪನವರ 'ಬೂಸಾ ಸಾಹಿತ್ಯ ಪ್ರಕರಣ'ದ ತರುವಾಯದಲ್ಲಿ ಸಂಘಟಿತರಾದ ದಲಿತ ಶಿಕ್ಷಿತರು, ತಮ್ಮ ಹೋರಾಟ ಹಾಗೂ ಸಂಘಟನೆಗೆ ತಾತ್ವಿಕ ಶಕ್ತಿಯನ್ನು ಪಡೆಯಲು 'ಮರಳಿ ಮನೆಗೆ' ಎಂಬ ನಡಿಗೆಯೊಂದಿಗೆ, ಅಂಬೇಡ್ಕರ್ ಹಾಗೂ ಬೌದ್ಧಧರ್ಮದತ್ತ ಮುಖ ಮಾಡಿದರು. ಬಾಬಾಸಾಹೇಬರು ಬೌದ್ಧಧರ್ಮಕ್ಕೆ ಮತಾಂತರ ಹೊಂದಿದ ತರುವಾಯದಲ್ಲಿ, ಇವರ ಬೌದ್ಧ ಚಿಂತನೆಗಳನ್ನು ಕೇಂದ್ರವಾಗಿಟ್ಟುಕೊಂಡು ವಿಚಾರವಾದದ ಅಡಿಯಲ್ಲಿ ಸಾಕಷ್ಟು ಕೃತಿಗಳು ಪ್ರಕಟಗೊಂಡಿವೆ. ಹಾಗೆಯೇ ವಿಭಿನ್ನ ನೆಲೆಯಲ್ಲಿ ಚಿಂತನೆಗಳು ಮೂಡಿಬಂದಿವೆ. ಹೀಗೆ ಮೂಡಿಬಂದಿರುವ ಕನ್ನಡ ಚಿಂತನ ಸಾಹಿತ್ಯದಲ್ಲಿನ ಅಂಬೇಡ್ಕರ್ ಬೌದ್ಧ ಚಿಂತನೆಗಳನ್ನು ಪ್ರಸ್ತುತದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗುವುದು.

ಕನ್ನಡದ ವಿಚಾರವಾದಿಗಳಲ್ಲಿ ಪ್ರಮುಖರಾದ ಡಿ.ಆರ್.ನಾಗರಾಜ್ ಅವರು ಅಂಬೇಡ್ಕರ್ ಸ್ವೀಕರಿಸಿದ ಬೌದ್ಧಧರ್ಮವನ್ನು ಕುರಿತು ತಾಳಿರುವ ನಿಲುವು ಹೀಗಿದೆ; "ಅಂಬೇಡ್ಕರರಿಗೆ ಬೌದ್ಧಧರ್ಮ ಎನ್ನುವುದು ತಮ್ಮ ಹೋರಾಟಕ್ಕೆ ಸಿಕ್ಕಿದ ಚಾರಿತ್ರಿಕ ಸಮರ್ಥನೆ. ಚಾರಿತ್ರಿಕವಾದ ಸ್ಥಿತಿಯೊಂದನ್ನು

ವರ್ತಮಾನಕ್ಕೆ ತರುವ ಮೂಲಕ ತಮ್ಮ ಹೋರಾಟಕ್ಕೆ ಹೆಚ್ಚು ದೊಡ್ಡ ಪರಂಪರೆಯೊಂದನ್ನು ನಿರ್ಮಿಸಿಕೊಳ್ಳುವ ಪ್ರಯತ್ನ ಅದು. ದಲಿತರಿಗೆ ದೊಡ್ಡ ಸಾಂಸ್ಕೃತಿಕ ಪರಂಪರೆಯೊಂದನ್ನು ಕಟ್ಟಿಕೊಡುವ ಮಹಾನ್ ಪ್ರಯತ್ನದ ಭಾಗ ಅದು"[೬] ಎಂಬುದಾಗಿ ತಿಳಿಸುತ್ತಾರೆ. ಇಲ್ಲಿ ಚಿಂತಕರಾದ ಡಿ.ಆರ್. ನಾಗರಾಜ್ ಅವರ ಗ್ರಹಿಕೆಯಲ್ಲಿ ಬಾಬಾಸಾಹೇಬರು ಸ್ವೀಕರಿಸಿರುವ ಈ 'ಧರ್ಮ'ವು ದಲಿತ ಸಮೂಹವನ್ನು ಮತ್ತೇ ಧರ್ಮದ ಬಂಧನಕ್ಕೆ ಗುರಿಪಡಿಸುವ ಮಾರ್ಗವಾಗಿರುವುದಿಲ್ಲ. ಧರ್ಮದ ಅಡಿಯಲ್ಲಿಯೇ ಶೋಷಣೆಗೆ ಒಳಗಾಗಿ ಅಸಮಾನತೆಯನ್ನು ಅನುಭವಿಸುತ್ತಿರುವ ಸಮುದಾಯವೊಂದಕ್ಕೆ ಸಮಾತೆಯ ಧರ್ಮದ ಅಡಿಯಲ್ಲಿ ಇವರಿಗೆ ನೈತಿಕ ಸ್ಥೈರ್ಯವನ್ನು ಮೂಡಿಸುವ ಒಂದು ಮಾರ್ಗವಾಗಿ ಬೌದ್ಧಧರ್ಮವನ್ನು ಪರಿಚಯಿಸುತ್ತಾರೆ. ಆ ಮೂಲಕ ಈ ಸ್ವತಂತ್ರ ಧರ್ಮದ ಅಡಿಯಲ್ಲಿ ಹೋರಾಟಕ್ಕೆ ಸಜ್ಜುಗೊಳಿಸುವ ಪ್ರಯತ್ನವನ್ನು ಕೈಗೊಳ್ಳುತ್ತಾರೆ. ಹೀಗಾಗಿ ಲೇಖಕರು ಬಾಬಾಸಾಹೇಬರ ಈ ಬೌದ್ಧಧರ್ಮದ ಸ್ವರೂಪವನ್ನು ಹೋರಾಟದ ಒಂದು ಭಾಗವಾಗಿ ಗುರುತಿಸುವುದು ಇವರ ಚಿಂತನೆಗಳಿಂದ ತಿಳಿದುಬರುತ್ತದೆ. ಡಿ.ಆರ್.ನಾಗರಾಜ್ ಅವರು ತಾಳುವ ಅಂಬೇಡ್ಕರ್ ಅವರ ಬೌದ್ಧ ನಿಲುವುಗಳನ್ನು ನಟರಾಜ್ ಹುಳಿಯಾರ್ ಅವರ ಈ ಮುಂದಿನಂತೆ ಗುರುತಿಸುತ್ತಾರೆ. "ಎಂಬತ್ತರ ದಶಕದ ಕೊನೆಯ ಹೊತ್ತಿಗೆ ಭಾರತದ ಸಾಮಾಜಿಕ ವಿದ್ಯಮಾನಗಳ ಅಧ್ಯಯನಕ್ಕೆ ಅಂಬೇಡ್ಕರ್‌ವಾದವೂ ಸೇರಿದಂತೆ ಬೇರೆ ಬೇರೆ ಚಿಂತನಾ ಕ್ರಮಗಳನ್ನು ಡಿ.ಆರ್. ಬೆಸೆಯತೊಡಗಿದರು. ತಮ್ಮ 'ದ ಫ್ಲೇಮಿಂಗ್ ಫೀಟ್' ಪುಸ್ತಕದಲ್ಲಿ 'ಚರಿತ್ರೆಯ ಸಂಶೋಧನೆಯ ಮೂಲಕ ಭಾರತದ ದಲಿತರಿಗೆ ಸಮೃದ್ಧ ಭೂತಕಾಲವನ್ನು ನಿರ್ಮಿಸುವ ಮೂಲಕ ಅಂಬೇಡ್ಕರ್ ಬೌದ್ಧ ನೆನಪನ್ನು ಪುನರ್‌ನಿರ್ಮಿಸಿದರು' ಎಂಬುದನ್ನು ಗುರುತಿಸಿದ ಅವರು ದಲಿತರಿಗೆ ಬೌದ್ಧಧರ್ಮದ ಈ ಹೊಸ ನೆನಪು ಹಿಂದೂ ಧಾರ್ಮಿಕ ವ್ಯವಸ್ಥೆಯನ್ನು ಎದುರಿಸುವ ಮಾರ್ಗವೂ ಆಗಿದ್ದನ್ನು ಕಂಡುಕೊಂಡರು. ಅಂಬೇಡ್ಕರ್ ಅವರು 'ಬೌದ್ಧಧರ್ಮಕ್ಕೆ ಮತಾಂತರಗೊಂಡದ್ದು ಈ ನೆನಪನ್ನು ಜೀವಂತ ವಾಸ್ತವವನ್ನಾಗಿ ಮಾಡುವ ಕ್ರಿಯೆ' ಎಂದು ಡಿ.ಆರ್. ಬರೆದರು"[೭] ಎಂಬುದಾಗಿ ತಿಳಿಸುತ್ತಾರೆ. ಅಂಬೇಡ್ಕರ್ ಅವರ ಬೌದ್ಧಧರ್ಮದ ನೆಲೆಯ ಹೋರಾಟವು ಕೇವಲ ಧಾರ್ಮಿಕ ಮತಾಂತರದ ಕ್ರಿಯೆ ಮಾತ್ರವಾಗಿರದೆ, ದಮನಕ್ಕೆ ಒಳಗಾಗಿ ಅಸ್ಪೃಶ್ಯತೆಯನ್ನು ಅನುಭವಿಸುತ್ತಿದ್ದ ದಲಿತರಿಗೆ ಸ್ವಾಭಿಮಾನದ ಬದುಕಿಗಾಗಿ ಚಾರಿತ್ರಿಕ ಅಸ್ಮಿತೆಯೊಂದನ್ನು ಕಲ್ಪಿಸುವ ನೆಲೆಯದಾಗಿತ್ತು ಎಂಬುದಾಗಿ ಗುರುತಿಸಿದ ಡಿ.ಆರ್ ನಾಗರಾಜ್ ಅವರ ನಿಲುವುಗಳನ್ನು ನಟರಾಜ್ ಹುಳಿಯಾರ್ ಎತ್ತಿಹಿಡಿದಿದ್ದಾರೆ.

ಕನ್ನಡದ ಮತ್ತೊಬ್ಬ ವಿಚಾರವಾದಿಗಳಾದ ಸರಜೂಕಾಟ್ಕರ್ ಅವರು ಅಂಬೇಡ್ಕರ್ ಅವರು ಬೌದ್ಧಧರ್ಮವನ್ನು ಸ್ವೀಕರಿಸಿದ ಬಗ್ಗೆ ನೀಡುವ ಪ್ರತಿಕ್ರಿಯೆ ಹೀಗಿದೆ, "ಭಾರತೀಯ ಸಂದರ್ಭದಲ್ಲಿ ವಿಶೇಷವಾಗಿ ಮಹಾರಾಷ್ಟ್ರದಲ್ಲಿ ಬಾಬಾಸಾಹೇಬ ಅಂಬೇಡ್ಕರ್ ಅವರು ಫುಲೆ ಅವರ 'ವಾರಸುತನ'ವನ್ನು ವಹಿಸಿಕೊಂಡರು. ಫುಲೆ ಅವರನ್ನು ಗುರು ಎಂದು ಮನ್ನಿಸಿ ಸತ್ಯಶೋಧಕ ಸಮಾಜದೊಂದಿಗೆ ಬುದ್ಧನ ಸಂಬಂಧ ಏರ್ಪಡಿಸಿದರು. ಅಂಬೇಡ್ಕರ್ ಶೋಷಿತ ದಲಿತರ ಜಗತ್ತಿನ ಧ್ವನಿಯಾದರು. ಕಬೀರರ ವಚನಗಳಿಂದ ಅಂಬೇಡ್ಕರರ ಮನಸ್ಸು ಸಂಸ್ಕಾರಗೊಂಡಿತ್ತು. ಬುದ್ಧನ ಚರಿತ್ರೆಯಿಂದ

ಅಂತರಂಗ ವಿಕಾಸಗೊಂಡಿತ್ತು. ಏಕನಾಥ ತುಕರಾಮರ ಸಂತವಾಣಿಯನ್ನು ಅವರು ಅಭ್ಯಸಿಸಿದ್ದರು. ಸಮಾಜವನ್ನು ಅದರ ಒಳನೋಟಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದ ಅಂಬೇಡ್ಕರರಿಗೆ ಸಾಧಿಸಬೇಕಾದ ಗುರಿ ಸ್ಪಷ್ಟವಾಗಿತ್ತು"[೮] ಎಂಬುದಾಗಿ ತಮ್ಮ ನಿಲುವುಗಳನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿ ಚಿಂತಕರು ಬಾಬಾಸಾಹೇಬರು ತಮ್ಮ ದಾರ್ಶನಿಕ ಚಿಂತನೆಗಳ ಮೂಲಕವಾಗಿ ಸಾಮಾಜಿಕ ಸುಧಾರಕರ ವಿಚಾರಗಳೊಂದಿಗೆ ತನ್ನ ವಿಚಾರಧಾರೆಗಳನ್ನು ಅನುಸಂಧಾನಗೊಳಿಸಿಕೊಂಡ ಬಗೆಯನ್ನು ಗುರುತಿಸಿದ್ದಾರೆ. ಹೀಗಾಗಿ ಇವರ ದೃಷ್ಟಿಯಲ್ಲಿ ಅಂಬೇಡ್ಕರ್ ಸ್ವೀಕರಿಸಿದ ಬೌದ್ಧಧರ್ಮದ ಹಿಂದೆ ಹಲವು ಬಗೆಯ ಒಳನೋಟಗಳಿರುವುದು ತಿಳಿದುಬರುತ್ತದೆ. ಸಮಾಜ ಸುಧಾರಣೆಗಾಗಿಯೇ ತಮ್ಮನ್ನು ತೊಡಗಿಸಿಕೊಂಡ ಬುದ್ಧ, ಸಂತ ತುಕರಾಮ್, ಜ್ಯೋತಿಬಾ ಫುಲೆಯವರಂತಹ ವಿಚಾರಗಳನ್ನು ವರ್ತಮಾನದ ತುರ್ತಿಗೆ ಪೂರಕವಾದ ನೆಲೆಯಲ್ಲಿ ಬಾಬಾಸಾಹೇಬರು ಅನುಸಂಧಾನಗೊಳಿಸಿದರು. ತಮ್ಮ ಹೋರಾಟದ ಗುರಿಯು ಸ್ಪಷ್ಟವಾಗಿದ್ದರಿಂದ ಇಂತಹ ದಾರ್ಶನಿಕರ ವಿಚಾರಗಳನ್ನು ಮುಕ್ತವಾಗಿ ಸ್ವೀಕರಿಸಿದರು. ಇದರಿಂದ ಬಾಬಾಸಾಹೇಬರು ದಲಿತರಿಗೆ ಸ್ವಾಭಿಮಾನದ ಬದುಕನ್ನು ನೀಡಬಹುದಾದ ಬೌದ್ಧಧರ್ಮವನ್ನು ಸ್ವೀಕರಿಸಿದರು ಎಂಬುದು ಇವರ ನಿಲುವಾಗಿದೆ.

ಕನ್ನಡದ ದಲಿತ ಚಿಂತಕರಾದ ಕೆ.ಬಿ.ಸಿದ್ಧಯ್ಯನವರು ಬಾಬಾಸಾಹೇಬ ಅಂಬೇಡ್ಕರ್ ವಿಚಾರಗಳಲ್ಲಿ ಅಂತರ್ಗವಾಗಿರುವ ಬೌದ್ಧ ತತ್ವ ಚಿಂತನೆಗಳನ್ನು ಪ್ರಜಾಪ್ರಭುತ್ವದ ನೆಲೆಯಲ್ಲಿ ಗುರುತಿಸಿದ್ದಾರೆ. ಇವರು ಅಂಬೇಡ್ಕರ್ ಚಿಂತನೆಗಳಲ್ಲಿ ಗುರುತಿಸುವ ಬುದ್ಧನ ಜೀವಪರ ಮತ್ತು ಜನಪರವಾದ ದರ್ಶನಿಕ ನೆಲೆಗಳು ಹೀಗಿವೆ; "ಅಂಬೇಡ್ಕರ್ ಚಿಂತನೆಗಳು ಇವತ್ತು ಜಗತ್ತಿನ ಭಾಗವಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಅವರ ಜೀವಪರ ತತ್ವಗಳಾದ ಸ್ವಾತಂತ್ರ್ಯ, ಸಹೋದರತೆ, ಸಮಾನತೆ ಇವು ಸಹಜವಾಗಿ ಬುದ್ಧನಿಂದ ಪಡೆದವು. ಬುದ್ಧನ ಅಹಿಂಸೆ, ಕರುಣೆ, ಪ್ರೀತಿ ಇಂದು ಜಗತ್ತಿಗೆ ಎಷ್ಟು ಅನಿವಾರ್ಯವಾಗಿದೆಯೋ ಅಷ್ಟೇ ಮುಖ್ಯ ಅಂಬೇಡ್ಕರ್ ಚಿಂತನೆಗಳು. ಇಂದು ಪ್ರಪಂಚದಲ್ಲಿ ಎಲ್ಲೆಲ್ಲಿ ಪ್ರಜಾಪ್ರಭುತ್ವ ಜಾರಿಯಲ್ಲಿದೆಯೋ, ಎಲ್ಲಿಯವರೆಗೆ ಪ್ರಜಾಪ್ರಭುತ್ವದ ಉಸಿರಾಟವಿದೆಯೋ ಅಲ್ಲಿಯವರೆಗೆ ಅಂಬೇಡ್ಕರ್ ಮುಖ್ಯವಾಗುತ್ತಾರೆ."[೯] ಸಿದ್ಧಯ್ಯನವರ ಈ ಚಿಂತನೆಗಳು ಅಂಬೇಡ್ಕರ್ ಅವರು ಬೌದ್ಧ ತಾತ್ವಿಕತೆಯ ಅಡಿಯಲ್ಲಿ ರೂಪಿಸಿದ ಸಂವಿಧಾನದ ಮಹತ್ವವನ್ನು ಮುನ್ನೆಲೆಗೆ ತರುತ್ತವೆ. ಆ ಮೂಲಕ ಭಾರತದ ಸಂವಿಧಾನ ಮತು ಬೌದ್ಧ ದರ್ಶನವನ್ನು ಅನುಸಂಧಾನಗೊಳಿಸುವ ಚಿಂತನೆಗಳು ಇಲ್ಲಿ ಕಂಡುಬರುತ್ತವೆ.

ಬೌದ್ಧ ಸಾಹಿತಿಗಳೂ, ಸಂಶೂಧಕರೂ ಆದ ಬುದ್ಧಘೋಷ ದೇವೇಂದ್ರ ಹೆಗ್ಗಡೆ ಅವರು ಅಂಬೇಡ್ಕರ್ ಚಿಂತನೆಗಳಲ್ಲಿ ನೆಲೆಯೂರಿರುವ ಬೌದ್ಧ ನೆಲೆಗಳನ್ನು ಸಮಕಾಲೀನ ತಲ್ಲಣಗಳೊಂದಿಗೆ ಮುಖಾಮುಖಿಯಾಗಿಸುತ್ತಾರೆ. ದಲಿತರ ಪ್ರಗತಿಗಾಗಿ ಬೌದ್ಧಧರ್ಮವನ್ನು ಆಧಾರವಾಗಿಟ್ಟುಕೊಂಡು ಸ್ವಾಭಿಮಾನದ ಬದುಕಿಗಾಗಿ ಹೋರಾಟ ನಡೆಸಿದ ಬಾಬಾಸಾಹೇಬರ ಕನಸನ್ನು ಸಾಕಾರಗೊಳಿಸುವ ನೆಲೆಯಲ್ಲಿ ಹೆಗ್ಗಡೆಯವರು ಪ್ರತಿಪಾದಿಸುವ ನಿಲುವುಗಳು ಹೀಗಿವೆ; "ಭವಿಷ್ಯದಲ್ಲಿ ಬಾಬಾಸಾಹೇಬ ಅಂಬೇಡ್ಕರ್ ಕನಸಿನ ಪ್ರಬುದ್ಧ ಭಾರತ ಸಾಕಾರಗೊಳ್ಳಬೇಕಾದರೆ, ದಲಿತರು ಅಂಬೇಡ್ಕರ್‌ರವರನ್ನು

ತಮ್ಮ ಸಂಕುಚಿತ ಸ್ವಾರ್ಥಕ್ಕೆ ಸಾಧನವಾಗಿ ಬಳಸುವುದನ್ನು ಬಿಟ್ಟು, ಆತ್ಮಸಾಕ್ಷಿಗೆ ತಲೆ ಭಾಗಿ, ಪ್ರಾಮಾಣಿಕವಾಗಿ ಧಮ್ಮ ಚಳವಳಿ ಮುನ್ನಡೆಸಬೇಕಾಗಿದೆ. ಧಮ್ಮ ಜಾಗೃತಿ, ಧಮ್ಮ ದೀಕ್ಷಾ, ಪ್ರಜ್ಞಾ, ಶೀಲ, ಸಂಸ್ಕಾರಯುತ ಬದುಕಿನ ಮಾರ್ಗ ನಮ್ಮದಾಗಬೇಕಿದೆ. ನಾವು ಬೌದ್ಧರೆಂದು ಸರ್ಕಾರಿ ದಾಖಲೆಗಳಲ್ಲಿ ದಾಖಲಿಸಬೇಕಾಗಿದೆ. ನವಬೌದ್ಧ ಅಥವಾ ಬೌದ್ಧರೆಂದು ದಾಖಲಿಸಿದ ಎಲ್ಲರಿಗೂ ಪ. ಜಾತಿ ಪ್ರಮಾಣಪತ್ರ ಆನ್‌ಲೈನ್‌ನಲ್ಲಿ ದೊರೆಯಬೇಕು. ಹಾಲಿ ಇರುವ ಪ. ಜಾತಿ ಪಟ್ಟಿಯಲ್ಲಿ ೧೦೧ರ ಜೊತೆ ೧೦೨ ನವಬೌದ್ಧ, ಬೌದ್ಧ ಎಂದು ಸೇರಿಸಿ ಪರಿಷ್ಕೃತ ಪಟ್ಟಿ ಪ್ರಕಟಿಸಬೇಕು. ಅದುವೇ ನಾವು ಮತ್ತು ನಮ್ಮ ಸರ್ಕಾರ ಅಂಬೇಡ್ಕರ್‌ರರಿಗೆ ಸಲ್ಲಿಸುವ ಅರ್ಥಪೂರ್ಣ ಗೌರವವಾಗಿದೆ"[೧೦] ಎಂಬುದಾಗಿ ತಮ್ಮ ಚಿಂತನೆಗಳನ್ನು ಅಭಿವ್ಯಕ್ತಿಸಿದ್ದಾರೆ. ಇಲ್ಲಿ ದೇವೇಂದ್ರ ಹೆಗ್ಗಡೆಯವರು ಪ್ರಜಾಪ್ರಭುತ್ವ ನೆಲೆಯಲ್ಲಿ ಬಾಬಾಸಾಹೇಬರು ರೂಪಿಸಿದ ಸಾಂವಿಧಾನಿಕ ನೆಲೆಯಲ್ಲಿ ಬೌದ್ಧಧರ್ಮವನ್ನು ಸೇರಿದ ದಲಿತರಿಗೆ ಸಲ್ಲಬೇಕಾದ ಸವಲತ್ತುಗಳ ಕುರಿತು ತಮ್ಮ ಚಿಂತನೆಗಳನ್ನು ಮಂಡಿಸಿದ್ದಾರೆ. ಈ ಚಿಂತನೆಗಳು ಬಾಬಾಸಾಹೇಬರು ಕಂಡ ದಲಿತರ ಬದುಕಿನ ಆಶಾ ಕಿರಣಗಳಾಗಿದ್ದವು. ಆದರೆ ಇಂದಿನ ಸರ್ಕಾರಗಳು ದಲಿತರನ್ನು ಹತ್ತಿಕ್ಕುವ ನೆಲೆಯಲ್ಲಿ ರೂಪಿಸುತ್ತಿರುವ ಕಾನೂನಾತ್ಮಕ ನಿಲುವುಗಳನ್ನು ಪರೋಕ್ಷವಾಗಿ ವಿರೋಧಿಸವ ನೆಲೆಯಲ್ಲಿ ಇವರ ಚಿಂತನೆಗಳು ಗೋಚರವಾಗುತ್ತವೆ.

ನಟರಾಜ್ ಹುಳಿಯಾರ್ ಅವರು ಅಂಬೇಡ್ಕರ್ ಸ್ವೀಕರಿಸಿದ ಬೌದ್ಧಧರ್ಮವನ್ನು ದಲಿತರ ಬಿಡುಗಡೆಯ ಭಾಗವಾಗಿಯೇ ಗ್ರಹಿಸಿದ್ದಾರೆ. ಸಮಕಾಲೀನ ಸಂದರ್ಭದ ದಲಿತ ವಿಮೋಚನ ಸಂಘಟನೆ ಹಾಗೂ ಚಳವಳಿಗೆ ಬಾಬಾಸಾಹೇಬರು ರೂಪಿಸಿಕೊಟ್ಟ ಬೌದ್ಧಧರ್ಮದ ಅಗತ್ಯವನ್ನು ಇಲ್ಲಿ ಎತ್ತಿಹಿಡಿದಿದ್ದಾರೆ. "ಅಂಬೇಡ್ಕರ್‌ವಾದಿ ಸಮಾಜಿಕ ಚಿಂತನೆ ಹಾಗೂ ಅಂಬೇಡ್ಕರ್ ಅವರ ಬೌದ್ಧ ವ್ಯಾಖ್ಯಾನಗಳೆರಡೂ ಇಂದಿನ ಭಾರತೀಯ ಚಿಂತನೆಯ ಬಹುಮುಖ್ಯ ಧಾರೆಯನ್ನು ರೂಪಿಸತೊಡಗಿವೆ. ಹಾಗೆಯೇ ಅಂಬೇಡ್ಕರ್ ಅವರ ಬೌದ್ಧಧರ್ಮ ಸ್ವೀಕಾರದ ಮಾರ್ಗ ಕೂಡ ವ್ಯಾಪಕವಾಗಿ ಹಬ್ಬತೊಡಗಿದೆ. ಭಾರತದ ದಲಿತ ಚಳುವಳಿಯಲ್ಲಿ ಅಂಬೇಡ್ಕರ್‌ವಾದ ಹಾಗೂ ಬೌದ್ಧಧಮ್ಮಗಳು ಪರಸ್ಪರ ಬೆರೆತುಹೋಗಿವೆ. ದಲಿತರು ತಮ್ಮ ಮೇಲೆ ಹೇರಲಾದ ಕೀಳರಿಮೆಯನ್ನು ಬೌದ್ಧಧಮ್ಮದ ಮೂಲಕ ಮೀರಲೆತ್ನಿಸಿದ್ದಾರೆ. ಅಸ್ಪೃಶ್ಯತೆಯ ಅವಮಾನದಿಂದ ಕುಗ್ಗಿಹೋದ ದಲಿತರ ದೇಹ ಹಾಗೂ ಚೈತನ್ಯಗಳನ್ನು ಬಿಡುಗಡೆಗೊಳಿಸದಿದ್ದರೆ ಆ ಮನಸ್ಸುಗಳಲ್ಲಿ ಯಾವ ಉತ್ಸಾಹವೂ ಹುಟ್ಟುವುದಿಲ್ಲ; ಮನಸ್ಸಿನಲ್ಲಿ ಉತ್ಸಾಹ ಉಕ್ಕದೆ ಪ್ರಗತಿಯಿಲ್ಲ ಎಂಬುದನ್ನು ಅಂಬೇಡ್ಕರ್ ಅವರು ಸ್ಪಷ್ಟವಾಗಿ ಅರಿತಿದ್ದರು."[೧೧] ಈ ಕಾರಣದಿಂದಾಗಿ ಬೌದ್ಧಧರ್ಮವನ್ನು ವಿಮೋಚನೆ ಹಾಗೂ ಬಿಡುಗಡೆಯ ಭಾಗವಾಗಿ ಸ್ವೀರಿಸಿದರು ಎಂಬುದನ್ನು ನಟರಾಜ್ ಹುಳಿಯಾರ್ ಅವರು ತಮ್ಮ ಚಿಂತನೆಗಳಲ್ಲಿ ಗ್ರಹಿಸಿದ್ದಾರೆ. ಇವರು ಬಾಬಾಸಾಹೇಬರ ಈ ಬೌದ್ಧ ಚಿಂತನೆಯ ಆಯಾಮವನ್ನು ದಲಿತರ ಅಸ್ತಿತ್ವದ ಹೋರಾಟ ಹಾಗೂ ವಿಮೋಚನೆಯ ಭಾಗವಾಗಿ ಗ್ರಹಿಸಿದ್ದಾರೆ. ಹೀಗೆ ಕನ್ನಡದ ಹಲವಾರು ಪ್ರಗತಿಪರ ಚಿಂತಕರು ಬಾಬಾಸಾಹೇಬರು ಸ್ವೀಕರಿಸಿದ ಬೌದ್ಧಧರ್ಮದ ಕುರಿತು ಸಹಮತವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಕೆಲವು ಸನಾತನವಾದಿ ಚಿಂತಕರು ಬಾಬಾಸಾಹೇಬರು ಸ್ವೀಕರಿಸಿದ ಬೌದ್ಧ

ನಿಲುವುಗಳನ್ನು ವಿರೋಧಿಸುವ ಮತ್ತು ಅವರ ಒಲವು ಹಿಂದುತ್ವದ ಪರವಾಗಿತ್ತೆಂಬ ಚಿಂತನೆಗಳನ್ನು ಪ್ರತಿಪಾದಿಸುವತ್ತ ತಮ್ಮ ವಿಚಾರಗಳ ಪ್ರಚಾರಕ್ಕೆ ಮುಂದಾಗಿರುವುದು ಕಂಡುಬರುತ್ತದೆ.

ಮರಾಠಿ ಲೇಖಕರಾದ ದತ್ತೋಪಂತ ಠೇಂಗಡಿಯವರು ಬೌದ್ಧದರ್ಶನವನ್ನು ಅಂಬೇಡ್ಕರರ ವಿಚಾರಗಳ ನೆಲೆಯಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರಾದ ಇವರು, ಹಿಂದುತ್ವದ ನೆಲೆಯೊಳಗೆ ತಮ್ಮ ವಾದವನ್ನು ಮಂಡಿದ್ದಾರೆ. ಬುದ್ಧ ಮತ್ತು ಅಂಬೇಡ್ಕರರ ವಿಚಾರಧಾರೆಗಳನ್ನು ಹಿಂದುಧರ್ಮದ ಚೌಕಟ್ಟಿನಲ್ಲಿ ಬಿಂಬಿಸಿದ್ದಾರೆ. ಇವರ ದೃಷ್ಟಿಯಲ್ಲಿ ಅಂಬೇಡ್ಕರ್ ಕೈಗೊಂಡ ಮತಾಂತರದ ಸ್ವರೂಪವು ಹಿಂದೂಧರ್ಮದ ವಿರುದ್ಧವಾಗಿ ಕಂಡುಬರುವುದಿಲ್ಲ. ಹಾಗೆಯೇ ಅಂಬೇಡ್ಕರರಿಗೆ ಹಿಂದುಧರ್ಮದ ಬಗ್ಗೆ ವಿರೋಧವಿರಲಿಲ್ಲ. ಅಸ್ಪೃಶ್ಯತೆಯನ್ನು ತೊಡೆಯಲು ಮಾತ್ರ ಮತಾಂತರ ಸೂಕ್ತವೆಂದು ಅಂಬೇಡ್ಕರ್ ಬಗೆದಿದ್ದರು ಎಂಬುದು ಇವರ ನಿಲುವಾಗಿದೆ. ಅಂಬೇಡ್ಕರರಿಗೆ "ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಮತಾಂತರಗೊಳ್ಳುವುದೇನೋ ಸರಳವಾದ ರೀತಿ. ಆದರೆ ಅಸ್ಪೃಶ್ಯರಿಗೆ ಬೇಕಾದುದು ಅನ್ಯಮತವನ್ನು ಸ್ವೀಕರಿಸಿ ಹಿಂದುಧರ್ಮವನ್ನು ದುರ್ಬಲಗೊಳಿಸುವುದಲ್ಲ; ಬದಲಾಗಿ ಅದರಲ್ಲೇ ಉಳಿದು, ತಮ್ಮೆಲ್ಲ ಶಕ್ತಿ ತೊಡಗಿಸಿ ತಮಗೆ ಬೇಕಾದ ಮಾನವಾಧಿಕಾರಗಳನ್ನು ಗಳಿಸಬೇಕೆನ್ನುವುದು."[೧೨] ಆದ ಕಾರಣ ಬಾಬಾಸಾಹೇಬರು ಹಿಂದೂಧರ್ಮದ ಭಾಗವಾದ ಬೌದ್ಧಧರ್ಮಕ್ಕೆ ಅನಿವಾರ್ಯ ಕಾರಣಗಳಿಂದ ಮತಾಂತರಗೊಂಡರು ಎಂಬುದು ಇವರ ವಾದವಾಗಿದೆ.

ಠೇಂಗಡಿಯವರು ಅಂಬೇಡ್ಕರರ ಉದಾರವಾದಿ ನಿಲುವುಗಳನ್ನು ವ್ಯಕ್ತಪಡಿಸುತ್ತಲೇ, ಅಂಬೇಡ್ಕರರನ್ನು ಹಿಂದುತ್ವದ ಚೌಕಟ್ಟಿನಲ್ಲಿ ತಂದು ನಿಲ್ಲಿಸುತ್ತಾರೆ. ಸ್ವತಃ ಅಂಬೇಡ್ಕರರೇ "ನಾನೋರ್ವ ಹಿಂದುಧರ್ಮದ ಶತ್ರು, ವಿಧ್ವಂಸಕ ಇತ್ಯಾದಿ ಮಾತುಗಳು ನನ್ನನ್ನು ಟೀಕಿಸುವವರು ಹೇಳುವಂತಹವು. ಆದರೆ ನಾನು ಹಿಂದೂ ಸಮಾಜವನ್ನು ಉಳಿಸಿದವನು ಎಂದು ಜನರು ತಿಳಿಯುವಂತಹ ದಿನಗಳೂ ಮುಂದೆ ಬರಲಿವೆ ಹಾಗೂ ಆಗ ಅವರೇ ನನಗೆ ಅಭಾರ ಸಲ್ಲಿಸುವವರೂ ಇದ್ದಾರೆ ಎಂದು ಹೇಳಿದ್ದು ಉಂಟು."[೧೩] ಇಲ್ಲಿ ಸೂಕ್ಷ್ಮವಾಗಿ ಅಂಬೇಡ್ಕರರ ವಿಚಾರಗಳನ್ನು ಹಿಂದುತ್ವದ ತೆಕ್ಕೆಯೊಳಗೆ ವಿಲೀನಗೊಳಿಸುವ ನೆಲೆಗಳು ಇವರ ವಿಚಾರಗಳಲ್ಲಿ ಕಂಡುಬರುತ್ತವೆ.

ಬಾಬಾಸಾಹೇಬರು ಬೌದ್ಧಧರ್ಮವನ್ನು ಸೇರುವ ನಿರ್ಧಾರ ಕೈಗೊಂಡಾಗ ಅವರಲ್ಲಿ ಆತಂಕ ಭಾವವಿತ್ತು. ತನ್ನ ನಿರ್ಧಾರದಿಂದ ಹಿಂದೂ ಸಮಾಜಕ್ಕೆ ಹಾನಿಯಾಗಲಿದೆ ಎಂಬ ವಿಷಯದಲ್ಲಿ ಡಾ.ಅಂಬೇಡ್ಕರರಿಗೂ ಖೇದವಿತ್ತು. ಮತಾಂತರಗೊಳ್ಳುವ ವಿಚಾರದಲ್ಲಿ ಅವರು ಖುಷಿಯಾಗಿದ್ದರೆಂದಲ್ಲ ಎಂಬುದಾಗಿ ತಿಳಿಸುತ್ತಾರೆ. ಇಲ್ಲಿ ಹಿಂದುತ್ವದ ವಿರುದ್ಧ ಬಂಡಾಯ ಹೂಡಿದ ಬಾಬಾಸಾಹೇಬರನ್ನು ತನ್ನ ತೆಕ್ಕೆಯೊಳಗೆ ಬಂಧಿಸುವಂತಹ ಸೂಕ್ಷ್ಮ ವಿಚಾರಗಳು ಇವರಲ್ಲಿ ಕಂಡುಬರುತ್ತವೆ. ಇವರು ಬೌದ್ಧಧರ್ಮವನ್ನು ಹಾಗೂ ಅಂಬೇಡ್ಕರರ ವಿಚಾರಗಳನ್ನು ಹಿಂದೂಧರ್ಮದ ವ್ಯಾಪ್ತಿಯೊಳಗೆ ಸೀಮಿತಗೊಳಿಸುವ ನೆಲೆಯಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ.

೩. ಕನ್ನಡದ ನವಬೌದ್ಧ ಚಿಂತನೆಗಳು

ಕರ್ನಾಟಕದಲ್ಲಿ ಬಂಡಾಯ ಹಾಗೂ ದಲಿತ ಸಾಹಿತ್ಯದ ಅಡಿಯಲ್ಲಿ ಜನ್ಮತಳೆದ ಅಂಬೇಡ್ಕರ್ ನೆಲೆಯ ಬೌದ್ಧ ಚಿಂತನೆಗಳನ್ನು ನವಬೌದ್ಧ ಚಿಂತನೆಯ ವ್ಯಾಪ್ತಿಯೊಳಗೆ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅದಕ್ಕಿಂತ ಪೂರ್ವದ ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ವಿಚಾರಗಳು ಈ ನವಬೌದ್ಧ ಚಿಂತನೆಯ ವ್ಯಾಪ್ತಿಗೆ ಒಳಪಡುವುದಿಲ್ಲ. ಕನ್ನಡದಲ್ಲಿ ಬೌದ್ಧಧರ್ಮದ ಕುರಿತಾದ ವೈಚಾರಿಕ ಹಾಗೂ ಜಾಗೃತ ಪರಿಕಲ್ಪನೆಯೊಂದು ನೆಲೆಗೊಂಡಿರುವುದು ಬಾಬಾಸಾಹೇಬರ ವಿಚಾರಗಳಿಂದ. ಬಾಬಾಸಾಹೇಬ ಅಂಬೇಡ್ಕರ್ ಹಿಂದೂಧರ್ಮದ ಅಸಮಾನತೆಯನ್ನು ವಿರೋಧಿಸುವ ಮೂಲಕ ಈ ನಾಡಿನ ಮಣ್ಣಿನಲ್ಲಿ ಜನ್ಮತಳೆದು, ಈ ನಾಡಿನ ತಳಸಮುದಾಯಗಳ ಪರವಾಗಿ ತುಡಿದ ಬೌದ್ಧಧರ್ಮಕ್ಕೆ ಮತಾಂತರ ಹೊಂದಿದರು. ೧೯೫೬ ಅಕ್ಟೋಬರ್ ೧೪ ರಂದು ಬಾಬಾಸಾಹೇಬರು ತಮ್ಮ ಲಕ್ಷಾಂತರ ಅನುಯಾಯಿಗಳೊಂದಿಗೆ ದಲಿತರಿಗೆ ವೈಚಾರಿಕ ನೆಲೆಯೊಂದನ್ನು ಕಲ್ಪಿಸಿಕೊಡುವ ನೆಲೆಯಲ್ಲಿ ಬೌದ್ಧಧರ್ಮವನ್ನು ಸ್ವೀಕರಿಸಿದರು. ಬಾಬಾಸಾಹೇಬರ ಈ ಕ್ರಿಯೆಯು ಯಾವುದೋ ಅನ್ಯಧರ್ಮಕ್ಕೆ ಹೊಸದಾಗಿ ಪ್ರವೇಶವನ್ನು ಪಡೆದುದಾಗಿರಲಿಲ್ಲ. ತನ್ನ ಮನೆಗೆ ಮರಳಿದ ಸ್ವರೂಪದ್ದಾಗಿತ್ತು. ಬಾಬಾಸಾಹೇಬರು ಬೌದ್ಧಧರ್ಮವನ್ನು ಅಧಿಕೃತವಾಗಿ ಸ್ವೀಕರಿಸಿದ ತರುವಾಯದಿಂದ ಈ ನೆಲೆಯಲ್ಲಿ ಹಲವಾರು ಪ್ರಗತಿಪರ ವಿಚಾರವಾದಿಗಳು ತಮ್ಮ ಚಿಂತನೆಗಳನ್ನು ವ್ಯಕ್ತಡಿಸುತ್ತ ಬಂದಿದ್ದಾರೆ. ಈ ಚಿಂತನ ಧಾರೆಗಳು ಬ್ರಾಹ್ಮಣ ಧರ್ಮಕ್ಕೆ ಪರ್ಯಾಯವಾಗಿ ಬೌದ್ಧಧರ್ಮವನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿವೆ. ಅಂಬೇಡ್ಕರ್ ಅವರ ಮಾರ್ಗದರ್ಶನದಲ್ಲಿ ಮುನ್ನೆಡೆಯುತ್ತಿರುವ ಕರ್ನಾಟಕದ ಪ್ರಗತಿಪರ ವಿಚಾರವಾದಿಗಳು ಬೌದ್ಧದರ್ಶನವನ್ನು ಪ್ರಮುಖ ಕೇಂದ್ರವಾಗಿಟ್ಟುಕೊಂಡು ಸಾಮಾಜಿಕ ಅಸಮಾನತೆಯನ್ನು ವಿರೋಧಿಸುವ ಮೂಲಕ, ಸಮಾನತೆ, ಸ್ವಾಭಿಮಾನವನ್ನು ಪ್ರತಿಪಾದಿಸುವ ನೆಲೆಯಲ್ಲಿ ತಮ್ಮ ಧೋರಣೆಗಳನ್ನು ಪ್ರಕಟಿಸುತ್ತ ಬಂದಿದ್ದಾರೆ. ಇವುಗಳನ್ನು ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ನವಬೌದ್ಧ ಚಿಂತನೆಗಳು ಎಂಬುದಾಗಿ ಗುರುತಿಸಿಕೊಳ್ಳಲಾಗಿದೆ.

ನವ ಬೌದ್ಧ ಚಿಂತನೆ ಪ್ರಸ್ತುತತೆ: ಸಮಸ್ಯೆ ಮತ್ತು ಸವಾಲು

ಭಾರತದ ಚರಿತ್ರೆಯುದ್ದಕ್ಕೂ ಮತಾಂತರ ಪ್ರಕ್ರಿಯೆಗೆ ಚಾರಿತ್ರಿಕ ಇತಿಹಾಸವಿದೆ. ಇದಕ್ಕೆ ಹಲವಾರು ಕಾರಣಗಳಿವೆ. ಕೆಲವೊಂದು ಸಂದರ್ಭದಲ್ಲಿ ತಮ್ಮ ಸಾಮ್ರಾಜ್ಯದ ರಾಜರು ಒಂದು ಧರ್ಮವನ್ನು ತೊರೆದು ಮತ್ತೊಂದು ಧರ್ಮವನ್ನು ಆಶ್ರಯಿಸಿದಾಗ ಅಲ್ಲಿನ ಪ್ರಜೆಗಳು ಸಹ ರಾಜನೊಂದಿಗೆ ಮತಾಂತರಗೊಳ್ಳುತ್ತಿದ್ದರು. ಕೆಲವು ರಾಜರು ಮತ್ತು ಸಾಮ್ರಾಜ್ಯಶಾಹಿಗಳು ಬಲವಂತದಿಂದ ಹಾಗೂ ಅಧಿಕಾರ, ಹಣದ ಆಮಿಷವೊಡ್ಡಿ ಜನತೆಯನ್ನು ಮತಾಂತರಕ್ಕೆ ಗುರಿಪಡಿಸುತ್ತಿದ್ದರು. ಮತ್ತೇ ಕೆಲವರು ಒಂದು ಧರ್ಮದಲ್ಲಿನ ಅಸಮಾನತೆ, ಮೌಢ್ಯ, ಕಂದಾಚಾರಗಳಿಂದ ಬೇಸತ್ತು ಪರ್ಯಾಯ ಧರ್ಮಗಳತ್ತ ಮುಖಮಾಡಿದ್ದಾರೆ. ಭಾರತದಲ್ಲಿ ವೈದಿಕಧರ್ಮದ ಅಸಮಾನತೆ, ಅಸ್ಪೃಶ್ಯತೆಯಂತಹ ಬಂಧನದಿಂದ ಬಿಡುಗಡೆಯನ್ನು ಬಯಸಿ ಇಂದು ತಳಸಮುದಾಯಗಳು ಇತರೆ ಧರ್ಮಗಳಿಗೆ

ಮೊರೆ ಹೋಗುತ್ತಿದ್ದಾರೆ. ಇಂತಹ ಮತಾಂತರ ಪ್ರಕ್ರಿಯೆಗೆ ಮುಂದಾದ ಧರ್ಮಗಳಲ್ಲಿ ಬೌದ್ಧಧರ್ಮವು ಒಂದಾಗಿದೆ. ಬೌದ್ಧಧರ್ಮವು ಹಿಂದೂಧರ್ಮದ ಅಸಮಾತೆಯ ವಿರುದ್ಧ ಜನ್ಮತಳೆದ ಒಂದು ಪರ್ಯಾಯ ಧರ್ಮವಾಗಿದೆ. ಇಲ್ಲಿ ಅಸಮಾನತೆ, ಅಸ್ಪೃಶ್ಯತೆಗೆ ಅವಕಾಶವಿಲ್ಲವೆಂಬುದನ್ನರಿತು ಬಹುತೇಕ ಬುದ್ಧಿಜೀವಿಗಳು ಈ ಧರ್ಮದತ್ತ ಮುಖಮಾಡುತ್ತಿದ್ದಾರೆ.

ಬಾಬಾಸಾಹೇಬ್ ಅಂಬೇಡ್ಕರ್ ಅವರ ಅವಿರತ ಪರಿಶ್ರಮದ ಫಲವಾಗಿ ಭಾರತದ ತವರು ಧರ್ಮವಾದ ಬೌದ್ಧಧರ್ಮವು ತನ್ನ ತಾಯ್ನಾಡಿನಲ್ಲಿ ಮರುಹುಟ್ಟು ಪಡೆದುಕೊಂಡಿದೆ. ಬಾಬಾಸಾಹೇಬರು ಭಾರತದ ಸಂವಿಧಾನ ರಚನೆಯಷ್ಟೇ ಮಹತ್ವಪೂರ್ಣ ಕೆಲಸ ಕೈಗೊಂಡಿರುವುದೆಂದರೆ ಅದು ಈ ನಾಡಿನ ದಲಿತ ಪರವಾದ ಧಮ್ಮವನ್ನು ಪರಿಚಯಿಸಿರುವುದು. ಜಾತಿ ತಾರತಮ್ಯವುಳ್ಳ ಹಿಂದೂ ಮೂಲಭೂತವಾದದಿಂದ ಬಿಡುಗಡೆ ಪಡೆಯುವ ಸಲುವಾಗಿ ಜಗತ್ತಿನ ಎಲ್ಲಾ ಧರ್ಮಗಳನ್ನು ಅಧ್ಯಯನ ಮಾಡಿ, ಚರಿತ್ರೆಯಲ್ಲಿ ಈ ನಾಡಿನ ದಲಿತರ ಪರವಾಗಿ ಹೋರಾಟ ನಡೆಸಿದ ಬೌದ್ಧಧರ್ಮಕ್ಕೆ ತಮ್ಮ ಲಕ್ಷಾಂತರ ಅನುಯಾಯಿಗಳೊಂದಿಗೆ ಮತಾಂತರಗೊಂಡರು. “ಮತಾಂತರವೆಂದರೆ ಒಂದು ಸಂಸ್ಕೃತಿಯನ್ನು ಬಿಟ್ಟು ಇನ್ನೊಂದು ಸಂಸ್ಕೃತಿಗೆ ಗುಲಾಮರಾಗುವುದಲ್ಲ. ನಮ್ಮ ಸಂಸ್ಕೃತಿಗೆ ಹತ್ತಿರವಾದ ಮತದೊಡನೆ ನಮ್ಮನ್ನು ಗುರುತಿಸಿಕೊಳ್ಳುವುದು”[೧೪] ಎಂಬುದನ್ನು ಅರಿತ ಬಾಬಾಸಾಹೇಬರು ತಮ್ಮ ಚಾರಿತ್ರಿಕ ಧರ್ಮಕ್ಕೆ ಮರಳಿದರು. ಇವರು ಬೌದ್ಧಧರ್ಮಕ್ಕೆ ಮರಳುವ ಪೂರ್ವದಲ್ಲಿ ಇದರ ಬಗ್ಗೆ ಸಂಪೂರ್ಣವಾಗಿ ಅರಿತಿದ್ದರು. ಭಾರತದ ಚರಿತ್ರೆಯಲ್ಲಿ ದಲಿತರಿಗೆ ಭವ್ಯ ಇತಿಹಾಸವಿರುವುದನ್ನು, ಈ ದಲಿತ ರಾಜ ಮನೆತನಗಳು ಬೌದ್ಧಧರ್ಮವನ್ನು ಸ್ವೀಕರಿಸಿದ ಕಾರಣ ಹಿಂದೂ ಮೂಲಭೂತವಾದಿಗಳ ಕ್ರೌರ್ಯಕ್ಕೆ ಗುರಿಯಾಗಿ, ಈ ನಾಡಿನ ಮೂಲ ನಿವಾಸಿಗಳು ದಾಸ್ಯಕ್ಕೆ ಗುರಿಯಾದ ಬಗೆಯನ್ನು ಅಂಬೇಡ್ಕರರು ಸಂಪೂರ್ಣವಾಗಿ ಅರಿತಿದ್ದರು. ಆದ್ದರಿಂದ ತಾವು ಚರಿತ್ರೆಯಲ್ಲಿ ಕಳೆದುಕೊಂಡಿರುವ ಅಸ್ಮಿತೆಯನ್ನು ಮರಳಿ ಪಡೆಯಲು ಬೌದ್ಧಧರ್ಮವನ್ನು ಆಯ್ಕೆ ಮಾಡಿಕೊಂಡರು.

ಬಾಬಾಸಾಹೇಬರಿಗಿಂತ ಪೂರ್ವದಲ್ಲಿ ಹಲವಾರು ಚಿಂತಕರು ಈ ನಾಡಿನ ಮೂಲ ಧರ್ಮದ ಕುರಿತಾಗಿ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸಿದ್ದಾರೆ. ತಮಿಳುನಾಡಿನಲ್ಲಿ ಮೊಟ್ಟ ಮೊದಲ ಬಾರಿಗೆ ಬೌದ್ಧಧರ್ಮಕ್ಕೆ ಮತಾಂತರ ಹೊಂದಿ, ಬುದ್ಧ ಮಿಷನರಿಯನ್ನು ಸ್ಥಾಪಿಸಿದ ಪಂಡಿತ ‘ಸಿ. ಆಯೋಥಿದಾಸ’ ಅವರು ಬುದ್ಧನ ಕುಲದೊಂದಿಗೆ ‘ಪರಿಯ’ ಜನಾಂಗದ ನೆಲೆಗಳನ್ನು ಕಟ್ಟುತ್ತಾರೆ. ಸಾಕ್ಯ ಕುಲದ ಜನರು ದಕ್ಷಿಣಕ್ಕೆ ಬಂದು ಇಲ್ಲಿ ಶೋಷಿತರಾಗಿ ‘ಪರಿಯ’ ಜನಾಂಗವಾಗಿ ಮಾರ್ಪಟ್ಟಿದೆ. ಅಶೋಕನ ಕಾಲದಿಂದಲೂ ನಾವು ಬೌದ್ಧರಾಗಿದ್ದೇವೆ. ನಮ್ಮ ಧರ್ಮವನ್ನು ನಾವು ಮರಳಿ ಪಡೆಯುವಲ್ಲಿ ನಮಗೆ ಸಹಕರಿಸಿ ಎಂದು ಅವರು ಶ್ರೀಲಂಕಾದ ಬೌದ್ಧವಿಹಾರಗಳಲ್ಲಿನ ಹಿರಿಯ ಬೌದ್ಧಭಿಕ್ಕುಗಳಿಗೆ ಮನವಿ ಮಾಡಿಕೊಳ್ಳುತ್ತಾರೆ. ಇವರ ಮಾರ್ಗದರ್ಶನದಲ್ಲಿಯೂ ಇಂದು ದಿನದಿಂದ ದಿನಕ್ಕೆ ಬೌದ್ಧಧರ್ಮೀಯರ ಸಂಖ್ಯೆಯು ತಮಿಳುನಾಡಿನಲ್ಲಿ ಅಧಿಕವಾಗುತ್ತಿದೆ. ಬೌದ್ಧಧರ್ಮಕ್ಕೆ ಮತಾಂತರಗೊಳ್ಳುವ ಈ ಪ್ರಕ್ರಿಯೆಯು ಇವರಿಗೆ ಪರಕೀಯವಾಗುವುದಿಲ್ಲ. ತಮ್ಮ ಮೂಲ ಪರಂಪರೆಯೊಂದಿಗೆ ಸಂಗಮಿಸಿದಂತಾಗಿದೆ. ತಮ್ಮ ವಿಮೋಚನೆಗಾಗಿ ತಮ್ಮದೆ ಆದ ಧರ್ಮದ

ಮೂಲಕ ಅಸ್ತಿತ್ವವನ್ನು ರೂಪಿಸಿಕೊಳ್ಳುತ್ತಿದ್ದಾರೆ. ತಮಿಳುನಾಡಿನ ಅಸ್ಪೃಶ್ಯರಲ್ಲಿ ಜಾಗೃತಿಯನ್ನು ಮೂಡಿಸುವ ಸಲುವಾಗಿ ಆಯೋಥಿದಾಸರು ಕೈಗೊಂಡ ಈ ಪ್ರಯತ್ನವು ಕೇವಲ ಒಂದು ಧರ್ಮದ ಪರಿಚಯ ಮಾತ್ರವಲ್ಲ. ಇದು ಮರೆಮಾಚಿದ ಸಂಸ್ಕೃತಿ ಹಾಗೂ ಪರಂಪರೆಯ ಶೋಧವು ಹೌದು. ಈ ಹಿನ್ನೆಲೆಯಲ್ಲಿ ಅಯೋತಿದಾಸರು ಸಂಘಟನಾತ್ಮಕ ನೆಲೆಯಲ್ಲಿ ತಮ್ಮ ಹೋರಾಟವನ್ನು ಆರಂಭಿಸುತ್ತಾರೆ. ಆದರೆ ಇವರ ಹೋರಾಟದ ವ್ಯಾಪ್ತಿಯು ಕೇವಲ 'ಪರಯ' ಜಾತಿ ಕೇಂದ್ರಿತ ನೆಲೆಯದಾಗಿತ್ತು.

"೧೮೯೩ ರಲ್ಲಿಯೇ ಪಾಶ್ಚಿಮಾತ್ಯ ಚಿಂತಕ 'ಡಬ್ಲೂ. ಡಬ್ಲೂ. ಹಂಟರ್' ತಮ್ಮ 'ಇಂಡಿಯನ್ ಎಂಪೈರ್' ಕೃತಿಯಲ್ಲಿ ತಿಳಿಸಿರುವಂತೆ, ಭಾರತದ ಬೌದ್ಧಧರ್ಮದ ಪುನರುಜ್ಜೀವನದ ಸರ್ವಕಾಲಿಕ ಸಾಧ್ಯತೆಯಾಗಿದೆ. ಬುದ್ಧನ ಜೀವನ ಮತ್ತು ಬೋಧನೆಗಳು ಯುರೋಪ್ ಮತ್ತು ಅಮೇರಿಕದ ಧಾರ್ಮಿಕ ಚಿಂತನೆಯ ಮೇಲೆ ಗಾಢವಾದ ಪ್ರಭಾವ ಬೀರಿವೆ. ಪಾಶ್ಚಿಮಾತ್ಯ ಜಗತ್ತಿಗೆ ಖಚಿತವಾಗಿ ಬೌದ್ಧಧರ್ಮ ಪರಿಚಿತವಾಗಿದೆ. ಮನುಷ್ಯ ಜಗತ್ತಿನಲ್ಲಿ ತನ್ನನ್ನು ಅರಿತು, ತನ್ನ ಕರ್ತವ್ಯಗಳನ್ನು ಅರಿತುಕೊಂಡು ಸಹ ಜೀವಿಗಳೊಂದಿಗೆ ಅನ್ಯೋನ್ಯತೆ ಸಾಧಿಸಲು ಸಹಕರಿಸುವ ಬುದ್ಧನ ಸುಂದರ ಜೀವನ ಮತ್ತು ಆದರ್ಶ ಬೌದ್ಧಧರ್ಮದ ಜನಪ್ರಿಯತೆಗೆ ಕಾರಣವಾಗಿದೆ. ಆದ್ದರಿಂದ ಮತ್ತೊಮ್ಮೆ ಹೇಳುತ್ತೇನೆ ಭಾರತದಲ್ಲಿ ಬೌದ್ಧಧರ್ಮದ ಪುನರುಜ್ಜೀವನ ಒಂದು ಸಮಕಾಲಿನ ಸಾಧ್ಯತೆಯಾಗಿದೆ"[೧೫] ಎಂಬುದಾಗಿ ತಿಳಿಸಿದ್ದಾರೆ. ಹಂಟರ್ ಅವರ ಊಹೆಯಂತೆ ಇಂದು ಭಾರತದಲ್ಲಿ ಬೌದ್ಧಧರ್ಮದ ಪುನರುಜ್ಜೀವನ ಕಾರ್ಯ ನಡೆಯುತ್ತಲಿದೆ. ಇಂದು ಕೆಲವು ಸಂಘಟನೆಗಳು ಮತ್ತು ಬುದ್ಧಿಜೀವಿಗಳು ಹಿಂದಿನ ವಿಚಾರವಾದಿಗಳ ಮಾರ್ಗದಲ್ಲಿ ದಲಿತ ವಿಮೋಚನೆಗಾಗಿ ಮತಾಂತರದಂತಹ ಯೋಜನೆಗಳನ್ನು ಪ್ರತಿ ವರ್ಷ ರೂಪಿಸುತಿದ್ದಾರೆ. ಆದರೆ ಇಲ್ಲಿ ಮತಾಂತರಗೊಳ್ಳುತ್ತಿರುವ ತಳ ಸಮುದಾಯದ ಜನತೆಗೆ ಸೂಕ್ತ ಮಾರ್ಗದರ್ಶನ ಹಾಗೂ ಸಹಕಾರದ ಕೊರತೆಯಿಂದಾಗಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಕರ್ನಾಟಕದಲ್ಲಿ ದಲಿತ ಹಾಗೂ ಹಿಂದುಳಿದ ವರ್ಗಗಳು ಅಂಬೇಡ್ಕರ್ ವಿಚಾರಗಳಿಂದ ಪ್ರಭಾವಿತರಾಗಿ ಬೌದ್ಧಧಮ್ಮ ದೀಕ್ಷೆಯನ್ನು ಸ್ವೀಕರಿಸುತ್ತಿದ್ದಾರೆ. ಈ ವರ್ಗಗಳು ವಿಶೇಷವಾಗಿ ಬಾಬಾಸಾಹೇಬರು ದೀಕ್ಷೆ ತೆಗೆದುಕೊಂಡ ದಿನದಂದು ಹಾಗೂ ಬೌದ್ಧಪೂರ್ಣಿಮೆಯಂದು ಪ್ರತಿವರ್ಷ ಸಾವಿರಾರು ಸಂಖ್ಯೆಯಲ್ಲಿ ಬೌದ್ಧಧರ್ಮಕ್ಕೆ ಮತಾಂತರಗೊಳ್ಳುತ್ತಾರೆ. ಬೆಂಗಳೂರಿನಲ್ಲಿ 'ಬೌದ್ಧಧಮ್ಮ ದೀಕ್ಷಾ ಸಮಾರಂಭ ಸಿದ್ಧತಾ ಸಮಿತಿ'ಯು ೧೪, ಅಕ್ಟೋಬರ್, ೨೦೦೩ರಂದು ಅನೇಕ ದಲಿತ ಕಾರ್ಯಕರ್ತರು, ಬುದ್ದಿಜೀವಿಗಳ ಸಹಕಾರದೊಂದಿಗೆ ಹತ್ತು ಸಾವಿರಕ್ಕೂ ಅಧಿಕ ಜನರು ಬೌದ್ಧದೀಕ್ಷೆ ತೆಗೆದುಕೊಂಡರು. ಇದಾದ ನಂತರ ಹಲವಾರು ಸಂಘ-ಸಂಸ್ಥೆಗಳು ಪ್ರತಿವರ್ಷ ದೀಕ್ಷಾ ಕಾರ್ಯಕ್ರಮವನ್ನು ಏರ್ಪಡಿಸುತ್ತ ಬಂದಿವೆ. ಬೆಂಗಳೂರಿನ ಮಹಾಬೋಧಿ ಸೊಸೈಟಿಯು ಪ್ರತಿವರ್ಷ ಬೌದ್ಧಪೂರ್ಣಿಮೆಯಂದು ನವಬೌದ್ಧರಿಗೆ ದೀಕ್ಷೆ ನೀಡುತ್ತದೆ. ಹಾಗೆಯೇ ಬೆಂಗಳೂರಿನ 'ಬುದ್ಧ ಪ್ರತಿಷ್ಠಾನ' ಎಂಬ ಸಂಸ್ಥೆಯ ಮುಖಾಂತರವಾಗಿ 'ಡಾ.ಬಿ,ರಾಜಾನಂದ' ಅವರು ದಲಿತರು ಮತ್ತು ದಲಿತೇತರರಿಗೆ ಧಮ್ಮದೀಕ್ಷೆ ನೀಡಿ ಅರಿವು ಮೂಡಿಸುತ್ತ ಬಂದಿದ್ದಾರೆ. ಇವರು ತಮ್ಮ ಕುಟುಂಬದ ಆದಾಯದಲ್ಲಿ ೧/೨೦

ಭಾಗವನ್ನು ಧರ್ಮದ ಸೇವೆಗೆ ಅರ್ಪಿಸುವ ಮೂಲಕ ಬೌದ್ಧಧರ್ಮದ ಬೆಳವಣಿಗೆಗೆ ಸಹಕರಿಸುತ್ತ ಬಂದಿದ್ದಾರೆ. ಹೀಗೆ ಕರ್ನಾಟಕದ ನಾನಾ ಭಾಗಗಳಲ್ಲಿ ಬುದ್ಧಿಜೀವಿಗಳು ದಲಿತರನ್ನು ಸಂಘಟಿಸುವ ಮುಖಾಂತರ ಬೌದ್ಧಧರ್ಮದ ಬಗ್ಗೆ ಅರಿವು ಮೂಡಿಸುವ ಪ್ರಯತ್ನಕ್ಕೆ ಮುಂದಾಗಿದ್ದಾರೆ. ಇದರಿಂದ ತಳಸಮುದಾಯದ ಜನತೆಗೆ ತಮ್ಮ ತವರು ಧರ್ಮದ ಬಗ್ಗೆ ಅರಿವು ಮೂಡುತ್ತಿದೆ. ಅಸ್ಪೃಶ್ಯತೆಯ ಬಂಧನದಿಂದ ವಿಮೋಚನೆಯನ್ನು ಬಯಸುತ್ತಿದ್ದಂತಹ ವಿದ್ಯಾವಂತ ವರ್ಗವು ಇವುಗಳಿಂದ ಜಾಗೃತರಾಗಿ ಸ್ವಾತಂತ್ರ್ಯಯುತವಾದ ಬದುಕನ್ನು ಕಟ್ಟಿಕೊಳ್ಳಲು ಬೌದ್ಧಧರ್ಮದತ್ತ ಮುಖಮಾಡುತ್ತಿದ್ದಾರೆ.

ಇಂದು ಬೌದ್ಧಧರ್ಮದಲ್ಲಿನ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದಂತಹ ತತ್ವಗಳಿಂದ ಪ್ರಭಾವಿತರಾಗಿ ಪ್ರಪಂಚದಾದ್ಯಂತ ಬೌದ್ಧಧರ್ಮಿಯರ ಸಂಖ್ಯೆಯು ಅಧಿಕವಾಗುತ್ತಿದೆ. "ಅಮೇರಿಕಾದಂಥ ದೇಶದಲ್ಲಿ ಬೌದ್ಧಧರ್ಮ ಇಂದು ಜನಪ್ರಿಯತೆಯಲ್ಲಿ ಎರಡನೇ ಸ್ಥಾನದಲ್ಲಿದೆ. ಜರ್ಮನಿಯ ರಾಜಧಾನಿಯಲ್ಲಿ ಸುಮಾರು ಮೂವತ್ತಕ್ಕೂ ಹೆಚ್ಚಿನ ಬೌದ್ಧಧ್ಯಾನ ಕೇಂದ್ರಗಳಿವೆ"[೧೬] ಎಂಬುದನ್ನು ಗಮನಿಸಿದರೆ ಇಂದು ಬೌದ್ಧಧರ್ಮವು ಜಾಗತಿಕ ಮಟ್ಟದಲ್ಲಿ ಜನಜೀವನಕ್ಕೆ ಹೇಗೆ ಸ್ಪಂದಿಸುತ್ತಿದೆ ಎಂಬುದು ತಿಳಿದುಬರುತ್ತದೆ. ಇಂದು ಜಾಗತಿಕ ಮಟ್ಟದಲ್ಲಿ ಹೆಚ್ಚು ಪ್ರಚಾರಗೊಳ್ಳುತ್ತಿರುವ ಧರ್ಮಗಳಲ್ಲಿ ಬೌದ್ಧಧರ್ಮವು ಒಂದಾಗಿದೆ. ಜಗತ್ತಿನ ಬಹುತೇಕ ವರ್ಗದ ಜನರು ಬುದ್ಧನ ವಿಚಾರವನ್ನರಿತು ಬೌದ್ಧಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾರೆ. ಇಲ್ಲಿ ನಡೆಯುವ ಮತಾಂತರ ಪ್ರಕ್ರಿಯೆಗೆ ಯಾವುದೇ ಒತ್ತಡಗಳಿಲ್ಲ. ಯಾವುದೇ ರೀತಿಯ ಅಧಿಕಾರ, ಹಣದ ಆಮೀಷಗಳಿಲ್ಲ. ಬುದ್ಧನ ವೈಚಾರಿಕ ನಿಲುವುಗಳಿಂದ ಪ್ರಭಾವಿತರಾದ ಬುದ್ಧಿಜೀವಿಗಳು ವೈಯಕ್ತಿಕ ನೆಲೆಯಲ್ಲಿ ಬುದ್ಧನ ಧರ್ಮವನ್ನು ಆಶ್ರಯಿಸುತ್ತಿರುವುದು ಕಂಡುಬರುತ್ತದೆ.

ಬೌದ್ದಧರ್ಮಕ್ಕೆ ಮತಾಂತರ ಹೊಂದುತ್ತಿರುವವರನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದು. ಒಂದು, ಜಾಗತಿಕ ಶಾಂತಿಯನ್ನು ಬಯಸಿ ನೆಮ್ಮದಿಯ ಬದುಕನ್ನು ಪಡೆಯಬೇಕೆಂಬ ವರ್ಗವು ಬುದ್ಧನ ವೈಚಾರಿಕ ನಿಲುವುಗಳತ್ತ ಆಕರ್ಷಿತವಾಗಿದೆ. ಈ ವರ್ಗಕ್ಕೆ ಬೌದ್ಧಧರ್ಮದ ಆಚಾರಕ್ಕಿಂತ ವಿಚಾರಗಳು ಹೆಚ್ಚು ಆಕರ್ಷಕವಾಗಿವೆ. ಎರಡು, ಧಾರ್ಮಿಕ ಅಸಮಾನತೆಯಿಂದ ನೊಂದ ತಳಸಮುದಾಯಗಳು ಧಾರ್ಮಿಕ ಸಮಾನತೆಯನ್ನು ಬಯಸಿ ಬೌದ್ಧಧರ್ಮದತ್ತ ತೆರಳುತ್ತಿದ್ದಾರೆ. ಈ ವರ್ಗವು ಭಾರತದ ದಲಿತ ವರ್ಗವಾಗಿದ್ದು, ಆಧುನಿಕ ಶಿಕ್ಷಣದಿಂದ ಪ್ರಭಾವಿತರಾಗಿ ಅಂಬೇಡ್ಕರ್ ಅವರ ಮಾರ್ಗದಲ್ಲಿ ಬೌದ್ಧಧರ್ಮವನ್ನು ಸ್ವೀಕರಿಸುತ್ತಿದೆ. ಈ ವರ್ಗವು ಬೌದ್ಧಧರ್ಮದತ್ತ ಮುಖಮಾಡಲು ಮತ್ತೊಂದು ಪ್ರಮುಖ ಕಾರಣವೆಂದರೆ, ಈ ನಾಡಿನಲ್ಲಿ ಶೋಷಣೆಗೆ ಗುರಿಯಾಗಿರುವ ಅಸ್ಪೃಶ್ಯರು ಚರಿತ್ರೆಯಲ್ಲಿ ಪ್ರಬಲ ವರ್ಗಗಳಾಗಿದ್ದು, ತಮ್ಮ ಮೂಲವನ್ನು 'ನಾಗ ಮತ್ತು ಮಾತಂಗ' ರಾಜ ಮನೆತನಗಳೊಂದಿಗೆ ಗುರುತಿಸಿಕೊಂಡಿವೆ. ನಾಗ ಮತ್ತು ಮಾತಂಗರು ಈ ನಾಡಿನ ಮೂಲ ನಿವಾಸಿಗಳಾಗಿದ್ದು, ಇವರು ಬೌದ್ಧಧರ್ಮಿಯರಾಗಿದ್ದರೆಂಬ ಕಾರಣದಿಂದ ವೈದಿಕ ಪುರೋಹಿತಶಾಹಿಯು ಇವರನ್ನು ಅಸ್ಪೃಶ್ಯರೆಂದು ಶೋಷಣೆ ಮಾಡುತ್ತ ಬಂದಿದೆ. ಆದ್ದರಿಂದ ದಲಿತ ವರ್ಗವು ತಮ್ಮ ಮೂಲಧರ್ಮದತ್ತ ಮುಖಮಾಡಿದೆ. ಈ ವರ್ಗದಿಂದ ಬಂದವರಿಗೆ ಬೌದ್ಧಧರ್ಮದ ವಿಚಾರಕ್ಕಿಂತ

ಆಚಾರವೆ ಪ್ರಮುಖವಾಗಿದೆ. ತಾವು ಈ ಹಿಂದೆ ಆಚರಿಸಿಕೊಂಡು ಬಂದಂತಹ ಎಲ್ಲಾ ರೀತಿಯ ಪೂಜಾ ವಿಧಾನಗಳನ್ನು ಬುದ್ಧನಿಗೆ ಸಮರ್ಪಿಸುತ್ತಿದ್ದಾರೆ.

ತಮ್ಮ ಹಿಂದಿನ ಧರ್ಮವನ್ನು ತೊರೆದು ಇಂದು ಬೌದ್ಧಧರ್ಮದಲ್ಲಿ ಸಮಾನತೆಯನ್ನು ಬಯಸಿ ಬಂದಿರುವ ಈ ವರ್ಗಗಳಿಗೆ ಇಂದಿನ ಬೌದ್ಧಧರ್ಮವು ಹೇಗೆ ಸ್ಪಂದಿಸುತ್ತಿದೆ ಎಂಬುದು ಇಲ್ಲಿ ಪ್ರಮುಖ ಪ್ರಶ್ನೆಯಾಗಿದೆ. ಆಧುನಿಕ ಶಿಕ್ಷಣದಿಂದ ಜಾಗೃತರಾದವರು ಧಾರ್ಮಿಕ ಅಸಮಾನತೆಯಿಂದ ಬಿಡುಗಡೆ ಬಯಸಿ ಬುದ್ಧನ ತತ್ವ ಚಿಂತನೆಗಳನ್ನು ಆಶ್ರಯಿಸುತ್ತಿದ್ದಾರೆ. ಆದರೆ ದಲಿತರಲ್ಲಿ ಮತ್ತೊಂದು ವರ್ಗವಿದೆ, ಇದು ಜಾತಿ ಶೋಷಣೆಯನ್ನು ಇಂದಿಗೂ ಅನುಭವಿಸುತ್ತಿರುವ ಅನಕ್ಷರಸ್ಥ ವರ್ಗವಾಗಿದೆ. ಈ ವರ್ಗಕ್ಕೆ ಬೌದ್ಧಧರ್ಮವನ್ನು ಪರಿಚಯಿಸುವುದು ಸವಾಲಾಗಿ ಕಂಡುಬರುತ್ತದೆ. ಇವರಿಗೆ ಇತ್ತೀಚಿಗೆ ಅಂಬೇಡ್ಕರರ ಅಲ್ಪ ಸ್ವಲ್ಪ ಪರಿಚಯವಿದ್ದು, ಇವರಿಗೆ ಸೂಕ್ತ ಮಾರ್ಗದರ್ಶನದ ಕೊರತೆಯಿಂದಾಗಿ ಬುದ್ಧ ಪರಕೀಯನಾಗಿ ಕಂಡುಬರುತ್ತಾನೆ. ದಲಿತ ಸಮುದಾಯದಿಂದ ಬಂದಂತಹ ವಿದ್ಯಾವಂತರಿಗೆ ಮಾತ್ರ ಅಂಬೇಡ್ಕರ್ ಮಾರ್ಗದರ್ಶನದಲ್ಲಿ ಬುದ್ಧನು ತಮ್ಮ ಮನೆಯ ಹಿರಿಯನಾಗಿ, ಗುರುವಾಗಿ, ಹಿತೈಷಿಯಾಗಿ ಕಂಡುಬರುತ್ತಾನೆ.

ಬಾಬಾಸಾಹೇಬರು ಬೌದ್ಧಧರ್ಮಕ್ಕೆ ಮತಾಂತರ ಹೊಂದಿದ ದಿನದಿಂದ ಇಂದಿನವರೆಗೂ ಮತಾಂತರ ಕ್ರಿಯೆಗಳು ನಿರಂತರವಾಗಿ ನಡೆಯುತ್ತಲೆ ಇವೆ. ಹಲವಾರು ಸಂಘ ಸಂಸ್ಥೆಗಳು ದಲಿತರನ್ನು ಬೌದ್ಧಧರ್ಮದತ್ತ ಕೊಂಡೊಯ್ದು ಧಮ್ಮದೀಕ್ಷೆ ನೀಡುತ್ತಿವೆ. ಹೀಗೆ ದೀಕ್ಷೆ ಪಡೆದವರಿಗೆ ಈ ಧರ್ಮವನ್ನು ಅರ್ಥೈಸಿಕೊಳ್ಳುವುದಕ್ಕೆ ಸೂಕ್ತ ವೇದಿಕೆಗಳಿಲ್ಲ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹಲವಾರು ನವಬೌದ್ಧರನ್ನು ಸಂದರ್ಶನ ಮಾಡಿದಾಗ ಬಹುತೇಕ ವ್ಯಕ್ತಿಗಳು ಹೇಳುವಂತೆ, 'ನಾವು ಯಾವುದೊ ದಲಿತ ಸಂಘಟನೆಗಳು ಏರ್ಪಡಿಸಿದ ಸಮಾರಂಭದಲ್ಲಿ ದೀಕ್ಷೆ ಪಡೆದೆವು. ಆದರೆ ನಾವು ಮುಂದೆ ಹೇಗೆ ಧರ್ಮವನ್ನು ಪಾಲಿಸಬೇಕು ಎಂಬುದರ ಬಗ್ಗೆ ಯಾವುದೇ ಮಾರ್ಗದರ್ಶನವಿಲ್ಲ. ದೀಕ್ಷೆ ತೆಗೆದುಕೊಳ್ಳುವಾಗಲು ಯಾವುದೋ ನಮಗೆ ತಿಳಿಯದ ಭಾಷೆಯಲ್ಲಿ ಮಂತ್ರ ಹೇಳಿಕೊಟ್ಟರು. ಆದರೆ ನಮ್ಮ ಹಿಂದಿನ ಜೀವನಕ್ಕೂ, ದೀಕ್ಷೆ ಪಡೆದ ನಂತರದ ಜೀವನಕ್ಕೂ ಯಾವುದೇ ವ್ಯತ್ಯಾಸಗಳು ಕಂಡು ಬರುತ್ತಿಲ್ಲ' ಎಂದು ಹೇಳಿಕೊಂಡಿದ್ದಾರೆ. ಈ ಮಾತುಗಳು ಕೇವಲ ದಲಿತ ವರ್ಗದ ಅನಕ್ಷರಸ್ಥರ ಮಾತುಗಳಷ್ಟೇ ಅಲ್ಲ. ದಲಿತ ವರ್ಗದ ವಿದ್ಯಾವಂತರ ಮಾತುಗಳು ಹೌದು. ಅಂದರೆ ಇಂದು ವಿದ್ಯಾವಂತ ವರ್ಗಕ್ಕೂ ಬೌದ್ಧಧರ್ಮವನ್ನು ಅರ್ಥೈಸಿಕೊಳ್ಳುವುದು ಕಷ್ಟ ಸಾಧ್ಯವಾಗಿದೆ.

ಬೌದ್ಧಧರ್ಮದ ಈ ಮತಾಂತರ ಪ್ರಕ್ರಿಯೆಗಳು ಆಚರಣೆಗಷ್ಟೇ ಸೀಮಿತವಾಗಿದ್ದು, ಇದರಿಂದ ಯಾವುದೇ ಬದಲಾವಣೆಗಳು ಕಂಡುಬರುತ್ತಿಲ್ಲ. ಪ್ರಸ್ತುತದಲ್ಲಿ ಹಲವಾರು ಜನರು ತಳವರ್ಗದಿಂದ ಕ್ರೈಸ್ತಧರ್ಮಕ್ಕೆ ಮತಾಂತರ ಹೊಂದುತ್ತಿದ್ದಾರೆ. ಇವರಿಗೆ ಆ ಧರ್ಮದ ಅಡಿಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಿ ಸಾಮಾಜಿಕವಾಗಿ, ಆರ್ಥಿಕವಾಗಿ ಉನ್ನತ ಮಾರ್ಗದತ್ತ ಕೊಂಡೊಯ್ಯುತ್ತಿದ್ದಾರೆ. ಇದರಿಂದ ಈ ವರ್ಗಗಳು ಅಜ್ಞಾನ, ಮೌಢ್ಯತೆಗಳಿಂದ ಹೊರಬಂದು ಸಮಾಜದಲ್ಲಿ ಉತ್ತಮ

ಸ್ಥಾನಮಾನ ಪಡೆದುಕೊಡು ಸ್ವಾವಲಂಬಿಗಳಾಗಿ ಬದುಕುತ್ತಿದ್ದಾರೆ. ಆದರೆ ನವಬೌದ್ಧರು ಈ ತೆರನಾದ ಕ್ರಮಬದ್ದವಾದ ಯೋಜನೆಗಳ ಕೊರತೆಯಿಂದ ಸಾಕಷ್ಟು ಸಮಸ್ಯೆಗೆ ಗುರಿಯಾಗಿದ್ದಾರೆ. ಕೆಲವು ರಾಜಕೀಯ ಸಂಘಟನೆಗಳು ತಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳಲು ಮತಾಂತರದಂತಹ ಕಾರ್ಯಕ್ರಮಗಳನ್ನು ಆಯೋಜಿಸಿ ದಲಿತರ ಮತಗಳನ್ನು ತಮ್ಮತ್ತ ಸೆಳೆಯುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇಂತಹ ಕಾರ್ಯಗಳಿಂದ ದಲಿತರನ್ನು ಮತ್ತೊಂದು ಗೊಂದಲಕ್ಕೆ ನೂಕುವ ಪ್ರಯತ್ನಗಳು ನಡೆಯುತ್ತಿವೆ. "ಒಬ್ಬ ವ್ಯಕ್ತಿಗೆ ಎಲ್ಲಕ್ಕಿಂತ ಮುಖ್ಯವಾದುದು ಸ್ವಾಭಿಮಾನದ ಬದುಕು. ಆದ್ದರಿಂದ ಜಾತಿ ಎಂಬ ಅವಮಾನದ ಕವಚವನ್ನು ಕಿತ್ತು ಒಗೆಯಬೇಕು. ಅದಕ್ಕಾಗಿ ಇರುವ ಮಾರ್ಗ ಧರ್ಮಾಂತರವೊಂದೇ ಎಂಬುದನ್ನು ಅಂಬೇಡ್ಕರ್ ಸ್ಪಷ್ಟವಾಗಿ ಹೇಳಿದರು. ಹೇಳಿದಂತೆ ತಾವೇ ಅಕ್ಟೋಬರ್ ೧೪, ೧೯೫೬ರಂದು ಮಾಡಿ ತೋರಿಸಿದರು. ಅವರ ಜತೆಗೆ ಲಕ್ಷಾಂತರ ದಲಿತರು ಬೌದ್ಧಧರ್ಮವನ್ನು ಸ್ವೀಕರಿಸಿದರು ನಿಜ. ಆದರೆ ಬಹುಸಂಖ್ಯಾತ ಶೋಷಿತ ದಲಿತರಿಗೆ ಅದು ಪಥ್ಯವಾಗಲಿಲ್ಲ ಯಾಕೆ?"[೧೭] ಎಂಬುದಾಗಿ ಹುಡುಕುತ್ತ ಹೊರಟರೆ ಇದಕ್ಕೆ ಸಿಗುವ ಉತ್ತರ, ದಲಿತರ ಮೇಲೆ ಉನ್ನತ ವರ್ಗದ ಶೋಷಣೆಯು ಒಂದು ನೆಲೆಯದಾದರೆ, ಮುಂದುವರೆದ ದಲಿತರೇ ದಮನಿತ ದಲಿತರನ್ನು ತುಳಿಯುತ್ತಿರುವುದು ಇನ್ನೊಂದು ಬಗೆಯಾಗಿದೆ. ಆದ್ದರಿಂದ ಅಂಬೇಡ್ಕರ್ ವಿಮೋಚನೆಗಾಗಿ ಅನುಸರಿಸಿದ ಬೌದ್ಧಧರ್ಮವು ಒಂದು ನೆಪವಾಗಿ ಉಳಿದಿದೆ.

ಇಂದು ಬೌದ್ಧಧರ್ಮದ ಪ್ರಸಾರದ ಹೊಣೆ ಹೊತ್ತಿರುವ ಭಂತೇಜಿಗಳು ಪುರೋಹಿತಶಾಹಿ ಮಾದರಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ಇವರು ದಲಿತರ ಬದುಕಿನಿಂದ ಬಹುದೂರದಲ್ಲಿ ನಿಂತು ತಮ್ಮ ಧರ್ಮವನ್ನು ಪ್ರಚಾರಗೊಳಿಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಇದರಿಂದ ಅಲಕ್ಷಿತ ಸಮುದಾಯಗಳಿಗೆ ಸೂಕ್ತ ಸ್ಪಂದನೆ ದೊರೆಯುತ್ತಿಲ್ಲ. ಈ ಕುರಿತು ದಲಿತ ಚಿಂತಕರಾದ ದೇವನೂರ ಮಹಾದೇವ ಅವರ ವಿಚಾರಗಳು ಮಹತ್ವಪೂರ್ಣವಾಗಿವೆ. "ಇತ್ತೀಚ್ಚಿಗೆ ಬೌದ್ಧಧರ್ಮದ ಪ್ರಚಾರ ಕಾರ್ಯಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ಭಂತೇಜಿಗಳಿಗೆ ವಿನಂತಿಸುವೆ. ಏನೆಂದರೆ ಬುದ್ಧ ಮತ್ತು ವಚನಕಾರರು ಜನರಾಡುವ ಮಾತಲ್ಲಿ ನುಡಿದರು. ಇದೇ ಕಾರಣವಾಗಿ ಅವರು ನೇರವಾಗಿ ಹೃದಯ ಮುಟ್ಟುವವರಾಗಿದ್ದಾರೆ. ಹಾಗಾಗಿ ಆಯಾಯ ಜನರ ಭಾಷೆಯಲ್ಲಿ ಬುದ್ಧನ ದರ್ಶನದ ನುಡಿಗಟ್ಟನ್ನು ರೂಪಿಸಿ ಜೀವಂತಗೊಳಿಸಬೇಕಾಗಿದೆ"[೧೮] ಎಂಬುದಾಗಿ ತಮ್ಮ ಆಶಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಬಹುತೇಕ ಭಂತೆಗಳು ತಳಸಮುದಾಯದ ಜನತೆಯಿಂದ ಬಹುದೂರ ಉಳಿದಿದ್ದಾರೆ. ಇವರು ಜನರಾಡುವ ಮತ್ತು ಸಾಮಾನ್ಯ ಜನತೆಗೆ ಅರ್ಥವಾಗುವ ಭಾಷೆಯನ್ನು ಬಳಸದೆ, ಪ್ರಾಕೃತ ಇಲ್ಲವೆ ಸಂಸ್ಕೃತ ಭಾಷೆಯ ಮೂಲಕ ಧರ್ಮ ಪ್ರಚಾರಕ್ಕೆ ತೊಡಗಿದ್ದಾರೆ. ಇದರಿಂದ ದಲಿತ ಸಮುದಾಯದಿಂದ ಬಂದಂತಹ ಬಹುತೇಕರಿಗೆ ಯಾವುದೇ ಪ್ರಯೋಜನವಾಗುತ್ತಿಲ್ಲ. ಸ್ಥಾಪಿತ ವ್ಯವಸ್ಥೆಯ ಮೌಲ್ಯಗಳಿಂದ ಸಿದ್ಧವಾಗಿರುವ ಇವರು ಪುರೋಹಿತಶಾಹಿ ಮಾದರಿಯ ಸಿದ್ಧರೂಪಗಳನ್ನೇ ಇಲ್ಲಿಯೂ ಅನುಸರಿಸಿಕೊಂಡು ಬರುತ್ತಿದ್ದಾರೆ. ವೈಚಾರಿಕ ತಳಹದಿಯ ಮೇಲೆ ಬುದ್ಧನ ಚಿಂತನೆಗಳನ್ನು ಹರಡುವ ಮೂಲಕ ಜಾಗೃತಿಯನ್ನು ಮೂಡಿಸುವಲ್ಲಿ ಬಹುತೇಕ ಭಂತೇಗಳು ವಿಫಲರಾಗಿರುವುದು ಕಂಡುಬರುತ್ತದೆ.

“ದಲಿತ ಬೌದ್ಧರಿಗೂ ಇನ್ನಿತರೆ ಬೌದ್ಧರಿಗೂ ಯಾವುದೇ ವ್ಯತ್ಯಾಸಗಳು ಕಂಡುಬರುವುದಿಲ್ಲ. ಗೌತಮಬುದ್ಧನ ನಾಲ್ಕು ಸತ್ಯಗಳು ಹಾಗೂ ಅರಿಯ ಅಷ್ಟಾಂಗ ಮಾರ್ಗವೇ ಎಲ್ಲರಿಗೂ ಮೂಲ ಸಿದ್ಧಾಂತವಾಗಿ ಅನ್ವಹಿಸುತ್ತವೆ. ಇದರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಆದರೂ ಆಚರಣೆಗಳ ಹಿನ್ನೆಲೆಯಲ್ಲಿ ಕೆಲವು ಭಿನ್ನತೆಗಳು ಕಂಡುಬಂದರೂ ಬೌದ್ಧ ಮತಾವಲಂಬಿಗಳನ್ನು ಯಾವುದೇ ಜಾತಿ, ಲಿಂಗ, ದೇಶ ಭೇಧವಿಲ್ಲದೆ ಬೌದ್ಧರೆಂದು ಮಾತ್ರವೇ ಪರಿಗಣಿಸಲ್ಪಡುತ್ತಾರೆ”[೧೯] ಎಂಬುದು ಭಂತೆಯೊಬ್ಬರ ನಿಲುವಾಗಿದೆ. ಆದರೆ ಇಲ್ಲಿನ ಆಚರಣೆಗಳು ಮತ ಪರಂಪರೆಯ ಸ್ಥಾಪಿತ ಪರಿಕಲ್ಪನೆಗಳಾಗಿದ್ದು, ವೈಚಾರಿಕತೆ ಶೂನ್ಯವಾಗುವ ಸಂಭವಗಳಿವೆ. ಇದರಿಂದ ಜಾತಿ ತಾರತಮ್ಯವನ್ನು ಅನುಭವಿಸುತ್ತಿರುವ ಜನತೆಗೆ ಸೂಕ್ತ ಸ್ಪಂದನೆ ಸಿಗುವುದು ಕಷ್ಟ. ಭಾರತದಂತಹ ದೇಶದಲ್ಲಿ ಹಲವಾರು ಜಾತಿ ಜನಾಂಗಗಳು ನೆಲೆಸಿವೆ. ಈ ಎಲ್ಲಾ ಜನಾಂಗಗಳು ತಮ್ಮದೆ ಆದಂತಹ ಸಮಸ್ಯೆಗಳನ್ನು ಹೊಂದಿವೆ. ಭಂತೇಗಳು ಹೇಳುವ ಪ್ರಕಾರ ಎಲ್ಲರಿಗೂ ಒಂದೇ ಪ್ರಕಾರದ ಬೋಧನೆಯಿಂದ ಸೂಕ್ತ ಸ್ಪಂದನೆ ಸಿಗಲಾರದು. ಭಾರತದ ತಳಸಮುದಾಯದ ಜನತೆಯನ್ನು ಕೇಂದ್ರವಾಗಿಟ್ಟುಕೊಂಡು, ಇವರಿಗೆ ತಲುಪುವ ನೆಲೆಯಲ್ಲಿ ಧರ್ಮ ಬೋಧನೆ ಮಾಡಿದರೆ ಮಾತ್ರ ಈ ವರ್ಗ ಜಾಗೃತಿಯನ್ನು ಪಡೆಯುತ್ತದೆ. ಇಂದಿನ ಪುರೋಹಿತಶಾಹಿಯ ಮಾದರಿಯಲ್ಲೇ ಮುಂದುವರೆಯುವುದಾದರೆ ಇದರಿಂದ ದಲಿತ ವರ್ಗಕ್ಕೆ ಹಾಗೂ ನವಬೌದ್ಧರಿಗೆ ಯಾವುದೇ ಪ್ರಯೋಜನವಿಲ್ಲ. ದಾರ್ಶನಿಕ ಚಿಂತಕರಾದ ಓಶೋ, ಬೌದ್ಧಧರ್ಮನ್ನು ಕುರಿತು ಹೇಳುವಾಗ ‘ಬುದ್ಧನೊಂದಿಗೆ ಬುದ್ಧಧರ್ಮ ಸತ್ತು ಹೋಯಿತು’ ಎಂದು ಹೇಳುವ ಮಾತು ಇಂದಿನ ಧರ್ಮ ಪ್ರವರ್ತಕರ ಕಾರ್ಯತಂತ್ರಗಳನ್ನು ಕುರಿತು ಹೇಳಿರುವುದಾಗಿದೆ. ಓಶೋ, ಬುದ್ಧನ ಚಿಂತನೆಗಳು ಋಣಾತ್ಮಕತೆಯಿಂದ ಧನಾತ್ಮಕತೆಯೆಡೆಗೆ ಸಾಗುತ್ತಿದ್ದವು. ಆದರೆ ಬುದ್ಧನ ನಿರ್ವಾಣದ ತರುವಾಯ ಈ ಚಿಂತನೆಗಳು ಧನಾತ್ಮಕತೆಯಿದ ಋಣಾತ್ಮಕತೆಯೆಡೆಗೆ ಸಾಗುತ್ತಿವೆ ಎಂಬುದಾಗಿ ತನ್ನ ವಾದವನ್ನು ಮಂಡಿಸುತ್ತಾರೆ. ಅಂದರೆ ಬುದ್ಧನ ಎಲ್ಲ ವಿಚಾರಗಳು ಸ್ಥಾಪಿತ ವ್ಯವಸ್ಥೆಯ ಬಂಧನದಲ್ಲಿ ಜಡತ್ವವನ್ನು ಪಡೆದುಕೊಂಡಿವೆ ಎಂಬುದು ಓಶೋನ ಪ್ರಬಲವಾದ ನಿಲುವಾಗಿದೆ.

ಇಂದಿನ ಬೌದ್ಧಧರ್ಮದ ಕಾರ್ಯವೈಖರಿಯ ಕುರಿತಂತೆ ಮಹಾದೇವ ಶಂಕನಪುರ ಅವರು “ಬುದ್ಧ ಮತ್ತು ಅವನ ಉಪದೇಶಗಳು ಸಾರ್ವಕಾಲಿಕವಾಗಿದ್ದು, ಎಲ್ಲ ಕಡೆ ಯಾವುದೇ ಸಮಸ್ಯೆಗಳಿಗೆ ಪರಿಹಾರವೂ, ಪ್ರಸ್ತುತವೂ ಆಗಿದೆ. ಬುದ್ಧ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಜಾತ್ಯಾತೀತತೆ ಮತ್ತು ಮಾನವೀಯತೆ ತತ್ವಗಳ ತಳಹದಿಯ ಮೇಲೆ ಮಾನವ ಸಮಾಜವನ್ನು ಕಟ್ಟಲು ಹೊರಟ. ಸ್ವಾಭಾವಿಕವಾಗಿ ಅಮಾನವೀಯ, ಅಸಮಾನ, ತಾರತಮ್ಯ ವ್ಯವಸ್ಥೆಗಳು ಉರುಳತೊಡಗಿದವು. ಯಾರನ್ನು, ಯಾವುದನ್ನು ತುಚ್ಛವಾಗಿ ಕಾಣುತ್ತ ಹಿಯಾಳಿಸುವ ಬದಲು ಬುದ್ಧ ಸ್ಥಳೀಯ ಸಂಸ್ಕೃತಿ ಮತ್ತು ನಂಬಿಕೆಗಳನ್ನು ಸಾಮಾನ್ಯ ಜನ ಸಂಸ್ಕೃತಿಗಳನ್ನು ಒಳಗೊಳ್ಳುತ್ತಾ ನಡೆದವನು. ಇದನ್ನು ಇಂದಿನ ನಮ್ಮ ಬೌದ್ಧಧಮ್ಮ ಕಟ್ಟ ಬಯಸುವವರು ಅರಿಯಬೇಕು”[೨೦] ಎಂಬುದಾಗಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಇಂದು ದಲಿತರು ಯಾವ ಕಾರಣದಿಂದ ಮೂಲಭೂತವಾದಿ

ಹಿಂದೂ ಧರ್ಮವನ್ನು ತೊರೆದು, ತಮ್ಮ ಮೂಲ ಬೌದ್ಧಧರ್ಮದತ್ತ ಮುಖ ಮಾಡಿದ್ದಾರೋ, ಅಲ್ಲಿಯೂ ಈ ಅಸಮಾನತೆಯನ್ನು ಅನುಭವಿಸುವುದಾದರೆ ಇದರಿಂದಾದ ಪ್ರಯೋಜನವೇನು ಎಂಬ ಪ್ರಶ್ನೆ ಕಾಡುತ್ತಿದೆ.

"ಜಿಜ್ಞಾಸೆಯೇ ಜ್ಞಾನದ ಮೂಲ. ನಾನು ಹೇಳಿದ್ದೇ ಕೊನೆಮಾತು ಎಂಬ ಧೋರಣೆಯನ್ನು ಬುದ್ಧ ಎಂದಿಗೂ ತಾಳಲಿಲ್ಲ. ಇದರಿಂದ ಬುದ್ಧಧರ್ಮ ಮೂಲಭೂತವಾಗಲು ಮತ್ತು ಅದರ ಅನುಯಾಯಿಗಳು ಮೂಲಭೂತವಾದಿಗಳಾಗಲು ಸಾಧ್ಯವಿಲ್ಲದ ಮಾತು"[೨೧] ಎಂಬುದಾಗಿಯೇ ಬಹುತೇಕ ಬೌದ್ಧ ಚಿಂತಕರು ತಮ್ಮ ವಾದವನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಆದರೆ ವರ್ತಮಾನದಲ್ಲಿ ಬೌದ್ಧಧರ್ಮವು ಯಾವ ಸ್ವರೂಪವನ್ನು ಪಡೆದುಕೊಂಡಿದೆ ಎಂಬ ವಾಸ್ತವವನ್ನು ಎತ್ತಿ ಹಿಡಿಯುವಲ್ಲಿ ಬಹುತೇಕ ಚಿಂತಕರು ವಿಫಲರಾದಂತಿದೆ. ಇದಕ್ಕೆ ಕಾರಣ, ಬ್ರಾಹ್ಮಣಶಾಹಿಯ ಎದುರು ಬೌದ್ಧಧರ್ಮವನ್ನು ಸಮರ್ಥಿಸಿಕೊಳ್ಳುವುದಾಗಿದೆ. ಇದರಿಂದ ಇಂದಿನ ಬೌದ್ಧಧರ್ಮದ ವಾಸ್ತವ ಸ್ವರೂಪವನ್ನು ಮರೆಮಾಚಿದಂತಾಗುತ್ತದೆ. ಇಂದಿನ ಬೌದ್ಧಧರ್ಮವು ಕೂಡ ಇತರೆ ಧರ್ಮಗಳಂತೆ ಮೂಲಭೂತವಾದದಿಂದ ಹೊರತಾಗಿಲ್ಲ. 'ಮಯನ್ಮಾರ್'ನಲ್ಲಿ ಬೌದ್ಧಧರ್ಮಿಯರು ಅಲ್ಪಸಂಖ್ಯಾತರಾದ ಮುಸಲ್ಮಾನರನ್ನು ಗುಂಡಿಕ್ಕಿ ಕೊಂದಿರುವ ನಿದರ್ಶನಗಳಿವೆ. ಹಾಗೆಯೇ ಶ್ರೀಲಂಕಾದಲ್ಲಿ ಬೌದ್ಧಧರ್ಮಿಯರು ಮೂಲ ನಿವಾಸಿಗಳಾದ ತಮಿಳಿಯರನ್ನು ಹಿಂಸೆಗೆ ಗುರಿಪಡಿಸಿ, ರಕ್ತಪಾತಕ್ಕೆ ಮುಂದಾಗಿದ್ದಾರೆ. ಈ ಎಲ್ಲಾ ಘಟನೆಗಳ ಹಿಂದೆ ಮೂಲಭೂತವಾದವಿಲ್ಲ ಎನ್ನಲಾಗದು. "ಬೌದ್ಧಧರ್ಮದಲ್ಲಿನ ಮಾರಕ ಪ್ರವೃತ್ತಿಗಳು ವಜ್ರಯಾನದಂತಹ ಬೌದ್ಧ ಸಂಸ್ಥೆಗಳಲ್ಲಿ ಸ್ಪಷ್ಟವಾಗಿ ಕಾಣುತಿತ್ತು. ಆದರೆ ಅಂಬೇಡ್ಕರ್ ಆಯ್ಕೆ ಮಾಡಿಕೊಡಿದ್ದು ಉಗಮ ಕಾಲದಲ್ಲಿನ ಬೌದ್ಧಮತದ ಮಾನವೀಯತೆ ಮತ್ತು ಸಮಾನತೆಗಳನ್ನು"[೨೨] ಎಂಬುದು ಬಹು ಮುಖ್ಯವಾದ ಸಂಗತಿ. ಕೆಲವು ಬೌದ್ಧಚಿಂತಕರು ಅಂಬೇಡ್ಕರ್ ಬೌದ್ಧಧರ್ಮಕ್ಕೆ ಮತಾಂತರಗೊಂಡಿರುವುದನ್ನೇ ನೆಪ ಮಾಡಿಕೊಂಡು, ಬೌದ್ಧಧಮ್ಮಲ್ಲಿ ಯವುದೇ ಮೂಲಭೂತವಾದವಿಲ್ಲ ಎಂಬುದಾಗಿ ಸಾಧಿಸಲು ಹೊರಟಿದ್ದಾರೆ. ಇದು ಮತ್ತೊಂದು ಮೂಲಭೂತವಾದಿ ನೆಲೆಯಾಗುವ ಸಾಧ್ಯತೆಯಿದೆ.

ಭಾರತದಲ್ಲಿ ತಳವರ್ಗಗಳು ನಿರಂತರವಾಗಿ ಶೋಷಣೆಯನ್ನು ಅನುಭವಿಸುತ್ತ ಬಂದಿವೆ. ಒಂದು ಕಾಲಘಟ್ಟದಲ್ಲಿ ಹೊರಗಿನವರಿಂದ ಶೋಷಣೆಗೆ ಗುರಿಯಾದ ಈ ವರ್ಗ, ಇಂದು ತಮ್ಮವರಿಂದಲೇ ಶೋಷಣೆಗೊಳ್ಳುವಂತ ಸ್ಥಿತಿಯಲ್ಲಿದ್ದಾರೆ. ಬುದ್ಧ, ಅಂಬೇಡ್ಕರ್ ಹೆಸರುಗಳನ್ನು ಬಳಸಿಕೊಂಡು ಹಲವಾರು ಸಂಘಟನೆಗಳು ಅಮಾಯಕ ದಲಿತರ ಎಲ್ಲ ಸವಲತ್ತನ್ನು ತಮ್ಮ ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಕರ್ನಾಟಕದ ದಸಂಸ ಇದಕ್ಕೆ ಹೊರತಾಗಿಲ್ಲ. ಈ ಸಂಘಟನೆಗಳು ದಲಿತರಿಗೆ ಧಮ್ಮದೀಕ್ಷೆ ಕೊಡಿಸುವುದರ ಮೂಲಕ ಕ್ರಾಂತಿಕಾರಕ ಬದಾಲಾವಣೆ ಮಾಡಿದೆವೆಂದು ಬೀಗುತ್ತಿದ್ದಾರೆ. ಆದರೆ ಈ ಸಂಘಟನೆಗಳು ತಮ್ಮ ಹಿತಾಸಕ್ತಿಗಾಗಿ ದಲಿತರ ಎಲ್ಲಾ ಹಕ್ಕುಗಳನ್ನು ಹತ್ತಿಕ್ಕುವ ಪ್ರಯತ್ನ ಮಾಡುತ್ತಿದ್ದಾರೆ. ವೈಚಾರಿಕ ಬೌದ್ಧ ಚಿಂತಕರು, ದಲಿತಪರ ಕಾಳಜಿಯುಳ್ಳ ಎಸ್. ಮರಿಸ್ವಾಮಿಯವರು ಹೇಳುವಂತೆ, 'ಈ ದೇಶದಲ್ಲಿ ನಮ್ಮ ಮೇಲೆ ಶೋಷಣೆ ಆಗುವುದಕ್ಕೆ ನಾವೇ

ಕಾರಣರಾಗಿದ್ದೇವೆ. ಇದಕ್ಕೆ ನಮ್ಮಲ್ಲಿರುವ ಅಜ್ಞಾನವೇ ಕಾರಣ. ನಾವು ಜಾಗೃತರಾಗಿ ಈ ವ್ಯವಸ್ಥೆಯಿಂದ ಎಲ್ಲಿಯವರೆಗೆ ಹೊರಬರಲು ಸಾಧ್ಯವಿಲ್ಲವೊ ಅಲ್ಲಿಯವರೆಗೆ ಎಲ್ಲರಿಂದಲೂ ಶೋಷಣೆ ನಡೆಯುತ್ತಲೆ ಇರುತ್ತದೆ' ಎಂಬುದಾಗಿ ತಿಳಿಸಿದ್ದಾರೆ. ದಲಿತರು ಜಾಗೃತರಾಗದೆ ಯಾವುದೇ ಧರ್ಮಕ್ಕೆ ಹೋದರು ಸಹ ಶೋಷಣೆ ತಪ್ಪದು ಎಂಬುದು ಇವರ ವಾದವಾಗಿದೆ. ಈ ವಿಚಾರವಾಗಿ ಸ್ವಾಮಿ ಧರ್ಮತೀರ್ಥರು, ಹೇಳುವಂತೆ "ಶೋಷಕರು ಮತ್ತು ಶೋಷಿತರು, ಕೆಲವು ಸಾರಿ ಮೊದಲನೆಯವರಿಗಿಂತ ಕೊನೆಯವರೇ ಹೆಚ್ಚಾಗಿ ದಮನಕರ ವ್ಯವಸ್ಥೆ ಮುಂದುವರೆಯಲು ಜವಾಬ್ದಾರರಾಗಿರುತ್ತಾರೆ"[೨೩] ಎಂಬುದು ಇಲ್ಲಿ ವಾಸ್ತವವಾಗಿದೆ.

ದಲಿತರು ಮತಾಂತರವಾಗುವುದನ್ನು ತಡೆಯಲು ಪೇಜಾವರ ಶ್ರೀಗಳು ಅಸ್ಪೃಶ್ಯರ ಕೇರಿಗೆ ಪ್ರವೇಶ ಮಾಡಿ, ಇವರಿಗೆ ವೈಷ್ಣವ ದೀಕ್ಷೆ ನೀಡಲು ಮುಂದಾಗಿದ್ದಾರೆ. ಆದರೆ ದಲಿತರ ಉದ್ಧಾರಕ್ಕೆಂದೆ ನಿರ್ಮಾಣವಾಗಿರುವ ಬೌದ್ಧವಿಹಾರಗಳ ಭಂತೇಜಿಗಳು ಶ್ರೀಗಳ ಮಾದರಿಯಲ್ಲಿ ದಲಿತರ ಗುಡಿಸಲತ್ತ ತೆರಳಲು ಸಾಧ್ಯವಾಗುತ್ತಿಲ್ಲ. ಇವರು ದಲಿತರಿಗೆ ಸ್ಪಂದಿಸುವ ರೀತಿಯಲ್ಲಿ ತಮ್ಮ ಕಾರ್ಯ ಯೋಜನೆಗಳನ್ನು ರೂಪಿಸವಲ್ಲಿ ವಿಫಲರಾಗಿರುವಂತೆ ಕಂಡುಬರುತ್ತದೆ. ಆದರೆ ಈ ಭಂತೆಗಳು ಸ್ಥಾಪಿತ ಮಾದರಿಯಲ್ಲಿ ಮುಂದುವರೆಯುವುದರಿಂದ ದಲಿತರು ಹಾಗೂ ಭಂತೆಗಳ ಮಧ್ಯೆ ಅಂತರ ಕಂಡುಬರುತ್ತಿದೆ. ಕರ್ನಾಟಕದಲ್ಲಿ ಸಾಂಸ್ಥಿಕರಣಗೊಂಡ ಬೌದ್ಧಧರ್ಮವು ಇದೆ, ಸಾಂಸ್ಥಿಕರಣದಿಂದ ಹೊರಗುಳಿದ ವಿಚಾರವಾದಿ ಬೌದ್ಧದರ್ಶನವು ಇದೆ. ಈ ವಿಚಾರವಾದಿ ಬೌದ್ಧದರ್ಶನವು ಬಾಬಾಸಾಹೇಬರ ಮಾರ್ಗದಲ್ಲಿ ತಳಸಮುದಾಯದ ನೋವುಗಳಿಗೆ ಸ್ಪಂದಿಸುತ್ತಿದೆ.

ಬೌದ್ಧಧರ್ಮವು ಜಾಗತಿಕ ಮಟ್ಟದಲ್ಲಿ ಅಭಿವೃದ್ದಿಯನ್ನು ಸಾಧಿಸಿರುವ ಧರ್ಮಗಳಲ್ಲೊಂದಾಗಿದೆ. ಆದರೆ ಭಾರತದಲ್ಲಿ ಮೂಲ ಬೌದ್ಧಧರ್ಮಿಯರಾದ ದಲಿತರು ಬಡತನ, ಅಸ್ಪೃಶ್ಯತೆ, ನಿರುದ್ಯೋಗಳಂತಹ ಹಲವಾರು ಸಮಸ್ಯೆಗಳಿಂದ ನರಳಾಡುತ್ತಿದ್ದಾರೆ. ಬಾಬಾಸಾಹೇಬರು ತಮ್ಮ ಕೊನೆಯ ದಿನಗಳಲ್ಲಿ ಈ ನಾಡಿನ ಬೌದ್ಧಧರ್ಮಿಯರನ್ನು ಸಮಾಜದ ಮುಖ್ಯವಾಹಿನಿಗೆ ತರಲು ವಿದೇಶಗಳ ನೆರವು ಪಡೆಯಲು ಮುಂದಾಗಿದ್ದರು. ಆದರೆ ಅದು ನೆರವೇರಲಿಲ್ಲ. ಇಂದು ದಲಿತರಲ್ಲಿಯೇ ಮುಂದುವರೆದ ವರ್ಗವೊಂದಿದೆ. ಅದರ ಅಡಿಯಲ್ಲಿ ವೈಚಾರಿಕ ಚಿಂತನೆಗಳ ಮೂಲಕ ಈ ನವಬೌದ್ಧ ಧರ್ಮಿಯರನ್ನು ಸಬಲರನ್ನಾಗಿಸುವ ಚಿಂತನೆಗಳು ಕಂಡುಬರುತ್ತಿವೆ. ಪಿ. ಮಹಾದೇವಯ್ಯ ಅವರು "ನಾವು ಮರಳಿ ಮನೆಗೆ ಹೋಗುವುದರಿಂದ ನಿರುದ್ಯೋಗಿಗಳು ಉದ್ಯೋಗಿಗಳಾಗುವ, ಆರ್ಥಿಕವಾಗಿ ಬದಲಾವಣೆ ತರುವ, ಬೆತ್ತಲೆ ಸೇವೆಗೆ ಪರಿಹಾರ ಕಂಡುಕೊಳ್ಳುವ, ಜೀತಪದ್ಧತಿ ನಿರ್ಮೂಲನೆ ಮಾಡುವ ಹಸಿವು ಮತ್ತು ಅಪಮಾನಗಳಿಗೆ ಪರಿಹಾರ ಹುಡುಕುವ ಪ್ರಯತ್ನ ಸಾಗಬೇಕಾಗಿದೆ"[೨೪] ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಇಂತಹ ವಿಶಿಷ್ಟ ಯೋಜನೆಗಳ ಅನುಷ್ಠಾನದಿಂದ ಮಾತ್ರ ದಲಿತರ ಬದುಕಲ್ಲಿ ಪ್ರಗತಿ ಮೂಡಿಸಲು ಸಾಧ್ಯ. ಇವುಗಳು ಸಾಕಾರಗೊಂಡಾಗ ಮಾತ್ರ ಅಂಬೇಡ್ಕರರ ಹೋರಾಟ ಸಾರ್ಥಕವಾಗುತ್ತದೆ.

ಬೌದ್ಧಧರ್ಮವು ಒಂದು ದರ್ಶನವಾಗಿ ವಿಶ್ವಕ್ಕೆ ಶಾಂತಿಯನ್ನು ನೀಡಿದೆ. ಚಾರಿತ್ರಿಕ ಸಂದರ್ಭದಲ್ಲಿ ಇಂದು ಕೂಡ ತನ್ನ ಮೂಲ ಸ್ವಭಾವದಿಂದ ಹೊರಬಂದು ಇತರೆ ಧರ್ಮಗಳಂತೆ ಕೌರ್ಯವನ್ನು

ಮರೆದಿದೆ. ಬೌದ್ಧದರ್ಶನದಲ್ಲಿ ಉತ್ತಮವಾದ ಆದರ್ಶಗಳಿವೆ. ಆದರೆ ಕಮ್ಯುನಿಸಂ ಸಿದ್ಧಾಂತವನ್ನು ಮೈಗೂಡಿಸಿಕೊಂಡು ರಕ್ತಪಾತಕ್ಕೂ ಮುಂದಾಗಿರುವುದು ಕಂಡುಬರುತ್ತದೆ. ಅಂದರೆ ಮೂಲದಲ್ಲಿ ಪ್ರತಿಯೊಂದು ಧರ್ಮಗಳು ಕೂಡ ಉತ್ತಮವಾದ ದರ್ಶನಗಳನ್ನು ಮೈಗೂಡಿಸಿಕೊಂಡಿದ್ದು, ಚರಿತ್ರೆಯ ಬೆಳವಣಿಗೆಯಲ್ಲಿ ಭಿನ್ನ ಸ್ವರೂಪವನ್ನು ಪಡೆದುಕೊಂಡಿವೆ. ಇದಕ್ಕೆ ಆಯಾಕಾಲದ ಚಾರಿತ್ರಿಕ ಸನ್ನಿವೇಶ ಹಾಗೂ ಒತ್ತಡಗಳು ಕಾರಣವಾಗಿವೆ. ಭಾರತದಲ್ಲಿ ದಲಿತ ಸಮುದಾಯಕ್ಕೆ ಈ ಧರ್ಮವು ವಿಮೋಚನಾ ನೆಲೆಯನ್ನು ರೂಪಿಸಬೇಕಾದ ಅಗತ್ಯತೆ ಇದೆ. ಈ ವಿಮೋಚನಾ ನೆಲೆಯಿಂದ ಮಾತ್ರ ಸಮಾಜದಲ್ಲಿ ಅಸಮಾನತೆ, ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಸಹಕಾರಿಯಾಗುತ್ತದೆ.

ಕನ್ನಡ ಚಿಂತನ ಸಾಹಿತ್ಯದ ಅಡಿಯಲ್ಲಿ ಬೌದ್ಧ ಚಿಂತನೆಗಳನ್ನು ಪ್ರಕಟಿಸುತ್ತಿರುವ ನವಬೌದ್ಧ ಚಿಂತಕರು, ಸನಾತನ ಮಾದರಿಗಳನ್ನು ಮೀರುವ ನೆಲೆಯಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಈ ಧಾರೆಗಳು ಸನಾತನವಾದವನ್ನು ವಿರೋಧಿಸುವುದರ ಜೊತೆಯಲ್ಲಿ ಬೌದ್ಧಧರ್ಮದ ಅಡಿಯಲ್ಲಿ ಜರುಗುತ್ತಿರುವ ಮೂಲಭೂತವಾದಿ ಸ್ವರೂಪವನ್ನು ಗುರುತಿಸಿ, ಆ ಮೂಲಕವಾಗಿ ವಿರೋಧವನ್ನು ವ್ಯಕ್ತಪಡಿಸುತ್ತಿವೆ. ಸಮಕಾಲೀನ ಸಂದರ್ಭದ ಬೌದ್ಧ ಚಿಂತಕರಾದ ನಾಗಸಿದ್ಧಾರ್ಥ ಹೊಲೆಯಾರ್ ಅವರು ಬುದ್ಧನನ್ನು ಕೇಂದ್ರವಾಗಿಟ್ಟುಕೊಂಡು ಹೋರಾಟ ಹಾಗೂ ಸಂಘಟನೆಗಳು ನಡೆಸುತ್ತಿರುವ ಕ್ರಿಯೆಗಳನ್ನು ಕುರಿತು ಈ ಮುಂದಿನಂತೆ ಪ್ರತಿಕ್ರಿಯಿಸಿದ್ದಾರೆ; "ಕ್ರಾಂತಿಕಾರಿಗಳ ಬಹುತೇಕ ಸಾಹಿತ್ಯವನ್ನು ಪ್ರತಿ ಕ್ರಾಂತಿಕಾರಿಗಳು ಸುಟ್ಟು ಹಾಕಿದರು. ಅಕ್ರಮವಾಗಿ ಬುದ್ಧನ ದೇವಾಲಯಗಳನ್ನು ಹಿಂದೂ ದೇವಾಲಯಗಳನ್ನಾಗಿ ಪರಿವರ್ತಿಸಿದರು. ಆದರೆ, ಒಂದೆಡೆ ಮನುವಾದಿಗಳ ತಲೆಯಲ್ಲಿ ಮನು ಧರ್ಮಶಾಸ್ತ್ರ ಕೆಲಸ ಮಾಡುತ್ತಿದ್ದರೆ, ಮತ್ತೊಂದು ಕಡೆ ಬುದ್ಧನ ಅನುಯಾಯಿಗಳು ಕ್ರಾಂತಿಕಾರಕ ಕೆಲಸಗಳಲ್ಲಿ ತೊಡಗಿದ್ದಾರೆ. ಬ್ರಹ್ಮಾಸ್ತ್ರ ಹಾಗೂ ಭೀಮಾಸ್ತ್ರಗಳ ನಡುವೆ ಹೋರಾಟಗಳು ನಡೆಯುತ್ತಲೇ ಇರುತ್ತವೆ"[೨೫] ಎಂಬುದಾಗಿ ತಿಳಿಸಿದ್ದಾರೆ. ಇವರು ತಾಳುವ ಈ ನಿಲುವುಗಳು ಬ್ರಾಹ್ಮಣಶಾಹಿ ಮತ್ತು ಅಂಬೇಡ್ಕರ್ ಅನುಯಾಯಿಗಳ ನಡುವೆ ನಡೆಯುತ್ತಿರುವ ಬೌದ್ಧಿಕ ಮತ್ತು ಭೌತಿಕ ಸಂಘರ್ಷದ ಸ್ವರೂಪವನ್ನು ಪ್ರತಿನಿಧಿಸುತ್ತವೆ. ಬಾಬಾಸಾಹೇಬರ ಮಾರ್ಗದರ್ಶನದಲ್ಲಿ ಬೌದ್ಧಧರ್ಮಕ್ಕೆ ಮತಾಂತರಗೊಳ್ಳುವವರಿಗೆ ಜಾಗೃತಿಯನ್ನು ಮೂಡಿಸುವ ಮತ್ತು ಅವರನ್ನು ಆರ್ಥಿಕವಾಗಿ ಸದೃಢಗೊಳಿಸುವ ಬದಲು, ಸಂಘರ್ಷಕ್ಕೆ ಮುಂದಾಗಿರುವ ಕ್ರಮವನ್ನು ವಿರೋಧಿಸುವ ಅಂಶಗಳು ಇವರ ವಿಚಾರಧಾರೆಗಳಲ್ಲಿ ಕಂಡುಬರುತ್ತವೆ.

ನವ ಬೌದ್ಧ ಚಿಂತನೆಗಳು: ಸ್ಥಳೀಕರಣ ಮತ್ತು ಕಸೀಕರಣ

ಕನ್ನಡ ಚಿಂತನ ಸಾಹಿತ್ಯದಲ್ಲಿ ಹಲವು ಧಾರೆಗಳು ಬೌದ್ಧದರ್ಶನ ಹಾಗೂ ಧರ್ಮವನ್ನು ಸ್ಥಳೀಕರಣಗೊಳಿಸುವ ಮತ್ತು ತಮ್ಮ ಸಂಸ್ಕೃತಿ, ಆಚಾರ, ಸಂಪ್ರದಾಯ, ನಂಬಿಕೆಗಳೊಂದಿಗೆ ಕಸಿಗೊಳಿಸುವ ನೆಲೆಯಲ್ಲಿ ಚಿಂತನೆಗಳನ್ನು ಅಭಿವ್ಯಕ್ತಗೊಳಿಸಿವೆ. ಈ ಧಾರೆಗಳು ಭಾರತದ ಮಣ್ಣಿನಲ್ಲಿ ಜೀವತಳೆದ ಬುದ್ಧನ ಧರ್ಮದೊಂದಿಗೆ ಅನುಸಂಧಾನಗೊಳ್ಳುವ ನೆಲೆಯಲ್ಲಿ ತಮ್ಮ ವಿಚಾರಗಳನ್ನು ಪ್ರಕಟಿಸಿವೆ. ಕನ್ನಡದ ಈ ಧಾರೆಗಳಿಗೆ ಬುದ್ಧ ಹಾಗೂ ಆತನ ಧರ್ಮವು ಪರಕೀಯವಲ್ಲ. ತಮ್ಮ

ಪರಂಪರೆಯ ಚಾರಿತ್ರಿಕ ಧರ್ಮವಾಗಿ ಕಂಡುಬರುತ್ತದೆ. ಆದ್ದರಿಂದ ತಮ್ಮ ಸ್ಥಳೀಯತೆಯೊಂದಿಗೆ ಬುದ್ಧನ ತತ್ವ ಚಿಂತನೆಗಳನ್ನು ಅನುಸಂಧಾನಗೊಳಿಸುತ್ತ ಬಂದಿದ್ದಾರೆ. ಕನ್ನಡದಲ್ಲಿ ಬುದ್ಧನ ದರ್ಶನವನ್ನು ಸ್ಥಳೀಯತೆಯೊಂದಿಗೆ ಅನುಂಧಾನಗೊಳಿಸುವ ಮತ್ತು ಕಸೀಕರಣಗೊಳಿಸುವ ಧಾರೆಗಳ ಹಿಂದೆ ಬಾಬಾಸಾಹೇಬರ ವಿಚಾರಗಳ ಪ್ರಭಾವವು ಕಂಡುಬರುತ್ತದೆ. ಈ ಧಾರೆಗಳು ಕರ್ನಾಟಕದ ಸ್ಥಳೀಯ ದೈವಗಳಾದ ಮಂಟೇಸ್ವಾಮಿ, ಮಲೆ ಮಾದೇಶ್ವರ, ಅಲ್ಲಮ, ಬಸವಣ್ಣನಂಥಹ ಶರಣರನ್ನು ಬುದ್ಧನ ದಾರ್ಶನಿಕತೆಯೊಂದಿಗೆ ಅನುಸಂಧಾನಗೊಳಿಸುತ್ತ ಬಂದಿದ್ದಾರೆ. ಹೀಗೆ ಕನ್ನಡ ಚಿಂತನ ಸಾಹಿತ್ಯದಲ್ಲಿ ಬುದ್ಧನನ್ನು ಸ್ಥಳೀಯತೆಯೊಂದಿಗೆ ಅನುಸಂಧಾನಗೊಳಿಸುವ ನೆಲೆಯಲ್ಲಿ ಕಂಡುಬರುವ ಕೆಲವು ಮಾದರಿಗಳು ಈ ಮುಂದಿನಂತಿವೆ.

ಕನ್ನಡದ ವೈಚಾರಿಕ ಚಿಂತಕರಾದ ಮಹದೇವ ಶಂಕನಪುರ ಅವರು ಸ್ಥಳೀಯ ದೈವವಾದ ಮಂಟೇಸ್ವಾಮಿಯ ಕ್ರಿಯೆಗಳಲ್ಲಿ ಅಂತರ್ಗತವಾಗಿರುವ ಬುದ್ಧನ ತತ್ವ-ಚಿಂತನೆಗಳ ದಾರ್ಶನಿಕ ಆಯಾಮವನ್ನು ಗುರುತಿಸಿದ್ದಾರೆ. ಬುದ್ಧನ ಅಹಿಂಸಾ ತತ್ವಕ್ಕೂ, ದಲಿತರ ದೈವವಾದ ಮಂಟೇಸ್ವಾಮಿ ಪಾಲಿಸುವ ಅಹಿಂಸಾ ನೀತಿಗಳಿಗೆ ಇರಬಹುದಾದ ಸಾಮ್ಯತೆಯನ್ನು ಇವರು ಗುರುತಿಸಿದ್ದಾರೆ. ಮಂಟೇಸ್ವಾಮಿಯ ಮೂಲ ಪರಂಪರೆಯನ್ನು ಬೌದ್ಧ ಮೂಲದಿಂದಲೆ ಗುರುತಿಸುವುದಕ್ಕೆ ಇವರು ನೀಡುವ ಸಮರ್ಥನೆ ಹೀಗಿದೆ; “ಮಂಟೇಸ್ವಾಮಿ ಮತ್ತವರ ಶಿಷ್ಯರು ಗಳಿಸುವ ‘ನಾಥಸಿದ್ಧರ ಸಾಧನೆ’ ಎಂಬುದು ಬೌದ್ಧಸಿದ್ಧ ಮತ್ತು ಶೈವಸಿದ್ಧರ ಸಾಧನೆಗಳ ಮಿಶ್ರಣವೇ ಆಗಿದೆ. ಬೌದ್ಧಸಿದ್ಧರೆಂದರೆ ಬೌದ್ಧಧರ್ಮದ ತಾಂತ್ರಿಕ ಶಾಖೆಗಳಲ್ಲೊಂದಾದ ವಜ್ರಾಯಾನ ಪಂಥ. ಈ ಬೌದ್ಧಸಿದ್ಧ ಅಥವಾ ವಜ್ರಾಯಾನ ಪಂಥದ ಮೂಲಪುರುಷ ನಾಗಾರ್ಜುನ. ಈ ಬೌದ್ಧಸಿದ್ಧ ಪಂಥಕ್ಕೆ ಗೋರಖನಾಥನು ಶಿವದೀಕ್ಷೆ ಕೊಟ್ಟು ಅದನ್ನು ನಾಥಪಂಥವಾಗಿಸಿದನು. ಈ ಪರಿವರ್ತನೆ ಭಾರತದ ತುಂಬ ನಡೆದಂತೆ ಕಾಣುತ್ತದೆ.”[೨೬] ಹೀಗೆ ಬೆಳೆದುಬಂದ ಬೌದ್ಧ ಸಂಸ್ಕೃತಿ, ತತ್ವಾದರ್ಶಗಳು ಬೇರೆ ಬೇರೆ ರೂಪದಲ್ಲಿ ವಿಭಿನ್ನ ಆಚರಣೆಗಳ ಮೂಲಕ, ಕರ್ನಾಟಕದ ವಿವಿಧ ಭಾಗಗಳಲ್ಲಿ ಮಂಟೇಸ್ವಾಮಿ ಜನಪದ ಪರಂಪರೆಯು ಜೀವಂತಿಕೆಯನ್ನು ಕಾಪಾಡಿಕೊಂಡು ಬಂದಿದೆ ಎಂಬುದನ್ನು ಗುರುತಿಸಿದ್ದಾರೆ. ಹಾಗೆಯೇ ಮಂಟೇಸ್ವಾಮಿ ಪರಂಪರೆಯ ಆಹಾರ ಕ್ರಮದಲ್ಲಿಯೂ ಬುದ್ಧನ ತತ್ವಾದರ್ಶಗಳು ಅಂತರ್ಗತವಾಗಿರುವುದನ್ನು ಗುರುತಿಸಲಾಗಿದೆ. ಮಂಟೇಸ್ವಾಮಿ ಕಲ್ಯಾಣಪಟ್ಟಣ ಪ್ರವೇಶದಲ್ಲಿ ಸತ್ತ ಎಮ್ಮೆಯ ಕರುವನ್ನು ಹೊತ್ತು ತರುವ ರೂಪಕವು, ಬುದ್ಧನ ಅಹಿಂಸಾ ನೀತಿಯ ಪ್ರತೀಕ ಎಂಬುದಾಗಿ ಮಹಾದೇವ ಶಂಕನಪುರ ಅವರು ಬುದ್ಧತ್ವದಲ್ಲಿ ಸ್ಥಳೀಯ ಆಯಾಮಗಳನ್ನು ಗುರುತಿಸಿದ್ದಾರೆ,

ಕನ್ನಡದ ಚಿಂತಕಿಯಾದ ಯು.ಬಿ.ಸುಮಾ ಅವರು ಅಲ್ಲಮನನ್ನು ಬುದ್ಧತ್ವದೊಂದಿಗೆ ಸಮೀಕರಿಸುವ ನೆಲೆಯಲ್ಲಿ ತಮ್ಮ ಚಿಂತನಧಾರೆಗಳನ್ನು ಎತ್ತಿಹಿಡಿಯುತ್ತಾರೆ. “ಅಲ್ಲಮತ್ವ ಎನ್ನುವುದು ಭಾರತದ ಮಧ್ಯಕಾಲೀನ ಪೂರ್ವದ ಬೌದ್ಧತ್ವವೇ. ಕ್ರಿ.ಶ. ೨ನೇ ಶತಮಾನದಲ್ಲಿ ಬದುಕಿದ್ದ ಬೌದ್ಧ ಧರ್ಮದ ಪ್ರಮುಖ ತತ್ವಜ್ಞ, ಚಿಂತಕ ನಾಗಾರ್ಜುನನ ‘ಮಾಧ್ಯಮಕಾರಿಕ’ದ ತಾತ್ವಿಕತೆಗಳು ಅಲ್ಲಮನ ವಚನಗಳಲ್ಲಿ

ಪ್ರತಿಮಾವಳಿಗಳಾಗಿ ವ್ಯಕ್ತವಾಗುತ್ತವೆ. ಅಲ್ಲಮ ಕೂಡ ತಳಸ್ತರದ ವಚನಕಾರ ಎಂಬ ಮಾತಿದೆ. ತನ್ನ ಕಾಲಘಟ್ಟದಲ್ಲಿ ಅತ್ಯಂತ ಪ್ರತಿಷ್ಠಿತವಾಗಿ ಪ್ರತಿಷ್ಠಾಪಿತವಾಗಿದ್ದ ಬಸವಣ್ಣನೊಂದಿಗೆ ವಿಭಿನ್ನವಾದ ಸೈದ್ಧಾಂತಿಕ ನೆಲೆಯಿಂದ ಅಲ್ಲಮ ಮುಖಾಮುಖಿಯಾಗುತ್ತಾನೆ. ಹಾಗೆಂದ ಮಾತ್ರಕ್ಕೆ ಬಸವಣ್ಣ ಬೌದ್ಧ ಚಿಂತನೆಗಳಿಂದ ದೂರ ಸರಿದಿದ್ದ ಎಂದು ಅರ್ಥವಲ್ಲ. ಬದಲಿಗೆ, ತನ್ನ ಕಾಲಘಟ್ಟದಲ್ಲೇ ಸಾಂಸ್ಥೀಕರಣಗೊಳ್ಳಲಾರಂಭಿಸಿದ ಬಸವತ್ವವನ್ನು ಅಲ್ಲಮ ಪ್ರಶ್ನಿಸಿ, ವಿರೋಧಿಸುತ್ತಾನೆ. ಅಲ್ಲಮನಲ್ಲದೆ ಇತರೆ ವಚನಕಾರರ ಮೂಲಕ ಹರಿದು ಬಂದ ಬೌದ್ಧತ್ವದ ಈ ಧಾರೆ, ಮುಂದೆ ವಸಾಹತುಶಾಹಿ ಕಾಲಘಟ್ಟದಲ್ಲಿ ಮತ್ತಷ್ಟು ಮಾನವೀಯವಾಗಿ, ಸರಳವಾಗಿ, ಜೀವನ್ಮುಖಿಯಾಗಿ ವಿಸ್ತರಿಸತೊಡಗಿದೆ. ತತ್ವಪದಕಾರರೂ, ಬಸವತ್ವಕ್ಕಿಂತ ಹೆಚ್ಚಾಗಿ ಅಲ್ಲಮತ್ವವನ್ನು ಆಶ್ರಯಿಸುತ್ತಾರೆ. ಇದೇ ಕಾಲಘಟ್ಟದ ಸೂಫಿ ಸಂತರ ರಚನೆಗಳಲ್ಲೂ ಅಲ್ಲಮಪ್ರಭುವಿಗೆ ಪ್ರಭುತ್ವ ಪ್ರಾಪ್ತವಾಗುತ್ತದೆ. ತತ್ವಪದಕಾರರಲ್ಲಿ ಕೂಡ ಹೆಚ್ಚಿನವರು ಕೆಳವರ್ಗದವರೇ ಆಗಿದ್ದರು ಎನ್ನುವುದು ಬಹುಮುಖ್ಯವಾದ ಸಂಗತಿಯಾಗಿದೆ. ವಾಸ್ತವವಾಗಿ ಬೌದ್ಧ ತತ್ವದ ಧಾರೆಗಳನ್ನು ಧರಿಸಿಕೊಂಡಿದ್ದ ತತ್ವಪದಕಾರರನ್ನು ಹಿಂದೂ–ಮುಸ್ಲಿಮರೆಂದು ವಿಭಜಿಸಿ ನೋಡುವುದಕ್ಕೆ ಸಾಧ್ಯವಿಲ್ಲ."[೨೭] ಹೀಗೆ ತಳವರ್ಗದ ಬಹುತೇಕ ಪರಂಪರೆಗಳಲ್ಲಿ ಬುದ್ಧತ್ವವು ಅಂತರ್ಗತವಾಗಿದೆ. ಆ ಮೂಲಕವಾಗಿ ಸ್ಥಳೀಯತೆಯೊಂದಿಗೆ ಬೆರೆತು, ಬುದ್ಧತ್ವವು ಜೀವಂತಗೊಂಡಿದೆ ಎಂಬುದನ್ನು ಇವರು ತಮ್ಮ ಚಿಂತನೆಗಳಲ್ಲಿ ವ್ಯಕ್ತಪಡಿಸಿದ್ದಾರೆ. ಹೀಗೆ ಕನ್ನಡದ ಹಲವು ಧಾರೆಗಳು ಬುದ್ಧತ್ವವನ್ನು ತಮ್ಮ ಸ್ಥಳೀಯ ಪರಂಪರೆ, ದೈವ, ಸಂಪ್ರದಾಯಗಳಲ್ಲಿ ಗುರುತಿಸುವ ಮತ್ತು ಜೀವಪರವಾದ ನೆಲೆಯಲ್ಲಿ ಕಸೀಕರಣಗೊಳಿಸುವ ನೆಲೆಯಲ್ಲಿ ಚಿಂತನೆಗಳನ್ನು ವ್ಯಕ್ತಪಡಿಸುತ್ತ ಬಂದಿವೆ.

ಕೊನೆ ಟಿಪ್ಪಣಿಗಳು

೧. ಮೂಡ್ನಾಕೂಡು ಚಿನ್ನಸ್ವಾಮಿ, ಮರಳಿ ಮನೆಗೆ, ಪು–೪೪

೨. ಎಸ್.ಎಸ್.ಹಿರೇಮಠ, ಕಾಳಮುಖ ದರ್ಶನ, ಪು–೮೭

೩. ಎಂ.ಕೆ. ಗಂಗೋಪಾಧ್ಯಾಯ, ಭಾರತದ ತತ್ವಶಾಸ್ತ್ರ, ಪು–೪೪

೪. ಮ.ಸು.ಕೃಷ್ಣಮೂರ್ತಿ, ಸಿದ್ಧ ಸಾಹಿತ್ಯ, ಪು–೧೩

೫. ಕಾಳಮುಖ ದರ್ಶನ, ಪು–೪೧

೬. ವಿ.ಮುನಿವೆಂಕಟಪ್ಪ, ಮತಾಂತರ, ಪು–೧೦೦

೭. ಇಂತಿ ನಮಸ್ಕಾರಗಳು, ನಟರಾಜ್ ಹುಳಿಯಾರ್, ಪು–೧೦೧

೮. ಅಂಬೇಡ್ಕರ್‌ವಾದ ಮತ್ತು ದಲಿತ ಸಾಹಿತ್ಯ, ಶಿವಕುಮಾರ, ಪು–೨೩

೯. ವಾರ್ತಾ ಭಾರತಿ, ಪು–೬ ದಿ:೧೪ ಏಪ್ರಿಲ್ ೨೦೧೬

೧೦. ವಾರ್ತಾ ಭಾರತಿ, ಪು–೬

೧೧. ವಿಚಾರ ಸಾಹಿತ್ಯ ೨೦೦೯, ಪು–೭೭

೧೨. ದತ್ತೋಪಂತ ಠೇಗಡಿ, ಸಾಮಾಜಿಕ ಕ್ರಾಂತಿಸೂರ್ಯ, ಪು.೩೦೮

೧೩. ದತ್ತೋಪಂತ ಠೇಗಡಿ, ಸಾಮಾಜಿಕ ಕ್ರಾಂತಿಸೂರ್ಯ, ಪು. ೩೨೧

೧೪. ಅರಿವೆಂಬ ಮಾಯೆ, ರವಿ.ರಾ, ಅಂಚನ್, ಪು–೪೮

೧೫. ಕರ್ನಾಟಕದಲ್ಲಿ ಬೌದ್ಧ ಧರ್ಮದ ಪುನರುಜ್ಜೀವನ, ಸಂಘಸೇನಾವರ್ಧನ.ಬಿ.ಕೆ, ಪು–೧, ೨

೧೬. ಬುದ್ಧನ ಮೂರು ಹುಣ್ಣಿಮೆಗಳು, ಪ್ರತಿ ಸ್ಪಂದನ, ಹೆಚ್.ಎಸ್.ಶಿವಪ್ರಕಾಶ್, ಪ್ರಜಾವಾಣಿ ದಿ:೨೩ ಮೇ ೨೦೧೪, ಪು–೦೬

೧೭. ಒಂದು ಕೊಡ ಹಾಲಿನ ಸಮರ, ಮೂಡ್ನಾಕೂಡು ಚಿನ್ನಸ್ವಾಮಿ, ಪು.೫೬–೫೭

೧೮. ಎದೆಗೆ ಬಿದ್ದ ಅಕ್ಷರ, ದೇವನೂರ ಮಹಾದೇವ, ಪು–೨೫

೧೯. ಅಭಿಮುಖಿ (ಸಂ), ನರೇಂದ್ರ ಕುಮಾರ್, ಪು–೧೫

೨೦. ಮರಳಿ ಮನೆಗೆ, ಸಂ.ಮೂಡ್ನಾಕೂಡು ಚಿನ್ನಸ್ವಾಮಿ, ಪು–೨೧೦

೨೧. ಅನನ್ಯತೆ, ಭಗವಾನ್.ಕೆ.ಎಸ್, ಪು–೧೩

೨೨. ಗಾಂಧಿ ಮತ್ತು ಅಂಬೇಡ್ಕರ್, ಮನಜ, ಪು–೭

೨೩. ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ, ಸ್ವಾಮಿ ಧರ್ಮತೀರ್ಥ, ಪು–೩೧

೨೪. ಮರಳಿ ಮನೆಗೆ, ಪು–೧೯೬

೨೫. ಆಂದೋಲನ, ದಿನಾಂಕ:೨೦.೦೩.೨೦೧೭

೨೬. ಮರಳಿ ಮನೆಗೆ, ಪು–೨೧೧

೨೭. ಹೆಚ್.ಟಿ. ಪೋತೆ, ವಿಚಾರ ಸಾಹಿತ್ಯ ೨೦೦೯, ಪು–೬೨, ೬೩

* * *

ಅಧ್ಯಾಯ: ಐದು

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನದ ಸಾಮಾಜಿಕ ಆಯಾಮಗಳು

೧. ಜಾತಿ ಪದ್ಧತಿ

೨. ಲಿಂಗ ತಾರತಮ್ಯ

೩. ಮೂಲಭೂತವಾದ ಮತ್ತು ಕೋಮುವಾದ

ಅಧ್ಯಾಯ : ಐದು

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನದ ಸಾಮಾಜಿಕ ಆಯಾಮಗಳು

ಕನ್ನಡದ ಚಿಂತನ ಸಾಹಿತ್ಯದಲ್ಲಿ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುವ ನೆಲೆಯಲ್ಲಿ ಹಲವು ಚಿಂತಕರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಇವರ ಸಾಮಾಜಿಕ ಕಾಳಜಿಯನ್ನು ಆಧಾರವಾಗಿಟ್ಟುಕೊಂಡು ಒಡಮೂಡಿರುವ ಚಿಂತನೆಗಳಲ್ಲಿ ಬೌದ್ಧದರ್ಶನ ಕೇಂದ್ರಿತವಾದ ಚಿಂತನೆಗಳು ಹೆಚ್ಚಾಗಿ ಕಂಡುಬರುತ್ತವೆ. ಸಮಾಜದಲ್ಲಿರುವ ಸಾಮಾಜಿಕ ಅಸಮಾನತೆಯನ್ನು ಹಾಗೂ ಸಾಮಾಜಿಕ ಕಟ್ಟುಪಾಡುಗಳಲ್ಲಿ ಅಂತರ್ಗತವಾಗಿರುವ ಮೂಲಭೂತವಾದಿ ನಿಲುವುಗಳನ್ನು ವಿರೋಧಿಸುವುದಕ್ಕೆ ಕನ್ನಡದ ಹಲವಾರು ಚಿಂತಕರು ಬೌದ್ಧದರ್ಶನವನ್ನು ಪ್ರಮುಖ ಅಸ್ತ್ರವಾಗಿ ಬಳಸಿಕೊಂಡಿದ್ದಾರೆ. ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನವನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾಗಿರುವ ಚಿಂತನೆಗಳಲ್ಲಿನ ಸಾಮಾಜಿಕ ಆಯಾಮಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ವ್ಯಕ್ತವಾಗಿರುವ ಬೌದ್ಧದರ್ಶನದ ಸಾಮಾಜಿಕ ಆಯಾಮಗಳು ಸಮಕಾಲೀನ ಸಮಾಜದ ಹಲವಾರು ಸಮಸ್ಯೆಗಳಿಗೆ ಸ್ಪಂದಿಸುತ್ತ ಬಂದಿವೆ. ಕನ್ನಡದ ಚಿಂತಕ ವರ್ಗವು ಬೌದ್ಧದರ್ಶನವನ್ನು ಕೇವಲ ಧಾರ್ಮಿಕ ನೆಲೆಗಟ್ಟಿನಲ್ಲಿ ಮಾತ್ರ ವಿಶ್ಲೇಷಣೆಗೆ ಒಳಪಡಿಸಿಲ್ಲ. ಇವರ ಚಿಂತನೆಗಳು ಸಾಮಾಜಿಕ ನೆಲೆಯಲ್ಲಿ ಸ್ಥಳೀಯ ಮತ್ತು ಜಾಗತಿಕ ಸಮಸ್ಯೆಗಳಿಗೂ ಮುಖಾಮುಖಿಯಾಗಿವೆ. ಆ ಮೂಲಕವಾಗಿ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ನೆಲೆಯಲ್ಲಿ ಕನ್ನಡದಲ್ಲಿ ಚಿಂತನ ಧಾರೆಗಳು ವ್ಯಕ್ತವಾಗಿವೆ. ಇಂತಹ ಸಾಮಾಜಿಕ ಸಮಸ್ಯೆಗಳಲ್ಲಿ ಜಾತಿ ಪದ್ಧತಿ, ಲಿಂಗ ತರತಮ, ಯುದ್ಧನೀತಿ, ಭಯೋತ್ಪಾದನೆ, ಮೂಲಭೂತವಾದ, ಕೋಮುವಾದ, ಬಡತನ, ನಿರುದ್ಯೋಗದಂತಹ ಅಂಶಗಳು ಪ್ರಮುಖವಾಗಿ ಕಂಡುಬರುತ್ತವೆ. ಇವುಗಳಲ್ಲಿ ಜಾತಿ ಪದ್ಧತಿ, ಲಿಂಗ ತರತಮ, ಮೂಲಭೂತವಾದ ಹಾಗೂ ಕೋಮುವಾದದಂತಹ ಸಮಸ್ಯೆಗಳನ್ನು ಕುರಿತ ಚಿಂತನೆಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

೧. ಜಾತಿ ಪದ್ಧತಿ

ಭಾರತದ ಸಾಮಾಜಿಕ ಸಮಸ್ಯೆಗಳು ಪ್ರಮುಖವಾಗಿ ಕಂಡುಬರುವುದು ಶ್ರೇಣೀಕೃತ ನೆಲೆಯ ಜಾತಿ ಪದ್ಧತಿಯಲ್ಲಿ. ಈ ಜಾತಿ ಪದ್ಧತಿಯು ಪ್ರಾಚೀನ ಚರಿತ್ರೆಯುದ್ದಕ್ಕೂ ಮಾನವ ಸಮಾಜದಲ್ಲಿ

ಅಸಮಾನತೆಯನ್ನು ಸೃಷ್ಟಿಸಿಕೊಂಡು ಬಂದಿದೆ. ಇದರ ಪರಿಣಾಮವಾಗಿ ಮನುಷ್ಯರು ಮನುಷ್ಯರನ್ನು ಕೀಳಾಗಿ ಕಾಣುವಂತಹ ಪ್ರವೃತ್ತಿಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಜಾತಿ ಪದ್ಧತಿಯ ಸೋಕಿನಿಂದಾಗಿ ದಲಿತ ಸಮುದಾಯಗಳು ಅಸ್ಪೃಶ್ಯತೆಯನ್ನು ಅನುಭವಿಸುವಂತಾಗಿದೆ. ಇಂತಹ ಅಸಮಾನತೆಯ ನಿರ್ಮಾಣಕ್ಕೆ ಕಾರಣವಾಗಿರುವುದು ಬ್ರಾಹ್ಮಣಧರ್ಮ. ಈ ಬ್ರಾಹ್ಮಣಧರ್ಮವು ತನ್ನ ಅಸ್ತಿತ್ವದ ಉಳಿವಿಗಾಗಿ ತಳ ಸಮುದಾಯಗಳಿಗೆ ಅಸ್ಪೃಶ್ಯತೆಯ ಪಟ್ಟವನ್ನು ಕಟ್ಟಿ, ಸಮಾಜದಿಂದ ಹೊರಗಿಡುವ ಮೂಲಕ ಕೀಳಾಗಿ ನಡೆಸಿಕೊಂಡಿದೆ. ಈ ಜಾತಿ ಪದ್ಧತಿಯನ್ನು ಮೀರುವ ನೆಲೆಗಟ್ಟಿನಲ್ಲಿ ಹಲವಾರು ಕನ್ನಡ ಚಿಂತಕರು ಬೌದ್ಧ ದರ್ಶನವನ್ನು ತಾತ್ವಿಕ ಶಕ್ತಿಯಾಗಿಟ್ಟುಕೊಂಡು ತಮ್ಮ ಚಿಂತನೆಗಳನ್ನು ಪ್ರಕಟಿಸಿದ್ದಾರೆ. ಈ ಚಿಂತನಧಾರೆಗಳು ಸಮಕಾಲೀನ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಮಾನವ ಸಮಾಜದಲ್ಲಿನ ಅಸಮಾನತೆಯನ್ನು ಮೀರುವ ನೆಲೆಯಲ್ಲಿ ಮೂಡಿಬಂದಿವೆ.

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಅಸಮಾನತೆಯನ್ನು ಸೃಷ್ಟಿಸಿ, ತಳ ಸಮುದಾಯಗಳನ್ನು ಹೀನಾಯವಾಗಿ ನಡೆಸಿಕೊಳ್ಳುತ್ತಿರುವ ಪುರೋಹಿತಶಾಹಿ ಕ್ರಮಗಳನ್ನು ಮೀರುವ ನೆಲೆಯಲ್ಲಿ ಕನ್ನಡದ ಚಿಂತನಧಾರೆಗಳು ವ್ಯಕ್ತವಾಗಿವೆ. ಈ ಚಿಂತಕ ವರ್ಗದಲ್ಲಿ ಪ್ರಗತಿಪರ ಎಡಪಂಥೀಯ ಧಾರೆಗಳು ಪ್ರಮುಖವಾಗಿ ಕಂಡುಬರುತ್ತವೆ. ಈ ಪ್ರಗತಿಪರ ಧಾರೆಯಲ್ಲಿ ಅಸಮಾನತೆಯ ವಿರುದ್ಧ ಹೋರಾಟ ನಡೆಸುವ ಚಿಂತಕ ವರ್ಗಕ್ಕೆ ಭಾರತದ ಹಲವು ದಾರ್ಶನಿಕರ ವೈಚಾರಿಕ ನಿಲುವುಗಳು ಪ್ರೇರಕ ಶಕ್ತಿಯಾಗಿ ಕಾರ್ಯನಿರ್ವಹಿಸಿವೆ. ಇಂತಹ ದಾರ್ಶನಿಕರಲ್ಲಿ ಬುದ್ಧ, ಬಸವಣ್ಣ, ವಿವೇಕಾನಂದ, ಪೆರಿಯಾರ್, ಜ್ಯೋತಿಬಾ ಫುಲೆ, ಅಂಬೇಡ್ಕರ್, ಅಯೋತಿದಾಸ್ ಹಾಗೂ ಇತರೆ ದಾರ್ಶನಿಕರು ಪ್ರಮುಖವಾಗಿ ಕಂಡುಬರುತ್ತಾರೆ. ಈ ದಾರ್ಶನಿಕರ ತಾತ್ವಿಕ ಧೋರಣೆಗಳನ್ನು ಆಧಾರವಾಗಿಟ್ಟುಕೊಂಡು ಕನ್ನಡದ ಚಿಂತಕರು ಜಾತಿ ವ್ಯವಸ್ಥೆಯನ್ನು ಮೀರುವ ನೆಲೆಯಲ್ಲಿ ಚಿಂತನ(ವಿಚಾರ) ಸಾಹಿತ್ಯ ಸೃಷ್ಟಿಗೆ ಮುಂದಾಗಿದ್ದಾರೆ. ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುವ ಬೌದ್ಧ ದರ್ಶನ ಕೇಂದ್ರಿತ ವಿಚಾರಧಾರೆಗಳು ೨೦ರ ದಶಕದ ತರುವಾಯದಲ್ಲಿ ಸೃಷ್ಟಿಯಾದವುಗಳಾಗಿವೆ. ಬಾಬಾಸಾಹೇಬ್ ಅಂಬೇಡ್ಕರರು ಸಾಂಪ್ರದಾಯಿಕ ಹಿಂದೂಧರ್ಮದಲ್ಲಿ ಬದಲಾವಣೆ ಸಾಧ್ಯವಿಲ್ಲ ಎಂಬುದನ್ನರಿತು ೧೯೫೬ ಅಕ್ಟೋಬರ್ ೧೪ರಂದು ಬೌದ್ಧಧರ್ಮಕ್ಕೆ ಮತಾಂತರ ಹೊಂದಿದರು. ಇವರಿಂದ ಪ್ರೇರಿತವಾದ ಕನ್ನಡ ಚಿಂತಕ ವರ್ಗವು ದಲಿತ ಹಾಗೂ ಬಂಡಾಯ ಸಾಹಿತ್ಯದ ಸೈದ್ಧಾಂತಿಕ ನೆಲೆಯೊಳಗೆ, ಬೌದ್ಧದರ್ಶನವನ್ನು ಬಳಸಿಕೊಳ್ಳುವ ಮೂಲಕ ಸಾಮಾಜಿಕ ಅಸಮಾನತೆಯ ವಿರುದ್ಧ ಹೋರಾಟಕ್ಕೆ ಮುಂದಾಯಿತು. ಅಂಬೇಡ್ಕರ್ ವಿಚಾರಧಾರೆಗಳ ನೆಲೆಯಲ್ಲಿ ಬೌದ್ಧದರ್ಶನವನ್ನು ಸ್ವೀಕರಿಸಿದ ಕನ್ನಡದ ಚಿಂತಕರು ತಮ್ಮ ಸುತ್ತಮುತ್ತಲಿನ ಸಮಾಜದಲಿನ್ನ ದಲಿತರು ಹಾಗೂ ದಮನಿತರಲ್ಲಿ ಜಾಗೃತಿಯನ್ನು ಮೂಡಿಸುವ ನೆಲೆಯಲ್ಲಿ ಚಿಂತನೆಗಳನ್ನು ಬಿತ್ತರಿಸಿದ್ದಾರೆ. ಈ ಚಿಂತನೆಗಳು ವಿಭಿನ್ನ ತಾತ್ವಿಕ ಆಯಾಮಗಳಲ್ಲಿ ವ್ಯಕ್ತವಾಗಿರುವುದು ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುತ್ತದೆ. ಕನ್ನಡದ ಚಿಂತಕರು ಬೌದ್ಧದರ್ಶನವನ್ನು ಕೇಂದ್ರವಾಗಿಟ್ಟಕೊಂಡು ವ್ಯಕ್ತಪಡಿಸಿರುವ ಜಾತಿ ವಿರೋಧಿ ನೆಲೆಯ ಆಯಾಮಗಳನ್ನು ಮುಖ್ಯವಾಗಿ ಎರಡು ವಿಧಗಳಲ್ಲಿ ಗುರುತಿಸಲಾಗಿದೆ. ಅವು ಈ ಮುಂದಿನಂತಿವೆ.

ಬಂಧಮುಕ್ತತೆ (ಬಿಡುಗಡೆ):

ಕನ್ನಡ ಚಿಂತನ ಸಾಹಿತ್ಯದಲ್ಲಿ ಕೆಲವು ವಿಚಾರಧಾರೆಗಳು ಬೌದ್ಧದರ್ಶನವನ್ನು ಜಾತಿ ವ್ಯವಸ್ಥೆಯಿಂದ ಬಿಡುಗಡೆಗೊಳ್ಳುವ ಹೋರಾಟದಲ್ಲಿ ಅಸ್ತ್ರವಾಗಿ ಬಳಸಿವೆ. ಚಿಂತಕರಾದ ಗೇಲ್ ಓಂವೆಡ್ತ್ ಅವರು ವಿಶ್ಲೇಷಿಸುತ್ತ “ಮಹಾರಾಷ್ಟ್ರದ ನವಬೌದ್ಧರಲ್ಲಿ ಈ ಬಿಡುಗಡೆಯು ಸಾಮಾಜಿಕ ಬಂಡಾಯದ ಆಯಾಮವನ್ನು ಪಡೆಯಿತು. ಹಿಂದೂ ಜಾತಿ ಶ್ರೇಣೀಕರಣದ ವ್ಯವಸ್ಥೆಯಲ್ಲಿ ಸವರ್ಣಿಯರು ತಾಕೀತು ಮಾಡಿದಾಗಲೆಲ್ಲ ಸತ್ತ ದನಗಳನ್ನು ಹೊತ್ತೊಯ್ಯುವ ಅಥವಾ ಅಂಥ ಅನೇಕ ಹೀನ ಕೆಲಸಗಳನ್ನು ಮಾಡಬೇಕಾದ ಹಿಡಿತ ಈಗ ಇರಲಿಲ್ಲ. ಈ ದೃಷ್ಟಿಯಿಂದ ಕೂಡ ಹಿಂದೂವಲ್ಲದ ಐಡೆಂಟಿಟಿಯೇ ದಲಿತರಿಗೆ ಒಂದು ಬಿಡುಗಡೆಯಂತೆ ಕಂಡಿದ್ದು ಆಶ್ಚರ್ಯವಲ್ಲ”[೧] ಎಂಬುದಾಗಿ ದಲಿತರ ಅಸ್ಪೃಶ್ಯತೆಯ ಬಿಡುಗಡೆಯ ನೆಲೆಗಳನ್ನು ಗುರುತಿಸುತ್ತಾರೆ. ಕನ್ನಡದಲ್ಲಿ ಸೃಷ್ಟಿಯಾಗಿರುವ ಹೆಚ್ಚು ಬೌದ್ಧ ಚಿಂತನೆಗಳು ಅಂಬೇಡ್ಕರ್ ವಿಚಾರಧಾರೆಗಳಿಂದ ಪ್ರಭಾವಿತವಾಗಿವೆ. ಸ್ವಾಮಿ ವಿವೇಕಾನಂದರು ಕೂಡ ಹಿಂದೂಧರ್ಮದ ಜಾತಿ ಪದ್ಧತಿಯಿಂದ ಬಿಡುಗಡೆಯನ್ನು ಪಡೆಯುವ ನೆಲೆಯಲ್ಲಿ ಬೌದ್ಧದರ್ಶನದತ್ತ ಮುಖ ಮಾಡುತ್ತಾರೆ. ಅವರೇ ಹೇಳುವಂತೆ; “ಬುದ್ಧ ಮಾಡಿದುದು ಏನೆಂದರೆ, ಉಪನಿಷತ್ತುಗಳಲ್ಲಿ ಯಾವುದೋ ಒಂದು ಜಾತಿಯವರಿಗೆ ಮಾತ್ರ ಸೀಮಿತವಾಗಿದ್ದ ಧರ್ಮದ ಬಾಗಿಲನ್ನು ಸರ್ವರಿಗೂ ತೆರೆದನು. ‘ನಿರ್ವಾಣ ಸಿದ್ಧಾಂತ’ವು ಆತನ ಯಾವ ಒಂದು ಅಪೂರ್ವ ಮಹಿಮೆಯನ್ನು ತೋರುವುದು? ಆತನ ಮಹತ್ವವಿರುವುದು ಅವನ ಅಸೀಮ ಸಹಾನುಭೂತಿಯಲ್ಲಿ. ಅವನ ಧರ್ಮಕ್ಕೆ ಕಳೆಕೊಡುವ ಮೇಲಿನ ದರ್ಜೆಯ ಸಮಾಧಿ ಮುಂತಾದವುಗಳ ಹೆಚ್ಚಿನ ವಿಷಯ ಆಗಲೇ ವೇದಗಳಲ್ಲಿ ಇರುವುದು. ಅಲ್ಲಿಲ್ಲದಿರುವುದೇ ಬುದ್ಧನ ತೀಕ್ಷ್ಣಮತಿ ಮತ್ತು ಹೃದಯವಂತಿಕೆ. ಇದಕ್ಕೆ ಸರಿಸಮನಾದ ಉದಾಹರಣೆ ಇಡೀ ವಿಶ್ವ ಚರಿತ್ರೆಯಲ್ಲೇ ಇಲ್ಲ.”[೨] ಆದ್ದರಿಂದ ಅವರು ಬುದ್ಧ ನನ್ನ ಇಷ್ಟ. ಅವನೆ ನನ್ನ ದೇವರು ಎಂಬುದಾಗಿ ಹಿಂದೂಧರ್ಮದಲ್ಲಿನ ಮೂಲಭೂತವಾದವನ್ನು ಮೆಟ್ಟಿ ನಿಲ್ಲುತ್ತಾರೆ. ಆ ಮೂಲಕ ಬುದ್ಧನ ಧರ್ಮದತ್ತ ಆಕರ್ಷಿತರಾಗುತ್ತಾರೆ. ಆದರೆ ಕನ್ನಡದ ಬಹುತೇಕ ಚಿಂತಕ ವರ್ಗಕ್ಕೆ ವಿವೇಕಾನಂದರು ಸ್ವೀಕರಿಸಿದ ಬೌದ್ಧ ದರ್ಶನವು ಮುಖ್ಯವಾಗಿ ಕಂಡುಬರುವುದಿಲ್ಲ. ಇದಕ್ಕೆ ಕಾರಣ ವಿವೇಕಾನಂದರ ಸಾವಿನ ತರುವಾಯದಲ್ಲಿ ಹಿಂದುತ್ವವಾದಿಗಳು ಇವರನ್ನು ಹಿಂದೂಧರ್ಮದ ಪ್ರತಿನಿಧಿಯೆಂಬಂತೆ ತಮ್ಮ ಸಂಘಟನೆ ಮತ್ತು ಹೋರಾಟಗಳಿಗೆ ಬಳಸಿಕೊಂಡಿರುವುದು. ಇದರಿಂದ ಕನ್ನಡದ ಕೆಲವು ಪ್ರಗತಿಪರರು ವಿವೇಕಾನಂದರ ಚಿಂತನೆಗಳನ್ನು ನಿರ್ಲಕ್ಷ್ಯ ಮಾಡಿರುವ ಸಾಧ್ಯತೆಯಿದೆ.

ತಮಿಳುನಾಡಿನ ಬೌದ್ಧ ಚಿಂತಕರಾದ ಅಯೋತಿದಾಸರು ಪರಯಾ(ಅಸ್ಪೃಶ್ಯ) ಜಾತಿಗೆ ಸೇರಿದವರು. ಇವರು ಹಿಂದೂಧರ್ಮದ ಜಾತಿಪದ್ಧತಿಯಿಂದ ಬಿಡುಗಡೆಗೊಳ್ಳುವ ನೆಲೆಯಲ್ಲಿ ಬೌದ್ಧ ಧರ್ಮವನ್ನು ಸ್ವೀಕರಿಸುತ್ತಾರೆ. ವೈಚಾರಿಕ ಚಿಂತಕರಾದ ಇವರಿಗೆ ಸಮಾಜದಲ್ಲಿ ಅಸಮಾನತೆಯನ್ನು ಸೃಷ್ಟಿಸಿರುವ ಹಿಂದೂಧರ್ಮವನ್ನು ಮತ್ತು ಅದರಲ್ಲಿನ ಬ್ರಾಹ್ಮಣ ಯಜಮಾನಿಕೆಯನ್ನು ಅಂಗೀಕರಿಸಬೇಕಾದ ಅಗತ್ಯ ಇಲ್ಲವೆಂಬ ತಾತ್ವಿಕ ಎಚ್ಚರವಿತ್ತು. ತಾವು ಮೂಲದಲ್ಲಿ ಬೌದ್ಧರಾಗಿದ್ದು, ತಮ್ಮನ್ನು ತಾವು

ವರ್ತಮಾನದಲ್ಲಿ ಬೌದ್ಧರೆಂದು ಗುರುತಿಸಿಕೊಳ್ಳುವುದೆಂದರೆ ಗುಲಾಮಗಿರಿಯನ್ನು ಧಿಕ್ಕರಿಸಿ, ಭವಿಷ್ಯತ್ತಿನಲ್ಲಿ ವಿಮೋಚನೆಯೆಡೆಗೆ ಸಾಗುವುದೆಂಬುದಾಗಿ ತಿಳಿದುಕೊಂಡರು. ಇಂತಹ ಸಂದರ್ಭದಲ್ಲಿ "ಅಸ್ಪೃಶ್ಯ ಜಾತಿಗೆ ಸೇರಿದ ಇವರಿಗೆ ತಮ್ಮ ಬದುಕಿನ ಅನುಭವಗಳನ್ನು, ತಮ್ಮ ಜಾತಿಗೆ ಸೇರಿದ ಇತರರ ಅನುಭವಗಳನ್ನು ವಿಶ್ಲೇಷಿಸಿ ಪರಾಮರ್ಶಿಸುವ ಹಂತದಲ್ಲಿ ಬೌದ್ಧಧರ್ಮದ ಬಗ್ಗೆ ಆಸಕ್ತಿ ಉಂಟಾಯಿತು. ಅಮಾನುಷವಾದ ವರ್ಣಧರ್ಮವನ್ನು ಆಚರಣೆಗೆ ತಂದ ಬ್ರಾಹ್ಮಣ ಮತಕ್ಕೆ ಪರ್ಯಾಯವಾಗಿ ನಿಂತ ಧರ್ಮವೆಂದು ಬೌದ್ಧಧರ್ಮ ಅವರಿಗೆ ಕಾಣಿಸಿತು. ಆ ಧರ್ಮದಲ್ಲಿ ಶೋಷಿತ ಜಾತಿಗಳ ಆಕಾಂಕ್ಷೆಗಳಿಗೂ ಮತ್ತು ವಿಮೋಚನೆಗೂ ಅಗತ್ಯವಾದ ಅಂಶವಿದೆಯೆಂದು ಕೂಡ ತೋಚಿತು. ಬಹಳ ಕಾಲ ಬೌದ್ಧಧರ್ಮದ ಬಗ್ಗೆ ಅವರು ಮಾಡಿದ ಸಂಶೋಧನೆಗಳಿಂದ ಮತ್ತು ವ್ಯಾಪಕವಾದ ಅಧ್ಯಯನದಿಂದ ೧೮೯೦ರ ಹೊತ್ತಿಗೆ ಬೌದ್ಧಧರ್ಮದ ಬಗ್ಗೆ ಸಂಪೂರ್ಣ ನಂಬಿಕೆಯುಂಟಾಯಿತು. ಒಂದು ಬೌದ್ಧ ಸಮಾಜವನ್ನು ಕಟ್ಟಬೇಕೆಂಬ ಸಂಕಲ್ಪದಿಂದ ಮತ್ತೆ ಕೆಲವರು ಪರಯಾ ನಾಯಕರೊಂದಿಗೆ ಪ್ರಯತ್ನವನ್ನು ಆರಂಭಿಸಿದರು."[೩] ಈ ಮಾರ್ಗದಲ್ಲಿ ಮುನ್ನಡೆದು ಅವರು ಹಿಂದೂಧರ್ಮದ ಜಾತಿಪದ್ಧತಿಯಿಂದ ಬಿಡುಗಡೆ ಪಡೆಯಲು ಬೌದ್ಧಧರ್ಮವನ್ನು ಸ್ವೀಕರಿಸಿದರು. ಆ ಮೂಲಕವಾಗಿ ತಮಿಳುನಾಡಿನ ಪರಯ ಜಾತಿಯ ಅಸ್ಪೃಶ್ಯರಲ್ಲಿ ಜಾಗೃತ ನೆಲೆಯ ಅರಿವು ಮೂಡಿಸಲು ಶ್ರಮಿಸಿದರು.

ಭಾರತದ ಜಾತಿವ್ಯವಸ್ಥೆಯಿಂದ ಹೊರಬಂದು, ಸ್ವಾಭಿಮಾನದ ಬದುಕಿಗಾಗಿ ಆನಂದ ತೇಲ್‌ತುಂಬ್ಡೆಯವರು ಬೌದ್ಧ ದರ್ಶನದೊಂದಿಗೆ ಅನುಸಂಧಾನಗೊಳ್ಳುವ ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸುತ್ತಾರೆ. ಇವರು ಕ್ರಿಸ್ತಪೂರ್ವದ ಬುದ್ಧನ ಸಮಾನತೆಯ ಆಶಯಗಳನ್ನು ಸಮಕಾಲೀನ ನೆಲೆಯ ಹೋರಾಟಗಳೊಂದಿಗೆ ಸಮೀಕರಿಸುತ್ತಾರೆ. "ನಮ್ಮ ಕಾಲದ ಮಾರ್ಕ್ಸ್‌ವಾದದಂತೆಯೇ, ಇಪ್ಪತ್ತೈದು ಶತಮಾನಗಳಷ್ಟು ಹಿಂದಿನ ಕಾಲದ ಸ್ಥಾಪಿತ ಮತ ವ್ಯವಸ್ಥೆಯ ವಿರುದ್ಧ ದಂಗೆಯೆದ್ದಿದ್ದ ಧರ್ಮವೇ ಬೌದ್ಧಧರ್ಮ. ಗೊಡ್ಡು ತಾತ್ವಿಕ ಚಿಂತನೆಯ ನಿಷ್ಫಲತೆಯನ್ನು ಎತ್ತಿ ತೋರಿಸಿ, ಜಗತ್ತನ್ನು ಬದಲಿಸುವ ಅವಶ್ಯಕತೆಯ ಮೇಲೆ ಹೆಚ್ಚಿನ ಒತ್ತುಕೊಟ್ಟ ದಾರ್ಶನಿಕರಲ್ಲಿ ಬುದ್ಧನೇ ಮೊಟ್ಟ ಮೊದಲನೆಯವನು. ಕುತೂಹಲದ ಸಂಗತಿಯೆಂದರೆ, ಬುದ್ಧನೇ ಪ್ರಪ್ರಥಮ ಗತಿ ತಾರ್ಕಿಕನಾಗಿದ್ದಾನೆ. ಒಂದು ವಿಧದಲ್ಲಿ ಅವನು ಹೆಗೆಲ್ ಮತ್ತು ಮಾರ್ಕ್ಸ್‌ರ ಪೂರ್ವಜ. ಹಾಗಿದ್ದೂ ನಮ್ಮ ಕಾಲದ ಸಮಸ್ಯೆಗಳಿಗೆ ಬುದ್ಧನಿಂದ ಪರಿಹಾರ ನಿರೀಕ್ಷಿಸುವುದು ಅಚಾರಿತ್ರಿಕವಾದುದ್ದು. ಆದರೆ ಅವನು ತನ್ನ ಅನುಸಂಧಾನದ ಮಾರ್ಗದಲ್ಲಿ ಅನುಸರಿಸಿದ್ದ ವೈಚಾರಿಕ ಹಾಗೂ ತರ್ಕಬದ್ಧ ವಿಧಿವಿಧಾನಗಳನ್ನು ಪರಿಗಣಿಸುವುದು ತುಂಬಾ ಮುಖ್ಯವಾದದ್ದು"[೪] ಎಂಬುದಾಗಿ ತಿಳಿಸುತ್ತಾರೆ. ಇವರ ಈ ಚಿಂತನೆಗಳು ಬುದ್ಧನ ತತ್ವ- ಚಿಂತನೆಗಳಲ್ಲಿರುವ ಬಂಡಾಯದ ನೆಲೆಗಳನ್ನು ಎತ್ತಿಹಿಡಿಯುತ್ತವೆ. ಭಾರತದ ನೆಲದಲ್ಲಿ ಹಿಂದೂ ಮೂಲಭೂತವಾದದ ವಿರುದ್ಧ ಬಂಡಾಯ ದನಿ ಎತ್ತಿದ ಬುದ್ಧನ ಚಿಂತನೆಗಳು, ಜಗತ್ತಿನ ಇತರೆ ರಾಷ್ಟ್ರಗಳ ವಿಮೋಚನೆಗೆ ತಾತ್ವಿಕ ಶಕ್ತಿಯನ್ನು ಒದಗಿಸಿದ ಬಗೆಯನ್ನು ಇಲ್ಲಿ ಪ್ರಸ್ತಾಪಿಸುತ್ತಾರೆ. ಬುದ್ಧನ ಈ ಬಂಡಾಯವು ಇಂದಿನ ಜಾತಿ ವ್ಯವಸ್ಥೆಯಿಂದ ಬಿಡುಗಡೆಗೊಳ್ಳುವ ನೆಲೆಯಲ್ಲಿ ಅನುಸಂಧಾನಗೊಳ್ಳಬೇಕಾದ ಅನಿವಾರ್ಯತೆಯಿದೆ ಎಂಬುದಾಗಿ ಅಭಿಪ್ರಾಯಪಡುತ್ತಾರೆ.

ಭಾರತದಲ್ಲಿ ಜಾತಿವ್ಯವಸ್ಥೆಯು ತನ್ನ ಬೇರುಗಳನ್ನು ಆಳವಾಗಿ ಚಾಚಿಕೊಂಡಿದೆ. ಇದನ್ನು ಮೀರುವ ನೆಲೆಯಲ್ಲಿ ಕನ್ನಡ ಚಿಂತನ ಸಾಹಿತ್ಯದ ಕೆಲವು ಧಾರೆಗಳು ಬೌದ್ಧ ದರ್ಶನವನ್ನು ಕೇಂದ್ರವಾಗಿಟ್ಟುಕೊಂಡು ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸುತ್ತ ಬಂದಿವೆ. ಈ ಧಾರೆಗಳು ಹಿಂದೂಧರ್ಮದ ಮೂಲಭೂತವಾದಿ ಧೋರಣೆಗಳನ್ನು ಮೀರುವ ನೆಲೆಯಲ್ಲಿ ಬೌದ್ಧಧರ್ಮ ಹಾಗೂ ದರ್ಶನದೊಂದಿಗೆ ಅನುಸಂಧಾನಕ್ಕೆ ಮುಂದಾಗಿವೆ. ಜಾತಿವ್ಯವಸ್ಥೆಯಿಂದ ಬಿಡುಗಡೆಗಾಗಿ ತುಡಿಯುತ್ತಿರುವ ಈ ಧಾರೆಗಳು ಹಿಂದೂಧರ್ಮದ ಪ್ರಮಾಣಗಳ ಭಂಜನೆಗೆ ಮುಂದಾಗಿವೆ. ಇಲ್ಲಿ ವೈದಿಕ ಪ್ರಮಾಣಗಳನ್ನು ನಿರಾಕರಿಸುವುದಕ್ಕೆ ಬೌದ್ಧ ದರ್ಶನವನ್ನು ಬಳಸಿಕೊಳ್ಳಲಾಗಿದೆ. ವೈದಿಕ(ಹಿಂದೂ) ಪ್ರಮಾಣಗಳನ್ನು ಮೀರುವ ಮೂಲಕ ಬೌದ್ಧ ದರ್ಶನವನ್ನು ಸಮರ್ಥಿಸಿಕೊಳ್ಳುವ ಕನ್ನಡದ ಚಿಂತಕರಲ್ಲಿ ವಸುದೇವ ಭೂಪಾಲಂ ಅವರು ಒಬ್ಬರಾಗಿದ್ದಾರೆ. "ಪರಿವರ್ತನೆ ವಿಶ್ವದ ನಿಯಮ. ಮಾನವನಾಗಲಿ ಬೇರೆ ಜೀವಿಯಾಗಲಿ, ಜಡವಾಗಲಿ ಪರಿವರ್ತನೆಯಿಲ್ಲದೆ ಇರಲಾರದು ಎನ್ನುತ್ತಾನೆ ಬುದ್ಧ. 'ಮಾನವನಲ್ಲಿ ಆತ್ಮವೆಂಬುದೊಂದು ಇದೆ. ಮಾನವನ ದೇಹಕ್ಕೆ ಎಂಥ ಪರಿವರ್ತನೆಯುಂಟಾದರೂ, ಜೀವನಕ್ಕೆ ಮೊದಲೂ, ನಂತರವೂ ಆತ್ಮ ಪರಿವರ್ತನೆಯಿಲ್ಲದೆ ಇರುತ್ತದೆ' ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಆದರೆ ಬುದ್ಧನ ಪರಿವರ್ತನಾ ತತ್ವದಂತೆ, ಪರಿವರ್ತನವಿಲ್ಲದ ಆತ್ಮವಿರಲಾರದು; ಎಂದರೆ, ಆತ್ಮವಿಲ್ಲ ಎಂದು ನಿರ್ಣಯವಾಗುತ್ತದೆ. ಮುಕ್ತಿ ಪಡೆದು ಆತ್ಮಕ್ಕೆ ಚಿರಾನಂದನವನ್ನು ಗಳಿಸುವ ಆಪೇಕ್ಷೆಯನ್ನು ಬುದ್ಧ ಖಂಡಿಸುತ್ತಾನೆ."[೫] ಹೀಗಾಗಿ ಬದಲಾವಣೆಗೆ ಅವಕಾಶವನ್ನು ನೀಡದ, 'ಆತ್ಮ ಮತ್ತು ಮೋಕ್ಷ' ಸಿದ್ಧಾಂತವನ್ನು ಪ್ರತಿಪಾದಿಸುವ ಹಿಂದುತ್ವದ ಜಡ ಮಾದರಿಯನ್ನು ವಸುದೇವ ಭೂಪಾಲಂ ಅವರು ಬೌದ್ಧ ದರ್ಶನದ ಮೂಲಕ ನಿರಾಕರಿಸುತ್ತಾರೆ. ಆ ಮೂಲಕವಾಗಿ ಹಿಂದೂಧರ್ಮದ ಜಡ ಮಾದರಿಗಳನ್ನು ಮೀರುವ ನೆಲೆಯಲ್ಲಿ ಪ್ರಮಾಣಗಳ ನಿರಾಕರಣೆಗೆ ಮುಂದಾಗಿರುವ ಹಲವು ವೈಚಾರಿಕ ಧಾರೆಗಳು ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುತ್ತವೆ.

ಪಂಡಿತ ತಾರಾನಾಥ ಅವರು ಹಿಂದೂ ಮೂಲಭೂತವಾದಿ ಧೋರಣೆಗಳನ್ನು ವಿರೋಧಿಸುವ ಮೂಲಕ, ಬೌದ್ಧ ದರ್ಶನದಲ್ಲಿ ಅಂತರ್ಗತವಾಗಿರುವ ಸಮಾನತೆಯ ಆಶಯಗಳನ್ನು ಎತ್ತಿಹಿಡಿದಿದ್ದಾರೆ. "ಬುದ್ಧನ ಮತವು ಉದಯಿಸುವವರೆಗೆ ಶೂದ್ರರೂ, ಸ್ತ್ರೀಯರೂ, ಬ್ರಾಹ್ಮಣ- ಕ್ಷತ್ರಿಯರ- ವೈಶ್ಯರ ಅತ್ಯಾಶೆಯ ಆಹುತಿಗಳೇ ಆಗಿದ್ದರು. ಬುದ್ಧನು ಭೇದಗಳ ವೈರಿಯಾದನು. ಸಮಾನತೆಯು ಪ್ರತಿ ವ್ಯಕ್ತಿಯ ಅಧಿಕಾರವೆಂಬುದನ್ನು ಸಾರಿದನು. ಕೃತ್ರಿಮ ಜಾತಿ-ರೀತಿಗಳನ್ನು ಒಡೆದು ಬಗ್ಗಿಸಿದನು. ಜೀವಿಗೆ ದುಖಃ ಬೇಡವಾಗಿದೆ; ಅದು ಯಾವ ಕಾರಣದಿಂದಲೇ ಆಗಲಿ ಬಂದರೆ ಉಚ್ಚ-ನೀಚ-ಜಾತಿ-ಕುಲಭೇದವನ್ನು ಲೆಕ್ಕಿಸದೆ ಅದನ್ನು ಕಿತ್ತೊಗೆಯುವ ಸಮಾಜ ಸೇವೆಯೇ ಉತ್ತಮವಾದ ವ್ಯವಹಾರವೆಂದು ಆಡಿ, ಮಾಡಿ ತೋರಿದನು. ಇದರಿಂದ ವರ್ಣಾಶ್ರಮ ಧರ್ಮಕ್ಕೂ, ಬೌದ್ಧಮತಕ್ಕೂ ಅಜಗಜಾಂತರವುಂಟಾಯಿತು. ಅದು ಭೇದಗಳನ್ನಿಟ್ಟುಕೊಂಡು ಬೆಳೆಯುವ ಸಂಪ್ರದಾಯ. ಇದು ಅದಕ್ಕೆ ವಿರುದ್ಧ. ಅಲ್ಲಿ ಹುಟ್ಟಿದವನು ಅಲ್ಲಿಯೇ ಇದ್ದು ಸಾಯಬೇಕು. ಇದು ಸಕಲರಿಗೂ ಜೀವಿತದ ಉಚ್ಚ ಸುಖ ಸೋಪಾನವನ್ನೇರುವ ಅಧಿಕಾರವನ್ನು ಕೊಡುತ್ತದೆ."[೬] ಆದ ಕಾರಣ ಹಿಂದುಧರ್ಮದ

ಅಸಮಾನ ನೀತಿಗೆ ವಿರುದ್ಧ ನೆಲೆಯಲ್ಲಿ ಬೌದ್ಧಧರ್ಮ ಸಕಲರಿಗೂ ಸಮಾನತೆಯನ್ನು ಕಲ್ಪಿಸಿದೆ ಎಂಬುದು ಇವರ ಚಿಂತನೆಯ ಸಾರವಾಗಿದೆ. ವೈಚಾರಿಕ ಚಿಂತಕರಾದ ಇವರು ಬ್ರಾಹ್ಮಣಧರ್ಮದ ಸಾಂಪ್ರದಾಯವನ್ನು ಮೀರುವ ನೆಲೆಯಲ್ಲಿ ಬೌದ್ಧ ದರ್ಶನವನ್ನು ಎತ್ತಿಹಿಡಿದಿದ್ದಾರೆ.

ಕನ್ನಡದ ದಲಿತ ಬೌದ್ಧ ಚಿಂತಕರಾದ ಜೆ. ಸೋಮಶೇಖರ ಅವರು ಹಿಂದೂಧರ್ಮದಿಂದ ಬಿಡುಗಡೆ ಪಡೆಯುವ ನೆಲೆಯಲ್ಲಿ ಬೌದ್ಧಧರ್ಮವನ್ನು ಸಮರ್ಥಿಸಿಕೊಂಡಿದ್ದಾರೆ. "ಬುದ್ಧಧರ್ಮವೇ ಶೋಷಿತರ ಪಾಲಿಗೆ ಸಂವಿಧಾನವಾಗಬೇಕೆಂಬುದು ಶೋಷಿತರೆಲ್ಲರ ಅಭಿಪ್ರಾಯವಾಗಬೇಕು. ಸಮಾನತೆಯ ಬದುಕು ಶೋಷಿತ ವರ್ಗವನ್ನು ಘಾಸಿಗೊಳಿಸುತ್ತದೆ. ತನ್ನ ರಕ್ಕಸ ಪ್ರವೃತ್ತಿಯನ್ನು ದಿನದಿನಕ್ಕೂ ಹೆಚ್ಚುತ್ತ ಸಾಗುತ್ತಿರುವ ಈ ಕಾಲದಲ್ಲಿ ಬುದ್ಧಧಮ್ಮದ ಮೂಲಕ ಶೋಷಿತ ವರ್ಗವನ್ನಿಲ್ಲಿ ಒಂದೆಡೆ ಸೇರಿಸಿ ಚಿಂತಿಸುವ ಪ್ರಕ್ರಿಯೆ ಚಾಲನೆಯಾಗಬೇಕಾಗಿದೆ"[೭] ಎಂಬುದಾಗಿ ತಮ್ಮ ಚಿಂತನೆಗಳನ್ನು ಬಿಡುಗಡೆಯ ಭಾಗವಾಗಿ ವ್ಯಕ್ತಪಡಿಸುತ್ತಾರೆ. ಇವರ ದೃಷ್ಟಿಯಲ್ಲಿ ದಲಿತರು ಹಾಗೂ ಹಿಂದುಳಿದ ಸಮುದಾಯಗಳು ಜಾತಿಯತೆಯ ಸೊಂಕಿನಿಂದ ಬಿಡುಗಡೆಯಾಗಲು ಬೌದ್ಧಧರ್ಮವು ಅನಿವಾರ್ಯ. ಶೋಷಿತ ಸಮುದಾಯವು ಉನ್ನತ ವರ್ಣ ಹಾಗೂ ಜಾತಿಗಳು ಬೆಳೆಸಿಕೊಂಡು ಬಂದಿರುವ ಅಸ್ಪೃಶ್ಯತೆಯನ್ನು ಮೀರುವುದಕ್ಕೆ ಬೌದ್ಧ ದರ್ಶನವು ಸಂವಿಧಾನವಾಗಬೇಕಾದ ಅನಿವಾರ್ಯತೆಯನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಬೌದ್ಧಧರ್ಮದ ಸಂವಿಧಾನಿಕ ನೆಲೆಯಲ್ಲಿ ಮುನ್ನೆಡೆದರೆ ಮಾತ್ರ ದಲಿತರ ನಡೆ ಬುದ್ಧನೆಡೆಗೆ ಮರಳಿ ಮನೆಗೆ ಸಾಗುತ್ತದೆ. ಇಲ್ಲದೆ ಹೋದರೆ ಅರ್ಥನಡೆಯಾಗುತ್ತದೆ ಎಂಬುದು ಇವರ ಚಿಂತನೆಯ ಸಾರವಾಗಿದೆ.

ಹಿಂದೂಧರ್ಮದಿಂದ ಬಿಡುಗಡೆಯನ್ನು ಪಡೆಯುವುದಕ್ಕೆ ಬೌದ್ಧಧರ್ಮವು ಅತ್ಯಂತ ಸೂಕ್ತವಾಗಿದೆ ಎಂಬುದು ಬಂಜಗೆರೆ ಜಯಪ್ರಕಾಶ್ ಅವರ ನಿಲುವಾಗಿದೆ. "ಹುಟ್ಟಿನ ಆಧಾರದಲ್ಲಿ ಯಾವ ಜಾತಿಯ ಅಥವಾ ವ್ಯಕ್ತಿಯ ಶ್ರೇಷ್ಟತೆಯನ್ನು ಅನುಮೋದಿಸಲು ಬುದ್ಧ ಸಿದ್ಧನಿರಲಿಲ್ಲ. ಯಾಕೆಂದರೆ ಯಾರೂ ಕೂಡ ಹುಟ್ಟಿನಿಂದಲೇ ಶ್ರೇಷ್ಟರಾಗಿ ಅಥವಾ ಸಮರ್ಥರಾಗಿ ಹುಟ್ಟಿರುವುದಿಲ್ಲ. ಬದಲಾಗಿ ಅವರವರು ಅನುಸರಿಸುವ ಕರ್ಮಗಳಿಗನುಸಾರವಾಗಿ ಅವರು ಈ ಬದುಕಿನಲ್ಲಿ ಫಲಪ್ರಾಪ್ತಿಯನ್ನು ಪಡೆಯುತ್ತಾರೆ ಎಂಬುದು ಬುದ್ಧನ ಬೋಧನೆಯ ಸಾರವಾಗಿತ್ತು."[೮] ಆದ್ದರಿಂದ ಬೌದ್ಧಧರ್ಮದಲ್ಲಿ ಸಕಲ ಜೀವಿಗಳಿಗೂ ಸಮಾನತೆಯಿದೆ. ಈ ನೆಲೆಯಲ್ಲಿ ದಲಿತರು ಹಾಗೂ ದಮನಿತರು ಸಾಮಾಜಿಕ ಅಮಾನತೆಯಿಂದ ಬಿಡುಗಡೆಗೊಳ್ಳಲು ಬೌದ್ಧಧರ್ಮದತ್ತ ಮುಖ ಮಾಡುವುದು ಅನಿವಾರ್ಯ ಎಂಬುದಾಗಿ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸುತ್ತಾರೆ. ಸಾಮಾಜಿಕ ಸಮಾನತೆಗಾಗಿ ಹೋರಾಟದ ಹಾದಿಯಲ್ಲಿ ಸಾಗಿ ಬಂದಿರುವ ಈ ಚಿಂತಕ ವರ್ಗಕ್ಕೆ ಬುದ್ಧನ ವೈಚಾರಿಕ ಧರ್ಮವು ಅತ್ಯಂತ ಮಹತ್ವಪೂರ್ಣವಾಗಿ ಕಂಡುಬರುತ್ತದೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುವ ಬೌದ್ಧ ಚಿಂತನ ಧಾರೆಗಳು ಕೇವಲ ಜಾತೀಯತೆಯನ್ನು ವಿರೋಧಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ದುಶ್ಚಟ ಮತ್ತು ಆಮಿಷಗಳಿಗೆ ಬಲಿಯಾಗಿರುವ

ಜನತೆಯನ್ನು ಸೂಕ್ತ ಮಾರ್ಗದಲ್ಲಿ ಮುನ್ನೆಡೆಸುವ ನೆಲೆಯಲ್ಲಿಯೂ ಬೌದ್ಧ ಚಿಂತನೆಗಳು ವ್ಯಕ್ತವಾಗಿವೆ. "ಬುದ್ಧನ ಚಿಂತನೆಗಳು ಆಮಿಷಗಳಿಗೆ ಬಲಿಯಾಗಿ ಬೌದ್ಧಿಕ ದಾರಿದ್ರ್ಯವನ್ನು ಅನುಸರಿಸುತ್ತಾ, ಸಮಾಜದಲ್ಲಿ ಸಾಮಾಜಿಕ ಅಸಮಾನತೆಯನ್ನು ಸೃಷ್ಟಿಸುವವರಿಗೆ ಅತ್ಯಂತ ಪರಿಣಾಮಕಾರಿಯಾದ ಮಾರ್ಗ. ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ದುರ್ಬಲವಾಗಿರುವ ಪ್ರಸ್ತುತ ಸಮಾಜಕ್ಕೆ ಬೌದ್ಧಧರ್ಮವು ಶಕ್ತಿಯನ್ನು ಒದಗಿಸುವ ಸಾಧನ"[೯] ಎಂಬುದು ಜೋಗನ್ ಶಂಕರ್ ಅವರ ನಿಲುವಾಗಿದೆ. ಇವರು ಸಾಮಾಜಿಕ ಅಸಮಾನತೆ, ಅವಮಾನಗಳಿಗೆ ಕೇವಲ ಜಾತೀಯತೆಯಷ್ಟೆ ಕಾರಣವಲ್ಲ. ವ್ಯಕ್ತಿಯು ಸಾಮಾಜಿಕ ಬದುಕಿನಲ್ಲಿ ಅಳವಡಿಸಿಕೊಂಡಿರುವ ಜೀವನ ಕ್ರಮವು ಕೂಡ ಅಸಮಾನತೆ ಮತ್ತು ಅವಮಾನಗಳಿಗೆ ಕಾರಣವಾಗಿರುತ್ತದೆ. ಆದ್ದರಿಂದ ವ್ಯಕ್ತಿತ್ವಕ್ಕೆ ಧಕ್ಕೆ ತರುವಂತಹ ಚಟಗಳಿಂದ ದೂರವಿರಲು ಬೌದ್ಧಧರ್ಮದಲ್ಲಿ ಪರಿಹಾರವಿದೆ ಎಂಬುದಾಗಿ ಸೂಚಿಸುತ್ತಾರೆ. ಇವರು ಬುದ್ಧನ ಚಿಂತನೆಗಳಲ್ಲಿ ಅಂತರ್ಗತವಾಗಿರುವ ಸಮಾನತೆ, ವಿಶ್ವಶಾಂತಿಯ ಆಶಯಗಳನ್ನು ಕೇಂದ್ರವಾಗಿಟ್ಟುಕೊಂಡು ತಮ್ಮ ವಾದವನ್ನು ಮಂಡಿಸುತ್ತಾರೆ. ಸಮಾಜವಾದಿ ಧೋರಣೆಗಳ ಮೂಲಕ ಸಮ ಸಮಾಜದ ಕನಸ್ಸು ಕಾಣುವ, ಅಸಮಾನತೆಯ ವಿರುದ್ಧ ಬಂಡಾಯದ ದನಿಯನ್ನು ತೋರುತ್ತ ಬಂದಿರುವ ಇವರಿಗೆ ಜಾತಿ ವ್ಯವಸ್ಥೆಯಿಂದ ಬಿಡುಗಡೆಯಾಗುವುದಕ್ಕೆ ಬೌದ್ಧಧರ್ಮ ಹಾಗೂ ಬುದ್ಧನ ದರ್ಶನವು ಪ್ರಮುಖ ಅಸ್ತ್ರವಾಗಿ ಕಂಡುಬರುತ್ತದೆ.

ಕನ್ನಡದ ಚಿಂತಕರಾದ ಕಾಳೇಗೌಡ ನಾಗವಾರ ಅವರು, ಬೌದ್ಧ ದರ್ಶನದಲ್ಲಿ ಅಸಮಾನತೆ ಹಾಗೂ ಕಂದಾಚಾರಗಳಿಗೆ ಅವಕಾಶವಿಲ್ಲ ಎಂಬ ನೆಲೆಯಲ್ಲಿ ಚಿಂತನೆಯನ್ನು ಮಂಡಿಸುತ್ತಾರೆ. "ಬುದ್ಧನೆಂಬ ಬೆಳಕು ಆಧುನಿಕ ಕಾಲದಲ್ಲಿ ಕೂಡ ನಮ್ಮಲ್ಲಿನ ಹಲವಾರು ರೀತಿಯ ಕತ್ತಲೆಯ ಮೊತ್ತಕ್ಕೆ ತೀರಾ ಅವಶ್ಯಕವಾದುದು. ಆತನ ಹೃದಯಸಂಪನ್ನವೂ ಅತ್ಯಂತ ವೈಜ್ಞಾನಿಕವೂ ಆಗಿರುವ ವಿಚಾರಧಾರೆಯು ನಮ್ಮಲ್ಲಿನ ಅನೇಕಾನೇಕ ಸಮಸ್ಯೆಗಳಿಗೆ, ಗೊಂದಲಗೇಡಿ ಮತ್ತು ಅವಿವೇಕದ ಆಚರಣೆಗಳಿಗೆ ಸಿದ್ಧೌಷಧವಾಗಿದೆ. ಬುದ್ಧನ ತುಂಬು ಪ್ರಸನ್ನತೆಯ ತಿಳಿವಿನ ಮುಂದೆ ಇತರ ಸಮಾಜ ಸುಧಾರಕರೆಲ್ಲಾ ಅಕ್ಷರಶಃ ಹಾಲುಗಲ್ಲದ ಹಸುಳೆಗಳಂತೆ ಕಂಗೊಳಿಸುತ್ತಿದ್ದಾರೆ"[೧೦] ಎಂಬುದಾಗಿ ಬುದ್ಧನ ಸಾಮಾಜಿಕ ಕಳಕಳಿ ಮತ್ತು ಆತನ ವಿದ್ವತ್ತನ್ನು ಎತ್ತಿಹಿಡಿದಿದ್ದಾರೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಜಾತಿಪದ್ಧತಿಯಿಂದ ಮುಕ್ತಗೊಳ್ಳುವ ನೆಲೆಯ ಬಹುತೇಕ ಧಾರೆಗಳು ಬೌದ್ಧಧರ್ಮದಲ್ಲಿ ಪರಿಹಾರವನ್ನು ಕಂಡುಕೊಳ್ಳಲು ಯತ್ನಿಸಿವೆ. ಈ ಧಾರೆಗಳು ಸಮಾನತೆಯ ಸಮಾಜವನ್ನು ಜಾತಿಮುಕ್ತ ನೆಲೆಯಲ್ಲಿ ಕಟ್ಟ ಬಯಸುತ್ತವೆ. ಈ ಬಂಧಮುಕ್ತತೆಯ ಆಶಯವೊತ್ತ ಚಿಂತನಧಾರೆಗಳು ಪ್ರಗತಿಪರವಾಗಿದ್ದು, ಈ ಧಾರೆಯ ಚಿಂತನೆಗಳು ಜಾಗೃತ ಪರಿಕಲ್ಪನೆಯಿಂದ ಒಡಮೂಡಿದವುಗಳಾಗಿವೆ. ಈ ಧಾರೆಗಳು ಸಮಕಾಲೀನ ಸಮಾಜದಲ್ಲಿನ ಅಸಮಾನತೆಯನ್ನು ತೊಡೆದುಹಾಕಲು ಬುದ್ಧನ ದರ್ಶನವನ್ನು ಪ್ರಮುಖ ಮಾಧ್ಯಮವಾಗಿ ಬಳಸಿಕೊಳ್ಳುತ್ತವೆ. ಆ ಮೂಲಕ ಬುದ್ಧನ ವಿಚಾರಗಳನ್ನು ಆಧಾರವಾಗಿಟ್ಟುಕೊಂಡು, ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ನೆಲೆಯೂರಿರುವ ಜಾತೀಯತೆಯಿಂದ ಹೊರಬರಲು ತವಕಿಸುತ್ತಿವೆ. ಈ ಜಾತಿಯತೆಯಿಂದ

ಬಂಧಮುಕ್ತಗೊಳ್ಳುವ ಚಿಂತನೆಗಳಿಗೆ ಪ್ರಮುಖ ಕಾರಣವೆಂದರೆ, ಹಿಂದೂಧರ್ಮದಲ್ಲಿ ಬದಲಾವಣೆ ಎಂಬುದು ಮರೀಚಿಕೆಯಾಗಿದೆ. ಈ ಕಾರಣದಿಂದಾಗಿ ಬಾಬಾಸಾಹೇಬರು ತಮ್ಮ ಅಂತಿಮ ಕಾಲದಲ್ಲಿ ಹಿಂದೂಧರ್ಮವನ್ನು ತೊರೆದು ಬೌದ್ಧಧರ್ಮಕ್ಕೆ ಮತಾಂತರಗೊಂಡರು. ಈ ಕಾರಣದಿಂದಾಗಿ ಕನ್ನಡದ ಹಲವಾರು ಚಿಂತನಧಾರೆಗಳು ಹಿಂದೂಧರ್ಮದ ಜಾತೀಯತೆಯ ಬಂಧನದಿಂದ ಮುಕ್ತಿ ಪಡೆದು, ಸಮಾನತೆಯ ಬದುಕಿಗಾಗಿ ಬೌದ್ಧಧರ್ಮದತ್ತ ತಮ್ಮ ನಿಲುವುಗಳನ್ನು ವ್ಯಕ್ತಪಡಿಸುತ್ತಿವೆ. ಕನ್ನಡದ ಈ ಚಿಂತನಧಾರೆಗಳು ಪ್ರಪಂಚದ ಹಲವಾರು ಜೀವಪರ ಚಿಂತನೆಗಳನ್ನು ಒಳಗೊಂಡಂತೆ, ಬಾಬಾಸಾಹೇಬರ ಸೈದ್ಧಾಂತಿಕ ನಿಲುವುಗಳಿಂದ ಪ್ರಭಾವಿತವಾಗಿವೆ.

ಸ್ವಾಭಿಮಾನ (ಆತ್ಮ ಗೌರವ):

ಭಾರತದಲ್ಲಿ ಶ್ರೇಣೀಕೃತ ವರ್ಣ ಹಾಗೂ ಜಾತಿ ವ್ಯವಸ್ಥೆಯನ್ನು ಮೀರುವ ಚಿಂತನ ಧಾರೆಗಳು ಬುದ್ಧನಿಗೂ ಪೂರ್ವದಿಂದಲೂ ಕಾರ್ಯಪ್ರವೃತ್ತವಾಗಿವೆ. ಆದರೆ ಈ ಅಸಮಾನ ನೆಲೆಯನ್ನು ಮೀರುವ ದಾರ್ಶನಿಕರಿಗೆ ರಾಜಶ್ರಯ ದೊರೆಯದೆ, ಕೆಲವರು ಪ್ರಭುತ್ವವನ್ನು ನಿರಾಕರಿಸಿದ ಪರಿಣಾಮವಾಗಿ ಬಹುತೇಕ ದಾರ್ಶನಿಕ ಧಾರೆಗಳು ಕಣ್ಮರೆಯಾಗಿವೆ. ಭಾರತದಲ್ಲಿ ಶ್ರೇಣೀಕೃತ ವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದಿರುವ ಬ್ರಾಹ್ಮಣ (ವೈದಿಕ) ಧರ್ಮದ ವಿರುದ್ಧ ಅವೈದಿಕ ನೆಲೆಯಲ್ಲಿ ತಲೆ ಎತ್ತಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರು ಅವೈದಿಕ ಧಾರೆಗಳು ತುಂಬ ವಿರಳ. ವೈದಿಕಧರ್ಮದ ವಿರುದ್ಧ ಸೆಣಸಾಡಿ ತನ್ನ ನೆಲೆಯನ್ನು ಕಾಯ್ದುಕೊಂಡ ಧಾರೆಗಳಲ್ಲಿ ಬೌದ್ಧ ಮತ್ತು ಜೈನ ದರ್ಶನಗಳು ಪ್ರಮುಖವಾಗಿ ಕಂಡುಬರುತ್ತವೆ. ಈ ದರ್ಶನಗಳು ಶಾಶ್ವತವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರಮುಖ ಕಾರಣವೆಂದರೆ, ಇವುಗಳಲ್ಲಿನ ವೈಚಾರಿಕ ನಿಲುವುಗಳು ಜನ ಜೀವನಕ್ಕೆ ಹತ್ತಿರವಾಗಿದ್ದು ಒಂದಾದರೆ, ಮತ್ತೊಂದು ಇವುಗಳಿಗೆ ರಾಜಾಶ್ರಯ ಲಭಿಸಿದ್ದು. ಇಂತಹ ಜೀವಪರವಾದ ದರ್ಶನದ ಮೂಲಕ ಸರ್ವರಿಗೂ ಸಮಾನ ನೆಲೆಯನ್ನು ಕಲ್ಪಿಸಿಕೊಡಲು ಹಲವು ದಾರ್ಶನಿಕರು ಶ್ರಮಿಸಿದ್ದಾರೆ.

ಭಾರತದ ಜಾತಿವ್ಯವಸ್ಥೆಯಲ್ಲಿ ತಳ ಸಮುದಾಯಗಳು ಅತ್ಯಂತ ನಿಕೃಷ್ಟವಾದ ಜೀವನವನ್ನು ಸಾಗಿಸಿಕೊಂಡು ಬಂದಿವೆ. ವೈದಿಕಧರ್ಮವು ತನ್ನ ಶ್ರೇಣೀಕೃತ ವ್ಯವಸ್ಥೆಯಲ್ಲಿ ಶೂದ್ರ ಸಮುದಾಯವನ್ನು ಶಿಕ್ಷಣದಿಂದ ವಂಚಿಸಿ, ತನ್ನ ಅಡಿಯಾಳಾಗಿ ಮುನ್ನೆಡೆಸಿಕೊಂಡು ಬಂದಿದೆ. ಇದರಲ್ಲಿ ಶೂದ್ರಾತಿ ಶೂದ್ರ ವರ್ಗವನ್ನು ಅಮಾನವೀಯ ನೆಲೆಗೆ ಗುರಿಪಡಿಸಿದೆ. ಈ ಕ್ರಮವನ್ನು ಮೀರುವ ನೆಲೆಯಲ್ಲಿ ಹಲವಾರು ದಾರ್ಶನಿಕ ಚಿಂತಕರು ಬೌದ್ಧ ದರ್ಶನದ ಅಡಿಯಲ್ಲಿ ತಮ್ಮ ಹೋರಾಟವನ್ನು ನಡೆಸಿ, ಈ ಅಸ್ಪೃಶ್ಯ ಸಮುದಾಯಗಳಲ್ಲಿ ಸ್ವಾಭಿಮಾನದ ಪ್ರಜ್ಞೆಯನ್ನು ಮೂಡಿಸುವ ನೆಲೆಯಲ್ಲಿ ತಮ್ಮ ಚಿಂತನೆ ಹಾಗೂ ಹೋರಾಟಗಳ ಮೂಲಕ ಶ್ರಮಿಸಿದ್ದಾರೆ. ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನವನ್ನು ಕೇಂದ್ರವಾಗಿಟ್ಟುಕೊಂಡು ದಲಿತರಲ್ಲಿ ಸ್ವಾಭಿಮಾನವನ್ನು ಮೂಡಿಸುವ ಹಲವು ಧಾರೆಗಳು ಕಂಡುಬರುತ್ತವೆ. ಹಿಂದೂಧರ್ಮದ ಮೂಲಭೂತವಾದಿ ನೆಲೆಗಳಿಂದ ಯಾವುದೇ ಪ್ರಗತಿ ಹಾಗೂ ಬದಲಾವಣೆ ಸಾಧ್ಯವಿಲ್ಲ ಎಂಬುದನ್ನರಿತ ಬಹುತೇಕ ಕನ್ನಡದ ಚಿಂತಕರು ಬೌದ್ಧ ದರ್ಶನದ ಮೂಲಕ

ಬದಲಾವಣೆಯ ಹಾದಿಯಲ್ಲಿ ನಡೆದಿದ್ದಾರೆ. "ಬದಲಾವಣೆ ಎಂಬುದು ಕೇವಲ ಒಬ್ಬ ವ್ಯಕ್ತಿಗೆ ಸಂಬಂಧಿಸಿದ್ದಲ್ಲ. ಇದು ಅನೇಕ ವ್ಯಕ್ತಿಗಳಿಗೆ ಸಂಬಂಧಿಸಿದ ವಿಷಯ. ಸಾಮಾಜಿಕ ಬದಲಾವಣೆಯು ಸಮಗ್ರ ಸಮುದಾಯದ ವಿಷಯ. ಇದರ ಮತ್ತೊಂದು ಮಾತೇ ಸಮಾಜಿಕ ಬದಲಾವಣೆ. ಈ ತತ್ವ ಬುದ್ಧನ ಚಿಂತನೆಯಲ್ಲಿದೆ"[೧೧] ಎಂಬ ನೆಲೆಯಲ್ಲಿ ಬೌದ್ಧ ದರ್ಶನವನ್ನು ಪ್ರಮುಖ ಅಸ್ತ್ರವಾಗಿ ಬಳಸಿಕೊಂಡು ಹಿಂದುತ್ವಕ್ಕೆ ವಿರೋಧ ವ್ಯಕ್ತಪಡಿಸಿ, ಅಸ್ಪೃಶ್ಯರಲ್ಲಿ ಸ್ವಾಭಿಮಾನದ ಅರಿವು ಮೂಡಿಸುವ ನೆಲೆಯಲ್ಲಿ ಹಲವು ಧಾರೆಗಳು ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುತ್ತವೆ.

ಚರಿತ್ರೆಯುದ್ಧಕ್ಕೂ ಶೂದ್ರಾತಿ ಶೂದ್ರ ವರ್ಗವನ್ನು ಅಸ್ಪೃಶ್ಯತೆಯ ನೆಲೆಯಲ್ಲಿ ಕೀಳಾಗಿ ನಡೆಸಿಕೊಂಡು ಬಂದಿರುವವರು ಬ್ರಾಹ್ಮಣರು ಮಾತ್ರವಲ್ಲ. ಬ್ರಾಹ್ಮಣ ಧರ್ಮದ ಚೌಕಟ್ಟನ್ನು ಬಳಸಿಕೊಂಡಿರುವ ಭೂ ಮಾಲಿಕರು, ಶೂದ್ರ ಸಮುದಾಯದ ಪ್ರಬಲ ಜಾತಿಗಳು ಅಸ್ಪೃಶ್ಯ ಸಮುದಾಯಗಳಿಗೆ 'ಕೀಳು' ಪಟ್ಟ ಕಟ್ಟಿ, ಇವರನ್ನು ಮುಟ್ಟಿಸಿಕೊಳ್ಳದಂತೆ ಊರಿನಿಂದ ಹೊರಗಿಟ್ಟು ಕೀಳಾಗಿ ನಡೆಸಿಕೊಂಡು ಬಂದಿವೆ. ಈ ಸಮುದಾಯವನ್ನು ಪ್ರಾಣಿಗಿಂತ ನಿಕೃಷ್ಟವಾಗಿ ನೆಡೆಸಿಕೊಂಡು ಸ್ವಾಭಿಮಾನ ವಂಚಿತರನ್ನಾಗಿಸಿದೆ. ಆದರೆ ಬೌದ್ಧಧರ್ಮದ ನೆಲೆಗಟ್ಟಿನಲ್ಲಿ ಹಲವಾರು ಭಾರತೀಯ ದಾರ್ಶನಿಕರು ದಲಿತ ಸಮುದಾಯಗಳಿಗೆ ಸ್ವಾಭಿಮಾನದ ನೆಲೆಗಳನ್ನು ರೂಪಿಸಿಕೊಡಲು ಶ್ರಮಿಸಿದ್ದಾರೆ. "ಅಸ್ಪೃಶ್ಯತೆಯನ್ನು ಭಾರತೀಯ ಸಮಾಜದಿಂದ ನಿವಾರಿಸಿ ಅಸ್ಪೃಶ್ಯರನ್ನು ಗೌರವಾನ್ವಿತ ಪ್ರಜೆಗಳನ್ನಾಗಿ ಬೆಳೆಸುವ ದೃಷ್ಟಿಯಿಂದ ಅಂಬೇಡ್ಕರ್‌ರವರು ಬಂಡಾಯದ ಸಂಕೇತವಾಗಿ ಬೌದ್ಧಧರ್ಮವನ್ನು ಸ್ವೀಕರಿಸಿದರು. ಬೌದ್ಧ ಭಾರತದಲ್ಲಿ ಅಸ್ಪೃಶ್ಯರು, ಶೂದ್ರರು ಮತ್ತು ಮಹಿಳೆಯರು ಸಮಾನತೆಯನ್ನು ಅನುಭವಿಸಿ ಗೌರವಯುತವಾಗಿ ದೇಶ ಆಳುವ ವರ್ಗವಾಗಿ ಬದುಕಿದ ಇತಿಹಾಸ ಅಂಬೇಡ್ಕರ್‌ರವರಿಗೆ ಚನ್ನಾಗಿ ತಿಳಿದಿತ್ತು. ಆಧುನಿಕ ಭಾರತದಲ್ಲಿ ಶೋಷಿತ ಜನವರ್ಗಗಳು ಯಾವುದೇ ತಾರತಮ್ಯಕ್ಕೆ ಗುರಿಯಾಗದೇ, ದೇಶದ ಆಳುವ ವರ್ಗವಾಗಿ ರೂಪಗೊಳ್ಳುವ ಸಲುವಾಗಿ ಬುದ್ಧಮಾರ್ಗ ಅನಿವಾರ್ಯವೆಂಬುದನ್ನು ಅಂಬೇಡ್ಕರ್ ಮನಗಂಡಿದ್ದರು."[೧೨] ಆದ್ದರಿಂದ ತಮ್ಮ ಬದುಕಿನ ಅಂತಿಮ ದಿನಗಳಲ್ಲಿ ತಮ್ಮ ಮೂಲ ಧರ್ಮಕ್ಕೆ ಮತಾಂತರಗೊಂಡರು. ಈ ಧಾರ್ಮಿಕ ಮತಾಂತರ ಪ್ರಕ್ರಿಯೆಯು ಕೇವಲ ಆಚರಣಾತ್ಮಕವಾಗಿರಲಿಲ್ಲ. ದಲಿತರು ಹಾಗೂ ದಮನಿತ ಸಮುದಾಯಕ್ಕೆ ಆತ್ಮ ಗೌರವದ ಸಾಂಸ್ಕೃತಿಕ ಹಾಗೂ ಚಾರಿತ್ರಿಕ ನೆಲೆಯೊಂದನ್ನು ಕಲ್ಪಿಸಿಕೊಡುವ ನೆಲೆಯದಾಗಿತ್ತು. ಬಾಬಾಸಾಹೇಬರ ಈ ಚಿಂತನ ಕ್ರಮಗಳನ್ನು ಮೈಗೂಡಿಸಿಕೊಂಡು ಬಂದ ಕನ್ನಡದ ಚಿಂತಕ ವರ್ಗವು ದಲಿತರಲ್ಲಿ ಸ್ವಾಭಿಮಾನ ಹಾಗೂ ಆತ್ಮಾಭಿಮಾನವನ್ನು ಹೆಚ್ಚಿಸುವ ನೆಲೆಯಲ್ಲಿ ಚಿಂತನಧಾರೆಗಳನ್ನು ವ್ಯಕ್ತಪಡಿಸಿದೆ. "ಬ್ರಾಹ್ಮಣ ಧರ್ಮವು ಬೌದ್ಧಧರ್ಮದ ಮೇಲೆ ಜಯಗಳಿಸಿದಾಗ ಬೌದ್ಧಧರ್ಮವನ್ನು ತ್ಯಜಿಸಿ ತಮ್ಮ ತಮ್ಮ ಸ್ಥಾನಗಳಿಗೆ ಮರಳಿದ ಶೂದ್ರರಂತೆ ಬೌದ್ಧಧರ್ಮವನ್ನು ಬಿಟ್ಟು ಬರಲು ನಿರಾಕರಿಸಿದರು ಈ ಜನ. ಆದುದರಿಂದ ಇವರು ಅಂದರೆ ಅಸ್ಪೃಶ್ಯರು ಬ್ರಾಹ್ಮಣರನ್ನು ಅಶುಭರು ಅಥವಾ ಅನಿಷ್ಟರೆಂದು ಭಾವಿಸುತ್ತಾರೆ. ಅವರನ್ನು ಪುರೋಹಿತರಾಗಿ ನೇಮಿಸಿಕೊಳ್ಳುವುದಿಲ್ಲ. ಅಷ್ಟೇ ಅಲ್ಲ, ಅವರನ್ನು ತಮ್ಮ ಕೇರಿಗಳಿಗೂ ಪ್ರವೇಶ ಮಾಡಲು ಬಿಡುವುದಿಲ್ಲ.

ಹಾಗೆಯೇ ಚದುರಿ ಹೋದ ಜನ ವಿಶೇಷ ಕಾರಣಕ್ಕಾಗಿ ಊರುಗಳ ಹೊರಗೆ ನೆಲಸಿದವರೇ ಆಗಿ ಬೌದ್ಧಧರ್ಮವನ್ನು ಬಿಡದ ಅವರನ್ನು ಅಸ್ಪೃಶ್ಯರೆಂದು ಪರಿಗಣಿಸಿದರು."[೧೩] ಈ ಕಾರಣದಿಂದಾಗಿ ಇಂದು ಊರಿನಿಂದ ಹೊರಗಿದ್ದು, ಅಸ್ಪೃಶ್ಯರೆಂದು ಗುರುತಿಸಿಕೊಂಡಿರುವ ಸಮುದಾಯವು ಮೂಲತಃ ಬೌದ್ಧ ಧರ್ಮೀಯರಾಗಿದ್ದರು. ತಮ್ಮ ಮೂಲ ಧರ್ಮವನ್ನು ಬಿಡದ ಇವರನ್ನು ವೈದಿಕರು ತಮ್ಮ ಧಾರ್ಮಿಕ ದೌರ್ಜನ್ಯದ ನೆಲೆಯಲ್ಲಿ ಅಸ್ಪೃಶ್ಯರನ್ನಾಗಿ ನಡೆಸಿಕೊಂಡು ಬಂದಿದ್ದಾರೆ. ಆದರೆ ಈ ಸಮುದಾಯವು ತಾವು ಬ್ರಾಹ್ಮಣರಿಗಿಂತ ಶ್ರೇಷ್ಠವಾಗಿ ಬಾಳಿ ಬದುಕಿರುವ ಮತ್ತು ಬ್ರಾಹ್ಮಣರನ್ನು 'ಅಶುಭ'ರೆಂದು ನಡೆಸಿಕೊಂಡಿರುವ ಚಾರಿತ್ರಿಕ ಹಿನ್ನೆಲೆಯ ಮೂಲಕವಾಗಿ ದಲಿತರಲ್ಲಿ ಸ್ವಾಭಿಮಾನದ ಪರಿಕಲ್ಪನೆಯನ್ನು ಮೂಡಿಸುವ ಚಿಂತನೆಯನ್ನು ವೀರ್ಯಶೀಲ ಭಂತೇಜಿಯವರು ವ್ಯಕ್ತಪಡಿಸಿದ್ದಾರೆ. ಈ ಚಿಂತನಧಾರೆಯು ಇಂದಿನ ಜಾಗೃತಾವಸ್ಥೆಯಲ್ಲಿರುವ ದಲಿತ ಸಮುದಾಯಕ್ಕೆ ಸ್ವಾಭಿಮಾನ ಹಾಗೂ ಆತ್ಮಾಭಿಮಾನದ ಸಂಕೇತವಾಗಿ ಕಂಡುಬರುತ್ತದೆ.

ದಲಿತರು ಸಾಮಾಜಿಕವಾಗಿ ಅತ್ಯಂತ ಹಿಂದುಳಿದಿದ್ದಾರೆ. ಇದಕ್ಕೆ ಕಾರಣ, ಧಾರ್ಮಿಕ ನೆಲೆಯಲ್ಲಿ ಇವರನ್ನು ಉನ್ನತ ವರ್ಗ ಮತ್ತು ವರ್ಣಗಳು ಶೋಷಣೆ ಮಾಡಿಕೊಂಡು ಬಂದಿರುವುದು ಒಂದು ಬಗೆಯಾದರೆ, ಇವರಲ್ಲಿನ ತಿಳವಳಿಕೆ ಹಾಗೂ ಜಾಗೃತಿಯ ಕೊರತೆಯಿಂದಾಗಿ ಹಲವು ವ್ಯಸನಗಳಿಗೆ ಅಂಟಿಕೊಂಡಿರುವುದು ಕೂಡ ಇವರು ಸಾಮಾಜಿಕವಾಗಿ ಹಿಂದುಳಿಯಲು ಕಾರಣವಾಗಿದೆ. ಈ ಸಮಸ್ಯೆಗಳಿಗೆ ಪರಿಹಾರವನ್ನು ಬೌದ್ಧ ದರ್ಶನದಲ್ಲಿ ಕಂಡುಕೊಳ್ಳುವ ಚಿಂತನೆಗಳು ಕನ್ನಡ ಚಿಂತನ ಸಾಹಿತ್ಯ ಪ್ರಕಾರದಲ್ಲಿ ಕಂಡುಬರುತ್ತವೆ. "ದಲಿತರು ವ್ಯಸನಗಳಿಂದ ದೂರವಾಗಬೇಕಾದರೆ, ಬದುಕಿನಲ್ಲಿ ಹೊಸತನ ಕಾಣಬೇಕಾದರೆ ಬುದ್ಧನೆಡೆಗೆ ನಾವು ಸಾಗಲೇಬೇಕಾಗುತ್ತದೆ. ಬಾಬಾಸಾಹೇಬರು ಕಂಡುಕೊಂಡ ದಾರಿಯನ್ನು ತುಳಿಯದೆ ಗತ್ಯಂತರವಿಲ್ಲ. ಹಿಂದೂಧರ್ಮದಲ್ಲಿ ಉಳಿದು ಅತಂತ್ರವಾಗುವುದಕ್ಕಿಂತ ಬೌದ್ಧಧರ್ಮ ಸ್ವೀಕರಿಸುವುದರ ಮೂಲಕ ಸ್ವತಂತ್ರರಾಗಿ ಉಳಿಯುವುದು ಗೌರವ"[೧೪] ಎಂಬುದು ದಲಿತ ಬೌದ್ಧ ಚಿಂತಕರಾದ ಹೆಚ್.ಟಿ. ಪೋತೆಯವರ ನಿಲುವಾಗಿದೆ. ಇವರ ಚಿಂತನಧಾರೆಯು ಕೇವಲ ಹಿಂದೂಧರ್ಮವನ್ನು ದೂಷಿಸುವುದಿಲ್ಲ. ದಲಿತರ ಬದುಕಿನ ಆತ್ಮ ವಿಮರ್ಶೆಯ ಭಾಗವಾಗಿಯು ಕಂಡುಬರುತ್ತದೆ. ಆ ಮೂಲಕವಾಗಿ ಬೌದ್ಧ ದರ್ಶನದ ಅಡಿಯಲ್ಲಿ ದಲಿತರಲ್ಲಿ ಜಾಗೃತಿ ಮತ್ತು ಸ್ವಾಭಿಮಾನವನ್ನು ಮೂಡಿಸುವ ನೆಲೆಯಲ್ಲಿ ಅವರ ಚಿಂತನೆಗಳು ಮೂಡಿಬಂದಿವೆ. ಹೀಗೆ ಹಲವು ಧಾರೆಗಳು ಬ್ರಾಹ್ಮಣಧರ್ಮದ ಅಸಮಾನತೆಯಿಂದ ಹೊರಬಂದು, ಸ್ವಾಭಿಮಾನದ ಬದುಕನ್ನು ರೂಪಿಸಿಕೊಳ್ಳಲು ಬೌದ್ಧಧರ್ಮ ಹಾಗೂ ದರ್ಶನವನ್ನು ಪ್ರಬಲವಾದ ಅಸ್ತ್ರವಾಗಿ ಬಳಸಿಕೊಂಡಿವೆ. ಕನ್ನಡ ಚಿಂತನ ಸಾಹಿತ್ಯದಲ್ಲಿರುವ ಬೌದ್ಧ ದರ್ಶನ ಕೇಂದ್ರಿತ ಧಾರೆಗಳಿಗೆ ಭಾರತದ ಹಾಗೂ ಪಾಶ್ಚಿಮಾತ್ಯ ವಿಚಾರವಾದಿಗಳ ಪ್ರೇರಣೆ ಮತ್ತು ಪ್ರಭಾವಗಳಿವೆ. ಈ ಧಾರೆಗಳ ಸಾರವನ್ನು ತಮ್ಮ ಸಮಕಾಲೀನ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಅನುಸಂಧಾನಾತ್ಮಕ ವಿಧಾನವನ್ನು ಅನುಸರಿಸಿರುವುದು ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುತ್ತದೆ.

೨. ಲಿಂಗ ತಾರತಮ್ಯ

ಭಾರತದಲ್ಲಿ ಪ್ರಬಲವಾಗಿ ನೆಲೆಯೂರಿದ ಆರ್ಯರ ಆಕ್ರಮಣಕಾರಿ ನೀತಿಯಿಂದಾಗಿ ಮಹಿಳೆ ಧಾರ್ಮಿಕ ನೆಲೆಯಲ್ಲಿ ತನ್ನ ಎಲ್ಲ ಹಕ್ಕುಗಳನ್ನು ಕಳೆದುಕೊಂಡು ಪುರುಷನ ಅಧೀನಕ್ಕೆ ಒಳಗಾಗಿದ್ದಾಳೆ. ಮಹಿಳೆಯರ ಮೇಲಿನ ಈ ಶೋಷಣೆಯು ಆರಂಭಿಕ ಇತಿಹಾಸದಲ್ಲಿ (ಆರ್ಯರ ಆಗಮನ ಪೂರ್ವ) ಕಂಡುಬರುವುದಿಲ್ಲ. "ಇಲ್ಲಿನ ಮೂಲನಿವಾಸಿಗಳಾದ ಅಸುರ, ರಾಕ್ಷಸ, ದಾನವರ ಸಮಾಜಗಳಲ್ಲೂ ಮಹಿಳೆ 'ಅಸಮಾನತೆಗೆ' ತುತ್ತಾದಂತೆ ಕಾಣುವುದಿಲ್ಲ. ಅಲ್ಲಿ ಅವರು ಅಬಲೆಯರೂ ಅಲ್ಲ. ಬದಲಾಗಿ ತಾಟಕಿ, ಹಿಡಿಂಬೆಗಳಂತಹ ಶೌರ್ಯ- ಸಾಹಸದ ಮಹಿಳೆಯರೇ ಈ ಸಮಾಜದಲ್ಲಿ ಕಾಣಸಿಗುತ್ತಾರೆ. ಇಲ್ಲಿ ಅಸುರ- ರಕ್ಕಸ ಸಮಾಜಗಳ ಮಾತಿರಲಿ, ಕ್ರಿ.ಪೂ.೧೮೦೦ ರಲ್ಲಿ ಆರ್ಯರು ಭಾರತಕ್ಕೆ ಬಂದಂತಹ ಕಾಲದಲ್ಲೂ (ವೇದ ಕಾಲದ) ಮಹಿಳೆಯರಿಗೆ ಸೂಕ್ತ ಸ್ಥಾನಮಾನಗಳು ಲಭ್ಯವಿದ್ದವು. ಪುತ್ರನಿಗೆ ಬೇಡಿಕೆಯಿದ್ದರೂ, ಪುತ್ರಿ ಬೇಡದವಳಾಗಿರಲಿಲ್ಲ. ಪುತ್ರನಂತೆ ಪುತ್ರಿಯೂ ಯಜ್ಞಯಾಗಾದಿಗಳಲ್ಲಿ, ಧಾರ್ಮಿಕ ಸಂಸ್ಕಾರಗಳಲ್ಲಿ ಪಾಲ್ಗೊಳ್ಳುತ್ತಿದ್ದಳಷ್ಟೇ ಅಲ್ಲ, ಶಿಕ್ಷಣ ಪಡೆಯಲು ಅವಳಿಗೆ ಅವಕಾಶವಿತ್ತು. ಅದಕ್ಕೆಂದೇ ವೇದ-ಮಂತ್ರ ರಚನೆಕಾರರ ಸಾಲಿನಲ್ಲಿ ಗಾರ್ಗಿ, ಮೈತ್ರೇಯಿ, ಅಪಾಲಾ, ಲೋಪಾಮುದ್ರಾರಂಥವರ ಹೆಸರು ಕಾಣಸಿಗುತ್ತವೆ. ಈ ಕಾಲದಲ್ಲಿ ಸ್ತ್ರೀ ಸ್ವತಂತ್ರವಾಗಿ ಬದುಕಿದ ಮತ್ತು ಕೆಲವು ಆಯ್ಕೆ ಸ್ವಾತಂತ್ರ್ಯಗಳನ್ನು ಹೊಂದಿದ್ದ ಉಲ್ಲೇಖಗಳು ಸಾರ್ವತ್ರಿಕವಾಗಿ ಅಲ್ಲದಿದ್ದರೂ ವಿರಳವಾಗಿ ದೊರೆಯುತ್ತವೆ."[೧೫] ಆದರೆ ಆರ್ಯರ ಆಕ್ರಮಣ ಸಂಸ್ಕೃತಿಯಲ್ಲಿ ಮಹಿಳೆ ಮತ್ತು ಶೂದ್ರರು ಸಮಾನ ನೆಲೆಯಲ್ಲಿ ಬಂಧನಕ್ಕೆ ಒಳಗಾದರು. ಅದರಲ್ಲೂ ಈ ನಾಡಿನ ಮೂಲನಿವಾಸಿ ಸಮುದಾಯದ ಮಹಿಳೆಯರು ರಾಕ್ಷಸಿಯರಾಗಿ, ಪುರುಷರು ಅಸುರರಾಗಿ ಚಿತ್ರಣಗೊಂಡಿದ್ದಾರೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಹಿಂದೂಧರ್ಮದಲ್ಲಿ ಶೂದ್ರರು ಹಾಗೂ ಮಹಿಳೆಯರನ್ನು ಅಸ್ಪೃಶ್ಯ ನೆಲೆಯಲ್ಲಿ ನಡೆಸಿಕೊಂಡು ಒಂದ ಬಗೆಯನ್ನು ಹಲವು ವೈಚಾರಿಕ ಧಾರೆಗಳು ಗುರುತಿಸಿವೆ. ಆದರೆ ಕ್ರಿಸ್ತಪೂರ್ವದಲ್ಲಿಯೇ ಬುದ್ಧ ಈ ನಿಲುವುಗಳನ್ನು ಮೀರಿ ತನ್ನ ತಾತ್ವಿಕ ದೃಷ್ಟಿಕೋನಗಳ ಮೂಲಕ ಸರ್ವ ಜೀವಿಗಳನ್ನು ಸಮಾನವಾಗಿ ಕಂಡಿದ್ದಾನೆ. ಹೀಗಾಗಿ ಹಿಂದೂ ಮೂಲಭೂತವಾದದಿಂದ ಶೋಷಣೆಗೆ ಒಳಗಾಗಿದ್ದಂತಹ ಮಹಿಳೆಯರಿಗೆ ಮುಕ್ತವಾದ ಅವಕಾಶಗಳನ್ನು ನೀಡಿ, ಸ್ತ್ರೀಯರಿಗೂ ಸ್ವಾತಂತ್ರ್ಯ ಮತ್ತು ಸಮಾನತೆಯ ಅವಕಾಶಗಳನ್ನು ಕಲ್ಪಿಸಿದನು. ಬುದ್ಧನ ತರುವಾಯ ಪ್ರಗತಿಪರ ದಾರ್ಶನಿಕರು ಸ್ತ್ರೀಯರಿಗೆ ಸಮಾನ ಅವಕಾಶಗಳನ್ನು ಕಲ್ಪಿಸುವ ನೆಲೆಯಲ್ಲಿ, ಬುದ್ಧನ ದರ್ಶನವನ್ನು ಕೇಂದ್ರವಾಗಿಟ್ಟುಕೊಂಡು ಸೈದ್ಧಾಂತಿಕ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಹಿಂದೂ ಮೂಲಭೂತವಾದವನ್ನು ಮೀರುವ ಮೂಲಕ, ಸ್ತ್ರೀಯರಿಗೆ ಸಮಾನತೆಯನ್ನು ಕಲ್ಪಿಸಿಕೊಡುವ ನೆಲೆಯಲ್ಲಿ ಬಸವಣ್ಣನಾದಿಯಾಗಿ, ಪರಮಹಂಸ, ವಿವೇಕಾನಂದ, ಜ್ಯೋತಿಬಾ ಫುಲೆ, ಪೆರಿಯಾರ್, ಅಂಬೇಡ್ಕರ್, ಲೋಹಿಯಾ ಇತ್ಯಾದಿ ಹಲವು ದಾರ್ಶನಿಕರು ಬೌದ್ಧ ದರ್ಶನದ ನೆಲೆಯಲ್ಲಿ ತಮ್ಮ ಸ್ತ್ರೀ ಪರವಾದ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಈ ಎಲ್ಲಾ ವಿಚಾರಧಾರೆಗಳಿಂದ ಪ್ರಭಾವಿತರಾದ ಕನ್ನಡದ ಪ್ರಗತಿಪರ ಧಾರೆಗಳು

ಸ್ತ್ರೀ ಸಮಾನತೆಯನ್ನು ಪ್ರತಿಪಾದಿಸುವುದಕ್ಕೆ ಬೌದ್ಧ ದರ್ಶನವನ್ನು ಪ್ರಮುಖ ಮಾಧ್ಯಮವಾಗಿ ಸ್ವೀಕರಿಸಿವೆ. ಈ ಚಿಂತಕ ವರ್ಗದಲ್ಲಿ ಪುರುಷರು ಮಾತ್ರವಲ್ಲದೆ, ಸ್ತ್ರೀ ಪರವಾದ ಕಾಳಜಿಯುಳ್ಳ ಮಹಿಳಾ ಚಿಂತಕಿಯರು ಕೂಡ ತಮ್ಮ ಚಿಂತನಧಾರೆಗಳನ್ನು ವ್ಯಕ್ತಪಡಿಸಿದ್ದಾರೆ. ಈ ಚಿಂತನ ಧಾರೆಗಳು ಭಿನ್ನವಾದ ತಾತ್ವಿಕ ಆಯಾಮವನ್ನು ಒಳಗೊಂಡಿವೆ. ಅವುಗಳು ಈ ಮುಂದಿನಂತಿವೆ.

ಬುದ್ಧನ ಮಹಿಳಾಪರ ಧೋರಣೆಗಳನ್ನು ಕುರಿತು ಅಂಬೇಡ್ಕರ್ ಮಂಡಿಸಿರುವ ವಿಚಾರಧಾರೆಗಳಿಗೆ ಧನಂಜಯ್ ಕೀರ್ ಅವರ ಪ್ರತಿಕ್ರಿಯೆ ಹೀಗಿದೆ; "ಬೌದ್ಧಧರ್ಮ ಸೇರಲು ಮುಂದೆ ಬಂದ ಮಹಿಳೆಯರನ್ನು ಬುದ್ಧ ಕಡೆಗಣಿಸಲಿಲ್ಲ. ಮಹಿಳೆಯರನ್ನು ಆಧ್ಯಾತ್ಮಿಕವಾಗಿ ಬುದ್ಧ ವಂಚಿಸಲಿಲ್ಲ. ಮಹಿಳೆಯರು ಕೂಡ ಬೌದ್ಧಧರ್ಮದಲ್ಲಿ ಪರಿವ್ರಾಜಕರಾಗಬಹುದು ಎಂಬುದನ್ನು ಸ್ಪಷ್ಟಪಡಿಸುವ ಮೂಲಕ ಮಹಿಳೆಯರಿಗೆ ಸರಿಸಮಾನವಾದ ಸ್ಥಾನವನ್ನು ಬುದ್ಧ ನೀಡಿದ್ದ. ಇದು ಭಾರತೀಯ ಮಹಿಳೆಯರ ಪಾಲಿಗೆ ಕ್ರಾಂತಿಕಾರಿ ಬದಲಾವಣೆಯಾಗಿತ್ತು. ಅವರಿಗೆ ಸನ್ಮಾನ ನೀಡಿದ ಸಂಕೇತವಾಗಿತ್ತು. ಅವರ ಸ್ವಾತಂತ್ರವನ್ನು ಎತ್ತಿಹಿಡಿದಂತಾಗಿತ್ತು. ಯಥಾಸ್ಥಿತಿವಾದಿಗಳು ಮಾಡಿದ ಕೇಡನ್ನು ಬುದ್ಧ ನಿವಾರಿಸಿದ್ದ. ಭಾರತೀಯ ಮಹಿಳೆಯರ ಮೇಲೆ ಹಾಕಿದ್ದ ಸಂಕೋಲೆಯನ್ನು ಬುದ್ಧ ಕಡಿದೆಸೆದಿದ್ದ."[೧೬] ಬುದ್ಧನ ಮಾರ್ಗದಲ್ಲಿ ಮುನ್ನಡೆದ ಬಾಬಾಸಾಹೇಬರು ಸಮಕಾಲೀನ ಸಮಾಜದಲ್ಲಿ ಮಹಿಳೆಯರು ಮುಕ್ತವಾಗಿ ಸಮಾಜದ ಮುಖ್ಯವಾಹಿನಿಗೆ ಬರುವಂತೆ ಸಾಂವಿಧಾನಿಕವಾದ ಸವಲತ್ತುಗಳನ್ನು ಕಲ್ಪಿಸಿದರು. ಮಹಿಳಾ ಪರವಾದ 'ಹಿಂದೂ ಕೋಡ್‌ಬಿಲ್' ಮಸೂದೆಯು ಬೌದ್ಧ ದಾರ್ಶನಿಕತೆಯ ಪ್ರತೀಕವಾಗಿದೆ ಎಂಬ ನೆಲೆಯಲ್ಲಿ ತಮ್ಮ ವಿಚಾರಧಾರೆಗಳನ್ನು ವ್ಯಕ್ತಪಡಿಸುತ್ತಾರೆ. ಪ್ರಗತಿಪರ ಚಿಂತಕರಾದ ಧನಂಜಯ್ ಕೀರ್ ಅವರು ಬಾಬಾಸಾಹೇಬರ ಮಹಿಳಾ ಪರವಾದ ಬೌದ್ಧ ಚಿಂತನೆಗಳನ್ನು ಸಮರ್ಥಿಸಿಕೊಳ್ಳುವುದಕ್ಕೆ ಪ್ರಮುಖ ಕಾರಣವೆಂದರೆ, ಸಮಕಾಲೀನ ಸಂದರ್ಭದಲ್ಲಿ ಹಿಂದುತ್ವವಾದಿಗಳು ತಮ್ಮ ಧರ್ಮದ ಮೂಲಭೂತವಾದಿ ನಿಲುವುಗಳನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿ ಬುದ್ಧನು ಆರಂಭದಲ್ಲಿ ಮಹಿಳೆಯರನ್ನು ತನ್ನ ಸಂಘಕ್ಕೆ ಸೇರಿಸಿಕೊಳ್ಳಲು ಸಿದ್ಧನಿರಲಿಲ್ಲ. ಹೀಗಾಗಿ ಬುದ್ಧನು ಕೂಡ ಮಹಿಳಾ ವಿರೋಧಿಯಾಗಿದ್ದ ಎಂಬುದಾಗಿ ಪ್ರಚಾರ ಮಾಡುತ್ತಿದ್ದಾರೆ. ಆ ಮೂಲಕವಾಗಿ ಸನಾತನವಾದವನ್ನು ಸಮರ್ಥಿಸಿಕೊಳ್ಳಲು ಮುಂದಾಗಿದ್ದರು. ಇಂತಹ ಸಂದರ್ಭದಲ್ಲಿ ಅಂಬೇಡ್ಕರ್ ಅವರ ದಾರ್ಶನಿಕ ನೆಲೆಗಟ್ಟಿನಲ್ಲಿ ಬೌದ್ಧಧರ್ಮದಲ್ಲಿ ಅಂತರ್ಗತವಾಗಿದ್ದ ಮಹಿಳಾಪರ ಧೋರಣೆಗಳನ್ನು ಎತ್ತಿಹಿಡಿಯಲು ಇವರು ಮುಂದಾಗಿದ್ದಾರೆ. ಹಾಗೆಯೇ ಕನ್ನಡ ಚಿಂತನ ಸಾಹಿತ್ಯದಲ್ಲಿ ಅಂಬೇಡ್ಕರರ ತಾತ್ವಿಕ ಚಿಂತನೆಗಳಿಂದ ಪ್ರಭಾವಿತರಾದ ಹಲವಾರು ಪ್ರಗತಿಪರ ಚಿಂತಕರು ಸ್ತ್ರೀ ಸಮಾನತೆಯನ್ನು ಪ್ರತಿಪಾದಿಸಲು ಬೌದ್ಧಧರ್ಮ ಹಾಗೂ ದರ್ಶನದೊಂದಿಗೆ ಅನುಸಂಧಾನಕ್ಕೆ ಮುಂದಾಗಿದ್ದಾರೆ.

ಸ್ವಾತಂತ್ರ್ಯ ಮತ್ತು ಸಮಾನತೆ:

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನವನ್ನು ಕೇಂದ್ರವಾಗಿಟ್ಟುಕೊಂಡು ಹಲವಾರು ಚಿಂತನಧಾರೆಗಳು ಲಿಂಗ ತಾರತಮ್ಯದ ನೆಲೆಗಳನ್ನು ಪ್ರಕಟಿಸಿವೆ. ಈ ಚಿಂತನಧಾರೆಗಳಲ್ಲಿ ಕೆಲವು

ಧಾರೆಗಳು ಬೌದ್ಧ ದರ್ಶನದ ಅಡಿಯಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಪ್ರತಿಪಾದಿಸುವ ನೆಲೆಯಲ್ಲಿವೆ. ಈ ಧಾರೆಗಳು ಬುದ್ಧನ ಮೂಲ ದರ್ಶನವನ್ನು ನಂತರದ ಹಲವಾರು ದಾರ್ಶನಿಕರ ವಿಚಾರಗಳ ಅಡಿಯಲ್ಲಿ ಅನುಸಂಧಾನಗೊಳಿಸಿ, ಸಮಕಾಲೀನ ಮತ್ತು ಸ್ಥಳೀಯ ಸಮಸ್ಯೆಗಳಿಗೆ ಸ್ಪಂದಿಸುವ ನೆಲೆಯಲ್ಲಿ ಮೂಡಿಬಂದಿವೆ.

ಕನ್ನಡದ ದಲಿತ ಬೌದ್ಧ ಚಿಂತಕರಾದ ಅರವಿಂದ ಮಾಲಗತ್ತಿಯವರು ಆರ್ಯರ ಆಕ್ರಮಣ ನೀತಿಯಿಂದಾಗಿ ಮಹಿಳೆಯರು ಶೋಷಣೆಗೆ ಒಳಗಾದ ಬಗೆಯನ್ನು ಚರ್ಚೆಗೆ ಎತ್ತಿಕೊಳ್ಳುತ್ತಾರೆ. "ಬುದ್ಧನ ಕಾಲದಲ್ಲಿ ಹಾಗೂ ಸಾಮ್ರಾಟ್ ಅಶೋಕನ ಕಾಲದಲ್ಲಿ ಮಹಿಳೆಯರು ಸಮಾನ ಸ್ಥಾನಮಾನಗಳನ್ನು ಹೊಂದಿದ್ದರು. ಸಮಾನತೆಯ ಜೊತೆಗೆ ಗೌರವದ ಸ್ಥಾನಮಾನಗಳನ್ನು ಮಹಿಳೆಯರು ಹೊಂದಿದ್ದರು. ಆದರೆ ಕ್ರಿ.ಪೂ.೧೮೫ ರಲ್ಲಿ ಮೌರ್ಯರ ಸಾಮ್ರಾಜ್ಯ ಪತನವಾಗಿ, ಸುಂಗ ಬ್ರಾಹ್ಮಣರು ಅಧಿಕಾರ ಪಡೆದ ಮೇಲೆ ಮಹಿಳೆಯ ಮೇಲೆ ಅನೇಕ ಉಗ್ರ ಸ್ವರೂಪದ ಕಾನೂನುಗಳೇ ರಚಿತವಾದವು. 'ಮನುಸ್ಮೃತಿ'ಯ ಮೂಲಕ ಎಲ್ಲ ಮಹಿಳೆಯರ ಸ್ವಾತಂತ್ರ್ಯವನ್ನು ಹರಣ ಮಾಡಿ ಅವರನ್ನು ನಿರ್ಬಂಧಿಸಲಾಯಿತು. ಅವರನ್ನು ಪುರುಷಾಧೀನರನ್ನಾಗಿ ಮಾಡಲಾಯಿತು. ಮಹಿಳೆಯರ ಈ ಶೋಷಣೆ ಭಾರತದಲ್ಲಿ ಸಾವಿರಾರು ವರ್ಷಗಳಿಂದ ನಡೆದುಕೊಂಡೇ ಬಂದಿದೆ. ಆದರೆ ಈ ಸ್ತ್ರೀವಾದಿ ಚಳುವಳಿ ದಲಿತ ಮಹಿಳೆಯರನ್ನು ಹಾಗೂ ಅವರ ಸಮಸ್ಯೆಗಳನ್ನು ಒಳಗೊಂಡಿದ್ದು ತುಂಬಾ ಕಡಿಮೆ. ಹಾಗಾಗಿ ದಲಿತ ಸ್ತ್ರೀವಾದ ಎಂಬ ಹೊಸ ವಿಭಾಗದ ಉಗಮಕ್ಕೆ ಕಾರಣವಾಯಿತು. ಆದರೂ ದಲಿತರ ಸಾಮಾಜಿಕ ಸಮಸ್ಯೆಗಳೇ, ದಲಿತ ಮಹಿಳೆಯರ ಸಮಸ್ಯೆಗಳು ಎನ್ನುವುದರಲ್ಲಿ ಎರಡು ಮಾತಿಲ್ಲ. ಹೀಗಾಗಿ ದಲಿತರ ಹೋರಾಟದಲ್ಲಿಯೇ ದಲಿತ ಮಹಿಳೆಯರ ಸಮಸ್ಯೆಗಳು ಅಂತರ್ಗತವಾಗಿರುತ್ತವೆ"[೧೭] ಎಂದು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಬುದ್ಧನ ದಾರ್ಶನಿಕತೆಯ ಮೂಲಕವೇ ದಲಿತರು ಮತ್ತು ದಲಿತ ಮಹಿಳೆಯರು ವಿಮೋಚನೆಯನ್ನು ಕಂಡುಕೊಳ್ಳಬೇಕಾದ ಅನಿವಾರ್ಯತೆಯನ್ನು ಮಾಲಗತ್ತಿಯವರು ವ್ಯಕ್ತಪಡಿಸಿದ್ದಾರೆ. ಇಲ್ಲಿ ಸನಾತನವಾದವು ಭಾರತೀಯ ಮಹಿಳೆಯರನ್ನು ನಿರ್ಲಕ್ಷ್ಯಕ್ಕೆ ಗುರಿಪಡಿಸಿಕೊಂಡು ಬಂದಿರುವಂತೆ, ಸಮಕಾಲೀನ ಸಂದರ್ಭದ ಸ್ತ್ರೀವಾದಿ ಹೋರಾಟಗಳು ಕೂಡ ಇಂದಿನ ದಲಿತ ಮಹಿಳೆಯರ ಸಮಸ್ಯೆಗಳನ್ನು ಮುಖ್ಯವಾಗಿ ಪರಿಗಣಿಸದಿರುವ ಬಗೆಗೆ ಚಿಂತಕರಲ್ಲಿ ಅಸಮಾಧಾನವಿದೆ. ಸಮಕಾಲೀನ ಸ್ತ್ರೀವಾದಿ ಧೋರಣೆಯಲ್ಲಿಯೂ ಸನಾತನವಾದಿ ನೆಲೆಯ ಅಂಶಗಳು ನೆಲೆಯೂರಿರುವ ಸೂಕ್ಷ್ಮತೆಗಳನ್ನು ಎತ್ತಿಹಿಡಿದಿದ್ದಾರೆ. ಆದ್ದರಿಂದ ದಲಿತರು ಹಾಗೂ ದಲಿತ ಮಹಿಳೆಯರ ವಿಮೋಚನೆಗೆ ಬಾಬಾಸಾಹೇಬರು ತೋರಿಸಿಕೊಟ್ಟ ಬೌದ್ಧ ದರ್ಶನವೇ ಅಂತಿಮ ಮಾರ್ಗ ಎಂಬುದು ಇವರ ಚಿಂತನೆಯ ಸಾರವಾಗಿದೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ಚಿಂತನಧಾರೆಗಳನ್ನು ಸಾಮಾಜಿಕ ಅಸಮಾನತೆಗೆ ಪರ್ಯಾಯ ನೆಲೆಯಲ್ಲಿ ಮಂಡಿಸುತ್ತ ಬಂದಿರುವ ಓ.ರಾಜಣ್ಣನವರು, ಬೌದ್ಧಧರ್ಮದಲ್ಲಿ ಅಂತರ್ಗತವಾಗಿರುವ ಮಹಿಳೆಯರ ಸ್ವಾತಂತ್ರ ಮತ್ತು ಸಮಾನತೆಯ ನೆಲೆಗಳನ್ನು ಎತ್ತಿಹಿಡಿದಿದ್ದಾರೆ. ಜಾಗತಿಕ ಮಟ್ಟದಲ್ಲಿ ಬುದ್ಧನ ಚಿಂತನೆಗಳು ಮಹಿಳೆಯರ ಸಮಸ್ಯೆಗೆ ಸ್ಪಂದಿಸುವ ಮೂಲಕ

ಸಮಾನತೆಯನ್ನು ಕಲ್ಪಿಸಿದ ಬಗೆಯಲ್ಲಿ ತಮ್ಮ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. "೨೫೦೦ ವರ್ಷಗಳ ಹಿಂದೆ ಸಿದ್ಧಾರ್ಥ ಗೌತಮಬುದ್ಧನ ಉಗಮದ ಕಾಲದಲ್ಲಿ ಭಾರತೀಯ ಸಮಾಜದಲ್ಲಿ ಮಹಿಳೆಯರ ಸ್ಥಿತಿಗತಿಗಳು ಹೀನ ಹಾಗೂ ಗುಲಾಮರಂತಹ ಪರಿಸ್ಥಿತಿಯಿತ್ತು. ಅವಳ ಸ್ಥಾನಮಾನ ಆಗಿನ ಕಾಲಕ್ಕೆ ಚೀನಾದಿಂದ ಗ್ರೀಸ್‌ವರೆಗೆ ಬೆಳೆದಿದ್ದ ಉಳಿದ ನಾಗರೀಕ ಪ್ರಪಂಚದಲ್ಲೂ ಬಹಿಷ್ಕೃತಗೊಂಡವಳಾಗಿದ್ದಳು. ಬೌದ್ಧಧರ್ಮದ ಸಂಸ್ಥಾಪಕ ಬುದ್ಧನು ತನ್ನ ತತ್ವ, ಸಿದ್ಧಾಂತಗಳಿಂದ ಈ ಧರ್ಮವು ವಿಶ್ವದ ಮೂಲೆ ಮೂಲೆಯನ್ನು ತಲುಪಲು, ಮಾನವ ಚಿಂತನೆಯ ಇತಿಹಾಸದಲ್ಲಿ ಅತ್ಯಂತ ಧನ್ಯವಾದ ಹಾಗೂ ಐತಿಹಾಸಿಕವಾದ ತತ್ವಜ್ಞಾನವನ್ನು ಹರಡಲು ಕಾರಣಕರ್ತನೆಂಬುದು ವಿಶ್ವದಾದ್ಯಂತ ಅಂಗೀಕಾರಗೊಂಡಿದೆ."[೧೮] ಹೀಗಾಗಿ ಬುದ್ಧನ ಚಿಂತನೆಗಳು ಕೇವಲ ಭಾರತದ ಮಹಿಳೆಯನ್ನು ಮಾತ್ರ ಸ್ವತಂತ್ರಗೊಳಿಸುವ ನೆಲೆಯಲ್ಲಿ ಕಾರ್ಯಪ್ರವೃತ್ತವಾಗಿಲ್ಲ. ಜಾಗತಿಕ ಮಟ್ಟದಲ್ಲೂ ಮಹಿಳೆಯ ವಿಮೋಚನೆಗಾಗಿ ಆತನ ತತ್ವ ಚಿಂತನೆಗಳು ಸ್ಪಂದಿಸಿರುವುದಾಗಿ ಗುರುತಿಸಿದ್ದಾರೆ. ಬೌದ್ಧಧರ್ಮದ ಮೂಲಕವೇ ದಲಿತರು ಮತ್ತು ಮಹಿಳೆಯರು ಸ್ವಾಭಿಮಾನದ ನೆಲೆಯಲ್ಲಿ ಬದುಕನ್ನು ಕಟ್ಟಿಕೊಳ್ಳಲು ಮಾತ್ರ ಸಾಧ್ಯ ಎಂಬುದು ಇವರ ನಿಲುವಾಗಿದೆ.

ಕನ್ನಡದ ಮಹಿಳಾ ಪ್ರಗತಿಪರ ಚಿಂತಕಿಯಾದ ಮಂಗಲಾ ಕಾಳೆ ಅವರು, ಬೌದ್ಧ ದರ್ಶನನದಲ್ಲಿ ಮಹಿಳೆಯ ಸ್ವಾತಂತ್ರ್ಯ ಹಾಗೂ ಸಮಾನತೆಗೆ ಮುಕ್ತವಾದ ಅವಕಾಶ ಲಭಿಸಿತ್ತು ಎಂಬುದಾಗಿ ತಮ್ಮ ವಾದವನ್ನು ಮಂಡಿಸಿದ್ದಾರೆ. ಅವರ ಪ್ರಕಾರ "ಬುದ್ಧನ ಕಾಲದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯ ದೊರೆಯುತ್ತ ಹೋದಂತೆ, ಅವರಿಗೆ ತಮ್ಮ ಬಾಳ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವೂ ದೊರೆಯಿತು. ಕನ್ಯೆಯು ತನ್ನ ಪತಿಯನ್ನು ತಾನೇ ಆಯ್ಕೆ ಮಾಡಿಕೊಂಡರೆ, ಅದಕ್ಕೆ 'ಗೃಹನ್ನಮ್ಮಿ' ಎನ್ನುತ್ತಿದ್ದರು. ಕಾನ್ಹಾ ಎಂಬ ಕನ್ಯೆಯು ತನ್ನ ಸ್ವಯಂವರವನ್ನು ಏರ್ಪಡಿಸಲು ತನ್ನ ತಂದೆಗೆ ಹೇಳೆಂದು ತಾಯಿಗೆ ಹೇಳುವಳು. ಸ್ವಯಂವರದ ಪದ್ಧತಿಯು ವೈದಿಕ ಕಾಲದಲ್ಲಿರಲಿಲ್ಲ. ಅನೇಕ ವಿದ್ವಾಂಸರ ಪ್ರಕಾರ ಸ್ತ್ರೀ ಸ್ವಾತಂತ್ರ್ಯವು ಬುದ್ಧ ಕಾಲದಿಂದಲೇ ರೂಢಿಯಾಯಿತು" ಎಂದು ತಿಳಿಸಿದ್ದಾರೆ. ಇಲ್ಲಿ ಸನಾತನ ಧರ್ಮದ ಧಾರ್ಮಿಕ ನಿರ್ಬಂಧಗಳನ್ನು ನಿರಾಕರಣೆಗೊಳಪಡಿಸುವ ನೆಲೆಯಲ್ಲಿ ಬೌದ್ಧ ದರ್ಶನದಲ್ಲಿನ ಮಹಿಳಾಪರವಾದ ತಾತ್ವಿಕ ಆಯಾಮಗಳನ್ನು ಎತ್ತಿಹಿಡಿಯುತ್ತಾರೆ. ಹಾಗೆಯೇ ಬುದ್ಧನ ಕಾಲದಲ್ಲಿ ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ತನ್ನ ಸಹಭಾಗಿತ್ವ ಹೊಂದಿದ ಬಗೆಯನ್ನು ಇಲ್ಲಿ ಪ್ರಸ್ತಾಪಿಸುತ್ತಾರೆ. "ಬುದ್ಧನ ಕಾಲದಲ್ಲಿ ಸಮಾಜದಲ್ಲಿ ವೈಚಾರಿಕ ಕ್ರಾಂತಿ ಉಂಟಾಯಿತು. ಸ್ತ್ರೀಗೆ ಸಾಮಾಜಿಕವಾಗಿ, ಧಾರ್ಮಿಕವಾಗಿ, ಮಾನ-ಸನ್ಮಾನ ದೊರೆತು, ಕುಟುಂಬದಲ್ಲಿಯೂ ಅವಳ ಮರ್ಯಾದೆ ಹೆಚ್ಚಿತು. ಇದರಿಂದಾಗಿ ಅವರಿಗೆ ಸಾಮಾಜಿಕ ಪ್ರತಿಷ್ಠೆ ದೊರೆಯಿತು. ಬುದ್ಧ ಕಾಲದಲ್ಲಿ ಸ್ತ್ರೀ ಚಳುವಳಿಗಳು ಸಾವಕಾಶವಾಗಿ ವಿಕಾಸವಾಗುತ್ತ ಬಂದವು. ಈ ಚಳುವಳಿಯ ಮುಖ್ಯ ಆಧಾರ ಸ್ತಂಭ ಭಗವಾನ್ ಬುದ್ಧರೇ ಆಗಿದ್ದರೂ ಕೂಡ ಅದರ ನೇತೃತ್ವವನ್ನು ಮಹಿಳೆಯರೇ ವಹಿಸಿದ್ದರು. ಸ್ತ್ರೀಯರು ತಮ್ಮ ಸ್ವಬುದ್ಧಿಮತ್ತೆಯಿಂದ, ಆತ್ಮವಿಶ್ವಾಸದಿಂದ ಸ್ವತಃ ತಾವೇ ಸ್ವಾತಂತ್ರ್ಯವನ್ನು ಮತ್ತು ಸಾಮಾಜಿಕ ಪ್ರತಿಷ್ಠೆಯನ್ನು ಗಳಿಸಿಕೊಂಡರು. ಹೀಗೆ ಸಮಾಜದಲ್ಲಿ ಮರ್‍ಯಾದಸ್ಥ ಸ್ಥಾನ

ಗಳಿಸುವುದರ ಮೂಲಕ ಮಾನಸಿಕ, ಶಾರೀರಕ ಗುಲಾಮಗಿರಿಯಿಂದ ಸ್ತ್ರೀ ಮುಕ್ತಳಾದಳು. ಸ್ತ್ರೀಯರ ಈ ಚಳುವಳಿಯಲ್ಲಿ ಬೌದ್ಧ ಭಿಕ್ಷುಣಿಯರು ಮಹತ್ತರ ಪಾತ್ರ ವಹಿಸಿದರು."[೧೯] ಆದ ಕಾರಣ ಮಹಿಳೆಗಿರುವ ಶಕ್ತಿ, ಸಾಮರ್ಥ್ಯ ಹಾಗೂ ಕೌಶಲ್ಯವನ್ನು ಪ್ರದರ್ಶಿಸುವುದಕ್ಕೆ ಬುದ್ಧನು ಮುಕ್ತವಾದ ಅವಕಾಶ ಕಲ್ಪಿಸಿದ್ದನು. ಆದ್ದರಿಂದಾಗಿ ಇಲ್ಲಿ ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಗಣನೀಯವಾದ ಸಾಧನೆಗೈದಿದ್ದಾರೆ ಎಂಬ ಮಹಿಳಾ ಸ್ವಾತಂತ್ರ್ಯದ ನೆಲೆಗಳನ್ನು ಬೌದ್ಧಧರ್ಮದ ಅಡಿಯಲ್ಲಿ ಗುರುತಿಸಿದ್ದಾರೆ. ಇವರ ಈ ಚಿಂತನೆಯಲ್ಲಿ ಸಮಕಾಲೀನ ಸಂದರ್ಭದಲ್ಲಿ ಶಿಕ್ಷಣದಿಂದ ಜಾಗ್ರತವಾಗಿ, ಪುರುಷಾಧೀನ ಸಮಾಜದಿಂದ ಬಿಡುಗಡೆ ಪಡೆಯುವ ಹಂಬಲವಿದೆ.

ಕನ್ನಡದ ಚಿಂತಕಿಯಾಗಿರುವ ಬಿ.ಟಿ ಜಾಹ್ನವಿಯವರು ಬೌದ್ಧ ದರ್ಶನದಲ್ಲಿ ಮಹಿಳೆಗಿರುವ ಸ್ಥಾನಮಾನಗಳನ್ನು ತಮ್ಮ ಚಿಂತನೆಗಳಲ್ಲಿ ಗುರುತಿಸಿದ್ದಾರೆ. ಇವರು ಆರಂಭಿಕ ಹಂತದಲ್ಲಿ ಬುದ್ಧ ಮಹಿಳೆಯರನ್ನು ತನ್ನ ಸಂಘಕ್ಕೆ ಸೇರಿಸಿಕೊಳ್ಳುವ ವಿಚಾರದಲ್ಲಿ ಸಮ್ಮತಿ ಇರಲಿಲ್ಲ. ಹೀಗಾಗಿ ಪುರುಷರ ಬಗೆಗೆ ಇದ್ದ ಗೌರವ ಮಹಿಳೆಯರ ಬಗ್ಗೆ ಇರಲಿಲ್ಲ ಎಂಬ ವಾದವನ್ನು ಮಂಡಿಸಿದರೂ ಇದಕ್ಕೆ ಸಂಪೂರ್ಣವಾದ ಬೆಂಬಲ ನೀಡದೆ, ಬುದ್ಧನ ಧರ್ಮದಲ್ಲಿ ಸ್ತ್ರೀಯರಿಗೆ ಇದ್ದಂತಹ ಸ್ವಾತಂತ್ರ್ಯವನ್ನು ಗುರುತಿಸಿದ್ದಾರೆ. ಬುದ್ಧನ ಧರ್ಮದಲ್ಲಿ ಮಹಿಳೆಯರು ಮುಕ್ತವಾದ ಸ್ವಾತಂತ್ರ್ಯವನ್ನು ಪಡೆದುಕೊಂಡ ಹಲವು ನಿದರ್ಶನಗಳ ಮೂಲಕವಾಗಿ, ಬೌದ್ಧಧರ್ಮದಲ್ಲಿನ ಪ್ರಗತಿಪರವಾದ ತತ್ವ ಚಿಂತನೆಗಳು ಹಿಂದೂಧರ್ಮಕ್ಕಿಂತ ಭಿನ್ನ ಎಂಬುದಾಗಿ ತಮ್ಮ ವಿಚಾರವನ್ನು ಮಂಡಿಸಿದ್ದಾರೆ. ಬುದ್ಧನಿಗೆ ಆರಂಭಿಕ ಹಂತದಲ್ಲಿ ಮಹಿಳೆಯರನ್ನು ತನ್ನ ಸಂಘಕ್ಕೆ ಸೇರಿಸಿಕೊಳ್ಳಲು ಸಮ್ಮತವಿರಲಿಲ್ಲ. ಆದ್ದರಿಂದ ಈತನು ಕೂಡ ಮಹಿಳೆಯರ ವಿರೋಧಿಯಾಗಿದ್ದ ಎಂಬ ಸನಾತನವಾದಿಗಳ ನಿಲುವುಗಳನ್ನು ಖಂಡಿಸುವ ಕೆ.ಎಸ್.ಭಗವಾನ್ ಅವರ ಚಿಂತನೆ ಹೀಗಿದೆ; "ಸಂಘಕ್ಕೆ ಸ್ತ್ರೀಯರ ಸೇರುವಿಕೆಗೆ ಬುದ್ಧ ಮೊದಲು ಒಪ್ಪದಿದ್ದುದಕ್ಕೆ ಬೇರೆ ಕಾರಣ ಇರಬೇಕೆಂಬುದು ನನ್ನ ಅನಿಸಿಕೆ. ಬುದ್ಧನ ಇಂದ್ರಿಯ ನಿಗ್ರಹ ಮತ್ತು ಸಂಯಮ ಎಲ್ಲರಿಗೂ ಸಾಧ್ಯವಾಗಲಾರದು. ಭಿಕ್ಕುಗಳು ಮತ್ತು ಭಿಕ್ಕುಣಿಯರು ಇರುವ ಕಡೆ ಆಕರ್ಷಣೆ ಉಂಟಾದೀತು. ಆದ್ದರಿಂದ ತನ್ನ ಧಮ್ಮ ಮತ್ತು ಸಂಘಕ್ಕೆ ಅಪಖ್ಯಾತಿ ಬರಬಹುದು ಎಂಬ ಶಂಕೆಯಿಂದ ಪ್ರಾರಂಭದಲ್ಲಿ ಒಪ್ಪಿಗೆ ಕೊಡಲು ಬುದ್ಧ ತಡಮಾಡಿರಬಹುದು"[೨೦] ಎಂಬುದಾಗಿ ಬುದ್ಧನ ಈ ನಿಲುವುಗಳನ್ನು ಸಮರ್ಥಿಸಿಕೊಳ್ಳುತ್ತಾರೆ. ಇವರ ಈ ಸಮರ್ಥನೆಯು ಹಿಂದುತ್ವವಾದಿಗಳ ಟೀಕೆಗೆ ಬೌದ್ಧಧರ್ಮದ ನೆಲೆಯಲ್ಲಿ ಉತ್ತರವನ್ನು ನೀಡುವುದಾಗಿದೆ. ಆದರೆ ಬುದ್ಧನ ಈ ನಿಲುವುಗಳನ್ನು ಕೆಲವು ವೈಚಾರಿಕ ಚಿಂತಕರು ತೀವ್ರವಾಗಿ ವಿರೋಧಿಸಿರುವುದು ಕಂಡುಬರುತ್ತದೆ.

ಭಾರತದ ಆಧ್ಯಾತ್ಮಿಕ ಚಿಂತಕರು ಹಾಗೂ ಬುದ್ಧನ ಅನುಯಾಯಿಗಳಾದ ಓಶೋ ಅವರು ಮಹಿಳೆಯ ಬಗೆಗೆ ಬುದ್ಧನು ತಾಳಿರುವ ಈ ಧೋರಣೆಗಳನ್ನು ವಿರೋಧಕ್ಕೆ ಗುರಿಪಡಿಸಿದ್ದಾರೆ. "ಹೆಂಗಸರೆಂದರೆ ಅವನೇಕೆ ಹೆದರಬೇಕು? ಅವನಿಗೆ ತನ್ನ ಭಿಕ್ಕುಗಳ ಬಗ್ಗೆಯೇ ನಂಬಿಕೆ ಇರಲಿಲ್ಲ. ಇದನ್ನು ಶಿಷ್ಯದ್ರೋಹ ಎನ್ನಬೇಕಲ್ಲವೇ? ಗುರುವಾದವನು ತನ್ನ ಶಿಷ್ಯರ ಬಗ್ಗೆಯೇ ನಂಬಿಕೆ ಕಳೆದುಕೊಂಡನೆಂದರೆ ಏನರ್ಥ? ಹೆಣ್ಣುಗಳು ಬರಲಾರಂಭಿಸಿದವೆಂದರೆ ತನ್ನ ಶಿಷ್ಯರು ಪಾಲಿಸುತ್ತಿದ್ದ

ಬ್ರಹ್ಮಚರ್ಯ ಧೂಳಿಪಟವಾಗುವುದಾದರೆ ಅಂತಹ ಬ್ರಹ್ಮಚರ್ಯ ಮೂರುಕಾಸಿನ ಬೆಲೆಯದ್ದಾಗಿರುತ್ತದೆ ಅಥವಾ ಅವನ ಶಿಷ್ಯರುಗಳು ಸಲಿಂಗ ಕಾಮಿಗಳಾಗಿದ್ದಿರಬೇಕು. ಇಂದು ಜಗತ್ತಿನಾದ್ಯಂತ ಎಲ್ಲ ಮಠ, ಆಶ್ರಮಗಳಲ್ಲಿ ಕಂಡುಬರುವ ಎಲ್ಲ ಬಗೆಯ ಲೈಂಗಿಕ ವಿಕೃತಿಗಳು ಬುದ್ಧನ ಸಂಘದಲ್ಲೂ ಇದ್ದಿರಬೇಕು. ಬುದ್ಧ ತನ್ನ ಶಿಷ್ಯರಿಗಾಗಿ ಹೆಣ್ಣಿಗೆ ನಿಷೇಧ ಹೇರುವುದಾದರೆ ಅದಕ್ಕೆ ಅವೆರಡಲ್ಲದೇ ಮತ್ಯಾವ ಕಾರಣವೂ ಇದ್ದಿರಲಾರದು"[೨೧] ಎಂಬುದಾಗಿ ಬುದ್ಧನ ಧೋರಣೆಗಳನ್ನು ಕಟುವಾದ ವಿಮರ್ಶೆಗೆ ಒಳಪಡಿಸುತ್ತಾರೆ. ಬುದ್ಧನ ವೈಚಾರಿಕ ಧಾರೆಗಳಿಂದಲೇ ಪ್ರಭಾವಿತರಾದ ಓಶೋ, ಆತನಲ್ಲಾಗಲೀ, ಆತನ ಧರ್ಮದಲ್ಲಾಗಲೀ ಕಂಡುಬರುವ ಸಂಕುಚಿತ ಧೋರಣೆಗಳನ್ನು ನಿಷ್ಠುರವಾದಿ ನೆಲೆಯಲ್ಲಿ ವಿರೋಧಿಸುತ್ತಾರೆ. ಮಹಿಳೆಯರ ಬಗೆಗೆ ಬುದ್ಧ ತಳೆದಿರಬಹುದಾದ ಈ ಧೋರಣೆಗಳಿಗೆ ಭಿನ್ನವಾದ ಪರ ಮತ್ತು ವಿರೋಧಿ ಚಿಂತನಧಾರೆಗಳು ಸಾಹಿತ್ಯ ವಲಯದಲ್ಲಿ ಪ್ರಕಟವಾಗಿವೆ. ಆದರೆ ಮಹಿಳಾಪರ ಚಿಂತಕರಾದ ಬಿ.ಟಿ.ಜಾಹ್ನವಿಯವರು ಆರಂಭಿಕ ಹಂತದಲ್ಲಿ ಬುದ್ಧನು ಮಹಿಳೆಯರ ವಿಚಾರದಲ್ಲಿ ತಾಳಿದ ನಿಲುವುಗಳಿಗೆ ಮಹತ್ವ ನೀಡದೆ, ಆತನ ಧರ್ಮದಲ್ಲಿ ಮಹಿಳೆಯು ಸಮಾನವಾದ ಅವಕಾಶಗಳನ್ನು ಪಡೆದುಕೊಂಡ ಬಗೆಯನ್ನು ಮುಖ್ಯವಾಗಿ ಪರಿಗಣಿಸಿದ್ದಾರೆ. "ಬುದ್ಧನು ಮದುವೆಯನ್ನು ಒಂದು ಧಾರ್ಮಿಕ ಬಂಧನವೆಂದು ಪರಿಗಣಿಸದ ಕಾರಣ ಅದು ಮಹಿಳೆಯರಲ್ಲಿ ಒಳ್ಳೆಯ ಪರಿಣಾಮವನ್ನೇ ಉಂಟುಮಾಡಿತು. ಚಿಂತಾಜನಕವಾಗಿದ್ದ ವಿಧವೆಯ ಸ್ಥಿತಿ ಸುಧಾರಿಸಿ, ಆಕೆಗೆ ಮರುಮದುವೆಯ ಅವಕಾಶ ಕಲ್ಪಿಸಿತು. ವಿಧವೆಯಾದ ಮಹಿಳೆ ತನ್ನ ಸತ್ತ ಗಂಡನ ನೆನಪಿನಲ್ಲೇ ಕೊನೇ ತನಕ ಕೊರಗಿ, ಏಕಾಂಗಿಯಾಗಿ ಸಾಯುವಂತಹ ಶೋಷಣೆಯಿಂದ ಆಕೆಗೆ ಬಿಡುಗಡೆ ಸಿಕ್ಕಿತು. ಆಕೆ ಬೇಕಾದಲ್ಲಿ ಮರುಮದುವೆ ಆಗಬಹುದು, ಇಲ್ಲವೆ ಬೌದ್ಧ ಬಿಕ್ಷುಣಿಯಾಗಿ ಸಂಘ ಸೇರುವ ಸ್ವತಂತ್ರವಿತ್ತು. ಹೀಗೆ ಒರ್ವ ವಿಧವೆ ತನ್ನ ಜೀವಿತ ಕಾಲವನ್ನು ನೆಮ್ಮದಿಯಿಂದ ಕಳೆಯುವ ಒಂದು ಅವಕಾಶ ಒದಗಿ ಅವಳ ಏಕಾಂಗಿತನ, ಅನಿಷ್ಟಗಳೆಲ್ಲಾ ಪರಿಹಾರಗೊಂಡವು. ವಿವಾಹವು ಬಂಧನವಾಗಿರದ ಕಾರಣ ಸತಿಸಹಗಮನದಂತಹ ಪದ್ಧತಿಗಳು ಬೌದ್ಧಧರ್ಮದಲ್ಲಿ ಅಸ್ತಿತ್ವವನ್ನೇ ಪಡೆದಿರಲಿಲ್ಲ. ಹಾಗೆಯೇ ಬಾಲ್ಯ ವಿವಾಹವೂ ಸಹ ನಡೆಯಲು ಸಾಧ್ಯವಿರಲಿಲ್ಲ. ಕಾರಣ ವಿವಾಹ ಬಂಧನವಾಗಿರದೆ ಒಪ್ಪಂದವಾಗಿತ್ತು. ವಯಸ್ಸಿಗೆ ಬಂದ ಹೆಣ್ಣುಮಕ್ಕಳು ಮಾತ್ರ ವಿವಾಹಕ್ಕೆ ಯೋಗ್ಯರಾಗಿದ್ದರು. ಅಂತೆಯೇ ಇಲ್ಲಿ ಹಿಂದೂ ಮಹಿಳೆಯರಿಗಿಂತ ಬೌದ್ಧ ಮಹಿಳೆಯರ ಸ್ಥಾನ ಉತ್ತಮವಾಗಿ, ಪ್ರಬಲವಾಗಿತ್ತು. ಹಿಂದೂ ಧರ್ಮದಂತೆ ಮಹಿಳೆ ಕೇವಲ ಗಂಡಿನ ತಾಯಿ ಇಲ್ಲವೆ ಹೆಂಡತಿ ಎಂಬುದಕ್ಕಷ್ಟೇ ಸೀಮಿತಳಾಗಿರಲಿಲ್ಲ. ಅವಳು ಮದುವೆ ಆಗಿರಲಿ ಇಲ್ಲವೇ ಒಂಟಿಯಾಗಿರಲಿ ನಿರ್ವಾಣ ಹೊಂದುವ ಸ್ವಾತಂತ್ರ್ಯವನ್ನು ನೀಡಿದ್ದ ಬುದ್ಧ. ವೇದಗಳ ಕಾಲದಲ್ಲಿ ಮಂತ್ರಗಳನ್ನು ರಚಿಸಿದ್ದ ಮಹಿಳೆಯರಂತೆ ಬುದ್ಧನ ಕಾಲದಲ್ಲೂ ಧಾರ್ಮಿಕ ಹಾಡುಗಳನ್ನು ರಚಿಸಿದ ಮಹಿಳೆಯರಿದ್ದಾರೆ."[೨೨] ಹೀಗಾಗಿ ಮಹಿಳೆಯರಿಗೆ ಬುದ್ಧನು ತನ್ನ ಧರ್ಮದಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆಯ ಅವಕಾಶವನ್ನು ನೀಡಿದ್ದನು ಎಂಬುದಾಗಿ ತಿಳಿಸಿದ್ದಾರೆ.

ಸನಾತನ ಹಿಂದೂಧರ್ಮವು ತನ್ನ ಧಾರ್ಮಿಕ ಕಕ್ಷೆಯೊಳಗೆ ಹೆಣ್ಣನ್ನು ಬಂಧಿಸಿದ್ದು, ಅವಳನ್ನು ಹುಟ್ಟಿನಿಂದ ವೃದ್ಧಾಪ್ಯದವರೆಗೂ ಪುರುಷಾಧೀನ ನೆಲೆಯಲ್ಲಿ ಮುನ್ನೆಡಸಿಕೊಂಡು ಬಂದಿದೆ. ಈ ಧಾರ್ಮಿಕ ಚೌಕಟ್ಟನ್ನು ಮುರಿದು ಮಹಿಳೆಯರಿಗೂ ಸ್ವಾತಂತ್ರ್ಯ ಮತ್ತು ಸಮಾನವಾದ ಅವಕಾಶಗಳನ್ನು ಕಲ್ಪಿಸಿದವನು ಬುದ್ಧ. ಆದ್ದರಿಂದ ಭಾರತದಲ್ಲಿ ಮಹಿಳೆಯನ್ನು ಹಿಂದುತ್ವದ ಬಂಧನದಿಂದ ಮೊದಲು ವಿಮೋಚನೆಗೊಳಿಸಿದನು. ಆದ್ದರಿಂದ ಬುದ್ಧನ ದರ್ಶನದಲ್ಲಿ ಅಂತರ್ಗತವಾಗಿರುವ ಮಹಿಳೆಯರ ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಎತ್ತಿಹಿಡಿಯುವ ಹಲವು ಧಾರೆಗಳು ಕಂಡುಬರುತ್ತವೆ. "ಮೊತ್ತ ಮೊದಲ ಬಾರಿಗೆ ಸ್ತ್ರೀಯರಿಗೂ ಧಾರ್ಮಿಕ ಕ್ಷೇತ್ರದಲ್ಲಿ ಉನ್ನತ ಸ್ಥಾನವನ್ನು, ಪುರುಷರಿಗೆ ಸಮನಾದ ಸ್ಥಾನವನ್ನು ನೀಡಿದವನು ಭಗವಾನ್ ಬುದ್ಧ. ಸ್ತ್ರೀಯರಿಗೂ ಸಹ ನಿರ್ವಾಣದೆತ್ತರವನ್ನು ಏರುವುದಕ್ಕೆ, ಅರಹಂತಳಾಗುವುದಕ್ಕೆ ಅರ್ಹತೆಯಿದೆ. ಈ ವಿಷಯದಲ್ಲಿ ಅವಳೂ ಸಹ ಪುರುಷನಷ್ಟೆ ಸಮರ್ಥಳು ಎಂದು ಹೇಳುತ್ತಾನೆ. 'ನಿಬ್ಬಾಣದ ರಥ ಕಾದಿದೆ. ಸ್ತ್ರೀ ಪುರುಷರೆನ್ನದೆ ಎಲ್ಲರೂ ಅದನ್ನೇರಿ ಸಾಗಬಹುದು' ಎನ್ನುತ್ತಾನೆ. ಆ ಕಾಲಕ್ಕೆ ಬುದ್ಧನ ಇಂತಹ ವಿಚಾರಗಳು ಜಾತಿ ನಿರ್ಮೂಲನದಷ್ಟೇ ಕ್ರಾಂತಿಕಾರಿಯಾಗಿದ್ದವು. ಅನ್ಯರ ವಿರೋಧವನ್ನು ಮೀರಿ ಬುದ್ಧ ಬೆಳೆದ. ಮಾತೆಯೆಂಬ ಗೌರವಕ್ಕೆ ಮತ್ತಾರೂ ಸಾಟಿಯಲ್ಲ. ಮಾತೃ ಋಣವನ್ನು ತೀರಿಸಲು ಎಂದಿಗೂ ಸಾಧ್ಯವಿಲ್ಲ ಎಂದು ಸಾರಿದ. ಸಮಸ್ತ ಸ್ತ್ರೀ ಕುಲವನ್ನು ಮಾತೃತ್ವದ ಪವಿತ್ರ ಪ್ರತಿನಿಧಿಯಂತೆ ಅವನು ಕಾಣುತ್ತಾನೆ."[೨೩] ಆ ಮೂಲಕವಾಗಿ ತನ್ನ ಧರ್ಮದಲ್ಲಿ ಮಹಿಳೆಗೆ ಯಾವುದೇ ಲಿಂಗಬೇಧವನ್ನು ಮಾಡದೆ, ಸಮಾನತೆಯ ನೆಲೆಯಲ್ಲಿ ನಡೆಸಿಕೊಂಡ ಬಗೆಯನ್ನು ಕನ್ನಡದ ಹಲವು ಪ್ರಗತಿಪರ ಧಾರೆಗಳು ಗುರುತಿಸಿವೆ.

ಹೀಗೆ ಕನ್ನಡದ ಹಲವಾರು ಧಾರೆಗಳು ಮಹಿಳೆಯರಿಗೆ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಬೌದ್ಧ ದರ್ಶನದಲ್ಲಿ ಕಂಡುಕೊಂಡಿವೆ. ಕನ್ನಡ ಚಿಂತನ ಸಾಹಿತ್ಯದ ಅಡಿಯಲ್ಲಿ ವ್ಯಕ್ತವಾಗಿರುವ ಬೌದ್ಧ ಚಿಂತನೆಗಳು ವಿಭಿನ್ನವಾದ ನೆಲೆಯಿಂದ ಕೂಡಿದ್ದರು, ಇವುಗಳ ಮೂಲ ಆಶಯ ಮಾತ್ರ ಮಹಿಳೆಯರ ಬಗೆಗಿನ ವಿಶ್ವಾತ್ಮಕವಾದ ದೃಷ್ಟಿಕೋನವನ್ನು ಎತ್ತಿಹಿಡಿಯುವ ನೆಲೆಯಲ್ಲಿವೆ. ಹಿಂದೂಧರ್ಮದಲ್ಲಿನ ಅಸಮಾನ ನೀತಿಯನ್ನು ಹಾಗೂ ಮಹಿಳೆಯನ್ನು ದೈವತ್ವಕ್ಕೆರಿಸುತ್ತಲೆ ಅವಳನ್ನು ಪುರುಷಾಧೀನದಲ್ಲಿ ಮುಂದುವರೆಸಿಕೊಂಡು ಬಂದಿರುವ ಕ್ರಮಗಳನ್ನು ವಿರೋಧಿಸುವ ಮತ್ತು ಬೌದ್ಧ ದರ್ಶನದಲ್ಲಿರುವ ಸ್ತ್ರೀ ಸಮಾನತೆಯನ್ನು ಎತ್ತಿಹಿಡಿಯುವ ನೆಲೆಯಲ್ಲಿ ಚಿಂತನೆಗಳು ಮೂಡಿಬಂದಿವೆ.

ಅಧಿಕಾರ ಮತ್ತು ಹಕ್ಕಿನ ಪ್ರಶ್ನೆ:

ಕನ್ನಡ ಚಿಂತನ ಸಾಹಿತ್ಯದಲ್ಲಿ ಮಹಿಳೆಯ ಅಧಿಕಾರ ಹಾಗೂ ಹಕ್ಕಿನ ಕುರಿತಾಗಿ ಸಾಕಷ್ಟು ಚಿಂತನೆಗಳು ಮೂಡಿಬಂದಿವೆ. ಈ ಕುರಿತ ಬಹುತೇಕ ಚಿಂತನೆಗಳು ಬೌದ್ಧ ದರ್ಶನದ ನೆಲೆಯಿಂದ ಬ ಒಡಮೂಡಿವೆ. ಕನ್ನಡದ ಚಿಂತಕ ವರ್ಗವು ಬೌದ್ಧ ದರ್ಶನದ ನೆಲೆಯಲ್ಲಿ ವ್ಯಕ್ತಪಡಿಸಿರುವ ಬಹುತೇಕ ಚಿಂತನೆಗಳು ಬಾಬಾಸಾಹೇಬ್ ಅಂಬೇಡ್ಕರ್ ಅವರ ಚಿಂತನೆ ಹಾಗೂ ಸೈದ್ಧಾಂತಿಕ ದೃಷ್ಟಿಕೋನಗಳಿಂದ ಪ್ರಭಾವಿತವಾದವುಗಳಾಗಿವೆ. ಹೀಗಾಗಿ ಕನ್ನಡದಲ್ಲಿ ವ್ಯಕ್ತವಾಗಿರುವ ಮಹಿಳೆಯರ

ಆಸ್ತಿ ಹಾಗೂ ಅಧಿಕಾರದ ನೆಲೆಯ ಚಿಂತನೆಗಳನ್ನು ಅಧ್ಯಯನ ಮಾಡುವ ಪೂರ್ವದಲ್ಲಿ, ಅಂಬೇಡ್ಕರರು ಸಂವಿಧಾನಿಕ ನೆಲೆಯಲ್ಲಿ ಮಹಿಳೆಯರಿಗೆ ಕಲ್ಪಿಸಿರುವ ಅವಕಾಶಗಳನ್ನು ತಿಳಿಯುವುದು ಹೆಚ್ಚು ಸೂಕ್ತವಾಗಿದೆ. ಸಂವಿಧಾನದ ಕರಡು ರಚನಾ ಶಿಲ್ಪಿಯಾದ ಬಾಬಾಸಾಹೇಬರು ರೂಪಿಸಿದ ಅಂಶಗಳು ಜಾತಿ, ಮತ, ಕುಲ ಮತ್ತು ಲಿಂಗ ಭೇದದ ವ್ಯತ್ಯಾಸವಿಲ್ಲದೆ ಪ್ರತಿಯೊಬ್ಬ ಭಾರತೀಯ ಪ್ರಜೆಗೂ ಸಮಾನ ನೆಲೆಯಲ್ಲಿ ಮೂಲಭೂತ ಹಕ್ಕುಗಳನ್ನು ಕಲ್ಪಿಸಲಾಗಿದೆ. ಇವರು ಮಹಿಳೆಯರನ್ನು ಸಮಾಜದ ಮುಂಚೂಣಿಗೆ ತರುವ ನೆಲೆಯಲ್ಲಿ ೧೯೫೧ ಫೆಬ್ರವರಿ ೧೫ ರಂದು ಸಂಸತ್ತಿನಲ್ಲಿ ಮಂಡಿಸಿದ 'ಹಿಂದೂ ಕೋಡ್‌ಬಿಲ್' ಸನಾತನವಾದಿಗಳ ತೀವ್ರ ವಿರೋಧಕ್ಕೆ ಗುರಿಯಾಗಿತ್ತು. ಹಿಂದೂ ಪ್ರಣೀತವಾದ 'ಮನುವಾದ'ಕ್ಕೆ ವಿರುದ್ಧವಾಗಿ, ಸರ್ವರನ್ನು ಸಮಾನ ನೆಲೆಯಲ್ಲಿ ನಡೆಸಿಕೊಂಡು ಬಂದ ಬೌದ್ಧಧರ್ಮದ ಆಶಯಗಳಿಗೆ ಅನುಗುಣವಾಗಿ ಮಹಿಳೆಯರ ಪರವಾದ ಕಾನೂನುಗಳನ್ನು ಅಂಬೇಡ್ಕರ್ ರೂಪಿಸಿದರು. ಆ ಮೂಲಕವಾಗಿ ಆಸ್ತಿ ಹಾಗೂ ಅಧಿಕಾರದಲ್ಲಿ ಸಮಾನತೆಯನ್ನು ಅವಕಾಶಗಳನ್ನು ನೀಡಿದಾಗ ಇದು ಕಾರ್ಯರೂಪಕ್ಕೆ ಬರದಂತೆ ತಡೆಯಲು ಸನಾತನವಾದಿಗಳು ಮುಂದಾದರು. ಆದರೆ ಅಂತಿಮವಾಗಿ ಹಿಂದೂ ಮಹಿಳೆಯರನ್ನು ಕುರಿತು ನಾಲ್ಕು ಮಹತ್ತರವಾದ ಮಸೂದೆಗಳನ್ನು ಮಂಡಿಸಿದ ಬಾಬಾಸಾಹೇಬರು, ಅವುಗಳನ್ನು ಪಾರ್ಲಿಮೆಂಟ್ ಹಾಗೂ ಸದನಗಳೆರಡರಲ್ಲೂ ಅನುಮೋದನೆ ಪಡೆಯುವಲ್ಲಿ ಯಶಸ್ವಿಯಾದರು. ಈ ಮಸೂದೆಗಳೆಂದರೆ; ೧. ಹಿಂದೂ ವಿವಾಹ ಕಾನೂನು-೧೯೫೫ ೨. ಹಿಂದೂ ಉತ್ತರಾಧಿಕಾರ ಕಾನೂನು-೧೯೫೬, ೩. ಹಿಂದೂ ಅಪ್ರಾಪ್ತತೆ ಕಾನೂನು ಮತ್ತು ಪೋಷಕತ್ವ ಕಾನೂನು-೧೯೫೬, ೪. ಹಿಂದೂ ದತ್ತಕ ಮತ್ತು ಜೀವನಾಂಶ ಕಾನೂನು-೧೯೫೬. ಈ ಕಾನೂನುಗಳಿಂದ ಪ್ರಾಚೀನ ದಿನಮಾನಗಳಿಂದಲೂ ಬ್ರಾಹ್ಮಣವಾದಿ ಪುರುಷಾಧಿಕಾರದ ಬಂಧನಕ್ಕೆ ಒಳಗಾಗಿದ್ದ ಹೆಣ್ಣಿಗೆ ಆಸರೆ ದೊರೆತಂತಾಯಿತು.

ಸನಾತನವಾದ ಬ್ರಾಹ್ಮಣಧರ್ಮದ ಚೌಕಟ್ಟಿನೊಳಗೆ ಶೋಷಣೆಗೆ ಗುರಿಯಾಗಿದ್ದ ಮಹಿಳೆಗೆ ಸಮಾನತೆಯನ್ನು ಕಲ್ಪಿಸಲು ರಚನೆಯಾದ ಕಾನೂನುಗಳೆಲ್ಲ ಅಂಬೇಡ್ಕರ್ ಅವರ ಚಿಂತನೆಯ ಫಲವಾಗಿವೆ. ಬೌದ್ಧ ದರ್ಶನದ ತಾತ್ವಿಕ ದೃಷ್ಟಿಕೋನಗಳನ್ನು ಸಂವಿಧಾನದ ಅಡಿಯಲ್ಲಿ ಕಾರ್ಯರೂಪಗೊಳಿಸಲು ಹಲವಾರು ಅನುಚ್ಛೇದಗಳನ್ನು ರಚಿಸಲಾಗಿದೆ. ಅವುಗಳು ಈ ಮುಂದಿನಂತಿವೆ; "ಅನುಚ್ಛೇದ ೧೪ರಲ್ಲಿ ಭಾರತದ ಭೌಗೋಳಿಕ ಪ್ರದೇಶದಲ್ಲಿ ವಾಸವಿರುವ ಪ್ರತಿಯೊಬ್ಬ ಪ್ರಜೆಯೂ ಕಾನೂನಿನ ಮುಂದೆ ಸಮಾನನೂ, ಕಾನೂನಿಗೆ ಸಮಾನ ಸಂರಕ್ಷಣೆಯನ್ನು ಘೋಷಿಸಲಾಗಿದೆ. ಅನುಚ್ಛೇದ ೧೫ರ ಪ್ರಕಾರ ಸರಕಾರವು ಯಾವುದೇ ಪ್ರಜೆಯನ್ನು ಮತ, ಜಾತಿ, ಕುಲ, ಲಿಂಗ ಮತ್ತು ಹುಟ್ಟಿನ ಆಧಾರದ ಮೇಲೆ ತಾರತಮ್ಯ ಮಾಡತಕ್ಕುದಲ್ಲ ಎಂಬುದಾಗಿ ಆದೇಶಿಸುತ್ತದೆ. ಅನುಚ್ಛೇದ ೧೬ರ ಪ್ರಕಾರ ಸರಕಾರದ ಯಾವುದೇ ಕಛೇರಿಯ ಉದ್ಯೋಗಾವಕಾಶದ ವಿಷಯದಲ್ಲಿ ಸರ್ವರಿಗೂ ಸಮಾನ ಅವಕಾಶವಿರಬೇಕು ಎಂಬುದಾಗಿ ನಿರ್ದೇಶಿಸುತ್ತದೆ. ಅನುಚ್ಛೇದ ೩೯ರ ಪ್ರಕಾರ ಯಾವುದೇ ಸ್ತ್ರೀ ಮತ್ತು ಪುರುಷರಿಗೆ ಸರಿಸಮಾನವಾದ ಜೀವನಾವಕಾಶಗಳನ್ನು ಒದಗಿಸತಕ್ಕದ್ದು ಎಂಬುದಾಗಿ ತಿಳಿಸಲಾಗಿದೆ. ಅಷ್ಟೇ ಅಲ್ಲದೇ ಸ್ತ್ರೀ ಮತ್ತು ಪುರುಷರ ಸೇವೆಗೆ ಸಮಾನ ವೇತನವಿರಬೇಕು

ಎಂಬುದಾಗಿ ಅನುಚ್ಛೇದ ೩೯(ಡಿ) ನಿರ್ದೇಶಿಸುತ್ತದೆ. ಅನುಚ್ಛೇದ ೪೨ರ ಪ್ರಕಾರ ಮಹಿಳೆಯ ಸೇವೆಗೆ ಅಗತ್ಯವಾದ ನ್ಯಾಯಯೋಚಿತ ಹಾಗೂ ಮಾನವೀಯ ವಾತವರಣ ಕಲ್ಪಿಸಬೇಕಾದುದು ಮತ್ತು ಮಹಿಳೆಗೆ ಪ್ರಸೂತಿ ಮತ್ತು ಹೆರಿಗೆ ಪರಿಹಾರಗಳನ್ನು ಒದಗಿಸಬೇಕಾದುದು ಸರ್ಕಾರದ ಕರ್ತವ್ಯವಾಗಿದೆ ಎಂಬುದಾಗಿ ಆದೇಶಿಸುತ್ತದೆ."[೨೪]

ಬೌದ್ಧ ದರ್ಶನದ ದಾರ್ಶನಿಕ ನಿಲುವುಗಳನ್ನು ಸಂಪೂರ್ಣವಾಗಿ ತಿಳಿದುಕೊಂಡಿದ್ದ ಅಂಬೇಡ್ಕರರು, ಮಹಿಳೆಯರನ್ನು ವಿಮೋಚನೆಗೊಳಿಸುವ ನೆಲೆಯಲ್ಲಿ ಜಾರಿಗೆ ತಂದ ಸಾಂವಿಧಾನಿಕ ನಿಲುವುಗಳನ್ನು ಕುರಿತು ಮ.ನ.ಜವರಯ್ಯನವರು ವ್ಯಕ್ತಪಡಿಸುವ ನಿಲುವುಗಳು ಹೀಗಿವೆ: "ಅಂಬೇಡ್ಕರರು ಮಹಿಳೆಯ ವ್ಯಕ್ತಿಸ್ವಾತಂತ್ರ್ಯ, ಅವಳ ಆಸ್ತಿ ಹಕ್ಕು, ಶಿಕ್ಷಣ ಮತ್ತು ಆತ್ಮಗೌರವಗಳಂಥ ವಿಷಯಗಳು ಯಾವ ವೈದಿಕರಿಗೆ ಯಾವುದೋ ಪರಲೋಕದ ವಿಚಾರಗಳಾಗಿದ್ದವೋ ಅಂಥ ಗಹನ ಆಲೋಚನೆಗಳನ್ನು ಸರಳಗೊಳಿಸಿ, ತಿಳಿಗೊಳಿಸಿ, ಬಿಡಿಸಿ ಬಿಡಿಸಿ ಮಡಿವಂತರ ಮುಂದೆ ಮಂಡಿಸುವುದು ಅಂಬೇಡ್ಕರರ ಏಕೈಕ ಉದ್ದೇಶ. ತನ್ಮೂಲಕ ಮಹಿಳೆಗೊಂದು ಗಣತಂತ್ರಾತ್ಮಕ ವ್ಯಕ್ತಿತ್ವ ನಿರ್ಮಾಣ ಮಾಡುವುದು ಕೂಡ. ನಿದರ್ಶನಕ್ಕೆ ಮಹಿಳೆಯ ವಿಷಯದಲ್ಲಿ ಮಡಿವಂತ ಮಂದಿಯ ಬೌದ್ಧಿಕ ಸ್ವರೂಪ ಯಾವ ಮಟ್ಟದ್ದಾಗಿತ್ತು ಎಂಬುದಕ್ಕೆ '೧೯೫೬ರ ಹಿಂದೂ ದತ್ತಕ ಮತ್ತು ಜೀವನಾಂಶ ಕಾನೂನು' ಮತ್ತು ಇದರ ಬಗೆಗಿನ ಪಾರ್ಲಿಮೆಂಟ್‌ನಲ್ಲಿ ನಡೆದ ಚರ್ಚೆ ಇಂದಿಗೂ ಜೀವಂತ ಚಿಂತನಾರ್ಹ ದಾಖಲೆಗಳು ಎಂದೆನಿಸುತ್ತವೆ."[೨೫] ಆ ಮೂಲಕವಾಗಿ ಮಹಿಳೆಯರ ಹಕ್ಕು ಮತ್ತು ಅವರಿಗೆ ಸಾಂವಿಧಾನಿಕ ನೆಲೆಯಲ್ಲಿ ದೊರಕಿಸಿಕೊಟ್ಟ ಅಧಿಕಾರದ ಹಿಂದಿರುವ ಬಾಬಾಸಾಹೇಬರ ತಾತ್ವಿಕ ದೃಷ್ಟಿಕೋನಗಳನ್ನು ಮ.ನ.ಜವರಯ್ಯನವರು ಎತ್ತಿಹಿಡಿದಿದ್ದಾರೆ.

ಬುದ್ಧನ ಧರ್ಮದಲ್ಲಿ ಮಹಿಳೆಯು ಹೊಂದಿರುವ ಆಸ್ತಿಯ ಹಕ್ಕು ಹಾಗೂ ಅಧಿಕಾರದ ಕುರಿತಾಗಿ ಮಂಗಲಾ ಕಾಳೆಯವರು ಚರ್ಚಿಸುತ್ತಾರೆ. ಇವರು ಹಿಂದೂಧರ್ಮದಲ್ಲಿ ಮಹಿಳೆಯ ಪಾಲಿಗೆ ಮರೀಚಿಕೆಯಾಗಿರುವ ಹಕ್ಕು ಹಾಗೂ ಅಧಿಕಾರದ ನೆಲೆಗಳನ್ನು ಬೌದ್ಧ ದರ್ಶನದಲ್ಲಿ ಗುರುತಿಸಿದ್ದಾರೆ. "ಮಹಿಳೆಯು ತಾನು ಸಂಪಾದಿಸಿದ ಸಂಪತ್ತಿನ ಮೇಲೆ ಸಂಪೂರ್ಣವಾಗಿ ಅಧಿಕಾರವನ್ನು ಹೊಂದಿದ್ದಳು. ಸಂಪತ್ತಿ ನಿಶ್ಚಿತವಾದ ಕಾಯ್ದೆ ಕಾನೂನುಗಳು ಬುದ್ಧನ ಕಾಲದಲ್ಲಿರಲಿಲ್ಲ. 'ಭದ್ರ ಕಪಿನಾ' ಎಂಬ ವಿವಾಹಿತ ಮಹಿಳೆಯು ತಾನು ಸಂಘ ಪ್ರವೇಶಿಸುವ ಹೊತ್ತಿನಲ್ಲಿ ತನ್ನ ಸಂಪತ್ತನ್ನು ಸಂಪೂರ್ಣವಾಗಿ ಅವರ ಸಂಬಂಧಿಕರಲ್ಲಿ ಹಂಚಿದಳು. 'ಸುಂದರಿ' ಎಂಬ ಹೆಸರಿನ ಕನ್ಯೆಗೆ ಅವಳ ತಂದೆಯು ತನ್ನ ಮಗಳು ಭಿಕ್ಷುಣಿ ಆಗಬಾರದೆಂದು ಹೆದರಿ, ತನ್ನ ಸಂಪತ್ತನ್ನು ಅವಳ ಹೆಸರಿಗೆ ಬರೆದನು. ಅವಳ ತಾಯಿಯು ಕೂಡ ಮಗಳಿಗೆ ಸಂಪತ್ತನ್ನು ಅನುಭವಿಸಲು ಹೇಳಿದಳು. ಆದರೂ ಆ ಕನ್ಯೆಯು ಭಿಕ್ಷಣಿಯಾದಳು. ಮಹಿಳೆಯರಿಗೆ ತಮ್ಮ ಮದುವೆಯಲ್ಲಿ ದೊರೆತಂತಹ ಸಂಪತ್ತಿನ ಮೇಲಷ್ಟೇ ಅಧಿಕಾರವಿರದೆ, ತಮ್ಮ ಪತಿಯ ಮನೆಯಲ್ಲಿ ದೊರೆಯುವ ಸಂಪತ್ತಿನ ಮೇಲೂ ಅಧಿಕಾರವಿತ್ತು. ಅವಳಿಗೆ ಅಧಿಕಾರವಿದ್ದ ಸಂಪತ್ತಿನ ಮೇಲೆ ಪತಿ ಅಥವಾ ಉಳಿದವರಾರ ಅಧಿಕಾರವಿರಲಿಲ್ಲ."[೨೬] ಹೀಗಾಗಿ ಬೌದ್ಧಧರ್ಮದಲ್ಲಿ ಮಹಿಳೆಯು ಸಂಪತ್ತು ಹಾಗೂ ಅಧಿಕಾರವನ್ನು

ಸ್ವತಂತ್ರವಾಗಿ ನಿರ್ವಹಿಸುವ ಹಕ್ಕುಗಳನ್ನು ಹೊಂದಿದ್ದಳು. ಆದ್ದರಿಂದ ಈ ಧರ್ಮದಲ್ಲಿ ಮಹಿಳೆಯರನ್ನು ಪುರುಷಾಧೀನಕ್ಕೆ ಒಳಪಡಿಸಿರುವ ಯಾವುದೇ ಅಂಶಗಳು ಕಂಡುಬರುವುದಿಲ್ಲ ಎಂಬುದಾಗಿ ತಿಳಿಸುತ್ತಾರೆ.

ಬೌದ್ಧಧರ್ಮದಲ್ಲಿ ಮಹಿಳೆಗೆ ನೀಡಿರುವ ಸಮಾನತೆಯ ಹಕ್ಕುಗಳನ್ನು ಕುರಿತು ಚಿಂತಕರಾದ ಓ.ರಾಜಣ್ಣನವರು ಈ ರೀತಿ ಹೇಳಿದ್ದಾರೆ; "ಬುದ್ಧನು ಜನರಿಗೆ ಲಿಂಗಭೇದವಿಲ್ಲದೆ ಎಲ್ಲರಿಗೂ ಸಮಾನ ಹಕ್ಕು ಹಾಗೂ ಗೌರವಗಳನ್ನು ನೀಡಬೇಕೆಂದು ಉಪದೇಶಿಸಿದನು. ಪುರುಷರು ತಮ್ಮ ಸಹೋದರಿಯನ್ನು ರಕ್ಷಿಸಬೇಕು, ತಮ್ಮ ಪತ್ನಿಯನ್ನು ಮಾನವೀಯತೆ ಹಾಗೂ ಪ್ರೀತಿ ವಿಶ್ವಾಸದಿಂದ ಕಾಣಬೇಕು, ಅವರನ್ನು ತಮ್ಮ ಸಮಾನರೆಂದೂ, ಸ್ನೇಹಿತರೆಂದೂ ಗೌರವಿಸಬೇಕು. ತಮ್ಮ ಹೆಣ್ಣುಮಕ್ಕಳನ್ನು ಗಂಡುಮಕ್ಕಳಿಗೆ ನೀಡುವಂಥ ಸಮನಾದ ಅವಕಾಶಗಳನ್ನು ಕಲ್ಪಿಸಬೇಕು ಎಂದು ಬೋಧಿಸಿದನು. ಮುಂದುವರೆಯುತ್ತ ಅನಭಿಜ್ಞ ಮನುಷ್ಯನ ನೀತಿಶಾಸ್ತ್ರದ ಪ್ರಕಾರ, ಬುದ್ಧನು ಪತ್ನಿಯ ಜೊತೆ ಪತಿಯು ಹೇಗೆ ವರ್ತಿಸಬೇಕು ಎಂಬ ಮಾರ್ಗಸೂಚಿಯನ್ನು ಸೂಚಿಸಿದ್ದಾನೆ; ಆಕೆಯನ್ನು ಕೃಪೆಯಿಂದ ಕಾಣಬೇಕು, ತುಚ್ಛವಾಗಿ ಕಾಣಬಾರದು, ಅವಳಿಗೆ ವಿಧೇಯನಾಗಿರಬೇಕು. ಅವಳಿಗೆ ಹಕ್ಕುಗಳನ್ನು ನೀಡಬೇಕು. ಆಕೆಗೆ ಆಭರಣಗಳನ್ನು ಒದಗಿಸಬೇಕು ಎಂದು ಆದೇಶಿಸುತ್ತಾನೆ."[೨೭] ಈ ಎಲ್ಲ ಅವಕಾಶಗಳನ್ನು ಗಮನಿಸಿದಾಗ ಬೌದ್ಧ ದರ್ಶನವು ಯಾವುದೇ ಧಾರ್ಮಿಕ ನಿರ್ಬಂಧಗಳನ್ನು ಹೇರದೆ, ಮಹಿಳೆಗೆ ಪುರುಷ ಸಮಾನವಾದ ಅಧಿಕಾರ ಹಾಗೂ ಆಸ್ತಿಯ ಒಡೆತನದ ಹಕ್ಕನ್ನು ಕಲ್ಪಿಸಿಕೊಟ್ಟಿರುವುದಾಗಿ ತಿಳಿದುಬರುತ್ತದೆ. ಬುದ್ಧನ ಧರ್ಮವು ಜಗತ್ತಿನಲ್ಲಿ ಮಹಿಳೆಯರಿಗೆ ಸಮಾನವಾದ ಹಕ್ಕು ಮತ್ತು ಸ್ವಾತಂತ್ರ್ಯವನ್ನು ನೀಡಿದ ಮೊದಲ ಧರ್ಮ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಹಲವು ಧಾರೆಗಳು ಬೌದ್ಧ ದರ್ಶನದಲ್ಲಿ ಅಂತರ್ಗತವಾಗಿರುವ ಸ್ತ್ರೀ ಸಮಾನತೆಯನ್ನು ಎತ್ತಿಹಿಡಿದಿವೆ. ಆದರೆ ಸಮಕಾಲೀನ ಸಂದರ್ಭದಲ್ಲಿ ಸ್ತ್ರೀ ಸಮಾನತೆಗಾಗಿ ಹುಟ್ಟಿಕೊಂಡ ಹೋರಾಟ ಮತ್ತು ಚಳವಳಿಗಳು ಬುದ್ಧನನ್ನು ತಮ್ಮ ಹೋರಾಟಗಳಿಗೆ ಮುಖ್ಯವೆಂದು ಭಾವಿಸದೆ, ಮೌನವನ್ನು ತಾಳಿರುವುದು ಕಂಡುಬರುತ್ತದೆ. ಕೆಲವು ಸ್ತ್ರೀವಾದಿಗಳ ಈ ಮೌನಕ್ಕೆ ಎರಡು ಕಾರಣಗಳಿವೆ. ಅವೆಂದರೆ, ೧. ಇಲ್ಲಿ ಬುದ್ಧನು ತನ್ನ ಸಂಘಕ್ಕೆ ಸ್ತ್ರೀಯರನ್ನು ಸೇರಿಸಿಕೊಳ್ಳಲು ಆರಂಭಿಕವಾಗಿ ನಿರಾಕರಿಸಿದನೆಂಬ ನಿಲುವು. ೨. ಬುದ್ಧನ ಕಾಲದಲ್ಲಿ ಸ್ತ್ರೀಯರಿಗೆ 'ರಾಜಕೀಯ ಪ್ರವೇಶ ಹಾಗೂ ವಿದೇಶಗಳ ಪ್ರಯಾಣ'ದಂತಹ ಕೆಲವು ವಿಷಯದಲ್ಲಿ ನಿರ್ಬಂಧವನ್ನು ಹೇರಿದ್ದನು ಎಂಬುದು. ೩. ಬುದ್ಧನು ಯಾವುದನ್ನು ತನ್ನ ಶತ್ರುವೆಂದು ಭಾವಿಸುವುದಿಲ್ಲ. ಪ್ರತಿಯೊಂದಕ್ಕೂ ಕಾರ್ಯಕಾರಣದ ಮೂಲಕವೇ ಉತ್ತರವನ್ನು ಕಂಡುಕೊಳ್ಳುತ್ತಾನೆ. ಆದರೆ ಪುರುಷ ಪ್ರಧಾನ ವ್ಯವಸ್ಥೆಯನ್ನೇ ತನ್ನ ಎದುರಾಳಿಯೆಂದು ಭಾವಿಸುವ ಸ್ತ್ರೀವಾದಕ್ಕೆ, ಬುದ್ಧನ ವಿಚಾರಗಳಲ್ಲಿ ಯಾವುದೇ ಬಂಡಾಯದ ಅಂಶಗಳು ಕಂಡುಬರದೆ ಇರುವುದರಿಂದ ಇದು ಮುಖ್ಯವೆಂದು ಭಾವಿಸದಿರುವುದು ಕೂಡ ಪ್ರಮುಖ ಕಾರಣವಾಗಿರುವ ಸಾಧ್ಯತೆ ಇದೆ. ಹೀಗೆ ಹಲವಾರು ಕಾರಣಗಳಿಂದಾಗಿ ಸಮಕಾಲೀನ ಸಂದರ್ಭದ ಬಹುತೇಕ ಸ್ತ್ರೀವಾದಿ ಚಿಂತನಧಾರೆಗಳು ಬುದ್ಧನನ್ನು ತಮ್ಮ ಹೋರಾಟಕ್ಕೆ ಮುಖ್ಯವೆಂದು ಪರಿಗಣಿಸದೆ, ತಿರಸ್ಕರಿಸಲಾಗದೆಯೂ ಮೌನಕ್ಕೆ ಒಳಗಾಗಿರುವುದು ಕಂಡುಬರುತ್ತದೆ.

ಸಮಕಾಲೀನ ಸಂದರ್ಭದ ಸ್ತ್ರೀವಾದದ ಈ ಮೌನಕ್ಕೆ ಕಾರಣ, ಬುದ್ಧನ ಧರ್ಮವನ್ನು ವಿರೋಧಿಸಿದರೆ, ಇಲ್ಲವೇ ತಿರಸ್ಕಾರಕ್ಕೆ ಗುರಿಪಡಿಸಿದರೆ ಅಂಬೇಡ್ಕರ್ ತಾತ್ವಿಕ ಸಿದ್ಧಾಂತಗಳೊಂದಿಗೆ ವಾದ ಮಂಡಿಸಬೇಕಾಗುತ್ತದೆ. ಅಂಬೇಡ್ಕರ್ ಜಾರಿಗೆ ತಂದ ಮಹಿಳಾ ಪರವಾದ ಸಂವಿಧಾನಾತ್ಮಕ ಅವಕಾಶಗಳ ಸಾರ ಬೌದ್ಧದರ್ಶನದಿಂದ ಸ್ವೀಕರಿಸಿರುವುದಾಗಿದೆ. ಆದ ಕಾರಣ ಮಹಿಳಾವಾದಕ್ಕೆ ಅಂಬೇಡ್ಕರ್ ಅವರ ವಿರುದ್ಧ ಮಾತನಾಡಲು ದನಿ ಇಲ್ಲದ ಕಾರಣದಿಂದಾಗಿ ಬೌದ್ಧಧರ್ಮದ ಬಗ್ಗೆ ಮೌನ ತಾಳಿರುವ ಸಾಧ್ಯತೆಯಿದೆ.

೩. ಮೂಲಭೂತವಾದ ಮತ್ತು ಕೋಮುವಾದ

ಕನ್ನಡ ಚಿಂತನ ಸಾಹಿತ್ಯದಲ್ಲಿ ಕೆಲವು ಚಿಂತನಧಾರೆಗಳು ಬುದ್ಧನ ದಾರ್ಶನಿಕ ನಿಲುವುಗಳ ಮೂಲಕ, ಮೂಲಭೂತವಾದ ಮತ್ತು ಕೋಮುವಾದದಂತಹ ಜಾಗತಿಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ನೆಲೆಯಲ್ಲಿ ಚಿಂತನೆಗಳನ್ನು ವ್ಯಕ್ತಪಡಿಸಿವೆ. ವಿಜ್ಞಾನ, ತಂತ್ರಜ್ಞಾನಗಳು ಬೆಳೆದಂತೆಲ್ಲ ಜಾಗತಿಕ ಮಟ್ಟದಲ್ಲಿ ಹಲವಾರು ಸಮಸ್ಯೆಗಳು ಜನ್ಮತಳೆಯುತ್ತಿವೆ. ಈ ಸಮಸ್ಯೆಗಳು ಸ್ಥಳೀಯತೆಯಿಂದ ಜಾಗತಿಕ ಮಟ್ಟದವರೆಗೆ ಒಂದಿಲ್ಲೊಂದು ರೀತಿಯಲ್ಲಿ ಭಿನ್ನ ಸ್ವರೂಪವನ್ನು ಪಡೆದುಕೊಂಡಿರುತ್ತವೆ. ಈ ಎಲ್ಲ ಭಿನ್ನ ಸ್ವರೂಪದ ಸಮಸ್ಯೆಗಳಿಗೆ ಬುದ್ಧನ ಧಮ್ಮದ ಮೂಲಕ ಪರಿಹಾರವನ್ನು ಕಂಡುಕೊಳ್ಳುವ ನೆಲೆಯ ಧಾರೆಗಳು ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುತ್ತವೆ. ಕನ್ನಡದ ಚಿಂತಕರಾದ ಪಿ.ಲಂಕೇಶ್ ಅವರು 'ಇಟ್ಟಿಗೆ ಪವಿತ್ರವಲ್ಲ; ಜೀವ ಪವಿತ್ರ' ಎಂಬ ಲೇಖನದ ಚರ್ಚೆಯು ಮೂಲಭೂತವಾದಿ ತನವನ್ನು ವಿರೋಧಿಸಿ, ಶಾಂತಿ ಮತ್ತು ಕೋಮುಸೌಹಾರ್ದತೆಯನ್ನು ಪ್ರತಿಪಾದಿಸುವ ನೆಲೆಯದಾಗಿದೆ. ಇವರ ಈ ಚಿಂತನೆಯ ಹಿಂದೆ ಬುದ್ಧನ ಜೀವಕಾರುಣ್ಯದ ಸೈದ್ಧಾಂತಿಕ ಒಳನೋಟವಿದೆ. ಸಮಕಾಲೀನ ಸಂದರ್ಭದಲ್ಲಿ ಸನಾತನವಾದಿ ಸಂಘಟನೆಗಳು ಮಂದಿರ, ಮಸೀದಿ, ಚರ್ಚುಗಳ ವಿಚಾರದಲ್ಲಿ ಸೃಷ್ಟಿಸುತ್ತಿರುವ ಅಶಾಂತಿ ಮತ್ತು ಕೋಮುಸಂಘರ್ಷವನ್ನು ವಿರೋಧಿಸುವ ನೆಲೆಯಲ್ಲಿ ಬುದ್ಧನ ಜೀವಪರವಾದ ನಿಲುವುಗಳನ್ನು ಎತ್ತಿಹಿಡಿದಿದ್ದಾರೆ. "ಭಾರತ ಹಲವು ಜಾತಿ, ಪಂಗಡ, ವೈವಿಧ್ಯತೆಯ ಸಂಸ್ಕೃತಿ ಮತ್ತು ಚರಿತ್ರೆಯುಳ್ಳ ದೇಶ. ಇಲ್ಲಿ ನಾವೆಲ್ಲ ಬದುಕಬೇಕಾದದ್ದು ಜಾತಿಯನ್ನು ಸಾರ್ವಜನಿಕ ಬದುಕಿಗೆ ತರಲು ನಿರಾಕರಿಸಿ; ಎಲ್ಲ ಧರ್ಮಗಳ ಮೂಲಭೂತ ದಯೆ, ದಾಕ್ಷಿಣ್ಯವನ್ನು ಅರಿತುಕೊಂಡು. ನೆರೆ ರಾಷ್ಟ್ರವಾದ ಚೈನಾದಲ್ಲಿ ಕಮ್ಯುನಿಷ್ಟ್ ಸರ್ಕಾರ ನಡುಗಿ ಬೀಳುತ್ತಿದೆ. ಮುಸ್ಲಿಂ ರಾಷ್ಟ್ರವಾದ ಪಾಕಿಸ್ತಾನ ತನ್ನ ಕಂದಾಚಾರಿ ಮುಲ್ಲಾಗಳ ಆಜ್ಞೆಯನ್ನು ಧಿಕ್ಕರಿಸಿ ಜಾತ್ಯಾತೀತವಾಗಿ ಹೆಣ್ಣುಮಗಳೊಬ್ಬಳನ್ನು ಆರಿಸಿದೆ; ಬೌದ್ಧ ದೇಶವಾದ ಜಪಾನ್ ಶ್ರೀಮಂತಿಕೆಯ ಉತ್ತುಂಗ ತಲುಪಿ ಭಾರತದ ಚಿಲ್ಲರೆ ಜಾತೀಯತೆಯತ್ತ ತಾತ್ಸಾರದಿಂದ ನೋಡುತ್ತಿದೆ; ಶ್ರೀಲಂಕಾದ ಬೌದ್ಧರಿಗೆ ಭಾರತ ದರಿದ್ರ ನಾಡಾಗಿ ಕಂಡರೆ ಆಶ್ಚರ್ಯವಿಲ್ಲ"[೨೮] ಎಂಬ ಪಿ.ಲಂಕೇಶರ ನಿಲುವುಗಳು ಜಾಗತಿಕ ಸಮಸ್ಯೆಗಳಿಗೆ ಬುದ್ಧನ ಶಾಂತಿಯ ಧರ್ಮದ ಮೂಲಕವಾಗಿ ಪರಿಹಾರವನ್ನು ಕಂಡುಕೊಳ್ಳುವ ನೆಲೆಯಲ್ಲಿ ವ್ಯಕ್ತವಾಗಿವೆ. ಹೀಗೆ ಕನ್ನಡದ ಹಲವಾರು ಚಿಂತನಧಾರೆಗಳು ಬುದ್ಧಧರ್ಮದ ಅಡಿಯಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಬಿತ್ತರಿಸಿರುವ ಬಗೆಯನ್ನು ಈ ಮುಂದಿನಂತೆ ನೋಡಬಹುದು.

ಕನ್ನಡದ ಬೌದ್ಧ ಚಿಂತಕರಾದ ಜಿ.ವಿ.ಆನಂದಮೂರ್ತಿಯವರು ಆಧ್ಯಾತ್ಮಿಕ ನೆಲೆಗಟ್ಟಿನಲ್ಲಿ ಜಾಗತಿಕ ಶಾಂತಿಯನ್ನು ಕಂಡುಕೊಳ್ಳುವ ನೆಲೆಯಲ್ಲಿ ಚಿಂತನೆಗಳನ್ನು ವ್ಯಕ್ತಪಡಿಸಿದ್ದಾರೆ. ಈ ಆಧ್ಯಾತ್ಮಿಕ ನೆಲೆಗೆ ಅವರು ಬೌದ್ಧ ದರ್ಶನದಲ್ಲಿ ಪರಿಹಾರವನ್ನು ಸೂಚಿಸುತ್ತಾರೆ. "ಬೌದ್ಧಧರ್ಮ ಕೇವಲ ವ್ಯಕ್ತಿಯೊಬ್ಬನ ಮೋಕ್ಷದ ಹಾದಿ ಅಲ್ಲ. ಎಲ್ಲ ಜೀವಿಗಳ ಸುಖದಲ್ಲಿಯೇ ತನ್ನ ಸುಖವನ್ನು ಕಾಣುವ, ಎಲ್ಲರ ಬಿಡುಗಡೆಯಲ್ಲೇ ತನ್ನ ಬಿಡುಗಡೆಯನ್ನು ಕಾಣುವ ಸಾಮಾಜಿಕ ಸಂಘಟನೆಯ ಸ್ವರೂಪವನ್ನು ಪಡೆದಿದೆ. ಈ ಅರ್ಥದಲ್ಲೇ 'ಸಂಘಂ ಶರಣಂ ಗಚ್ಛಾಮಿ' ಎಂದು ಬುದ್ಧದೇವ ಹೇಳಿರುವುದು."[೨೯] ಆದ್ದರಿಂದ ಈತನ ಧರ್ಮವು ಜಾಗತಿಕ ಮಟ್ಟದಲ್ಲಿ ಹಲವಾರು ಸಮಸ್ಯೆಗಳಿಗೆ ಸ್ಪಂದಿಸುತ್ತ ಬಂದಿದೆ. ಇಂದು ದಿನದಿಂದ ದಿನಕ್ಕೆ ಸೃಷ್ಟಿಯಾಗುತ್ತಿರುವ ಆತಂಕಕಾರಿ ಸಮಸ್ಯೆಗಳಾದ ಯುದ್ಧನೀತಿ, ಭಯೋತ್ಪಾದನೆ, ಕೋಮುಸಂಘರ್ಷದಂತಹ ಜಾಗತಿಕ ಸಮಸ್ಯೆಗಳಿಗೆ ಬುದ್ಧನ ಈ ತತ್ವ ಸಿದ್ಧಾಂತಗಳು ಅತ್ಯಂತ ಪರಿಣಾಮಕಾರಿ ಸಿದ್ಧೌಷಧಗಳು ಎಂಬುದಾಗಿ ಪ್ರತಿಕ್ರಿಯಿಸಿದ್ದಾರೆ.

ಸನಾತನವಾದಿ ಮನಸ್ಸುಗಳು ಸಮಕಾಲೀನ ಸಂದರ್ಭದಲ್ಲಿ ಸೃಷ್ಟಿಸುತ್ತಿರುವ ಸಾಮಾಜಿಕ ಅಸಮಾನತೆಯನ್ನು ವಿರೋಧಿಸಿ, ಬುದ್ಧನ ಶಾಂತಿಯುತ ಧರ್ಮದಲ್ಲಿ ಪರಿಹಾರವನ್ನು ಬಯಸುವ ಚಿಂತನಧಾರೆಗಳು ಕನ್ನಡದಲ್ಲಿವೆ. ಭಾರತದಲ್ಲಿನ ಸಾಮಾಜಿಕ ಅಸಮಾನತೆಯ ಪ್ರಸ್ತಾಪ ಮಾಡುವಾಗ ಅಂಬೇಡ್ಕರ್ ಬುದ್ಧ ಪ್ರಣೀತ ಚಿಂತನೆಗಳು ಹೆಚ್ಚು ಹೆಚ್ಚು ಪ್ರಸ್ತುತವಾಗುತ್ತವೆ. "ಇಂದು ಮತ್ತೇ ಅಸ್ಪೃಶ್ಯತೆ, ಜಾತಿಪ್ರಜ್ಞೆ, ಲಿಂಗಭೇದ, ಭಯೋತ್ಪಾದನೆ, ಕೋಮುವಾದ ಹೀಗೆ ಅನೇಕ ಕ್ರೌರ್ಯವು ಮನುಷ್ಯರನ್ನು ಕಂಗೆಡಿಸತೊಡಗಿವೆ. ಧಾರ್ಮಿಕ ಮೂಲಭೂತವಾದಿಗಳು ಸನಾತನ ಸಂಪ್ರದಾಯದ ಮೌಢ್ಯಗಳನ್ನು ಈ ನೆಲೆದಲ್ಲಿ ಬಿತ್ತಿ ಬೆಳೆಯಲು ತವಕಿಸುತ್ತಿದ್ದಾರೆ."[೩೦] ಇಂತಹ ಸಂದರ್ಭದಲ್ಲಿ ಬುದ್ಧನ ವಿಶ್ವಮಾನವತ್ವದ ನೆಲೆಯಲ್ಲಿ ಈ ಕ್ರೌರ್ಯಗಳಿಗೆ ಪರಿಹಾರವನ್ನು ಕಂಡುಕೊಳ್ಳಬೇಕಾದ ಅನಿವಾರ್ಯತೆ ಇಲ್ಲಿ ಕಂಡುಬರುತ್ತದೆ. ಅಂಬೇಡ್ಕರ್ ನೆಲೆಯ ಧಾರೆಗಳು ಸಮಾಜದಲ್ಲಿ ಅಸಮಾನ ನೆಲೆಯಲ್ಲಿ ಸೃಷ್ಟಿಯಾಗಿರುವ ವರ್ಣಧರ್ಮ ಹಾಗೂ ಜಾತೀಯತೆಯನ್ನು ಮೀರುತ್ತಲೇ, ಜಾಗತಿಕ ಮಟ್ಟದಲ್ಲಿ ಸೃಷ್ಟಿಯಾಗುತ್ತಿರುವ ಯುದ್ಧನೀತಿ ಹಾಗೂ ಕೋಮುಸಂಘರ್ಷವನ್ನು ಮೀರುವ ನೆಲೆಯಲ್ಲಿ ಬೌದ್ಧ ಚಿಂತನೆಗಳು ಅನುಸಂಧಾನಗೊಳ್ಳುತ್ತಿವೆ.

ಪ್ರಗತಿಪರ ಚಿಂತಕರಾದ ಕೆ.ಎಸ್.ಭಗವಾನರು ಬುದ್ಧನನ್ನು ಕೋಮುಸೌಹಾರ್ದತೆಯ ಪ್ರತೀಕವಾಗಿ ಸ್ವೀಕರಿಸಿದ್ದಾರೆ. ಇಂದು ವಿಶ್ವಮಟ್ಟದಲ್ಲಿ ಹೆಸರು ಮಾಡಿರುವ ಧರ್ಮಗಳಲ್ಲಿನ ಮೂಲಭೂತವಾದಿ ಧೋರಣೆಗಳು ಹಾಗೂ ಇಲ್ಲಿನ ಸ್ಥಾಪಿತ ನಿಲುವುಗಳನ್ನು ವಿರೋಧಿಸುವ ಭಾಗವಾಗಿ ಅವರು ಬೌದ್ಧ ದರ್ಶನದಲ್ಲಿನ ಜೀವಪರವಾದ ಅಂಶಗಳನ್ನು ಎತ್ತಿಹಿಡಿಯುತ್ತಾರೆ. ಪ್ರಸ್ತುತ ಸಂದರ್ಭದಲ್ಲಿ ಧರ್ಮವನ್ನು ಮುಂದಿಟ್ಟುಕೊಂಡು ಸಮಾಜದಲ್ಲಿ ಅಶಾಂತಿ ಹಾಗೂ ಕೋಮುಸಂಘರ್ಷಗಳು ದಿನದಿಂದ ದಿನಕ್ಕೆ ಅಧಿಕವಾಗುತ್ತಿವೆ. ಇಂತಹ ಸಂದರ್ಭದಲ್ಲಿ ಮೂಲಭೂತವಾದಿಗಳು ಧರ್ಮದ ಅಡಿಯಲ್ಲಿ ಸೃಷ್ಟಿಸಿಕೊಂಡು ಬಂದಿರುವ ನಿಲುವುಗಳನ್ನಿಟ್ಟು ಪ್ರಸ್ತಾಪಕ್ಕೆ ಒಳಪಡಿಸಿದ್ದಾರೆ. ಬೌದ್ಧಧರ್ಮವನ್ನು ಹೊರತುಪಡಿಸಿ, ಇತರೆ ಧರ್ಮಗಳಲ್ಲಿ ನೆಲೆಯೂರಿರುವ ಮೂಲಭೂತವಾದಿ ಧೋರಣೆಗಳನ್ನು ಅವರು ಈ ಮುಂದಿನಂತೆ

ಗುರುತಿಸಿದ್ದಾರೆ: “ಸಾಮಾನ್ಯವಾಗಿ ಪ್ರತಿಯೊಂದು ಧರ್ಮವೂ ಬೇರೆ ಮತದವರನ್ನು ತಮ್ಮ ಸಮಾನರಲ್ಲ, ತಮ್ಮಂತೆ ಮನುಷ್ಯರಲ್ಲ ಎಂಬ ಭಾವನೆಯನ್ನು ತಮ್ಮ ಅನುಯಾಯಿಗಳ ಮನಸ್ಸಿನಲ್ಲಿ ಬಿತ್ತಿವೆ ಎಂದು ತಿಳಿದುಬರುವುದು. ಕ್ರೈಸ್ತಮತ ಕ್ರಿಸ್ತೀಯರಲ್ಲದವರನ್ನು ‘ಪೇಗನ್’ ಎನ್ನುತ್ತದೆ. ಇಸ್ಲಾಂ ತನ್ನಲ್ಲಿ ನಂಬಿಕೆ ಇಡದವರನ್ನು ‘ಕಾಫಿರ್’ ಎಂದು ಕರೆಯುವುದು. ಬ್ರಾಹ್ಮಣಧರ್ಮ ಅರ್ಥಾತ್ ಹಿಂದೂಧರ್ಮ ಚಾತುರ್ ವರ್ಣಗಳನ್ನು ಒಪ್ಪದ ಜನರನ್ನು ‘ಪಾಖಂಡಿ’ ಎಂದು ಹೇಳುತ್ತದೆ. ಈ ಎಲ್ಲಾ ಶಬ್ದಗಳ ಅರ್ಥ ಹೆಚ್ಚು ಕಡಿಮೆ ಒಂದೇ ಆಗಿರುವುದು. ಅಂದರೆ ಎಲ್ಲ ಮತಗಳೂ ಮನುಷ್ಯ ವಿರೋಧಿಗಳಾಗಿವೆ. ಆದರೆ ಬುದ್ಧಧರ್ಮ ಈ ಅಸಹಜ ಭಾವನೆಯನ್ನು ತಾಳದೆ ಎಲ್ಲರೂ ಒಂದು ಎಂದು ಭಾವಿಸಿ ಆಚರಿಸುತ್ತಿದೆ.”[೩೧] ಆದ್ದರಿಂದ ಈ ಧರ್ಮವು ವಿಶ್ವಮಾನವತ್ವದ ತಳಹದಿಯ ಮೇಲೆ ರೂಪಿತವಾಗಿದೆ. ಇಲ್ಲಿ ಯಾವುದೇ ಮತಬೇಧ, ಕಟ್ಟುಪಾಡುಗಳ ನಿರ್ಬಂಧವಿಲ್ಲ. ಸರ್ವರನ್ನು ಮಾನವೀಯ ದೃಷ್ಟಿಕೋನದಿಂದ ಕಾಣುವ ಏಕೈಕ ಧರ್ಮವಾಗಿ ಕಂಡುಬರುತ್ತದೆ ಎಂಬುದಾಗಿ ಭಗವಾನರು ವಿಶ್ಲೇಷಣೆ ಮಾಡುತ್ತಾರೆ. ಇಲ್ಲಿ ಭಗವಾನ್ ಅವರು ಬುದ್ಧ ಧರ್ಮದಲ್ಲಿ ಅಂತರ್ಗತವಾಗಿರುವ ಶಾಂತಿ, ಕರುಣೆ, ಮೈತ್ರಿಯಂತಹ ವಿಶಾಲ ದೃಷ್ಟಿಕೋನಗಳನ್ನು ಎತ್ತಿಹಿಡಿಯುವ ಮೂಲಕ, ಇತರೆ ಧರ್ಮಗಳಲ್ಲಿ ಕಂಡುಬರುವ ಜೀವವಿರೋಧಿ ಅಂಶಗಳನ್ನು ಗುರುತಿಸಿದ್ದಾರೆ. ಧರ್ಮದ ನೆಪವೊಡ್ಡಿ ಮನುಕುಲದಲ್ಲಿ ಸೃಷ್ಟಿಯಾಗಿರುವ, ಅಶಾಂತಿ ಹಾಗೂ ಕೋಮುಸಂಘರ್ಷದಂತಹ ಹೀನ ಪ್ರವೃತ್ತಿಗಳನ್ನು ವಿರೋಧಿಸುವ ಭಾಗವಾಗಿಯೂ, ಬೌದ್ಧ ದರ್ಶನವನ್ನು ಕೇಂದ್ರವಾಗಿಟ್ಟುಕೊಂಡು ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಜಗತ್ತಿನ ಇತರೆ ರಾಷ್ಟ್ರಗಳಾದ ಮಲೇಷಿಯದಲ್ಲಿ ಮುಸಲ್ಮಾನರನ್ನು, ಶ್ರೀಲಂಕಾದಲ್ಲಿ ಅಲ್ಲಿನ ಮೂಲನಿವಾಸಿ ತಮಿಳರ ಮೇಲೆ ಕ್ರೌರ್ಯವನ್ನು ಸಾಧಿಸುವ ಮೂಲಕ ರಕ್ತಪಾತವನ್ನು ಹರಿಸುತ್ತಿರುವ ಬೌದ್ಧಧರ್ಮಿಯರ ಕ್ರಮಗಳು ಮಾತ್ರ ಕೋಮುವಾದಿ ಎಂದು, ಇವರಲ್ಲೂ ಕಂಡುಬರುವ ಭಯೋತ್ಪಾದನ ನೆಲೆಗಳನ್ನು ಮಾತ್ರ ಪ್ರಸ್ತಾಪಿಸುವುದಿಲ್ಲ. ಇವರು ತಮ್ಮ ಬೌದ್ಧ ಚಿಂತನೆಗಳನ್ನು ಹಿಂದುತ್ವದ ವಿರುದ್ಧ ಅಸ್ತ್ರವಾಗಿ ಬಳಕೆ ಮಾಡುತ್ತಾರೆ.

ಕನ್ನಡದ ಹಲವಾರು ಪ್ರಗತಿಪರ ಚಿಂತನಧಾರೆಗಳು ಹಿಂದೂಧರ್ಮದಲ್ಲಿನ ಅಸಮಾನತೆಯನ್ನು ಮೀರುವ ನೆಲೆಯಲ್ಲಿ ಚಿಂತನೆಗಳು ಮೂಡಿಬಂದಿವೆ. ಈ ಸಾಮಾಜಿಕ ಅಸಮಾನತೆಯನ್ನು ಮೀರಲು ಬುದ್ಧನ ದಾರ್ಶನಿಕತೆಯನ್ನು ಪ್ರಬಲ ಅಸ್ತ್ರವಾಗಿ ಬಳಸಿಕೊಳ್ಳಲಾಗಿದೆ. ಭಾರತದಲ್ಲಿ ಅಸಮಾನತೆಯನ್ನು ಸೃಷ್ಟಿಸಿಕೊಂಡು ಬಂದಿರುವ ಸನಾತನವಾದಿ ಮನಸ್ಸುಗಳು ಇಂದು ಕೋಮುವಾದ, ಜಾತೀಯತೆಯನ್ನು ಪ್ರಬಲಗೊಳಿಸುವ ತಂತ್ರಗಾರಿಯನ್ನು ರೂಪಿಸುತ್ತಿವೆ. ಇದರಿಂದ ತಳಸಮುದಾಯಗಳ ಜಾತಿಯಲ್ಲಿ ಬಿರುಕುಗಳು ಸೃಷ್ಟಿಯಾಗುತ್ತಿವೆ. ಜಾತಿಯತೆಯನ್ನು ತೊಡೆಯಬೇಕಾದ ಶಿಕ್ಷಿತರು ಜಾತಿಯತೆಯನ್ನು ಪ್ರಬಲಗೊಳಿಸುವ ಹಾದಿಯಲ್ಲಿ ಮುನ್ನೆಡೆಯುತ್ತಿದ್ದಾರೆ. ಈ ಎಲ್ಲಾ ಕಾರ್ಯವೈಖರಿಯ ಹಿಂದೆ ಸನಾತನವಾದಿಗಳ ಕೈವಾಡ ಕಂಡುಬರುತ್ತದೆ. ಈ ಕಾರಣದಿಂದಾಗಿ ಕನ್ನಡದ ಬಹುತೇಕ ವಿಚಾರಧಾರೆಗಳು ಸನಾತನವಾದದ ಸಂಘರ್ಷದಿಂದಾಗಿ ಸಮಾಜದಲ್ಲಿ ಶಾಂತಿಯನ್ನು ಕಾಪಾಡಲು ಬೌದ್ಧ ಚಿಂತನೆಗಳ ಮೂಲಕ ಪರಿಹಾರವನ್ನು ಕಂಡುಕೊಳ್ಳುತ್ತಿರುವುದಾಗಿ ತಿಳಿದುಬರುತ್ತದೆ. “ಹಿಂದೂಧರ್ಮದ ಮೂಲ

ಸಿದ್ಧಾಂತವೇ ಜೀವವಿರೋಧಿ ನೆಲೆಯಿಂದ ಕೂಡಿರುವುದು. ಅದು ಕೇವಲ ಕೆಲವೇ ಜನರ ಹಿತಕ್ಕಾಗಿ ಬಹುಜನರು ಶ್ರಮಿಸಬೇಕೆಂಬುದು. ಆದರೆ, ಯಾವುದೇ ಧರ್ಮವು ಸದ್ಧರ್ಮವಾಗಿರಬೇಕಾದರೆ, ಅಲ್ಲಿ ಮನುಷ್ಯ ಮನುಷ್ಯರ ನಡುವೆ ಅಸಮಾನತೆ ಅಳಿದು ಸಮಾನತೆ ನೆಲೆಗೊಳ್ಳಬೇಕು. ಸ್ವತಂತ್ರ, ಸಮಾನತೆ ಭ್ರಾತೃತ್ವಗಳಿಂದ ಬದುಕನ್ನು ಕಟ್ಟಿಕೊಳ್ಳುವಂತೆ ಆ ಧರ್ಮ ಪ್ರೇರೇಪಿಸಬೇಕು. ಸಾಮಾಜಿಕ ವಿಕಾರಗಳಾದ ಗುಲಾಮಗಿರಿ, ಶೋಷಣೆ, ಕ್ರೌರ್ಯ, ಯಜಮಾನಿಕೆ ಮುಂತಾದ ಮಾಲಿನ್ಯಗಳಿಂದ ಮನಸ್ಸನ್ನೂ ಮುಕ್ತಗೊಳಿಸಬೇಕು. ಪರಸ್ಪರ ಪ್ರೀತಿ, ಆತ್ಮೀಯತೆ, ಸಹಕಾರಗಳ ಮೂಲಕ ಸಹಜೀವಿಗಳ ನೋವನ್ನು ನಿವಾರಿಸುವಂತಿರಬೇಕು. ಬರಿ ಪ್ರೀತಿಯೊಂದೇ ಸಾಲದು. ನಮಗೆ ಬೇಕಾದದ್ದು ಮೈತ್ರಿ. ಈ ಮೈತ್ರಿ ಪ್ರೀತಿಗಿಂತ ಹೆಚ್ಚು ಆಪ್ತವಾದದ್ದು. ಅದು ಮನುಷ್ಯರೊಂದಿಗೆ ನಿಸರ್ಗ ಸತ್ಯ ಮತ್ತು ಜೀವನ ಸತ್ಯಗಳನ್ನು ತಿಳಿಸಿದ ಬುದ್ಧ, ಮನುಷ್ಯ ಮತ್ತು ಮನಸ್ಸಿನ ಸಂಬಂಧವನ್ನು ಮತ್ತು ಮನುಷ್ಯ ಮನುಷ್ಯರ ನಡುವೆ ಇರಬೇಕಾದ ಸಂಬಂಧವನ್ನು ಲೋಕಕ್ಕೆ ತೋರಿಸಿಕೊಟ್ಟ. ಅಹಂಕಾರ ಮತ್ತು ಅಜ್ಞಾನವನ್ನು ಮನುಷ್ಯ ಸಮಾಜದ ಪರಮ ವೈರಿ ಎಂದ. ಧರ್ಮ ನಿರಾಪೇಕ್ಷತೆಯೇ ನಿಜವಾದ ಧರ್ಮವೆಂದು ಹೇಳಿದವನು"[೨೨] ಬುದ್ಧ ಎಂಬ ಚಿಂತನಧಾರೆಗಳು ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುತ್ತವೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಬುದ್ಧನ ಕುರಿತು ವ್ಯಕ್ತವಾಗಿರುವ ಬಹುತೇಕ ಚಿಂತನಧಾರೆಗಳು ಸಮಕಾಲೀನ ಸಂದರ್ಭದಲ್ಲಿ ಸೃಷ್ಟಿಯಾಗುತ್ತಿರುವ ಯುದ್ಧನೀತಿ, ಭಯೋತ್ಪಾದನೆ, ಕೋಮುಸಂಘರ್ಷವನ್ನು ವಿರೋಧಿಸುವ ನೆಲೆಯಲ್ಲಿ ಮೂಡಿಬಂದಿವೆ. ಈ ಚಿಂತನಧಾರೆಗಳ ಹಿಂದೆ ಸಾಮಾಜಿಕ ಕಾಳಜಿ ಅಡಗಿದೆ. ಸಮಕಾಲೀನ ಸಮಾಜದಲ್ಲಿ ಮಾನವ ಸಂಬಂಧಗಳು ಕಣ್ಮರೆಯಾಗುತ್ತಿವೆ. ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲಿ ಹೆಚ್ಚು ಪ್ರಗತಿಯನ್ನು ಕಂಡುಕೊಂಡಂತೆಲ್ಲ ಜಾಗತೀಕ ಮಟ್ಟದಲ್ಲಿ ಪೈಪೋಟಿಯು ನಡೆಯುತ್ತಿದೆ. ಇದರಿಂದಾಗಿ ಯುದ್ಧ, ಭಯೋತ್ಪಾದನೆ, ಆಕ್ರಮಣಕಾರಿಯಂತಹ ಅಪಾಯಕಾರಿ ವಾತಾವರಣವು ಸೃಷ್ಟಿಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ಜಾಗತಿಕ ಶಾಂತಿ ಹಾಗೂ ಸೌಹಾರ್ದತೆಯನ್ನು ಕಾಪಾಡುವ ನೆಲೆಯಲ್ಲಿ ಬುದ್ಧನ ಚಿಂತನೆಗಳೊಂದಿಗೆ ಅನುಸಂಧಾನಗೊಳಿಸುವ ಚಿಂತನಧಾರೆಗಳು ಕನ್ನಡ ಚಿಂತನ ಸಾಹಿತ್ಯದಲ್ಲಿ ಪ್ರಕಟವಾಗುತ್ತಿವೆ. ಬೌದ್ಧ ದರ್ಶನದ ಅಡಿಯಲ್ಲಿ ಸಾಮಾಜಿಕ ಶಾಂತಿ ಮತ್ತು ಸೌಹಾರ್ದತೆಯನ್ನು ಪ್ರತಿಪಾದಿಸುವ ಚಿಂತನೆಗಳು ಕನ್ನಡ ವಿಚಾರ ಸಾಹಿತ್ಯದಲ್ಲಿ ಎಪ್ಪತ್ತರ ದಶಕದ ತರುವಾಯದಲ್ಲಿ ಕೇವಲ ಅಂಬೇಡ್ಕರ್ ವಿಚಾರಗಳಿಂದ ಪ್ರಭಾವಿತವಾದವುಗಳಲ್ಲ. ಸ್ವಾತಂತ್ರ ಪೂರ್ವದ ಕನ್ನಡ ಸಾಹಿತ್ಯದಲ್ಲಿಯೂ ಈ ನೆಲೆಯ ಚಿಂತನೆಗಳು ಕಂಡುಬರುತ್ತವೆ. ನವೋದಯ ಸಾಹಿತ್ಯ ಕಾಲಘಟ್ಟದಿಂದ, ಸಮಕಾಲೀನ ಸಂದರ್ಭದ ಸಾಹಿತ್ಯದವರೆಗೆ ಇದರ ವಿಸ್ತೃತ ವ್ಯಾಪ್ತಿಯು ಕನ್ನಡ ಸಾಹಿತ್ಯದಲ್ಲಿ ಕಂಡುಬರುತ್ತದೆ. ಕೆಲವು ಚಿಂತನಧಾರೆಗಳು ಸೃಜನಶೀಲ ಸಾಹಿತ್ಯ ಪ್ರಕಾರಗಳಲ್ಲಿ ಬೌದ್ಧ ದರ್ಶನದ ಮೂಲಕ ಶಾಂತಿ ಹಾಗೂ ಸೌಹಾರ್ದತೆಯನ್ನು ಎತ್ತಿಹಿಡಿದರೆ, ಮತ್ತೇ ಕೆಲವು ಧಾರೆಗಳು ಸೃಜನೇತರ ಸಾಹಿತ್ಯದ ಮೂಲಕವಾಗಿ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸಿವೆ. ಈ ಮಾರ್ಗದಲ್ಲಿ ಬೌದ್ಧ ದರ್ಶನವನ್ನು ಕೇಂದ್ರವಾಗಿಟ್ಟುಕೊಂಡು ಸಾಹಿತ್ಯ ರಚನೆಗೆ ಮುಂದಾದವರಲ್ಲಿ

ಬಿ.ಎಂ.ಶ್ರೀ, ಕುವೆಂಪು, ಜಿ.ಪಿ.ರಾಜರತ್ನಂ, ಪಿ.ಲಂಕೇಶ್ ಮುಂತಾದವರು ಪ್ರಮುಖವಾಗಿ ಕಂಡುಬರುತ್ತಾರೆ. ಆದರೆ ಸಮಕಾಲೀನ ಸಮಾಜದ ಅಸಮಾನತೆಯ ವಿರುದ್ಧ ಬಂಡಾಯದ ನೆಲೆಯಲ್ಲಿ ಬೌದ್ಧ ದರ್ಶನವು ಕನ್ನಡ ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿರುವುದು ಎಪ್ಪತ್ತರ ದಶಕದ ತರುವಾಯದಲ್ಲಿ. ಈ ಧಾರೆಗಳು ಅಂಬೇಡ್ಕರ್ ವಿಚಾರಧಾರೆಗಳಿಂದ ಪ್ರಭಾವಿತವಾಗಿದ್ದು, ಹಿಂದೂಧರ್ಮದ ಅಸಮಾನತೆಯನ್ನು ವಿರೋಧಿಸುತ್ತ ಬಂದಿವೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಪ್ರಗತಿಪರ ಚಿಂತನಧಾರೆಗಳು ಬೌದ್ಧ ದರ್ಶನವನ್ನು ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುವ ನೆಲೆಯಲ್ಲಿ ಮೂಡಿಬಂದಿವೆ. ಈ ಧಾರೆಗಳು ಸಮಾಜದಲ್ಲಿನ ಹಲವಾರು ಸಮಸ್ಯೆಗಳನ್ನು ಗುರುತಿಸಿ, ಅವುಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ನೆಲೆಯಲ್ಲಿ ಬೌದ್ಧ ದರ್ಶನದೊಂದಿಗೆ ಅನುಸಂಧಾನಗೊಂಡಿವೆ. ಭಾರತದಲ್ಲಿ ಅನಾದಿ ಕಾಲದಿಂದಲೂ ಸಾಮಾಜಿಕ ಪಿಡುಗಿನಂತೆ ನೆಲೆಯನ್ನು ಕಂಡುಕೊಂಡಿರುವ ಜಾತೀಯತೆ, ಲಿಂಗ ತಾರತಮ್ಯದಂತಹ ಅಸಮಾನ ನೀತಿಯನ್ನು ವಿರೋಧಿಸುವುದಕ್ಕೆ, ಆ ಮೂಲಕವಾಗಿ ಈ ವರ್ಗಕ್ಕೆ ಸಮಾನತೆಯ ನೆಲೆಗಟ್ಟನ್ನು ರೂಪಿಸುವುದಕ್ಕಾಗಿ ಬಹುತೇಕ ಪ್ರಗತಿಪರ ಚಿಂತನಧಾರೆಗಳು ಬೌದ್ಧ ದರ್ಶನವನ್ನು ಆಶ್ರಯಿಸಿರುವುದು ಕಂಡುಬರುತ್ತದೆ. ಹಾಗೆಯೇ ಬದಲಾದ ಕಾಲಘಟ್ಟದಲ್ಲಿ ಸೃಷ್ಟಿಯಾಗುತ್ತಿರುವ ಯುದ್ಧನೀತಿ, ಭಯೋತ್ಪಾದನೆ, ಕೋಮುಸಂಘರ್ಷಗಳನ್ನು ತೊಡೆದು ಹಾಕಿ, ಜಾಗತಿಕ ಶಾಂತಿಯನ್ನು ಕಾಪಾಡುವುದಕ್ಕೆ ಬೌದ್ಧ ದರ್ಶನದತ್ತ ಬಹುತೇಕ ಚಿಂತನಧಾರೆಗಳು ಮುಖ ಮಾಡಿರುವುದು ಕಂಡುಬರುತ್ತದೆ.

ಕೊನೆ ಟಿಪ್ಪಣಿಗಳು

೧. ಮೂಡ್ನಾಕೂಡು ಚಿನ್ನಸ್ವಾಮಿ, ಮರಳಿ ಮನೆಗೆ, ಪು-೧೩೫

೨. ಸ್ವಾಮಿ ವಿವೇಕಾನಂದರ ಪತ್ರಮಾಲೆ, ಪು-೨೦

೩. ಬಿ.ಸುಜ್ಞಾನಮೂರ್ತಿ, ತಮಿಳು ಬೌದ್ಧ ದಲಿತ ಹೋರಾಟಗಾರ ಅಯೋತಿದಾಸ್, ಪು-೨೩

೪. ಆನಂದ ತೇಲ್‌ತುಂಬ್ಡೆ, ಅಂಬೇಡ್ಕರೋತ್ತರ ದಲಿತ ಸಂಘರ್ಷ ದಾರಿ-ದಿಕ್ಕು, ಪು-೪೯

೫. ಶ್ರೀಕಂಠ ಕೂಡಿಗೆ (ಸಂ), ದೇವರು ಸತ್ತ, ಪು-೪೧೮

೬. ಪಂಡಿತ ತಾರಾನಾಥ, ಧರ್ಮಸಂಭವ, ಪು-೭೯. ೮೦

೭. ಮರಳಿ ಮನೆಗೆ, ಪು- ೧೬೩

೮. ಮರಳಿ ಮನೆಗೆ, ಪು-೧೩೧

೯. ಮರಳಿ ಮನೆಗೆ, ಪು-೧೫೬

೧೦. ಮರಳಿ ಮನೆಗೆ, ಪು-೧೬೬

೧೧. ಮರಳಿ ಮನೆಗೆ, ಪು-೧೫೬

೧೨. ಜಿ.ಪಿ ಮಹೇಶ್ ಚಂದ್ರಗುರು, ಸಾಹಿತ್ಯ, ಮಹಿಳೆ ಮತ್ತು ಸಬಲೀಕರಣ, ಪು-೬೭

೧೩. ಮರಳಿ ಮನೆಗೆ, ಪು-೧೯೧, ೧೯೨

೧೪. ಮರಳಿ ಮನೆಗೆ, ಪು-೨೦೭

೧೫. ಶಿವಕುಮಾರ, ಅಂಬೇಡ್ಕರ್‌ವಾದ ಮತ್ತು ದಲಿತ ಸಾಹಿತ್ಯ, ಪು-೧೧೨, ೧೧೩

೧೬. ಸಾಹಿತ್ಯ, ಮಹಿಳೆ ಮತ್ತು ಸಬಲೀಕರಣ, ಪು-೧೧೩

೧೭. ಅಂಬೇಡ್ಕರ್‌ವಾದ ಮತ್ತು ದಲಿತ ಸಾಹಿತ್ಯ, ಪು-೧೧೩

೧೮. ಓ. ರಾಜಣ್ಣ, ಬುದ್ಧ ಧಮ್ಮ ಹಾಗೂ ಸಾಮಾಜಿಕ ಚಿಂತನೆಗಳು, ಪು-೩೩

೧೯. ಮರಳಿ ಮನೆಗೆ, ಪು- ೧೪೫

೨೦. ಬುದ್ಧ ಧಮ್ಮ ಹಾಗೂ ಸಾಮಾಜಿಕ ಚಿಂತನೆಗಳು, ಪು-v

೨೧. ಓಶೋ, ಬುದ್ದ ಮತ್ತು ಪರಂಪರೆ, ಪು-೨೭೮. ೨೭೯

೨೨. ಮರಳಿ ಮನೆಗೆ, ಪು-೧೫೮

೨೩. ಮರಳಿ ಮನೆಗೆ, ಪು-೧೯೪

೨೪. ಮ.ನ.ಜವರಯ್ಯ, ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ, ಪು-೩೭೮

೨೫. ಅದೇ, ಪು-೩೭೮

೨೬. ಮರಳಿ ಮನೆಗೆ, ಪು-೧೪೭

೨೭. ಬುದ್ಧ ಧಮ್ಮ ಹಾಗೂ ಸಾಮಾಜಿಕ ಚಿಂತನೆ, ಪು-೩೭

೨೮. ಪಿ.ಲಂಕೇಶ್, ಟೀಕೆ-ಟಿಪ್ಪಣಿ ಸಂ-೧, ಪು-೩೧೧

೨೯. ಮರಳಿ ಮನೆಗೆ, ಪು-೧೬೮

೩೦. ಮರಳಿ ಮನೆಗೆ, ಪು-೨೦೨

೩೧. ಕೆ.ಎಸ್.ಭಗವಾನ್, ಅನನ್ಯತೆ, ಪು-೯

೩೨. ವಿ.ಮುನಿವೆಂಕಟಪ್ಪ, ಮತಾಂತರ, ಪು-೧೭೯, ೧೮೦

* * *

ಅಧ್ಯಾಯ: ಆರು

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನದ ಧಾರ್ಮಿಕ ಆಯಾಮಗಳು

೧. ಅಸ್ಮಿತೆಯ ಶೋಧದ ನೆಲೆಗಳು

೨. ಆರಾಧನ ನೆಲೆಗಳು

೩. ಸಂಘಟನಾತ್ಮಕ ಅಥವಾ ಜಾಗೃತ ನೆಲೆಗಳು

೪. ಮೂಲಭೂತವಾದ ವಿರೋಧಿ ನೆಲೆಗಳು

೫. ದಾರ್ಶನಿಕ ಹಾಗೂ ವೈಚಾರಿಕ ನೆಲೆಗಳು

೬. ಹಿಂದುತ್ವದೊಂದಿಗೆ ಬೆಸೆಯುವ ನೆಲೆಗಳು

೭. ಬೌದ್ಧ ವಿರೋಧಿ ನೆಲೆಗಳು

೮. ಮತಾಂತರದ ನೆಲೆಗಳು

೯. ಆಚರಣಾತ್ಮಕ ನೆಲೆಗಳು

ಅಧ್ಯಾಯ : ಆರು

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನದ ಧಾರ್ಮಿಕ ಆಯಾಮಗಳು

ಕನ್ನಡ ಚಿಂತನ ಸಾಹಿತ್ಯದಲ್ಲಿ ಸಮಾಜದ ಹಲವಾರು ಸಮಸ್ಯೆಗಳಿಗೆ ಸಂಬಂಧಿಸಿದಂತಹ ಚರ್ಚೆಗಳು ನಿರಂತರವಾಗಿ ನಡೆಯುತ್ತ ಬಂದಿವೆ. ವಿಚಾರ ಅಥವಾ ಚಿಂತನ ಸಾಹಿತ್ಯವನ್ನು ಹಲವಾರು ಚಿಂತಕರು ತಮ್ಮ ಅಭಿವ್ಯಕ್ತಿ ಮಾಧ್ಯಮವಾಗಿ ಬಳಸಿಕೊಂಡಿದ್ದಾರೆ. ಇದರಿಂದ ಸಮಾಜದ ವಿವಿಧ ಕ್ಷೇತ್ರಗಳಲ್ಲಿನ ಸಮಸ್ಯೆಗಳನ್ನು ಚರ್ಚಿಸುವ ಮೂಲಕ ಹೋರಾಟ, ಚಳವಳಿಗೆ ಮುಂದಾಗಿದ್ದಾರೆ. ಬಹುತೇಕ ಚಿಂತನೆಗಳು ಸಾಮಾಜಿಕ ಅಸಮಾನತೆಯ ವಿರುದ್ಧ ಹೋರಾಡಲು ಚಿಂತನ ಸಾಹಿತ್ಯ ಪ್ರಕಾರವನ್ನು ಅಸ್ತ್ರವಾಗಿ ಬಳಸಿಕೊಂಡಿವೆ. ಇವುಗಳಲ್ಲಿ ಬೌದ್ಧದರ್ಶನವನ್ನು ಕೇಂದ್ರವಾಗಿಟ್ಟುಕೊಂಡಿರುವ ಚಿಂತನೆಗಳು ಕನ್ನಡ ಸಾಹಿತ್ಯದಲ್ಲಿ ವಿಪುಲವಾಗಿವೆ. ಕನ್ನಡ ಚಿಂತನ ಸಾಹಿತ್ಯವನ್ನು ಸಮಾಜದ ಹಲವಾರು ಸಮಸ್ಯೆಗಳನ್ನು ಚರ್ಚಿಸುವುದಕ್ಕೆ ಚಿಂತಕ ವರ್ಗವು ಬಳಸಿಕೊಂಡಿದೆ. ಪ್ರಸ್ತುತ ಅಧ್ಯಾಯದಲ್ಲಿ ಕನ್ನಡ ಚಿಂತನ ಸಾಹಿತ್ಯದಲ್ಲಿ ಪ್ರಕಟವಾಗಿರುವ ಬೌದ್ಧದರ್ಶನದ ಧಾರ್ಮಿಕ ಆಯಾಮಗಳನ್ನು ಚರ್ಚಿಸಲಾಗುವುದು.

ಕನ್ನಡ ಚಿಂತನ ಸಾಹಿತ್ಯದಲ್ಲಿ ದಲಿತ ಸಂಘರ್ಷ ಸಮಿತಿಯು ಅಸ್ತಿತ್ವಕ್ಕೆ ಬಂದ ತರುವಾಯ ಬೌದ್ಧದರ್ಶನದ ಕುರಿತ ಚಿಂತನೆಗಳು ಹೆಚ್ಚು ಹಾಗೂ ಭಿನ್ನ ನೆಲೆಯಲ್ಲಿ ಪ್ರಚಾರಕ್ಕೆ ಬಂದವು. ಇಲ್ಲಿನ ಬಹುತೇಕ ಚಿಂತನೆಗಳು ಬಾಬಾಸಾಹೇಬರಿಂದ ಪ್ರೇರಣೆ ಪಡೆದುಕೊಂಡವುಗಳಾಗಿವೆ. ಕನ್ನಡ ನಾಡಿನಲ್ಲಿ ಉಂಟಾದ ಬಿ.ಬಸವಲಿಂಗಪ್ಪನವರ 'ಬೂಸಾ ಪ್ರಕರಣ'ದ ತರುವಾಯ ದಲಿತರು ಹಾಗೂ ಹಿಂದುಳಿದವರು ಜಾಗೃತರಾಗತೊಡಗಿದರು. ಇದಕ್ಕೂ ಪೂರ್ವದ ಕನ್ನಡ ಚಿಂತನ ಸಾಹಿತ್ಯದಲ್ಲಿ ಅಂಬೇಡ್ಕರ್ ಚಿಂತನೆಯ ಪ್ರೇರಣೆ ಅಷ್ಟಾಗಿ ಕಂಡುಬರುವುದಿಲ್ಲ. ಹಾಗೆಯೇ ಬೌದ್ಧದರ್ಶನವನ್ನು ಕೇಂದ್ರವಾಗಿಟ್ಟುಕೊಂಡ ಹೋರಾಟದ ನೆಲೆಯ ಚಿಂತನೆಗಳೂ ಇರಲಿಲ್ಲ. ಇದಕ್ಕೂ ಮುಂಚೆ ಕನ್ನಡದ ಸಾಹಿತ್ಯದಲ್ಲಿ ಸ್ಥಾಪಿತ ಮಾದರಿಯ ಒಂದು ಭಾಗವಾಗಿ ಬುದ್ಧನ ಪರಿಚಯ ಎಲ್ಲರಿಗೂ ಇತ್ತು. ಕನ್ನಡದಲ್ಲಿ ವಿಚಾರವಾದದ ನೆಲೆಯಲ್ಲಿ ಬೌದ್ಧದರ್ಶನ ಹೆಚ್ಚು ಚರ್ಚಿತವಾಗುವುದೇ ೭೦ರ ದಶಕದ ತರುವಾಯ.

ಬೌದ್ಧದರ್ಶನವನ್ನು ಅಧ್ಯಯನಕ್ಕೆ ಒಳಪಡಿಸುವ ಸಂದರ್ಭದಲ್ಲಿ ಬೌದ್ಧ ನೆಲೆಯಲ್ಲಿ ಕನ್ನಡದಲ್ಲಿ ಕಂಡುಬರುವ ಧರ್ಮ ಮತ್ತು ದರ್ಶನಗಳ ನೆಲೆಗಳನ್ನು ಅಧ್ಯಯನ ಮಾಡುವುದು ಹೆಚ್ಚು

ಸೂಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಧರ್ಮದ ಸ್ವರೂಪವನ್ನು ಗಮನಿಸುವುದಾದರೆ, ಧರ್ಮವು ತನ್ನದೆ ಆದ ತಾತ್ವಿಕ ಹಾಗೂ ಸೈದ್ಧಾಂತಿಕ ನೆಲೆಗಟ್ಟನ್ನು ಒಳಗೊಂಡಿರುತ್ತದೆ. ಈ ತತ್ವವಿಲ್ಲದ ಧರ್ಮವು ನೈತಿಕವಾಗಿ ಸದೃಢವಾಗಿರಲು ಸಾಧ್ಯವಿಲ್ಲ. ಧರ್ಮ ಮತ್ತು ತತ್ವಗಳು ಒಂದರೊಳಗೊಂದು ರಾಜಕೀಯ ಪ್ರಜ್ಞೆಯ ಭಾಗವಾಗಿ ಬೆರೆತುಕೊಂಡು ಕಾರ್ಯಪ್ರವೃತ್ತವಾದಾಗ ಮಾತ್ರ ಅದು ಸಾಮಾಜಿಕ ಸಂವೇದನೆಗಳಿಗೆ ತುಡಿಯುತ್ತದೆ. ತಮ್ಮ ಸಮಕಾಲೀನ ಜನತೆಗೆ ಸ್ಪಂದಿಸಿ ಸಾರ್ವಕಾಲಿಕವಾದ ಅನನ್ಯತೆಯನ್ನು ಪಡೆದುಕೊಳ್ಳುತ್ತದೆ. "ಧರ್ಮಕ್ಕೆ ತತ್ತ್ವದ ಬೀಜವೇ ಮೂಲವಾಗಿದ್ದಲ್ಲಿ ಅದು ತಾನಾಗಿ ನಿಲ್ಲಲು ಅರ್ಹವಾಗಿರಬೇಕು, ಬೆಳೆಯಬೇಕು. ಗಿಡವು ಬೆಳೆಯುವುದೆಂದರೆ ಬುಡವು ಹಬ್ಬುವುದು; ಬುಡವು ಹಬ್ಬಿದಂತೆ ಗಿಡವೂ ಬೆಳೆಯುವುದು. ಇವನ್ನು ವಿಂಗಡಿಸಲಾಗುವುದಿಲ್ಲ. ಧರ್ಮವೂ ನಿಜವೇ ಆಗಿರುವಲ್ಲಿ ತತ್ತ್ವವೂ ಅದರಲ್ಲಿಯೇ ಇರಬೇಕು. ಅದು ಹಬ್ಬಿದಂತೆ ತತ್ತ್ವವೂ ಬಲಗೊಳ್ಳುವುದು"[1] ಎಂಬುದು ಪಂಡಿತ ತಾರನಾಥರ ಗ್ರಹಿಕೆ. ಹೀಗೆ ಧರ್ಮವು ನಿಜಾರ್ಥದಲ್ಲಿ ತನ್ನ ಶ್ರೇಷ್ಠತೆಯನ್ನು ಮೆರೆಯಬೇಕಾದರೆ ಅದು ತನ್ನದೆ ಆದ ಸಾಮಾಜಿಕ, ರಾಜಕೀಯ ತಾತ್ವಿಕತೆಯನ್ನು ಒಳಗೊಂಡಿರಬೇಕು. ಆಗ ಮಾತ್ರ ಅದು ಸಾರ್ವತ್ರಿಕವಾದ ಮನ್ನಣೆಯನ್ನು ಪಡೆಯುತ್ತದೆ. ಆದರೆ ಬಹುತೇಕ ಧರ್ಮಗಳು ಆ ಧರ್ಮದ ಮತ ಪ್ರವರ್ತಕರ ತರುವಾಯದಲ್ಲಿ ತನ್ನ ಧರ್ಮದ ಮೂಲ ತತ್ತ್ವಗಳಿಗೆ ವಿರುದ್ಧವಾಗಿ ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ಮೂಲಭೂತವಾದ ಸ್ವರೂಪವನ್ನು ಪಡೆದುಕೊಂಡಿವೆ. ಇಂತಹ ಮೂಲಭೂತವಾದ ಅಥವಾ ಸ್ಥಾಪಿತ ನೆಲೆಯ ಧರ್ಮದಲ್ಲಿ ತತ್ತ್ವಗಳು ಮೂಲೆಗುಂಪಾಗಿ, ಕೇವಲ ಧಾರ್ಮಿಕವಾದ ಆಚರಣ ವಿಧಾನಗಳು ಅಸ್ತಿತ್ವದಲ್ಲಿರುವುದು ಕಂಡುಬರುತ್ತದೆ. ಇಂತಹ ಧರ್ಮಗಳು ಯಾವುದೇ ಒಂದು ವರ್ಗ ಅಥವಾ ಸಮುದಾಯಕ್ಕೆ ಸೀಮಿತವಾಗಿದ್ದು, ಸಾರ್ವತ್ರಿಕ ಮನ್ನಣೆ ಗಳಿಸುವಲ್ಲಿ ವಿಫಲವಾಗುತ್ತವೆ. ಇದರಿಂದ ಸಮಾಜದಲ್ಲಿ ಶಾಂತಿಯು ನೆಲೆಯೂರುವ ಬದಲು ಅಶಾಂತಿ, ಕೋಮುಸಂಘರ್ಷಗಳು ತಾಂಡವವಾಡುತ್ತವೆ.

ಧರ್ಮವು ವಿಶಾಲಾರ್ಥವನ್ನು ಹೊಂದಿದ್ದು, ತನ್ನದೆ ಆದ ಪಾರಿಭಾಷಿಕ ನೆಲೆಗಳನ್ನು ಹೊಂದಿದೆ. ಹಿಂದಿನಿಂದಲೂ ಹಲವಾರು ತತ್ತ್ವಜ್ಞಾನಿಗಳು ಹಾಗೂ ಚಿಂತಕರು 'ಧರ್ಮ' ಎಂಬ ಪದಕ್ಕೆ ಅರ್ಥವಿವರಣೆ ನೀಡಲು ಪ್ರಯತ್ನಿಸುತ್ತಲೇ ಇದ್ದಾರೆ. ಆದರೆ ಈ ಪರಿಭಾಷೆಗೆ ನಿಖರವಾದ ಅರ್ಥವಿವರಣೆ ನೀಡಲು ಇನ್ನೂ ಸಾಧ್ಯವಾಗಿಲ್ಲ. ಇದಕ್ಕೆ ಕಾರಣ, ಈ ಪರಿಭಾಷೆಗಿರುವ ವಿಶಾಲಾರ್ಥಗಳು. ಜನಸಾಮಾನ್ಯರ ಅರ್ಥದಲ್ಲಿ ನ್ಯಾಯ, ನೀತಿ, ದಾನ, ಅಂತಃಕರಣ, ಕರುಣೆ, ಅಹಿಂಸೆ, ಸಹಿಷ್ಣುತೆ, ಪ್ರೀತಿ, ಮಮಕಾರ, ವಾತ್ಸಲ್ಯ, ಪರೋಪಕಾರ ಇವೆಲ್ಲವೂ ಧರ್ಮದ ಚೌಕಟ್ಟಿನಲ್ಲಿ ಬಳಕೆಯಲ್ಲಿರುವುದನ್ನು ಗುರುತಿಸಬಹುದಾಗಿದೆ. ಇವರಿಗೆ ಯಾವೊಬ್ಬ ಮತಸ್ಥಾಪಕನು ಸಿದ್ಧಪಡಿಸಿರುವ ಸ್ಥಾಪಿತ ನೆಲೆಯ ಧರ್ಮವಷ್ಟೇ ಧರ್ಮವಲ್ಲ, ಬದುಕಿನ ಒಂದು ನೈತಿಕ ಕ್ರಮವು ಕೂಡ ಧರ್ಮವಾಗಿ ಕಂಡುಬರುತ್ತದೆ. ಜನಪದರು ಅಥವಾ ಜನಸಾಮಾನ್ಯರು ಧರ್ಮದ ನೆಲೆಗಟ್ಟುಗಳನ್ನು ಯಾವುದೇ ಕೃತಿಯನ್ನು ಆಧಾರವಾಗಿಟ್ಟುಕೊಂಡು ರೂಢಿಸಿಕೊಂಡಿರುವುದಿಲ್ಲ. ತಮ್ಮ ಸಹಜ ಬದುಕಿನ ದೈನಂದಿನ ಕ್ರಿಯೆಗಳಲ್ಲಿಯೇ ಈ ಧರ್ಮವನ್ನು ಅರಿತು, ಅದನ್ನು ಪಾಲಿಸಿಕೊಂಡು ಬಂದಿದ್ದಾರೆ.

ಸ್ಥಾಪಿತ ಧರ್ಮವೆಂಬುದು ಆಳುವ ವರ್ಗದ ಆಸಕ್ತಿ–ಆಸ್ಥೆಗಳನ್ನು ಕಾನೂನುಬದ್ಧಗೊಳಿಸುವುದು. ಹಾಗೆಯೇ ಶೋಷಿತ–ದುಃಖಿತ ವರ್ಗವನ್ನು ತನ್ನ ದಯನೀಯ ಸ್ಥಿತಿಯಲ್ಲಿಯೇ ತೃಪ್ತಿಪಟ್ಟುಕೊಳ್ಳುವಂತೆ ಮಾಡುವುದು ಎಂದು ಮಾರ್ಕ್ಸ್ ಧರ್ಮವನ್ನು ದೂಷಿಸಿದ್ದಾರೆ. "ಮಾನವನು ಧರ್ಮವನ್ನು ಸೃಷ್ಟಿಸುತ್ತಾನೆ, ಆದರೆ ಧರ್ಮ ಮಾನವನನ್ನು ಸೃಷ್ಟಿಸದು. ಧಾರ್ಮಿಕ ನರಳಾಟ ಎಂಬುದು ನಿಜವಾದ ನರಳಾಟದ ಪ್ರಕಟಿತ ರೂಪ ಮಾತ್ರವಲ್ಲ, ಅದು ನಿಜವಾದ ನರಳಾಟದ ವಿರೋಧಿಯೂ ಹೌದು. ಧರ್ಮವೆಂಬುದು ದೌರ್ಜನ್ಯಕ್ಕೆ ಬಲಿಯಾದ ಪಶುವಿನ ನಿಟ್ಟುಸಿರು, ಹೃದಯಹೀನ ಪ್ರಪಂಚದ ಭಾವಾತಿರೇಕ, ಆತ್ಮಹೀನ ಪರಿಸ್ಥಿತಿಗಳ ಆತ್ಮವಿದ್ದಂತೆ. ಅದು ಮಂದಿಗೆ ಮತ್ತು ಬರಿಸುವ ಮಾದಕ ವಸ್ತು. ಈಗ ಕೂಡಲೇ ಆಗಬೇಕಾದ್ದೇನೆಂದರೆ, ಮಾನವ ಅನಾಥತೆಯ ಅಥವಾ ಪರಕೀಯತೆಯ ಮುಸುಗನ್ನು ಕಿತ್ತೆಸೆಯುವುದು. ಆಗ ಸ್ವರ್ಗದ ವಿಮರ್ಶೆ ಎಂಬುದು ಭೂಮಿಯ ವಿಮರ್ಶೆಯಾಗಿ ರೂಪಾಂತರಗೊಳ್ಳುವುದು. ಧರ್ಮದ ವಿಮರ್ಶೆ ಎಂಬುದು ಕಾನೂನಿನ ವಿಮರ್ಶೆಯಾಗುವುದು. ಆಧ್ಯಾತ್ಮ ವಿದ್ಯೆಯ ವಿಮರ್ಶೆ ಎಂಬುದು ರಾಜಕಾರಣದ ವಿಮರ್ಶೆಯಾಗುವುದು"[೨] ಎಂಬುದು ಮಾರ್ಕ್ಸ್‌ನ ನಿಲುವಾಗಿದೆ. ಕಾರ್ಲ್‌ಮಾರ್ಕ್ಸ್ ಧರ್ಮವನ್ನು ಮುಕ್ತನೆಲೆಯಲ್ಲಿ ಸ್ವೀಕರಿಸದೆ ಅದನ್ನು ವಿಮರ್ಶೆಗೆ ಒಳಪಡಿಸಿದಾಗ ಮಾತ್ರ ಧರ್ಮದ ನೈಜತೆಯು ಅರ್ಥವಾಗುತ್ತದೆ ಎಂಬುದಾಗಿ ತನ್ನ ವಾದವನ್ನು ಮಂಡಿಸುತ್ತಾರೆ. ಇದುವರೆಗೂ ಧರ್ಮದ ಅಡಿಯಲ್ಲಿ ಮೂಲಭೂತವಾದಿಗಳು ಸಾಮಾನ್ಯ ಜನತೆಯನ್ನು ನಡೆಸಿಕೊಂಡು ಬಂದಿರುವ ಕ್ರಮವನ್ನರಿತ ಇವರು ಇಂತಹ ಧರ್ಮವನ್ನು ಮೀರುವ ನೆಲೆಯನ್ನು ಜನತೆಯ ಮುಂದಿಡುತ್ತಾರೆ. ಈ ವಿಮರ್ಶೆಯು ಸ್ಥಾಪಿತ ನೆಲೆಯ ಧರ್ಮಕ್ಕೆ ಬಹುದೊಡ್ಡ ಪೆಟ್ಟಾಗಿದ್ದು, ವಿಚಾರವಾದದ ಮೂಲಕ ಸಮಾಜವನ್ನು ಎಚ್ಚರಿಸುವ ನೆಲೆಯಲ್ಲಿ ಸಮಕಾಲೀನ ಸಂದರ್ಭದ ವಾಸ್ತವದ ನೆಲೆಯಲ್ಲಿ ತನ್ನ ವಾದವನ್ನು ಮಂಡಿಸುತ್ತದೆ. ಈತ ಧರ್ಮವನ್ನು 'ಅಫೀಮು' ಎಂದು ಕರೆಯುವುದು ಈ ವಿಮರ್ಶಾ ನೆಲೆಯಲ್ಲಿಯೇ. ಧರ್ಮಗಳು ಹಾಗೂ ಧರ್ಮದ ಅಡಿಯಲ್ಲಿ ಜೀವನ ಸಾಗಿಸುವ ವರ್ಗವೊಂದು ತನ್ನ ಅಸ್ತಿತ್ವದ ಉಳಿವಿಗಾಗಿ ಸ್ವರ್ಗ, ನರಕಗಳ ಪರಿಕಲ್ಪನೆಯನ್ನು ಹುಟ್ಟಿಹಾಕಿ, ಸಾಮಾನ್ಯ ಜನತೆಯನ್ನು ಈ ಧರ್ಮಗಳ ಅಡಿಯಾಳಾಗಿಸಿಕೊಂಡು ಮುನ್ನಡೆಯುತ್ತಿರುವ ಬಗ್ಗೆ ತೀವ್ರ ವಿರೋಧವಿದೆ. ಆದ್ದರಿಂದ ಮಾರ್ಕ್ಸ್‌ಗೆ ಧರ್ಮವೆಂಬುದು ಅಫೀಮಾಗಿಯೇ ಕಂಡುಬರುತ್ತದೆ. ಈ ಅಫೀಮಿನ ಗುಂಗಿನಿಂದ ಹೊರಬಂದು ವೈಚಾರಿಕ ನೆಲೆಯಲ್ಲಿ ಬದುಕನ್ನು ಗ್ರಹಿಸುವಂತೆ ತನ್ನ ವಿಚಾರವನ್ನು ಮಂಡಿಸುತ್ತಾರೆ. ಈತನ ಈ ವಾದವು ಜಗತ್ತಿನ ಎಲ್ಲಾ ಸ್ಥಾಪಿತ ಧರ್ಮಗಳನ್ನು ಒಳಗೊಂಡಿದೆ. ಆದರೆ ಈ ವಾದವು ಮಾನವನ ಬದುಕಿನ ಸಹಜ ಧರ್ಮಕ್ಕೆ ಅನ್ವಯವಾಗುವುದಿಲ್ಲ. ಇದಕ್ಕೆ ಕಾರಣವೆಂದರೆ, ಸಾಮಾನ್ಯರ ಬದುಕಿನ ಅನುಭವದ ನೆಲೆಯಲ್ಲಿ ರೂಢಿಸಿಕೊಂಡು ಬಂದಿರುವ ಧರ್ಮದಲ್ಲಿ ಯಾವುದೇ ಸ್ಥಾಪಿತ ಧರ್ಮಗಳ ಪ್ರವೇಶವಿರುವುದಿಲ್ಲ. ಯಾವುದೇ ಧರ್ಮ ಗ್ರಂಥಗಳಾಗಲಿ, ಕಾನೂನು–ಕಟ್ಟಳೆಗಳಾಗಲಿ ಇರುವುದಿಲ್ಲ. ಇಲ್ಲಿ ಬದುಕಿನ ಅನುಭವವೇ ಅನುಭಾವವಾಗಿ ಧರ್ಮದ ನೆಲೆಯೊಂದು ಕಾರ್ಯಪ್ರವೃತ್ತವಾಗಿರುತ್ತದೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುವ ಬೌದ್ಧದರ್ಶನ ವಿಭಿನ್ನ ಆಯಾಮಗಳನ್ನು ಧಾರ್ಮಿಕ ನೆಲೆಯಲ್ಲಿ ಅಧ್ಯಯನ ಮಾಡುವುದು ಇಲ್ಲಿಯ ಪ್ರಮುಖ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡದ ವಿಚಾರವಾದಿಗಳ ತಾತ್ವಿಕ ನಿಲುವುಗಳನ್ನು ಅಧ್ಯಯನಕ್ಕೆ ತೊಡಗಿಸಿಕೊಳ್ಳುವ ಪೂರ್ವದಲ್ಲಿ ಭಾರತೀಯ ದಾರ್ಶನಿಕರು ಬೌದ್ಧದರ್ಶನದ ಕುರಿತು ತಳೆದಿರುವ ದೃಷ್ಟಿಕೋನಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಹೆಚ್ಚು ಸೂಕ್ತವೆಂಬುದಾಗಿ ಭಾವಿಸಲಾಗಿದೆ. ಕನ್ನಡ ಚಿಂತನ ಸಾಹಿತ್ಯಕ್ಕೆ ಭಾರತೀಯ ದಾರ್ಶನಿಕರ ವಿಚಾರಧಾರೆಗಳು ಸಾಕಷ್ಟು ಪ್ರಭಾವ ಬೀರಿವೆ. ಆದ್ದರಿಂದ ಬೌದ್ಧದರ್ಶನದ ಕುರಿತಾಗಿ ಪ್ರಕಟವಾಗಿರುವ ಚಿಂತನೆಗಳಲ್ಲಿ ಕಂಡುಬರುವ ತಾತ್ವಿಕ ಆಯಾಮಗಳನ್ನು ಈ ಮುಂದಿನಂತೆ ಅಧ್ಯಯನಕ್ಕೆ ಒಳಪಡಿಸಲಾಗುವುದು.

೧. ಅಸ್ಮಿತೆಯ ಶೋಧದ ನೆಲೆಗಳು

ಕನ್ನಡ ಚಿಂತನ ಸಾಹಿತ್ಯ ಪರಂಪರೆಯಲ್ಲಿ ಬಹುತೇಕ ವಿಚಾರವಾದಿಗಳು ಬೌದ್ಧದರ್ಶನವನ್ನು ತಮ್ಮ ಚಾರಿತ್ರಿಕ ಬದುಕಿನ ಅಸ್ಮಿತೆಯನ್ನು ಕಂಡುಕೊಳ್ಳುವ ನೆಲೆಯಲ್ಲಿ ಸ್ವೀಕರಿಸಿದ್ದಾರೆ. ಕನ್ನಡದ ವಿಚಾರಧಾರೆಗಳಲ್ಲಿ ಅಸ್ಮಿತೆಯ ಪರಿಕಲ್ಪನೆ ಮೂಡಲು ಹಲವಾರು ಪಾಶ್ಚಿಮಾತ್ಯ ಹಾಗೂ ಭಾರತೀಯ ದಾರ್ಶನಿಕರು ಕಾರಣೀಭೂತರಾಗಿದ್ದಾರೆ. ಇದರ ಫಲವಾಗಿ ಕನ್ನಡದಲ್ಲಿ ಎಪ್ಪತ್ತರ ದಶಕದ ತರುವಾಯ ವಿಚಾರ ಅಥವಾ ಚಿಂತನ ಸಾಹಿತ್ಯವು ವಿಫುಲವಾಗಿ ಬೆಳೆದುಬಂದಿದೆ. ಈ ವಿಚಾರವಾದಿಗಳಲ್ಲಿ ಕೆಲವರು ತಮ್ಮ ಚಾರಿತ್ರಿಕ ಅಸ್ಮಿತೆಯ ಹುಡುಕಾಟದ ನೆಲೆಯಲ್ಲಿ ಬೌದ್ಧದರ್ಶನವನ್ನು ಸ್ವೀಕರಿಸಿದ್ದಾರೆ.

ಕನ್ನಡದ ವಿಚಾರಧಾರೆಗಳಲ್ಲಿ ಉಂಟಾಗಿರುವ ಅಸ್ಮಿತೆಯ ಪ್ರಜ್ಞೆಗೆ ಪ್ರೇರಣೆಯನ್ನು ಒದಗಿಸಿದವರಲ್ಲಿ ಬಾಬಾಸಾಹೇಬ ಅಂಬೇಡ್ಕರ್ ಪ್ರಮುಖರಾಗಿದ್ದಾರೆ. ಬಾಬಾಸಾಹೇಬರಲ್ಲಿ ಉಂಟಾಗಿರುವ ಈ ಅಸ್ಮಿತೆಯ ಪರಿಕಲ್ಪನೆಯು ತಳಸಮುದಾಯಗಳನ್ನು ಜಾಗೃತಗೊಳಿಸಿ, ಅವರಲ್ಲಿ ಸ್ವಾಭಿಮಾನವನ್ನು ಮೂಡಿಸುವ ನೆಲೆಯಲ್ಲಿ ಕಾರ್ಯಪ್ರವೃತ್ತವಾಗಿದೆ. ಸನಾತನವಾದಿ ಹಿಂದೂಧರ್ಮದ ಅಸಮಾನ ನೀತಿಯನ್ನು ಕಿತ್ತೆಸೆದು, ಈ ನಾಡಿನಲ್ಲಿ ಅಸ್ಪೃಶ್ಯರೆಂದು ಗುರುತಿಸಿಕೊಂಡು ಬಂದಿರುವ ಸಮುದಾಯವನ್ನು ಸಮಾಜದ ಮುಂಚೂಣಿಗೆ ತರುವ ಉದ್ದೇಶದಿಂದಾಗಿ ಅಂಬೇಡ್ಕರರು ಬೌದ್ಧದರ್ಶನದ ಅಡಿಯಲ್ಲಿ ಅಸ್ಮಿತೆಯ ಶೋಧಕ್ಕೆ ಮುಂದಾದರು. ವೈದಿಕಧರ್ಮದಲ್ಲಿ ಶೂದ್ರ ಸಮುದಾಯವನ್ನು ಅತ್ಯಂತ ನಿಕೃಷ್ಟವಾಗಿ ನಡೆಸಿಕೊಳ್ಳಲಾಗಿದೆ. ವೈದಿಕಶಾಹಿಯು ರೂಪಿಸಿಕೊಂಡು ಬಂದಿರುವ ಧರ್ಮಸೂತ್ರಗಳು ಶೂದ್ರ ವರ್ಗವನ್ನು ಕುರಿತು ತಾಳಿರುವ ನಿಲುವುಗಳು ಈ ಮುಂದಿನಂತಿವೆ. "ಆಪಸ್ತಂಭ ಧರ್ಮಸೂತ್ರ ಹೀಗೆ ಹೇಳುತ್ತದೆ: ವರ್ಣ ವ್ಯವಸ್ಥೆಯಲ್ಲಿ ನಾಲ್ಕು ಜಾತಿಗಳಿವೆ: ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ. ಈ ಪ್ರತಿಯೊಂದು ಜಾತಿಯೂ ಒಂದಕ್ಕೆ ಇನ್ನೊಂದು ಮೇಲಾಗಿರುತ್ತದೆ. ಇವರಲ್ಲಿ ತನ್ನ ದುಷ್ಟ ಕ್ರಿಯೆಗಳಿಂದಾಗಿ ಅವರು ಶೂದ್ರರಾಗಿ ಹುಟ್ಟಿರುವುದರಿಂದ ಅವರಿಗೆ ಉಪನಯನದ ಸ್ವಾತಂತ್ರವಿರುವುದಿಲ್ಲ, ವೇದಾಧ್ಯಯನದ ಸ್ವಾತಂತ್ರ್ಯವಿರುವುದಿಲ್ಲ. ಯಜ್ಞಯಾಗಾದಿಗಳ ಅಗ್ನಿಯನ್ನು ಜ್ವಲಿಸುವ ಹಕ್ಕು ಕೂಡ ಅವರಿಗೆ ಇರುವುದಿಲ್ಲ. ಅದೇ ವಿಷಯವನ್ನು ಕುರಿತಂತೆ 'ವಾಶಿಷ್ಠ ಧರ್ಮಸೂತ್ರ'ದ ಅಭಿಪ್ರಾಯವೇನೆಂದರೆ: ಚತುರ್ವರ್ಣಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ

ಮತ್ತು ಶೂದ್ರರಲ್ಲಿ ಮೊದಲ ಮೂರು ಜಾತಿಗಳಾದ ಬ್ರಾಹ್ಮಣ ಕ್ಷತ್ರಿಯ ಮತ್ತು ವೈಶ್ಯರು ಮಾತ್ರ ದ್ವಿಜರು. ಅವರ ಮೊದಲ ಹುಟ್ಟು ತಾಯಿಯಿಂದಲೂ, ಎರಡನೆಯ ಹುಟ್ಟನ್ನು ಉಪನಯನದಿಂದಲೂ ಪಡೆಯುವರು. ಉಪನಯನದ ಹುಟ್ಟಿನಲ್ಲಿ ಸಾವಿತ್ರಿ ಅವರ ತಾಯಿ ಮತ್ತು ಬ್ರಹ್ಮೋಪದೇಶ ಮಾಡಿದ ಗುರು ಅವರ ತಂದೆ ಎಂಬುದಾಗಿ ಹೇಳುತ್ತದೆ. ಹಾಗೆಯೇ 'ವಿಷ್ಣುಸ್ಮೃತಿ'ಯಾಗಲಿ 'ಮನುಸ್ಮೃತಿ'ಯಾಗಲಿ 'ಗೌತಮಧರ್ಮಸೂತ್ರ'ವಾಗಲಿ 'ಬೃಹಸ್ಪತಿ ಧರ್ಮಸೂತ್ರ'ವಾಗಲಿ ಶೂದ್ರರ ಹುಟ್ಟಿನ ಬಗ್ಗೆ ಇದೇ ಅಭಿಪ್ರಾಯವನ್ನು ತಾಳುತ್ತವೆ. ಅಂದರೆ, ಹುಟ್ಟಿನಿಂದ ಪಾಪಯೋನಿಜನಾದ ಶೂದ್ರನಿಗೆ ಬ್ರಾಹ್ಮಣನ ಸೇವೆಯಿಂದ ಮಾತ್ರ ಜೀವನ್ಮುಕ್ತಿಯೆಂತಲೂ, ಅವನ ಹುಟ್ಟು ಕನಿಷ್ಠವಾದುದರಿಂದ ಅವನಿಗೆ ಶಿಕ್ಷಣ ಸ್ವಾತಂತ್ರ್ಯ ಇಲ್ಲವೆಂತಲೂ ಸಾರುತ್ತದೆ."[೩] ಬ್ರಾಹ್ಮಣ ಧರ್ಮದ ಅಸಮಾನತೆಯ ನೋವನ್ನು ಅನುಭವಿಸಿದ್ದ ಬಾಬಾಸಾಹೇಬರು ಈ ಧರ್ಮಗ್ರಂಥಗಳನ್ನು ಅಧ್ಯಯನ ಮಾಡುವ ಮೂಲಕ ಇಲ್ಲಿರುವ ಕುತಂತ್ರವನ್ನು ವಿಮರ್ಶೆಗೆ ಒಳಪಡಿಸಿ, ಶೂದ್ರಾತಿಶೂದ್ರ ವರ್ಗದ ವಿಮೋಚನೆಗಾಗಿ ತಮ್ಮನ್ನು ತೊಡಗಿಸಿಕೊಂಡರು. ಇಂತಹ ಸಂದರ್ಭದಲ್ಲಿ ಈ ಸಮುದಾಯವು ಪ್ರಾಚೀನ ದಿನಗಳಲ್ಲಿ ವೈಭವಯುತವಾದ ಸ್ವಾಭಿಮಾನದ ಬದುಕು ನಡೆಸಿರುವ ಬಗ್ಗೆ, ಭಾರತದ ಹೊಲೆಯ ಮತ್ತು ಮಾದಿಗ ಜನಾಂಗವು ರಾಜವಂಶಗಳಾಗಿ ಬಾಳಿ ಬದುಕಿದ್ದು, ಇವರು ಬೌದ್ಧ ಅನುಯಾಯಿಗಳಾಗಿದ್ದು ಸಮಾನತೆಯ ಬದುಕನ್ನು ನಡೆಸಿದ ಬಗೆಗಳನ್ನು ತಮ್ಮ ನಿರಂತರವಾದ ಅಧ್ಯಯನದಿಂದ ತಿಳಿದುಕೊಂಡರು. ಈ ಮೂಲನಿವಾಸಿಗಳು ಅನುಸರಿಕೊಂಡು ಬಂದಿರುವ ಸಮಾನತೆಯಿಂದ ತಮಗೆ ಅಸ್ತಿತ್ವವಿಲ್ಲ ಎಂಬುದನ್ನರಿತ ವೈದಿಕರು, ಈ ನಾಡಿನ ಮೂಲ ನಿವಾಸಿಗಳ ಮೇಲೆ ಆಕ್ರಮಣ ನಡೆಸಿ ತಮ್ಮ ಅಡಿಯಾಳಾಗಿ ನಡೆಸಿಕೊಂಡು ಬಂದಿರುವ ಕುತಂತ್ರಗಳನ್ನು ಅಂಬೇಡ್ಕರರು ತಮ್ಮ ಸಂಶೋಧನೆಯ ಮೂಲಕ ಗುರುತಿಸಿದರು.

ಬಾಬಾಸಾಹೇಬರು ಬೌದ್ಧಧರ್ಮವನ್ನು ಕೇವಲ 'ಧರ್ಮಕ್ಕಾಗಿ ಧರ್ಮ' ಎಂಬ ನೆಲೆಯಲ್ಲಿ ಸ್ವೀಕರಿಸುವುದಿಲ್ಲ. ಇದನ್ನು ಒಂದು ದರ್ಶನವಾಗಿ ಸ್ವೀಕರಿಸುತ್ತಾರೆ. ಆ ಮೂಲಕ ಶತ ಶತಮಾನಗಳಿಂದಲೂ ಶೋಷಣೆಗೆ ಗುರಿಯಾಗಿರುವ ಅಸ್ಪೃಶ್ಯ ಸಮುದಾಯಗಳಿಗೆ ಒಂದು ಚಾರಿತ್ರಿಕ ಅಸ್ಮಿತೆಯನ್ನು ರೂಪಿಸುವ ನೆಲೆಯಲ್ಲಿ ಬೌದ್ಧದರ್ಶನದತ್ತ ಮುಖ ಮಾಡುತ್ತಾರೆ. ಸಾಮಾಜಿಕವಾಗಿ ನಿರ್ಲಕ್ಷ್ಯಕ್ಕೆ ಗುರಿಯಾಗಿರುವ ಸಮುದಾಯಗಳಿಗೆ ತಾವು ಕೂಡ ಹಿಂದೆ ರಾಜರಾಗಿ ಆಳ್ವಿಕೆ ಮಾಡಿರುವ ಬಗ್ಗೆ ಅರಿವು ಮೂಡಿಸುವ ಮೂಲಕ ಈ ಸಮುದಾಯಗಳನ್ನು ಎಚ್ಚರಗೊಳಿಸುವ ಪ್ರಯತ್ನವನ್ನು ಕೈಗೊಳ್ಳುತ್ತಾರೆ. ಆ ಮೂಲಕ ಚರಿತ್ರೆಯಲ್ಲಿ ವೈಭವಯುತವಾಗಿ ಬಾಳಿ ಬದುಕಿದಂತಹ 'ನಾಗ ಮತ್ತು ಮಾತಂಗ' ರಾಜಮನೆತನಗಳೊಂದಿಗೆ ಭಾರತದಲ್ಲಿ ಶೋಷಣೆಗೆ ಗುರಿಯಾಗಿರುವ ಹೊಲೆಯ ಮತ್ತು ಮಾದಿಗ ಜನಾಂಗದ ಸಂಬಂಧವನ್ನು ಬೆಸೆಯುತ್ತಾರೆ. ಹಾಗೆಯೇ ಈ ನಾಗ ಮತ್ತು ಮಾತಂಗ ರಾಜಮನೆತನಗಳು ಬೌದ್ಧ ಅನುಯಾಯಿಗಳಾಗಿದ್ದರು. ಆ ಕಾರಣದಿಂದ ಹಿಂದೂ ಮೂಲಭೂತವಾದಿಗಳ ಕ್ರೌರ್ಯಕ್ಕೆ ಈ ಸಮುದಾಯಗಳು ಗುರಿಯಾಗಬೇಕಾಯಿತು. ಭಾರತದ ಮೂಲ ನಿವಾಸಿಗಳಾದ ನಾಗ ಮತ್ತು ಮಾತಂಗ ರಾಜಮನೆತನಗಳ ಉತ್ತರಾಧಿಕಾರಿಗಳಾದ 'ಅಸ್ಪೃಶ್ಯ' ಸಮುದಾಯಗಳನ್ನು ಬ್ರಾಹ್ಮಣಶಾಹಿಗಳು ಅತ್ಯಂತ ನಿಕೃಷ್ಟವಾಗಿ ನಡೆಸಿಕೊಂಡು ಬಂದಿದ್ದಾರೆ. ಈ ಕಾರಣದಿಂದಾಗಿ

ಅಸ್ಪೃಶ್ಯ ಜನಾಂಗಗಳು ಮೂಲತಃ ಬೌದ್ಧ ಅನುಯಾಯಿಗಳಾಗಿದ್ದಾರೆ. ಹಾಗೆಯೇ ಇಂದಿನ ದಲಿತರು ಚಾತುರ್ವರ್ಣ ಪದ್ಧತಿಯಿಂದ ಹೊರಗೆ ಇರುವುದರಿಂದ ಇವರನ್ನು ಪಂಚಮರು, ಅವರ್ಣೀಯರು ಎಂದೆಲ್ಲ ಕರೆಯಲಾಗುತ್ತದೆ. ಆದ್ದರಿಂದ ಇವರು ಹಿಂದೂಗಳಲ್ಲ ಎಂಬುದು ಅಂಬೇಡ್ಕರ್‌ರವರ ಖಚಿತ ನಿಲುವು. ಹಿಂದುಗಳಲ್ಲದೆ ಇವರು ಯಾರಾಗಿದ್ದರು ಎಂಬುದಕ್ಕೆ ಅಂಬೇಡ್ಕರರು ನೀಡುವ ಸಮರ್ಥನೆಯೆಂದರೆ, ಇವರು ಮೂಲದಲ್ಲಿ ಬೌದ್ಧರಾಗಿದ್ದರು. ಅಶೋಕನ ಕಾಲದಲ್ಲಿ ದೇಶದ ೨/೩ ಭಾಗ ಬೌದ್ಧರಾಗಿದ್ದರು ಎಂಬ ಶಾಸನಗಳ ಹೇಳಿಕೆಯಿಂದ ತಿಳಿಯಲ್ಪಡುವುದೇನೆಂದರೆ, ಅವರೆಲ್ಲರೂ ಬದಲಾದ ಒಂದು ಕಾಲಘಟ್ಟದಲ್ಲಿ ಹಿಂದುಗಳಾಗಿ ಮರು ಮತಾಂತರ ಹೊಂದಿದರು. ಸಹಜವಾಗಿ ಅವರನ್ನು ನಾಲ್ಕನೇ ವರ್ಣಕ್ಕೆ ಸೇರಿಸಿಕೊಳ್ಳಲಾಯಿತು. ಇವರು ಶೂದ್ರರಾಗಿ ಮುಂದುವರೆದರು. ಆದರೆ ಹಿಂದೂಗಳಾಗಲು ಒಪ್ಪದ ಬೌದ್ಧ ಅನುಯಾಯಿಗಳು ಇವರಿಂದ ದೂರ ಉಳಿದರು. ಇವರು ಪಂಚಮರಾಗಿ ಬದುಕಿದರು. ಇವರು ಹಿಂದುತ್ವದ ಶೋಷಣೆ, ದಬ್ಬಾಳಿಕೆಗೆ ಒಳಗಾಗಿ ಮೌಢ್ಯತೆಗೆ ಒಳಗಾದರು. ಮಾನವ ಜನಾಂಗದ ಒಂದು ವರ್ಗ ಧಾರ್ಮಿಕ ಶೋಷಣೆಗೆ ಒಳಗಾಗಿ ಅಮಾನವೀಯ ಸ್ಥಿತಿ ತಲುಪಿರುವುದು ಜಗತ್ತಿನ ಇತಿಹಾಸದಲ್ಲಿ ಬೇರೆಲ್ಲೂ ಕಾಣಸಿಗುವುದಿಲ್ಲ. ಆದ್ದರಿಂದ ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಈ ಜನಾಂಗಗಳು ಬೌದ್ಧಧರ್ಮದತ್ತ ಮುಖಮಾಡಿ, ತಾವು ಕಳೆದುಕೊಂಡಿರುವ ಚಾರಿತ್ರಿಕ ಅಸ್ಮಿತೆಯನ್ನು ಬೌದ್ಧಧರ್ಮವನ್ನು ಸ್ವೀಕರಿಸುವ ಮೂಲಕ ಪಡೆದುಕೊಳ್ಳಬೇಕು ಎಂಬುದು ಅಂಬೇಡ್ಕರರ ಆಶಯವಾಗಿತ್ತು. ಈ ಕಾರಣದಿಂದಾಗಿ ಬಾಬಾಸಾಹೇಬರು ಬೌದ್ಧದರ್ಶನವನ್ನು ಚಾರಿತ್ರಿಕ ಅಸ್ಮಿತೆಯ ಹುಡುಕಾಟದ ನೆಲೆಯಲ್ಲಿ ಸ್ವೀಕರಿಸಿಕೊಂಡಿರುವುದಾಗಿ ತಿಳಿದುಬರುತ್ತದೆ.

ಬಾಬಾಸಾಹೇಬ್ ಅಂಬೇಡ್ಕರರು 'ಧರ್ಮ' ಎಂಬ ನೆಲೆಯಲ್ಲಿ ಬೌದ್ಧದರ್ಶನವನ್ನು ಸ್ವೀಕರಿಸುವುದಿಲ್ಲ. ಧರ್ಮಕ್ಕೆ ಬದಲಾಗಿ 'ಧಮ್ಮ' ಎಂಬ ಪರಿಭಾಷೆಯನ್ನು ಬಳಸುತ್ತಾರೆ. ಇದಕ್ಕೆ ಮ.ನ.ಜವರಯ್ಯನವರು ನೀಡುವ ಸಮರ್ಥನೆ ಹೀಗಿದೆ; "ಧರ್ಮದ ಕುರಿತ ತಮ್ಮ ಮುಂದಿನ ಚಿಂತನೆಯಲ್ಲಿ, ಧರ್ಮ ಎಂಬುದರ ಅಥವಾ ಧಮ್ಮದ ಪರಿಕಲ್ಪನೆಯ ವಿವರಣೆಯ ನೆಪದಲ್ಲಿ ಅದರ ಇಡೀ ಬುನಾದಿಯನ್ನೇ ಅಂಬೇಡ್ಕರರು ಬದಲಾಯಿಸಿಬಿಡುವುದನ್ನು ಈ ಚಿಂತನ ಪ್ರಕ್ರಿಯೆಯಲ್ಲಿ ಕಾಣಬಹುದಾಗಿದೆ. ಇಲ್ಲಿ ಗಮನಾರ್ಹವಾದ ಇನ್ನೊಂದು ಅಂಶವೆಂದರೆ, ಅಂಬೇಡ್ಕರರು ತಮ್ಮ ಧಮ್ಮ ಜಿಜ್ಞಾಸೆಯನ್ನು ಮಂಡಿಸುವಲ್ಲಿ ಅವರು ಬಳಸಿಕೊಳ್ಳುವ ತರ್ಕದ ಶಿಸ್ತಿನ ಕಲಾತ್ಮಕತೆ. ನಿದರ್ಶನಕ್ಕೆ ಧರ್ಮದ ವಿಕಸನವನ್ನು ಕುರಿತು ತಮ್ಮ ವಿಚಾರಗಳನ್ನು ಹೆಚ್ಚೇನೂ ಲಂಬಿಸಹೋಗುವುದಿಲ್ಲ. ಬದಲಾಗಿ, ತುಂಬಾ ಸಂಕ್ಷಿಪ್ತವಾಗಿಯೇ ಮಂಡಿಸಿಬಿಡುತ್ತಾರೆ. ಏಕೆಂದರೆ, ತಮ್ಮ ಈ ಆಧ್ಯಾತ್ಮದ ಚಿಂತನೆಯ ಹಿನ್ನೆಲೆಯಲ್ಲಿ ವೈದಿಕ ಧರ್ಮದ ಕಂದಾಚಾರಗಳಿರುವುದು ಒಂದೆಡೆಗಾದರೆ, ಆ ಕಂದಾಚಾರಗಳು ಭಾರತೀಯ ಜನಮನದ ಮೇಲೆ ಎಂಥ ವಿಷ ಪರಿಣಾಮವನ್ನು ಬೀರುತ್ತ ನಡೆದು ಬಂದಿದೆ ಎಂಬುದನ್ನಾಗಲಿ, ಬುದ್ಧ ಬಂಡಾಯವೆದ್ದುದು ಅಂತಹ ಕಂದಾಚಾರಗಳ ವಿರುದ್ಧವೇ ಎಂಬ ಸತ್ಯವನ್ನಾಗಲಿ ಅಂಬೇಡ್ಕರರು ಬಹು ಸ್ಪಷ್ಟವಾಗಿ ಮತ್ತು ತರ್ಕಬದ್ಧವಾಗಿ ಧ್ವನಿಸುತ್ತ ಹೋಗುವರೇ ಹೊರತು, ಅದರತ್ತ ಎಂದೂ ಯಾವ ರೀತಿಯಲ್ಲೂ ಬೆರಳು ಮಾಡಿ ತೋರುವುದಿಲ್ಲ."[೨]

ಇಲ್ಲಿ ತಮ್ಮ ಆಧ್ಯಾತ್ಮಿಕ ಶಕ್ತಿಯಿಂದ ಇಂತಹ ಸೂಕ್ಷ್ಮಗಳನ್ನು ಮೀರುವ ಮೂಲಕ, ಅದಕ್ಕೆ ಪರ್ಯಾಯ ಮಾರ್ಗವೊಂದನ್ನು ರೂಪಿಸುವಲ್ಲಿ ಅಂಬೇಡ್ಕರರು ತಮ್ಮ ಹೋರಾಟವನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಈ ತಾತ್ವಿಕ ಹಿನ್ನೆಲೆಯಲ್ಲಿ ಬೌದ್ಧಧಮ್ಮಕ್ಕೆ ತಮ್ಮ ಲಕ್ಷಾಂತರ ಅನುಯಾಯಿಗಳೊಂದಿಗೆ ದಿನಾಂಕ ೧೪ ಅಕ್ಟೋಬರ್ ೧೯೫೬ರಂದು ಐತಿಹಾಸಿಕ ಮಹತ್ವವನ್ನು ಹೊಂದಿರುವ ನಾಗಪುರದಲ್ಲಿ ಮತಾಂತರಗೊಂಡರು. ಇವರು ರೂಪಿಸಿಕೊಟ್ಟ ಹಾದಿಯಲ್ಲಿ ಇಂದಿಗೂ ಪ್ರತಿವರ್ಷ ಈ ನಾಡಿನ ಮೂಲ ನಿವಾಸಿಗಳಾದ ದಲಿತರು ಬೌದ್ಧಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾರೆ. ಬಾಬಾಸಾಹೇಬರ ವಿಚಾರಗಳಿಂದ ಪ್ರಭಾವಿತವಾದ ಕರ್ನಾಟಕದ ದಲಿತ ಸಮುದಾಯಗಳು ಕೂಡ ತಮ್ಮ ಅಸ್ಮಿತೆಯನ್ನು ಕಂಡುಕೊಳ್ಳಲು ಧಮ್ಮದತ್ತ ತೆರಳುತ್ತಿವೆ.

ಬಾಬಾಸಾಹೇಬ್ ಅಂಬೇಡ್ಕರರಿಗಿಂತ ಪೂರ್ವದಲ್ಲಿ ಬೌದ್ಧಧರ್ಮದ ಅಡಿಯಲ್ಲಿ ಸಾಮಾಜಿಕವಾಗಿ ತುಳಿತಕ್ಕೊಳಗಾದ ಸಮುದಾಯಕ್ಕೆ ಸ್ವಾಭಿಮಾನದ ಬದುಕನ್ನು ಕಲ್ಪಿಸಿಕೊಡಲು ಹೋರಾಟ ನಡೆಸಿದವರು ತಮಿಳುನಾಡಿನ ಅಯೋತಿದಾಸರು. ಇವರು ಬ್ರಾಹ್ಮಣಶಾಹಿಯು ಹಿಂದುತ್ವದ ಅಡಿಯಲ್ಲಿ ರೂಪಿಸಿಕೊಂಡು ಬಂದಿರುವ ಅಸಮಾನತೆಯನ್ನು ವಿರೋಧಿಸುವ ಮೂಲಕ, ಅಸ್ಪೃಶ್ಯ ಜಾತಿಗಳ ಅಸ್ಮಿತೆಯನ್ನು ಗುರುತಿಸುವ ನೆಲೆಯಲ್ಲಿ ಬೌದ್ಧಧರ್ಮದತ್ತ ಮುಖ ಮಾಡುತ್ತಾರೆ. ತಮಿಳುನಾಡಿನಲ್ಲಿ ಪರಯಾರು, ಪಲ್ಲಾರರು, ಚಕ್ಕಿಲಿಯಾರರು ಅಸ್ಪೃಶ್ಯ ಜಾತಿಗಳಾಗಿದ್ದವು. ಈ ಜಾತಿಗಳು ಅಸ್ಪೃಶ್ಯತೆಯ ಬಂಧನದಿಂದ ಬಿಡುಗಡೆಯನ್ನು ಬಯಸುವ ನೆಲೆಯಲ್ಲಿ, ಈ ಜನಾಂಗಗಳ ಅಸ್ಮಿತೆಯನ್ನು ಗುರುತಿಸಲು ಬೌದ್ಧಧರ್ಮದತ್ತ ತೆರಳುತ್ತಾರೆ. ಅಯೋತಿದಾಸರು 'ಪರಯಾ' ಎಂಬ ಅಸ್ಪೃಶ್ಯ ಜಾತಿಗೆ ಸೇರಿದವರಾಗಿದ್ದರು. "ಅಸ್ಪೃಶ್ಯ ಜಾತಿಗೆ ಸೇರಿದ ಇವರಿಗೆ ತಮ್ಮ ಬದುಕಿನ ಅನುಭವಗಳನ್ನು, ತಮ್ಮ ಜಾತಿಗೆ ಸೇರಿದ ಇತರರ ಅನುಭವಗಳನ್ನು ವಿಶ್ಲೇಷಿಸಿ ಪರಾಮರ್ಶಿಸುವ ಹಂತದಲ್ಲಿ ಬೌದ್ಧಧರ್ಮದ ಬಗ್ಗೆ ಆಸಕ್ತಿ ಉಂಟಾಯಿತು. ಅಮಾನುಷವಾದ ವರ್ಣಧರ್ಮವನ್ನು ಆಚರಣೆಗೆ ತಂದ ಬ್ರಾಹ್ಮಣ ಮತಕ್ಕೆ ಬಲವಾದ ಪರ್ಯಾಯವಾಗಿ ನಿಂತ ಧರ್ಮವೆಂದು ಬೌದ್ಧಧರ್ಮ ಅವರಿಗೆ ಕಾಣಿಸಿತು. ಆ ಧರ್ಮದಲ್ಲಿ ಶೋಷಿತ ಜಾತಿಗಳ ಆಕಾಂಕ್ಷೆಗಳಿಗೂ ಮತ್ತು ವಿಮೋಚನೆಗೂ ಅಗತ್ಯವಾದ ಅಂಶವಿದೆಯೆಂದು ಕೂಡ ತೋಚಿತು. ಬಹಳ ಕಾಲ ಬೌದ್ಧಧರ್ಮದ ಬಗ್ಗೆ ಅವರು ಮಾಡಿದ ಸಂಶೋಧನೆಗಳಿಂದ ಮತ್ತು ವ್ಯಾಪಕವಾದ ಅಧ್ಯಯನದಿಂದ ೧೮೯೦ರ ಹೊತ್ತಿಗೆ ಬೌದ್ಧಧರ್ಮದ ಮೇಲೆ ಸಂಪೂರ್ಣ ನಂಬಿಕೆಯುಂಟಾಯಿತು."[೫] ನಂತರದಲ್ಲಿ ಕೆಲವು ನಾಯಕರೊಂದಿಗೆ ಸ್ವಾಭಿಮಾನದ ನೆಲೆಯ ಬೌದ್ಧ ಸಮಾಜವನ್ನು ಕಟ್ಟುವ ಉದ್ದೇಶದಿಂದ ತಮ್ಮ ಹೋರಾಟವನ್ನು ಮುಂದುವರೆಸಿದರು. ೧೮೯೮ರಲ್ಲಿ ಬೌದ್ಧ ಸಂಘಟನೆಯ ಪ್ರಗತಿಗೆ ಸಹಕಾರ ನೀಡುವಂತೆ ಥಿಯೋಸಾಫಿಕಲ್ ಸೊಸೈಟಿಯ ನಾಯಕರಾದ ಕರ್ನಲ್ ಆಲ್ಕಾಟ್ ಅವರನ್ನು ಕೇಳಿಕೊಂಡಾಗ, ಪರಯಾ ಜಾತಿಗೆ ಸೇರಿದ ಜನರು ತಮಿಳುನಾಡಿನ ಮೂಲನಿವಾಸಿಗಳೆಂದು, ಅಶೋಕ ಚಕ್ರವರ್ತಿಯ ಕಾಲದಿಂದಲೇ ಇವರು ಬೌದ್ಧಧರ್ಮವನ್ನು ಸ್ವೀಕರಿಸಿದ್ದಾರೆಂದು ಇವರು ವಿವರಿಸಿದರು. ಆದ್ದರಿಂದ ಇಂದಿನ ಪರಯಾರೆಲ್ಲರೂ ಮೌಲಿಕವಾಗಿ ಬೌದ್ಧರೇ ಆಗಿದ್ದಾರೆ. ಈ ಎಲ್ಲಾ ಅಂಶಗಳನ್ನು ತಿಳಿದುಕೊಂಡ ಅಯೋತಿದಾಸರು, ಈ ನಾಡಿನ ಮೂಲನಿವಾಸಿಗಳ ಮೇಲೆ

ಬ್ರಾಹ್ಮಣಶಾಹಿಯು ನಡೆಸಿರುವ ಶೋಷಣೆ ಹಾಗೂ ದಬ್ಬಾಳಿಕೆಯ ನೆಲೆಗಳನ್ನು ಅರಿತುಕೊಂಡರು. ಇದರಿಂದ ಬ್ರಾಹ್ಮಣರಿಗೂ ಪರಯಾರಿಗೂ ಪ್ರಾಚೀನ ಕಾಲದಿಂದ ಇರುವ ಶತೃತ್ವವನ್ನು ಸ್ಪಷ್ಟಗೊಳಿಸಿದರು. ತಮಿಳುನಾಡಿನ ಈ ಮೂಲನಿವಾಸಿಗಳಿಗೆ ತಮ್ಮ ಚಾರಿತ್ರಿಕ ಅಸ್ಮಿತೆಯ ಕುರಿತಾಗಿ ಅರಿವು ಮೂಡಿಸುವ ಉದ್ದೇಶದಿಂದ ಬೌದ್ಧಧರ್ಮ ನಿಧಿಯನ್ನು ಸ್ಥಾಪಿಸಿ, ಬಡವರಿಗೆ ಸಹಾಯ ಮಾಡುವುದರ ಮೂಲಕ ಬೌದ್ಧಧರ್ಮದ ಆದರ್ಶಗಳನ್ನು ಆಚರಣೆಯಲ್ಲಿಡಬೇಕೆಂದು ಕರೆ ನೀಡಿದರು. ತಮ್ಮ ಗತಕಾಲದ ಸಂಪ್ರದಾಯವನ್ನು ಪುನರುಜ್ಜೀವನ ಮಾಡುವ ಮೂಲಕ ಮಾತ್ರವೇ ತಮಿಳು ಮೂಲನಿವಾಸಿಗಳ ವಿಮೋಚನೆ ಸಾಧ್ಯವಾಗುವುದೆಂದು ಪ್ರತಿಪಾದಿಸಿದರು. ಆ ಮೂಲಕ ಅಯೋತಿದಾಸರು ಬೌದ್ಧದರ್ಶನದ ಅಡಿಯಲ್ಲಿ ತಳಸಮುದಾಯಗಳ ಚಾರಿತ್ರಿಕ ಅಸ್ಮಿತೆಯ ಶೋಧಕ್ಕೆ ಮುಂದಾಗಿರುವುದು ತಿಳಿದುಬರುತ್ತದೆ.

ಬೌದ್ಧದರ್ಶನದ ಧಾರ್ಮಿಕ ಆಯಾಮಗಳ ಅಡಿಯಲ್ಲಿ ಅಸ್ಮಿತೆಯ ತಡಕಾಟಕ್ಕೆ ಮುಂದಾಗಿರುವವರಲ್ಲಿ ಧರ್ಮಾನಂದ ಕೊಸಾಂಬಿಯವರು ಪ್ರಮುಖರಾಗಿದ್ದಾರೆ. ಇವರು ತಮಿಳುನಾಡಿನ ಅಯೋತಿದಾಸರು ಹಾಗೂ ಮಹಾರಾಷ್ಟ್ರದ ಅಂಬೇಡ್ಕರ್‌ಗಿಂತಲೂ ಮುಂಚಿತವಾಗಿಯೇ ಭಾರತದ ತವರು ನೆಲದಲ್ಲಿ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡಿರುವ ಬೌದ್ಧದರ್ಶನದ ಶೋಧಕ್ಕಾಗಿ ತಮ್ಮನ್ನು ಸಮರ್ಪಿಸಿಕೊಳ್ಳುತ್ತಾರೆ. ಇವರು ಗೋವಾದಲ್ಲಿ ನೆಲೆಸಿದ್ದು, ಜಾತಿಯಿಂದ ಸಾರಸ್ವತ ಬ್ರಾಹ್ಮಣರಾಗಿದ್ದರು. ಇವರಲ್ಲಿ ಒಡಮೂಡಿದ ಬೌದ್ಧಧರ್ಮದ ಬಗೆಗಿನ ಉತ್ಕಟತೆಯಿಂದಾಗಿ ತನ್ನ ಹೆಂಡತಿ ಮಕ್ಕಳನ್ನು ಬಿಟ್ಟು ಬೌದ್ಧದರ್ಶನವನ್ನು ಅರಸುತ್ತ ತಮ್ಮ ಪಯಣವನ್ನು ಮುಂದುವರೆಸುತ್ತಾರೆ. ಇವರು ಜಾತಿಯಲ್ಲಿ ಬ್ರಾಹ್ಮಣರಾದರೂ ಬುದ್ಧನ ವೈಚಾರಿಕತೆಯಿಂದ ಪ್ರಭಾವಿತರಾದವರು. ಅನಿವಾರ್ಯವಾಗಿ ಜುಟ್ಟು, ಜನಿವಾರಗಳನ್ನು ಮುಂದಿಟ್ಟುಕೊಂಡು ತನ್ನ ಪ್ರಯಾಣವನ್ನು ಬೆಳೆಸಿದರು. ಈ ಜುಟ್ಟು, ಜನಿವಾರಗಳು ಬ್ರಾಹ್ಮಣರ ಕುರುಹುಗಳಾಗಿದ್ದು, ತಾನು ಸಂಸ್ಕೃತ ಕಲಿಯಲು ಮನೆಬಿಟ್ಟು ಬಂದಿರುವ ವಿದ್ಯಾರ್ಥಿ ಎಂದು ಹೇಳುತ್ತ ಬ್ರಾಹ್ಮಣರ ಛತ್ರಗಳಲ್ಲಿ ಊಟ ಮತ್ತು ವಸತಿಯ ಸೌಕರ್ಯವನ್ನು ಪಡೆಯುತ್ತ ಪಾಳಿಯನ್ನು ಅಧ್ಯಯನ ಮಾಡುವ ಮೂಲಕ ಬೌದ್ಧ ಕ್ಷೇತ್ರಗಳಿಗೆ ತನ್ನ ಯಾತ್ರೆಯನ್ನು ಮುಂದುವರೆಸುತ್ತಾರೆ. ಇವರು ೧೮೯೭ರಲ್ಲಿ ಬುದ್ಧನ ಬದುಕಿನ ಕುರಿತು 'ಬಾಲ–ಬೋಧ' ಕೃತಿಯನ್ನು ಓದಿದ ತರುವಾಯದಲ್ಲಿ ಬುದ್ಧನ ಬಗೆಗೆ ಮೂಡಿದ ಆಸಕ್ತಿಯಿಂದ ಬುದ್ಧನ ವಿಚಾರಗಳ ಶೋಧಕ್ಕೆ ಮುಂದಾಗುತ್ತಾರೆ. ಇವರ ಈ ಶೋಧದ ಬಗೆಗಿನ ನಿಲುವುಗಳು ಹೀಗಿವೆ: "ಬದುಕನ್ನು ಮುಂದುವರೆಸುವುದಾದರೆ, ಬೌದ್ಧಧರ್ಮದ ಕುರಿತು ತಿಳಿವಳಿಕೆಯನ್ನು ಹೊಂದುವುದಲ್ಲದೆ ಬೇರೆ ಏನನ್ನೂ ಮಾಡುವುದಿಲ್ಲ ಎಂಬ ತೀರ್ಮಾನಕ್ಕೆ ಬಂದೆ. ತನ್ನ ಮೇಲೆ ಯಾವುದೇ ಅನಾಹುತಗಳು ಬಂದು ಎರಗಲಿ ಮತ್ತು ದುರಂತಗಳ ಆಘಾತಗಳೇ ಉಂಟಾಗಲಿ, ಇದ್ಯಾವುದನ್ನೂ ಗಣನೆಗೆ ತಂದುಕೊಳ್ಳದೆ ನಾನು ಬುದ್ಧನ ಉಪದೇಶದ ಜ್ಞಾನವನ್ನು ಸಂಪಾದಿಸಿದರೆ ನನ್ನ ಬದುಕು ಸಾರ್ಥಕವಾಗುವುದು ಎಂಬ ಭಾವನೆಯನ್ನು ನಾನು ಅನುಭವಿಸಿದೆ."[೬] ಇದರಂತೆ ೧೮೯೯ರಲ್ಲಿ ಗೋವಾವನ್ನು ತೊರೆದು ತನ್ನ ಪ್ರಯಾಣವನ್ನು ಆರಂಭಿಸುತ್ತಾರೆ. ನಂತರದಲ್ಲಿ ಪುಣೆ, ಕಾಶಿ, ನೇಪಾಳದ ಕಠ್ಮಂಡು, ಬೋಧಗಯ, ಕಲ್ಕತ್ತ, ಸಿಲೋನ್ ಮತ್ತು ಬರ್ಮಾ ದೇಶಗಳನ್ನು ಪ್ರಯಾಣಿಸುವ

ಮೂಲಕ ಬೌದ್ಧ ದರ್ಶನದ ಶೋಧದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಆ ಮೂಲಕ ತಾವು ಹೋದಲ್ಲೆಲ್ಲ ತಮಗೆ ಲಭ್ಯವಾದ ಮಾಹಿತಿಯನ್ನು ಸಂಗ್ರಹಿಸಿದರು. ಪಾಳಿ ಭಾಷೆಯ ಪಾಂಡಿತ್ಯವನ್ನು ಗಳಿಸುವ ಮೂಲಕ ಪ್ರಾಧ್ಯಾಪಕ ವೃತ್ತಿಯನ್ನು ಆರಂಭಿಸಿದರು. ಇದರ ಜೊತೆಯಲ್ಲಿ 'ವಿಸುದ್ಧಿಮಗ್ಗ' ಎಂಬ ಪಾಳಿ ಗ್ರಂಥವನ್ನು ದೇವನಾಗರಿ ಭಾಷೆಗೆ ಮತ್ತು 'ಬೋಧಿಚರ್ಯ ಅವತಾರ'ವನ್ನು ಮರಾಠಿಗೆ ಅನುವಾದಿಸಿದರು. ನಂತರದಲ್ಲಿ ಅಮೇರಿಕಾದ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಬೌದ್ಧ ಗ್ರಂಥವಾದ 'ವಿಸುದ್ಧಿಮಗ್ಗ'ದ ಸಂಪಾದಕರಾಗಿ ಸೇವೆಯನ್ನು ಸಲ್ಲಿಸಿದರು. ಧರ್ಮಾನಂದರು ೧೮೯೯ ರಿಂದ ೧೯೧೦ ಅವಧಿಯಲ್ಲಿ ಕೈಗೊಂಡ ಪ್ರವಾಸದಲ್ಲಿ ಬುದ್ಧಧರ್ಮದ ಅಸ್ಮಿತೆಯ ಶೋಧದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇವರ ಅಸ್ಮಿತೆಯ ಶೋಧದ ನೆಲೆಯು ಯಾವುದೇ ಜಾತಿ ಕೇಂದ್ರಿತವಾಗಿರುವುದಿಲ್ಲ. ಒಂದು ಧರ್ಮದ ಹಿಂದೆ ವಿಸ್ಮೃತಿಗೆ ಗುರಿಯಾಗಿರುವ ದರ್ಶನದ ಶೋಧವು ಇವರಿಗೆ ಪ್ರಮುಖವಾಗಿರುತ್ತದೆ. ಹೀಗಾಗಿ ಇವರ ಈ ಅಸ್ಮಿತೆಯ ಶೋಧವು ಅಯೋತಿದಾಸರು ಹಾಗೂ ಅಂಬೇಡ್ಕರರು ನಡೆಸಿದ ಬೌದ್ಧಧರ್ಮದ ಅಸ್ಮಿತೆಯ ನೆಲೆಗಿಂತ ಭಿನ್ನವಾಗಿದೆ. ಇವರ ಅಸ್ಮಿತೆಯ ಶೋಧವು ದಾರ್ಶನಿಕ ನೆಲೆಯದಾಗಿದೆ.

ಅಯೋತಿದಾಸ್ ಹಾಗೂ ಬಾಬಾಸಾಹೇಬರು ವೈದಿಕ ಪುರೋಹಿತಶಾಹಿಯು ಅಸ್ಪೃಶ್ಯರನ್ನು ಬಂಧನಕ್ಕೆ ಗುರಿಪಡಿಸಿರುವ ನೆಲೆಯಿಂದ ಬಿಡುಗಡೆಗೊಳಿಸಲು ಬೌದ್ಧಧರ್ಮದ ಅಡಿಯಲ್ಲಿ ತಮ್ಮ ಅಸ್ಮಿತೆಯ ಶೋಧಕ್ಕೆ ಮುಂದಾದರು. ಆದರೆ ಧರ್ಮಾನಂದ ಕೊಸಾಂಬಿಯವರು ಪುರೋಹಿತಶಾಹಿಯ ಬಂಧನಕ್ಕೆ ಒಳಗಾಗಿ ತನ್ನ ಮೂಲ ಸ್ವರೂಪವನ್ನೇ ಕಳೆದುಕೊಂಡಿದ್ದ ಬೌದ್ಧದರ್ಶನದ ಅಸ್ಮಿತೆಯ ಹುಡುಕಾಟದ ನೆಲೆಯಲ್ಲಿ ತಮ್ಮ ಹೋರಾಟವನ್ನು ಮುಂದುವರೆಸಿದರು. ಇವರಲ್ಲಿರುವ ಭಿನ್ನ ನೆಲೆಗಳು ಅವರು ಬೆಳೆದುಬಂದಿರುವ ಪರಿಸರಕ್ಕೆ ಅನುಗುಣವಾಗಿವೆ. ಬಾಬಾಸಾಹೇಬರು ಹಾಗೂ ಅಯೋತಿದಾಸ್ ಮುಂತಾದವರಿಗೆ ಜಾತೀಯತೆಯಿಂದ ವಿಮೋಚನೆ ಪಡೆಯುವುದಕ್ಕೆ ಬೌದ್ಧಧರ್ಮ ಹಾಗೂ ದರ್ಶನವು ಪ್ರಮುಖ ನೆಲೆಯಾದರೆ, ಧರ್ಮಾನಂದ ಕೊಸಾಂಬಿಯಂತಹ ಉದಾರವಾದಿ ಬಲಪಂಥೀಯ ವಿಚಾರವಾದಿಗಳಿಗೆ ಬೌದ್ಧದರ್ಶನದಲ್ಲಿ ಅಂತರ್ಗತವಾಗಿರುವ ಆಧ್ಯಾತ್ಮಿಕತೆಯ ಸಾರವನ್ನು ವರ್ತಮಾನಕ್ಕೆ ಪರಿಚಯಿಸುವುದು ಪ್ರಮುಖವಾಗಿ ಕಂಡುಬರುತ್ತದೆ. ವಿಚಾರವಾದದ ನೆಲೆಗಳು ಕೇವಲ ಎಡಪಂಥೀಯರಲ್ಲಿ ಮಾತ್ರವೇ ಇರುವುದಿಲ್ಲ, ವಿಶಾಲ ಬಲಪಂಥೀಯರಲ್ಲೂ ಕಂಡುಬರುತ್ತವೆ. ಆದರೆ ಇವುಗಳ ತಾತ್ವಿಕ ಸ್ವರೂಪದಲ್ಲಿ ಭಿನ್ನತೆಗಳಿರುತ್ತವೆ.

ಕನ್ನಡ ಚಿಂತನ ಸಾಹಿತ್ಯ ಪರಂಪರೆಯಲ್ಲಿ ಬಹುತೇಕ ಪ್ರಗತಿಪರ ವಿಚಾರಧಾರೆಗಳು ಬಾಬಾಸಾಹೇಬರ ಹಾದಿಯನ್ನು ಅನುಸರಿಸುವ ಮೂಲಕ ದಲಿತರ ಚಾರಿತ್ರಿಕ ಅಸ್ಮಿತೆಯ ಶೋಧಕ್ಕೆ ಮುಂದಾಗಿರುವುದು ತಿಳಿದುಬರುತ್ತದೆ. ಇಲ್ಲಿ ಬೌದ್ಧ ದರ್ಶನದ ಧಾರ್ಮಿಕ ಆಯಾಮದೊಂದಿಗೆ ಸಮಕಾಲೀನ ಸಂದರ್ಭದ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಬದುಕಿನ ನೆಲೆಯ ಶೋಧಗಳನ್ನು ಕೂಡ ಕನ್ನಡ ಚಿಂತನ ಪರಂಪರೆಯಲ್ಲಿ ಗುರುತಿಸಬಹುದಾಗಿದೆ. ಇವುಗಳು ಒಂದಕ್ಕೊಂದು ಅಂತರ್ ಸಂಬಂಧವನ್ನು ಹೊಂದಿರುವುದು ಕಂಡುಬರುತ್ತದೆ. ಬೌದ್ಧ ದರ್ಶನವನ್ನು

ಕೇಂದ್ರವಾಗಿಟ್ಟುಕೊಂಡ ಕನ್ನಡದ ಚಿಂತಕರಲ್ಲಿ ಜಿ.ಪಿ.ರಾಜರತ್ನಂ, ಬಿ.ಎಂ.ಶ್ರೀಕಂಠಯ್ಯ, ಕುವೆಂಪು, ಪಂಡಿತ ತಾರನಾಥ, ಎಲ್.ಬಸವರಾಜು, ದೇವನೂರ ಮಹಾದೇವ, ಅರವಿಂದ ಮಾಲಗತ್ತಿ, ಸಿ.ಕೆ.ಮಹೇಶ್, ಜಿ. ಭಾಸ್ಕರಮಯ್ಯ, ಕೆ.ಎಸ್.ಭಗವಾನ್, ಬರಗೂರು ರಾಮಚಂದ್ರಪ್ಪ, ಮ.ನ.ಜವರಯ್ಯ, ಡಿ.ಆರ್.ನಾರಾಜ್, ನಟರಾಜ್ ಹುಳಿಯಾರ್, ಬಂಜಗೆರೆ ಜಯಪ್ರಕಾಶ್ ಹಾಗೂ ಇತರೆ ಪ್ರಗತಿಪರ ಚಿಂತಕರು ಪ್ರಮುಖವಾಗಿ ಕಂಡುಬರುತ್ತಾರೆ.

ಕನ್ನಡದ ಹಿರಿಯ ಚಿಂತಕರು ಹಾಗೂ ವಿಚಾರವಾದಿಗಳಾದ ಟಿ.ಎಸ್.ವೆಂಕಣ್ಣಯ್ಯನವರು ಕರ್ನಾಟಕದಲ್ಲಿ ಬೌದ್ಧಧರ್ಮದ ಚಾರಿತ್ರಿಕ ಅಸ್ಮಿತೆಯನ್ನು ಸಾಹಿತ್ಯಿಕವಾಗಿ ಗುರುತಿಸಿದ್ದಾರೆ. ಇವರು ಕನ್ನಡ ಸಾಹಿತ್ಯದ ಪ್ರಾಚೀನತೆಯನ್ನು ಗುರುತಿಸುವುದಕ್ಕೆ ಹಾಗೂ ಕನ್ನಡ ನಾಡಿನ ಸಾಹಿತ್ಯ ಪರಂಪರೆಯ ಇತಿಹಾಸವನ್ನು ಗುರುತಿಸುವ ನೆಲೆಯಲ್ಲಿ 'ಬಹುಶಃ ಬೌದ್ಧರೇ ಕನ್ನಡ ಭಾಷೆಗೆ ಆದಿಕವಿಗಳು' ಎಂಬ ವಾದವನ್ನು ಮಂಡಿಸುತ್ತಾರೆ. ಇವರು ಕನ್ನಡ ನಾಡಿನ ಸಾಹಿತ್ಯ ರಚನೆಗೆ ಮುಂದಾದ ಮೊದಲಿಗರು ಬೌದ್ಧರೇ ಎಂದು ಹೇಳುವುದಕ್ಕೆ ನೀಡುವ ನಿದರ್ಶನಗಳು ಈ ಮುಂದಿನಂತಿವೆ;

೧. ಕರ್ನಾಟಕದಲ್ಲಿ ಬಹು ಹಿಂದಿನಿಂದಲೂ ಬೌದ್ಧಧರ್ಮವು ಪ್ರಚಲಿತದಲ್ಲಿತ್ತೆಂದು ಹೇಳಲು ಆಧಾರಗಳಿವೆ.

೨. ಬೌದ್ಧರು ಇಲ್ಲಿಯ ಜನರನ್ನು ತಮ್ಮ ಧರ್ಮದತ್ತ ಆಕರ್ಷಿಸಲು ದೇಶ ಭಾಷೆಯಲ್ಲಿ (ಕನ್ನಡ) ಕೃತಿ ರಚನೆ ಮಾಡಿರಬೇಕು. ತಮಿಳಿನ ಪ್ರಾಚೀನ ಸಾಹಿತ್ಯದಲ್ಲಿ ಬೌದ್ಧರು ರಚಿಸಿದ ಸಾಹಿತ್ಯವೂ ಸೇರಿದೆ ಮತ್ತು ಅದು ಈಗಲೂ ಲಭ್ಯವಾಗಿದೆ.

೩. ಬೌದ್ಧಧರ್ಮವು ನಶಿಸಿದ ಕಾಲಕ್ಕೆ, ಅವರು ಬರೆದಿರಬಹುದಾದ ಕನ್ನಡ ಕೃತಿಗಳೂ ನಾಶವಾದವು. ಆಂಧ್ರದಲ್ಲಿ ಜೈನ ಧರ್ಮವು ಪ್ರಬಲವಾಗಿದ್ದು, ಆ ಕಾಲಕ್ಕೆ ಹುಟ್ಟಿರಬಹುದಾದ ಜೈನ ಸಾಹಿತ್ಯವು ನಾಶವಾಯಿತು. ದಕ್ಷಿಣದಲ್ಲಿ ಮುಖ್ಯವಾಗಿ ವಿದ್ವಾಂಸ ಕುಮಾರಿಲಭಟ್ಟನು (ಇವನು ಆಂಧ್ರದವನು) ಏಳು ಎಂಟನೇ ಶತಮಾನದಲ್ಲಿ ಬೌದ್ಧಧರ್ಮದ ವಿರುದ್ಧವಾಗಿ ದೊಡ್ಡ ಯುದ್ಧವನ್ನೇ ಹೂಡಿ ಯಶಸ್ವಿಯಾದನು. ಕರ್ನಾಟಕದಲ್ಲಿ ಜೈನ ಧರ್ಮಕ್ಕೆ ಆಶ್ರಯ ನೀಡಿದ್ದ ಗಂಗ, ರಾಷ್ಟ್ರಕೂಟ ದೊರೆಗಳು ಇಲ್ಲದಿದ್ದರೆ ಬೌದ್ಧ ಸಾಹಿತ್ಯದಂತೆಯೇ ಜೈನ ಸಾಹಿತ್ಯವೂ ನಾಶವಾಗುತ್ತಿತ್ತು ಎಂಬುದು ವೆಂಟಣ್ಣಯ್ಯನವರ ವಾದವಾಗಿದೆ. ವೆಂಕಣ್ಣಯ್ಯನವರು ಕನ್ನಡ ನಾಡಿನಲ್ಲಿ ಸಾಕಷ್ಟು ಪ್ರಸಿದ್ಧಿಯನ್ನು ಪಡೆದುಕೊಂಡು, ಹಲವಾರು ರಾಜ ಮನೆತನಗಳಿಂದ ರಾಜಾಶ್ರಯ ಪಡೆದುಕೊಂಡಿದ್ದ ಬೌದ್ಧಧರ್ಮದ ಅಡಿಯಲ್ಲಿ ವಿಫುಲವಾದ ಸಾಹಿತ್ಯ ರಚನೆಯಾಗಿರುವ ಸಾಧ್ಯತೆ ಇದೆ. ಹೀಗಾಗಿ ಕನ್ನಡ ಸಾಹಿತ್ಯದ ರಚನೆ ಹಾಗೂ ಇದರ ಇತಿಹಾಸವನ್ನು ಬೌದ್ಧಧರ್ಮದ ಹಿನ್ನೆಲೆಯಿಂದಲೇ ಗುರುತಿಸಬೇಕಾಗುತ್ತದೆ. ಹೀಗಾಗಿ ಜೈನ ಸಾಹಿತ್ಯಕ್ಕೂ ಮುಂಚಿತವಾಗಿಯೇ ಕನ್ನಡ ಸಾಹಿತ್ಯವು ಬೌದ್ಧ ವಿದ್ವಾಂಸರಿಂದ ರಚನೆಯಾಗಿರುವ ಸಾಧ್ಯತೆ ಇದೆ ಎಂಬುದಾಗಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತಾರೆ. ಆ

ಮೂಲಕವಾಗಿ ಕನ್ನಡ ಸಾಹಿತ್ಯದ ಚಾರಿತ್ರಿಕ ಅಸ್ಮಿತೆಯನ್ನು ಗುರುತಿಸಲು ಮುಂದಾಗಿರುವುದು ತಿಳಿದುಬರುತ್ತದೆ. ಬೌದ್ಧ ಸಾಹಿತ್ಯದ ಹಿನ್ನೆಲೆಯಲ್ಲಿ ಕನ್ನಡ ನಾಡಿನ ಚಾರಿತ್ರಿಕ ಅಸ್ಮಿತೆಯನ್ನು ಗುರುತಿಸುವುದು ಇವರ ಚಿಂತನೆಯ ಪ್ರಮುಖ ಆಶಯವಾಗಿದೆ. ಹೀಗಾಗಿ ಇವರ ಚಿಂತನೆಗಳಲ್ಲಿ ಬೌದ್ಧಧರ್ಮದ ಸಾಹಿತ್ಯಿಕ ಅಸ್ಮಿತೆಯನ್ನು ಕಂಡುಬರುತ್ತದೆ.

ಕನ್ನಡ ಚಿಂತನ ಸಾಹಿತ್ಯ ಪರಂಪರೆಯಲ್ಲಿ ಎಡಪಂಥೀಯ ನೆಲೆಯಲ್ಲಿ ಗುರುತಿಸಿಕೊಂಡಿರುವ ಸಿ.ಕೆ.ಮಹೇಶ್ ಅವರು ಬೌದ್ಧಧರ್ಮದ ಅಡಿಯಲ್ಲಿ ದಲಿತರ ಚಾರಿತ್ರಿಕ ಅಸ್ಮಿತೆಯನ್ನು ಗುರುತಿಸುತ್ತಾರೆ. ಇವರ ಪ್ರಕಾರ ಈ ನಾಡಿನ ಮೂಲನಿವಾಸಿಗಳಾದ 'ನಾಗ ಮತ್ತು ಮಾತಂಗ' ಸಮುದಾಯವು ರಾಜ ಮನೆತನಗಳಾಗಿದ್ದು, ಇವರ ಬೌದ್ಧ ಅನುಯಾಯಿಗಳಾಗಿದ್ದರು. ವೈದಿಕರ ತಂತ್ರಗಾರಿಕೆಯಿಂದ ಬೌದ್ಧ ಅನುಯಾಯಿಗಳಾದ ಈ ಜನಾಂಗವು ದಾಸ್ಯಕ್ಕೆ ಗುರಿಯಾಗಬೇಕಾಯಿತು ಎಂಬುದಾಗಿ ತಮ್ಮ ವಾದವನ್ನು ಮಂಡಿಸುತ್ತಾರೆ. ಇದಕ್ಕೆ ಬೌದ್ಧಧರ್ಮದ ಪ್ರಮುಖ ಸಾಹಿತ್ಯ ಕೃತಿಯಾದ 'ಲಲಿತವಿಸ್ತರ'ದಿಂದ ಕೆಲವು ನಿದರ್ಶನಗಳನ್ನು ಒದಗಿಸುತ್ತಾರೆ. ಇದು ಬುದ್ಧನ ಕಾಲದ ಚರಿತ್ರೆಯನ್ನು ಒಳಗೊಂಡಿರುವ ಕೃತಿಯಾಗಿದ್ದು, ಇದಕ್ಕೆ ಇವರು ನೀಡುವ ಸಮರ್ಥನೆ ಹೀಗಿದೆ; "ಬುದ್ಧನ ಕಾಲದಲ್ಲಿದ್ದ ೧೬ ಗಣತಂತ್ರಗಳೊಡನೆ 'ಕೋಸಲ' ಒಂದು ಪ್ರಮುಖ ರಾಜ್ಯಾಧಿಪತ್ಯ. ಆ ರಾಜ್ಯದ ರಾಜನ ಹೆಸರು ಪೆಸನದಿ. ಈತನು ಬುದ್ಧಧಮ್ಮೀಯ. ಬುದ್ಧನಿಗೆ ನಿಕಟವಾದ ವ್ಯಕ್ತಿ. ಪೆಸನದಿಯು ರಾಜ್ಯಾಡಳಿತ ವ್ಯಕ್ತಿಗತ ಮತ್ತು ಕೌಟುಂಬಿಕ ವಿಚಾರಗಳಿಗೆ ಸಂಬಂಧಿಸಿ ಆಗಿಂದಾಗ್ಗೆ ಬುದ್ಧನೊಡನೆ ಚರ್ಚಿಸಿ, ನಿರ್ಣಯಿಸುತ್ತಿದ್ದ ಎಂಬ ಮಾಹಿತಿಯು ತ್ರಿಪಿಟಕ ಸಾಹಿತ್ಯದಲ್ಲಿ ಲಭಿಸುತ್ತದೆ. ಆತನ ಜನಾಂಗಿಯ ಮೂಲವು ಲಲಿತವಿಸ್ತರದಲ್ಲಿ ದಾಖಲಾಗಿದೆ. ಅದರ ಪ್ರಕಾರ ಪೆಸನದಿಯು ಮಾತಂಗ ಕುಲಕ್ಕೆ ಸೇರಿದವನು. ಆತನಿಂದ ಭಾರತದಲ್ಲಿ ಮಾತಂಗ ಡೈನಾಸ್ಟಿಯು ಸ್ಥಾಪಿಸಲ್ಪಟ್ಟಿರುವುದು."[೭] ಹಾಗೆಯೇ ಇಲ್ಲಿನ 'ನಾಗ' ಸಮುದಾಯವು ಕೂಡ ಭಾರತದ ಮೂಲನಿವಾಸಿಗಳಾಗಿದ್ದು, ಇವರು ಬೌದ್ಧ ಅನುಯಾಯಿಗಳು ಎಂಬುದಕ್ಕೆ ನೀಡುವ ಚಾರಿತ್ರಿಕ ಸಮರ್ಥನೆ ಹೀಗಿದೆ; "ಜಂಬೂದ್ವೀಪವು ಸಮಗ್ರ ಭಾರತದ ಭೂಭಾಗವಾದರೆ, ಆ ಭಾಗದ ವಿಸ್ತೃತ ಭೂಭಾಗ ಅಥವಾ ಪ್ರಧಾನ ಭೂಪ್ರದೇಶ 'ನಾಗದ್ವೀಪ' ಇರಬೇಕು. ಜಂಬೂದ್ವೀಪದ ಜನಾಂಗಗಳಿಗೆ ಹೇಗೆ ಬುದ್ಧಧಮ್ಮದ ಜೊತೆಗೆ ಅವಿನಾಭಾವ ಸಂಪರ್ಕವಿತ್ತೋ, ಅದೇ ರೀತಿಯಲ್ಲಿ ನಾಗದ್ವೀಪದ ಜನಸಮುದಾಯಗಳಿಗೂ ಧಮ್ಮದ ಸಂಪರ್ಕವಿತ್ತು"[೮] ಎಂಬುದು ಇವರ ತಾತ್ವಿಕ ಗ್ರಹಿಕೆಯಾಗಿದೆ. ಇಲ್ಲಿ ಚಿಂತಕರು ಈ ನಾಡಿನ ಮೂಲನಿವಾಸಿಗಳು ಬೌದ್ಧ ಅನುಯಾಯಿಗಳಾಗಿದ್ದರು ಎಂಬ ಚಾರಿತ್ರಿಕ ಅರಿವಿನೊಂದಿಗೆ ಈ ನಾಡಿನಲ್ಲಿ ವೈದಿಕಶಾಹಿಯಿಂದ ಶೋಷಣೆಗೆ ಗುರಿಯಾಗಿರುವ ಅಸ್ಪೃಶ್ಯ ಜನಾಂಗಗಳ ಅಸ್ಮಿತೆಯ ತಡಕಾಟಕ್ಕೆ ಮುಂದಾಗಿರುವುದು ಕಂಡುಬರುತ್ತದೆ. ಇವರು ಬೌದ್ಧಧರ್ಮದ ಅಡಿಯಲ್ಲಿ ದಲಿತರ ಚಾರಿತ್ರಿಕ ಅಸ್ಮಿತೆಯನ್ನು ಗುರುತಿಸಲು ಧರ್ಮಾನಂದ ಕೊಸಾಂಬಿಯವರ ವಿಚಾರಗಳನ್ನು ಸ್ವೀಕರಿಸುತ್ತಾರೆ. ಆದರೆ ತಮ್ಮ ಹೋರಾಟದ ನೆಲೆ ಮತ್ತು ಚಿಂತನೆಗಳನ್ನು ಮಾತ್ರ ಬಾಬಾಸಾಹೇಬರ ವಿಚಾರಗಳ ಅಡಿಯಲ್ಲಿ ವ್ಯಕ್ತಪಡಿಸುತ್ತಾರೆ. ಹೀಗಾಗಿ

ಇವರ ವಿಚಾರಗಳ ಹಿಂದೆ ಧರ್ಮಾನಂದ ಕೊಸಾಂಬಿ ಹಾಗೂ ಅಂಬೇಡ್ಕರರ ಚಿಂತನೆಗಳು ನೇರವಾದ ಪ್ರಭಾವ ಬೀರಿರುವುದನ್ನು ಗುರುತಿಸಬಹುದಾಗಿದೆ.

ಕನ್ನಡದ ಮತ್ತೊಬ್ಬ ವಿಚಾರವಾದಿಗಳಾದ ಜಿ. ಭಾಸ್ಕರ ಮಯ್ಯ ಅವರು ಈ ನಾಡಿನ ಮೂಲ ನಿವಾಸಿಗಳಾದ ನಾಗ ಜನಾಂಗದ ಅಸ್ಮಿತೆಯನ್ನು ಬೌದ್ಧಧರ್ಮದ ನೆಲೆಗಟ್ಟಿನಲ್ಲಿ ಗುರುತಿಸುವ ಪ್ರಯತ್ನವನ್ನು ಮಾಡಿದ್ದಾರೆ. ಇದಕ್ಕೆ ಇವರು ನೀಡುವ ಸಮರ್ಥನೆಯು ಹೀಗಿದೆ; "ಬುದ್ಧನಿಗೆ ಸಂಬಂಧಿಸಿದ ಶಿಲ್ಪಗಳಲ್ಲಿ ನಾಗರು ಬುದ್ಧನ ಬಗ್ಗೆ ಭಕ್ತಿ ಭಾವ ಹೊಂದಿರುವುದನ್ನು ಕಾಣಬಹುದು. ಬೌದ್ಧ ಸಾಹಿತ್ಯದಲ್ಲಿ ಅವರು ಬುದ್ಧನ ಪರಮ ಭಕ್ತರು. ಬುದ್ಧನ ಜನನವಾದಾಗ ನಂದ ಮತ್ತು ಉಪನಂದ ಎಂಬ ಹೆಸರಿನ ಎರಡು ನಾಗಗಳು ಬೋಧಿಸತ್ವನನ್ನು ಶೀತಲ ಮತ್ತು ಉಷ್ಣಜಲಧಾರೆಗಳಿಂದ ಸ್ನಾನ ಮಾಡಿಸುತ್ತಾರೆ. ಎಲ್ಲಿ ಎರಡು ನಾಗರು ಬುದ್ಧನಿಗೆ ಸ್ನಾನ ಮಾಡಿಸಿದರೋ ಅಲ್ಲಿ ಅಶೋಕ ಎರಡು ಸ್ತೂಪಗಳನ್ನು ಕಟ್ಟಿಸಿದ ಎಂದು ಐತಿಹ್ಯವಿದೆ. ಸಾರನಾಥದ ಶಿಲ್ಪದಲ್ಲಿ ಕಮಲದ ಮೇಲೆ ಕುಳಿತ ಬುದ್ಧನ ಶಿರಸ್ಸಿನ ಮೇಲೆ ಗಾಳಿಯಲ್ಲಿರುವ ಎರಡು ನಾಗಗಳು ಕಲಶಗಳಿಂದ ನೀರು ಸುರಿಯುವ ಚಿತ್ರಣವಿದೆ."[೯] ಹೀಗಾಗಿ ನಾಗ ಜನಾಂಗವು ಬುದ್ಧನ ಆರಾಧಕರಾಗಿದ್ದರು ಎಂಬ ವಿಚಾರವನ್ನು ಲೇಖಕರು ವ್ಯಕ್ತಪಡಿಸುತ್ತಾರೆ. ಆ ಮೂಲಕವಾಗಿ ಈ ನಾಡಿನ ಮೂಲ ನಿವಾಸಿಗಳು ನಾಗ ಮತ್ತು ಮಾತಂಗರು ಎಂಬ ಬಾಬಾಸಾಹೇಬ ಅಂಬೇಡ್ಕರರ ವಿಚಾರಗಳಿಗೆ ಚಾರಿತ್ರಿಕ ಸಮರ್ಥನೆ ನೀಡುವ ನೆಲೆಯಲ್ಲಿ ತಮ್ಮ ವಿಚಾರವಾದವನ್ನು ಮಂಡಿಸುತ್ತಾರೆ. ಹೀಗೆ ಹಲವಾರು ಚಿಂತನಧಾರೆಗಳು ಬೌದ್ಧದರ್ಶನದ ಅಡಿಯಲ್ಲಿ ವಿಭಿನ್ನ ನೆಲೆಯ ಅಸ್ಮಿತೆಯ ಶೋಧಕ್ಕೆ ಮುಂದಾಗಿರುವುದು ತಿಳಿದುಬರುತ್ತದೆ.

೨. ಆರಾಧನ ನೆಲೆಗಳು

ಕನ್ನಡ ಚಿಂತನ ಪರಂಪರೆಯಲ್ಲಿ ಬುದ್ಧ ಹಾಗೂ ಬೌದ್ಧದರ್ಶನದ ಕುರಿತು ಸಾಕಷ್ಟು ವಿಚಾರವಾದಿಗಳು ತಮ್ಮ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಬೌದ್ಧದರ್ಶನದ ಕುರಿತು ಕನ್ನಡ ಚಿಂತನ ಸಾಹಿತ್ಯ ಪರಂಪರೆಯಲ್ಲಿ ಕಂಡುಬರುವ ವಿಚಾರಗಳು ವಿವಿಧ ನೆಲೆಗಳಲ್ಲಿ ವ್ಯಕ್ತವಾಗಿವೆ. ಇವುಗಳನ್ನು ಅಧ್ಯಯನದ ದೃಷ್ಟಿಯಿಂದ ಹಲವಾರು ಬಗೆಯಲ್ಲಿ ವರ್ಗೀಕರಿಸಿಕೊಳ್ಳಲಾಗಿದೆ. ಈ ವರ್ಗೀಕರಣದಲ್ಲಿ ಆರಾಧನ ನೆಲೆಯೂ ಒಂದಾಗಿದೆ. ಬೌದ್ಧ ದರ್ಶನವನ್ನು ಕುರಿತು ಆರಾಧನ ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸಿರುವವರಲ್ಲಿ ಅಂಬೇಡ್ಕರ್ ಅನುಯಾಯಿ ಪಂಥದವರು ಹೆಚ್ಚಾಗಿದ್ದಾರೆ. ಈ ಇವರ ಚಿಂತನಧಾರೆಗಳು ಅಂಬೇಡ್ಕರ್ ಸ್ವೀಕರಿಸಿದ ಬೌದ್ಧದರ್ಶನದ ನೆಲೆಯಲ್ಲಿ ವ್ಯಕ್ತವಾಗುತ್ತವೆ. ಆದರೆ ಕೆಲವು ಆರಾಧನ ಧಾರೆಗಳು ಸಮಕಾಲೀನ ಸಂದರ್ಭದ ವಾಸ್ತವ ಅಂಶಗಳನ್ನು ಮರೆಮಾಚುವ ಮೂಲಕ ತಮ್ಮ ಚಿಂತನೆಗಳನ್ನು ಸಮರ್ಥಿಸಿಕೊಂಡಿರುವುದು ಕಂಡುಬರುತ್ತವೆ. ಅಂಬೇಡ್ಕರ್ ಯಾವುದನ್ನು ಪರೀಕ್ಷಿಸದೆ ಒಪ್ಪಿಕೊಳ್ಳುತ್ತಿರಲಿಲ್ಲ. ಸಮಕಾಲೀನ ಬದುಕಿಗೆ ಪೂರಕವಾದ ಅಂಶಗಳನ್ನು ತಮ್ಮ ಪ್ರಶ್ನವಾದದ ಮೂಲಕವಾಗಿ ದೃಢಪಡಿಸಿಕೊಳ್ಳುತ್ತಿದ್ದರು. ಧರ್ಮದ ಕುರಿತ ಜಿಜ್ಞಾಸೆಯ ಸಂದರ್ಭದಲ್ಲಿ

ಅಂಬೇಡ್ಕರರು ಬಳಸುತ್ತಿರುವ ಈ ರೀತಿಯ ಪ್ರಶ್ನಧಾಟಿ ಸಂಪ್ರದಾಯಬದ್ಧರಾದ ಅಥವಾ ಪುರೋಹಿತಶಾಹಿ ಮೂಲದಿಂದ ಬಂದಂತಹ ಯಾವ ಬೌದ್ಧ ಭಿಕ್ಕುಗಳಿಗೂ ಸಾಧ್ಯವಾಗಿಲ್ಲವೆಂಬುದನ್ನು ಈವರೆಗಿನ ಬೌದ್ಧಸಾಹಿತ್ಯವೇ ಹೇಳುತ್ತದೆ. ಆದರೆ ಅನುಯಾಯಿ ಪಂಥದಲ್ಲಿ ಮಾತ್ರ ಅಂಬೇಡ್ಕರ್ ನೆಲೆಯ ಪ್ರಶ್ನಧಾಟಿಯ ಕೊರತೆ ಎದ್ದು ಕಾಣುತ್ತದೆ. ಈ ಆರಾಧನ ನೆಲೆಗಳಿಗೆ ಸಮಕಾಲೀನ ಸಂದರ್ಭದ ಒತ್ತಡಗಳ ಹಾಗೂ ಅನಿವಾರ್ಯತೆಗಳು ಕಾರಣವಾಗಿ ಪರಿಣಮಿಸಿವೆ. ಅವುಗಳನ್ನು ಈ ಮುಂದಿನಂತೆ ಅಧ್ಯಯನಕ್ಕೆ ಒಳಪಡಿಸಲಾಗುವುದು.

ಕನ್ನಡದ ವಿಚಾರವಾದಿಗಳಲ್ಲಿ ಒಬ್ಬರಾಗಿರುವ ಎಂ.ಎಲ್.ರಾಯಮಾನೆಯವರ ಚಿಂತನೆಗಳಲ್ಲಿ ಅಂತರ್ಗತವಾಗಿರುವ ಬೌದ್ಧಧರ್ಮದ ಆರಾಧನ ನೆಲೆಗಳು ಹೀಗಿವೆ: "ಬೌದ್ಧಧರ್ಮವು ಮಾನವನ ಸ್ವಭಾವದ ಅತೀ ಉಚ್ಚ ಅವಶ್ಯಕತೆಯಾಗಿದೆ. ನಮ್ಮ ಶರೀರಕ್ಕೆ ಆಹಾರವು ಹೇಗೆ ಜೀವಂತವಿರಲು ಅವಶ್ಯಕತೆಯಾಗಿದೆಯೋ ಹಾಗೆಯೇ ನಮ್ಮ ಆತ್ಮಗಳು ಪರಿಪೂರ್ಣ ಹೊಂದಲು ಬುದ್ಧಧರ್ಮವು ಅವಶ್ಯಕವಾಗಿದೆ. ಬೌದ್ಧಧರ್ಮವು ಒಳ್ಳೆಯ ಕಾರ್ಯನಿರತ ಧರ್ಮ. ಉತ್ತಮ ತತ್ವನಿರತ ಧರ್ಮ. ಅತ್ಯುನ್ನತ ಹಾಗೂ ಅಹಿಂಸೆಯ ಕುರಿತು ಬಲವನ್ನು ತೋರಿಸುವ ಧರ್ಮ. ಕಾಮುಕತೆ, ಕುಡಿತ, ದುರಾಶೆ ಮತ್ತು ರಕ್ತಪಾತಗಳತ್ತ ಪ್ರವೃತ್ತವಾಗದ ನೀತಿ ಇದರಲ್ಲಿ ಅಡಗಿದೆ"[೧೦] ಎಂಬುದಾಗಿ ಚಿಂತನೆಗಳನ್ನು ವ್ಯಕ್ತಪಡಿಸಿದ್ದಾರೆ. ಈ ವಿಚಾರಗಳನ್ನು ಗಮನಿಸಿದಾಗ ಇವರು ಬುದ್ಧನ ಧರ್ಮವನ್ನು ಕುರಿತಾಗಿ ಒಪ್ಪಿತವಾದ ಮನಸ್ಥಿತಿಯನ್ನು ರೂಢಿಸಿಕೊಂಡಿರುವಂತಿದೆ. ಸಮಕಾಲೀನ ಸಂದರ್ಭದಲ್ಲಿ ಅಂಬೇಡ್ಕರ್ ಕೈಗೊಂಡ ಬೌದ್ಧಧರ್ಮವನ್ನು ಪ್ರಸಾರ ಮಾಡುವ ನೆಲೆಯಲ್ಲಿ ಕನ್ನಡದ ವಿಚಾರವಾದಿಗಳ ಪರಂಪರೆಯೊಂದು ತನ್ನ ಹೋರಾಟವನ್ನು ಮುಂದುವರೆಸಿಕೊಂಡು ಬರುತ್ತಿದೆ. ಇವರ ಚಿಂತನೆಯಲ್ಲಿ ನೈತಿಕತೆಯು ಪ್ರಧಾನವಾಗಿದ್ದು, ಬೌದ್ಧಧರ್ಮದಲ್ಲಿ ಕಂಡುಬರುವ ಸಮಕಾಲೀನ ಸಂದರ್ಭದ ಮೂಲಭೂತವಾದಿ ಧೋರಣೆಗಳು ಮರೆಮಾಚಲ್ಪಟ್ಟಿವೆ.

ಕನ್ನಡದ ಮತ್ತೊಬ್ಬ ವಿಚಾರವಾದಿಗಳು ಹಾಗೂ ಬೌದ್ಧ ಚಿಂತಕರು ಆದ ಟಿ.ಎಂ.ಭಾಸ್ಕರ್ ಅವರು ಕೂಡ ಬುದ್ಧ ಹಾಗೂ ಆತನ ಧರ್ಮವನ್ನು ಕುರಿತು ಆರಾಧನ ನೆಲೆಯಲ್ಲಿ ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. "ಸಂಬುದ್ಧ ತಾನು ಪಡೆದುಕೊಂಡ ಜ್ಞಾನವನ್ನು ತಿಳಿಯ ಹೇಳಲು ಜನಸಾಮಾನ್ಯರ ನಡುವೆ ಬಂದು ನಡೆದಾಡಿದನು. ಜನತೆಯ ಕುಂದುಕೊರತೆಗಳ ಕುರಿತು ಸಮಾಲೋಚಿಸಿದನು. ಅವರ ಸಂಕಷ್ಟಗಳನ್ನು ಆಯಾ ರಾಜ-ಮಹಾರಾಜರ ಗಮನಕ್ಕೆ ತಂದನು. ಹೀಗಾಗಿ ಅಂದಿನ ದಿವಸದಲ್ಲಿ ಸಮಾಜದಲ್ಲಿ ಬುದ್ಧ ಹೊಸ ಬದಲಾವಣೆಯನ್ನು ಪ್ರೇಮ ಮತ್ತು ಕರುಣೆಯ ಮೂಲಕ ಸ್ಥಾಪಿಸಿದನು" ಎಂಬುದಾಗಿ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಸುತ್ತಾರೆ. ಲೇಖಕರು 'ಬುದ್ಧ ಚಿಂತನೆ' ಎಂಬ ತಮ್ಮ ಕೃತಿಯಲ್ಲಿ ಬುದ್ಧನನ್ನು 'ಜೀವಪರನು', 'ಸ್ನೇಹಪರನು', 'ತಾಯಿ ಹೃದಯಿ', 'ಪ್ರಜ್ಞಾವಂತನು', 'ಪರಿಸರ ಪ್ರೇಮಿ', 'ಕಾಯಕ ಜೀವಿ', 'ಮಹಾದಾಸೋಹಿ', 'ಶೀಲ ಸಂಪನ್ನ' ಎಂಬುದಾಗಿಯೂ ವೈಭವೀಕರಿಸಿದ್ದಾರೆ. ಈ ವೈಭವೀಕರಣದ ನುಡಿಗಟ್ಟುಗಳು ಇವರಿಗಿರುವ ಬುದ್ಧನ ಬಗೆಗಿನ ಸ್ವೀಕಾರಾರ್ಹವಾದ ಗುಣಸ್ವಭಾವಗಳನ್ನು ಎತ್ತಿಹಿಡಿಯುತ್ತವೆ. ಇಲ್ಲಿ

ಲೇಖಕರು ಬುದ್ಧನಲ್ಲಿ ಅಂತರ್ಗತವಾಗಿದ್ದ ಗುಣಗಳನ್ನು ಎತ್ತಿಹಿಡಿಯುತ್ತಾರೆಯೇ ಹೊರತು ಬುದ್ಧನ ನಂತರ ಬೌದ್ಧಧರ್ಮವು ಮೂಲಭೂತವಾದವನ್ನು ಮೈಗೂಡಿಸಿಕೊಂಡ ಬಗೆಗೆ ಇವರು ಪ್ರಸ್ತಾಪ ಮಾಡುವುದಿಲ್ಲ. ಈ ಏಕಮುಖಿ ಧೋರಣೆಗೆ ಹಲವು ಕಾರಣಗಳಿವೆ. ಇವರು ಬೌದ್ಧ ವಿದ್ವಾಂಸರಾಗಿದ್ದು, ಬುದ್ಧನ ಕುರಿತು ಸಾಕಷ್ಟು ಕೃತಿಗಳನ್ನು ಹೊರ ತಂದಿದ್ದಾರೆ. ಈ ಎಲ್ಲ ಕೃತಿಗಳು ಬುದ್ಧನ ಧರ್ಮದಲ್ಲಿ ಅಂತರ್ಗತವಾಗಿರುವ ಸಕರಾತ್ಮಕವಾದ ಅಂಶಗಳನ್ನು ಎತ್ತಿಹಿಡಿಯುತ್ತವೆ. ಹೀಗಾಗಿ ಇವರಿಗೆ ಬುದ್ಧಧರ್ಮವು ಮೂಲಭೂತವಾದಿ ಸ್ವರೂಪದಿಂದ ಹೊರತಾದುದು ಎಂಬುದಾಗಿ ಪ್ರತಿಪಾದಿಸುವುದು ಪ್ರಮುಖವಾಗಿ ಕಂಡುಬರುತ್ತದೆ. ಹಾಗೆಯೇ ಇವರು ಆರ್ಥಿಕವಾಗಿಯೂ ಮುಂದುವರೆದಿದ್ದು, ಅಸ್ಪೃಶ್ಯತೆ ಹಾಗೂ ಅಸಮಾನತೆಯಂತಹ ಅಂಶಗಳು ಇವರಿಗೆ ಮುಖ್ಯವಾಗಿ ಕಂಡುಬರುವುದಿಲ್ಲ.

ಕನ್ನಡ ವಿಚಾರವಾದಿಗಳಲ್ಲಿ ಕೆಲವರು ಅಂಬೇಡ್ಕರ್ ಮಾರ್ಗದಲ್ಲಿ ಬೌದ್ಧಧರ್ಮವನ್ನು ಆರಾಧನ ನೆಲೆಯಲ್ಲಿ ಸ್ವೀಕರಿಸುತ್ತಿರುವುದು ಕಂಡುಬರುತ್ತದೆ. ಇಲ್ಲಿ ದಲಿತ ನೆಲೆಯ ಚಿಂತನೆಗಳು ಹೆಚ್ಚಾಗಿವೆ. ಎಂ. ಮರಿಸ್ವಾಮಿಯವರು ತಮ್ಮ 'ಬೆಳಕಿನ ಧಮ್ಮ' ಎಂಬ ಕೃತಿಯಲ್ಲಿ ಬುದ್ಧ ಹಾಗೂ ಬೌದ್ಧಧರ್ಮವನ್ನು ಆರಾಧನ ನೆಲೆಯಲ್ಲಿ ಸ್ವೀಕರಿಸಿರುವುದು ಕಂಡುಬರುತ್ತದೆ. ಈ ಕೃತಿಯಲ್ಲಿ ಮರಿಸ್ವಾಮಿಯವರು ತನ್ನನ್ನು 'ಬೌದ್ಧ ಉಪಾಸಕ' ಎಂದು ಕರೆದುಕೊಂಡಿದ್ದಾರೆ. ಬೌದ್ಧ ದರ್ಶನವನ್ನು 'ಮಧು', 'ಬೆಳಕು' ಎಂಬ ರೂಪಕಗಳ ಮೂಲಕ ಗುರುತಿಸಿದ್ದಾರೆ. ಅಂಬೇಡ್ಕರ್ ಅವರು ಅಸಮಾನತೆಯ ಜಾತಿ ವ್ಯವಸ್ಥೆಯಿಂದ ಮನನೊಂದು ಬೌದ್ಧಧರ್ಮವನ್ನು ಸ್ವೀಕರಿಸಿರುವ ನೆಲೆಯಲ್ಲಿಯೇ ಇವರು ಕೂಡ ಬೌದ್ಧಧರ್ಮವನ್ನು ಸ್ವೀಕರಿಸಿದ್ದಾರೆ. ಇಲ್ಲಿ ಮರಿಸ್ವಾಮಿಯವರು ಬೌದ್ಧ ಉಪಾಸಕರಾಗಿದ್ದು, ಬುದ್ಧನ ಮೂಲ ಸಿದ್ಧಾಂತಗಳಿಗೆ ಮಾರುಹೋಗುವ ಮೂಲಕ, ಅಲ್ಲಿನ ವೈಚಾರಿಕ ನಿಲುವುಗಳಿಂದಾಗಿ ಈ ಧರ್ಮವನ್ನು ಆರಾಧನ ನೆಲೆಯಲ್ಲಿ ಅಪ್ಪಿಕೊಂಡಿದ್ದಾರೆ.

ಕನ್ನಡದ ಬೌದ್ಧ ಚಿಂತಕರಾದ ಆರ್. ಓಬಳೇಶ್ ಘಟ್ಟಿಯವರು 'ಬುದ್ಧನ ಧಮ್ಮ ಮತ್ತು ಇತರ ಧರ್ಮಗಳ ಒಂದು ವಿವೇಚನೆ' ಎಂಬ ಕೃತಿಯಲ್ಲಿ ಬೌದ್ಧಧರ್ಮವನ್ನು ಇತರ ಧರ್ಮಗಳೊಂದಿಗೆ ತೌಲನಿಕವಾದ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಈ ಕೃತಿಯಲ್ಲಿ ಲೇಖಕರು ಬೌದ್ಧಧರ್ಮದ ನಿಲುವುಗಳನ್ನು ವೈಚಾರಿಕ ನೆಲೆಯಲ್ಲಿ ಎತ್ತಿಹಿಡಿದಿದ್ದಾರೆ. ಬೌದ್ಧಧರ್ಮದ ವಿಚಾರಗಳ ಅಡಿಯಲ್ಲಿ ಪ್ರಪಂಚದ ಇತರೆ ಧರ್ಮಗಳಲ್ಲಿ ಅಂತರ್ಗತವಾಗಿರುವ ಮೂಲಭೂತವಾದಿ ಧೋರಣೆಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ಇಲ್ಲಿ ಇತರೆ ಧರ್ಮಗಳಲ್ಲಿ ಮಾತ್ರ ಮೂಲಭೂತವಾದಿ ಅಂಶಗಳನ್ನು ಗುರುತಿಸುವ ಇವರ ವಿಚಾರಗಳಲ್ಲಿ ಬುದ್ಧನ ನಂತರದಲ್ಲಿ ಬೌದ್ಧಧರ್ಮದಲ್ಲಿ ನೆಲೆಯೂರಿರುವ ಪುರೋಹಿತಶಾಹಿ ಧೋರಣೆಗಳನ್ನು ಪರಿಗಣಿಸಿರುವುದು ಕಂಡುಬರುವುದಿಲ್ಲ. ಹಾಗೆಯೇ ಇಂದು ಬೌದ್ಧಧರ್ಮದ ನೆಪದಲ್ಲಿ ಹಲವಾರು ಸಂಘಟನೆ ಹಾಗೂ ಹೋರಾಟಗಳು ತಳಸಮುದಾಯದ ದಲಿತರನ್ನು ತಮ್ಮ ಸ್ವಾರ್ಥಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿರುವ ಬಗೆಗೆ ಯಾವುದೇ ಪ್ರತಿಕ್ರಿಯೆಗಳು ಇವರ ವಿಚಾರಗಳಲ್ಲಿ ವ್ಯಕ್ತವಾಗುವುದಿಲ್ಲ. ಹೀಗಾಗಿ ಇವರ ವಿಚಾರಗಳು ಇತರ ಧರ್ಮಗಳನ್ನು ದೂರೀಕರಿಸುವ

ಮೂಲಕವಾದ ಬೌದ್ಧಧರ್ಮವನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿ ವ್ಯಕ್ತವಾಗಿವೆ. ಆದ್ದರಿಂದ ಇವರ ಚಿಂತನೆಗಳು ಬೌದ್ಧಧರ್ಮದ ಆರಾಧನ ನೆಲೆಯಲ್ಲಿ ಕಂಡುಬರುತ್ತವೆ.

ಕನ್ನಡದ ವೈಚಾರಿಕ ಚಿಂತಕರಲ್ಲಿ ಒಬ್ಬರಾಗಿರುವ ಕೆ.ಎಸ್. ಭಗವಾನ್ ಅವರು ತಮ್ಮ 'ಶಂಕರಾಚಾರ್ಯ ಮತ್ತು ಪ್ರತಿಗಾಮಿತನ' ಹಾಗೂ 'ಅನನ್ಯತೆ' ಎಂಬ ಕೃತಿಗಳಲ್ಲಿ ಬೌದ್ಧಧರ್ಮದ ಕುರಿತು ಆರಾಧನ ನಿಲುವು ತಾಳಿರುವುದು ಕಂಡುಬರುತ್ತದೆ. ಇವರ ಪ್ರಕಾರ ಬುದ್ಧಧಮ್ಮದಲ್ಲಿ ಮೌಢ್ಯಕ್ಕೆ ಅವಕಾಶವೇ ಇಲ್ಲ. ಅದು ಎಲ್ಲರಿಗೂ ಸರಿಸಮಾನರು ಎಂಬುದನ್ನು ಪ್ರತಿಪಾದಿಸುತ್ತದೆ. ಶ್ರಮ, ಸ್ವಾಭಿಮಾನ, ಮಾನವೀಯ ಗುಣ, ಭ್ರಾತೃತ್ವ, ಸಮಾನತೆಯನ್ನು ಬುದ್ಧಧಮ್ಮ ಎತ್ತಿಹಿಡಿಯುತ್ತದೆ. ಬಡವ-ಬಲ್ಲಿದ, ಮೇಲು-ಕೀಳು, ಆತ್ಮ-ಪರಮಾತ್ಮ ಇಂಥ ಕಣ್ಣಿಗೆ ಕಾಣದ ಯಾವ ಕಲ್ಪನೆ ಬುದ್ಧಧಮ್ಮದಲ್ಲಿ ಇಲ್ಲ. ಹಾಗಾಗಿ ಜಗತ್ತಿನ ಶ್ರೇಷ್ಠ ಧರ್ಮವಾಗಿ ಇದು ನಿಲ್ಲುತ್ತದೆ. ಆದ್ದರಿಂದ ಬೌದ್ಧಧರ್ಮವಾಗಲಿ, ಅದರ ಅನುಯಾಯಿಗಳಾಗಲಿ, ಮೂಲಭೂತವಾದಿಗಳಾಗಲು ಸಾಧ್ಯವೇ ಇಲ್ಲ ಎಂಬುದಾಗಿ ತಮ್ಮ ವಾದವನ್ನು ಮಂಡಿಸುತ್ತಾರೆ. ಇಲ್ಲಿ ಲೇಖಕರು ಬುದ್ಧನ ದಾರ್ಶನಿಕ ತತ್ವಗಳನ್ನು ಆಧಾರವಾಗಿಟ್ಟುಕೊಂಡು ಬುದ್ಧನ ಧರ್ಮ ಹಾಗೂ ಅದರ ಅನುಯಾಯಿಗಳು ಮೂಲಭೂತವಾದದಿಂದ ಹೊರಗುಳಿದಿದ್ದಾರೆ ಎಂಬ ವಾದವನ್ನು ಮಂಡಿಸುತ್ತಾರೆ. ಇದಕ್ಕೆ ಪ್ರಮುಖವಾದ ಕಾರಣವೆಂದರೆ, ಹಿಂದುಧರ್ಮದ ಅಸಮಾನತೆಯ ವಿರುದ್ಧ ಬೌದ್ಧಧರ್ಮವನ್ನು ಸಮಾನತೆಯ ನೆಲೆಯಲ್ಲಿ ಸ್ವೀಕರಿಸಿರುವುದಾಗಿದೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಜಾಗತಿಕ ಧರ್ಮವಾಗಿ ಬೆಳೆದಿರುವ ಬೌದ್ಧಧರ್ಮದ ಅಡಿಯಲ್ಲಿ ರಕ್ತಪಾತದಂತಹ ಕ್ರೌರ್ಯಗಳು ನಡೆಯುತ್ತಿವೆ. ಮಲೇಷಿಯಾದಲ್ಲಿ ಮುಸ್ಲಿಂ ಸಮುದಾಯವನ್ನು, ಶ್ರೀಲಂಕಾದಲ್ಲಿ ಅಲ್ಲಿನ ಮೂಲ ನಿವಾಸಿಗಳಾದ ತಮಿಳರ ಮೇಲೆ ಬೌದ್ಧರು ಹಲ್ಲೆ ನಡೆಸುತ್ತಿರುವ ಬಗೆಗಳು ಮೂಲಭೂತವಾದಿ ಧೋರಣೆಗಳಾಗಿವೆ. ಕರ್ನಾಟಕದ ಸಂದರ್ಭದಲ್ಲಿ ಅಂಬೇಡ್ಕರ್ ಅನುಯಾಯಿ ಪಂಥಗಳು ಜಾತಿ ಕೇಂದ್ರಿತ ನೆಲೆಯಲ್ಲಿ ಬೌದ್ಧಧರ್ಮವನ್ನು ಸಂಕುಚಿತಗೊಳಿಸುವ ಕೆಲಸದಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಆದರೆ ಭಗವಾನರು ಈ ಎಲ್ಲಾ ಸೂಕ್ಷ್ಮಗಳನ್ನು ಮರೆಮಾಚಿ ಬೌದ್ಧಧರ್ಮವನ್ನು ಮುಕ್ತವಾದ ನೆಲೆಯಲ್ಲಿ ಸ್ವೀಕರಿಸುತ್ತಿರುವ ಬಗೆಯು ಇವರು ಹೊಂದಿರುವ ಆರಾಧನ ನೆಲೆಗಳನ್ನು ತಿಳಿಸುತ್ತದೆ.

ಕನ್ನಡ ಚಿಂತನ ಪರಂಪರೆಯಲ್ಲಿ ಕಂಡುಬರುವ ಕೆಲವು ಎಡಪಂಥೀಯ ಧಾರೆಗಳಲ್ಲಿ ಬೌದ್ಧಧರ್ಮವನ್ನು ಆರಾಧನ ನೆಲೆಯಲ್ಲಿ ಸ್ವೀಕರಿಸಿರುವ ಅಂಶಗಳು ಹೆಚ್ಚಾಗಿ ಕಂಡುಬರುತ್ತವೆ. ಇದಕ್ಕೆ ಪ್ರಮುಖ ಕಾರಣವೆಂದರೆ, ಅಂಬೇಡ್ಕರ್ ವೈದಿಕಧರ್ಮದ ಅಸಮಾನತೆಯಿಂದ ನೊಂದು 'ನಾನು ಹಿಂದೂವಾಗಿ ಹುಟ್ಟಿದ್ದೇನೆ, ಆದರೆ ಹಿಂದೂವಾಗಿ ಸಾಯಲಾರೆ' ಎಂದು ಬೌದ್ಧಧರ್ಮಕ್ಕೆ ಮತಾಂತರ ಹೊಂದಿರುವುದಾಗಿದೆ. ಈ ಕಾರಣದಿಂದಾಗಿ ಬಹುತೇಕ ಅಂಬೇಡ್ಕರ್ ಅನುಯಾಯಿ ವರ್ಗದ ಚಿಂತನಧಾರೆಗಳು ಬೌದ್ಧಧರ್ಮದ ಬಗೆಗೆ ಆರಾಧನ ಸ್ವರೂಪ ತಾಳಿವೆ. ಅಂಬೇಡ್ಕರ್ ಬೌದ್ಧಧರ್ಮವನ್ನು ಸ್ವೀಕರಿಸಿದ್ದು ಜಾಗೃತ ನೆಲೆಯಲ್ಲಿ. ಅವರು ಮತಾಂತರ ಹೊಂದುವ ವೇಳೆಗಾಗಲೆ ಬುದ್ಧನ ನಂತರದಲ್ಲಿ ಬೌದ್ಧಧರ್ಮದಲ್ಲಿ ನೆಲೆಯೂರಿರುವ ಮಾರಕ ಪ್ರವೃತ್ತಿಗಳ ಬಗೆಗೆ ಸಂಪೂರ್ಣವಾದ

ತಿಳುವಳಿಕೆಯನ್ನು ಹೊಂದಿದ್ದರು. ಆದರೆ ಅಂಬೇಡ್ಕರ್ ನಂತರದ ಕನ್ನಡದ ಈ ಬೌದ್ಧ ಚಿಂತನೆಗಳಲ್ಲಿ ಬೌದ್ಧಧರ್ಮದ ಮೂಲಭೂತವಾದಿ ಧೋರಣೆಗಳನ್ನು ಮುಖ್ಯವಾಗಿ ಚರ್ಚಿಸದೆ, ಅಸಮಾನತೆಯ ಹಿಂದುತ್ವಕ್ಕೆ ಪರ್ಯಾಯ ಮಾರ್ಗವನ್ನು ಕಂಡುಕೊಳ್ಳುವ ನೆಲೆಯಲ್ಲಿ ಬೌದ್ಧಧರ್ಮದ ಬಗೆಗೆ ಆರಾಧನ ನಿಲುವುಗಳು ವ್ಯಕ್ತವಾಗಿರುವುದು ಕಂಡುಬರುತ್ತದೆ.

೩. ಸಂಘಟನಾತ್ಮಕ ಅಥವಾ ಜಾಗೃತ ನೆಲೆಗಳು

ಕನ್ನಡ ಚಿಂತನ ಸಾಹಿತ್ಯ ಪರಂಪರೆಯಲ್ಲಿ ಬೌದ್ಧ ದರ್ಶನವನ್ನು ವಿವಿಧ ಚಿಂತಕರು ವಿಭಿನ್ನ ನೆಲೆಯಲ್ಲಿ ಗ್ರಹಿಸುವ ಮೂಲಕವಾಗಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಅವುಗಳಲ್ಲಿ ಸಂಘಟನಾತ್ಮಕ ಅಥವಾ ಜಾಗೃತ ನೆಲೆಯ ವಿಚಾರಗಳು ಪ್ರಮುಖವಾಗಿ ಕಂಡುಬರುತ್ತವೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಎಂಬತ್ತರ ದಶಕದ ಪೂರ್ವದಲ್ಲಿ ಬೌದ್ಧದರ್ಶನವನ್ನು ಸ್ಥಾಪಿತ ಹಾಗೂ ಆಧ್ಯಾತ್ಮಿಕ ನೆಲೆಯಲ್ಲಿ ಚಿತ್ರಿಸಿಕೊಂಡು ಬಂದಿರುವ ಅಂಶಗಳು ನಮಗೆ ತಿಳಿದುಬರುತ್ತವೆ. ಆದರೆ ಸಾಮಾಜಿಕ ಅಸಮಾನತೆಗೆ ಪರ್ಯಾಯ ಮಾರ್ಗಗಳನ್ನು ರೂಪಿಸಿಕೊಳ್ಳುವ ನೆಲೆಯಲ್ಲಾಗಲಿ, ಜಾಗೃತ ನೆಲೆಯನ್ನು ಕಂಡುಕೊಳ್ಳುವ ವೈಚಾರಿಕ ದೃಷ್ಟಿಕೋನಗಳ ಅಡಿಯಲ್ಲಾಗಲಿ ಬುದ್ಧ ಹಾಗೂ ಆತನ ಧರ್ಮವು ಮಿಡಿಯುವ ಅಂಶಗಳು ಕಂಡುಬರುವುದಿಲ್ಲ. ಮೂಲಭೂತವಾದಿ ನೆಲೆಯ ಹಿಂದೂಧರ್ಮದ ಚೌಕಟ್ಟಿನೊಳಗೆ ಬುದ್ಧನ ದರ್ಶನವಾಗುವುದು ನವೋದಯ, ನವ್ಯ, ಪ್ರಗತಿಶೀಲ ಸಾಹಿತ್ಯ ಪರಂಪರೆಯಲ್ಲಿ ಕಂಡುಬರುತ್ತದೆ. ಕರ್ನಾಟಕಕ್ಕೆ ಅಂಬೇಡ್ಕರ್ ಅವರ ವಿಚಾರಗಳು ಪರಿಚಯವಾದ ತರುವಾಯದಲ್ಲಿ ಕನ್ನಡ ಸಾಹಿತ್ಯ ವಲಯದಲ್ಲಿ ಬುದ್ಧನನ್ನು ಗ್ರಹಿಸುವ ನೆಲೆಗಳು ಭಿನ್ನ ಸ್ವರೂಪವನ್ನು ಪಡೆದುಕೊಂಡವು. ಅಂಬೇಡ್ಕರರ ಆಶಯಗಳನ್ನು ಸಾಕಾರಗೊಳಿಸುವ ನೆಲೆಯಲ್ಲಿ ಕರ್ನಾಟಕದಲ್ಲಿ ಜನ್ಮತಳೆದ 'ದಲಿತ ಕ್ರಿಯಾ ಸಮಿತಿ' ಹಾಗೂ ನಂತರದ 'ಕರ್ನಾಟಕದ ದಲಿತ ಸಂಘರ್ಷ ಸಮಿತಿ'ಗಳು ಅಂಬೇಡ್ಕರ್ ಸ್ವೀಕರಿಸಿದ ಬೌದ್ಧಧರ್ಮದ ಅಡಿಯಲ್ಲಿ ಸಂಘಟನ ಸ್ವರೂಪದಲ್ಲಿ ವೈಚಾರಿಕ ಮಾರ್ಗವೊಂದನ್ನು ಕಂಡುಕೊಂಡವು. ಇದಕ್ಕೆ ಕರ್ನಾಟಕದಲ್ಲಿ ಸಂಭವಿಸಿದ 'ಬೂಸಾ ಸಾಹಿತ್ಯ ಪ್ರಕರಣ'ದಿಂದ ದಲಿತ ಚಿಂತಕ ವರ್ಗಕ್ಕೆ ಹೊಸ ಮಾರ್ಗವೊಂದು ತೆರೆದುಕೊಂಡಿತು. ಇದರಿಂದ ಜಾಗೃತರಾದ ದಲಿತ ವಿದ್ಯಾವಂತ ವರ್ಗವು ಅಂಬೇಡ್ಕರ್ ಮಾರ್ಗದಲ್ಲಿ ಬೌದ್ಧ ದರ್ಶನದತ್ತ ಮುಖಮಾಡಿತು. ಇದರ ಫಲವಾಗಿ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಬಂಡಾಯ ಹಾಗೂ ದಲಿತ ಸಾಹಿತ್ಯ ಪ್ರಕಾರಗಳು ಜನ್ಮತಳೆದವು.

ಎಂಭತ್ತರ ದಶಕದ ತರುವಾಯ ಜನ್ಮತಳೆದ ಬಂಡಾಯ ಮತ್ತು ದಲಿತ ಸಾಹಿತ್ಯ ಪ್ರಕಾರಗಳಲ್ಲಿ ಬುದ್ಧನ ವೈಚಾರಿಕ ಚಿಂತನೆಗಳು ಹೆಚ್ಚಾಗಿ ಕಂಡುಬರುತ್ತವೆ. ಈ ಚಿಂತನೆಗಳು ವರ್ಗ ಅಸಮಾನತೆ ಮತ್ತು ಅಸ್ಪೃಶ್ಯತೆಯಂತಹ ತಾರತಮ್ಯ ನಿಲುವುಗಳನ್ನು ವಿರೋಧಿಸುವ ನೆಲೆಯಲ್ಲಿ ವ್ಯಕ್ತವಾಗಿವೆ. ಈ ಚಿಂತನೆಗಳು ಅಸಮಾನತೆಯನ್ನು ಸೃಷ್ಟಿಸಿಕೊಂಡು ಬಂದ ಹಿಂದೂ ಮೂಲಭೂತವಾದವನ್ನು ವಿರೋಧಿಸಿ, ದಮನಿತ ಸಮುದಾಯಗಳಲ್ಲಿ ಜಾಗೃತಿಯನ್ನು ಮೂಡಿಸುವ ವೈಚಾರಿಕ ಚಿಂತನೆಗಳನ್ನು ಬಿತ್ತರಿಸುತ್ತ ಬಂದಿವೆ. ಇಲ್ಲಿನ ಬಹುತೇಕ ಚಿಂತನೆಗಳು ಪುರೋಹಿತಶಾಹಿ ಧೋರಣೆಗಳನ್ನು

ವಿಮರ್ಶೆಗೊಳಪಡಿಸುವ ಮೂಲಕ ಎಡಪಂಥೀಯ ಚಿಂತನೆಯಲ್ಲಿರುವ ದೋಷಗಳನ್ನು ಎತ್ತಿಹಿಡಿಯುವ ಮಾದರಿಯನ್ನು ಅನುಸರಿಸಿಕೊಂಡು ಬಂದಿವೆ. ಸಂಘಟನ ನೆಲೆಯಲ್ಲಿ ವ್ಯಕ್ತವಾಗಿರುವ ಬೌದ್ಧ ಚಿಂತನೆಗಳು ಕೆಲವರ ಸ್ವಾರ್ಥ ಹಿತಾಸಕ್ತಿಗೂ ಕಾರಣವಾಗಿವೆ.

ಕನ್ನಡದ ದಲಿತ ಬೌದ್ಧ ಚಿಂತಕರಾದ ಮ.ನ.ಜವರಯ್ಯನವರು ಬೌದ್ಧಧರ್ಮದ ಜಾಗೃತ ನೆಲೆಗಳನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ಅಂಬೇಡ್ಕರ್ ಅವರು ಬುದ್ಧನ ಧಮ್ಮದಲ್ಲಿ ಕಂಡುಕೊಂಡ ಬಹುಮುಖ್ಯ ಅಂಶಗಳನ್ನು ಎತ್ತಿಹಿಡಿಯುತ್ತಾರೆ. ಸಾಮಾಜಿಕ ಅಸಮಾನತೆಯ ನೋವಿನಿಂದ ಬಳಲಿದ ಬಾಬಾಸಾಹೇಬರು ತಮ್ಮ ಈ ನೋವಿಗೆ ಬೌದ್ಧಧಮ್ಮದ ತಾತ್ವಿಕ ಮೌಲ್ಯಗಳಿಂದ ಪರಿಹಾರವನ್ನು ಕಂಡುಕೊಂಡ ಬಗೆಯನ್ನು ಇಲ್ಲಿ ಪ್ರಸ್ತಾಪಿಸುತ್ತಾರೆ. "ಕರುಣೆ ಮತ್ತು ಪ್ರಜ್ಞೆಯಂಥ ಸಾರ್ವಕಾಲಿಕ ಮಾನವೀಯ ಸಿದ್ಧಾಂತಗಳು ಬುದ್ಧಧಮ್ಮದ ಎರಡು ಬುನಾದಿ ಕಲ್ಲುಗಳು ಎಂಬುದು ಎಷ್ಟರಮಟ್ಟಿಗೆ ಸತ್ಯವೋ, ಅಷ್ಟರಮಟ್ಟಿಗೆ ಅವುಗಳನ್ನು ಅತ್ಯಂತ ಪ್ರಧಾನ ವಿಷಯಗಳನ್ನಾಗಿ ಅಂಬೇಡ್ಕರರು ಎತ್ತಿ ಹೇಳಿರುವುದಕ್ಕೆ ಮುಖ್ಯವಾಗಿ ಎರಡು ಕಾರಣಗಳುಂಟು: ೧. ಅವೆರಡೂ ಮಾನವ ಸಮಾಜಕ್ಕೆ ಅತ್ಯಗತ್ಯವಾದ ಎರಡು ಅತಿಶ್ರೇಷ್ಠ ಮೌಲ್ಯಗಳು. ೨. ಹಾಗೆಯೇ ಜಾತಿಯ ಶ್ರೇಣೀಕರಣ ಮಾತ್ರವಲ್ಲದೆ ಅನ್ಯಾನ್ಯ ಧರ್ಮಗಳ ನಡುವಿನ ನಿತ್ಯಕಲಹ ಅಥವಾ ನಿರಂತರ ಸಂಘರ್ಷವೇ ಅದರ ಆತ್ಮವೆನಿಸಿರುವ ಭಾರತೀಯ ಸಂಸ್ಕೃತಿಯಲ್ಲಿ, ಆ ಮೌಲ್ಯಗಳು ಇಲ್ಲವೇ ಇಲ್ಲವೆಂಬುದನ್ನು ಅಂಬೇಡ್ಕರ್ ಮನಗಂಡಿದ್ದಾರೆ; ಅಷ್ಟೇ ಅಲ್ಲದೆ, ಅಸ್ಪೃಶ್ಯತೆಯಂಥ ಪ್ರಜ್ಞಾಹೀನ ಹಾಗೂ ಕರುಣಾಶೂನ್ಯ ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ, ಅಂಬೇಡ್ಕರರು ಬುದ್ಧಧಮ್ಮದ ಎರಡು ಬುನಾದಿ ಕಲ್ಲುಗಳಾದ ಪ್ರಜ್ಞೆ ಮತ್ತು ಕರುಣೆಗಳೆರಡನ್ನು ಅತಿ ಮುಖ್ಯವಾಗಿ ಎತ್ತಿ ಹೇಳಿದ್ದಾರೆ"[೧೧] ಎಂಬುದಾಗಿ ಅವರು ತಮ್ಮ ನಿಲುವುಗಳನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿ ಅಂಬೇಡ್ಕರ್ ಸ್ವೀಕರಿಸಿದ ಧಮ್ಮವು ದಮನಿತ ಸಮುದಾಯಗಳಿಗೆ ಸ್ವಾಭಿಮಾನದ ಸಂಕೇತವಾಗಿ ಕಂಡುಬರುತ್ತದೆ ಎಂಬುದು ಇವರ ವಾದವಾಗಿದೆ. ಬುದ್ಧಧಮ್ಮದಲ್ಲಿರುವ 'ಪ್ರಜ್ಞೆ' ಮತ್ತು 'ಕರುಣೆ'ಯಂತಹ ಮಾನವೀಯ ಮೌಲ್ಯಗಳು ಅಸ್ಪೃಶ್ಯ ಜನತೆಯ ಬದುಕಿನಲ್ಲಿ ಜಾಗೃತಿಯನ್ನು ಮೂಡಿಸುತ್ತವೆ. ಆದ್ದರಿಂದ ಮಾನವೀಯ ಮೌಲ್ಯಗಳನ್ನು ಕಳೆದುಕೊಂಡಿರುವ ವೈದಿಕತೆಯಿಂದ ಬಿಡುಗಡೆಯನ್ನು ಪಡೆಯುವುದಕ್ಕೆ ಬುದ್ಧನ ಈ ತತ್ವಗಳು ಅತ್ಯಂತ ಮಹತ್ವವೆಂಬುದನ್ನರಿತ ಅಂಬೇಡ್ಕರ್ ಅವರು ಬೌದ್ಧಧಮ್ಮವನ್ನು ತಮ್ಮ ಹೋರಾಟದ ಭಾಗವಾಗಿ ಸ್ವೀಕರಿಸಿದರು ಎಂಬುದು ಮ.ನ.ಜವರಯ್ಯನವರ ವಾದವಾಗಿದೆ.

ದೇವನೂರ ಮಹಾದೇವ ಅವರು ಬೌದ್ಧಧರ್ಮದ ಅಡಿಯಲ್ಲಿ ತಮ್ಮ ಹೋರಾಟವನ್ನು ಮುಂದುವರೆಸಿರುವ ಸಂಘಟನೆಗಳ ಕುರಿತಾಗಿ ತಮ್ಮ ನಿಲುವುಗಳನ್ನು ವ್ಯಕ್ತಪಡಿಸುತ್ತಾರೆ. ಅವರ ಪ್ರಕಾರ "ಈಗ ಬೌದ್ಧಧಮ್ಮ ಸ್ವೀಕರಿಸಿ ದಲಿತ ಸಂಘರ್ಷ ಸಮಿತಿ ಹೊಸಹುಟ್ಟು ಪಡೆದಿದೆ. ಅದು ಈ ಕೆಲಸವನ್ನು ಇಲ್ಲಿಗೆ ನಿಲ್ಲಿಸಿದರೆ ಅದು ಇಲ್ಲಿಗೇ ನಿಲ್ಲುತ್ತದೆ. ಈಗ ದಸಂಸ ಮಾಡಬೇಕಾದ ಕೆಲಸವೆಂದರೆ, ತನ್ನೊಡನೆ ಎಲ್ಲಾ ಬಣಗಳನ್ನು ಸೇರಿಸಿಕೊಂಡು ತಾಲ್ಲೂಕು, ಹೋಬಳಿ, ಗ್ರಾಮ ಮಟ್ಟದಲ್ಲಿ ಬಂತೇಜಿಗಳ ಮಾರ್ಗದರ್ಶನ, ಆ ತಾಲ್ಲೂಕಿನ ದಲಿತ ನೌಕರರ ಸಹಕಾರದೊಡನೆ

‘ಬುದ್ಧವಿಹಾರ’ ಸ್ಥಾಪಿಸಿ ಅಲ್ಲಿ ವಾಚನಾಲಯ, ಧ್ಯಾನಕೇಂದ್ರ, ಗ್ರಂಥಾಲಯ, ಉದ್ಯೋಗ ಮಾಹಿತಿ ಕೇಂದ್ರ, ಮಕ್ಕಳ ಪಾಲನ ಕೇಂದ್ರ ಇತ್ಯಾದಿ ಚಟುವಟಿಕೆ ಆರಂಭಿಸಬೇಕಾಗಿದೆ. ಈ ನಡಿಗೆ ದಲಿತರಿಂದ ಆರಂಭವಾದರೂ ಅದರಾಚೆ ಹಬ್ಬಬೇಕಾಗಿದೆ”[೧೨] ಎಂಬುದಾಗಿ ಬೌದ್ಧಧಮ್ಮದ ಅಡಿಯಲ್ಲಿ ಹೋರಾಟದ ನೆಲೆಯ ತಮ್ಮ ಚಿಂತನಧಾರೆಯನ್ನು ವ್ಯಕ್ತಪಡಿಸುತ್ತಾರೆ. ದೇವನೂರರ ಈ ವಿಚಾರಗಳ ಹಿಂದೆ ಬಾಬಾಸಾಹೇಬ ಅಂಬೇಡ್ಕರ್ ಅವರ ಆಶಯಗಳಿವೆ. ಅಂಬೇಡ್ಕರ್ ಅವರು ಧರ್ಮಕ್ಕಾಗಿ ಧಮ್ಮವನ್ನು ಸ್ವೀಕರಿಸಿದವರಲ್ಲ. ಹೋರಾಟದ ನೆಲೆಯ ಸಂಘಟನೆಗೆ ಪ್ರೇರಕ ಶಕ್ತಿಯಾಗಿ ಧಮ್ಮವನ್ನು ಸ್ವೀಕರಿಸಿದರು. ಆದ್ದರಿಂದ ಇಂದಿನ ನಮ್ಮ ಹೋರಾಟಗಳು ಕೂಡ ಸಾಮಾನ್ಯ ಜನತೆಯನ್ನು ಜಾಗೃತಗೊಳಿಸುವ ನೆಲೆಯಲ್ಲಿ ಮುನ್ನಡೆಯಬೇಕಾಗಿದೆ. ಆ ನಿಟ್ಟಿನಲ್ಲಿ ಸಂಘಟನೆಗಳು ಹಾಗೂ ಭಂತೇಜಿಗಳು ಕಾರ್ಯಪ್ರವೃತ್ತರಾಗಬೇಕೆಂಬ ವಿಚಾರವನ್ನು ವ್ಯಕ್ತಪಡಿಸುತ್ತಾರೆ.

ಬೌದ್ಧಧರ್ಮವನ್ನು ಕೇಂದ್ರವಾಗಿಟ್ಟುಕೊಂಡು ಹೋರಾಟವನ್ನು ಮುಂದುವರೆಸಿರುವ ಸಂಘಟನೆಗಳ ಕುರಿತು ಬರಗೂರು ರಾಮಚಂದ್ರಪ್ಪನವರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಇಂದು ದಲಿತ ಸಮುದಾಯವನ್ನು ಜಾಗೃತ ನೆಲೆಯಲ್ಲಿ ಮುನ್ನೆಡೆಸುವ ಜವಾಬ್ದಾರಿಯನ್ನು ಹೊತ್ತು, ಅಂಬೇಡ್ಕರ್ ಮಾರ್ಗದಲ್ಲಿ ಮುನ್ನೆಡೆಯುತ್ತಿರುವ ಸಂಘಟನೆಗಳ ಕಾರ್ಯವೈಖರಿಯ ಬಗೆಗಿಭಿವರ ಪ್ರತಿಕ್ರಿಯೆ ಹೀಗಿದೆ; “ಸಾಮಾಜಿಕ ಚಳವಳಿಗಳು ಬುದ್ಧನನ್ನು ‘ಆಚರಣೆ’ ಹಂತದಲ್ಲಿ ಸ್ವೀಕರಿಸ ಹೊರಟರೆ ಅದು ಚಳವಳಿಗೆ ಒಡ್ಡಿಕೊಳ್ಳುವ ಮಿತಿಯಾಗುತ್ತದೆ. ಬುದ್ಧನೇ ಪ್ರತಿಪಾದಿಸಿದ ‘ಜಾಗೃತ ಕ್ರಿಯಾಶೀಲ ಮನಸ್ಸಿನ ಕಲ್ಪನೆ’ಗೆ ವಿರೋಧವಾಗುತ್ತದೆ. ಇಷ್ಟಕ್ಕೂ ಎಲ್ಲ ಸಮಸ್ಯೆಗಳಿಗೂ ಬುದ್ಧನೇ ಪರಿಹಾರವೆಂದು ಭಾವಿಸುವುದು ಒಂದು ಭ್ರಮೆ. ಬುದ್ಧನ ಚಿಂತನೆಗಳು ನಮ್ಮ ಹೋರಾಟದ ಹಾಗೂ ಸಮಾಜ ಬದಲಾವಣೆಯ ಹಾದಿಯಲ್ಲಿ ಎಷ್ಟು ಉಪಯುಕ್ತವೆಂದು ಪರಿಭಾವಿಸಿ ಸ್ವೀಕರಿಸುವುದು ಮತ್ತು ಐತಿಹಾಸಿಕ ಕಾರಣಗಳಿಗಾಗಿ ಬುದ್ಧನನ್ನು ನಮ್ಮ ಅದ್ಭುತ ಚೇತನವೆಂದು ಗೌರವಿಸುವುದು ನಮ್ಮ ಚಳವಳಿಗಳ ಜವಾಬ್ದಾರಿಯಾಗಬೇಕು.”[೧೩] ಆಗ ಮಾತ್ರವೇ ಬಾಬಾಸಾಹೇಬರು ಕಂಡ ಕನಸು ಹಾಗೂ ಅವರ ಶ್ರಮ ಸಾರ್ಥಕವಾಗುತ್ತದೆ. ಆದರೆ ಇಂದು ಇದಕ್ಕೆ ವಿರುದ್ಧ ನೆಲೆಯಲ್ಲಿ ಸಂಘಟನೆಗಳು ತಮ್ಮ ಸ್ವಾರ್ಥ ರಾಜಕಾರಣಕ್ಕೆ ಬುದ್ಧನನ್ನು ಬಳಸಿಕೊಳ್ಳುತ್ತಿರುವ ಬಗ್ಗೆ ಆತಂಕವನ್ನು ವ್ಯಕ್ತಪಡಿಸುತ್ತಾರೆ. ಪ್ರಗತಿಪರ ಸಂಘಟನೆ ಹಾಗೂ ಹೋರಾಟಗಳಲ್ಲಿ ಇದ್ದೂ ನಿಷ್ಕ್ರಿಯಾವಸ್ಥೆ ತಲುಪುತ್ತಿರುವ ‘ಚಿಂತಕ’ರಿಗೆ ಬುದ್ಧ ಹೆಚ್ಚು ಪ್ರಿಯವಾಗುತ್ತಿರುವುದು ಮತ್ತು ಈ ಚಿಂತಕ ನೆಲೆಯನ್ನು ಚಳವಳಿಗಳು ‘ಆಚರಣೆ’ಯಾಗಿಸ ಹೊರಡುವುದು ಒಂದು ವಿಪರ್ಯಾಸ ಎಂಬುದಾಗಿ ತಿಳಿಸುತ್ತಾರೆ. ಸಂಘಟನ ನೆಲೆಯಲ್ಲಿ ಬುದ್ಧನ ವಿಚಾರಗಳು ದಮನಿತ ಸಮುದಾಯಗಳಿಗೆ ಸ್ಪಂದಿಸುವ ಬದಲು ಮೂಲಭೂತವಾದ ಸ್ವರೂಪವನ್ನು ಪಡೆದುಕೊಳ್ಳುತ್ತಿರುವ ಬಗೆಯಲ್ಲಿ ತಮ್ಮ ವಿಚಾರಗಳನ್ನು ಅನಾವರಣಗೊಳಿಸಿದ್ದಾರೆ.

ಪ್ರಸ್ತುತ ಸಂದರ್ಭದಲ್ಲಿ ಬೌದ್ಧಧರ್ಮದ ಅಡಿಯಲ್ಲಿ ದಲಿತರು ಜಾಗೃತರಾಗಲು ಹವಣಿಸುತ್ತಿದ್ದಾರೆ. ಇವರ ಈ ಹೋರಾಟಕ್ಕೆ ಪ್ರಮುಖ ಕಾರಣಕರ್ತರಾದವರು ಬಾಬಾಸಾಹೇಬರು. ಇವರ ಮಾರ್ಗದಲ್ಲಿ

ಮುನ್ನೆಡೆಯುತ್ತಿರುವ ಸಂಘಟನೆಗಳ ಸ್ವರೂಪವನ್ನು ಕುರಿತು ದಲಿತ ಚಿಂತಕರಾದ ಪಿ.ಮಹಾದೇವಯ್ಯನವರು ತಮ್ಮದೇ ಆದ ಚಿಂತನೆಗಳನ್ನು ವ್ಯಕ್ತಪಡಿಸಿದ್ದಾರೆ. ಈ ಚಿಂತನೆಗಳು ಸಂಘಟನೆಗಳ ಕಾರ್ಯ ಸ್ವರೂಪಕ್ಕೆ ಪೂರಕವಾದ ನೆಲೆಯಲ್ಲಿವೆ. "ಬೌದ್ಧಧರ್ಮಕ್ಕೆ ಯಾರು ಹೋಗಬೇಕು ಅಥವಾ ಯಾರನ್ನು ಜ್ಞಾನದೆಡೆಗೆ ಒಯ್ಯಬೇಕು ಎಂಬ ವಿಚಾರಕ್ಕೆ ಖಚಿತವಾದ ಉತ್ತರವನ್ನು ಕಂಡುಕೊಳ್ಳಬೇಕಿದೆ. ದಲಿತರಲ್ಲಿ ವಯಸ್ಸಿನ ಅಂತರ ಮತ್ತು ಲಿಂಗ ತಾರತಮ್ಯವಿಲ್ಲದೆ ಬುದ್ಧನೆಡೆಗೆ ಮರಳಿ ಮನೆಗೆ ಹೋಗುವುದಕ್ಕೆ ಸಾಧ್ಯವೇ? ಏಕೆಂದರೆ ಒಂದೇ ಮನೆಯಲ್ಲಿ ಎರಡಕ್ಕಿಂತ ಹೆಚ್ಚು ಧರ್ಮದಲ್ಲಿ ಒಲವುಳ್ಳ ಮಂದಿ ಇದ್ದಾರೆ. ಉದಾಹರಣೆಗೆ ತಂದೆ ಬೌದ್ಧ ಧರ್ಮದಲ್ಲಿದ್ದರೆ, ತಾಯಿ ಹಿಂದೂ ಧರ್ಮದಲ್ಲಿ ಇರುತ್ತಾಳೆ. ಹಿರಿಯ ಮಗ ಮತ್ತು ಸೊಸೆ ಕ್ರೈಸ್ತಧರ್ಮದಲ್ಲಿ ಇರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ. ಈ ಮಾಹಿತಿಯನ್ನು ಗಮನಿಸಿದಾಗ ಆಶ್ಚರ್ಯವೆನಿಸಬಹುದು. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಬೌದ್ಧ ದೀಕ್ಷೆ ತಿಳವಳಿಕೆ ಕೊಡಲು ಯಾರಿಗೆ ಹೆಚ್ಚು ಒತ್ತನ್ನು ನೀಡಬೇಕಾಗಿದೆ. ಅಂದರೆ ದಲಿತರಲ್ಲೇ ಯಾವ ವಯಸ್ಸಿನವರಿಗೆ ಹೆಚ್ಚು ಒತ್ತು ನೀಡಬೇಕೆಂದು. ದಲಿತರಲ್ಲಿ ಯುವಕರನ್ನು ಗುರಿಯಾಗಿಟ್ಟುಕೊಂಡು ಕಾರ್ಯಕ್ರಮವನ್ನು ಆರಂಭ ಮಾಡಬೇಕಾಗಿದೆ. ಇವರನ್ನು ತಯಾರು ಮಾಡುವ ವಿಧಾನವನ್ನು ಕುರಿತು ಚಿಂತಿಸಬೇಕಾಗಿದೆ"[೧೪] ಎಂಬ ವಿಚಾರವನ್ನು ಮಂಡಿಸುತ್ತಾರೆ.

ಇಲ್ಲಿ ಲೇಖಕರು ಸಮಕಾಲೀನ ಸಂದರ್ಭದಲ್ಲಿ ಬೌದ್ಧಧರ್ಮದ ಅಡಿಯಲ್ಲಿ ದಲಿತರನ್ನು ಸ್ವಾಭಿಮಾನದ ನೆಲೆಯಲ್ಲಿ ಮುನ್ನಡೆಸಬೇಕಾದ ಅನಿವಾರ್ಯತೆಯನ್ನು ಪ್ರಸ್ತಾಪಿಸುತ್ತಾರೆ. ಈ ಸಂದರ್ಭದಲ್ಲಿ ಜಾಗೃತ ನೆಲೆಯಲ್ಲಿ ತಮ್ಮ ವಿಚಾರಗಳನ್ನು ಮಂಡಿಸುತ್ತಿರುವ ಇವರು, ಬೌದ್ಧಧರ್ಮವನ್ನು ಯುವಜನತೆಯ ಮೂಲಕ ಪ್ರಚಾರಗೊಳಿಸುವ ಆಲೋಚನೆಯನ್ನು ವ್ಯಕ್ತಪಡಿಸುತ್ತಾರೆ. ಇದಕ್ಕೆ ಕಾರಣವೆಂದರೆ, ಇಂದು ಬೌದ್ಧಧರ್ಮವು ಜಾಗೃತಿಯ ಸಂಕೇತವಾಗಬೇಕಾದ ಅನಿವಾರ್ಯತೆಯಾಗಿದೆ. ಸನಾತನ ಧರ್ಮವನ್ನೇ ತಮ್ಮ ಧರ್ಮವೆಂದು ನಂಬಿಕೊಂಡು ಬಂದಿರುವ ಹಿರಿಯ ತಲೆಮಾರಿನ ಜನತೆಯಿಂದ ಬೌದ್ಧಧರ್ಮದ ಅಡಿಯಲ್ಲಿ ಪ್ರಗತಿಯನ್ನು ಸಾಧಿಸಲು ಸಾಧ್ಯವಿಲ್ಲ. ಅವರು ಯಾವುದಾದರೂ ಒತ್ತಡಕ್ಕೆ ಮಣಿದು ಮತಾಂತರಗೊಂಡರು ಸಹ ತಮ್ಮ ಹಿಂದಿನ ಪೂಜಾ, ಆಚರಣೆಯಂತಹ ಪದ್ಧತಿಯನ್ನು ಇಲ್ಲಿಯೂ ಮುಂದುವರೆಸುತ್ತಾರೆ. ಈಗಾಗಲೇ ಮತಾಂತರಗೊಂಡಿರುವ ಎಷ್ಟೋ ಜನರು ತಮ್ಮ ಮೂಲ ಪರಂಪರೆಯನ್ನು ಇಲ್ಲಿಯೂ ಮುಂದುವರೆಸುತ್ತಿದ್ದಾರೆ. ಇದನ್ನು ಅರಿತ ಚಿಂತಕರು ಬೌದ್ಧಧರ್ಮದ ಅಡಿಯಲ್ಲಿನ ಸೈದ್ಧಾಂತಿಕ ಹೋರಾಟಕ್ಕೆ ಯುವಜನತೆಯನ್ನು ಕೇಂದ್ರವಾಗಿಟ್ಟುಕೊಳ್ಳುವ ಆಶಯವನ್ನು ವ್ಯಕ್ತಪಡಿಸುತ್ತಾರೆ. ಆ ಮೂಲಕ ಜಾಗೃತ ನೆಲೆಯಲ್ಲಿ ಅಂಬೇಡ್ಕರ್ ವಿಚಾರಗಳ ಅಡಿಯಲ್ಲಿ ಮುನ್ನೆಡೆಯಬೇಕಾದ ಅನಿವಾರ್ಯತೆಯನ್ನು ವ್ಯಕ್ತಪಡಿಸಿದ್ದಾರೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಸಂಘಟನ ನೆಲೆಯ ಬೌದ್ಧ ದರ್ಶನವು ಚರ್ಚಿತವಾಗುತ್ತಿವುದು ಮತ್ತು ಕಾರ್ಯರೂಪಗೊಳ್ಳುತ್ತಿರುವುದು ಪ್ರಗತಿಪರ ಧಾರೆಗಳಲ್ಲಿ. ವೈದಿಕಧರ್ಮದ ಅಸಮಾನತೆ ಮತ್ತು ಅಸ್ಪೃಶ್ಯತೆಯಂತಹ ಅಮಾನವೀಯತೆಯ ವಿರುಧ್ಧ ಸಮರ ಸಾರಲು ಈ ನಾಡಿನ ಮೂಲ

ನಿವಾಸಿಗಳ ಧರ್ಮವಾಗಿದ್ದ ಬೌದ್ಧಧರ್ಮಕ್ಕೆ ಅಂಬೇಡ್ಕರ್ ಮತಾಂತರಗೊಂಡರು. ಕರ್ನಾಟಕದಲ್ಲಿ ದಲಿತ ಸಂಘಟನೆ ಹಾಗೂ ಇತರೆ ಪ್ರಗತಿಪರ ಸಂಘಟನೆಗಳು ಬಾಬಾಸಾಹೇಬರನ್ನು ಅನುಸರಿಸುವ ನೆಲೆಯಲ್ಲಿ ತಮ್ಮ ಹೋರಾಟವನ್ನು ಮುನ್ನೆಡೆಸುತ್ತಿವೆ. ಆದ ಕಾರಣ ಕನ್ನಡದ ಈ ವಿಚಾರವಾದಿಗಳ ಚಿಂತನಧಾರೆಗಳಿಗೆ ಬಾಬಾಸಾಹೇಬರ ನೇರ ಪ್ರಭಾವವಿದೆ.

೪. ಮೂಲಭೂತವಾದ ವಿರೋಧಿ ನೆಲೆಗಳು

ಧಾರ್ಮಿಕ ಮೂಲಭೂತವಾದವನ್ನು ವಿರೋಧಿಸುವ ನೆಲೆಯಲ್ಲಿ ಕನ್ನಡ ಪ್ರಗತಿಪರ ಚಿಂತಕರು ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸಿದ್ದಾರೆ. ಅಂಬೇಡ್ಕರ್ ವಿಚಾರಗಳಿಂದ ಪ್ರಭಾವಿತರಾದ ಕನ್ನಡದ ಎಡಪಂಥೀಯ ಚಿಂತಕರು ವರ್ಣಾಶ್ರಮದ ನೆಲೆಯಲ್ಲಿ ಅಸಮಾನತೆಯನ್ನು ಪಾಲಿಸಿಕೊಂಡು ಬಂದ ಬಗೆಯನ್ನು ತೀವ್ರವಾಗಿ ವಿರೋಧಕ್ಕೆ ಗುರಿಪಡಿಸಿದ್ದಾರೆ. ಇಂತಹ ವಿರೋಧಿ ನೆಲೆಯ ಚಿಂತನೆಗಳನ್ನು ಈ ಮುಂದಿನಂತೆ ಅಧ್ಯಯಯನಕ್ಕೆ ಒಳಪಡಿಸಲಾಗಿದೆ.

ಕನ್ನಡದ ದಲಿತ ಚಿಂತಕರಾದ ಅರವಿಂದ ಮಾಲಗತ್ತಿಯವರು ಈ ನಾಡಿನ ಮೂಲ ನಿವಾಸಿಗಳನ್ನು ಆರ್ಯರು ತಮ್ಮ ಅಡಿಯಾಳಾಗಿ ಮಾಡಿಕೊಂಡು, ಅಸಮಾನತೆಯನ್ನು ಸಮರ್ಥಿಸಿಕೊಳ್ಳಲು ಧರ್ಮಗ್ರಂಥಗಳನ್ನು ರಚಿಸಿಕೊಂಡ ಬಗೆಯನ್ನು ವಿರೋಧಕ್ಕೆ ಗುರಿಪಡಿಸುತ್ತಾರೆ. ಸಮಾನತೆಯನ್ನು ಸಾರುವ ಬೌದ್ಧಧರ್ಮದ ಆಶಯಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಬದುಕುತ್ತಿದ್ದ ಇಲ್ಲಿನ ಮೂಲ ನಿವಾಸಿಗಳನ್ನು ಪುರೋಹಿತಶಾಹಿಯು ತನ್ನ ತಂತ್ರಗಾರಿಕೆಯ ಮೂಲಕ ಗುಲಾಮತ್ವದ ನೆಲೆಗೆ ತಳ್ಳಿದ ಬಗೆಯನ್ನು ಇವರು ಗುರುತಿಸುತ್ತಾರೆ. “ಬುದ್ಧನ ಮುಖಾಮುಖಿಯಲ್ಲಿ ಕಂಗಾಲಾಗಿ ಬುದ್ಧತ್ವವನ್ನೇ ನುಂಗಿ ಮೇಲೆ ತಿಳಿ ನೀರು ಹರಿಸಿದರೂ, ಗಂಟಲಲ್ಲಿ ಸಿಕ್ಕಿಕೊಂಡಂತೆ ಭಾಸವಾಗುತ್ತದೆ. ಹಳೆಯ ನಾಲೆಯ ಒಡೆಯಲಾಗದೆ, ಸ್ವಚ್ಚಂದ ನೀರು ಮುಕ್ತವಾಗಿ ಬಳಸಲಾಗದೆ ಮತ್ತೆ ನಾಲೆಯ ನವೀಕರಣದ ಕಾಲಕ್ಕಾಗಿ ಬಕಪಕ್ಷಿಗಳ ಹಾಗೆ ಕಾಯುವಂತೆ ಮಾಡಿವೆ; ಈ ಪ್ರಜಾಪ್ರಭುತ್ವ ವ್ಯವಸ್ಥೆ! ಇದು ಕಾಲಕ್ಕಾಗಿ ಕಾಯುವ ಕಾಲವಲ್ಲ, ಮತ್ತೆ ಹೊಸ ರೆಕ್ಕೆ ಕಟ್ಟಿ ಹಾರುವ ಹೊಸ ಕಾಲವಿದು. ನಾವು ಆ ಸಂಕ್ರಮಣದ ಮನಕೆ ಕಾಯುವಂತಾಗದೆ ಸಂಕಲ್ಪತೊಟ್ಟು ಕ್ರಿಯಾಶೀಲರಾಗಬೇಕಿದೆ”[೧೫] ಎಂಬುದಾಗಿ ತಿಳಿಸುತ್ತಾರೆ. ವೈದಿಕರು ತಮ್ಮ ಶ್ರಮರಹಿತ ಬದುಕಿಗಾಗಿ ಬಹುಸಂಖ್ಯಾತ ಜನವರ್ಗವನ್ನು ಶೂದ್ರತ್ವ ನೆಲೆಯಲ್ಲಿ ಉನ್ನತ ವರ್ಗಗಳ ಸೇವೆಗಾಗಿ ನೇಮಿಸಿಕೊಂಡಿದೆ. ಅದರಲ್ಲೂ ಬೌದ್ಧ ಅನುಯಾಯಿಗಳನ್ನು ಅಸ್ಪೃಶ್ಯರನ್ನಾಗಿಸಿ ಅವರನ್ನು ಊರಿನಿಂದ ಪ್ರತ್ಯೇಕವಾಗಿಟ್ಟು ‘ಕೀಳು’ ಕೆಲಸಕ್ಕಾಗಿ ಇವರನ್ನು ನೇಮಿಸಿಕೊಂಡ ಬಗೆಯನ್ನು ಇಲ್ಲಿ ವಿರೋಧಕ್ಕೆ ಒಳಪಡಿಸಲಾಗಿದೆ. ಸಮಕಾಲೀನ ಸಂದರ್ಭದಲ್ಲಿ ಭಗವದ್ಗೀತೆಯ ಬಗೆಗಿನ ಚರ್ಚೆಯ ಸಂದರ್ಭದಲ್ಲಿ ಈ ಗ್ರಂಥವನ್ನು ಕೇಂದ್ರವಾಗಿಟ್ಟುಕೊಂಡು, ಇಲ್ಲಿ ಕಂಡುಬರುವ ಅಸಮಾನತೆಯ ಅಂಶಗಳ ಅಡಿಯಲ್ಲಿ ಲೇಖಕರು ಹಿಂದುತ್ವದ ವಿರುದ್ಧ ಸಮರ ಸಾರುತ್ತಿದ್ದಾರೆ. ಆ ಮೂಲಕವಾಗಿ ಮತ್ತೇ ಈ ನಾಡಿನ ಮೂಲ ನಿವಾಸಿಗಳ ಧರ್ಮವಾಗಿದ್ದ ಬೌದ್ಧಧರ್ಮವನ್ನು ಸಮರ್ಥಿಸಿಕೊಳ್ಳುವ ವಿಚಾರಗಳು ಇಲ್ಲಿ ಕಂಡುಬರುತ್ತವೆ.

ಕೆ.ಎಸ್. ಭಗವಾನ್ ಅವರು ಹಿಂದುತ್ವವಾದಿಗಳನ್ನು ಹಾಗೂ ಹಿಂದೂ ಮೂಲಭೂತವಾದವನ್ನು ವಿರೋಧಿಸುವ ನೆಲೆಯಲ್ಲಿ ಬೌದ್ಧ ಚಿಂತನೆಗಳನ್ನು ಎತ್ತಿಹಿಡಿಯುತ್ತಾರೆ. "ಹಿಂದೂಧರ್ಮ ಎಂದರೆ ಬ್ರಾಹ್ಮಣಧರ್ಮ. ಬ್ರಾಹ್ಮಣಧರ್ಮ ಬದುಕಿರುವುದೇ ಮೇಲುಕೀಳಿನ ಅಸಮಾನತೆಯ ಮೇಲೆ. ಇದು ಬ್ರಾಹ್ಮಣೇತರರಿಗೆ ಅರ್ಥಾತ್ ಶೂದ್ರರಿಗೆ ಗುಲಾಮಗಿರಿಯನ್ನು ವಿಧಿಸುವ ಧರ್ಮ. ಆದ್ದರಿಂದ ಯಾರು ಹಿಂದೂಧರ್ಮವನ್ನು ತಮ್ಮದೆಂದು ಹೇಳಿಕೊಳ್ಳುತ್ತಾರೋ ಒಪ್ಪಿಕೊಳ್ಳುತ್ತಾರೋ ಅವರು ಗುಲಾಮರಾಗಿದ್ದಾರೆ; ಗುಲಾಮರಾಗಲು ಸಿದ್ಧವಾಗಿದ್ದಾರೆಂದು ಅರ್ಥ. ಹಿಂದೂಧರ್ಮದ ರಕ್ಷಣೆ ಎಂದರೆ ಗುಲಾಮೀ ಪದ್ಧತಿಯ ರಕ್ಷಣೆ. ಇಂಥ ಗುಲಾಮಗಿರಿಯನ್ನು ವಿಧಿಸುವ ಧರ್ಮವನ್ನು ತಾವು ಮಾನ್ಯ ಮಾಡುವುದಿಲ್ಲ ಎಂಬ ಅರ್ಥದಲ್ಲಿ ಕುವೆಂಪು ನಾನು ಹಿಂದೂ ಅಲ್ಲ ಎಂದು ಘೋಷಿಸಿದ್ದಾರೆ. ಆತ್ಮಗೌರವ ಇರುವ ಪ್ರತಿಯೊಬ್ಬ ಭಾರತೀಯನೂ ಹಿಂದೂಧರ್ಮ ಅರ್ಥಾತ್ ಬ್ರಾಹ್ಮಣ ಧರ್ಮವನ್ನು ತಿರಸ್ಕರಿಸುತ್ತಾನೆ"[೧೬] ಎಂಬುದಾಗಿ ಹಿಂದೂಧರ್ಮದ ಮೂಲಭೂತವಾದವನ್ನು ವಿರೋಧಿಸುವ ನೆಲೆಯಲ್ಲಿ ತಮ್ಮ ಚಿಂತನಧಾರೆಗಳನ್ನು ವ್ಯಕ್ತಪಡಿಸುತ್ತಾರೆ.

ಕನ್ನಡದ ಮತ್ತೊಬ್ಬ ಚಿಂತಕರಾದ ಡಿ.ಎಸ್.ನಾಗಭೂಷಣ ಅವರು ಕೇವಲ ಹಿಂದುತ್ವದಲ್ಲಿ ಮಾತ್ರ ಮೂಲಭೂತವಾದಿ ನೆಲೆಗಳನ್ನು ಗ್ರಹಿಸದೆ, ಬುದ್ಧನ ನಂತರದ ಬೌದ್ಧಧರ್ಮದಲ್ಲಿಯೂ ಅಂತರ್ಗತವಾಗಿರುವ ಮೂಲಭೂತವಾದಿ ನೆಲೆಗಳನ್ನು ಎತ್ತಿಹಿಡಿಯುವ ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸುತ್ತಾರೆ. "ವೈರಾಗ್ಯ ಮತ್ತು ಭೋಗಗಳನ್ನು ಎರಡು ಅತಿಗಳೆಂದು ಬೋಧಿಸುವ ಪ್ರಜ್ಞೆಯನ್ನು ರೂಢಿಸುವುದೇ ಬುದ್ಧನ ಮಧ್ಯಮ ಮಾರ್ಗ. ಈ ಮಾರ್ಗ ಯಾರಿಗಾದರೂ ಒಂದು ಧರ್ಮ ಮಾರ್ಗವಾಗಿ ಅರ್ಥಪೂರ್ಣವೆನಿಸಿಕೊಳ್ಳುವುದು, ಈ ಧರ್ಮದ ಮೊದಲ ಸತ್ಯ- ಸಂಸಾರ ದುಃಖಮಯ ಎಂಬುದು- ಅವರಿಗೆ ಒಂದಲ್ಲ ಒಂದು ಸ್ತರದಲ್ಲಿ ಅನುಭವಕ್ಕೆ ಬಂದು, ಸತ್ಯವೆನಿಸಿದಾಗ ಮಾತ್ರ. ಆದರೆ ಇಂತಹ ಅನುಭವದ ಅಥವಾ ಸತ್ಯದ ಹತ್ತಿರಕ್ಕೂ ಸುಳಿಯದ ನಾವು ಬುದ್ಧನ ಬಗ್ಗೆ ಆತನ ಧರ್ಮದ ಬಗ್ಗೆ ಭಾವಾವೇಶದಿಂದ ಮಾತನಾಡತೊಡಗುತ್ತೇವೆ. ಸುಖದ ಬೆನ್ನು ಹತ್ತಿ, ಜಗತ್ತಿನ ಸಕಲ ಜಂಜಾಟಗಳಲ್ಲಿ ಸಿಲುಕಿಕೊಂಡು ಬದುಕಿನ 'ದಾಹ'ವನ್ನು ವಿವಿಧ ನೆಲೆಯಲ್ಲಿ ಹೆಚ್ಚಿಸಿಕೊಳ್ಳುತ್ತಿರುವಾಗಲೂ, ಬುದ್ಧನೇ ನಮ್ಮ ಆದರ್ಶ ಎಂದು ಘೋಷಿಸಿಕೊಳ್ಳುತ್ತೇವೆ! ಅಷ್ಟೇ ಅಲ್ಲ, ಬೌದ್ಧ ಧರ್ಮದ ದೀಕ್ಷೆಯನ್ನೂ ಪಡೆದು ನಿರಾಳವಾಗುತ್ತೇವೆ! ಇಂತಹ ಆತ್ಮದ್ರೋಹದ ಆವೇಶದಲ್ಲಿ ನಮ್ಮಲ್ಲಿ ಕೆಲವರು ಬುದ್ಧನನ್ನು ಭಾರತೀಯ ಧರ್ಮ ಪರಂಪರೆಯ ಪ್ರತಿನಾಯಕನಂತೆ ಪ್ರಸ್ತುತಪಡಿಸುತ್ತಾ, ಆತನ ಮತ್ತು ಆತನ ಧರ್ಮದ ಸ್ವಾಯತ್ತತೆಯನ್ನೇ ಅಲ್ಲಗಳೆಯುವ ಮೂರ್ಖತನಕ್ಕೂ ಕೈ ಹಾಕುತ್ತಿದ್ದೇವೆ. ವಿಶೇಷವಾಗಿ ವೈದಿಕ ಧರ್ಮದ ಅನ್ಯಾಯಗಳ ವಿರುದ್ಧ ಬಂಡೆದ್ದ ಧಾರ್ಮಿಕ ನಾಯಕನೆಂಬಂತೆ ಆತನ ಚಿತ್ರ ಕಟ್ಟುತ್ತಾ, ದೊಡ್ಡ ರಾಜಕೀಯ ಗೊಂದಲವನ್ನೇ ಸೃಷ್ಟಿಸುತ್ತಿದ್ದೇವೆ. ಆ ಮೂಲಕ ನಮ್ಮ ವರ್ತಮಾನವನ್ನು ಪುನಾರಚಿಸಿಕೊಳ್ಳಲು ಅಗತ್ಯವಾದ ಚರಿತ್ರೆಯ ಮರು ಓದಿಗೆ ನಾವೇ ಅಪಚಾರವೆಸಗುತ್ತಿದ್ದೇವೆ. ಇದು ಇಂದು ಆರಂಭವಾದ ಗೊಂದಲ ಅಥವಾ ಅಪಚಾರದ ಪ್ರಯತ್ನವೇನೂ ಅಲ್ಲ. ಬೌದ್ಧಧರ್ಮದಲ್ಲಿ ಪುರೋಹಿತಶಾಹಿ ಸೃಷ್ಟಿಯಾದ ಕಾಲದಿಂದಲೂ ನಡೆಯುತ್ತಿರುವ

ಧರ್ಮಕಾರಣವಿದು"[೧೭] ಎಂಬುದಾಗಿ ಬುದ್ಧನ ನಂತರ ಮತ್ತು ಸಮಕಾಲೀನ ಸಂದರ್ಭದಲ್ಲಿ ಸೃಷ್ಟಿಯಾಗಿರುವ ಬೌದ್ಧಧರ್ಮದ ಮೂಲಭೂತವಾದಿ ನೆಲೆಗಳನ್ನು ವಿಮರ್ಶೆಗೆ ಒಳಪಡಿಸಿದ್ದಾರೆ.

ಡಿ.ಎಸ್.ನಾಗಭೂಷಣ್ ಅವರ ಈ ಚಿಂತನೆಗಳು ಬೌದ್ಧಧರ್ಮದ ಪ್ರಗತಿಪರ ಹಾಗೂ ಮೂಲಭೂತವಾದಿ ಸ್ವರೂಪವನ್ನು ಅನಾವರಣಗೊಳಿಸುತ್ತವೆ. ಕನ್ನಡ ಚಿಂತನ ಪ್ರಕಾರದಲ್ಲಿ ಬಹುತೇಕ ಬೌದ್ಧ ಚಿಂತಕರು ಹಿಂದೂಧರ್ಮದ ಮೂಲಭೂತವಾದಿ ಧೋರಣೆಗಳನ್ನು ವಿರೋಧಿಸುವ ಸಲುವಾಗಿ ಬೌದ್ಧಧರ್ಮವನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿ ತಮ್ಮ ವಿಚಾರವಾದವನ್ನು ಮಂಡಿಸುತ್ತಾ ಬಂದಿದ್ದಾರೆ. ಆದರೆ ಈ ಧರ್ಮದಲ್ಲಿಯೂ ಅಂತರ್ಗತವಾಗಿರುವ ಮೂಲಭೂತವಾದಿ ನಿಲುವುಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡುವುದಿಲ್ಲ. ಕೆಲವು ವಿಚಾರವಾದಿಗಳಿಗೆ ಈ ಸ್ಥಾಪಿತ ನೆಲೆಗಳ ಅರಿವಿದ್ದರೂ ಹಿಂದುತ್ವಕ್ಕೆ ಪ್ರತಿಯಾಗಿ ಬೌದ್ಧಧರ್ಮವನ್ನು ಎತ್ತಿಹಿಡಿಯುವ ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸುತ್ತಾರೆ. ಇವರು ಬೌದ್ಧಧರ್ಮದಲ್ಲಿ ಮೂಲಭೂತವಾದಿ ಧೋರಣೆಗಳನ್ನು ಗುರುತಿಸದೆ, ಬುದ್ಧನ ದಾರ್ಶನಿಕ ನೆಲೆಯಲ್ಲಿಯೇ ಬುದ್ಧನ ನಂತರದ ಬೌದ್ಧ ಧರ್ಮವನ್ನು ಅರ್ಥೈಸುವ ಪ್ರಯತ್ನದಲ್ಲಿ ತೊಡಗಿಕೊಂಡ ಬಗೆಯನ್ನು ಲೇಖಕರು ತಮ್ಮ ವಿಚಾರಗಳಲ್ಲಿ ಗುರುತಿಸಿದ್ದಾರೆ. ಆ ಮೂಲಕವಾಗಿ ಬುದ್ಧನ ದಾರ್ಶನಿಕ ನೆಲೆಗೂ, ನಂತರದ ಬೌದ್ಧಧರ್ಮಕ್ಕೂ ಇರುವ ಸೂಕ್ಷ್ಮ ವ್ಯತ್ಯಾಸಗಳನ್ನು ಗುರುತಿಸಿರುವುದು ಕಂಡುಬರುತ್ತದೆ.

ಕನ್ನಡದ ಮತ್ತೊಬ್ಬ ಚಿಂತಕರಾದ ಸತ್ಯನಾರಾಯಣ ರಾವ್ ಅಣತಿಯವರು ಕವಿ ಮತ್ತು ನಾಟಕಕಾರರಾಗಿದ್ದು, ಇವರು ವೈಚಾರಿಕ ನೆಲೆಗಟ್ಟಿನಲ್ಲಿ ಬುದ್ಧನ ಚಿಂತನೆಗಳು ಇಂದು ಮೂಲಭೂತವಾದಿ ಸ್ವರೂಪವನ್ನು ಪಡೆದುಕೊಂಡ ಬಗೆಯನ್ನು ತಮ್ಮ ವಿಚಾರಗಳಲ್ಲಿ ವ್ಯಕ್ತಪಡಿಸಿದ್ದಾರೆ. "ಕಳೆದ ಶತಮಾನದಲ್ಲಿ ಲೆಫ್ಟಿಷ್ಟ್, ಸೋಶಿಯಲಿಷ್ಟ್ ರಾಜಕಾರಣಗಳು ಬೌದ್ಧಧರ್ಮವನ್ನು ಜನಪರವಾದ ಚಿಂತನೆಗೆ ಒಳಪಡಿಸಿವೆ. ಆದರೆ ಇವು ವರ್ಗ ಮತ್ತು ಜಾತಿ ರಾಜಕಾರಣದೊಂದಿಗೆ ತಳುಕು ಹಾಕಿಕೊಂಡು ಸಹಜವೂ, ಜೀವಪರವೂ ಆದ ಧರ್ಮವನ್ನು ವಿರೂಪಗೊಳಿಸುತ್ತಿರುವಂತೆ ಭಾಸವಾಗುತ್ತಿದೆ. ಇನ್ನು ಯಾತ್ರಾಸ್ಥಳಗಳಾದ ಬೋಧಗಯ, ಸಾರನಾಥ್, ಸಿಕ್ಕಿಮ್‌ಗಳಲ್ಲಿ ಧರ್ಮಾಚರಣೆ ವಿರೂಪಗೊಳಿಸಿಕೊಂಡು ನನ್ನಂಥ ಯಾತ್ರಾರ್ಥಿಗಳ ಉಸಿರುಕಟ್ಟಿಸಿ ಹೊರದೂಡುತ್ತವೆ"[೧೮] ಎಂಬುದಾಗಿ ಪ್ರತಿಕ್ರಿಯಿಸಿದ್ದಾರೆ. ಪ್ರಸ್ತುತ ಸಂದರ್ಭದ ರಾಜಕೀಯ ನೆಲೆಗಟ್ಟಿನಲ್ಲಿ ತಮ್ಮ ಅಸ್ತಿತ್ವವನ್ನು ಭದ್ರಪಡಿಸಿಕೊಳ್ಳಲು ಹೆಣಗಾಡುತ್ತಿರುವ ಸಂಘಟನೆಗಳು, ಬುದ್ಧನ ತತ್ವ ಚಿಂತನೆಗಳ ಅಡಿಯಲ್ಲಿ ತಮ್ಮ ಪಕ್ಷ ಅಥವಾ ಸಂಘಟನೆಯ ನೆಲೆಗಳನ್ನು ರೂಪಿಸಿಕೊಳ್ಳುವ ಕಾರ್ಯದಲ್ಲಿ ತಲ್ಲಿನವಾಗಿವೆ. ಇಂತಹ ರಾಜಕೀಯ ತಲ್ಲಣಗಳಿಂದಾಗಿ ಬುದ್ಧನ ವೈಚಾರಿಕ ನಿಲುವುಗಳು ಮಾರಕ ಸ್ವರೂಪವನ್ನು ಪಡೆಯುತ್ತಿರುವ ಬಗೆಗೆ ಲೇಖಕರಿಗೆ ಆತಂಕವಿದೆ. ಹಾಗೆಯೇ ಬುದ್ಧನ ಸಾಂಸ್ಕೃತಿಕ ಕೇಂದ್ರಗಳು ವ್ಯವಹಾರಿಕ ಮತ್ತು ಮೋಸದ ತಾಣಗಳಾಗಿರುವ ಬಗೆಗೆ ಪ್ರತಿರೋಧವಿರುವುದು ಇವರ ಚಿಂತನೆಗಳಲ್ಲಿ ಕಂಡುಬರುತ್ತದೆ.

ಈ ಮೇಲೆ ಚರ್ಚಿಸಿದ ವಿಚಾರವಾದಿಗಳಲ್ಲಿ ಅರವಿಂದ ಮಾಲಗತ್ತಿ ಮತ್ತು ಕೆ.ಎಸ್. ಭಗವಾನ್ ಅವರ ಚಿಂತನೆಗಳು ಹಿಂದೂ ಮೂಲಭೂತವಾದವನ್ನು ವಿರೋಧಿಸುವ ನೆಲೆಯಲ್ಲಿ

ಬೌದ್ಧ ದರ್ಶನ ಹಾಗೂ ಧರ್ಮವನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. ಇಲ್ಲಿನ ವ್ಯಕ್ತವಾಗಿರುವ ಚಿಂತನಧಾರೆಗಳಿಗೆ ಅವರು ಬೆಳೆದು ಬಂದಿರುವ ಸಾಮಾಜಿಕ ವಾತವರಣ ಹಾಗೂ ತಮ್ಮ ಸುತ್ತಮುತ್ತಲಿನ ಸಮಾಜದ ಸ್ಥಿತಿಗತಿಗಳು ಪ್ರಮುಖ ಕಾರಣವಾಗಿವೆ. ಆ ಮೂಲಕವಾಗಿ ಮಾನವೀಯತೆಯನ್ನು ಪ್ರತಿಪಾದಿಸಿದ ಬುದ್ಧನ ಧರ್ಮವನ್ನು ಸಮರ್ಥಿಸಿಕೊಂಡಿದ್ದಾರೆ. ಆದರೆ ನಂತರದಲ್ಲಿ ಚರ್ಚೆಗೆ ಒಳಪಡಿಸಿರುವ ಡಿ.ಎಸ್. ನಾಗಭೂಷಣ ಹಾಗೂ ಸತ್ಯನಾರಯಣ ರಾವ್ ಅಣತಿ ಅವರ ವಿಚಾರಗಳು ಹಿಂದುತ್ವದ ವಿರೋಧಕ್ಕಿಂತ ಜಾಗತಿಕ ಶಾಂತಿಯನ್ನು ಬಯಸಿದ ಬುದ್ಧನ ಧರ್ಮವು ಇಂದು ಮೂಲಭೂತವಾದ ಸ್ವರೂಪವನ್ನು ಪಡೆದಿಕೊಂಡಿರುವ ಬಗೆಯನ್ನು ವೈಚಾರಿಕ ನೆಲೆಗಟ್ಟಿನಲ್ಲಿ ಎತ್ತಿಹಿಡಿಯುತ್ತವೆ.

೫. ದಾರ್ಶನಿಕ ಹಾಗೂ ವೈಚಾರಿಕ ನೆಲೆಗಳು

ಭಾರತದಲ್ಲಿ ಜನ್ಮತಳೆದು ಜಗತ್ತಿನ ವಿವಿಧ ದೇಶಗಳಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಂಡ ಬೌದ್ಧಧರ್ಮದ ದಾರ್ಶನಿಕತೆಯನ್ನು ಕುರಿತು ಹಲವಾರು ಚಿಂತಕರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಭಾರತದ ಶ್ರೇಷ್ಠ ದಾರ್ಶನಿಕರಾದ ಸ್ವಾಮಿ ವಿವೇಕಾನಂದ, ಓಶೋ, ಧರ್ಮಾನಂದ ಕೂಸಾಂಬಿ, ಅಂಬೇಡ್ಕರ್, ಐನ್‌ಸ್ಟಿನ್ ಹಾಗೂ ಪಾಶ್ಚಿಮಾತ್ಯ ಚಿಂತಕರಾದ ಬರ್ಟಂಡ್ ರೆಸ್ಸೆಲ್‌ರಂತಹ ಹಲವಾರು ವಿಚಾರವಾದಿಗಳು ಬೌದ್ಧದರ್ಶನವನ್ನು ವೈಚಾರಿಕ ನೆಲೆಯಲ್ಲಿ ಸ್ವೀಕರಿಸಿದ್ದಾರೆ. ಇವರ ಈ ಸ್ವೀಕಾರದ ನೆಲೆಗಳು ಯಾವುದೇ ಪೂರ್ವಗ್ರಹ ಪೀಡಿತವಾದವುಗಳಲ್ಲ. ಸಕಲ ಮಾನವರನ್ನು ಕುರಿತು ಅಂತಃಕರಣ ವ್ಯಕ್ತಪಡಿಸಿದ ಬುದ್ಧನ ಮಾನವೀಯ ಗುಣಗಳನ್ನು ಈ ದಾರ್ಶನಿಕರು ಮೆಚ್ಚಿಕೊಂಡಿದ್ದಾರೆ. ಆ ಮೂಲಕವಾಗಿ ಬುದ್ಧನ ದಾರ್ಶನಿಕತೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಮೂಲಭೂತವಾದಿಗಳು ಇಂದು ಹಿಂದುತ್ವದ ಪ್ರತಿನಿಧಿಯೆಂಬಂತೆ ಪ್ರತಿಬಿಂಬಿಸಲು ಹೊರಟಿರುವ ಸ್ವಾಮಿ ವಿವೇಕಾನಂದರು ಹಿಂದೂ ಮೂಲಭೂತವಾದದ ವಿರುದ್ಧ ಸಮರ ಸಾರಿ, ಸಮಾನತೆಯನ್ನು ಎತ್ತಿಹಿಡಿದ ಬುದ್ಧನತ್ತ ಆಕರ್ಷಿತರಾದವರು. ವಿವೇಕಾನಂದರೇ ಹೇಳುವಂತೆ “ಭಗವಾನ್ ಬುದ್ಧ ನನ್ನ ಇಷ್ಟ; ಅವನೇ ನನ್ನ ದೇವರು. ಅವನು ದೇವರ ವಿಚಾರವಾಗಿ ಯಾವ ಸಿದ್ಧಾಂತವನ್ನು ಬೋಧಿಸಲಿಲ್ಲ. ಅವನೇ ದೇವರಾಗಿದ್ದನು. ಇದನ್ನು ನಾನು ಸಂಪೂರ್ಣ ನಂಬುವೆನು”[೧೯] ಎಂಬುದಾಗಿ ತನ್ನ ಮೇಲೆ ವೈಚಾರಿಕ ಪ್ರಭಾವ ಬೀರಿದ ಬುದ್ಧನನ್ನು ಸಮರ್ಥಿಸಿಕೊಂಡಿದ್ದಾರೆ. ಆದರೆ ಪ್ರಸ್ತುತದಲ್ಲಿ ಹಿಂದೂ ಮೂಲಭೂತವಾದಿ ಮನಸ್ಸುಗಳು ಆತನ ನಿಲುವುಗಳಿಗೆ ವಿರುದ್ಧ ನೆಲೆಯಲ್ಲಿ ವಿವೇಕಾನಂದರನ್ನು ಬಳಸಿಕೊಂಡು ಧರ್ಮ ಪ್ರಚಾರಕ್ಕೆ ಮುಂದಾಗಿದ್ದಾರೆ. ವಿವೇಕಾನಂದರು ಹಿಂದೂಧರ್ಮದ ಅಸಮಾನತೆಯೊಂದಿಗೆ ಎಂದೂ ರಾಜೀ ಮಾಡಿಕೊಂಡವರಲ್ಲ. ಇಲ್ಲಿನ ಪುರೋಹಿತಶಾಹಿ ಮುಕ್ತ ನೆಲೆಯಲ್ಲಿ ಹಿಂದೂಧರ್ಮವನ್ನು ಪುನರುಜ್ಜೀವನಗೊಳಿಸುವುದು ಇವರ ಆಶಯವಾಗಿತ್ತು. ಬೌದ್ಧಧರ್ಮದ ವಿಚಾರದಲ್ಲೂ ಅವರು ಸ್ಪಷ್ಟವಾದ ನಿಲುವುಗಳನ್ನು ಕಂಡುಕೊಂಡಿದ್ದರು. ಬುದ್ಧನ ನಂತರದ ಪುರೋಹಿತಶಾಹಿ ನೆಲೆಯ ಬೌದ್ಧಧರ್ಮದ ಬಗೆಗೆ ಇವರಿಗೆ ವಿರೋಧವಿತ್ತು. ಆದರೆ ಇವರು ಸ್ವೀಕರಿಸಿದ್ದು ಬುದ್ಧನ ತತ್ವ ಸಿದ್ಧಾಂತ ಮತ್ತು ಆದರ್ಶಗಳನ್ನು.

ಭಾರತದ ಆಧ್ಯಾತ್ಮಿಕ ಚಿಂತಕರಾದ ಓಶೋ ದಾರ್ಶನಿಕ ನೆಲೆಯಲ್ಲಿ ಬುದ್ಧನ ವಿಚಾರಧಾರೆಗಳನ್ನು ಎತ್ತಿಹಿಡಿದಿದ್ದಾರೆ. ಬುದ್ಧನ ವಿಚಾರಗಳ ಅಡಿಯಲ್ಲಿ ತನ್ನ ತತ್ವ ಸಿದ್ಧಾಂತಗಳನ್ನು ಪ್ರತಿಪಾದಿಸುತ್ತ ಬಂದ ಇವರು ಸಮಾಜದ ಶಾಂತಿ, ಸಮಾನತೆಯ ಪ್ರಸ್ತಾಪ ಬಂದಾಗ 'ನನ್ನ ಉದ್ದೇಶ ನಿಮ್ಮೊಳಗೂ ಒಬ್ಬ ಧ್ಯಾನಿ ಬುದ್ಧ ಜನನವಾಗಬೇಕು. ಬುದ್ಧನಂಥ ಕೆಲ ಡಜನ್ ಧ್ಯಾನಿಗಳಿಗೆ ಭಾರತ ಜನ್ಮ ನೀಡಿದರೆ ಆಗ ಮತ್ಯಾವ ತೊಂದರೆ ಇರುವುದಿಲ್ಲ' ಎಂಬುದಾಗಿ ತಮ್ಮ ನಿಲುವುಗಳನ್ನು ವ್ಯಕ್ತಪಡಿಸುತ್ತಾರೆ. ಭಾರತದ ಧರ್ಮ ಹಾಗೂ ದಾರ್ಶನಿಕತೆಯ ಬಗೆಗೆ ಪ್ರಸ್ತಾಪ ಮಾಡುವಾಗ ಈತ ತಾಳುವ ನಿಲುವೆಂದರೆ, "ಇನ್ನೊಂದು ಭಾರತವು ಇದೆ. ಅದು ಬುದ್ಧ ಭಾರತ, ಚಿರಂತನ ಶಾಶ್ವತ ಭಾರತ. ನಾನು ಅದರ ಒಂದು ಭಾಗ. ನೀವೂ ಅದರ ಒಂದು ಭಾಗ. ನಿಜವಾಗಿ ಹೇಳುವುದಾದರೆ, ಎಲ್ಲಿ ಧ್ಯಾನ ಘಟಿಸುವುದೋ, ಯಾರಲ್ಲೇ ಆಗಲಿ ಧ್ಯಾನ ಘಟಿಸುವುದೋ, ಆ ವ್ಯಕ್ತಿ ಈ ಶಾಶ್ವತ ಭಾರತದ ಭಾಗವೇ. ಆ ಶಾಶ್ವತ ಭಾರತ ಭೌಗೋಳಿಕವಾದುದಲ್ಲ. ಅದೊಂದು ಆಧ್ಯಾತ್ಮಿಕ ನಿವೇಶ"[೨೦] ಎಂಬುದಾಗಿ ಬುದ್ಧನ ದಾರ್ಶನಿಕತೆಯನ್ನು ಎತ್ತಿಹಿಡಿಯುತ್ತಾರೆ. ವೈಚಾರಿಕ ನೆಲೆಗಟ್ಟಿನಲ್ಲಿ ಬುದ್ಧನ ವಿಚಾರಗಳನ್ನು ಸಮರ್ಥಿಸಿಕೊಳ್ಳುವ ಇವರು, ಬುದ್ಧನ ನಂತರ ಬೌದ್ಧಧರ್ಮದಲ್ಲಿ ಉಂಟಾಗಿರುವ ಮೂಲಭೂತವಾದವನ್ನು ತೀವ್ರವಾಗಿ ವಿರೋಧಿಸುತ್ತಾರೆ. ಅಷ್ಟೇ ಅಲ್ಲದೆ ಬುದ್ಧನು ಮಹಿಳೆಯರನ್ನು ತನ್ನ ಸಂಘಕ್ಕೆ ಸೇರಿಸಿಕೊಳ್ಳಲು ಕೆಲವು ದಿನಗಳ ಕಾಲ ಮೌನವಹಿಸಿದ ಬಗೆಯನ್ನು ಕೂಡ ಮುಕ್ತ ನೆಲೆಯಲ್ಲಿ ವಿರೋಧಿಸುತ್ತಾರೆ. ಈ ನಿಲುವುಗಳು ಓಶೋ ಅವರ ನೇರ ಮತ್ತು ನಿಷ್ಠುರವಾದಿ ಧೋರಣೆಗಳನ್ನು ವ್ಯಕ್ತಪಡಿಸುತ್ತವೆ.

ಪಾಶ್ಚಿಮಾತ್ಯ ಚಿಂತಕರಾದ ಬರ್ಟನ್ ರೆಸ್ಸೆಲ್ ಅವರು ಕ್ರೈಸ್ತಧರ್ಮದಲ್ಲಿ ಅಂತರ್ಗತವಾಗಿರುವ ಮೂಲಭೂತವಾದಿ ಅಂಶಗಳನ್ನು ವೈಚಾರಿಕ ಚಿಂತನೆಗಳ ಮೂಲಕ ವಿಮರ್ಶೆಗೆ ಒಳಪಡಿಸಿ, ನಂತರ ಬುದ್ಧನ ಅನುಯಾಯಿಯಾಗುತ್ತಾರೆ. ಇವರು ಬುದ್ಧನ ಧರ್ಮವನ್ನು ಸ್ವೀಕರಿಸುವುದಕ್ಕೆ ಪ್ರಮುಖ ಕಾರಣವೆಂದರೆ, ಧರ್ಮದಲ್ಲಿ ಅಡಗಿರುವ ವೈಚಾರಿಕ ನಿಲುವುಗಳು ಸಕಲರನ್ನು ಸಮಾನ ನೆಲೆಯಲ್ಲಿ ಕಾಣುತ್ತವೆ. ಇಲ್ಲಿ ಯಾವುದೇ ಶ್ರೇಷ್ಠ–ಕನಿಷ್ಠ ಎಂಬ ಬೇಧವಿಲ್ಲದಿರುವುದಾಗಿದೆ. ಈ ಎಲ್ಲ ಅಂಶಗಳಿಂದ ಬರ್ಟನ್ ರೆಸ್ಸೆಲ್ ತಮ್ಮ ಧರ್ಮವನ್ನು ತ್ಯಜಿಸಿ ಬೌದ್ಧಧರ್ಮವನ್ನು ಸ್ವೀಕರಿಸುತ್ತಾರೆ. ಹೀಗೆ ಹಲವಾರು ಭಾರತದ ಹಾಗೂ ಪಾಶ್ಚಿಮಾತ್ಯ ಚಿಂತಕರು ಬುದ್ಧನ ದಾರ್ಶನಿಕ ಹಾಗೂ ವೈಚಾರಿಕತೆಯನ್ನು ಕುರಿತು ತಮ್ಮ ವಿಚಾರವಾದವನ್ನು ಮಂಡಿಸುತ್ತಾ ಬಂದಿದ್ದಾರೆ. ಇದರಲ್ಲಿ ಕನ್ನಡದ ಚಿಂತಕ ವರ್ಗವು ಕೂಡ ಹಿಂದೆ ಬಿದ್ದಿಲ್ಲ. ಕನ್ನಡದ ಹಲವಾರು ವಿಚಾರವಾದಿಗಳು ವಿಭಿನ್ನ ನೆಲೆಗಳಲ್ಲಿ ಬೌದ್ಧ ದಾರ್ಶನಿಕತೆ ಹಾಗೂ ಬುದ್ಧನ ವೈಚಾರಿಕ ನಿಲುವುಗಳ ಬಗೆಗೆ ಪ್ರತಿಕ್ರಿಯೆ ನೀಡಿದ್ದಾರೆ. ಅವುಗಳನ್ನು ನಾವು ಈ ಮುಂದಿನಂತೆ ಗುರುತಿಸಬಹುದಾಗಿದೆ;

ಕನ್ನಡದ ದಾರ್ಶನಿಕ ಚಿಂತಕರಾದ ಪಂಡಿತ ತಾರಾನಾಥರು ಬುದ್ಧನ ಧರ್ಮದಲ್ಲಿ ಅಂತರ್ಗತವಾಗಿರುವ ದರ್ಶನ ಹಾಗೂ ವೈಚಾರಿಕ ನೆಲೆಗಟ್ಟುಗಳನ್ನು ಕುರಿತು ತಮ್ಮದೆ ಆದ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ದಮನಿತರ ಪರವಾಗಿ ತುಡಿದ ಬುದ್ಧನ ಮಾನವೀಯತೆಯನ್ನು

ಮುಕ್ತ ನೆಲೆಯಲ್ಲಿ ಎತ್ತಿಹಿಡಿಯುವ ಪ್ರಯತ್ನವು ಇಲ್ಲಿ ಕಂಡುಬರುತ್ತದೆ. “ಬುದ್ಧನ ಮತವು ಉದಯಿಸುವವರೆಗೆ ಶೂದ್ರರೂ, ಸ್ತ್ರೀಯರೂ, ಬ್ರಾಹ್ಮಣ- ಕ್ಷತ್ರಿಯರ- ವೈಶ್ಯರ ಅತ್ಯಾಶೆಯ ಆಹುತಿಗಳೇ ಆಗಿದ್ದರು. ಬುದ್ಧನು ಬೇಧಗಳ ವೈರಿಯಾದನು. ಸಮಾನತೆಯು ಪ್ರತಿ ವ್ಯಕ್ತಿಯ ಅಧಿಕಾರವೆಂಬುದನ್ನು ಸಾರಿದನು. ಕೃತ್ರಿಮ ಜಾತಿ- ರೀತಿಗಳನ್ನು ಒಡೆದು ಬಗ್ಗಿಸಿದನು. ಜೀವಿಗೆ ದುಃಖವು ಬೇಡವಾಗಿದೆ; ಅದು ಯಾವ ಕಾರಣದಿಂದಲೇ ಆಗಲಿ ಬಂದರೆ ಉಚ್ಚ- ನೀಚ ಜಾತಿ- ಕುಲಭೇದವನ್ನು ಲೆಕ್ಕಿಸದೆ ಅದನ್ನು ಕಿತ್ತೊಗೆಯುವ ಸಮಾಜ ಸೇವೆಯೇ ಉತ್ತಮವಾದ ವ್ಯವಹಾರವೆಂದು ಆಡಿ, ಮಾಡಿ ತೋರಿಸಿದನು. ಇದರಿಂದ ವರ್ಣಾಶ್ರಮ ಧರ್ಮಕ್ಕೂ, ಬೌದ್ಧಮತಕ್ಕೂ ಅಜಗಜಾಂತರವುಂಟಾಯಿತು. ಅದು ಭೇಧಗಳನ್ನಿಟ್ಟುಕೊಂಡು ಬೆಳೆಯುವ ಸಂಪ್ರದಾಯ. ಇದು ಅದಕ್ಕೆ ವಿರುದ್ಧ. ಅಲ್ಲಿ ಹುಟ್ಟಿದವನು ಅಲ್ಲಿಯೇ ಇದ್ದು ಸಾಯಬೇಕು. ಇದು ಸಕಲರಿಗೂ ಜೀವಿತದ ಉಚ್ಚ ಸುಖ ಸೋಪಾನವನ್ನೇರುವ ಅಧಿಕಾರವನ್ನು ಕೊಡುತ್ತದೆ”[೨೧] ಎಂಬುದಾಗಿ ಬೌದ್ಧಧರ್ಮದ ಮಹತ್ತನ್ನು, ಈ ಧರ್ಮವು ಜಗತ್ತಿಗೆ ನೀಡಿದ ಉದಾರತೆಯ ಕಾಣ್ಕೆಯನ್ನು ಎತ್ತಿಹಿಡಿಯುವ ಅಂಶಗಳು ಇಲ್ಲಿ ಕಂಡುಬರುತ್ತವೆ. ಇಲ್ಲಿ ತಾರಾನಾಥರು ಸಾಮಾಜಿಕ ಸಮಾನತೆಯ ನೆಲೆಗಟ್ಟಿನಲ್ಲಿ ಬೌದ್ಧದರ್ಶನವನ್ನು ಸಮರ್ಥಿಸಿಕೊಂಡಿದ್ದಾರೆ. ಹಿಂದೂಧರ್ಮದ ಅಡಿಯಲ್ಲಿ ಪುರೋಹಿತಶಾಹಿಯು ಸೃಷ್ಟಿಸಿಕೊಂಡು ಬಂದಿರುವ ಅಸಮಾನತೆಯ ಬಗೆಗೆ ಇವರಿಗೆ ವಿರೋಧವಿದೆ. ಆದ್ದರಿಂದ ಸರ್ವ ಮಾನವರನ್ನು ಸಮಾನವಾಗಿ ನಡೆಸಿಕೊಂಡ ಬುದ್ಧನ ಮಾನವೀಯ ಧರ್ಮವನ್ನು ವೈದಿಕತೆಯ ವಿರುದ್ಧ ಎತ್ತಿಹಿಡಿಯುವ ನೆಲೆಯಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತಾರೆ.

ಕನ್ನಡದ ವಿಚಾರವಾದಿಗಳಲ್ಲೊಬ್ಬರಾದ ಸಿ.ಪಿ.ಕೃಷ್ಣಕುಮಾರ್ ಅವರು ಆಸ್ತಿಕ ಮತ್ತು ನಾಸ್ತಿಕ ವರ್ಗವನ್ನು ಗುರುತಿಸುವ ಸಂದರ್ಭದಲ್ಲಿ ಬುದ್ಧನನ್ನು ಈ ಎರಡರಾಚೆ ‘ಅಜ್ಞೇಯತಾವಾದಿ’ ಎಂದು ಕರೆಯುತ್ತಾರೆ. ಅದಕ್ಕೆ ಇವರು ನೀಡುವ ಸಮರ್ಥನೆಯೆಂದರೆ, ಆಸ್ತಿಕ ಎಂದರೆ ವೇದ, ದೇವರುಗಳನ್ನು ನಂಬುವವನು. ನಾಸ್ತಿಕ ಎಂದರೆ ಅವುಗಳನ್ನು ನಂಬದವನು. ಆದರೆ ಬುದ್ಧ ಈ ಅರ್ಥದಲ್ಲಿ ದೇವರ ಬಗ್ಗೆ ಏನೂ ಹೇಳುವುದಿಲ್ಲ. ಆದ ಕಾರಣ ಅವನೊಬ್ಬ ಅಜ್ಞೇಯತಾವಾದಿ ಎಂಬುದಾಗಿ ಗುರುತಿಸುತ್ತಾರೆ. ಬುದ್ಧ ಅಗೋಚರವಾದ ಮತ್ತು ತನಗೆ ಅರಿವಿಗೆ ಬಾರದ ವಿಚಾರದ ಕುರಿತು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಹೀಗಾಗಿ ಬುದ್ಧನನ್ನು ಆಸ್ತಿಕನೆಂದಾಗಲಿ, ನಾಸ್ತಿಕನೆಂದಾಗಲಿ ಗುರುತಿಸಲು ಸಾಧ್ಯವಿಲ್ಲ ಎಂಬ ವಾದವನ್ನು ಮಂಡಿಸುತ್ತಾರೆ. ಈ ಅಜ್ಞೇಯತವಾದವನ್ನು ಕುರಿತು ಕುವೆಂಪು ಅವರ ನಿಲುವು ಹೀಗಿದೆ; “ವಿಚಾರವಾದ ಎಂದರೆ ನಾಸ್ತಿಕವಾದ ಎಂಬ ಭಾವನೆ ಇದೆ. ಅನೇಕ ಹಿರಿಯರೂ ಕೂಡ ಆ ಭಾವನೆ ಬರುವ ಹಾಗೆಯೇ ಮಾತನಾಡುತ್ತಾರೆ. ವಿಚಾರವಾದಿಯಾದವನು ಎಂದಿಗೂ ನಾಸ್ತಿಕವಾದಿಯಾಗುವುದಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ, ನಾಸ್ತಿಕವಾದ ದೇವರು ಇಲ್ಲ ಎನ್ನುತ್ತದೆ. ಇಲ್ಲ ಎನ್ನುವುದನ್ನು ತಾನು ಕಂಡಿದ್ದೇನೆ ಎಂಬಂತೆ; ಆದರೆ ಇಲ್ಲ ಎನ್ನುವುದು ಒಂದು ಸತ್ಯದ ಕಾಣುವಿಕೆಯಲ್ಲ. ಬರಿಯ ಕಾಣದಿರುವಿಕೆ ಒಂದು ಜ್ಞಾನವಾಗುವುದಿಲ್ಲ. ನಾಸ್ತಿಕವಾದಿಯ ಪ್ರಕಾರ ದೇವರು ಇಲ್ಲ ಎನ್ನುವುದು ಒಂದು ವಸ್ತುನಿಷ್ಠ ಜ್ಞಾನವಾಗದೆ, ಬರಿಯ ಅಜ್ಞಾನ ಮಾತ್ರ ಆಗುತ್ತದೆ.

ಅವನು ಇಲ್ಲ ಎನ್ನುವುದನ್ನು ಇವನು ಹೋಗಿ ನೋಡಿಕೊಂಡು ಬಂದಿದ್ದಾನೆ ಎಂದು ಅರ್ಥವಾಗುತ್ತದೆ. ಹೋಗಿ ಅಂತಹ ನೋಡಿಕೊಂಡು ಬಂದ ಕೆಲಸವೇನನ್ನೂ ಇವನು ಮಾಡಿಲ್ಲ. ಈಶ್ವರ ಸಾಕ್ಷಾತ್ಕಾರ ಮಾಡಿದವನಾದರೋ ದೇವರು ಇದ್ದಾನೆ ಅನ್ನುವುದನ್ನು ತಾನು ನೋಡಿದ್ದೇನೆ ಎಂದೇ ಹೇಳುತ್ತಾನೆ. ಆದ್ದರಿಂದ ವಿಚಾರವಾದಿಯಾದವನು ಆಜ್ಞೇಯತಾವಾದಿಯಾಗಬಹುದೇ ಹೊರತು ನಾಸ್ತಿಕ ಆಗುವುದಕ್ಕೆ ಸಾಧ್ಯವಿಲ್ಲ”[೨೨] ಎಂಬುದಾಗಿ ತಿಳಿಸಿದ್ದಾರೆ. ಇಲ್ಲಿ ಕುವೆಂಪು ಅವರು ತಿಳಿಸುವ ನೆಲೆಯಲ್ಲಿ ಬುದ್ಧ ಆಜ್ಞೇಯತಾವಾದಿಯಾಗಿ ಕಂಡುಬರುತ್ತಾನೆ. ಇದನ್ನು ಸಿ.ಪಿ.ಕೆ ಅವರು ತಮ್ಮ ವಿಚಾರಗಳ ಅಡಿಯಲ್ಲಿ ವ್ಯಕ್ತಪಡಿಸಿದ್ದಾರೆ. ಹೀಗಾಗಿ ಇಲ್ಲಿ ಬುದ್ಧನನ್ನು ದಾರ್ಶನಿಕ ನೆಲೆಯಲ್ಲಿ ಆಜ್ಞೇಯತಾವಾದಿ ಎಂಬುದಾಗಿ ಗ್ರಹಿಸಲಾಗಿದೆ.

ಬೌದ್ಧಧರ್ಮದ ವೈಚಾರಿಕ ನಿಲುವುಗಳನ್ನು ಕುರಿತಾದ ಮಹಾದೇವಿ ಆರ್. ಹಿರೇಮಠ ಅವರ ವಿಚಾರಗಳು ಹೀಗಿವೆ; “ವಿಶ್ವವಿಶಾಲ ಹೃದಯವನ್ನೂ, ಅನಂತ ಸಹನೆಯನ್ನೂ, ಸಮಕಾಲೀನ ಸಂದರ್ಭದ ಶೋಷಿತ ಜನಾಂಗದ ಜನತೆಯನ್ನು ವ್ಯವಹಾರಯೋಗ್ಯರನ್ನಾಗಿ ಮಾಡುವ ಧರ್ಮವನ್ನೂ, ಪ್ರತಿಯೊಬ್ಬರ ಮನೆಯ ಬಾಗಿಲಿಗೆ ತೆಗೆದುಕೊಂಡು ಹೋದ ಬೌದ್ಧಧರ್ಮದ ಸ್ಥಾಪಕನಾದ ಪ್ರೇಮಭಿಕ್ಷು ಬುದ್ಧನ ಸಂದೇಶಗಳಲ್ಲಿಯೂ ಮಾನವತಾವಾದದ ಅಂಶಗಳನ್ನು ಕಾಣುತ್ತೇವೆ. ವೈದಿಕ ಮತವು ಸಮಾಜದಲ್ಲಿ ಜಾತಿ-ಮತ, ಶ್ರೇಷ್ಠ-ಕನಿಷ್ಠ ಭಾವನೆಗಳನ್ನು ಕಲ್ಪಿಸಿ ಧರ್ಮವನ್ನೇ ಮಾಧ್ಯಮವನ್ನಾಗಿಟ್ಟುಕೊಂಡು ದುರ್ಬಲ ಜನರನ್ನು ಶೋಷಿಸತೊಡಗಿದಾಗ ಶೋಷಿತರ, ದುಃಖಿತರ ಪರವಾದ ಧ್ವನಿಯಾಗಿ ಸಾಂದರ್ಭಿಕ ಅಗತ್ಯವಾಗಿ ಬೌದ್ಧಧರ್ಮವು ಜನ್ಮ ತಾಳಿತು. ಬುದ್ಧನೇ ಅದರ ಹರಿಕಾರ. ಜನರ ಮೌಢ್ಯ, ದುಃಖ, ಕೀಳರಿಮೆ, ಪರಸ್ಪರ ಮೋಸ ವಂಚನೆಗಳಲ್ಲಿ ಮುಳುಗಿದ ಅಂದಿನ ಜನ ಸಮುದಾಯಕ್ಕೆ ಅಗತ್ಯವಾದ ಜೀವನ ಕೈಪಿಡಿಯೊಂದನ್ನು ನೀಡಿದ”[೨೩] ಎಂಬುದಾಗಿ ಬುದ್ಧನ ವೈಚಾರಿಕ ದೃಷ್ಟಿಕೋನಗಳನ್ನು ಎತ್ತಿಹಿಡಿಯುತ್ತಾರೆ. ಇಲ್ಲಿ ಲೇಖಕರು ಬುದ್ಧನ ಈ ಧರ್ಮವನ್ನು ಧಾರ್ಮಿಕ ನೆಲೆಯಿಂದ ಹೊರತುಪಡಿಸಿ ಆತನ ದಾರ್ಶನಿಕತೆಯಲ್ಲಿ ಅಂತರ್ಗತವಾಗಿರುವ ಮಾನವೀಯ ನೆಲೆಗಳನ್ನು ಎತ್ತಿಹಿಡಿಯುತ್ತಾರೆ. ಇಲ್ಲಿ ಬುದ್ಧನು ಒಂದು ಧರ್ಮದ ಸ್ಥಾಪಕನಾಗಿ, ಪ್ರವರ್ತಕರಾಗಿ ಕಂಡುಬರದೆ ಸಾಮಾಜಿಕ ಸಮಾನತೆಯ ಹರಿಕಾರನನ್ನಾಗಿ ಗುರುತಿಸಿದ್ದಾರೆ. ಹೀಗಾಗಿ ಇಲ್ಲಿ ಬುದ್ಧನ ವೈಚಾರಿಕ ನಿಲುವುಗಳು ಸಮಾನತೆಯ ನೆಲೆಯಲ್ಲಿ ಕಂಡುಬರುತ್ತವೆ.

ಕನ್ನಡದ ವೈಚಾರಿಕ ಹಾಗೂ ಪ್ರಗತಿಪರ ಚಿಂತಕರಾದ ಬರಗೂರು ರಾಮಚಂದ್ರಪ್ಪನವರು ಸಮಕಾಲೀನ ಸಂದರ್ಭದಲ್ಲಿ ಅಂಬೇಡ್ಕರ್ ಜಾಗೃತ ನೆಲೆಯಲ್ಲಿ ಸ್ವೀಕರಿಸಿದ ಬೌದ್ಧಧರ್ಮದ ಅಡಿಯಲ್ಲಿ ಮೂಲಭೂತವಾದವೊಂದು ಜನ್ಮತಳೆಯುತ್ತಿರುವ ಬಗೆಗೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. “ಯಾವುದೇ ಐತಿಹಾಸಿಕ ವ್ಯಕ್ತಿ – ವ್ಯಕ್ತಿತ್ವಗಳು ಎಲ್ಲ ಕಾಲಕ್ಕೂ ನೂರಕ್ಕೆ ನೂರು ಸಂಗತ ಎಂದು ನಾವು ತಿಳಿಯಬೇಕಾಗಿಲ್ಲ. ಅವರ ಆಶಯಗಳನ್ನು ಸಮಕಾಲೀನ ಸಂದರ್ಭದಲ್ಲಿ ಪ್ರೇರಕವಾಗಿ ಸ್ವೀಕರಿಸಿ ಹೊಸ ರೂಪಗಳ ಹುಡುಕಾಟಕ್ಕೆ ತೊಡಗುವುದು ಯಾವತ್ತೂ ಪ್ರಸ್ತುತವಾದುದು. ಜಡ ಹಾಗೂ ನಿಷ್ಕ್ರಿಯೆಗಳ ನೆಲೆಯಲ್ಲಿ ಬುದ್ಧನ ‘ಬಳಕೆ’ಯಾಗುತ್ತಿರುವುದು ನನ್ನಂಥವರಿಗೆ ಆತಂಕಕಾರಿಯಾದುದು.

ಬುದ್ಧ ಬಳಕೆದಾರರ ಸರಕಾಗಬಾರದು. ಕ್ರಿಯಾಸಂಸ್ಕೃತಿಯ ಪ್ರತೀಕವಾಗಬೇಕು. ಅಷ್ಟೇ ಅಲ್ಲ ಬುದ್ಧನೇ ಅಂತಿಮ ಎಂದು ಭಾವಿಸುವುದು ಆತ್ಮವಂಚನೆ"[೨೪] ಎಂಬುದಾಗಿ ಅವರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿನ ಚಿಂತನೆಗಳಲ್ಲಿ ಸಮಕಾಲೀನ ಸಂದರ್ಭದ ಬೌದ್ಧ ಚಿಂತನೆಗಳನ್ನು ಸಾಮಾಜಿಕ ನೆಲೆಯಲ್ಲಿ ವಿಶ್ಲೇಷಣೆ ಒಳಪಡಿಸಲಾಗಿದೆ. ಕೆಲವು ಸ್ವಾರ್ಥ ಮನಸ್ಥಿತಿಗಳು ಅಂಬೇಡ್ಕರ್ ತೋರಿಸಿಕೊಟ್ಟ ಬೌದ್ಧದರ್ಶನವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡು ಸಮಾಜದಲ್ಲಿ ಜಡತ್ವದ ಮಾದರಿಯೊಂದನ್ನು ನಿರ್ಮಿಸುತ್ತಿರುವ ಬಗ್ಗೆ ಅವರಿಗೆ ಆತಂಕವಿದೆ. ಇವರ ಈ ಚಿಂತನೆಗಳಲ್ಲಿ ಧರ್ಮವಾಗಲಿ, ದೇವರಾಗಲಿ ಮುಖ್ಯವಾಗುವುದಿಲ್ಲ. ಒಬ್ಬ ಐತಿಹಾಸಿಕ ವ್ಯಕ್ತಿಯನ್ನು ಆದರ್ಶವಾಗಿಟ್ಟುಕೊಂಡು ನಮ್ಮ ಹೋರಾಟವನ್ನು ಮುಂದುವರೆಸಬೇಕೆ ವಿನಃ, ಆ ವ್ಯಕ್ತಿಯೇ ನಮಗೆ ಅನುಗ್ರಹ ನೀಡಬೇಕು, ಪ್ರಗತಿಯತ್ತ ಮುನ್ನಡೆಸಬೇಕೆಂದು ಆರಾಧಿಸುವುದು ಆತ್ಮವಂಚನೆಯ ಪ್ರತೀಕ ಎಂಬುದಾಗಿ ಸಮಕಾಲೀನ ಸಂದರ್ಭದಲ್ಲಿ ಸೃಷ್ಟಿಯಾಗುತ್ತಿರುವ ಬೌದ್ಧ ಚಿಂತನೆಗಳು ಹಾಗೂ ಹೋರಾಟದ ಮಾದರಿಗಳ ಕುರಿತು ಪ್ರತಿಕ್ರಿಯಿಸುತ್ತಾರೆ. ಅಂಬೇಡ್ಕರ್ ದಲಿತರಲ್ಲಿ ಜಾಗೃತಿ ಪ್ರಜ್ಞೆ ಮೂಡಲು ಮತ್ತು ಅಸಮಾನತೆಯ ಕೂಪವಾಗಿರುವ ಹಿಂದೂಧರ್ಮದಿಂದ ಹೊರಬಂದು ಬೌದ್ಧಧರ್ಮವನ್ನು ಸ್ವೀಕರಿಸಿದರು. ಈ ಬೌದ್ಧಧರ್ಮವನ್ನು ತಮ್ಮ ಹೋರಾಟಕ್ಕೆ ಚಾರಿತ್ರಿಕ ಸಮರ್ಥನೆಯಾಗಿ ಬಳಸಿಕೊಂಡು ಮುನ್ನೆಡೆದರು. ಆದರೆ ಅವರ ನಂತರದಲ್ಲಿ ಅವರ ಅನುಯಾಯಿ ಪಂಥಗಳು, ಸಂಘಟನೆ, ಹೋರಾಟಗಳು ಅಂಬೇಡ್ಕರ್ ಅವರ ಮೂಲ ಆಶಯಗಳನ್ನು ಮೂಲೆಗುಂಪಾಗಿಸಿ, ಬುದ್ಧನನ್ನು ದೈವಕೇಂದ್ರಿತ ನೆಲೆಯಲ್ಲಿ ಆರಾಧಿಸುವುದಕ್ಕೆ ಸೀಮಿತಗೊಳಿಸಿ ಜಡ ಮಾದರಿಯನ್ನು ಸೃಷ್ಟಿಸುತ್ತಿವೆ. ಈ ಜಡತ್ವ ಮಾದರಿಯಾಚೆ ಅಂಬೇಡ್ಕರ್ ಅವರ ವೈಚಾರಿಕ ನೆಲೆಯಲ್ಲಿ ಬುದ್ಧನನ್ನು ಸ್ವೀಕರಿಸಬೇಕಾದ ನೆಲೆಯೊಂದನ್ನು ಇವರು ತಮ್ಮ ಚಿಂತನೆಯಲ್ಲಿ ಕಟ್ಟಿಕೊಡುತ್ತಾರೆ. ಇವರ ಚಿಂತನೆಗಳಲ್ಲಿ ಬುದ್ಧನ ಬಗೆಗೆ ಆರಾಧನ ಭಾವವಾಗಲಿ, ದೈವತ್ವ ಭಾವವಾಗಲಿ ಮುಖ್ಯವಾಗಿ ಕಂಡುಬರುವುದಿಲ್ಲ. ಸಾಮಾಜಿಕ ಅಸಮಾನತೆಗೆ ಪರ್ಯಾಯ ಮಾರ್ಗವಾಗಿ ಅಂಬೇಡ್ಕರ್ ಕಂಡುಕೊಂಡ ಬೌದ್ಧದರ್ಶನದ ವೈಚಾರಿಕ ನೆಲೆಗಳು ಪ್ರಧಾನವಾಗಿವೆ.

ಕನ್ನಡದ ದಲಿತ ಚಿಂತಕರಾದ ದೇವನೂರ ಮಹಾದೇವ ಅವರು ಬೌದ್ಧಧರ್ಮದ ಕುರಿತಾಗಿ ತಳಸಮುದಾಯಗಳ ಪ್ರಗತಿಯ ಹಿನ್ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ಪ್ರಸ್ತಾಪಿಸಿದ್ದಾರೆ. ತಮ್ಮ ಮೂಲ ಸಂಸ್ಕೃತಿ ಹಾಗೂ ಪರಂಪರೆಗಳನ್ನು ತೊರೆಯದೆ ಅದರ ಅಡಿಯಲ್ಲಿಯೇ ಬುದ್ಧನ ತಾತ್ವಿಕತೆಯನ್ನು ಕಂಡುಕೊಳ್ಳಬೇಕಾದ ಅನಿವಾರ್ಯತೆಯನ್ನು ತಮ್ಮ ಚಿಂತನಧಾರೆಗಳಲ್ಲಿ ಮಂಡಿಸಿದ್ದಾರೆ. ಬೌದ್ಧಧರ್ಮದತ್ತ ದಲಿತರು ಹಾಗೂ ಹಿಂದುಳಿದ ಸಮುದಾಯವನ್ನು ಮುನ್ನೆಡೆಸುತ್ತಿರುವ ಹೊಣೆ ಹೊತ್ತಿರುವ ಸಂಘಟನೆಗಳು ಹಾಗೂ ಭಂತೇಗಳನ್ನು ಕುರಿತಾಗಿ ವೈಚಾರಿಕ ನಿಲುವುಗಳನ್ನು ವ್ಯಕ್ತಪಡಿಸುತ್ತಾರೆ. ಅವರ ವಿಚಾರಗಳು ಹೀಗಿವೆ; "ಇತ್ತೀಚೆಗೆ ಬೌದ್ಧಧರ್ಮದ ಪ್ರಚಾರ ಕಾರ್ಯಗಳು ನಡೆಯುತ್ತಿವೆ. ಈ ಸಂದರ್ಭದಲ್ಲಿ ಬಂತೇಜಿಗಳಿಗೆ ವಿನಂತಿಸುವೆ. ಏನೆಂದರೆ, ಬುದ್ಧ ಮತ್ತು ವಚನಕಾರರು ಜನರಾಡುವ ಮಾತಲ್ಲಿ ನುಡಿದವರು. ಇದೇ ಕಾರಣವಾಗಿ ಅವರು ನೇರವಾಗಿ ಹೃದಯ

ಮುಟ್ಟುವವರಾಗಿದ್ದಾರೆ. ಹಾಗಾಗಿ ಆಯಾಯ ಜನರ ಭಾಷೆಯಲ್ಲಿ ಬುದ್ಧನ ದರ್ಶನದ ನುಡಿಗಟ್ಟುಗಳನ್ನು ರೂಪಿಸಿ ಜೀವಂತಗೊಳಿಸಬೇಕಾಗಿದೆ."[೨೫] ಇಂದು ಅಂಬೇಡ್ಕರ್ ಅವರ ವಿಚಾರಗಳಿಂದ ಪ್ರಭಾವಿತರಾದ ದಲಿತ ಯುವ ಸಮುದಾಯವು ಪ್ರತಿವರ್ಷ ಬೌದ್ಧ ಪೂರ್ಣಿಮೆ, ಅಂಬೇಡ್ಕರ್ ಜಯಂತಿ, ಪರಿನಿರ್ವಾಣ ಹೊಂದಿದ ದಿನ ಹಾಗೂ ಬೌದ್ಧಧರ್ಮಕ್ಕೆ ಮತಾಂತರ ಹೊಂದಿದ ದಿನಗಳಲ್ಲಿ ಇಂದಿಗೂ ಸಾವಿರಾರು ದಲಿತರು ಸಂಘಟನೆಗಳ ನೇತೃತ್ವದಲ್ಲಿ ಬಂತೇಗಳಿಂದ ಬೌದ್ಧಧಮ್ಮ ದೀಕ್ಷೆಯನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ ನಂತರದಲ್ಲಿ ಇವರಿಗೆ ಧರ್ಮವನ್ನು ಅರ್ಥೈಸಿಕೊಳ್ಳುವುದಕ್ಕೆ ಮತ್ತು ಆ ನೆಲೆಯನ್ನು ಮುಂದುವರೆಯುವುದಕ್ಕೆ ಬೇಕಾದ ತಿಳವಳಿಕೆಯ ಕೊರತೆಯಿದೆ. ಇಲ್ಲಿ ದೀಕ್ಷೆ ನೀಡುವ ಸಂದರ್ಭದಲ್ಲಿ ಸಾಮಾನ್ಯ ಜನತೆಗೆ ತಿಳಿಯದ ಭಾಷೆಯಲ್ಲಿ (ಪಾಳಿ ಅಥವಾ ಸಂಸ್ಕೃತ) ಮಂತ್ರಗಳನ್ನು ಉಚ್ಚರಿಸುತ್ತಾರೆ. ಆದರೆ ಇದರ ಸಾರವು ಕೂಡ ಮತಾಂತರಗೊಂಡವರಿಗೆ ತಿಳಿದಿರುವುದಿಲ್ಲ. ಉನ್ನತ ಶಿಕ್ಷಣವನ್ನು ಪಡೆದ ಎಷ್ಟೋ ಜನರಿಗೂ ಇದರ ಅರ್ಥವೇ ಗೊತ್ತಿಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ. ವಾಸ್ತವ ಹೀಗಿರುವಾಗ ದಲಿತ ವರ್ಗದ ಅನಕ್ಷರಸ್ಥರು ಈ ಧರ್ಮದ ಸಾರವನ್ನು ತಿಳಿಯುವುದಾದರು ಹೇಗೆ ಎಂಬ ಆತಂಕಗಳು ನಮ್ಮ ಚಿಂತಕ ವರ್ಗದಲ್ಲಿ ಕಂಡುಬರುತ್ತವೆ. ಈ ಕಾರಣದಿಂದಾಗಿ ಧಮ್ಮವನ್ನು ಹರಸಿ ಬರುವ ವರ್ಗಕ್ಕೆ ಸಾಮಾನ್ಯ ಜನರು ಮಾತನಾಡುವ ಭಾಷೆಯಲ್ಲಿ ಮಾತನಾಡಿದಾಗ ಅವರು ಧರ್ಮಕ್ಕೆ ಹತ್ತಿರವಾಗುತ್ತಾರೆ. ಇಲ್ಲದೆ ಹೋದರೆ ಇದು ಪರಕೀಯ ಧರ್ಮವೆಂದು ದೂರ ಸರಿಯುತ್ತಾರೆ. ಹೀಗಾಗಿ ಬಂತೇಗಳು ಜನತೆಗೆ ಹತ್ತಿರವಾಗಬೇಕು. ಪುರೋಹಿತಶಾಹಿ ಮಾದರಿಯಿಂದ ಹೊರಬರಬೇಕು ಎಂಬ ವಿಚಾರವನ್ನು ದೇವನೂರರು ವ್ಯಕ್ತಪಡಿಸುತ್ತಾರೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಬಹುತೇಕ ಚಿಂತನಧಾರೆಗಳು ಬುದ್ಧನ ದಾರ್ಶನಿಕತೆಯನ್ನು ವೈಚಾರಿಕ ನೆಲೆಯಲ್ಲಿ ಸ್ವೀಕರಿಸುವ ಮೂಲಕವಾಗಿ ತಮ್ಮ ನಿಲುವುಗಳನ್ನು ಮಂಡಿಸಿದ್ದಾರೆ. ಕನ್ನಡದ ಈ ಚಿಂತನಧಾರೆಗಳಿಗೆ ಬೌದ್ಧಧರ್ಮದ ಧಾರ್ಮಿಕ ಕ್ರಿಯಾ ವಿಧಾನಗಳು ಮುಖ್ಯವಾಗುವುದಿಲ್ಲ. ಬುದ್ಧನ ಜೀವಪರವಾದ ಕಾಳಜಿ ಮತ್ತು ಸಮಾನತೆಯ ದೃಷ್ಟಿಕೋನ ಪ್ರಮುಖವಾಗಿ ಕಂಡುಬರುತ್ತದೆ. ಸಮಕಾಲೀನ ಸಮಾಜದಲ್ಲಿನ ಅಸಮಾನತೆ ಹಾಗೂ ಪುರೋಹಿತಶಾಹಿ ನೆಲೆಗಳನ್ನು ಮೀರುವುದಕ್ಕೆ ಕನ್ನಡದ ಚಿಂತನ ಸಾಹಿತ್ಯವು ಬೌದ್ಧ ದರ್ಶನವನ್ನು ಸ್ವೀಕರಿಸಿರುವುದಾಗಿ ತಿಳಿದುಬರುತ್ತದೆ.

೬. ಹಿಂದುತ್ವದೊಂದಿಗೆ ಬೆಸೆಯುವ ನೆಲೆಗಳು

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧದರ್ಶನವನ್ನು ಹಿಂದುತ್ವದೊಂದಿಗೆ ಬೆಸೆಯುವ ಕೆಲವು ಧಾರೆಗಳು ಕಂಡುಬರುತ್ತವೆ. ಈ ಧಾರೆಗಳು ಬೌದ್ಧಧರ್ಮ ಮತ್ತು ಹಿಂದೂಧರ್ಮ ಎರಡು ಪ್ರತ್ಯೇಕವಲ್ಲ ಎಂಬುದಾಗಿ ಸಮರ್ಥಿಸಿಕೊಳ್ಳುತ್ತವೆ. ಆ ಮೂಲಕವಾಗಿ ಬೌದ್ಧಧರ್ಮವನ್ನು ಹಿಂದೂಧರ್ಮದ ಸಾರದೊಂದಿಗೆ ಬೆಸೆಯುವ ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸುತ್ತ ಬಂದಿವೆ. ಇಂತಹ ಹಲವು ಧಾರೆಗಳು ಕನ್ನಡ ಚಿಂತನ ಸಾಹಿತ್ಯ ಪ್ರಕಾರದಲ್ಲಿ ಕಂಡುಬರುತ್ತವೆ. ಅವುಗಳನ್ನು ಈ ಮುಂದಿನಂತೆ ಅಧ್ಯಯನಕ್ಕೆ ಒಳಪಡಿಸಲಾಗುವುದು.

ಕ್ರಿ.ಶ ೧೧ನೇ ಶತಮಾನದ ಸಂಸ್ಕೃತ ಭಕ್ತಕವಿ ಜಯದೇವನು ಕೃಷ್ಣನನ್ನು ಬಣ್ಣಿಸುವ ಪದ್ಯವೊಂದರಲ್ಲಿ ಬುದ್ಧನ ರೂಪವನ್ನು ಕೃಷ್ಣನಿಗೆ ಸಮೀಕರಿಸಿ ವರ್ಣಿಸುತ್ತಾನೆ. ಆ ಪದ್ಯ ಹೀಗಿದೆ:

> **"ನಿಂದಿಸಿ ಯಜ್ಞವಿಧೇರಹಹ ಶ್ರುತಿಜಾತಂ**
> **ಸದಯಹೃದಯದರ್ಶಿತ ಪಶುಘಾತಂ**
> **ಕೇಶವ ಧೃತಬುದ್ಧಶರೀರ, ಜಯ ಜಗದೀಶ ಹರೇ"**[೨೬]

ಇಲ್ಲಿ ಕವಿಯು ಕೃಷ್ಣನ ಗುಣಗಾನ ಮಾಡುವಾಗ ಎಲೆ ಕೇಶವ, ಯಜ್ಞವಿಧಿಗಳಲ್ಲಿಯ ಪಶುಹಿಂಸೆಯನ್ನು ನಿಂದಿಸಿದ ಬುದ್ಧ ರೂಪಧಾರಿಯಾದ ಜಗದೀಶನೇ ನಿನಗೆ ಜಯವಾಗಲಿ ಎಂದು ಬಣ್ಣಿಸುತ್ತಾನೆ. ಬ್ರಾಹ್ಮಣರ ಯಜ್ಞ ಕಾರ್ಯಗಳನ್ನು ನಿಂದಿಸುವ ಮೂಲಕವಾಗಿ ಸಾಮಾನ್ಯ ಜನರಿಗೆ ಹತ್ತಿರವಾದ ಬುದ್ಧನನ್ನು ವೈದಿಕಶಾಹಿಯ ಕಕ್ಷೆಯೊಳಗೆ ಸೇರಿಸಿಕೊಳ್ಳುವ ನೆಲೆಯಲ್ಲಿ ಕೃಷ್ಣನನ್ನು ಬುದ್ಧ ಸ್ವರೂಪಿ ಎಂಬುದಾಗಿ ಸಮೀಕರಿಸುತ್ತಾರೆ. ಇಲ್ಲಿ ಕವಿಯ ಪ್ರಮುಖ ಆಶಯ ಬ್ರಾಹ್ಮಣರ ಅಸ್ತಿತ್ವಕ್ಕೆ ಧಕ್ಕೆಯಾಗದಂತೆ ಕಾಪಾಡುವುದಾಗಿದೆ. ಅದಕ್ಕಾಗಿ ಯಾವ ವ್ಯಕ್ತಿಯಿಂದ ತಮ್ಮ ಧರ್ಮದ ಆಶಯಗಳಿಗೆ ಕುಂದುಂಟಾಗಿದೆಯೋ ಅದೇ ವ್ಯಕ್ತಿಯನ್ನು ತಮ್ಮ ಧರ್ಮದ ವ್ಯಾಪ್ತಿಯೊಳಗೆ ಸೆಳೆದುಕೊಳ್ಳುವ ಗುಣ ವೈದಿಕ ನೆಲೆಯದಾಗಿದೆ. ಇದಕ್ಕಾಗಿಯೆ ವೈಚಾರಿಕ ಚಿಂತಕನು, ಸಾಮಾಜಿಕ ಸುಧಾರಕನು ಆದ ಬುದ್ಧನ ಪ್ರಗತಿಪರ ಕಾರ್ಯಗಳನ್ನು ಕೃಷ್ಣನಿಗೆ ಆರೋಪಿಸಿಕೊಳ್ಳುವ ತಂತ್ರಗಾರಿಕೆಯೊಂದು ಇಲ್ಲಿ ಕಾರ್ಯಪ್ರವೃತ್ತವಾಗಿದೆ. ಆ ಮೂಲಕವಾಗಿ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಬುದ್ಧನನ್ನು ವೈದಿಕ ಕಕ್ಷೆಯೊಳಗೆ ಬೆಸೆಯುವ ಧಾರೆಯೊಂದು ಕಂಡುಬರುತ್ತದೆ.

ಪಾಶ್ಚಿಮಾತ್ಯ ವಿಚಾರವಾದಿಗಳಾದ ಡಬ್ಲ್ಯೂ.ಎಫ್.ವೈಟರ್ ಅವರು ಬುದ್ಧ ತನ್ನ ವೈಚಾರಿಕ ಚಿಂತನೆಗಳಿಗೆ ವೇದಗಳ ಸಾರವನ್ನು ಸ್ವೀಕರಿಸಿರುವುದಾಗಿ ಪ್ರತಿಪಾದಿಸುತ್ತಾರೆ. ಇವರ ಪ್ರಕಾರ "ಬುದ್ಧ, ಧರ್ಮ ಹಾಗೂ ಸಂಘ ಈ ಮೂರು ರತ್ನಗಳು ಜನರನ್ನು ರಕ್ಷಿಸುತ್ತವೆ ಎನ್ನುವ ಧಾರ್ಮಿಕ ಸಿದ್ಧಾಂತಗಳ ಮೂಲ ವೇದದಲ್ಲಿಯೇ ಇದೆ."[೨೭] ಇವರು ಹೇಳುವ ಪ್ರಕಾರ ಬುದ್ಧನ ವಿಚಾರಗಳ ಸಾರವು ವೇದಗಳಲ್ಲಿ ಅಂತರ್ಗತವಾಗಿರಬಹುದು. ಆದರೆ ಇವುಗಳು ಸಾಮಾನ್ಯ ಜನತೆಯನ್ನು ತಲುಪಿರಲಿಲ್ಲ. ವೇದಗಳ ಸಾರ ಉನ್ನತ ವರ್ಗದ ಬ್ರಾಹ್ಮಣರಿಗೆ ಮಾತ್ರ ಸೀಮಿತವಾಗಿತ್ತು. ಆದರೆ ಬುದ್ಧ ಸಾಮಾಜಿಕ ಬದುಕಿನೆಡೆಗೆ ಮುಖ ಮಾಡುವ ಮೂಲಕವಾಗಿ ಸರ್ವರಿಗೂ ಸಮಾನ ನೆಲೆಯಲ್ಲಿ ತನ್ನ ವಿಚಾರಗಳನ್ನು ವ್ಯಕ್ತಪಡಿಸುತ್ತಾ ಬಂದಿದ್ದಾನೆ. ಆದರೆ ಇದನ್ನೇ ಆಧಾರವಾಗಿಟ್ಟುಕೊಂಡು ಕೆಲವು ಮೂಲಭೂತವಾದಿಗಳು ಬುದ್ಧನು ಹಿಂದುತ್ವದ ವಿರೋಧಿಯಲ್ಲ ಎಂಬುದಾಗಿ ಪ್ರತಿಪಾದಿಸುವ ನೆಲೆಯೊಂದು ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುತ್ತದೆ.

ಮತ್ತೊಬ್ಬ ಪಾಶ್ಚಿಮಾತ್ಯ ಚಿಂತಕರಾದ ಕ್ರಿಸ್ಟಿಯನ್ ಲಿಂಡೆಂಟರ್ ಎಂಬುವವರು ಬುದ್ಧ ಹಾಗೂ ಬೌದ್ಧಧರ್ಮದ ಕುರಿತು ವ್ಯಕ್ತಪಡಿಸುವ ನಿಲುವುಗಳು ವಿಶೇಷವಾಗಿವೆ. ಇವರು "ಬೌದ್ಧ ಭಿಕ್ಷುಗಳು ಎಂದರೆ ನಿಜವಾದ ಬ್ರಾಹ್ಮಣರು; ಇಂತಹವರಿಗೆ ಮಹಾಬ್ರಹ್ಮನಾದ ಬುದ್ಧ ಬ್ರಹ್ಮಜ್ಞಾನ

ಎಂದರೆ ಧರ್ಮದ ಪಾಠ ಕಲಿಸುತ್ತಾನೆ. ಇದು ಐತಿಹಾಸಿಕ ಸತ್ಯವಾಗಿದ್ದರೆ ಬೌದ್ಧಧರ್ಮವೆಂದರೆ ಸುಧಾರಿಸಿದ ಬ್ರಾಹಣ ಧರ್ಮವೇ ಹೌದು"[೨೮] ಎಂದು ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತಾರೆ. ಇವರ ಪ್ರಕಾರ ಬೌದ್ಧಭಿಕ್ಷುಗಳು ನಿಜವಾದ ಬ್ರಾಹ್ಮಣರು ಎನ್ನುವ ಮಾತು ಜ್ಞಾನ, ತಿಳುವಳಿಕೆಗೆ ಸಂಬಂಧಿಸಿದ್ದಾಗಿದೆ. ಲೋಕಜ್ಞಾನವನ್ನು ತಿಳಿದಿರುವ ವಿಚಾರವಾದಿಗಳನ್ನು ಬುದ್ಧ ಬ್ರಾಹ್ಮಣರೆಂದು ಕರೆಯುತ್ತಾನೆ. ಆದರೆ ಜಾತಿಯಿಂದ ಯಾರನ್ನು ಬ್ರಾಹ್ಮಣನೆಂಬುದಾಗಿ ಒಪ್ಪಿಕೊಂಡಿರುವ ಸಂಗತಿ ಕಂಡುಬರುವುದಿಲ್ಲ. ಈ ವಿಚಾರವಾಗಿ ಬುದ್ಧನ ನಿಲುವು ಸ್ಪಷ್ಟವಾಗಿದೆ. "ಯಾವನೆ ಬ್ರಾಹ್ಮಣನು ಹಸುವನ್ನಿಟ್ಟುಕೊಂಡು ನಿರ್ವಾಹವನ್ನು ನಡೆಸುತ್ತಿದ್ದರೆ ಅವನನ್ನು ಹಾಲಿನವ (ಗವಳಿ) ಎನ್ನಬೇಕು. ಬ್ರಾಹ್ಮಣನೆಂದಲ್ಲ. ಶಿಲ್ಪಕಲೆಯಿಂದ ಉಪಜೀವಿಕೆಯನ್ನು ನಡೆಸುವವ ಶಿಲ್ಪಿಗ, ವ್ಯಾಪಾರವನ್ನು ಮಾಡುವವ ವ್ಯಾಪಾರಿ, ದೂತನ ಕೆಲಸವನ್ನು ಮಾಡುವವ ದೂತ, ಕಳವಿನಿಂದ ಉಪಜೀವಿಕೆಯನ್ನು ನಡೆಸುವವ ಕಳ್ಳ, ಯುದ್ಧಕಲೆಯಿಂದ ಉಪಜೀವಿಕೆಯನ್ನು ಮಾಡಿಕೊಳ್ಳುವವ ಯೋದ್ಧಾ, ಯಜ್ಞಾಯಾಗಾದಿಗಳಿಂದ ನಿರ್ವಾಹ ನಡೆಸುವವ ಯಾಜಕ ಮತ್ತು ರಾಷ್ಟ್ರದ ಮೇಲೆ ಉಪಜೀವಿಸುವವ ರಾಜನಾಗುತ್ತಾನೆ. ಆದರೆ ಇವರೊಳಗೆ ಯಾವನನ್ನೂ ಜನ್ಮದಿಂದ ಬ್ರಾಹ್ಮಣ ಎನ್ನಲು ಬಾರದು"[೨೯] ಎಂಬುದು ಬುದ್ಧನ ತಾತ್ವಿಕ ನಿಲುವಾಗಿದೆ. ಜ್ಞಾನದ ನೆಲೆಯಲ್ಲಿ ನೋಡಿದರೆ ನಿಜಾರ್ಥದಲ್ಲಿ ಬೌದ್ಧಭಿಕ್ಷುಗಳು ಬ್ರಹ್ಮಜ್ಞಾನಿಗಳಾಗಿ, ಬುದ್ಧನು ಮಹಾಬ್ರಾಹ್ಮಣನಾಗುತ್ತಾನೆ. ಆದರೆ ಇದನ್ನೇ ಆಧಾರವಾಗಿಟ್ಟುಕೊಂಡು ಬುದ್ಧನು ಪ್ರತಿಪಾದಿಸಿದ ಧರ್ಮವನ್ನು ಮೂಲಭೂತವಾದಿ ನೆಲೆಯ ಬ್ರಾಹ್ಮಣ ಧರ್ಮದೊಂದಿಗೆ ಬೆಸೆಯುವ ಕ್ರಮವು ಸೂಕ್ತವಾದುದಲ್ಲ. ಪಾಶ್ಚಿಮಾತ್ಯ ಚಿಂತಕರು ಬುದ್ಧನನ್ನು 'ಬ್ರಹಜ್ಞಾನಿ' ಎಂದು ಕರೆದಿರಬಹುದಾದ ಅಂಶಗಳನ್ನು ಕೇಂದ್ರವಾಗಿಟ್ಟುಕೊಂಡು ಬುದ್ಧ ಹಾಗೂ ಬುದ್ಧಧರ್ಮವನ್ನು ಬ್ರಾಹ್ಮಣಧರ್ಮವಾದ ಹಿಂದುತ್ವದೊಂದಿಗೆ ಬೆಸೆಯುವ ಕೆಲಸವು ಬೌದ್ಧಿಕ ವಲಯದಲ್ಲಿ ನಡೆಯುತ್ತ ಬಂದಿದೆ. ಇದಕ್ಕೆ ಪೂರಕವಾಗಿ ಪಂಜಾಬರಾವ ದೇಶಮುಖ ಎಂಬುವವರು 'ಮೂಲತಃ ಬೌದ್ಧಮತವು ಬ್ರಾಹ್ಮಣ ಗ್ರಂಥಗಳಲ್ಲಿ ಪ್ರತಿಪಾದಿಸಿದ ತತ್ವಜ್ಞಾನದ ಒಂದು ಭಿನ್ನಮಾರ್ಗದ ಶಾಖೆಯಾಗಿದ್ದಿತು.' ಎಂಬುದಾಗಿ ಬುದ್ಧನ ವಿಚಾರಗಳನ್ನು ಬ್ರಾಹ್ಮಣತ್ವದೊಂದಿಗೆ ಸಮೀಕರಿಸಿಕೊಳ್ಳುತ್ತಾರೆ.

ಕನ್ನಡದ ಮತ್ತೊಬ್ಬ ಚಿಂತಕರಾದ ಎಂ.ಎ.ಹೆಗಡೆ ಅವರು "ವೈದಿಕ ತೆಕ್ಕೆಯಿಂದ ತಪ್ಪಿಸಿಕೊಂಡು ತನ್ನದೇ ದಾರಿಯನ್ನು ಕಂಡುಕೊಂಡು ಬುದ್ಧ ಅದ್ವೈತವನ್ನು ವಿರೋಧಿಸಲಿಲ್ಲ. ಅದನ್ನು ತನ್ನ ಅನುಭವದ ಬೆಳಕಿನಲ್ಲಿ ಉಪದೇಶಿಸಿದ್ದಾನೆ. ಅವನನ್ನು 'ಅನಾತ್ಮವಾದಿ' ಎಂದು ಕರೆದರೂ ಅವನು ವಿರೋಧಿಸಿದ್ದು ಆತ್ಮವನ್ನಲ್ಲ ಅಹಂಕಾರ ಮತ್ತು ಮಮಕಾರಗಳನ್ನು. ಬುದ್ಧ ಆತ್ಮವೇ ಬ್ರಹ್ಮವೆಂದು ಹೇಳಿಲ್ಲ ಸೂಚಿಸಿದ್ದಾನೆ" ಎಂಬುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ವೈದಿಕತೆಯ ತೆಕ್ಕೆಯಿಂದ ಹೊರಬಂದು ಸಮಾನತೆಯ ನೆಲೆಯಲ್ಲಿ ವೈಚಾರಿಕ ಚಿಂತನೆಗಳನ್ನು ವ್ಯಕ್ತಪಡಿಸಿದ ಬುದ್ಧನನ್ನು ಮತ್ತೆ ಹಿಂದುತ್ವದ ತೆಕ್ಕೆಯೊಳಕ್ಕೆ ಸೆಳೆಯುವ ಅಂಶಗಳು ಇವರ ಚಿಂತನೆಯಲ್ಲಿ ಕಂಡುಬರುತ್ತವೆ. ಶಿಕ್ಷಣ, ಸಂಘಟನೆ, ಹೋರಾಟಗಳ ಮೂಲಕವಾಗಿ ತಳಸಮುದಾಯಗಳು

ಜಾಗೃತಗೊಳ್ಳುವ ಸಂದರ್ಭದಲ್ಲಿ ಬಲಪಂಥೀಯ ವಿಚಾರವಾದಿಗಳು ತಮ್ಮ ಅನನ್ಯತೆಯನ್ನು ಕಾಪಾಡಿಕೊಳ್ಳುವ ಸಲುವಾಗಿ ಈ ನೆಲೆಯ ಚಿಂತನಧಾರೆಗಳು ಒಡಮೂಡುತ್ತಿವೆ.

ಮಾಸ್ತಿ ವೆಂಕಟೇಶ್ ಅಯ್ಯಂಗಾರರು ಬೌದ್ಧಧರ್ಮವನ್ನು ಹಿಂದೂಧರ್ಮದ ಭಾಗವೆಂದು ಗುರುತಿಸುವ ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ಪ್ರಕಟಿಸಿದ್ದಾರೆ. ಇವರ ಈ ಚಿಂತನೆಗೆ ಪ್ರಮುಖ ಕಾರಣವೆಂದರೆ, ಅಂಬೇಡ್ಕರರ ವಿಚಾರಗಳಿಂದ ಪ್ರಭಾವಿತರಾದ ದಲಿತರು ಬೌದ್ಧಧರ್ಮಕ್ಕೆ ಮತಾಂತರವಾಗುವ ಮೂಲಕವಾಗಿ ಹಿಂದುಧರ್ಮದ ಅಸಮಾನ ನೀತಿ ನಿಯಮಗಳನ್ನು ವಿರೋಧಿಸುವುದಕ್ಕೆ ಮುಂದಾಗಿದ್ದಾರೆ. ಇದರಿಂದ ವೈದಿಕಧರ್ಮಕ್ಕೆ ಪ್ರಬಲವಾದ ಪೆಟ್ಟು ಬೀಳಲಾರಂಭಿಸಿತು. ಆದ ಕಾರಣ ಬುದ್ಧನ ಧರ್ಮವು ಹಿಂದೂಧರ್ಮದ ಉಪಶಾಖೆ ಎಂದು ಪ್ರತಿಪಾದಿಸಲು ಪಾಶ್ಚಿಮಾತ್ಯ ಚಿಂತಕರ ವಿಚಾರಗಳ ಮೂಲಕವಾಗಿ ತಮ್ಮ ಚಿಂತನಧಾರೆಗಳನ್ನು ಸಮರ್ಥಿಸಿಕೊಳ್ಳುವುದಕ್ಕೆ ಮುಂದಾಗಿದ್ದಾರೆ. ಇದಕ್ಕೆ ಇವರು ನೀಡುವ ಸಮರ್ಥನೆ ಹೀಗಿದೆ; "ಬೌದ್ಧ ಶಾಸ್ತ್ರವೇತ್ತರಾದ ರೈಸ್ ಡೇವಿಸ್ ಬುದ್ಧನನ್ನು ಅತ್ಯುನ್ನತ ಹಿಂದೂ ಎಂದೂ ವರ್ಣಿಸಿದರು. ಆದರೆ ಬುದ್ಧ ಗುರುವಿನ ಅನುಯಾಯಿಗಳು ತಾವು ಪ್ರತ್ಯೇಕ ಎಂಬ ಭಾವನೆಯನ್ನೇ ಬೆಳೆಸಿಕೊಳ್ಳುತ್ತಿದ್ದಾರೆ. ಹಿಂದೂ ಧರ್ಮದಲ್ಲಿ ಹರಿಜನರಿಗೆ ಸರಿಯಾದ ಸ್ಥಾನ ಇಲ್ಲವೆಂದು ನಮ್ಮ ನಾಯಕ ದಿವಂಗತ ಅಂಬೇಡ್ಕರ್ ಮಹಾಶಯರು ತನ್ನ ಸೋದರ ಹರಿಜನರನ್ನು ಸಾವಿರ ಸಾವಿರವಾಗಿ ಬೌದ್ಧ 'ಧರ್ಮ'ಕ್ಕೆ ಸೇರಿಸಿದರು, ತಾವೂ ಆ ಧರ್ಮವನ್ನವಲಂಭಿಸಿದರು"[೩೦] ಎಂಬುದಾಗಿ ತಿಳಿಸುತ್ತದೆ. ಇಲ್ಲಿ ಮಾಸ್ತಿಯವರು ಬುದ್ಧನ ಧರ್ಮವನ್ನು ಹಿಂದುತ್ವದ ಭಾಗವಾಗಿಯೇ ಗ್ರಹಿಸುತ್ತಾರೆ. ಆದರೆ ಅಂಬೇಡ್ಕರ್ ಅನುಯಾಯಿಗಳಿಂದ ದಲಿತರು ಬೌದ್ಧಧರ್ಮಕ್ಕೆ ಮತಾಂತರ ಹೊಂದುವುದರಿಂದ ಅವರಲ್ಲಿ ಹಿಂದುತ್ವದ ಮೂಲಭೂತವಾದಿ ಧೋರಣೆಗಳ ಅರಿವಾಗಿ ಪ್ರತ್ಯೇಕವಾಗುತ್ತಿರುವುದರ ಬಗೆಗೆ ಇವರಿಗೆ ಆತಂಕವಿದೆ. ಇಲ್ಲಿ ದಲಿತರು ಜಾಗೃತರಾಗಿ ಬೌದ್ಧಧರ್ಮಕ್ಕೆ ಮತಾಂತರವಾಗುತ್ತಿರುವ ಬಗೆಗೆ ಇರುವ ಆತಂಕ ಭಾವನೆಯು ವೈದಿಕ ಧರ್ಮದಲ್ಲಿ ದಲಿತರನ್ನು ಅಮಾನವೀಯ ನೆಲೆಯಲ್ಲಿ ನಡೆಸಿಕೊಳ್ಳುವ ಬಗ್ಗೆ ಇವರಲ್ಲಿ ಯಾವುದೇ ಆತಂಕ ಕಾಣುವುದಿಲ್ಲ. ತಮ್ಮ ಧರ್ಮದ ಅಸ್ತಿತ್ವದ ಉಳಿವಿಗಾಗಿ, ವೈದಿಕಧರ್ಮವನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿ ಬುದ್ಧನನ್ನು 'ಅತ್ಯುನ್ನತ ಹಿಂದೂ' ಎಂಬುದಾಗಿ ತಮ್ಮ ವಾದವನ್ನು ಮಂಡಿಸುತ್ತಾರೆ. ಆ ಮೂಲಕ ಬುದ್ಧನ ದರ್ಶನವನ್ನು ಹಿಂದುತ್ವದ ತೆಕ್ಕೆಯೊಳಗೆ ಸೆಳೆಯುವ ಪ್ರಯತ್ನಕ್ಕೆ ಇವರು ಮುಂದಾಗಿರುವುದು ಕಂಡುಬರುತ್ತದೆ.

೭. ಬೌದ್ಧ ವಿರೋಧಿ ನೆಲೆಗಳು

ಭಾರತದಲ್ಲಿ ಸಮಾನತೆಯ ನೆಲೆಯನ್ನು ಪ್ರತಿಪಾದಿಸುವ ಮೂಲಕ ವೈದಿಕಧರ್ಮಕ್ಕೆ ಪ್ರಬಲವಾದ ಪೆಟ್ಟು ನೀಡಿದವನು ಬುದ್ಧ. ಹಿಂದುತ್ವವಾದಿಗಳು ತಮ್ಮ ಧರ್ಮವನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿ ಬುದ್ಧನ ಧರ್ಮ ಹಾಗೂ ದಾರ್ಶನಿಕತೆಯನ್ನು ವಿಭಿನ್ನ ದೃಷ್ಟಿಕೋನಗಳಲ್ಲಿ ವಿರೋಧಕ್ಕೆ ಗುರಿಪಡಿಸಿರುವುದು ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುತ್ತದೆ. ಈ ವಿರೋಧಿ ನೆಲೆಯ ಚಿಂತನಧಾರೆಗಳಲ್ಲಿ

ಬಲಪಂಥೀಯರು ಪ್ರಮುಖವಾಗಿ ಕಂಡುಬರುತ್ತಾರೆ. ಇವರು ತಮ್ಮ ಧರ್ಮದ ಅಸ್ತಿತ್ವದ ಉಳಿವಿಗಾಗಿ ಬುದ್ಧನ ಸಮಾನತೆಯ ತತ್ವಗಳನ್ನು ವೈದಿಕೀಕರಣಗೊಳಿಸುವ, ಇಲ್ಲವೇ ಆತನ ತತ್ವ–ಸಿದ್ಧಾಂತಗಳು ಹಿಂದುತ್ವದ ಸಾರವೆಂದು ಪ್ರತಿಪಾದನೆ ಮಾಡುವ ಮಾರ್ಗವೊಂದನ್ನು ಕಂಡುಕೊಳ್ಳುತ್ತಿದ್ದಾರೆ. ಆ ಮೂಲಕವಾಗಿ ಹಿಂದುಧರ್ಮದ ಹೆಸರಿನಲ್ಲಿ ಬ್ರಾಹ್ಮಣ ಧರ್ಮವೊಂದನ್ನು ಪ್ರಬಲಗೊಳಿಸುವ ಕಾರ್ಯತಂತ್ರಗಳು ನಡೆಯುತ್ತಿವೆ. ಬೌದ್ಧಧರ್ಮದ ಬಗೆಗಿನ ಈ ವಿರೋಧಿ ನೆಲೆಗಳಲ್ಲಿ ಕೆಲವು ವಿಚಾರಗಳು ಬುದ್ಧ ಹಾಗೂ ಬೌದ್ಧದರ್ಶನವನ್ನು ಹಿಂದುತ್ವದೊಳಗೆ ಸಮೀಕರಿಸುವ ಬಗೆಯಲ್ಲಿದ್ದರೆ, ಮತ್ತೇ ಕೆಲವು ಧಾರೆಗಳು ಬೌದ್ಧಧರ್ಮದ ಅಸ್ತಿತ್ವವನ್ನು ನಿರಾಕರಿಸುವ ಮತ್ತು ಮೂದಲಿಸುವ ನೆಲೆಯಿಂದ ಕೂಡಿವೆ. ಇಂತಹ ಬೌದ್ಧ ವಿರೋಧಿ ಚಿಂತನೆಗಳನ್ನು ಈ ಮುಂದಿನಂತೆ ಪರಿಶೀಲಿಸಬಹುದಾಗಿದೆ.

ಹಿಂದುತ್ವದ ಪ್ರತಿಪಾದಕರು ಹಾಗೂ ಧಾರ್ಮಿಕ ಚಿಂತಕರಾದ 'ಭಕ್ತಿವೇದಾಂತ ಸ್ವಾಮಿ ಪ್ರಭುಪಾದ' ಅವರು ಭಗವದ್ಗೀತೆಯ ಸಾರವನ್ನು ಎತ್ತಿಹಿಡಿಯುವ ಸಂದರ್ಭದಲ್ಲಿ ಬೌದ್ಧರ ಪ್ರಮುಖ ತತ್ವವಾದ ಆತ್ಮ ನಿರಾಕರಣೆಯನ್ನು ವಿರೋಧಿಸುವ ನೆಲೆಯಲ್ಲಿ ತಮ್ಮ ವಾದವನ್ನು ಮಂಡಿಸುತ್ತಾರೆ. "ಬೌದ್ಧರಿಗೆ ಬಹು ಸಮೀಪವಾದ ತತ್ವಶಾಸ್ತ್ರಜ್ಞರ ವರ್ಗವೊಂದು ಸದಾ ಇರುತ್ತದೆ. ಇವರು ದೇಹವನ್ನು ಬಿಟ್ಟು ಆತ್ಮಕ್ಕೆ ಪ್ರತ್ಯೇಕ ಅಸ್ತಿತ್ವವಿದೆ ಎಂದು ನಂಬುವುದಿಲ್ಲ. ಶ್ರೀಕೃಷ್ಣನು ಭಗವದ್ಗಿತೆಯನ್ನು ಉಪದೇಶಿಸಿದಾಗ ಇಂತಹ ಶಾಸ್ತ್ರಜ್ಞರು ಇದ್ದಂತೆ ತೋರುತ್ತದೆ. ಇವರನ್ನು ಲೋಕಯತಿಕರು ಮತ್ತು ವೈಭಾಷಿಕರು ಎಂದು ಕರೆಯುತ್ತಿದ್ದರು. ಜಡವಸ್ತುವಿನ ಸಂಯೋಜನೆಯು ಒಂದು ಪಕ್ವ ಸ್ಥಿತಿಯನ್ನು ಮುಟ್ಟಿದಾಗ ಜೀವ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ ಎಂದು ಇವರು ವಾದಿಸುತ್ತಾರೆ. ಇಂದಿನ ಲೌಕಿಕ ವಿಜ್ಞಾನಿಯೂ ಪ್ರಾಪಂಚಿಕ ಮನೋಧರ್ಮದ ತತ್ವಶಾಸ್ತ್ರಜ್ಞರೂ ಹೀಗೆಯೇ ಚಿಂತನೆ ಮಾಡುತ್ತಾರೆ. ಅವರ ಅಭಿಪ್ರಾಯದಲ್ಲಿ ದೇಹವು ಹಲವು ಭೌತಿಕ ಅಂಶಗಳ ಸಂಯೋಜನೆ. ಒಂದು ಘಟ್ಟದಲ್ಲಿ ಭೌತಿಕ ಮತ್ತು ರಾಸಾಯನಿಕ ಅಂಶಗಳ ಪರಸ್ಪರ ಕ್ರಿಯೆಯಿಂದಾಗಿ ಜೀವದ ಲಕ್ಷಣಗಳು ಬೆಳೆಯುತ್ತವೆ. ಮಾನವ ವಿಜ್ಞಾನಕ್ಕೆ ಈ ಸಿದ್ಧಾಂತವೇ ಆಧಾರ. ಇಂದಿನ ದಿನಗಳಲ್ಲಿ ಅಮೆರಿಕದಲ್ಲಿ ಜನಪ್ರಿಯವಾಗುತ್ತಿರುವ ಹಲವು ಹುಸಿಧರ್ಮಗಳು ಈ ಸಿದ್ಧಾಂತಕ್ಕೂ, ಸರ್ವಶೂನ್ಯವಾದ, ಭಕ್ತಿಶೂನ್ಯವಾದ ಬೌದ್ಧಪಂಥಗಳಿಗೂ ಅಂಟಿಕೊಂಡಿವೆ"[೩೧] ಎಂಬುದಾಗಿ ಇವರು ತಮ್ಮ ನಿಲುವುಗಳನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿ ಬೌದ್ಧಧರ್ಮದ ನಿಲುವುಗಳನ್ನು ವಿರೋಧಕ್ಕೆ ಗುರಿಪಡಿಸುವುದರ ಪ್ರಮುಖ ಉದ್ದೇಶವೆಂದರೆ, ತಮ್ಮ ಬ್ರಾಹ್ಮಣ ಧರ್ಮದ ಅಸ್ಮಿತೆಯನ್ನು ಕಾಯ್ದುಕೊಳ್ಳುವುದಾಗಿದೆ. ಇವರ ಚಿಂತನೆಗಳು ಆತ್ಮ ಕೇಂದ್ರಿತ ನೆಲೆಯ ಕರ್ಮ ಸಿದ್ಧಾಂತದಿಂದ ಕೂಡಿದ್ದು, ಇದಕ್ಕೆ ಬುದ್ಧನ ವಿಚಾರಗಳು ಪ್ರಬಲವಾದ ಪೆಟ್ಟು ನೀಡಿವೆ. ಈ ಕಾರಣದಿಂದಾಗಿ ದೇಹಕ್ಕಿಂತ ಆತ್ಮವೇ ಶ್ರೇಷ್ಠವೆಂಬ ನಿಲುವನ್ನು ಪ್ರತಿಪಾದಿಸಲು ಬುದ್ಧನ ತಾತ್ವಿಕ ಧೋರಣೆಗಳನ್ನು ವಿರೋಧಕ್ಕೆ ಒಳಪಡಿಸುವುದು ಕಂಡುಬರುತ್ತದೆ.

ಕನ್ನಡದ ಸಂಶೋಧಕರೂ ಸಂಸ್ಕೃತಿ ಚಿಂತಕರೂ ಆದ ಎಂ.ಚಿದಾನಂದಮೂರ್ತಿಯವರು ಬೌದ್ಧಧರ್ಮವನ್ನು ಚಾರಿತ್ರಿಕ ನೆಲೆಯಲ್ಲಿ ವಿವರಿಸುವ ಪ್ರಯತ್ನಕ್ಕೆ ಮುಂದಾಗಿರುವುದು ಕಂಡುಬರುತ್ತದೆ.

ಇವರ ಪ್ರಕಾರ “ಕರ್ನಾಟಕದಲ್ಲಿ ಬೌದ್ಧಧರ್ಮದ ಅತ್ಯಂತ ಪ್ರಾಚೀನ ಕುರುಹುಗಳೆಂದರೆ ಅಶೋಕನ ಶಾಸನಗಳು. ಅಂದರೆ ಬೌದ್ಧಧರ್ಮ ಕರ್ನಾಟಕದಲ್ಲಿ ಪ್ರಬಲವಾಗಿತ್ತು ಎನ್ನುವುದಕ್ಕಿಂತ ಮೌರ್ಯ ಸಾಮ್ರಾಜ್ಯ ಇಲ್ಲಿಯವರೆಗೆ ಹಬ್ಬಿತ್ತು ಎಂಬುದಕ್ಕೆ ಇವು ಪ್ರಬಲವಾದ ಸಾಧನಗಳು”[೩೨] ಎಂಬುದಾಗಿದೆ. ಕರ್ನಾಟಕದಲ್ಲಿ ಮೌರ್ಯ ಸಾಮ್ರಾಜ್ಯವು ತನ್ನ ನೆಲೆಯನ್ನು ಕಂಡುಕೊಂಡಿದ್ದು, ಅವರ ರಾಜಧರ್ಮವಾದ ಬೌದ್ಧಧರ್ಮದ ಬಗೆಗೆ ಕುರುಹುಗಳು ಲಭಿಸುತ್ತವೆಯೇ ಹೊರತು, ಜನಸಾಮಾನ್ಯರ ಧರ್ಮವಾಗಿ ಬೌದ್ಧಧರ್ಮವು ತನ್ನ ನೆಲೆಯನ್ನು ಕಂಡುಕೊಂಡಿಲ್ಲ ಎಂಬುದು ಇವರ ವಾದವಾಗಿದೆ. ಆದರೆ ಕರ್ನಾಟಕದ ಹಲವು ಭಾಗಗಳಲ್ಲಿ ಬೌದ್ಧ ದೈವಗಳಾದ ‘ತಾರಾ ಭಗವತಿ’, ‘ಅವಲೋಕಿತೇಶ್ವರ’, ಮಂಜುಶ್ರೀ ಕಲ್ಪ ಮುಂತಾದ ಕುರುವುಗಳು ಇಂದಿಗೂ ಕಂಡುಬರುತ್ತದೆ. ಹಾಗೆಯೇ ಬೌದ್ಧಧರ್ಮವನ್ನು ಪ್ರತಿನಿಧಿಸುವ ಸ್ಥಳನಾಮಗಳು ಕರ್ನಾಟಕದಲ್ಲಿ ಕಂಡುಬರುತ್ತವೆ. ಹಾಗೆಯೇ ಜಾನಪದ ಬದುಕಿನಲ್ಲಿ ಬುದ್ಧನ ವಿಚಾರಗಳು ಕಂಡುಬರುತ್ತಿದ್ದು, ಇದಕ್ಕೆ ಪೂರಕವೆಂಬಂತೆ ಬುದ್ಧನ ಕುರಿತಾದ ಜಾನಪದ ಸಾಹಿತ್ಯವು ಬೆಳೆದುಬಂದಿದೆ. ಆದರೆ ಇವೆಲ್ಲವನ್ನು ಮೂಲೆಗುಂಪಾಗಿಸಿ ಕರ್ನಾಟಕದಲ್ಲಿ ಬೌದ್ಧಧರ್ಮ ತನ್ನ ನೆಲೆಯನ್ನು ಕಂಡುಕೊಂಡಿರಲೇ ಇಲ್ಲ, ಬೌದ್ಧಧರ್ಮವನ್ನು ಸ್ವೀಕರಿಸಿದ ಮೌರ್ಯ ಸಾಮ್ರಾಜ್ಯವು ಮಾತ್ರ ಇಲ್ಲಿ ಆಳ್ವಿಕೆ ಮಾಡಿದೆ ಎಂಬುದು ಎಷ್ಟು ಸಮಂಜಸ ಎಂಬ ಪ್ರಶ್ನೆಯು ಎದುರಾಗುತ್ತದೆ. ಇವರ ಈ ವಿರೋಧಕ್ಕೆ ಕಾರಣವೇನು ಎಂಬುದನ್ನು ಗಮನಿಸಿದಾಗ ಕೆಲವೊಂದು ಅಂಶಗಳನ್ನು ಹೀಗೆ ಗುರುತಿಸಲಾಗುವುದು: ೧. ಇವರಿಗೆ ಈ ನಾಡಿನ ಸನಾತನ ಧರ್ಮದ ಬಗೆಗೆ ಅಭಿಮಾನವಿದೆ. ಆದರೆ ಈ ಧರ್ಮದ ಅಸಮಾನತೆಯನ್ನು ವಿರೋಧಿಸಿ ಸಮಾನತೆಯನ್ನು ಪ್ರತಿಪಾದಿಸುವ ಮೂಲಕ ಮೂಲಭೂತವಾದಿ ಹಿಂದೂಧರ್ಮಕ್ಕೆ ಪೆಟ್ಟು ನೀಡಿದ ಬುದ್ಧನ ಧರ್ಮದ ಬಗೆಗೆ ಇವರಿಗೆ ವಿರೋಧವಿರಬಹುದು. ೨. ಇವರು ಮೂಲತಃ ವೀರಶೈವ ಧರ್ಮದಿಂದ ಬಂದವರಾದ ಕಾರಣ ಈ ಧರ್ಮದ ಮೇಲೆ ಬುದ್ಧನ ವೈಚಾರಿಕ ನಿಲುವುಗಳು ಸಾಕಷ್ಟು ಪ್ರಭಾವ ಬೀರಿವೆ. ಹೀಗಾಗಿ ವೀರಶೈವ ಧರ್ಮದ ಅಸ್ತಿತ್ವವನ್ನು ಕಾಪಾಡಿಕೊಳ್ಳುವ ನೆಲೆಯಲ್ಲಿಯೂ ಕರ್ನಾಟಕದಲ್ಲಿ ಬೌದ್ಧಧರ್ಮವು ತನ್ನ ನೆಲೆಯನ್ನು ಕಂಡುಕೊಂಡಿರಲಿಲ್ಲ ಎಂಬುದಾಗಿ ತಮ್ಮ ವಾದವನ್ನು ಮಂಡಿಸುತ್ತ ಬಂದಿರಬಹುದು. ಆದ್ದರಿಂದ ಚಿದಾನಂದಮೂರ್ತಿಯವರ ಈ ಬೌದ್ಧ ವಿರೋಧಿ ನೆಲೆಗಳು ಸನಾತನ ಧರ್ಮ ಹಾಗೂ ವೀರಶೈವ ಧರ್ಮದ ಅಸ್ತಿತ್ವವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ವ್ಯಕ್ತವಾಗಿರುವುದಾಗಿ ತಿಳಿದುಬರುತ್ತದೆ.

ಚಿಂತಕರಾದ ಬನ್ನಂಜೆ ಗೋವಿಂದಾಚಾರ್ಯರು ವೈದಿಕ ನೆಲೆಯ ‘ನಿರ್ವಾಣ’ ಪರಿಕಲ್ಪನೆಯನ್ನು ಸಮರ್ಥನೆ ಮಾಡುವ ಸಲುವಾಗಿ ಬೌದ್ಧ ನೆಲೆಯಲ್ಲಿ ಕಂಡುಬರುವ ‘ಮೋಕ್ಷ’ ಪರಿಕಲ್ಪನೆಯನ್ನು ವಿರೋಧಕ್ಕೆ ಗುರಿಪಡಿಸುತ್ತಾರೆ. “ಬೌದ್ಧ ಸಿದ್ಧಾಂತದ ಮೋಕ್ಷ ಕಲ್ಪನೆಗೂ, ಅದ್ವೈತ ಸಿದ್ಧಾಂತದ ಮೋಕ್ಷ ಕಲ್ಪನೆಗೂ ತುಂಬ ಸಾಮ್ಯ ಉಂಟು. ಅದ್ವೈತದ ಮೋಕ್ಷದಲ್ಲಿ ಕಾಣ್ಕೆಯೂ ಇಲ್ಲ, ಕಾಣುವವನು ಇಲ್ಲ. ಕಂಡದ್ದೂ ಇಲ್ಲ, ಕೇಳುವವನೂ ಇಲ್ಲ, ಕೇಳಿಸಿದ್ದು ಇಲ್ಲ. ಬರಿಯ ಅಗೋಚರವಾದ ಬ್ರಹ್ಮವೊಂದೆ ಇರುತ್ತದೆ. ಬೌದ್ಧ ಸಿದ್ಧಾಂತದಲ್ಲಿ ಶೂನ್ಯತೆ ಮಾತ್ರವೆ ಇರುವಂತೆ”[೩೩] ಎಂಬುದಾಗಿ ತಿಳಿಸಿದ್ದಾರೆ. ಇಲ್ಲಿ ವೈದಿಕ ಸಿದ್ಧಾಂತದ ಮಹತ್ತನ್ನು ಎತ್ತಿಹಿಡಿಯುವ ಮೂಲಕ ವಿಷ್ಣುವನ್ನು ಸಮರ್ಥಿಸಿಕೊಳ್ಳಲು

ಹೊರಟಿರುವ ಬನ್ನಂಜೆಯವರು ವಿಷ್ಣು ಮತ್ತು ಬ್ರಹ್ಮ ಪರಿಕಲ್ಪನೆಯನ್ನು ಏಕತ್ವದ ನೆಲೆಯಲ್ಲಿ ಬಿಂಬಿಸಿದ್ದಾರೆ. ಆದರೆ ಬೌದ್ಧ ಸಿದ್ಧಾಂತಗಳನ್ನು ಅಮಾನ್ಯಗೊಳಿಸುವ ಮತ್ತು ಬುದ್ಧನ ದಾರ್ಶನಿಕತೆಯನ್ನು ವಿರೋಧಿಸುವ ಸಲುವಾಗಿ ಬೌದ್ಧರ 'ಮೋಕ್ಷ' ಪರಿಕಲ್ಪನೆಯನ್ನು ಟೀಕೆಗೆ ಗುರಿಪಡಿಸಿದ್ದಾರೆ.

ಕನ್ನಡ ಚಿಂತನ ಸಾಹಿತ್ಯ ಪರಂಪರೆಯಲ್ಲಿ ಬೌದ್ಧ ದರ್ಶನದ ಕುರಿತಾಗಿ ಸಾಕಷ್ಟು ಚಿಂತನೆಗಳು ಒಡಮೂಡಿವೆ. ಈ ಬೌದ್ಧ ಚಿಂತನೆಗಳು ಆಧುನಿಕ ಸಂದರ್ಭದಲ್ಲಿ ಮರುಜೀವ ಪಡೆದುಕೊಂಡಿರುವುದು ಪಾಶ್ಚಿಮಾತ್ಯ ಚಿಂತಕರ ಸಂಶೋಧನೆಯ ಫಲವಾಗಿಯೆ. ಭಾರತದಲ್ಲಿ ತನ್ನ ಅಸ್ತಿತ್ವ ಕಳೆದುಕೊಂಡಿದ್ದ ಬೌದ್ಧಧರ್ಮ ಹಾಗೂ ದರ್ಶನವು ಪಾಶ್ಚಿಮಾತ್ಯ ಚಿಂತನಧಾರೆಗಳಿಂದ ಪುನರುಜ್ಜೀವನ ಪಡೆದುಕೊಂಡಿತು. ಬ್ರಿಟೀಷ್ ಶಿಕ್ಷಣ ನೀತಿಯಿಂದಾಗಿ ಉನ್ನತ ಶಿಕ್ಷಣದ ಅವಕಾಶವನ್ನು ಪಡೆದುಕೊಂಡ ಅಂಬೇಡ್ಕರರು ಈ ನಾಡಿನ ಮೂಲ ಧರ್ಮವಾದ ಬೌದ್ಧಧರ್ಮವನ್ನು ಸಂಶೋಧನೆಗೆ ಒಳಪಡಿಸಿದರು. ಆ ಮೂಲಕವಾಗಿ ಸಾಮಾನ್ಯ ಜನತೆಯಿಂದ ಮರೆಮಾಚಲ್ಪಟ್ಟಿದ್ದಂತಹ ಬೌದ್ಧಧರ್ಮವನ್ನು ಸ್ವೀಕರಿಸಿ, ಬಹುಸಂಖ್ಯಾತ ತಳಸಮುದಾಯಕ್ಕೆ ಈ ಧರ್ಮದ ಮಹತ್ವವನ್ನು ಪರಿಚಯಿಸಿದರು. ಆದರೆ ಅಂಬೇಡ್ಕರರ ಈ ಮತಾಂತರವು ಪುರೋಹಿತಶಾಹಿ ಮನಸ್ಸುಗಳಿಗೆ ಸಹಿಸದ ತುತ್ತಾಗಿತ್ತು. ಆದ್ದರಿಂದ ಜಿಡ್ಡುಗಟ್ಟಿದ ವೈದಿಕ ಧರ್ಮವನ್ನು ಸಮರ್ಥಿಸಿಕೊಳ್ಳುವ ಸಲುವಾಗಿ ತಮ್ಮಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಇವುಗಳ ಅಡಿಯಲ್ಲಿ ಸಮಾನತೆಯನ್ನು ಸಾರುತ್ತ ಬಂದಿರುವ ಬೌದ್ಧಧರ್ಮದ ತತ್ವ ಹಾಗೂ ಸಿದ್ಧಾಂತಗಳನ್ನು ವಿರೋಧಿಸುವ ತಂತ್ರವೊಂದನ್ನು ಬಲಪಂಥೀಯರು ಅಳವಡಿಸಿಕೊಂಡಿದ್ದಾರೆ. ಈ ವಿರೋಧಿ ನೆಲೆಯು ವೈದಿಕಧರ್ಮದ ಸಮರ್ಥನೆಯ ಭಾಗವಾಗಿ ಮೂಡಿಬಂದಿದೆ. ದಲಿತ ಹಾಗೂ ಹಿಂದುಳಿದ ವರ್ಗಗಳು ಸಮಾನತೆಗಾಗಿ ಬಾಬಾಸಾಹೇಬರ ಮಾರ್ಗದಲ್ಲಿ ಬೌದ್ಧಧರ್ಮಕ್ಕೆ ಮತಾಂತರಗೊಳ್ಳುತ್ತಿರುವ ಸಮಕಾಲೀನ ಸಂದರ್ಭದಲ್ಲಿ ಅದನ್ನು ವಿರೋಧಿಸುವ ಬಗೆಯಲ್ಲಿಯೂ ಬಲಪಂಥೀಯರು ಈ ಬಗೆಯ ಚಿಂತನೆಗಳನ್ನು ವ್ಯಕ್ತಪಡಿಸುತ್ತ ಬಂದಿದ್ದಾರೆ.

೮. ಮತಾಂತರದ ನೆಲೆಗಳು

ಕನ್ನಡ ಚಿಂತನ ಸಾಹಿತ್ಯ ಪರಂಪರೆಯಲ್ಲಿ ಬೌದ್ಧಧರ್ಮಕ್ಕೆ ಮತಾಂತರಗೊಳ್ಳುವ ಪ್ರಕ್ರಿಯೆಯನ್ನು ಕುರಿತಾಗಿ ಪರ ಹಾಗೂ ವಿರೋಧದ ನೆಲೆಯಲ್ಲಿ ವಿಚಾರವಾದಿಗಳು ತಮ್ಮ ವಾದವನ್ನು ಮಂಡಿಸಿದ್ದಾರೆ. ಕರ್ನಾಟಕದ ಸಂದರ್ಭದಲ್ಲಿ ಮತಾಂತರದ ಪ್ರಕ್ರಿಯೆಗಳು ಹಿಂದಿನಿಂದಲೂ ಒಂದಲ್ಲ ಒಂದು ನೆಲೆಯಲ್ಲಿ ನೆಡೆದುಕೊಂಡು ಬಂದಿವೆ. ಭಾರತದ ಮೇಲೆ ದಾಳಿ ನಡೆಸಿದ ಮುಸ್ಲಿಂ ದೊರೆಗಳು ಇಲ್ಲಿನ ಸ್ಥಳೀಯ ರಾಜರುಗಳನ್ನು ಸೋಲಿಸಿ, ರಾಜನ ಅಧೀನದ ಹಿಂದೂ ಧರ್ಮಿಯರನ್ನು ತಮ್ಮ ಧರ್ಮಕ್ಕೆ ಮತಾಂತರಕ್ಕೆ ಒಳಪಡಿಸಿದ್ದಾರೆ. ಹಾಗೆಯೇ ನಂತರದಲ್ಲಿ ಭಾರತಕ್ಕೆ ವ್ಯಾಪಾರಕ್ಕೆಂದು ಬಂದ ಬ್ರಿಟೀಷರು ಕ್ರೈಸ್ತಧರ್ಮವನ್ನು ಪ್ರಚಾರ ಮಾಡುವ ಹಂಬಲದಿಂದ ದಲಿತರು ಹಾಗೂ ಹಿಂದುಳಿದ ಸಮುದಾಯಗಳನ್ನು ಮತಾಂತರಕ್ಕೆ ಒಳಪಡಿಸುತ್ತ ಬಂದಿದ್ದಾರೆ. ಕರ್ನಾಟಕದಲ್ಲಿ

ದಲಿತರು ಹೆಚ್ಚಾಗಿ ಕ್ರೈಸ್ತಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾರೆ. ಆದರೆ ಬೌದ್ಧಧರ್ಮಕ್ಕೆ ಮತಾಂತರಗೊಳ್ಳುವ ಪ್ರಕ್ರಿಯೆ ಆರಂಭವಾಗಿದ್ದು ಅಂಬೇಡ್ಕರ್ ಅವರ ಪ್ರಭಾವದಿಂದಾಗಿ. ಕರ್ನಾಟಕದಲ್ಲಿ ನಡೆದ 'ಬೂಸಾ ಸಾಹಿತ್ಯ ಪ್ರಕರಣ'ದ ತರುವಾಯ ಸಂಘಟನಾತ್ಮಕ ನೆಲೆಯಲ್ಲಿ ಮತಾಂತರಗೊಳ್ಳುವ ಪ್ರಕಿಯೆಗಳು ನಡೆಯುತ್ತ ಬಂದಿವೆ. ಕರ್ನಾಟಕದಲ್ಲಿ ಶ್ರೀ ಬಸವಲಿಂಗಪ್ಪ ಅವರ ಪ್ರಯತ್ನಗಳು, 'ಬುದ್ಧ ಬರಲಿ ನಮ್ಮೂರಿಗೆ' ಎಂಬ ಕಿರುಪುಸ್ತಕದೊಂದಿಗೆ ದಲಿತ ಸಂಘರ್ಷ ಸಮಿತಿ ನಡೆಸಿದ ಜಾಥಾ, ಹಾಗೆಯೇ ಮೈಸೂರಿನಲ್ಲಿ ನಡೆದ ಶ್ರೀನಿವಾಸ್ ಪ್ರಸಾದ್ ಅವರ ನೇತೃತ್ವದ 'ಬುದ್ಧನೆಡೆಗೆ ಮರಳಿ ಮನೆಗೆ' ಸಮಾವೇಶಗಳ ಮುಖಾಂತರವಾಗಿ ಬೌದ್ಧಧರ್ಮದತ್ತ ದಲಿತರು ಮುಖ ಮಾಡಿದರು.

ಭಾರತದ ಸಂದರ್ಭದಲ್ಲಿ ಇಲ್ಲಿನ ಅಸಮಾನತೆಯಿಂದ ನೊಂದು, ಬ್ರಿಟೀಷ್ ಶಿಕ್ಷಣ ನೀತಿಯಿಂದ ಉನ್ನತ ಶಿಕ್ಷಣ ಪಡೆದು ಜಾಗೃತರಾದ ಬಾಬಾಸಾಹೇಬರು ೧೯೫೬ ಅಕ್ಟೋಬರ್ ೧೪ ರಂದು ಭಾರತದ ಮೂಲ ಧರ್ಮವಾದ ಮತ್ತು ಅಸ್ಪೃಶ್ಯ ಜನಾಂಗವನ್ನು ಸಮಾನತೆಯ ನೆಲೆಯಲ್ಲಿ ನಡೆಸಿಕೊಂಡ ಬುದ್ಧನ ಧರ್ಮಕ್ಕೆ ಮತಾಂತರಗೊಂಡರು. ಈ ಸಂದರ್ಭದಲ್ಲಿ ಅಂಬೇಡ್ಕರರ ಲಕ್ಷಾಂತರ ಅನುಯಾಯಿಗಳು ಬೌದ್ಧಧರ್ಮಕ್ಕೆ ಮತಾಂತರಗೊಂಡರು. ಇದೊಂದು ದಲಿತರ ಮತಾಂತರ ಪ್ರಕ್ರಿಯೆಯ ಚಾರಿತ್ರಿಕ ಸಂದರ್ಭವಾಗಿದೆ. ಆದರೆ ಭಾರತದ ಆಧುನಿಕ ಸಂದರ್ಭದಲ್ಲಿ ಬೌದ್ಧಧರ್ಮಕ್ಕೆ ಮತಾಂತರಗೊಂಡವರು ಅಂಬೇಡ್ಕರರು ಮೊದಲಿಗರಲ್ಲ. ಅದಕ್ಕಿಂತ ಪೂರ್ವದಲ್ಲಿ ಭಾರತದ ದಾರ್ಶನಿಕ ಮತ್ತು ಆಧ್ಯಾತ್ಮಿಕ ಚಿಂತಕರೆಂದು ಗುರುತಿಸಿಕೊಂಡಿರುವ ಸ್ವಾಮಿ ವಿವೇಕಾನಂದರು ೧೮೮೬ ಏಪ್ರಿಲ್ ತಿಂಗಳಿನಲ್ಲಿ ಬೋಧಗಯಕ್ಕೆ ತೆರಳಿ, ಬುದ್ಧ ಧ್ಯಾನ ಮಾಡಿ, ಆತ್ಮಸಾಕ್ಷಾತ್ಕಾರವನ್ನು ಪಡೆದ ಭೂಮಿಯಲ್ಲಿಯೇ ತಾವು ಕೂಡ ಬುದ್ಧನನ್ನು ಸಾಕ್ಷಾತ್ಕರಿಸಿಕೊಂಡರು. ಅಂದರೆ ವಿವೇಕಾನಂದರು ಹಿಂದೂಧರ್ಮದಲ್ಲಿ ಪುರೋಹಿತಶಾಹಿಯು ರೂಪಿಸಿಕೊಂಡಿರುವ ಅಸಮಾನತೆಯ ವಿರುದ್ಧ ತನ್ನ ಹೋರಾಟವನ್ನು ಮುಂದುವರೆಸಿ, ಅಂಬೇಡ್ಕರರಿಗಿಂತ ಸುಮಾರು ೭೦ ವರ್ಷಗಳಷ್ಟು ಹಿಂದೆಯೇ ಬುದ್ಧನ ಧರ್ಮದತ್ತ ಮುಖ ಮಾಡಿ, ತನ್ನ ಇಬ್ಬರು ಸ್ನೇಹಿತರಾದ ಕಾಳಿ ಪ್ರಸಾದ್ ಮತ್ತು ತಾರಕನಾಥರ ಜೊತೆಗೂಡಿ ಬೌದ್ಧಧಮ್ಮ ದೀಕ್ಷೆಯನ್ನು ಪಡೆದುಕೊಂಡರು. ಇವರು ಬುದ್ಧನ ಧರ್ಮಕ್ಕೆ ಮತಾಂತರಗೊಳ್ಳುವುದಕ್ಕೆ ಪ್ರಮುಖ ಕಾರಣ ಹಿಂದೂಧರ್ಮದಲ್ಲಿನ ಮೂಲಭೂತವಾದವಾಗಿತ್ತು. ಈ ಕಾರಣದಿಂದ ಸಮಾನತೆಯನ್ನು ಸಾರಿದ ಬುದ್ಧನತ್ತ ಸಾಗಿದರು. ಬುದ್ಧನ ಧರ್ಮದತ್ತ ಮುಖಮಾಡಿದ ಮತ್ತೊಬ್ಬ ದಾರ್ಶನಿಕರೆಂದರೆ, ಧರ್ಮಾನಂದ ಕೊಸಾಂಬಿಯವರು. ಇವರು ಸಹ ಜಾಗತಿಕ ಶಾಂತಿಯನ್ನು ಬಯಸಿದ ಬುದ್ಧನ ವೈಚಾರಿಕ ಜ್ಞಾನವನ್ನು ಅರಿಯುವ ಸಲುವಾಗಿ ತನ್ನ ಸಂಸಾರವನ್ನು ಬದಿಗಿಟ್ಟು ಬೌದ್ಧ ತಾಣಗಳನ್ನು ಸುತ್ತುತ್ತಾರೆ. ಆ ಮೂಲಕವಾಗಿ ಹೊರಟ ಇವರು ಬುದ್ಧನ ನಾಡೆಂದೆ ಪ್ರಸಿದ್ಧಿಯನ್ನು ಪಡೆದಿರುವ ಬರ್ಮಾದಲ್ಲಿ ಬೌದ್ಧ ದೀಕ್ಷೆಯನ್ನು ಪಡೆದುಕೊಳ್ಳುತ್ತಾರೆ. ಇವರು ಕೂಡ ಬಾಬಾಸಾಹೇಬ ಅಂಬೇಡ್ಕರ್ ಅವರಿಗಿಂತ ಹಲವು ವರ್ಷಗಳು ಮುಂಚಿತವಾಗಿಯೇ ಬೌದ್ಧಧರ್ಮಕ್ಕೆ ಮತಾಂತರಗೊಳ್ಳುತ್ತಾರೆ. ಇವರು ಕೂಡ ಹಿಂದುಧರ್ಮದಲ್ಲಿನ ವೈದಿಕಾಚರಣೆಗಳಿಂದ ಬಿಡುಗಡೆಯನ್ನು ಬಯಸಿ ಬೌದ್ಧಧರ್ಮದಲ್ಲಿನ ಸಮಾನತೆಯ ತತ್ವಗಳತ್ತ ಮುಖ ಮಾಡುತ್ತಾರೆ.

ಆದರೆ ಇಂದು ಭಾರತದಲ್ಲಿ ಬೌದ್ಧಧರ್ಮಕ್ಕೆ ಮತಾಂತರಗೊಂಡವರಲ್ಲಿ ಪ್ರಮುಖವಾಗಿ ನಿಲ್ಲುವುದು ಬಾಬಾಸಾಹೇಬರು ಒಬ್ಬರೆ. ಪ್ರಸ್ತುತ ಅಧ್ಯಯನದಲ್ಲಿ ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧಧರ್ಮದ ಮತಾಂತರ ಪ್ರಕ್ರಿಯೆಯನ್ನು ಕುರಿತು ವ್ಯಕ್ತವಾಗಿರುವ ವಿಭಿನ್ನ ಆಯಾಮಗಳನ್ನು ಈ ಮುಂದಿನಂತೆ ನೋಡಬಹುದಾಗಿದೆ.

ಕನ್ನಡ ಚಿಂತಕರಾದ ನಟರಾಜ್ ಹುಳಿಯಾರ್ ಅವರು ಬೌದ್ಧಧರ್ಮದ ಮತಾಂತರ ಪ್ರಕ್ರಿಯೆಯನ್ನು ಅಂಬೇಡ್ಕರ್ ಅವರ ವಿಚಾರಧಾರೆಗಳ ನೆಲೆಯಲ್ಲಿ ಸಮರ್ಥಿಸಿಕೊಂಡಿದ್ದಾರೆ. "ಗೌತಮಬುದ್ಧನಿಗೆ ಜ್ಞಾನೋದಯವಾದ ಹಾಗೆಯೇ ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೂ ಒಂದು ಬಹುದೊಡ್ಡ ಜ್ಞಾನೋದಯವಾಗಿತ್ತು. ದುಃಖ, ಅವಮಾನ, ಅಧ್ಯಯನ, ಹುಡುಕಾಟ ಹಾಗೂ ಸಂಘರ್ಷಗಳಿಂದ ಹುಟ್ಟಿದ ಆ ಜ್ಞಾನೋದಯ ಭಾರತದ ಚರಿತ್ರೆಯ ದಿಕ್ಕನ್ನು ಬದಲಿಸುವಷ್ಟು ಶಕ್ತಿಯುತವಾಗಿತ್ತು. ಸುಮಾರು ಐವತ್ತು ವರ್ಷಗಳ ಕೆಳಗೆ ಅಂಬೇಡ್ಕರ್ ಅವರು ಒಂದು ತೀರ್ಮಾನಕ್ಕೆ ಬಂದಿದ್ದರು. ಅಲ್ಲಿಯವರೆಗೂ ಭಾರತದ ಎಲ್ಲ ಸುಧಾರಕರ ಹಾಗೆ ಹಿಂದೂ ಧರ್ಮವನ್ನೂ ಇಲ್ಲಿನ ಜಾತಿ ಮನಸ್ಸನ್ನೂ ಬದಲಾಯಿಸಬಹುದೇ ಎಂಬ ಚರ್ಚೆ, ವಿಮರ್ಶೆ, ಹೋರಾಟ ಹಾಗೂ ಸಂವಿಧಾನಗಳ ಮೂಲಕ ಸತತವಾಗಿ ಪ್ರಯತ್ನಿಸಿದ್ದರು. ತಮ್ಮ ಕಣ್ಣೆದುರಿಗಿರುವ ಯಾವ ಧರ್ಮದಲ್ಲಿ ದಲಿತರ ಅಸ್ಪೃಶ್ಯತೆಗೆ ಬಿಡುಗಡೆಯಿದೆಯೆಂದು ಆಳವಾಗಿ ಪರಿಶೀಲಿಸಿದ್ದರು."[೩೪] ಆದ್ದರಿಂದ ದಲಿತರು ಹಾಗೂ ಹಿಂದುಳಿದ ಸಮುದಾಯಗಳು ಅಸ್ಪೃಶ್ಯತೆಯ ಸೋಂಕಿನಿಂದ ಬಿಡುಗಡೆಯನ್ನು ಪಡೆಯಬೇಕಾದರೆ ಅಂಬೇಡ್ಕರ್ ಅವರು ಜಾಗೃತ ನೆಲೆಯಲ್ಲಿ ಕೈಗೊಂಡ ಬೌದ್ಧಧರ್ಮಕ್ಕೆ ಮತಾಂತರಗೊಳ್ಳುವುದು ಅಗತ್ಯವಾದುದು ಎಂಬುದಾಗಿ ತಮ್ಮ ವಿಚಾರವನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿ ಚಿಂತಕರು ಮೂಲಭೂತವಾದಿ ನೆಲೆಯನ್ನು ಹೊರತುಪಡಿಸಿದ ನೆಲೆಯಲ್ಲಿ ಬೌದ್ಧಧರ್ಮಕ್ಕೆ ಮತಾಂತರಗೊಳ್ಳಬೇಕೆ ಹೊರತು ಪುರೋಹಿತಶಾಹಿ ನೆಲೆಯ ಆಚರಣೆಯಲ್ಲಿ ಮತ್ತೇ ಬೌದ್ಧಧರ್ಮವನ್ನು ಸ್ವೀಕರಿಸುವುದರಿಂದ ಯಾವುದೇ ಪ್ರಯೋಜನವಿಲ್ಲ ಎಂಬ ಸೂಕ್ಷ್ಮತೆಯನ್ನು ಸಹ ತಮ್ಮ ವಿಚಾರಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಕನ್ನಡದ ವಿಚಾರವಾದಿಗಳಾದ ಎಸ್. ಚಂದ್ರಕಿರಣ್ ಅವರು ಸಮಾನತೆಯ ಸಮಾಜಕ್ಕಾಗಿ ಬುದ್ಧನ ಧರ್ಮದ ಅವಶ್ಯಕತೆಯ ಕುರಿತಾಗಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. "ಬುದ್ಧ ಬೆಳಗಿಸಿದ, ವಚನಕಾರರು ಎಣ್ಣೆ ಹಾಕಿ ಮತ್ತಷ್ಟು ಬೆಳಗಿಸಿದ ಈ ಸಮಾನತೆಯ ಹಣತೆ ಮತ್ತೊಮ್ಮೆ ೨೦ನೇ ಶತಮಾನದಲ್ಲಿ ಬೆಳಗಿದ್ದು ಬಾಬಾಸಾಹೇಬರ ಮೂಲಕ. ಅಸಮಾನತೆಯ ವೈದಿಕ ಭೂಮಿಯನ್ನು ಸಮಾನತೆಯ ಬುದ್ಧ ಭೂಮಿಯನ್ನಾಗಿ ಸಂವಿಧಾನದ ರೂಪದಲ್ಲಿ ಬೆಳಗಿದ್ದು ಈ ನೆಲದ ಸೌಭಾಗ್ಯವೇ ಸರಿ. ಇದನ್ನು ನಿರಂತರವಾಗಿ ಬೆಳಗಿಸುವ ಗುರುತರವಾದ ಜವಾಬ್ದಾರಿಯನ್ನು ಮನುಷ್ಯರಾದವರು ಹೊರಬೇಕಾಗಿದೆ"[೩೫] ಎಂಬುದಾಗಿ ವೈಚಾರಿಕ ನೆಲೆಯ ಬೌದ್ಧಧರ್ಮದ ಮತಾಂತರ ಪ್ರಕ್ರಿಯೆಯನ್ನು ಎತ್ತಿಹಿಡಿಯುತ್ತಾರೆ. ಅಂಬೇಡ್ಕರ್ ಅವರ ವಿಚಾರಗಳ ಅಡಿಯಲ್ಲಿ ಸಮಸಮಾಜದ ಆಶಯದ ನೆಲೆಗಳು ಇವರ ವಿಚಾರಗಳಲ್ಲಿ ಅಂತರ್ಗತವಾಗಿರುವುದು ಕಂಡುಬರುತ್ತದೆ.

ಸಿ.ಎಸ್. ದ್ವಾರಕಾನಾಥ್ ಅವರು ಬೌದ್ಧಧರ್ಮಕ್ಕೆ ಮತಾಂತರಗೊಳ್ಳುವ ವಿಧಾನವನ್ನು ಅಂಬೇಡ್ಕರರ ಸೈದ್ಧಾಂತಿಕ ನಿಲುವುಗಳ ಹಿನ್ನೆಲೆಯಲ್ಲಿ ಸಮರ್ಥಿಸಿಕೊಂಡಿದ್ದಾರೆ. "ಬುದ್ಧಧಮ್ಮಕ್ಕೆ ಮತಾಂತರಗೊಳ್ಳುವುದೆಂದರೆ ಮನುಷ್ಯತ್ವದ ಕಡೆಗೆ ನಾವು ಹೊರಡುತ್ತಿದ್ದೇವೆಂದು ಅರ್ಥ ಎನ್ನುತ್ತಿದ್ದ ಬಾಬಾಸಾಹೇಬರು ಅಂದು ಕೈಗೊಂಡ ನಿರ್ಣಯವನ್ನು ನಾವು ಇಂದೂ ಕೂಡ ಮುಂದುವರೆಸುವ ಅನಿವಾರ್ಯತೆಯಿದೆ. ಏಕೆಂದರೆ ಇಂದು ಪರಿಸ್ಥಿತಿಯೇನೂ ಬದಲಾಗಿಲ್ಲ. ಬದಲಾಗಿ ಇಂದು ಹಿಂದೂಧರ್ಮ ಇನ್ನಷ್ಟು ಮಿಲಿಟೆಂಟ್ ರೂಪ ತಳೆಯುತ್ತಿದೆ" ಎಂಬುದಾಗಿ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸುತ್ತಾರೆ. ಅಂದರೆ ಇಂದು ಕೂಡ ದಲಿತರು ಹಾಗೂ ಹಿಂದುಳಿದ ಸಮುದಾಯವನ್ನು ವೈದಿಕತೆಯು ತನ್ನ ಕಪಿಮುಷ್ಟಿಯಲ್ಲಿ ಇಟ್ಟುಕೊಂಡು ನಡೆಸುವ ಪ್ರಯತ್ನ ನಡೆಸುತ್ತಿದೆ. ಆದ್ದರಿಂದ ತಳಸಮುದಾಯಗಳು ಜಾಗೃತ ಪರಿಕಲ್ಪನೆಯಲ್ಲಿ ಬೌದ್ಧಧರ್ಮದ ವೈಚಾರಿಕ ನಿಲುವುಗಳನ್ನು ತಮ್ಮ ಹೋರಾಟದ ಭಾಗವಾಗಿ ಸ್ವೀಕರಿಸುವ ಅನಿವಾರ್ಯತೆಯನ್ನು ಸಮಕಾಲೀನ ಸಂದರ್ಭದ ಸನ್ನಿವೇಶಗಳಿಗೆ ಪೂರಕವಾದ ನೆಲೆಯಲ್ಲಿ ವಿಚಾರವನ್ನು ವ್ಯಕ್ತಪಡಿಸಿದ್ದಾರೆ.

ಸಾಮಾಜಿಕ ಸಮಾನತೆ ಹಾಗೂ ಆತ್ಮಗೌರವದ ನೆಲೆಯಲ್ಲಿ ಬೌದ್ಧಧರ್ಮದ ಮತಾಂತರ ನೆಲೆಯನ್ನು ಸಮರ್ಥಿಸುವ ನೆಲೆಗಟ್ಟಿನಲ್ಲಿ ಜೋಗನ್ ಶಂಕರ್ ಅವರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. "ಬೌದ್ಧಧರ್ಮದ ಸೇರ್ಪಡೆಯಿಂದ ದಲಿತರು ತಮ್ಮ ಆಚರಣೆಗಳಲ್ಲಿ ಬದಲಾವಣೆಗೊಂಡು ಪರಿಶುದ್ಧರಾಗುವುದರ ಮೂಲಕ ತಮ್ಮ ಗೌರವವನ್ನು ಹೆಚ್ಚಿಸಿಕೊಳ್ಳಬೇಕೆಂಬುದು ಅಂಬೇಡ್ಕರ್ ಅವರ ಆಶಯವಾಗಿತ್ತು. ದಲಿತರು ಗೌರವ ಪ್ರಜ್ಞೆ ಮತ್ತು ಸ್ವಾಭಿಮಾನದ ಶಕ್ತಿಯನ್ನು ಹೆಚ್ಚಿಸಿಕೊಂಡು ಆಧ್ಯಾತ್ಮಿಕವಾಗಿ ಶಕ್ತಿವಂತರಾಗಿ ಮಾಡುವಂತೆ ಬೌದ್ಧಧರ್ಮವು ಬೋಧಿಸುತ್ತದೆ."[೩೬] ಆದ್ದರಿಂದ ಅಸ್ಪೃಶ್ಯತೆಯನ್ನು ತೊಡೆದುಹಾಕಲು ಬೌದ್ಧಧರ್ಮಕ್ಕೆ ವೈಚಾರಿಕ ನೆಲೆಗಟ್ಟಿನಲ್ಲಿ ಮತಾಂತವಾಗುವುದು ಅನಿವಾರ್ಯ ಎಂಬುದಾಗಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತಾರೆ.

ಈ ಮೇಲೆ ಚರ್ಚೆಗೆ ಒಳಪಡಿಸಿದ ಕನ್ನಡದ ಚಿಂತನಧಾರೆಗಳು ಬಾಬಾಸಾಹೇಬರ ವಿಚಾರಗಳನ್ನು ಆಧಾರವಾಗಿಟ್ಟುಕೊಂಡು ಒಡಮೂಡಿವೆ. ಆ ಮೂಲಕ ವೈಚಾರಿಕ ನೆಲೆಯಲ್ಲಿ ಬೌದ್ಧಧರ್ಮದ ಮತಾಂತರ ಪ್ರಕ್ರಿಯೆಯನ್ನು ಸಮರ್ಥಿಸಿಕೊಂಡಿವೆ. ಆದರೆ ಬೌದ್ಧಧರ್ಮದ ದೀಕ್ಷೆಯನ್ನು ತೆಗೆದುಕೊಂಡ ನವಬೌದ್ಧರಿಗೆ ವೈಚಾರಿಕ ನೆಲೆಯಲ್ಲಿ ಮಾರ್ಗದರ್ಶನವನ್ನು ರೂಪಿಸುವ ವೇದಿಕೆಯ ಕೊರತೆ ಕರ್ನಾಟಕದಲ್ಲಿ ಕಂಡುಬರುತ್ತದೆ. ಆದರೆ ದಲಿತ ಸಮುದಾಯದಿಂದ ಬಂದ ದೇವನೂರ ಮಹಾದೇವ ಹಾಗೂ ಪಿ.ಮಹಾದೇವಯ್ಯನವರಂತಹ ಕೆಲವು ದಲಿತ ಚಿಂತಕರು ಬೌದ್ಧಧರ್ಮಕ್ಕೆ ಮತಾಂತರಗೊಳ್ಳುವ ದಲಿತರಿಗೆ ಕೆಲವು ಸಲಹೆ ಮತ್ತು ಸಹಕಾರದ ಕುರಿತು ತಮ್ಮ ವಿಚಾರಗಳನ್ನು ವ್ಯಕ್ತಪಡಿಸುವುದು ಕಂಡುಬರುತ್ತದೆ. ಇವರ ಚಿಂತನೆಗಳ ಪ್ರಕಾರ ದಲಿತರನ್ನು ಮತಾಂತರಗೊಳಿಸಿದರೆ ಸಾಲದು, ಮತಾಂತರಗೊಂಡವರಿಗೆ ಮುಂದೆ ತಮ್ಮ ಬದುಕನ್ನು ಸ್ವಾಭಿಮಾನದ ನೆಲೆಯಲ್ಲಿ ರೂಪಿಸಿಕೊಳ್ಳುವುದಕ್ಕೆ ಬೇಕಾದ ಯೋಜನೆಗಳ ಬಗೆಗೆ ತಮ್ಮ ವಾದವನ್ನು ಮಂಡಿಸುತ್ತಾರೆ.

ಕನ್ನಡದ ವಿಚಾರವಾದಿಗಳಲ್ಲಿ ಕೆಲವರು ಮತಾಂತರಗೊಂಡರು ಕೂಡ ಅಸ್ಪೃಶ್ಯರ ಸ್ಥಿತಿಗತಿಯು ಮಾತ್ರ ಬದಲಾಗದೆ ಇರುವ ಬಗೆಗೆ ಆತಂಕ ಮತ್ತು ನಿಸ್ಸಹಾಯಕತೆಯನ್ನು ವ್ಯಕ್ತಪಡಿಸುವುದು ಕಂಡುಬರುತ್ತದೆ. ಇಂತಹ ಚಿಂತಕರಲ್ಲಿ ಅರವಿಂದ ಮಾಲಗತ್ತಿಯವರು ಒಬ್ಬರಾಗಿದ್ದಾರೆ. ಇವರು ತಮ್ಮ 'ಸಿಲಿಕಾಲನ್ ಸಿಟಿ ಮತ್ತು ಕೋಗಿಲೆ' ಎಂಬ ಕವನ ಸಂಕಲನದಲ್ಲಿ ಬರುವ 'ಮತಾಂತರದಲ್ಲಿಯ ಮಾತುಕತೆ' ಎಂಬ ಕವನದಲ್ಲಿ ಮತಾಂತರಗೊಂಡರು ಬದಲಾಗದ ದಲಿತರ ಅಸಹಾಯಕತೆಯ ನೋವನ್ನು ಹೀಗೆ ವ್ಯಕ್ತಪಡಿಸಿದ್ದಾರೆ:

"ಕ್ರೈಸ್ತರಾದರು ಮುಸ್ಲಿಮರಾದರೋ
ಅಲ್ಹೋಗಿ ಅವರು ಮನುಜರಾಗಿ ಇಹರೋ?
ಅಲ್ಲಿಯೂ ಅವರು ದಲಿತ ಕ್ರೈಸ್ತರೋ!
ದಲಿತ ಬೌದ್ಧರೋ ದಲಿತ ಮುಸ್ಲಿಮರೋ
ದಲಿತರು ಎಲ್ಲಿ ಹೋದರೂ ಇದ್ದರೂ ದಲಿತರೆ ಸ್ವಾಮಿ!
ಯಾರಿವರಿಗೆ ಮನುಜರೆಂದು ಅಪ್ಪುವರು ಸ್ವಾಮಿ?"[೩೭]

ಎಂಬುದಾಗಿ ದಲಿತರು ಯಾವುದೇ ಧರ್ಮಕ್ಕೆ ಹೋದರು ಸಹ ಅವರನ್ನು ಪ್ರತ್ಯೇಕವಾಗಿ ನೋಡುವ ಕ್ರಮವನ್ನು ಇಲ್ಲಿ ಗುರುತಿಸಿದ್ದಾರೆ. ಇವರಿಗೆ ಅಂಬೇಡ್ಕರ್ ಸ್ವೀಕರಿಸಿದ ಬೌದ್ಧಧರ್ಮದ ಮತಾಂತರ ಪ್ರಕ್ರಿಯೆಯ ಬಗೆಗೆ ಅಸಮಾಧಾನವಿಲ್ಲ. ಆದರೆ ಎಲ್ಲಿ ಹೋದರು ಬದಲಾಗದ ದಲಿತರ ಸ್ಥಿತಿಗತಿಯ ಬಗೆಗೆ ನೋವಿದೆ.

ದಲಿತ ಚಿಂತಕರಾದ ಸಿದ್ಧಲಿಂಗಯ್ಯನವರು ಮಾರ್ಕ್ಸ್‌ವಾದಿ ಚಿಂತಕರಾಗಿದ್ದು, ಇವರು ಅಂಬೇಡ್ಕರ್ ಸ್ವೀಕರಿಸಿರುವ ಬೌದ್ಧಧರ್ಮವನ್ನು ವಿರೋಧಿಸುವ ನೆಲೆಯಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಮೂಲತಃ ಮಾರ್ಕ್ಸ್‌ವಾದಿಯಾಗಿರುವ ಇವರು 'ಧರ್ಮ' ಎನ್ನುವುದನ್ನು ಕಾರ್ಲ್‌ಮಾರ್ಕ್ಸ್ ಚಿಂತನೆಯಂತೆ 'ಅಫೀಮು' ಎಂಬ ನೆಲೆಯಲ್ಲಿ ಗ್ರಹಿಸುತ್ತಾರೆ. ಹಾಗಾಗಿ ಹಿಂದೂ ಧರ್ಮವನ್ನು ತ್ಯಜಿಸಿ ಬೌದ್ಧಧರ್ಮವನ್ನು ಸ್ವೀಕರಿಸಿದ ಅಂಬೇಡ್ಕರ್ ಅವರ ಈ ಕ್ರಮವನ್ನು ಪ್ರಶ್ನೆ ಮಾಡುವ ನೆಲೆಯಲ್ಲಿ ರಚಿಸಿರುವ ಕವಿತೆಯೊಂದು ಹೀಗಿದೆ;

"ಕಪ್ಪುಕ್ಕಿನ ಕೋಳಗಳನ್ನು
ಕಡಿದು ಎಸೆದ ವಜ್ರವೆ
ಬಂಗಾರದ ಕೋಳವೊಕ್ಕ
ಮಹಾಬೌದ್ಧ ಭಿಕ್ಷುವೆ"[೩೮]

ಎಂಬುದಾಗಿ ಈ ಕವಿತೆಯಲ್ಲಿ ಚಿಂತಕರು ಅಸಮಾನತೆಯ ಆಗರವಾಗಿರುವ ಹಿಂದೂಧರ್ಮಕ್ಕೂ ಹಾಗೂ ಬೌದ್ಧಧರ್ಮಕ್ಕೂ ವ್ಯತ್ಯಾಸಗಳು ಕಂಡುಬರುವುದಿಲ್ಲ ಎಂಬುದಾಗಿ ಗುರುತಿಸುತ್ತಾರೆ. ಈ ಹಿನ್ನೆಲೆಯಲ್ಲಿ ಬೌದ್ಧಧರ್ಮವನ್ನು ಸ್ವೀಕರಿಸಿದ ಅಂಬೇಡ್ಕರ್ ಅವರ ನಿಲುವನ್ನು ವಿರೋಧಿಸುವ

ನೆಲ್ಲಿಯಲ್ಲಿ ಈ ಕವಿತೆ ಮೂಡಿಬಂದಿದೆ. ಇಲ್ಲಿ ಜಾತಿಯ ನೆಲೆಗಟ್ಟಿನಲ್ಲಿ ತನ್ನ ಸಮುದಾಯದ ಸ್ಥಿತಿಗತಿಯನ್ನು ಕಂಡ ಬಾಬಾಸಾಹೇಬರು ಇದರಿಂದ ಹೊರಬರಲು ಬೌದ್ಧಧರ್ಮದತ್ತ ಮುನ್ನೆಡೆದರು. ಅವರ ಈ ಕ್ರಮವು ಸೈದ್ಧಾಂತಿಕ ಗ್ರಹಿಕೆಯಲ್ಲೊಂದಾಗಿತ್ತು. ಆದರೆ ಮಾರ್ಕ್ಸ್‌ವಾದಿ ನೆಲೆಯ ವರ್ಗ ಅಸಮಾನತೆಯ ಸೈದ್ಧಾಂತಿಕ ನಿಲುವುಗಳಿಂದ ಪ್ರಭಾವಿತರಾದ ಸಿದ್ಧಲಿಂಗಯ್ಯನವರಿಗೆ ಈ ಬೌದ್ಧಧರ್ಮದ ಅಪ್ಪುಗೆಯು ಕೂಡ ಮೂಲಭೂತವಾದಿ ನೆಲೆಯಲ್ಲಿ ಕಂಡುಬರುತ್ತದೆ. ಆದ ಕಾರಣ ಅಂಬೇಡ್ಕರ್ ಸ್ವೀಕರಿಸಿದ ಬೌದ್ಧಧರ್ಮಕ್ಕೆ ಇವರು ವಿರೋಧವನ್ನು ವ್ಯಕ್ತಪಡಿಸಿದ್ದಾರೆ.

ಈ ಮೇಲೆ ಚರ್ಚಿಸಿದಂತೆ ಕನ್ನಡ ಚಿಂತನ ಪರಂಪರೆಯಲ್ಲಿ ಬೌದ್ಧಧರ್ಮಕ್ಕೆ ಮತಾಂತರಗೊಳ್ಳುವ ವಿಚಾರದ ಬಗೆಗೆ ಪರ ಹಾಗೂ ವಿರೋಧಿ ನೆಲೆಯ ಚಿಂತನೆಗಳು ಕಂಡುಬರುತ್ತವೆ. ವಿಚಾರವಾದಿಗಳ ಈ ಧೋರಣೆಗಳ ಹಿಂದೆ ಕೆಲವು ಸೈದ್ಧಾಂತಿಕ ದೃಷ್ಟಿಕೋನಗಳು, ಸಂಘಟನೆ, ಹೋರಾಟಗಳ ತಾತ್ವಿಕ ಧೋರಣೆಗಳ ಪ್ರಭಾವ ಕಂಡುಬರುತ್ತದೆ. ಇವುಗಳ ಆಧಾರದಿಂದಾಗಿ ಬೌದ್ಧಧರ್ಮದ ಈ ಮತಾಂತರ ಪ್ರಕ್ರಿಯೆಯನ್ನು ಸಮರ್ಥಿಸಿಕೊಳ್ಳುವ ಮತ್ತು ವಿರೋಧಕ್ಕೆ ಗುರಿಪಡಿಸುವ ನೆಲೆಗಳು ಕನ್ನಡ ಚಿಂತನ ಸಾಹಿತ್ಯ ಪ್ರಕಾರದಲ್ಲಿ ಮೂಡಿಬಂದಿವೆ.

೯. ಆಚರಣಾತ್ಮಕ ನೆಲೆಗಳು

ಕನ್ನಡ ಚಿಂತನ ಸಾಹಿತ್ಯ ಪರಂಪರೆಯಲ್ಲಿ ಬೌದ್ಧ ದರ್ಶನವನ್ನು ಕುರಿತು ವಿಭಿನ್ನ ಧಾರೆಗಳಲ್ಲಿ ಚಿಂತನೆಗಳು ಮೂಡಿಬಂದಿವೆ. ಈ ಧಾರೆಗಳಲ್ಲಿ ಬೌದ್ಧಧರ್ಮದ ಆಚರಣ ನೆಲೆಯ ಚಿಂತನೆಗಳು ಪ್ರಮುಖವಾಗಿ ಕಂಡುಬರುತ್ತವೆ. ಕನ್ನಡದ ಚಿಂತಕರು ಈ ಧರ್ಮದ ಆಚರಣೆಗಳು ಹಾಗೂ ಅದರ ವಿಧಿ ವಿಧಾನಗಳನ್ನು ಕುರಿತು ತಮ್ಮದೆ ಆದ ವಿಚಾರಗಳನ್ನು ವ್ಯಕ್ತಪಡಿಸುತ್ತ ಬಂದಿದ್ದಾರೆ. ಇವುಗಳಲ್ಲಿ ಕೆಲವು ಧಾರೆಗಳು ಧಾರ್ಮಿಕ ಚೌಕಟ್ಟಿನ ಅಡಿಯಲ್ಲಿ ಬೌದ್ಧದರ್ಶನದ ಆಚರಣೆಗಳನ್ನು ಒಪ್ಪಿಕೊಂಡರೆ, ಮತ್ತೇ ಕೆಲವು ಧಾರೆಗಳು ದಾರ್ಶನಿಕ ನೆಲೆಗಟ್ಟಿನಲ್ಲಿ ಚಿಂತನೆಗಳನ್ನು ವ್ಯಕ್ತಪಡಿಸುತ್ತ ಬಂದಿವೆ. ಹಾಗೆಯೇ ಸಂಘ– ಸಂಸ್ಥೆ ಹಾಗೂ ಸಂಘಟನೆಗಳು ಪ್ರತ್ಯೇಕವಾದ ಆಚರಣ ಮಾರ್ಗಗಳನ್ನು ಅಳವಡಿಸಿಕೊಂಡು ಬಂದಿರುವುದು ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುತ್ತದೆ. ಜಾಗತಿಕ ಧರ್ಮವಾಗಿ ಬೆಳೆದಿರುವ ಬೌದ್ಧಧರ್ಮದ ಬಗೆಗೆ ಕನ್ನಡದ ವಿಚಾರವಾದಿಗಳು ತಳೆದಿರುವ ಧೋರಣೆಗಳನ್ನು ಈ ಮುಂದಿನಂತೆ ತಿಳಿಯಬಹುದಾಗಿದೆ.

ಇತ್ತಿಚೀನ ದಿನಗಳಲ್ಲಿ ಜರ್ಮನಿಯ ಬೌದ್ಧರ ಒಂದು ಸಂಘಟನೆಯು ಬುದ್ಧನ ಧರ್ಮದ ಪಂಚಶೀಲಗಳಲ್ಲಿ ಪ್ರಮುಖ ತತ್ವವಾಗಿರುವ 'ಅಹಿಂಸಾ' ತತ್ವವನ್ನು ಅನುಸರಿಸಲು ಬೌದ್ಧ ಅನುಯಾಯಿಗಳಿಗೆ ಕಷ್ಟವಾಗುತ್ತಿದೆ. ಆದ್ದರಿಂದ ಅದರಲ್ಲಿ ಪರಿಷ್ಕರಣೆ ಮಾಡಬೇಕು. ಆ ಮೂಲಕವಾಗಿ ಪ್ರಾಣಿ ಹಿಂಸೆಯನ್ನು ಧರ್ಮದ ಅಡಿಯಲ್ಲಿ ಮಾನ್ಯಗೊಳಿಸಬೇಕೆಂಬುದಾಗಿ ತೀರ್ಮಾನವೊಂದನ್ನು ಕೈಗೊಂಡರು. ಇದು ಜರ್ಮನ್ನರು ತಮ್ಮ ಪ್ರಾದೇಶಿಕ ಬದುಕಿಗೆ ಅನುಗುಣವಾಗಿ ಬುದ್ಧನ ಧರ್ಮವನ್ನು ಮಾರ್ಪಡಿಸಿಕೊಂಡ ಬಗೆಯಾಗಿದೆ. ಆದರೆ ಬೌದ್ಧಧರ್ಮದ ಅಡಿಯಲ್ಲಿ ಇಂತಹ ತಿದ್ದುಪಡಿಗಳನ್ನು

ಮಾಡಿಕೊಳ್ಳುವುದು ಅಸಂಗತವಾದುದೆಂದು ವಿಚಾರವಾದಿಗಳಾದ ವೈ.ಡಿ.ನಂಜುಡಪ್ಪನವರು ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೆ ಇವರು ನೀಡುವ ಸಮರ್ಥನೆ ಹೀಗಿದೆ; "ಜರ್ಮನಿಯಲ್ಲಿ ಸೇರಿದ ಬೌದ್ಧೀಯರ ಸಂಘದ ಈ ಒಂದು ನಿರ್ಣಯವು ಬುದ್ಧನ ಅಹಿಂಸಾ ತತ್ವಕ್ಕೆ ಕೊಡಲಿ ಪೆಟ್ಟು ಕೊಟ್ಟಂತಾಗಿದೆ. ಈ ಸಂಘವು ಅಹಿಂಸಾ ತತ್ವದ ಬಗ್ಗೆ ಈ ರೀತಿಯ ನಿರ್ಣಯವನ್ನು ಮಾಡಲಿ ಬಿಡಲಿ ಇದು ಪ್ರಮುಖವಾದ ವಿಷಯವಲ್ಲ. ಆದರೆ ಬುದ್ಧನ ಮೂಲ ತತ್ವೋಪದೇಶಗಳಿಗೆ ವಿಶಿಷ್ಟ ವ್ಯಾಖ್ಯಾನ ನೀಡಿ ಬದಲಾಯಿಸಲು ಬೌದ್ಧೀಯ ಸಂಘಗಳಿಗೆ ಯಾವ ಅಧಿಕಾರವೂ ಇಲ್ಲ. ಯಜ್ಞ ಯಾಗಾದಿಗಳಲ್ಲಿ ಪ್ರಾಣಿ ಹಿಂಸೆ ಮಾಡಬಾರದು, ಕೊಲ್ಲಬಾರದು ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಅವನು ಭಿಕ್ಷೆಯಾಗಿ ನೀಡಿದ ಮಾಂಸಹಾರವನ್ನು ಸೇವಿಸಬಾರದೆಂದು ಎಂದು ಎಲ್ಲೂ ಹೇಳಿಲ್ಲ. ಭಿಕ್ಷೆಯಾಗಿ ಅಪೇಕ್ಷಿಸಿದ ಮಾಂಸವನ್ನು ಸೇವಿಸಲು ಅಡ್ಡಿ ಇಲ್ಲ. ಪ್ರಾಣಿ ವಧೆಗೆ ಸನ್ಯಾಸಿಯು ಕಾರಣವಾಗುವುದಿಲ್ಲ ಎಂಬಿತ್ಯಾದಿ ವಿಶಿಷ್ಟ ವ್ಯಾಖ್ಯಾನ ಮಾಡಿಕೊಂಡಿದ್ದಾರೆ. ಪ್ರಾಣಿಗಳನ್ನು ಕೊಂದು ತಿನ್ನುವ ಬದಲು ಅದಕ್ಕಿಂತಲೂ ಶ್ರೇಷ್ಠವಾದದ್ದು ಆಹಾರ ಧಾನ್ಯ, ಹಣ್ಣುಗಳು, ಗೆಡ್ಡೆ ಗೆಣಸು ಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾನೆ. ಬುದ್ಧನ ಮೂಲತತ್ವಗಳು ಇದ್ದಂತೆಯೇ ಇರಬೇಕಾದುದು ಬೌದ್ಧ ಧರ್ಮಗ್ರಂಥಕ್ಕೆ ಶೋಭೆ ತರುವಂಥಾದ್ದು"[೩೯] ಎಂಬುದಾಗಿ ವೈ.ಡಿ.ನಂಜುಂಡಪ್ಪನವರು ತಮ್ಮ ವಾದವನ್ನು ಮಂಡಿಸುತ್ತಾರೆ. ಬೌದ್ಧಧರ್ಮವು ತನ್ನ ದಾರ್ಶನಿಕತೆಯಿಂದಾಗಿ ಜಾಗತಿಕ ಧರ್ಮವಾಗಿ ಬೆಳೆದು ಪ್ರಪಂಚದ ನಾನಾ ಭಾಗದಲ್ಲಿ ಅಲ್ಲಿನ ಪ್ರಾದೇಶಿಕತೆ ಹಾಗೂ ಜನಜೀವನಕ್ಕೆ ಸ್ಪಂದಿಸುತ್ತ ಬಂದಿದೆ. ಆದರೆ ನಮ್ಮ ನಾಡಿನಲ್ಲಿ ಜನ್ಮತಳೆದು ಪಂಚಶೀಲ ತತ್ವಗಳ ಮೂಲಕವೇ ಜನತೆಯ ಜೀವನದಲ್ಲಿ ಗಣನೀಯವಾದ ಬದಲಾವಣೆಯನ್ನು ತಂದಂತಹ ಬೌದ್ಧಧರ್ಮದಲ್ಲಿ ಮಾರ್ಪಾಡುಗಳನ್ನು ಮಾಡಲು ಹೊರಟಿರುವ ಪಾಶ್ಚಿಮಾತ್ಯ ಬೌದ್ಧ ಅನುಯಾಯಿಗಳ ಧೋರಣೆಯನ್ನು ಕುರಿತು ಲೇಖಕರು ವಿರೋಧವನ್ನು ವ್ಯಕ್ತಪಡಿಸುತ್ತಿದ್ದಾರೆ. ಇದಕ್ಕೆ ಕಾರಣವೆಂದರೆ, ಬೌದ್ಧಧರ್ಮವೆಂದರೆ ಪಂಚಶೀಲ ತತ್ವಗಳೇ ಪ್ರಧಾನ ನೆಲೆಯಲ್ಲಿ ಗೋಚರವಾಗುತ್ತವೆ. ಇಂತಹ ಪಂಚಶೀಲ ತತ್ವಗಳಿಗೆ ಧಕ್ಕೆಯಾದರೆ ಅದು ಬುದ್ಧನಿಗೆ ಮಾಡಿದ ಅಪಚಾರವೆಂಬ ಭಾವನೆ ಕನ್ನಡದ ಈ ವಿಚಾರವಾದಿಗಳಲ್ಲಿದೆ. ಮೂರ್ತಿಪೂಜೆ, ಆರಾಧನೆಯನ್ನು ವಿರೋಧಿಸಿದ ಬುದ್ಧನ ದರ್ಶನವು ಪುರೋಹಿತಶಾಹಿ ಮಾದರಿಯನ್ನು ಪಡೆದುಕೊಂಡು ತನ್ನ ಮೂಲ ಆಶಯಗಳಿಂದ ಸಂಪೂರ್ಣವಾಗಿ ದೂರವಾಗಿದೆ. ಆದರೆ ಇದನ್ನು ವಿರೋಧಿಸದೆ ಸ್ವೀಕರಿಸಿರುವ ಲೇಖಕರು ಪಾಶ್ಚಿಮಾತ್ಯರು ತಮ್ಮ ಆಹಾರ ಸಂಸ್ಕೃತಿಗೆ ಪೂರಕವಾದ ನೆಲೆಯಲ್ಲಿ ಧರ್ಮದ ಆಶಯಗಳನ್ನು ಬದಲಾಯಿಸುವುದರ ಬಗೆಗೆ ವಿರೋಧವನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿ ಲೇಖಕರಿಗೆ ಬೌದ್ಧಧರ್ಮದ ವಿಚಾರಗಳಿಗಿಂತ ಅದರ ಆಚಾರ ಮುಖ್ಯವಾಗಿ ಕಂಡುಬರುತ್ತದೆ. ಆದರೆ ಪಾಶ್ಚಿಮಾತ್ಯರು ಆಚಾರಕ್ಕಿಂತ ಬುದ್ಧನ ವಿಚಾರಗಳಿಗೆ ಮಹತ್ವ ನೀಡುತ್ತಾರೆ. ಈ ಕಾರಣದಿಂದಾಗಿ ಬುದ್ಧನ ಪಂಚಶೀಲಗಳಲ್ಲೊಂದಾದ 'ಅಹಿಂಸೆ' ಎಂಬ ಆಚರಣೆಯನ್ನು ಅನಿವಾರ್ಯವಾಗಿ ಮೀರುವ ಪ್ರಸಂಗವು ಎದುರಾದಾಗ ಈ ತತ್ವವನ್ನು ಬದಲಾಯಿಸಿಕೊಂಡು ಮುನ್ನಡೆಯುತ್ತಿದ್ದಾರೆ. ಆದರೆ ಭಾರತೀಯರು ಮೂಲ ಸ್ವರೂಪವು ಆಚರಣೆಯ ಭಾಗವಾಗಿಯೇ ಉಳಿಯಬೇಕೆಂಬುದಾಗಿ ಆಶಿಸುತ್ತಾರೆ.

ಹೀಗಾಗಿ ಕನ್ನಡದ ಕೆಲವು ಧಾರೆಗಳು ಬುದ್ಧನ ದಾರ್ಶನಿಕ ನೆಲೆಗಿಂತ ಧಾರ್ಮಿಕ ನೆಲೆಯ ಆಚಾರಗಳಿಗೆ ಹೆಚ್ಚು ಮಹತ್ವ ನೀಡುವುದು ಕಂಡುಬರುತ್ತದೆ.

ಕರ್ನಾಟಕದಲ್ಲಿ ಅಂಬೇಡ್ಕರ್ ಅವರ ವಿಚಾರಗಳಿಂದ ಪ್ರಭಾವಿತವಾದ ಕೆಲವು ಸಂಘಟನೆ ಹಾಗೂ ಹೋರಾಟಗಳ ಅಡಿಯಲ್ಲಿ ಮತಾಂತರಗೊಳ್ಳುವ ಕ್ರಿಯೆಯು ಆಚರಣೆಯ ಭಾಗವಾಗಿಯೇ ಮೂಡಿಬಂದಿವೆ. ಇಲ್ಲಿ ಮತಾಂತರಗೊಳ್ಳುವವರು ಹೆಚ್ಚಾಗಿ ದಲಿತ ಸಮುದಾಯದ ಅಸ್ಪೃಶ್ಯರೆ ಹೆಚ್ಚಾಗಿ ಕಂಡುಬರುತ್ತಾರೆ. ಇವರು ತಮ್ಮ ಮೂಲ ದೈವಾರಾಧನ ಪದ್ಧತಿಯನ್ನು ಇಲ್ಲಿಯೂ ಮುಂದುವರೆಸುವುದು ಕಂಡುಬರುತ್ತದೆ.

ಹೀಗೆ ಕನ್ನಡ ಚಿಂತನ ಪರಂಪರೆಯಲ್ಲಿ ಬೌದ್ಧ ದರ್ಶನದ ಆಯಾಮಗಳು ವಿಭಿನ್ನ ನೆಲೆಗಳಲ್ಲಿ ಮೂಡಿಬಂದಿವೆ. ಕನ್ನಡದ ಈ ವಿಚಾರವಾದಿಗಳ ವೈಚಾರಿಕ ನಿಲುವುಗಳ ಹಿಂದೆ ಹಲವಾರು ಭಾರತೀಯ ಹಾಗೂ ಪಾಶ್ಚಿಮಾತ್ಯ ದಾರ್ಶನಿಕರ ವಿಚಾರಧಾರೆಗಳ ಪ್ರಭಾವವಿದೆ. ಹಾಗೆಯೇ ಹಲವಾರು ಸಂಘಟನೆ ಹಾಗೂ ಹೋರಾಟಗಳ ತಾತ್ವಿಕ ಆಯಾಮಗಳು ಸಹ ಈ ಚಿಂತನೆಗಳಿಗೆ ಪ್ರಚೋದಕ ಶಕ್ತಿಯಾಗಿ ಕಾರ್ಯಪ್ರವೃತ್ತವಾಗಿರುವುದು ಕಂಡುಬರುತ್ತದೆ. ಈ ಎಲ್ಲಾ ಪ್ರಭಾವಗಳಿಂದ ಪ್ರೇರಣೆಗೊಂಡ ಕನ್ನಡ ಚಿಂತಕ ವರ್ಗವು ಸಮಕಾಲೀನ ಸಮಾಜದ ಆಗು ಹೋಗುಗಳಿಗೆ ಪೂರಕವಾದ ನೆಲೆಯಲ್ಲಿ ಬೌದ್ಧ ದರ್ಶನದ ಕುರಿತಾಗಿ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸುತ್ತ ಬಂದಿರುವುದನ್ನು ಗಮನಿಸಬಹುದಾಗಿದೆ.

ಕೊನೆ ಟಿಪ್ಪಣಿಗಳು

೧. ಪಂಡಿತ ತಾರಾನಾಥ, ಧರ್ಮಸಂಭವ, ಪು-೧೯

೨. ಚ.ನ.ಶಂಕರ್‌ರಾವ್, ಸಮಾಜಶಾಸ್ತ್ರ, ಪು-೫೮

೩. ಮ.ನ.ಜವರಯ್ಯ, ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ, ಪು-೨೬೪, ೨೬೫

೪. ಅದೇ, ಪು-೩೩೫, ೩೩೬

೫. ಈ. ಎಲೋಶಿಯಸ್, ತಮಿಳು ಬೌದ್ಧ ದಲಿತ ಹೋರಾಟಗಾರ ಅಯೋತಿದಾಸ್, ಪು-೨೩

೬. ಧರ್ಮಾನಂದ ಕೊಸಾಂಬಿ, ನಿವೇದನೆ, ಪು-೪೬

೭. ಸಿ.ಕೆ.ಮಹೇಶ್, ದಲಿತ ಚರಿತೆ ಮತ್ತು ಬುದ್ಧ ಧಮ್ಮ, ಪು-೧೩

೮. ಅದೇ, ಪು-೦೮

೯. ಜಿ. ಭಾಸ್ಕರ ಮಯ್ಯ, ಋಗ್ವೇದ ಮತ್ತು ಜನ ಸಂಸ್ಕೃತಿ-೧, ಪು-೫೫

೧೦. ಎಂ.ಎಲ್. ರಾಯಮಾನೆ, ಮಹಾಪುರುಷ ಬುದ್ಧನ ಧರ್ಮೋಪದೇಶಗಳು, ಪು-vi

೧೧. ಮ.ನ. ಜವರಯ್ಯ, ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ, ಪು-೩೪೦, ೩೪೧

೧೨. ದೇವನೂರ ಮಹಾದೇವ, ಎದೆಗೆ ಬಿದ್ದ ಅಕ್ಷರ, ಪು-೨೫

೧೩. ಬರಗೂರು ರಾಮಚಂದ್ರಪ್ಪ, ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ, ಪು–೫೫೬

೧೪. ಮೂಡ್ನಾಕೂಡು ಚಿನ್ನಸ್ವಾಮಿ (ಸಂ), ಮರಳಿ ಮನೆಗೆ, ಪು–೧೯೬

೧೫. ಅರವಿಂದ ಮಾಲಗತ್ತಿ, ಭಗವದ್ಗೀತೆಗೆ ನಮಸ್ಕಾರ, ಪು–೧೬೫, ೧೬೬

೧೬. ಕೆ.ಎಸ್. ಭಗವಾನ್, ಶಂಕರಾಚಾರ್ಯ ಮತ್ತು ಪ್ರತಿಗಾಮಿತನ, ಪು–೫೫

೧೭. ಡಿ.ಎಸ್. ನಾಗಭೂಷಣ (ಸಂ), ಹೊಸ ಮನುಷ್ಯ, ಪು–೧೧

೧೮. ಅದೇ, ಪು–೧೬

೧೯. ವಿವೇಕಾನಂದರ ಪತ್ರಮಾಲೆ, ಶ್ರೀರಾಮಕೃಷ್ಣ ಮಿಷನ್, ಪು–೨೧

೨೦. ಓಶೋ, ಶೂನ್ಯನಾವೆ, ಪು–೧೯೩

೨೧. ಧರ್ಮಸಂಭವ, ಪು–೭೯, ೮೦

೨೨. ಸಿ.ಪಿ. ಕೃಷ್ಣಕುಮಾರ್, ಆಯ್ದ ವಿಮರ್ಶ ಪ್ರಬಂಧ, ಪು–೧೪೩

೨೩. ಮಹಾದೇವಿ ಆರ್. ಹಿರೇಮಠ, ಬಸವಣ್ಣನ ವಚನಗಳಲ್ಲಿ ಮಾನವತಾವಾದ, ಪು–೧೪೭

೨೪. ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ, ೫೫೭

೨೫. ಎದೆಗೆ ಬಿದ್ದ ಅಕ್ಷರ, ಪು–೨೫

೨೬. ರಂ.ಶಾ. ಅವೈದಿಕತೆ ಮತ್ತು ಕನ್ನಡ ಸಾಹಿತ್ಯ, ಪು–೮೨

೨೭. ಅದೇ, ಪು–೮೧

೨೮. ಅದೇ, ಪು–೮೨

೨೯. ಮೂಡ್ನಾಕೂಡು ಚಿನ್ನಸ್ವಾಮಿ, ಒಂದು ಕೊಡ ಹಾಲಿನ ಸಮರ, ಪು–೧೭

೩೦. ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ವಿಚಾರ, ಪು–೧೬೬

೩೧. ಎ.ಸಿ. ಭಕ್ತಿವೇದಾಂತ ಸ್ವಾಮಿ ಪ್ರಭುಪಾದ, ಭಗವದ್ಗೀತಾ, ಪು–೧೦೧

೩೨. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು–೧೧೫

೩೩. ಬನ್ನಂಜೆ ಗೋವಿಂದಾಚಾರ್ಯ, ಭಾರತೀಯ ತತ್ವಶಾಸ್ತ್ರದಲ್ಲಿ ನಿರ್ವಾಣ ಕಲ್ಪನೆ, ಪು–೮೪೬

೩೪. ಮರಳಿ ಮನೆಗೆ, ಪು–೧೩೩

೩೫. ಅದೇ, ಪು–೧೪೦

೩೬. ಅದೇ, ಪು–೧೫೬

೩೭. ಶಿವಕುಮಾರ, ಅಂಬೇಡ್ಕರ್‌ವಾದ ಮತ್ತು ದಲಿತ ಸಾಹಿತ್ಯ, ಪು–೧೦೮

೩೮. ಸಿದ್ಧಲಿಂಗಯ್ಯ, ಮೆರವಣಿಗೆ, ಪು–೭೯

* * *

ಅಧ್ಯಾಯ: ಏಳು

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನದ ರಾಜಕೀಯ ಆಯಾಮಗಳು

೧. ಜಾತಿ ರಾಜಕಾರಣ

೨. ಧಾರ್ಮಿಕ ರಾಜಕಾರಣ

ಅಧ್ಯಾಯ : ಏಳು

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನದ ರಾಜಕೀಯ ಆಯಾಮಗಳು

ಕನ್ನಡ ಚಿಂತನ ಸಾಹಿತ್ಯವು ಹಲವಾರು ದಾರ್ಶನಿಕ ಪಂಥ, ತತ್ವ ಸಿದ್ಧಾಂತ, ವಾದಗಳನ್ನು ಆಧಾರವಾಗಿಟ್ಟುಕೊಂಡು ಬೆಳೆದುಬಂದಿದೆ. ಹೀಗೆ ಬೆಳೆದು ಬಂದಿರುವ ಚಿಂತನ ಸಾಹಿತ್ಯದಲ್ಲಿ ಸಮಾಜದ ವಿಭಿನ್ನ ನೆಲೆಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ನಡೆದಿವೆ. ಅವುಗಳಲ್ಲಿ ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನ ಹಾಗೂ ಧರ್ಮವನ್ನು ಕೇಂದ್ರವಾಗಿಟ್ಟುಕೊಂಡು ಪ್ರಕಟವಾಗಿರುವ ಚಿಂತನೆಗಳ ರಾಜಕೀಯ ಆಯಾಮವನ್ನು ಅಧ್ಯಯನಕ್ಕೆ ಒಳಪಡಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನ ಹಾಗೂ ಧರ್ಮವನ್ನು ಕೇಂದ್ರವಾಗಿಟ್ಟುಕೊಂಡು ವಿಭಿನ್ನ ನೆಲೆಗಟ್ಟಿನ ತಾತ್ವಿಕ ಧೋರಣೆ ಹಾಗೂ ಲೋಕದೃಷ್ಟಿಗಳು ಮೂಡಿಬಂದಿವೆ. ಇವುಗಳಲ್ಲಿ ರಾಜಕೀಯ ನೆಲೆಗಟ್ಟಿನಲ್ಲಿ ವ್ಯಕ್ತವಾಗಿರುವ ಕೆಲವು ಬೌದ್ಧ ಚಿಂತನೆಗಳು ಸನಾತನ ಹಿಂದೂಧರ್ಮದ ವಿರುದ್ಧ ಹೋರಾಟ ಮಾಡುವ ಮೂಲಕ ತಮ್ಮ ಅಸ್ಮಿತೆಯ ಹುಡುಕಾಟಕ್ಕಾಗಿ ಬೌದ್ಧ ದರ್ಶನದತ್ತ ಆಕರ್ಷಿತವಾಗಿವೆ. ಬೌದ್ಧ ದರ್ಶನವನ್ನು ಪ್ರಮುಖ ಅಸ್ತ್ರವಾಗಿಟ್ಟುಕೊಂಡ ಬಹುತೇಕ ಪ್ರಗತಿಪರ ಧಾರೆಗಳಿಗೆ ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳ ನೇರ ಪ್ರಭಾವವಿರುವುದು ಕಂಡುಬರುತ್ತದೆ. ಹಾಗೆಯೇ ಅಂಬೇಡ್ಕರ್ ವಿಚಾರಗಳಿಂದ ಪ್ರಭಾವಿತರಾಗಿರುವ ತಳಸಮುದಾಯಗಳು ಬ್ರಾಹ್ಮಣವಾದಿ ಹಿಂದೂಧರ್ಮವನ್ನು ತೊರೆದು ಬೌದ್ಧಧರ್ಮದತ್ತ ಹೊರಳುತ್ತಿರುವ ಸಮಕಾಲೀನ ಸಂದರ್ಭದಲ್ಲಿ, ವೈದಿಕ ಧಾರೆಗಳು ಬೌದ್ಧ ದರ್ಶನವನ್ನು ಹಿಂದುತ್ವದೊಂದಿಗೆ ಬೆಸೆಯುವ ರಾಜಕೀಯ ತಂತ್ರಗಾರಿಕೆಗೂ ಮುಂದಾಗಿರುವ ಚಿಂತನೆಗಳು ಕಂಡುಬರುತ್ತವೆ. ಈ ಎಲ್ಲ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಪ್ರಸ್ತುತ ಅಧ್ಯಯನದಲ್ಲಿ ಬೌದ್ಧ ದರ್ಶನದ ರಾಜಕೀಯ ಆಯಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು.

೧. ಜಾತಿ ರಾಜಕಾರಣ

ಭಾರತೀಯ ಸಂಸ್ಕೃತಿಯಲ್ಲಿ ಬೌದ್ಧತ್ವದ ಪ್ರವಾಹವು ವಿವಿಧ ಸ್ವರೂಪದಲ್ಲಿ ಸಮಾಜಮುಖಿಯಾಗಿ ಹರಿದುಕೊಂಡು ಬಂದಿದೆ. ಕ್ರಿಸ್ತಪೂರ್ವ ಆರನೇ ಶತಮಾನದಿಂದ ಸಮಕಾಲೀನ ಸಂದರ್ಭದ ಸಮಾಜದವರೆಗೆ ಹಲವಾರು ಕ್ಷೇತ್ರಗಳ ಪ್ರಗತಿಯ ಹಿಂದೆ ಬುದ್ಧನ ಸಾಮಾಜಿಕ ಮೌಲ್ಯಗಳು

ಅಂತರ್ಗತವಾಗಿವೆ. ಈ ಬೌದ್ಧತ್ವದ ಮೌಲ್ಯಗಳು ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿಯಾದರೂ ಸಮಾಜದಲ್ಲಿ ತಮ್ಮ ಅಸ್ತಿತ್ವವನ್ನು ಪಡೆದುಕೊಂಡಿವೆ. ಸಮಾಜದಲ್ಲಿ ಜೀವವಿರೋಧಿ ಕೃತ್ಯಗಳು ಅತಿಯನ್ನು ಮುಟ್ಟಿದಾಗ ಬುದ್ಧತ್ವದ ಸೆಲೆಯಲ್ಲಿ ಚಳವಳಿ ಮತ್ತು ಹೋರಾಟಗಳು ಮುಂದುವರೆದು, ಸಮಸಮಾಜಕ್ಕಾಗಿ ಶ್ರಮಿಸಿರುವ ನಿದರ್ಶನಗಳಿವೆ. ಬಾಬಾಸಾಹೇಬ್ ಅಂಬೇಡ್ಕರ್ ಕೂಡ ಈ ಬೌದ್ಧತ್ವದ ಹಾದಿಯಲ್ಲಿ ದಮನಿತ ಸಮುದಾಯಗಳ ವಿಮೋಚನೆಗಾಗಿ ಶ್ರಮಿಸಿದರು. ದಲಿತರು ಹಾಗೂ ದಮನಿತ ಸಮುದಾಯಗಳು ವೈದಿಕ ರಾಜಕಾರಣದಿಂದ ಬಿಡುಗಡೆಗೊಳ್ಳುವ ನೆಲೆಯಲ್ಲಿ ದಲಿತರಿಗೊಂದು ರಾಜಕೀಯ ಅಸ್ತಿತ್ವಕ್ಕಾಗಿ ಶ್ರಮಿಸಿದರು. "೨೦ನೇ ಶತಮಾನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಬೌದ್ಧತ್ವದತ್ತ ನಿಧಾನವಾಗಿ ಹರಿಯುತ್ತಾ ಆಧುನಿಕ ಧರ್ಮಿಯ ರಾಜಕಾರಣ, ಅಧಿಕಾರ ರಾಜಕಾರಣ ಮತ್ತು ಬಂಡವಾಳಶಾಹಿ ಮನೋಭಾವನೆ ಉಂಟು ಮಾಡುವ ವಿಕ್ಷಿಪ್ತಗಳಿಗೆ ಅತ್ಯಂತ ಪ್ರಬಲವಾಗಿ, ಬೌದ್ಧ ತಾತ್ವಿಕತೆಯನ್ನು ಮಂಡಿಸಿದರು, ಅದನ್ನು ಸ್ಥಾಪಿಸಬೇಕೆಂಬ ಹಠದಿಂದ, ಅದನ್ನು ಧರ್ಮದ ರೂಪದಲ್ಲಿ ಆಚರಣೆಗೆ ತಂದು ಆಲಿಂಗಿಸಿಕೊಂಡಿದ್ದು ಕೇವಲ ಆಕಸ್ಮಿಕವಾದ ಸಂಗತಿಯಾಗಿರಲಿಲ್ಲ ಎಂದು ಹೇಳುವುದಕ್ಕೆ ಅಂಬೇಡ್ಕರ್, ಕಬೀರನ ಅಭಂಗಗಳ ಜೊತೆಯಲ್ಲಿ ಬೆಳೆದವರು. ಅನುಭಾವಿ ಪಂಥದ ಕಬೀರ ಅದರ ಸತ್ವವನ್ನು ಮೈಗೂಡಿಸಿಕೊಂಡಿದ್ದ. ಕಾಲದ ಪದರುಗಳಲ್ಲಿ ಪದೇ ಪದೇ ಪುನರ್ರಚನೆಯಾಗುತ್ತಿದ್ದ ಬುದ್ಧ ಪ್ರತಿಪಾದಿಸಿದ ಬದುಕಿನ ಕ್ರಮವೊಂದನ್ನು, ಅಂಬೇಡ್ಕರ್ ಹೊಸ ಭಾಷ್ಯದೊಂದಿಗೆ ಪುನರ್‌ಸ್ಥಾಪಿಸಿದರು. ಇದು ಆಕಸ್ಮಿಕವಾದ, ಅನಿವಾರ್ಯವಾದ ಆಯ್ಕೆಗಿಂತ ಹೆಚ್ಚಾಗಿ ತಳಸ್ತರದ ದಾರ್ಶನಿಕ ಪ್ರಜ್ಞೆಯುಳ್ಳ ನೇತಾರನ ಅಧಿಕೃತವಾದ ಹಕ್ಕುದಾರಿಕೆಯನ್ನು ತನ್ನದಾಗಿಸಿಕೊಂಡ ಅತ್ಯಂತ ಸಹಜವಾದ ಕ್ರಿಯೆಯಾಗಿತ್ತು. ಆದ್ದರಿಂದ, ಇದು ಕಳ್ಳುಬಳ್ಳಿಯ ಸಂಬಂಧವನ್ನು ಅಂತಃಕರಣದಿಂದ ಅಪ್ಪಿಕೊಂಡ ಅಪ್ಯಾಯತೆಯಷ್ಟೆ ಅರ್ಥಪೂರ್ಣವಾದುದು."[೧] ಅಂಬೇಡ್ಕರ್ ವಿಚಾರಧಾರೆಗಳಿಂದ ಪ್ರಭಾವಿತವಾದ ದಲಿತ ಬುದ್ಧಿಜೀವಿಗಳ ಬೌದ್ಧಧರ್ಮವನ್ನು ಕೇಂದ್ರವಾಗಿಟ್ಟುಕೊಂಡು ಸಂಘಟನೆ ಮತ್ತು ಹೋರಾಟದ ನೆಲೆಗಳನ್ನು ರೂಪಿಸಿಕೊಂಡು ರಾಜಕೀಯ ಹಕ್ಕುಗಳನ್ನು ಪಡೆಯುತ್ತ ಮುನ್ನೆಡೆಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ದಲಿತರಲ್ಲಿಯೇ ಜಾತಿ ಜಾತಿಗಳ ನಡುವೆ ಬಿರುಕು ಸೃಷ್ಟಿಯಾಗಿದ್ದು, ಒಂದು ಜಾತಿಯ ನೆಲೆಯೊಳಗೆ ಬೌದ್ಧಧರ್ಮವು ಸ್ಥಾಪಿತಗೊಳ್ಳುತ್ತಿರುವುದರಿಂದ, ದಲಿತರಲ್ಲಿ ಉಳಿದ ಜಾತಿಗಳು ಬುದ್ಧನಿಂದ ದೂರ ಸರಿಯುವ ಕ್ರಮವೊಂದು ಕಂಡುಬರುತ್ತದೆ. ಇಂತಹ ಸಂದರ್ಭದಲ್ಲಿ ದಲಿತರಲ್ಲಿಯೇ ಒಲಗೈ ಮತ್ತು ಎಡಗೈ ಧಾರೆಗಳಲ್ಲಿ ಪರಸ್ಪರ ವಿರೋಧಿ ಬಣಗಳನ್ನು ಸೃಷ್ಟಿಯಾಗಿವೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಮೂಡಿಬಂದಿರುವ ಬೌದ್ಧ ಚಿಂತನಧಾರೆಗಳಲ್ಲಿ ಜಾತಿ ಮತ್ತು ಧರ್ಮಕೇಂದ್ರಿತ ಧಾರೆಗಳು ಪ್ರಮುಖವಾಗಿ ಕಂಡುಬರುತ್ತವೆ. ಈ ಧಾರೆಗಳು ಅತಿ ಸೂಕ್ಷ್ಮವಾದ ನೆಲೆಯಲ್ಲಿ ತಮ್ಮ ವಾದವನ್ನು ಮುಂದುವರೆಸಿಕೊಂಡು ಬಂದಿವೆ. ಪ್ರಗತಿಪರ ಚಿಂತನಧಾರೆಗಳು ತಮ್ಮ ಸುತ್ತಮುತ್ತಲಿನ ಸಮಾಜದಲ್ಲಿ ಕಂಡುಬರುವ ಅಸಮಾನತೆಗೆ ಪ್ರತಿಕ್ರಿಯಿಸುತ್ತ ಬಂದಿವೆ. ಈ ಧಾರೆಗಳು ತಮ್ಮ ಎದುರಾಳಿ ಎಂದು ಗುರುತಿಸಿಕೊಂಡಿರುವ ವ್ಯಕ್ತಿ, ಜಾತಿ, ಧರ್ಮಗಳಲ್ಲಿ ಮಾತ್ರ ತಪ್ಪುಗಳನ್ನು

ಗುರುತಿಸದೆ, ತಮ್ಮಲ್ಲಿಯೇ ಅಂತರ್ಗತವಾಗಿರುವ ದೋಷಗಳನ್ನು ವಿಮರ್ಶೆಗೊಳಪಡಿಸುವ ನೆಲೆಯಲ್ಲಿ ಆತ್ಮಾವಲೋಕನಕ್ಕೆ ಮುಂದಾಗಿವೆ. ಚಿಂತನೆಗಳನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಇಂತಹ ಹಲವು ಧಾರೆಗಳು ಕನ್ನಡ ಚಿಂತನ ಸಾಹಿತ್ಯದಲ್ಲಿದ್ದು, ಅವುಗಳನ್ನು ಈ ಮುಂದಿನಂತೆ ಅಧ್ಯಯನಕ್ಕೆ ಒಳಪಡಿಸಲಾಗುವುದು.

ಕರ್ನಾಟಕದಲ್ಲಿ ಎಪ್ಪತ್ತರ ದಶಕದ ತರುವಾಯ ದಲಿತರು ಜಾಗೃತ ನೆಲೆಯಲ್ಲಿ ಬೌದ್ಧಧರ್ಮದತ್ತ ಮುಖಮಾಡಿದರು. 'ಮರಳಿ ಮನೆಗೆ' ಎಂಬ ಧ್ಯೇಯದೊಂದಿಗೆ ಆರಂಭಗೊಂಡ ಈ ಚಳವಳಿಗೆ ಬಾಬಾಸಾಹೇಬ ಅಂಬೇಡ್ಕರ್ ಅವರ ನೇರ ಪ್ರಭಾವವಿದೆ. ಕನ್ನಡದ 'ಬೂಸಾ ಸಾಹಿತ್ಯ ಪ್ರಕರಣ'ವು ದಲಿತ ವರ್ಗದಲ್ಲಿ ಜಾಗೃತ ಮನಸ್ಥಿತಿಯೊಂದನ್ನು ನಿರ್ಮಿಸಿತು. ಈ ಪ್ರಕರಣವು ರಾಜಕೀಯ ನೆಲೆಗಟ್ಟಿನಿಂದ ಆರಂಭಗೊಂಡರು ಕೂಡ, ದಲಿತರಲ್ಲಿ ಸಾಮಾಜಿಕ ಅರಿವು ಮೂಡಿಸಿತು. ಈ ಪ್ರಕರಣದ ತರುವಾಯ ಬಾಬಾಸಾಹೇಬ ಅಂಬೇಡ್ಕರ್ ಅವರ ಚಿಂತನಧಾರೆಗಳು ಕನ್ನಡದಲ್ಲಿ ಹೆಚ್ಚು ಪ್ರಚಾರಗೊಂಡವು. ಅಂಬೇಡ್ಕರ್ ವಿಚಾರಧಾರೆಗಳಿಂದ ಜಾಗೃತವಾದ ದಲಿತ ವಿದ್ಯಾವಂತ ವರ್ಗವು ಬೌದ್ಧಧರ್ಮದತ್ತ ಆಕರ್ಷಿತವಾಗತೊಡಗಿತು. ಇದರಿಂದಾಗಿ ಕರ್ನಾಟಕದಲ್ಲಿ 'ದಲಿತ ಕ್ರಿಯಾ ಸಮಿತಿ' ಹಾಗೂ 'ಕರ್ನಾಟಕ ದಲಿತ ಸಂಘರ್ಷ ಸಮಿತಿ, ಆರಂಭಗೊಂಡವು. ಈ ಸಂಘಟನೆಗಳು ಅಂಬೇಡ್ಕರ್ ಚಿಂತನ ಧಾರೆಗಳ ಅಡಿಯಲ್ಲಿ ದಲಿತರ ವಿಮೋಚನೆಗಾಗಿ ಯೋಜನೆಗಳನ್ನು ರೂಪಿಸಿಕೊಂಡು ಮುನ್ನಡೆದವು. ಆದರೆ ಅಂಬೇಡ್ಕರ್ ದಲಿತರಲ್ಲಿ ನೆಲೆಯೂರಿರುವ ಅಸ್ಪೃಶ್ಯತೆಯ ವಿಮೋಚನೆಗಾಗಿ ಸ್ವೀಕರಿಸಿದ ಬೌದ್ಧಧರ್ಮವು ಸ್ಥಾಪಿತ ಮಾದರಿಯನ್ನು ಪಡೆದುಕೊಳ್ಳುತ್ತಿರುವ ಬಗ್ಗೆ ಪ್ರಗತಿಪರರು ವಿರೋಧವನ್ನು ವ್ಯಕ್ತಪಡಿಸಿದ್ದಾರೆ. "ಹೊಲೆಯರಲ್ಲಿ ಕೆಲವರು ಛಲವಾದಿ ಸಂಘ ಸ್ಥಾಪಿಸಿ ಹೊಲೆಯರನ್ನು ಮತ್ತೊಂದು ಗೊಂದಲಕ್ಕೆ ನೂಕಿದ್ದಾರೆ. ಇದಲ್ಲದೆ ಈ ಮೂರ್ಖರು ತಮ್ಮ ಸಂಘದ ಲಾಂಛನಕ್ಕೆ ಬುದ್ಧನ ಚಿತ್ರವನ್ನೇ ಬಳಸಿಕೊಂಡಿದ್ದಾರೆ. ಆ ಮೂಲಕ ಬುದ್ಧನನ್ನೇ ಛಲವಾದಿಯನ್ನಾಗಿ ಮಾಡಿದ್ದಾರೆ"[೨] ಎಂಬ ಟೀಕೆಗಳು ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುತ್ತವೆ. ಈ ಚಿಂತನಧಾರೆಗಳು ಅಂಬೇಡ್ಕರ್ ರೂಪಿಸಿಕೊಟ್ಟ ದಲಿತರ ವಿಮೋಚನ ಮಾರ್ಗವಾದ ಬೌದ್ಧಧರ್ಮವು ಇಂದು ದಲಿತರಲ್ಲಿಯೇ ಒಂದು ಜಾತಿಗೆ ಸೀಮಿತಗೊಳ್ಳುತ್ತಿರುವ ಬಗ್ಗೆ ವಿರೋಧವನ್ನು ವ್ಯಕ್ತಪಡಿಸುತ್ತವೆ. ಈ ನೆಲೆಯ ಧಾರೆಗಳು ಅಸಮಾನತೆಯನ್ನು ಸೃಷ್ಟಿಸಿರುವ ಸಮುದಾಯಗಳನ್ನು ತಮ್ಮ ಎದುರಾಳಿಯೆಂದು ಭಾವಿಸುವ ಪೂರ್ವದಲ್ಲಿ, ದಲಿತರಲ್ಲಿಯೇ ರೂಪುಗೊಳ್ಳುತ್ತಿರುವ ಮೂಲಭೂತವಾದಿ ನೆಲೆಗಳನ್ನು ಗುರುತಿಸುತ್ತವೆ. ಈ ಕ್ರಮವು ಆತ್ಮವಿಮರ್ಶೆಯ ಮಾದರಿಯಿಂದ ಕೂಡಿರುವುದಾಗಿದೆ. ಇಂದು ಕರ್ನಾಟಕದ ದಲಿತರಲ್ಲಿ ಒಂದು ಸಮುದಾಯವು ತಮ್ಮ ಹೋರಾಟ ಹಾಗೂ ಸಂಘಟನೆಗಳಿಗೆ ಬುದ್ಧನನ್ನು ಪ್ರತಿಮೆಯಾಗಿ ಬಳಸಿಕೊಳ್ಳುತ್ತಿರುವುದರಿಂದ ಇತರೆ ತಳಸಮುದಾಯಗಳು ಇದನ್ನು ವಿರೋಧಿಸುವ ನೆಲೆಯಲ್ಲಿ ಬುದ್ಧನ ತತ್ವ ದರ್ಶನಗಳಿಂದ ದೂರ ಸರಿಯುತ್ತಿರುವಂತಹ ವಾತಾವರಣ ಸೃಷ್ಟಿಯಾಗುತ್ತಿದೆ. ಪ್ರಗತಿಪರ ವಿಚಾರವಾದಿಗಳು ಹಾಗೂ ಚಿಂತಕ ವರ್ಗವು ಈ ರೀತಿಯಾದ

ಸಂಘಟನಾತ್ಮಕ ರಾಜಕೀಯ ಕ್ರಮದಿಂದ ಎದುರಾಗಬಹುದಾದ ಅಪಾಯದ ಕುರಿತಾಗಿ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸುತ್ತಿವೆ.

ಅಂಬೇಡ್ಕರ್ ವಿಚಾರವಾದದಿಂದ ಪ್ರೇರಣೆ ಪಡೆದ ದಲಿತ ಬುದ್ದಿಜೀವಿಗಳು, ಬ್ರಾಹ್ಮಣವಾದಿ ಹಿಂದೂ ಮೂಲಭೂತವಾದದ ಆಕ್ರಮಣಶಾಹಿ ನಿಲುವುಗಳನ್ನು ಮೀರುವ ನೆಲೆಯಲ್ಲಿ ಕ್ರಿಯಾಶೀಲರಾಗಿದ್ದಾರೆ. ವೈದಿಕ ರಾಜಕಾರಣವು ಸೃಷ್ಟಿಸಿಕೊಂಡು ಬಂದಿರುವ ಪ್ರಮಾಣಗಳನ್ನು ಮೀರುವ ಮೂಲಕ, ಪರ್ಯಾಯ ಬದುಕಿಗಾಗಿ ದಲಿತ ಹೋರಾಟಗಳು ಮುನ್ನೆಡೆಯುತ್ತಿರುವ ಸಂದರ್ಭದಲ್ಲಿಯೇ ದಲಿತರಲ್ಲಿ ಎಡ-ಬಲಗಳ ನಡುವೆ ಸಂಘರ್ಷಗಳು ಉಂಟಾಗುತ್ತಿವೆ. ಅಂಬೇಡ್ಕರ್ ರೂಪಿಸಿಕೊಟ್ಟ ಬೌದ್ಧ ದರ್ಶನವನ್ನು ಕೇಂದ್ರವಾಗಿಟ್ಟುಕೊಂಡು ದಲಿತರನ್ನು ಮುನ್ನೆಡೆಸಬೇಕಾದ ಸಂಘಟನೆಗಳು ಇಂದು ಸ್ವಾರ್ಥ ರಾಜಕೀಯ ನೆಲೆಯೊಂದನ್ನು ರೂಪಿಸಿಕೊಳ್ಳುತ್ತಿರುವುದನ್ನು ವಿರೋಧಿಸುವ ಧಾರೆಗಳು ಕನ್ನಡ ವಿಚಾರ ಸಾಹಿತ್ಯದಲ್ಲಿವೆ. "ಸಂಘಟನೆಯ ಅಂಗಳದಲ್ಲಿ ಶೋಷಣೆಯ ಪ್ರಖರತೆ ಅರಿವು ಹೆಚ್ಚಾದಂತೆ ಬೌದ್ಧಧರ್ಮ ಅನಿವಾರ್ಯ ಎಂದು ತೋರುತ್ತಿರುವಾಗಲೇ, ಸಂಘಟನೆಯಲ್ಲಿ ಸಮಾಜದಲ್ಲಿ ಎಡಬಲದ ತಳಹದಿಯಲ್ಲಿ ರಾಜ್ಯಾದಾದ್ಯಾಂತ ಸಂಘಟನೆ ಸಮಾಜ ಇಬ್ಭಾಗವಾಯಿತು. ದಲಿತ ಬೆಳವಣಿಗೆಯ ಕನಸು ಭಗ್ನವಾಯಿತು. ದಲಿತರು ದಲಿತರನ್ನೇ ಹಿಯಾಳಿಸುವುದು, ಟೀಕಿಸುವುದು ನಡೆದು ಆಂತರಿಕ ಕಿತ್ತಾಟದಿಂದ ಅಂಬೇಡ್ಕರ್‌ವಾದದ ಕಡೆಗೆ ಬುದ್ಧಿಜೀವಿಗಳು ಹರಿಯದೆ ಸ್ವಜಾತಿ ನೆಲೆಯಲ್ಲಿ ಕಾದಾಡುತ್ತಿರುವುದರಿಂದ ಆಶಾ ಗೋಪುರಗಳು ಕಮರಿ ಹೋಗುತ್ತಲಿವೆ"[೩] ಎಂಬ ಆತಂಕ ಇಲ್ಲಿ ಕಂಡುಬರುತ್ತವೆ. ಈ ಪ್ರಗತಿಪರ ಧಾರೆಗಳು ಬೌದ್ಧಧರ್ಮವನ್ನು ದಲಿತರ ವಿಮೋಚನೆಯ ಪ್ರಮುಖ ಅಸ್ತ್ರವಾಗಿ ಬಳಸಿಕೊಂಡು ಮುನ್ನೆಡೆಯುವ ಹಂಬಲ ಹೊಂದಿವೆ. ಆದರೆ ಜಾತಿಕೇಂದ್ರಿತ ಸಂಘಟನೆಗಳ ರಾಜಕೀಯ ನಿಲುವುಗಳಿಂದಾಗಿ ದಲಿತರಲ್ಲಿಯೇ ಒಳಸಂಘರ್ಷ ಉಂಟಾಗುತ್ತಿರುವ ಬಗ್ಗೆ ಇವರಲ್ಲಿ ಆತಂಕವಿದೆ. ಬಾಬಾಸಾಹೇಬರು ವರ್ಣಧರ್ಮದ ಅಸಮಾನತೆಯಿಂದ ಸೃಷ್ಟಿಯಾಗಿರುವ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಬೌದ್ಧಧರ್ಮವನ್ನು ಸ್ವೀಕರಿಸಿದರು. ಆದರೆ ಇಂದಿನ ಸಂಘಟನೆಗಳು ಬೌದ್ಧಧರ್ಮದ ಅಡಿಯಲ್ಲಿ ದಲಿತರಿಗೆ ಜಾಗೃತ ಪ್ರಜ್ಞೆಯನ್ನು ಮೂಡಿಸುವ ಬದಲಿಗೆ, ಜಾತಿಕೇಂದ್ರಿತ ರಾಜಕಾರಣಕ್ಕೆ ಮುಂದಾಗಿವೆ. ಇದರಿಂದಾಗಿ ಬಲಗೈ ಸಮುದಾಯದ ಹೊಲೆಯರು ಬುದ್ಧ ಮತ್ತು ಬಾಬಾಸಾಹೇಬ ಅಂಬೇಡ್ಕರ್ ಅವರನ್ನು ತಮ್ಮ ಸಂಘಟನೆಯ ಲಾಂಛನವನ್ನಾಗಿ ಮಾಡಿಕೊಂಡಿದ್ದಾರೆ. ಈ ಬಲಗೈ ಸಮುದಾಯಕ್ಕೆ ಪರ್ಯಾಯವಾಗಿ ತಮ್ಮ ಅಸ್ತಿತ್ವವನ್ನು ರೂಪಿಸಿಕೊಳ್ಳಲು ಮುಂದಾಗಿರುವ ಎಡಗೈ ಪರಂಪರೆಯ 'ಮಾದಿಗ' ಸಮುದಾಯವು ಬುದ್ಧನಿಗೆ ಪರ್ಯಾಯವಾಗಿ ಬಸವಣ್ಣ, ಮಾತಂಗ ಮುನಿ, ಮಾದಾರ ಚೆನ್ನಯ್ಯರಂತಹ ಪೌರಾಣಿಕ ಮತ್ತು ಚಾರಿತ್ರಿಕ ನಾಯಕರನ್ನು, ಬಾಬಾಸಾಹೇಬರಿಗೆ ಪರ್ಯಾಯವಾಗಿ ಬಾಬುಜಗಜೀವನ ರಾಮ್ ಅವರಂತಹ ರಾಜಕೀಯ ಮುತ್ಸದ್ಧಿಗಳನ್ನು ತಮ್ಮ ಸಂಘಟನೆಯ ಲಾಂಛನವಾಗಿ ಸ್ವೀಕರಿಸಿಕೊಂಡು ಮುನ್ನೆಡೆಯುವಂತಹ ವಾತಾವರಣ ಸೃಷ್ಟಿಯಾಗಿದೆ. ಆದರೆ ಈ ಎರಡು ಸಮುದಾಯದ ಪ್ರಗತಿಪರ ಚಿಂತಕರು ಮಾತ್ರ ಈ ಸಂಘರ್ಷಕರ ಬೆಳವಣಿಗೆಯನ್ನು ವಿರೋಧಿಸುವ ನೆಲೆಯಲ್ಲಿ ಚಿಂತನೆಗಳನ್ನು ಪ್ರಕಟಿಸುತ್ತ

ಬಂದಿದ್ದಾರೆ. ಎಡಗೈ ಸಮುದಾಯದವರು ಬುದ್ಧ ಮತ್ತು ಬಾಬಾಸಾಹೇಬರಿಗೆ ಪರ್ಯಾಯವಾದ ಮಾರ್ಗವನ್ನು ಕಂಡುಕೊಂಡು, ತಮ್ಮ ಹೋರಾಟವನ್ನು ಮುಂದುವರೆಸಿದರು ಸಹ ಆಳದಲ್ಲಿ ಈ ಇಬ್ಬರು ದಾರ್ಶನಿಕರ ವಿಚಾರಗಳನ್ನು ಮೈಗೂಡಿಸಿಕೊಂಡಿದ್ದಾರೆ. ಬಲಗೈ ಸಮುದಾಯದ ರಾಜಕೀಯ ನೆಲೆಗಟ್ಟಿನ ಕಾರ್ಯವೈಖರಿಗಳನ್ನು ಮೀರುವ ನೆಲೆಯಲ್ಲಿ ಮೌನವಹಿಸಿಕೊಂಡು ಬಂದಿರುವ ನಿದರ್ಶನಗಳು ಕಂಡುಬರುತ್ತವೆ. ದಲಿತರಲ್ಲಿ ಕಂಡುಬರುವ ಈ ವೈರುಧ್ಯಕ್ಕೆ ಪ್ರಮುಖ ಕಾರಣವೆಂದರೆ, ಸಂವಿಧಾನಿಕ ನೆಲೆಯ ಒಳ ಮೀಸಲಾತಿ.

ಕರ್ನಾಟಕದಲ್ಲಿನ ಒಳಮೀಸಲಾತಿಯ ಬೇಡಿಕೆಯು ಈ ಎರಡು ಸಮುದಾಯಗಳ ಮಧ್ಯೆ ತೀವ್ರವಾದ ಸಂಘರ್ಷಕ್ಕೆ ಕಾರಣವಾಗಿದೆ. ಈ ಒಳ ಮೀಸಲಾತಿಯ ಕಾರಣದಿಂದಾಗಿ ಅಂಬೇಡ್ಕರ್ ಚಾಲನೆ ನೀಡಿದ ದಲಿತ ಹೋರಾಟಕ್ಕೆ ತೀವ್ರವಾದ ಧಕ್ಕೆಯಾಗಿದೆ. ಈ ಮೀಸಲಾತಿ ಪ್ರಕ್ರಿಯೆಯು ಸಂವಿಧಾನ ಬದ್ಧವಾಗಿದ್ದರೂ ದಲಿತರಲ್ಲಿಯೇ ಬಲಿತ ವರ್ಗಗಳು ತಮ್ಮ ಅಸ್ತಿತ್ವದ ಉಳಿವಿಗಾಗಿ, ಶೋಷಿತ ಸಮುದಾಯಗಳಿಗೆ ಸಲ್ಲಬೇಕಾದ ಮೀಸಲಾತಿಯನ್ನು ವಿರೋಧಿಸುವುದಕ್ಕೆ ಮುಂದಾಗಿವೆ. ಈ ಕಾರಣದಿಂದಾಗಿ ದಲಿತರಲ್ಲಿಯೇ ವೈರುಧ್ಯಗಳು ಉಂಟಾಗಿದ್ದು, ಬುದ್ಧನ ವೈಚಾರಿಕ ಧರ್ಮದಿಂದ ದೂರಸರಿಯುವಂತಹ ಸನ್ನಿವೇಶವು ನಿರ್ಮಾಣವಾಗಿದೆ.

೨. ಧಾರ್ಮಿಕ ರಾಜಕಾರಣ

ಭಾರತದಲ್ಲಿ ಧಾರ್ಮಿಕ ರಾಜಕಾರಣವು ಸಾಮಾಜಿಕ ವ್ಯವಸ್ಥೆಯ ಮೇಲೆ ಪ್ರಬಲವಾದ ಹಿಡಿತವನ್ನು ಸಾಧಿಸಿಕೊಂಡು ಬಂದಿದೆ. ಇಲ್ಲಿ ಬ್ರಾಹ್ಮಣಧರ್ಮವು ತನ್ನ ಅಸ್ತಿತ್ವದ ಉಳಿವಿಗಾಗಿ ಇಲ್ಲಿನ ಮೂಲ ನಿವಾಸಿಗಳ ಮೇಲೆ ಪ್ರಬಲವಾದ ಹಿಡಿತ ಸಾಧಿಸಿದೆ. ಸಂಪ್ರದಾಯವಾದಿ ಬ್ರಾಹ್ಮಣರು ಧರ್ಮ ರಾಜಕಾರಣದ ನೆಲೆಯಲ್ಲಿ ಕೆಲವು ಧರ್ಮಗ್ರಂಥಗಳನ್ನು ರಚಿಸಿಕೊಂಡು ಅಸಮಾನತೆಯ ಶ್ರೇಣೀಕೃತ ವ್ಯವಸ್ಥೆಯನ್ನು ಪಾಲಿಸಿಕೊಂಡು ಬಂದಿದ್ದಾರೆ. ಅದನ್ನು ಅವರು ಹೀಗೆ ವಿಶ್ಲೇಷಿಸುತ್ತಾರೆ: "ಕ್ರಿ.ಪೂ. ಐದನೇ ಶತಮಾನದಲ್ಲಿ ಈ ಮೂಲನಿವಾಸಿಗಳ ನಡುವಿನಿಂದ ಭಗವಾನ್ ಬುದ್ಧ ಜನ್ಮ ತಳೆದು ಆರ್ಯರ ವ್ಯವಸ್ಥಿತ ಪಿತೂರಿಗಳನ್ನೆಲ್ಲ ಭೇಧಿಸಿ 'ಸತ್ಯ-ಅಹಿಂಸೆ-ನ್ಯಾಯ'ದ ಮಾರ್ಗವನ್ನು ಸಮಾಜಕ್ಕೆ ಬೋಧಿಸಿದನು. ಆ ನಂತರ ಕ್ರಿ.ಪೂ. ೩ನೇ ಶತಮಾನದಲ್ಲಿ ಸಾಮ್ರಾಟ್ ಅಶೋಕ ಭಗವಾನ್ ಬುದ್ಧನ ಅನುಯಾಯಿಯಾಗಿ ಇಡೀ ಭರತಖಂಡವನ್ನು ಸತ್ಯ, ಅಹಿಂಸೆ ಹಾಗೂ ನ್ಯಾಯದ ಹಾದಿಯಲ್ಲಿ ಆಳ್ವಿಕೆ ಮಾಡಿದನು. ಆದರೆ ಮತ್ತೆ ಕ್ರಿ.ಪೂ. ೧೮೫ ರಲ್ಲಿ ಮೌರ್ಯರ ಕೊನೆಯ ಚಕ್ರವರ್ತಿ ಬೃಹದ್ರಥ ಮೌರ್ಯನನ್ನು ಕೊಲ್ಲುವುದರ ಮೂಲಕ ಮೂಲನಿವಾಸಿಗಳಾದ ಮೌರ್ಯರ ಸಾಮ್ರಾಜ್ಯವನ್ನೇ ನಾಶ ಮಾಡಿದ. ಈ ಆರ್ಯರು(ಸುಂಗ ಬ್ರಾಹ್ಮಣರು) ಮೂಲನಿವಾಸಿ ಜನರನ್ನು ಕಾನೂನಿನ ಮೂಲಕವೇ ನಿಗ್ರಹಿಸಲು ತೀರ್ಮಾನಿಸಿ, 'ಮನುಸ್ಮೃತಿ'ಯನ್ನು ಜಾರಿಗೆ ತಂದರು. ಮೂಲನಿವಾಸಿಗಳನ್ನು ಶೂದ್ರರೆಂದು ಕರೆದು ಅವರಿಗೆ ವಿದ್ಯೆ, ಅಧಿಕಾರ, ಆಸ್ತಿಯನ್ನು ನಿಷೇಧಿಸಿ, ಅವರನ್ನು ಬಲು ಉಗ್ರವಾದ ಕಾನೂನುಗಳಿಂದ ಬಂಧಿಸಿದರು. ಇದನ್ನು ಒಪ್ಪದೆ

ಬಂಡೆದ್ದವರನ್ನು ತಮಗಿದ್ದ ರಾಜ್ಯಾಧಿಕಾರದ ಬಲದಿಂದ ಊರುಗಳಿಂದ ಬಹಿಷ್ಕರಿಸಿ, ಅವರನ್ನು ಅಸ್ಪೃಶ್ಯರನ್ನಾಗಿಸಿ ಶಾಶ್ವತ ಗುಲಾಮಗಿರಿಗೆ ನೂಕಿದರು. ಬ್ರಿಟಿಷರು ಭಾರತವನ್ನು ಆಳುವವರೆಗೂ ಈ ದೇಶದ ಮೂಲನಿವಾಸಿಗಳು ಶೂದ್ರ, ಅಸ್ಪೃಶ್ಯರಾಗಿ ವಿದ್ಯೆ, ಅಧಿಕಾರ ಮತ್ತು ಆಸ್ತಿಯ ಹಕ್ಕುಗಳಿಂದ ವಂಚಿತರಾಗಿ ಮಾನಸಿಕ ಮತ್ತು ದೈಹಿಕ ಗುಲಾಮಗಿರಿಗೆ ಒಳಪಟ್ಟಿದ್ದರು. ತದ್ವಿರುದ್ಧವಾಗಿ ವಿದ್ಯೆ, ಅಧಿಕಾರ ಮತ್ತು ಆಸ್ತಿಯ ಮೇಲೆ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರು ಸಂಪೂರ್ಣ ಒಡೆತನವನ್ನು ಹೊಂದಿದ್ದರು. ಇದರಿಂದ ಈ ದೇಶದ ಬಹುಸಂಖ್ಯಾತರು ಗುಲಾಮರಾಗಿ, ಅಲ್ಪಸಂಖ್ಯಾತರಾದ ಆರ್ಯರು ಆಳುವ ವರ್ಗವಾಗಿದ್ದರು."[೨] ಹೀಗೆ ಬ್ರಾಹ್ಮಣ ಧರ್ಮವು ತನ್ನ ಆಕ್ರಮಣಕಾರಿ ಧೋರಣೆಯಿಂದಾಗಿ ಇಲ್ಲಿನ ಮೂಲನಿವಾಸಿಗಳನ್ನು ಶೋಷಣೆಗೆ ಒಳಪಡಿಸುತ್ತ ಬಂದಿದೆ. ಬ್ರಾಹ್ಮಣಶಾಹಿಯು ಧರ್ಮ ರಾಜಕಾರಣದ ಮೂಲಕ ಆಕ್ರಮಣಕಾರಿ ಧೋರಣೆಯನ್ನು ಅನುಸರಿಸಿಕೊಂಡು ಬಂದಿದೆ. ಕ್ರಿ.ಶ. ೧೮೩೭ ರಲ್ಲಿ 'ಮೆಕಾಲೆ' ವರದಿಯನ್ನು ಆಧರಿಸಿ ಬ್ರಿಟಿಷರು ಜಾರಿಗೆ ತಂದ 'ಸಾರ್ವತ್ರಿಕ ಶಿಕ್ಷಣ ಪದ್ಧತಿ' ಕಾಯ್ದೆ ಜಾರಿಗೊಳ್ಳುವವರೆಗೂ ಬ್ರಾಹ್ಮಣಶಾಹಿಯು ತನ್ನದೇ ಆದ ಆಕ್ರಮಣಕಾರಿ ಧೋರಣೆಯನ್ನು ಮುಂದುವರೆಸಿಕೊಂಡು ಬಂದಿದೆ. ಮೆಕಾಲೆ ವರದಿಯ ಅನುಷ್ಠಾನದಿಂದಾಗಿ ಭಾರತದಲ್ಲಿ ಸುಮಾರು ಎರಡು ಸಾವಿರ ವರ್ಷಗಳಿಂದ ಬೇರುಬಿಟ್ಟಿದ್ದ 'ಮನುವಾದಿ' ಸಾಮಾಜಿಕ ವ್ಯವಸ್ಥೆಯು ಸ್ಫೋಟಗೊಂಡಿತು. ಆದರೆ ಈ ಆರ್ಯ ಸಂಸ್ಕೃತಿಯ ಕೂಸಾದ ಬ್ರಾಹ್ಮಣಧರ್ಮವು ಬದಲಾದ ಕಾಲಕ್ಕೆ ತಕ್ಕಂತೆ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುವ ಮೂಲಕ ಅಸ್ತಿತ್ವವನ್ನು ಕಾಯ್ದುಕೊಂಡು ಬಂದಿದೆ. ಆಧುನಿಕ ಸಂದರ್ಭದಲ್ಲಿಯೂ ಬ್ರಾಹ್ಮಣವಾದವು ತನ್ನ ಅಸ್ತಿತ್ವದ ಉಳಿವಿಗಾಗಿ ಸೆಣಸಾಡುತ್ತಿದೆ.

ಬ್ರಾಹ್ಮಣ ಧರ್ಮವು ಮೂಲನಿವಾಸಿಗಳ ಮೇಲೆ ನಡೆಸಿದ ಆಕ್ರಮಣವನ್ನು ಮೀರುವ ನೆಲೆಯಲ್ಲಿ ಹಲವಾರು ದಾರ್ಶನಿಕ ಧಾರೆಗಳು ಶ್ರಮಿಸಿವೆ. ಈ ದಾರ್ಶನಿಕ ಪಂಥಗಳು ಅಸಮಾನ ಮತ್ತು ಅವೈಚಾರಿಕ ನೆಲೆಯ ಬ್ರಾಹ್ಮಣ ಧರ್ಮದ ಆಕ್ರಮಣಕಾರಿ ಧೋರಣೆಗಳನ್ನು ಮಣಿಸಲು ಬೌದ್ಧ ದರ್ಶನದ ಅಡಿಯಲ್ಲಿ ತಮ್ಮ ಹೋರಾಟವನ್ನು ಮುಂದುವರೆಸಿವೆ. ಈ ನೆಲೆಯಲ್ಲಿ ತಮ್ಮ ಹೋರಾಟವನ್ನು ಮುಂದುವರೆಸಿದ ದಾರ್ಶನಿಕರು ವೈದಿಕತೆಯ ಆಕ್ರಮಣಶಾಹಿ ಧೋರಣೆಗೆ ಪರ್ಯಾಯವಾಗಿ, ಬುದ್ಧ ಪ್ರತಿಪಾದಿಸಿದ ರಾಜಕೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಪ್ರತಿಪಾದಿಸುತ್ತ ಬಂದಿದ್ದಾರೆ. ಬುದ್ಧ ಏಕಚಕ್ರಾಧಿಪತ್ಯಕ್ಕೆ ಬದಲಾಗಿ 'ಗಣತಂತ್ರ' ರಾಜಕೀಯತೆಗೆ ಹೆಚ್ಚು ಮಹತ್ವ ನೀಡಿದನು. ಬುದ್ಧ ವೈಶಾಲಿಯಲ್ಲಿ ನೆಲೆಸಿದಾಗ ಅಲ್ಲಿ ರಾಜ ಅಜಾತಶತ್ರುವಿನ ಮಂತ್ರಿಯೊಂದಿಗೆ ನಡೆಸಿದ ಸಂಭಾಷಣೆಯಲ್ಲಿ ಸಾಮಾನ್ಯ ಜನತೆಗೆ ಉಪಯುಕ್ತವಾಗುವಂತಹ ಕೆಲವು ರಾಜಕೀಯ ನಿಯಮಗಳನ್ನು ಚರ್ಚಿಸುತ್ತಾನೆ. ಬುದ್ಧ ಪ್ರತಿಪಾದಿಸಿದ ಈ ನಿಯಮವನ್ನು ಅಂದಿನ ಪ್ರಭುತ್ವವು ಚಾಲನೆಗೆ ತಂದು, ಜನತೆಯ ಪ್ರಗತಿಗಾಗಿ ಶ್ರಮಿಸಲಾಗಿತ್ತು. "ಬುದ್ಧ 'ಮಹಾ ಪರಿನಿರ್ವಾಣ ಸೂತ್ರ'ದ ಪ್ರರಂಭದಲ್ಲಿ ಪ್ರತಿಪಾದಿಸಿದ ಗಣತಂತ್ರ ವ್ಯವಸ್ಥೆಯ ಸರಳವಾದ ನಿಯಮಗಳೆಂದರೆ;

೧ ನಿಯಮಿತವಾಗಿ ಒಟ್ಟು ಸೇರಿ ಸಭೆ ನಡೆಸಿ ಮತ್ತು ರಾಜಕೀಯ ವಿಚಾರಗಳನ್ನು ಚರ್ಚಿಸಿ.

೨ ಒಮ್ಮನಸ್ಸಿನಿಂದ ಜೊತೆಗೂಡಿ, ಒಮ್ಮನಸ್ಸಿನಿಂದ ರಾಜಕೀಯ ಕಾರ್ಯಗಳನ್ನು ಕೈಗೊಳ್ಳಿ ಮತ್ತು ಒಮ್ಮನಸ್ಸಿನಿಂದ ಸಭೆ ಮುಗಿಸಿ ಹೊರ ಬನ್ನಿ.

೩ ಅಸ್ತಿತ್ವದಲ್ಲಿ ಇಲ್ಲದ ಕಾನೂನು ಇದೆಯೆಂದು ಸೋಗು ಹಾಕದಿರಿ, ಅಸ್ತಿತ್ವದಲ್ಲಿರುವ ಕಾನೂನನ್ನು ಮುರಿಯಬೇಡಿ, ಹಿಂದೆ ಮಾಡಿರುವ ಕಾನೂನನ್ನು ಅನುಸರಿಸಿ.

೪ ಹಿರಿಯ ಮುತ್ಸದ್ದಿಗಳನ್ನು ಆದರಿಸಿ, ಅವರನ್ನು ಗೌರವಿಸಿ ಮತ್ತು ಅವರ ಉಪದೇಶವನ್ನು ಆಲಿಸಿ.

೫ ಯಾವುದೇ ಗೌರವಾನ್ವಿತ ಮಹಿಳೆ ಅಥವಾ ಅವಿವಾಹಿತ ಹುಡುಗಿ ಲೈಂಗಿಕ ಪೀಡನೆಗೆ ಒಳಗಾಗದಂತೆ ನೋಡಿಕೊಳ್ಳಿ.

೬ ಹಳೆಯ ಧಾರ್ಮಿಕ ನಿವೇಶನಗಳ ಸೂಕ್ತ ಕಾಳಜಿ ವಹಿಸಿಕೊಳ್ಳಿ.

೭ ಭೇಟಿಯಾಗಲು ಬರಬಹುದಾದ ಅರ್ಹತರ (ಮಹಾತ್ಮರ ಅಥವಾ ಶ್ರೇಷ್ಠ ವ್ಯಕ್ತಿಗಳ) ಧಾರ್ಮಿಕ ಆಚರಣೆಗಳು ತೊಂದರೆಗೆ ಒಳಗಾಗದ ರೀತಿಯಿಂದ ನಡೆಯುವಂತೆ ವ್ಯವಸ್ಥೆ ಮಾಡಿ"[೫] ಎಂಬುದಾಗಿ ಸಲಹೆ ನೀಡುತ್ತಾನೆ. ಈ ನಿಯಮಗಳು ಏಕಚಕ್ರಾಧಿಪತ್ಯದ ಆಕ್ರಮಣಕಾರಿ ರಾಜಕೀಯಕ್ಕೆ ಸಂಪೂರ್ಣ ವಿರುದ್ಧವಾಗಿದ್ದವು. ಇದನ್ನು ಪಾಲಿಸಿಕೊಂಡು ಬಂದ ಅಜಾತಶತ್ರುವಿನ ರಾಜ್ಯಾಡಳಿತದಲ್ಲಿ ಸರ್ವರಿಗೂ ಸಮಾನತೆ ಲಭಿಸಿತ್ತು. ಈ ಮಾದರಿಯು ಪ್ರಜಾಪ್ರಭುತ್ವದ ಅತ್ಯುನ್ನತ ಹಂತವಾಗಿದ್ದು, ಈ ತತ್ವಗಳನ್ನು ಬರ್ಮಾದಲ್ಲಿನ ಬೌದ್ಧ ಸಂಘಗಳು ಈಗಲೂ ಅನುಸರಿಸುತ್ತಿವೆ ಎಂಬುದು ಧರ್ಮಾನಂದ ಕೊಸಾಂಬಿಯವರ ನಿಲುವಾಗಿದೆ.

ಭಾರತದ ಆಧ್ಯಾತ್ಮಿಕ ಚಿಂತಕರಾದ ಓಶೋ ಅವರು ಬೌದ್ಧಧರ್ಮದಲ್ಲಿ ಕಂಡುಬರುವ ಪ್ರಜಾಪ್ರಭುತ್ವ ಧೋರಣೆಗಳನ್ನು ಗುರುತಿಸಿದ್ದಾರೆ. ಬೌದ್ಧಧರ್ಮದಲ್ಲಿನ ಸಮಾನತೆಯ ಅಂಶಗಳು ಯಾವುದೇ ಸ್ವಾರ್ಥ ರಾಜಕಾರಣದಿಂದ ಕೂಡಿದ್ದಲ್ಲ. ಇಲ್ಲಿ ಪ್ರತಿಯೊಬ್ಬರಿಗೂ ಸಮಾನತೆಯನ್ನು ಕಲ್ಪಿಸಲಾಗಿದೆ. ಆದ ಕಾರಣ ಇಲ್ಲಿ ನಿಜಾರ್ಥದ ಪ್ರಜಾಪ್ರಭುತ್ವ ಕಂಡುಬರುತ್ತದೆ ಎಂಬುದಕ್ಕೆ ಇವರು ನೀಡುವ ಸಮರ್ಥನೆ ಹೀಗಿದೆ; "ಬೌದ್ಧಧರ್ಮಕ್ಕೆ ಒಬ್ಬ ದೇವರಲ್ಲಿ ನಂಬಿಕೆಯಿಲ್ಲ. ಹಾಗೆ ನೋಡಿದರೆ ಜೈನಧರ್ಮಕ್ಕೆ ದೇವರಲ್ಲಿ ನಂಬಿಕೆ ಇಲ್ಲ. ಆದರೆ ಜೈನರಿಗೆ 'ದೇವರು'ಗಳಲ್ಲಿ ನಂಬಿಕೆ ಇದೆ. ಇಸ್ಲಾಂ, ಜುಡಾಯಿಸಂ ಅಥವಾ ಕ್ರೈಸ್ತಧರ್ಮಗಳಿಗಿಂತ ಬೌದ್ಧ ಮತ್ತು ಜೈನಧರ್ಮಗಳು ಹೆಚ್ಚು ಪ್ರಜಾಪ್ರಭುತ್ವವಾದಿಗಳು. ಈ ಕೊನೆಯ ಎರಡು ಧರ್ಮಗಳು ಮೊದಲ ಮೂರು ಧರ್ಮಗಳಿಗಿಂತ ಭಿನ್ನ. ಏಕೆಂದರೆ ಇವುಗಳಲ್ಲಿ ಒಂದೇ ದೇವರು, ಒಂದೇ ಧರ್ಮ, ಒಂದೇ ಪವಿತ್ರ ಗ್ರಂಥ ಎಂದೇನೂ ಇಲ್ಲ. ಬೌದ್ಧಧರ್ಮದ ಪ್ರಕಾರ ದೇವರುಗಳ ಸಂಖ್ಯೆ ಲಕ್ಷಾಂತರ. ಏಕೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ಬೋಧಿ ಎಂದರೆ ಜ್ಞಾನವನ್ನು ಪಡೆದಾಗ ದೇವರೇ ಆಗುತ್ತಾನೆ. ಹೀಗಾಗಿ ಪ್ರತಿಯೊಬ್ಬ ವ್ಯಕ್ತಿಗೂ ಗೌರವದ ಸ್ಥಾನ ದೊರಕುತ್ತದೆ."[೬] ಓಶೋ ಪ್ರಕಾರ ಬೌದ್ಧಧರ್ಮವು ಸಂಪೂರ್ಣವಾಗಿ ಪ್ರಜಾಪ್ರಭುತ್ವದ ತಳಹದಿಯ ಮೇಲೆ ರೂಪಿತವಾಗಿದೆ. ಆ ಮೂಲಕವಾಗಿ ಅಸಮಾನತೆಯನ್ನು ಸೃಷ್ಟಿಸಿಕೊಂಡು ಬಂದಿರುವ ಹಿಂದೂ ಮೂಲಭೂತವಾದವನ್ನು ವಿರೋಧಿಸುವ ಆಯಾಮವು ಇವರ ಚಿಂತನೆಗಳ ಹಿಂದೆ ಕಾರ್ಯಪ್ರವೃತ್ತವಾಗಿದೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನದಲ್ಲಿ ಕಂಡುಬರುವ ಪ್ರಜಾಪ್ರಭುತ್ವವಾದಿ ಧೋರಣೆಗಳನ್ನು ಎತ್ತಿಹಿಡಿಯುವ ಹಲವು ಧಾರೆಗಳು ಕಂಡುಬರುತ್ತವೆ. ಈ ಚಿಂತನ ಧಾರೆಗಳು ಹೆಚ್ಚಾಗಿ ಹಿಂದೂಧರ್ಮದ ಆಕ್ರಮಣಕಾರಿ ನಿಲುವುಗಳನ್ನು ಖಂಡಿಸುವ ನೆಲೆಯಿಂದ ಕೂಡಿವೆ. ಈ ಧಾರೆಗಳು ಸಾವಿರಾರು ವರ್ಷಗಳಿಂದ ಅಸಮಾನತೆಯನ್ನು ಪೋಷಿಸಿಕೊಂಡು ಬಂದಿರುವ ವೈದಿಕ ರಾಜಕಾರಣವನ್ನು ಹತ್ತಿಕ್ಕುವುದಕ್ಕೆ ಬುದ್ಧನ ಪ್ರಜಾತಾಂತ್ರಿಕ ಮಾದರಿಯನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿ ವ್ಯಕ್ತವಾಗಿವೆ. ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುವ ಬೌದ್ಧದರ್ಶನ ಕೇಂದ್ರಿತ ರಾಜಕೀಯ ಚಿಂತನೆಗಳಿಗೆ ಧರ್ಮಾನಂದ ಕೊಸಾಂಬಿ, ಆಯೋಥಿದಾಸ್, ಬಾಬಾಸಾಹೇಬ ಅಂಬೇಡ್ಕರ್ ಅವರ ಚಿಂತನೆಗಳ ನೇರ ಪ್ರಭಾವವಿರುವುದು ಕಂಡುಬರುತ್ತದೆ. ಈ ದಾರ್ಶನಿಕ ಚಿಂತಕ ವರ್ಗದಿಂದ ಪ್ರಭಾವಿತವಾದ ಕನ್ನಡದ ಪ್ರಗತಿಪರ ಧಾರೆಗಳು, ತಮ್ಮ ಸ್ಥಳೀಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನೆಲೆಯಲ್ಲಿ ಬೌದ್ಧ ದರ್ಶನದೊಂದಿಗೆ ಅನುಸಂಧಾನಕ್ಕೆ ಮುಂದಾಗಿವೆ.

ಕನ್ನಡದ ಪ್ರಗತಿಪರ ಚಿಂತಕರು ಹಾಗೂ ಹೋರಾಟಗಾರರಾದ ಓ.ರಾಜಣ್ಣನವರು ಬೌದ್ಧಧರ್ಮದಲ್ಲಿ ಅಂತರ್ಗತವಾಗಿರುವ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿದಿದ್ದಾರೆ. ಇವರು ಜಗತ್ತಿನಲ್ಲಿ ಮೊಟ್ಟಮೊದಲು ಪ್ರಜಾಪ್ರಭುತ್ವವನ್ನು ಜಾರಿಗೊಳಿಸಿದವನು ಬುದ್ಧ ಎಂಬುದಾಗಿ ಪ್ರತಿಪಾದಿಸುತ್ತಾರೆ. ಅಂದರೆ ಸುಮಾರು ೨೫೦೦ ವರ್ಷಗಳಷ್ಟು ಹಿಂದೆಯೇ ಬುದ್ಧ ಸರ್ವರಿಗೂ ಸಮಾನತೆಯನ್ನು ಕಲ್ಪಿಸಿಕೊಡುವ ನೆಲೆಯಲ್ಲಿ ಪ್ರಜಾಪ್ರಭುತ್ವ ಮಾದರಿಯೊಂದನ್ನು ಪರಿಚಯಿಸಿದನು. ಈ ಮಾದರಿಯನ್ನು ಜಗತ್ತಿನ ಹಲವಾರು ರಾಷ್ಟ್ರಗಳು ಅಳವಡಿಸಿಕೊಂಡು ಪ್ರಗತಿಯನ್ನು ಸಾಧಿಸಿದವು. ಆದರೆ ಬ್ರಾಹ್ಮಣಧರ್ಮಕ್ಕೆ ಈ ಮಾದರಿಯು ತೀವ್ರ ಧಕ್ಕೆಯನ್ನುಂಟುಮಾಡಿದ ಕಾರಣದಿಂದಾಗಿ, ತನ್ನ ಚಾಣಕ್ಷತನದಿಂದ ಈ ಪ್ರಜಾತಾಂತ್ರಿಕತೆಯನ್ನು ಹತ್ತಕ್ಕುವ ಮೂಲಕ ಏಕಚಕ್ರಾಧಿಪತ್ಯವನ್ನು ಪಾಲಿಸಿಕೊಂಡು ಬಂದಿತು. ಇದರ ಪರಿಣಾಮವಾಗಿ ಬಹುಸಂಖ್ಯಾತ ಜನವರ್ಗವು ಅಧೀನವಾಗಿ ಜೀವನ ಸಾಗಿಸುವಂತಾಗಿದೆ ಎಂಬುದು ಇವರ ಚಿಂತನೆಯ ಸಾರವಾಗಿದೆ. "ಬುದ್ಧಧಮ್ಮ ಹಾಗೂ ಪ್ರಜಾಪ್ರಭುತ್ವದ ನಡುವಿನಲ್ಲಿ ಇರುವ ಸಮಾನ ರೂಪತೆಯನ್ನು ಬುದ್ಧನ ಬೋಧನೆಗಳಲ್ಲಿ ಕಾಣಬಹುದು. ಈತನ ಸಹನೆಯ ಪ್ರತಿಪಾದನೆ, ಚರ್ಚೆಯ ಉಪಾಯ, ವಿಶೇಷ ಆಯ್ಕೆಯ ಸ್ವಾತಂತ್ರ್ಯ, ಸಮಾನತೆ, ಅಸ್ಥಿರತೆ ಪ್ರತಿಯೊಂದು ಕಲ್ಪನೆಯೂ ಆತನ ಕಾಲದಲ್ಲಿದ್ದ ಆಚಾರಗಳ ವಿರುದ್ಧವಾಗಿದ್ದವು. ಇವುಗಳು ಬುದ್ಧನು ೨೫೦೦ ವರ್ಷಗಳ ಹಿಂದೆ ಮಾಡಿದ ಕ್ರಾಂತಿಕಾರಕ ಬದಲಾವಣೆಗಳು"[೭] ಎಂದು ಹೇಳುವರು. ಈ ಎಲ್ಲ ಅಂಶಗಳಿಂದ ಬೌದ್ಧಧರ್ಮವು ಜನತೆಗೆ ಹತ್ತಿರವಾದ ಧರ್ಮವಾಗಿತ್ತು ಎಂಬುದಾಗಿ ಗುರುತಿಸಿ, ಬುದ್ಧಧರ್ಮದಲ್ಲಿ ಅಂತರ್ಗತವಾಗಿರುವ ಪ್ರಜಾಪ್ರಭುತ್ವದ ಆಶಯಗಳನ್ನು ರಾಜಣ್ಣನವರು ಎತ್ತಿಹಿಡಿದಿದ್ದಾರೆ.

ಕನ್ನಡದ ಬೌದ್ಧ ಚಿಂತಕರು ಹಾಗೂ ಉಪಾಸಕರು ಆಗಿರುವ ವೈ.ಬಿ.ನಂದನ ಅವರು ಭಾರತದ ಸಂವಿಧಾನವು ಪ್ರಜಾಪ್ರಭುತ್ವದ ತಳಹದಿಯ ಮೇಲೆ ರೂಪಿತವಾಗಿದೆ. ಈ ಸಂವಿಧಾನವು ಸಂಪೂರ್ಣವಾಗಿ ಬೌದ್ಧಧರ್ಮದ ಸಾರವನ್ನು ಒಳಗೊಂಡಿದೆ ಎಂಬುದಾಗಿ ತಮ್ಮ ನಿಲುವುಗಳನ್ನು ಮಂಡಿಸಿದ್ದಾರೆ. "ದೇಶಕ್ಕೆ ಸ್ವಾತಂತ್ರ್ಯ ಬಂದು ಪ್ರಜಾತಂತ್ರ ಸರಕಾರ ಸ್ಥಾಪನೆಗೊಂಡಿದೆ. ಅದಕ್ಕೊಂದು

ಸಂವಿಧಾನ ರಚನೆಗೊಂಡಿದೆ. ಸ್ವಾತಂತ್ರ್ಯತೆ, ಸಮಾನತೆ, ಸಹೋದರತೆ ಮತ್ತು ನ್ಯಾಯ ಎಂಬ ನಾಲ್ಕು ಕಂಭಗಳ ಮೇಲೆ ಅದು ನಿಂತಿದೆ. ಪ್ರತಿ ಪ್ರಜೆಗೂ ಮೂಲಭೂತ ಹಕ್ಕುಗಳನ್ನು ನೀಡಿದೆ. ಕಲ್ಯಾಣ ಕಾರ್ಯಗಳನ್ನು ಸರ್ಕಾರಗಳಿಗೆ ನಿರ್ದೇಶಿಸಿದೆ. ಸಂಪೂರ್ಣ ಸಂವಿಧಾನ ಬುದ್ಧ- ಬಸವ ಧರ್ಮದ ಮೇಲೆ ರೂಪಿತವಾಗಿದೆ. ಅದನ್ನು ಪ್ರಾಮಾಣಿಕವಾಗಿ ಆಚರಣೆಗೆ ತರುತ್ತಿಲ್ಲ. ಬದಲಾಗಿ ಅಪಸ್ವರಗಳೇ ಎದ್ದು ತೋರುತ್ತವೆ. ಸಂವಿಧಾನ ಬಿದ್ದರೆ ಸಾರ್ವಭೌಮತ್ವ ಉಳಿಯದು ಎಂದು ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಅವರು ಎಚ್ಚರಿಕೆಯನ್ನಿತ್ತಿದ್ದಾರೆ. ಆದರೇನು ಸ್ವಾರ್ಥಪ್ರಿಯರಿಗೆ ಸಾರ್ವಭೌಮತ್ವದ ಬೆಲೆ ಏನು ಗೊತ್ತು! ಈಗಾಗಲೇ ದೇಶವು ಜಾತಿಯತೆಯ ಕಾರಣದಿಂದ ಅರ್ಧ ನೆಲ, ಅರ್ಧ ಜಲ, ಅರ್ಧ ಜನಾಂಗ ಮತ್ತು ಅರ್ಧ ಸಂಸ್ಕೃತಿಯನ್ನು ಕಳೆದುಕೊಂಡಿದೆ."[೮] ಇದು ಬಾಬಾಸಾಹೇಬರನ್ನು ಹಾಗೂ ಅವರು ನೀಡಿದ ಸಂವಿಧಾನವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಇರವುದರಿಂದ ಉಂಟಾಗಿರುವ ಅವಘಡವಾಗಿದೆ. ಬಾಬಾಸಾಹೇಬರು ಮಾನವೀಯತೆಯ ತಳಹದಿಯ ಮೇಲೆ ರೂಪತಳೆದ ಬುದ್ಧನ ಧರ್ಮದಲ್ಲಿ ಅಂತರ್ಗತವಾಗಿರುವ ಪ್ರಜಾಪ್ರಭುತ್ವದ ಆಶಯಗಳನ್ನು ಅರಿತು, ಅವುಗಳನ್ನು ಸಂವಿಧಾನದಲ್ಲಿ ಅಳವಡಿಸಿ ಸಾಮಾಜಿಕ ಸಮಾನತೆಗಾಗಿ ಶ್ರಮಿಸಿದರು. ಆದರೆ ಇಷ್ಟೆಲ್ಲ ಸಾಧನೆಗೈದ ಬಾಬಾಸಾಹೇಬರನ್ನು ಭಾರತದ ಜಾತಿವಾದಿಗಳು ಅಸ್ಪೃಶ್ಯರನ್ನಾಗಿಯೇ ನಡೆಸಿಕೊಂಡು ಬಂದಿದ್ದಾರೆ. ಬಾಬಾಸಾಹೇಬರು ನೀಡಿದ ಸಂವಿಧಾನದ ಮೂಲ ಆಶಯಗಳಿಗೆ ಸಾಧ್ಯವಾದಷ್ಟು ಭಂಗ ತರುವ ಕಾರ್ಯಕ್ಕೆ ಸನಾತನವಾದಿಗಳು ಮುಂದಾಗಿದ್ದಾರೆ ಎಂಬ ನಿಲುವುಗಳನ್ನು ಪ್ರತಿಪಾದಿಸುವ ಮೂಲಕ, ಭಾರತದ ಸಂವಿಧಾನದಲ್ಲಿ ಬೌದ್ಧಧರ್ಮದ ಪ್ರಜಾತಾಂತ್ರಿಕ ಮೌಲ್ಯಗಳು ಅಂತರ್ಗತವಾಗಿರುವ ಬಗ್ಗೆ ತಮ್ಮ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಕನ್ನಡ ಚಿಂತನ ಸಾಹಿತ್ಯದಲ್ಲಿ ಹಲವಾರು ಪ್ರಗತಿಪರ ಚಿಂತನಧಾರೆಗಳು ಬೌದ್ಧಧರ್ಮ ಹಾಗೂ ದರ್ಶನದಲ್ಲಿ ಅಂತರ್ಗತವಾಗಿರುವ ಪ್ರಜಾಪ್ರಭುತ್ವವಾದಿ ಮೌಲ್ಯಗಳನ್ನು ಎತ್ತಿಹಿಡಿಯುವ ನೆಲೆಯಲ್ಲಿ ಪ್ರಕಟವಾಗಿವೆ. ಈ ಆಯಾಮಗಳು ವೈದಿಕತೆಯ ಧಾರ್ಮಿಕ ರಾಜಕಾರಣವನ್ನು ಮೀರುವ ನೆಲೆಯಲ್ಲಿ ಮೂಡಿಬಂದಿವೆ.

ಬ್ರಾಹ್ಮಣ ಧರ್ಮ ಮತ್ತು ರಾಜಕಾರಣ (ಬೌದ್ಧ ದರ್ಶನದ ಅಸ್ತಿತ್ವ ನಿರಾಕರಣೆ):

ಭಾತರದ ಚರಿತ್ರೆಯಲ್ಲಿ ಬ್ರಾಹ್ಮಣಧರ್ಮವು ತನ್ನ ಅಸ್ತಿತ್ವದ ಉಳಿವಿಗಾಗಿ ವ್ಯವಸ್ಥಿತ ರಾಜಕೀಯ ನೆಲೆಯೊಂದನ್ನು ನಿರ್ಮಿಸಿಕೊಂಡು ಬಂದಿದೆ. ಬ್ರಾಹ್ಮಣರು ಚರಿತ್ರೆಯಲ್ಲಿ ಎಂದು ಯುದ್ಧಮಾಡಿ ಹೋರಾಡಿದವರಲ್ಲ. ಶ್ರಮವಹಿಸಿ ದುಡಿದವರೂ ಅಲ್ಲ. ಆದರೂ ತಮ್ಮ ಅಸ್ತಿತ್ವಕ್ಕೆ ಧಕ್ಕೆಯಾಗದಂತೆ ಬಾಳಿ ಬದುಕಿದ್ದಾರೆ. ಇವರು ಸೃಷ್ಟಿಸಿಕೊಂಡು ಬಂದಿರುವ ಧಾರ್ಮಿಕ ನೆಲೆಯಲ್ಲಿ ಕ್ಷತ್ರಿಯ ರಾಜರನ್ನು ತನ್ನ ಅಧೀನದಲ್ಲಿಟ್ಟುಕೊಂಡು ರಾಜ್ಯಾಡಳಿತವನ್ನು ಮುನ್ನೆಡೆಸಿದ್ದಾರೆ. ಈ ಎಲ್ಲ ಸಂದರ್ಭದಲ್ಲೂ ತನ್ನದೆ ಆದ ರಾಜಕಾರಣದ ಮೂಲಕವಾಗಿ ಬ್ರಾಹ್ಮಣರು ಚರಿತ್ರೆಯುದ್ದಕ್ಕೂ ವೈಭವಯುತವಾಗಿ ಬಾಳಿ ಬದುಕಿದ್ದಾರೆ. ಚರಿತ್ರೆಯಲ್ಲಿ ಸರ್ವಾಧಿಕಾರಿ ಧೋರಣೆಯುಳ್ಳ ಬ್ರಾಹ್ಮಣಧರ್ಮಕ್ಕೆ ಪೆಟ್ಟು ನೀಡಿದವನು ಬುದ್ಧ. ಈತನು ಕಂಡುಕೊಂಡ ಮಾನವೀಯ ಧರ್ಮವು, ಬ್ರಾಹ್ಮಣಧರ್ಮದಿಂದ ಶೋಷಣೆಗೆ ಒಳಗಾಗಿದ್ದ ಬಹುಸಂಖ್ಯಾತ ಜನವರ್ಗಕ್ಕೆ ವಿಮೋಚನೆಯ ಹಾದಿಯನ್ನು ತೋರಿತು.

ಇದರಿಂದ ತತ್ತರಿಸಿ ಹೋದ ಬ್ರಾಹ್ಮಣಧರ್ಮವು ತನ್ನ ಚಾಣಕ್ಷತನದಿಂದಾಗಿ ಬೌದ್ಧಧರ್ಮವನ್ನು ತನ್ನ ತೆಕ್ಕೆಯೊಳ್ಳಕ್ಕೆ ತೆಗೆದುಕೊಂಡು, ಅದರಲ್ಲಿದ್ದ ಪುರೋಹಿತಶಾಹಿ ವಿರೋಧಿ ನಿಲುವುಗಳನ್ನು ಮಾರ್ಪಡಿಸಿತು. ಬುದ್ಧನ ನಂತರ ಬೌದ್ಧಧರ್ಮವನ್ನು ಸ್ಥಾಪಿತ ನೆಲೆಗೆ ತಳ್ಳಿತು. ಇಲ್ಲಿಯೂ ಕೂಡ ಪೂಜೆ, ಆರಾಧನೆಯಂತಹ ಕ್ರಿಯಾ ವಿಧಾನಗಳು ಜಾರಿಗೆ ಬಂದವು. ಬ್ರಾಹ್ಮಣ ಧರ್ಮದೊಂದಿಗೆ ಸಹಕರಿಸದ ಬೌದ್ಧರ ಹತ್ಯೆಗೂ ಸಿದ್ಧತೆಗಳು ನಡೆದವು. ಬ್ರಾಹ್ಮಣಶಾಹಿಯೊಂದಿಗೆ ಬೆರೆಯದ ವೈಚಾರಿಕ ನೆಲೆಯ ಬುದ್ಧನ ತತ್ವ ಸಿದ್ಧಾಂತಗಳನ್ನು ಗಡಿಪಾರು ಮಾಡಲಾಯಿತು. "ಜನರ ಮನಸ್ಸನ್ನು ವಶಪಡಿಸಿಕೊಳ್ಳಲು ಭಯ, ವೈಭವ ಮತ್ತು ರಹಸ್ಯಗಳ ಬಗ್ಗೆ ಜನಸ್ತೋಮದ ಲಾಲಸೆಯನ್ನು ತೃಪ್ತಿಪಡಿಸಲು ಬ್ರಾಹ್ಮಣರು ಏನೆಲ್ಲ ಮಾಡಿದರೂ, ಸ್ವಾಭಿಮಾನಿಯಾದ ಭಾರತೀಯನಿಗೆ ಜಾತಿ ಸಾಮ್ರಾಜ್ಯಶಾಹಿಯಾದ ಬ್ರಾಹ್ಮಣಧರ್ಮವನ್ನು ವಿರೋಧಿಸುವಷ್ಟು ಸಾಮರ್ಥ್ಯ ಇರುವವರೆಗೆ ಅದು ಅಂಗೀಕಾರ ಯೋಗ್ಯವಾಗಲಿಲ್ಲ. ಆದ್ದರಿಂದ ಭಾರತೀಯ ಅಥವಾ ವಿದೇಶಿ ರಾಜಕೀಯಾಧಿಕಾರ ಬ್ರಾಹ್ಮಣರ ವಿಶೇಷ ಹಕ್ಕುಗಳನ್ನು ಬಲತ್ಕಾರದಿಂದ ಬೆಂಬಲಿಸಿದ ಹೊರತು ದೇವಸ್ಥಾನಗಳಿಗಷ್ಟೇ ಬ್ರಾಹ್ಮಣ ಪ್ರಾಬಲ್ಯದ ಧ್ಯೇಯವನ್ನು ಸಾಧಿಸಲು ಶಕ್ತವಾಗಲಿಲ್ಲ. ಹಾಗಾಗಿ ಅವರು ರಾಜನನ್ನು ಅಧಿಕಾರಕ್ಕೆ ತೆಗೆದುಕೊಂಡಾಗಲೆಲ್ಲ, ಪ್ರಾರಂಭದ ಘಟ್ಟಗಳಲ್ಲಿ ಅಪ್ರತ್ಯಕ್ಷ ಮಾರ್ಗಗಳಿಂದ ಆಮೇಲೆ ಬಹಿರಂಗವಾದ ಹಿಂಸಾತ್ಮಕ ವಿಧಾನಗಳಿಂದ ಬುದ್ಧಧಮ್ಮವನ್ನು ಹಿಂಸಿಸಲು ಪ್ರಯತ್ನಿಸಿದರು. ಚಂದ್ರಗುಪ್ತ ಮೌರ್ಯನ ಪ್ರಪ್ರಥಮ ಭಾರತೀಯ ಚಕ್ರಾಧಿಪತ್ಯದಲ್ಲಿ ಕೌಟಿಲ್ಯನೆಂಬ ಬ್ರಾಹ್ಮಣನು ಪ್ರಧಾನಮಂತ್ರಿಯಾಗಿ ನಿರ್ದೇಶಕ ಶಕ್ತಿಯಾಗಿದ್ದನು. ಅವನ ಪ್ರಖ್ಯಾತವಾದ 'ಅರ್ಥಶಾಸ್ತ್ರ' ಬುದ್ಧಧಮ್ಮದ ಬೆಳವಣಿಗೆಯನ್ನು ತಡೆಗಟ್ಟಲು ಕೆಲವು ಯುಕ್ತಿವಂತ ನಿಯಮಗಳನ್ನು ಒಳಗೊಂಡಿದೆ."[೯] ಹೀಗೆ ಬ್ರಾಹ್ಮಣಧರ್ಮವು ತನ್ನ ಅಸ್ತಿತ್ವಕ್ಕಾಗಿ ಉಳಿವಿಗಾಗಿ, ತನ್ನ ಅಸ್ತಿತ್ವಕ್ಕೆ ಧಕ್ಕೆ ತಂದ ಬುದ್ಧಧರ್ಮದ ಮೇಲೆ ಆಕ್ರಮಣಕಾರಿ ರಾಜಕಾರಣವನ್ನು ನಡೆಸಿಕೊಂಡು ಬಂದಿದೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುವ ಕೆಲವು ವೈದಿಕಧಾರೆಗಳು ಬೌದ್ಧಧರ್ಮವನ್ನು ರಾಜಕೀಯ ನೆಲೆಯಲ್ಲಿ ವಿರೋಧಕ್ಕೆ ಗುರಿಪಡಿಸಿದರೆ, ಮತ್ತೇ ಕೆಲವು ಧಾರೆಗಳು ಬೌದ್ಧಧರ್ಮವನ್ನು ವೈದಿಕಶಾಹಿಯೊಳಗೆ ಸೆಳೆದುಕೊಳ್ಳುವ ನೆಲೆಗಟ್ಟಿನಲ್ಲಿ ವ್ಯಕ್ತವಾಗಿವೆ. ಇಂದು ವಿಚಾರವಾದದ ಅಡಿಯಲ್ಲಿ ವೈದಿಕತೆಯು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವ ತುರ್ತಿನಲ್ಲಿರುವಾಗ, ಅದನ್ನು ಉಳಿಸಿಕೊಳ್ಳುವ ಮತ್ತು ಬೌದ್ಧ ದರ್ಶನಕ್ಕೆ ಪರ್ಯಾಯ ನೆಲೆಯಲ್ಲಿ ಪುನರುಜ್ಜೀವನಗೊಳಿಸುವ ವೈದಿಕ ಮಾದರಿಯೊಂದು ತಲೆಎತ್ತುತ್ತಿದೆ. ಈ ನೆಲೆಯಲ್ಲಿ ಬಹುತೇಕ ಚಿಂತನಧಾರೆಗಳು ಕಾರ್ಯಪ್ರವೃತ್ತವಾಗಿರುವುದು ಕಂಡುಬರುತ್ತದೆ. ಈ ವೈದಿಕ ಧಾರೆಗಳಲ್ಲಿ ಅಂತರ್ಗತವಾಗಿರುವ ಬೌದ್ಧದರ್ಶನ ವಿರೋಧಿ ರಾಜಕೀಯ ಆಯಾಮಗಳನ್ನು ಈ ಮುಂದಿನಂತೆ ಗಮನಿಸಬಹುದು.

ವೈದಿಕಧರ್ಮವು ಆಕ್ರಮಣ ಪ್ರವೃತ್ತಿಯನ್ನು ಸನಾತನ ಕಾಲದಿಂದಲೂ ಮುಂದುವರೆಸಿಕೊಂಡು ಬಂದಿದೆ. ಯಾವುದರಿಂದ ತನ್ನ ಸಂಸ್ಕೃತಿ, ಆಚಾರ, ವಿಚಾರಕ್ಕೆ ಧಕ್ಕೆಯಾಗುವುದೊ ಅದರ ಮೇಲೆ ಆಕ್ರಮಣ ನಡೆಸುವ, ಸಮಾಜದಲ್ಲಿ ಹೆಚ್ಚು ಪ್ರಚಾರದಲ್ಲಿರುವ ಉತ್ತಮ ಮೌಲ್ಯಗಳನ್ನು ತನ್ನ

ತೆಕ್ಕೆಯೊಳಗೆ ಸೆಳೆದುಕೊಳ್ಳುವ ಗುಣ ವೈದಿಕ ಸಂಸ್ಕೃತಿಯದಾಗಿದೆ. ಈ ಆಕ್ರಮಣ ರಾಜಕಾರಣವು ಚರಿತ್ರೆಯುದ್ದಕ್ಕೂ ನಡೆದುಕೊಂಡು ಬಂದಿದೆ. ಇದರ ಛಾಯೆ ಆಧುನಿಕ ಸಂದರ್ಭದ ವೈಚಾರಿಕ ಚಿಂತನೆಗಳನ್ನು ಬಿಟ್ಟಿಲ್ಲ. ಇದಕ್ಕೆ ನಿದರ್ಶನವೆಂಬಂತೆ ಕನ್ನಡ ಚಿಂತನ ಸಾಹಿತ್ಯದಲ್ಲಿ ಹಲವಾರು ಅಂಶಗಳು ಕಾಣಿಸುತ್ತವೆ. ವೈದಿಕತೆಯ ಅಸಮಾನ ತಾತ್ವಿಕ ಸಿದ್ಧಾಂತಕ್ಕೆ ಪ್ರಬಲವಾದ ಪ್ರತಿರೋಧವನ್ನು ನೀಡಿದವನು ಬುದ್ಧ. ಬುದ್ಧನ ನಂತರದಲ್ಲಿ ಹಲವಾರು ದಾರ್ಶನಿಕರು ಇದರ ಸಾರವನ್ನು ಎತ್ತಿಹಿಡಿಯುವ ಮೂಲಕವಾಗಿ ವೈದಿಕ ರಾಜಕಾರಣವನ್ನು ವಿರೋಧಿಸುವ ಬಗೆಯಲ್ಲಿ ಹೋರಾಟವನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಬ್ರಿಟಿಷರು ಜಾರಿಗೆ ತಂದ 'ಸಾರ್ವತ್ರಿಕ ಶಿಕ್ಷಣ ನೀತಿ'ಯಿಂದಾಗಿ ಶೂದ್ರ ಸಮುದಾಯದಲ್ಲಿ ಹಲವಾರು ದಾರ್ಶನಿಕರು ಜನ್ಮತಳೆದು, ವೈದಿಕತೆಯ ತಂತ್ರಗಾರಿಕೆ ಮತ್ತು ರಾಜಕಾರಣವನ್ನು ಬಯಲು ಮಾಡುತ್ತ ಬಂದಿದ್ದಾರೆ. ಇದರಿಂದ ವೈದಿಕರಿಗೆ ಮತ್ತು ವೈದಿಕ ಧರ್ಮಕ್ಕೆ ತೀವ್ರ ಪ್ರತಿರೋಧಗಳು ಎದುರಾಗುತ್ತಿವೆ. ಇಂತಹ ಸಂದರ್ಭದಲ್ಲಿ ವೈದಿಕತೆಯನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿ ಕೆಲವು ಬುದ್ಧಿಜೀವಿಗಳು ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸುತ್ತ ಬಂದಿದ್ದಾರೆ. ಈ ವೈದಿಕ ಚಿಂತನಧಾರೆಗಳು ತಮಗೆ ಎದುರಾಳಿ ಎಂದು ಭಾವಿಸಿರುವ ಬೌದ್ಧಧರ್ಮ ಹಾಗೂ ದರ್ಶನವನ್ನು ತಮ್ಮ ಕಕ್ಷೆಯೊಳಗೆ ಸೆಳೆದುಕೊಳ್ಳುವ ನೆಲೆಯಲ್ಲಿ ಚಿಂತನೆ ಮಾಡುವ ಮಾದರಿಯು ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುತ್ತದೆ.

ಕನ್ನಡದ ಸಂಶೋಧಕ ಮತ್ತು ಚಿಂತಕರಾದ ಎಸ್.ಶ್ರೀಕಂಠಶಾಸ್ತ್ರಿಯವರು ವೈದಿಕತೆಯನ್ನು ಸಮರ್ಥಿಸಿಕೊಳ್ಳುವ, ಬೌದ್ಧಧರ್ಮದ ಅಸ್ತಿತ್ವವನ್ನು ನಿರಾಕರಿಸುವ ನೆಲೆಯಲ್ಲಿ ವ್ಯಕ್ತಪಡಿಸುವ ಚಿಂತನೆಗಳು ವೈದಿಕ ರಾಜಕಾರಣದ ಮಾದರಿಯಿಂದ ಕೂಡಿವೆ. "ವೈದಿಕ ಮತದಲ್ಲಿ ಚಕ್ರವು ಮುಖ್ಯ ಪಾತ್ರವಹಿಸಿದ್ದಿತ್ತು. ಜೈನರೂ ಬೌದ್ಧರೂ ಈ ಪ್ರಾಚೀನ ಚಿಹ್ನೆಗಳನ್ನೇ ತಮ್ಮ ಮತಗಳಿಗೆ ಅಳವಡಿಸಿಕೊಂಡರು. ಬೌದ್ಧರ ಸಮಸ್ತ ಚಿಹ್ನೆಗಳೂ ವೈದಿಕ ಮತದಿಂದ ಬಂದವೆಂದು ಡಾ.ಆನಂದ ಕುಮಾರಸ್ವಾಮಿ ಮುಂತಾದವರು ಸಪ್ರಮಾಣವಾಗಿ ತೋರಿಸಿರುವರು. ತ್ರಿಶೂಲದಿಂದ ತ್ರಿರತ್ನ ಚಿಹ್ನೆ, ರಾಜಸೂಯ ಮುಂತಾದ ವೈದಿಕ ಯಜ್ಞಗಳಲ್ಲಿ ಪ್ರಸಿದ್ಧವಾದ ರಥಚಕ್ರ- ವಿಷ್ಣುಚಕ್ರದಿಂದ ಬೌದ್ಧರ "ಧಮ್ಮ"ಚಕ್ರ, ಗಜ, ಸಿಂಹ, ನನ್ದಿಪದ, ಸ್ವಸ್ತಿಕ ಇತ್ಯಾದಿಗಳೆಲ್ಲವೂ ಗ್ರಹಿಸಲ್ಪಟ್ಟವು."[೧೦] ಇಲ್ಲಿ ಬುದ್ಧನ ಧರ್ಮದಲ್ಲಿ ಕಂಡುಬರುವ ಈ ಎಲ್ಲ ಅಂಶಗಳು ವೈದಿಕರ ಕೊಡುಗೆ ಎಂಬುದಾಗಿ ಲೇಖಕರು ಪ್ರತಿಪಾದನೆ ಮಾಡುತ್ತಾರೆ. ವೈದಿಕ ರಾಜಕಾರಣವು ಯಾವಾಗಲೂ ಆಕ್ರಮಣಕಾರಿ ಧೋರಣೆಗಳಿಂದ ಕೂಡಿರುತ್ತವೆ ಎಂಬುದಕ್ಕೆ ಶ್ರೀಕಂಠಶಾಸ್ತ್ರಿಯವರ ಚಿಂತನೆಗಳು ಮತ್ತಷ್ಟು ಸಮರ್ಥನೆಯನ್ನು ನೀಡುತ್ತವೆ. ಬುದ್ಧನ ಎದುರು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಭರದಲ್ಲಿದ್ದ ವೈದಿಕತೆಯು ಬೌದ್ಧಧರ್ಮದ ಮೇಲೆ ಆಕ್ರಮಣ ನಡೆಸಿ, ಬೌದ್ಧಧರ್ಮದ ಕುರುಹುಗಳನ್ನು ತನ್ನ ವಶಕ್ಕೆ ಪಡೆದುಕೊಂಡಿದೆ ಎಂಬುದು ಹಲವಾರು ಪ್ರಗತಿಪರ ದಾರ್ಶನಿಕರ ವಾದವಾಗಿದೆ. ಆದರೆ ಈ ಚಿಂತನೆಗಳಿಗೆ ಪರ್ಯಾಯವಾಗಿ ಮತ್ತು ತಮ್ಮ ಅಸ್ತಿತ್ವದ ಉಳಿವಿನ ನೆಲೆಯಲ್ಲಿ ಶಾಸ್ತ್ರಿಯವರು ತಮ್ಮ ವಾದವನ್ನು ಮಂಡಿಸಿದ್ದಾರೆ. ಬೌದ್ಧಧರ್ಮದಲ್ಲಿ

ಕಂಡುಬರುವ ಪ್ರತಿಮಾತ್ಮಕವಾದ ಚಿಹ್ನೆಗಳೆಲ್ಲ ವೈದಿಕ ಸಂಸ್ಕೃತಿಗೆ ಸಂಬಂಧಿಸಿದವು ಎಂಬುದು ಇವರ ಚಿಂತನೆಯ ಸಾರವಾಗಿದೆ.

ವೈದಿಕ ಸಂಸ್ಕೃತಿಯನ್ನು ಸಮರ್ಥಿಸಿಕೊಳ್ಳಲು ಯತ್ನಿಸುವ ಶ್ರೀಕಂಠಶಾಸ್ತ್ರಿಯವರ ವಾದವು, ಬೌದ್ಧಧರ್ಮದಲ್ಲಿ ಕಂಡುಬರುವ ಕುರುಹುಗಳು ವೈದಿಕರಿಂದ ಪಡೆದವುಗಳು ಎಂಬಷ್ಟಕ್ಕೆ ನಿಲ್ಲುವುದಿಲ್ಲ. ಭಾರತದಲ್ಲಿ ಬೌದ್ಧಧರ್ಮವು ರಾಜಧರ್ಮವಾಗಿ ಬಾಳಿ ಬೆಳಗಿದ ಬಗೆಯನ್ನು ನಿರಾಕರಣೆಗೆ ಗುರಿಪಡಿಸುವ ನೆಲೆಯಲ್ಲಿ ಮುಂದುವರೆಯುತ್ತವೆ. "ಅಶೋಕನು ಕೂಡ ಬೌದ್ಧನಾಗಿರಲಿಲ್ಲವೆಂಬುದಕ್ಕೆ ಪ್ರಬಲ ಆಧಾರಗಳಿವೆ. ಬೌದ್ಧಗ್ರಂಥಗಳಲ್ಲಿ ಕಂಡುಬರುವ ಅಶೋಕನ ಚರಿತ್ರೆ, ಪೌರಾಣಿಕ ಮತ್ತು ಶಾಸನಗಳ ಆಧಾರಗಳಿಗೆ ಅನೇಕ ಅಂಶಗಳಲ್ಲಿ ತೀರ ವ್ಯತಿರಿಕ್ತವಾಗಿದೆ. ಭಾರತೀಯ ಸಂಸ್ಕೃತಿಯ ಮೂಲ ತತ್ವಕ್ಕೆ ಅನುಸಾರವಾಗಿ ಅಶೋಕನು ಎಲ್ಲ ಮತಗಳನ್ನು ಆಧರಿಸಿದನು. ಅದೇ ತತ್ವವನ್ನನುಸರಿಸಿ ಬೌದ್ಧರ ಪವಿತ್ರ ಕ್ಷೇತ್ರಗಳನ್ನು ಸಂದರ್ಶಿಸಿ, ಬೌದ್ಧ ಸಂಘಗಳಿಗೆ ಮಾತ್ರ ಬುದ್ಧ ಪ್ರವಚನಗಳನ್ನು ಮನನ ಮಾಡಬೇಕೆಂದು ಹೇಳಿರುವನು. ಇದರಿಂದ ಅವನು ಕೇವಲ ಬೌದ್ಧ ಗ್ರಂಥಗಳನ್ನು ಅಧ್ಯಯನ ಮಾಡಿದ್ದನೆಂದು ಮಾತ್ರ ಹೇಳಬಹುದು."[೧೧] ಇದರಿಂದ ಅಶೋಕ ಸಂಪೂರ್ಣವಾಗಿ ಬೌದ್ಧಧರ್ಮೀಯನಾಗಿದ್ದ ಎಂದು ಹೇಳುವುದು ಸೂಕ್ತವಲ್ಲ ಎಂಬುದು ಲೇಖಕರ ಧೋರಣೆಯಾಗಿದೆ. ಇಲ್ಲಿ ವ್ಯಕ್ತವಾಗಿರುವ ಚಿಂತನೆಗಳಲ್ಲಿ ಇತಿಹಾಸ ಪ್ರಸಿದ್ಧ ರಾಜನಾದ ಅಶೋಕನನ್ನು ಬೌದ್ಧಧರ್ಮದಿಂದ ಬಿಡುಗಡೆಗೊಳಿಸಬೇಕೆಂಬ ಆಶಯಗಳಿವೆ. ಇದಕ್ಕೆ ಕಾರಣವೆಂದರೆ, ಇಂದು ಬೌದ್ಧಧರ್ಮವು ಜಾಗತಿಕ ಧರ್ಮವಾಗಿ ಹೆಸರುಗಳಿಸಲು ಅಶೋಕ ಚಕ್ರವರ್ತಿಯ ಕೊಡುಗೆಯು ಅಪಾರವಾಗಿದೆ. ಇದರಿಂದಾಗಿ ವೈದಿಕಧರ್ಮದ ಪ್ರಗತಿಗೆ ತಡೆಯುಂಟಾಗಿದೆ. ಆದ್ದರಿಂದಾಗಿ ಅಶೋಕ ಮತ್ತು ಬೌದ್ಧಧರ್ಮದ ನಡುವಿನ ಸಂಬಧದ ಕೊಂಡಿಯನ್ನು ತಪ್ಪಿಸಿದರೆ ಬೌದ್ಧಧರ್ಮದ ಬಗ್ಗೆ ಜನತೆಗೆ ನಿರ್ಲಕ್ಷ್ಯ ಉಂಟಾಗಿ, ಸನಾತನ ಧರ್ಮದ ಕಡೆ ಆಕರ್ಷಿತರಾಗುತ್ತಾರೆ ಎಂಬುದು ಈ ಚಿಂತನಧಾರೆಯ ಹಿಂದಿನ ರಾಜಕಾರಣವಾಗಿದೆ. ಆದ ಕಾರಣ ಶಾಸ್ತ್ರಿಯವರ ಈ ಚಿಂತನೆಗಳು ಅಶೋಕನು ಬೌದ್ಧಧರ್ಮೀಯನಾಗಿರಲಿಲ್ಲ ಎಂಬ ವಾದವನ್ನು ಸಮರ್ಥಿಸಲು ಹೊರಟಿವೆ.

ಅಶೋಕ ಚಕ್ರವರ್ತಿಯು ತನ್ನ ಹಿಂಸಾತ್ಮಕ ನೀತಿಯ ಯುದ್ಧಧರ್ಮವನ್ನು ತೊರೆದು, ಶಾಂತಿಯುತವಾದ ಧರ್ಮಕ್ಕೆ ಶರಣಾದ ಬಗೆಗೆ ಚರಿತ್ರೆಯಲ್ಲಿ ಹಲವಾರು ನಿದರ್ಶನಗಳಿವೆ. ಅಶೋಕನು ಬೌದ್ಧಧರ್ಮಕ್ಕೆ ಶರಣಾಗಿದ್ದು ಮಾತ್ರವಲ್ಲದೆ, ತಾನು ಬೌದ್ಧ ಉಪಾಸಕನಾಗಿದ್ದ ಬಗೆಗೆ ಶಾಸನಗಳಲ್ಲಿ ಹೇಳಿಕೊಂಡಿದ್ದಾನೆ. ಇದಕ್ಕೆ ಸಮರ್ಥನೆಯನ್ನು ಒದಗಿಸುವ ನೆಲೆಯಲ್ಲಿ ಸಾರಸ್ವತ ಬ್ರಾಹ್ಮಣ ಸಮುದಾಯದಿಂದಲೆ ಜನ್ಮತಳೆದು ಬಂದ ಧರ್ಮಾನಂದ ಕೊಸಾಂಬಿಯವರು ಶ್ರಮಿಸಿದ್ದಾರೆ. ವೈಚಾರಿಕ ಚಿಂತಕರು, ದಾರ್ಶನಿಕರು ಹಾಗೂ ಬೌದ್ಧ ಉಪಾಸಕರಾಗಿರುವ ಇವರು ಶಾಸನಗಳ ಮೂಲಕ ಅಶೋಕನು ಬೌದ್ಧಧರ್ಮೀಯನಾಗಿದ್ದ ಮಾತ್ರವಲ್ಲದೆ, ಬೌದ್ಧ ಉಪಾಸಕನಾಗಿದ್ದ ಎಂಬ ಸತ್ಯವನ್ನು ತೋರಿಸಿಕೊಟ್ಟಿದ್ದಾರೆ. ಅಶೋಕ ಬೌದ್ಧಧರ್ಮೀಯನಾಗಿ ಶಾಂತಿಯುತ ಬದುಕಿಗಾಗಿ ಮುನ್ನಡೆದ ಬಗೆಯನ್ನು 'ಸಿದ್ಧಾಪುರ ಶಾಸನ'ದ ಮೂಲಕವಾಗಿ ಧರ್ಮಾನಂದ ಕೊಸಾಂಬಿಯವರು

ಸಾಬೀತುಪಡಿಸುವ ಬಗೆಯು ಈ ಮುಂದಿನಂತಿದೆ; "ದೇವನಾಂಪ್ರಿಯನು ಆಜ್ಞೆಯನ್ನು ವಿಧಿಸುತ್ತಾನೆ: ನಾನು ಅನುಯಾಯಿಯಾಗಿ (ಬುದ್ಧನ) ಎರಡೂವರೆ ವರ್ಷಗಳು ಕಳೆದು ಹೋಗಿವೆ; ಆದರೆ ಒಂದು ವರ್ಷ ನಾನು ಹೆಚ್ಚು ಪ್ರಯತ್ನ ನಡೆಸಲಿಲ್ಲ. ವರ್ಷ ಕಳೆದ ನಂತರ ನಾನು ಸಂಘದಲ್ಲಿ (ಬೌದ್ಧ) ಪ್ರವೇಶ ಪಡೆದೆ ಮತ್ತು ನನ್ನನ್ನು ತೊಡಗಿಸಿಕೊಂಡೆ. ಈ ಅವಧಿಯಲ್ಲಿ ನಾನು ಇಡಿ ಜಂಬೂದ್ವೀಪದಲ್ಲಿ (ಅಂದರೆ ಭಾರತದಲ್ಲಿ) ಸತ್ಯವೆಂದು ನಂಬಿರುವ ಎಲ್ಲಾ ದೇವರುಗಳು, ಅವರ ಭಕ್ತರೊಂದಿಗೆ ಮಿಥ್ಯರೆಂಬುದನ್ನು ತಿಳಿದುಕೊಂಡೆ. ಇದು (ನನ್ನ) ಪ್ರಯತ್ನಗಳ ಫಲವಾಗಿದೆ. ಇದನ್ನು ಸಂಪತ್ತಿನ ಮೂಲಕ ಪಡೆಯುವುದು ಸಾಧ್ಯವಿಲ್ಲ. ಬಡ ಮನುಷ್ಯನು ಕೂಡ ಪ್ರಯತ್ನಪಟ್ಟಲ್ಲಿ ಅತ್ಯಂತ ಹೆಚ್ಚಿನ ಸ್ವರ್ಗಸುಖ ಪಡೆಯುವುದಕ್ಕೆ ಸಾಧ್ಯವಿದೆ. ಇಂತಹ ಪ್ರಯತ್ನಗಳನ್ನು ಬಡವರು ಮತ್ತು ಶ್ರೀಮಂತ ಜನರು ಮಾಡಬೇಕೆಂದು ಈ ವಿಷಯವನ್ನು ಸಾರ್ವಜನಿಕಗೊಳಿಸಲಾಗಿದೆ. ಇದನ್ನು ಸುತ್ತಮುತ್ತಲಿನ ಸಾಮ್ರಾಜ್ಯಗಳ ಜನರು ಅರ್ಥಮಾಡಿಕೊಳ್ಳಬೇಕು ಮತ್ತು ಈ ಪ್ರಯತ್ನವು (ನನ್ನ) ದೀರ್ಘಕಾಲಿಕವೆನ್ನುವುದು ಸಾಬೀತಾಗಬೇಕು."[೧೨] ಎಂಬ ಅಶೋಕನ ಶಾಸನದ ಸಾರವು, ಆತನು ಬೌದ್ಧಧರ್ಮವನ್ನು ಸ್ವೀಕರಿಸಿರುವ ಬಗೆಗೆ ಆಧಾರವನ್ನು ಒದಗಿಸುತ್ತದೆ. ಆದರೆ ಚಿಂತಕರಾದ ಶ್ರೀಕಂಠಶಾಸ್ತ್ರಿಯವರಿಗೆ ಮಾತ್ರ ಅಶೋಕ ಬೌದ್ಧಧರ್ಮಿಯನಾಗಿ ಕಂಡುಬರುವುದಿಲ್ಲ. ಅಶೋಕನು ಬೌದ್ಧಧರ್ಮದ ಪ್ರಸಾರಕ್ಕಾಗಿ ತನ್ನ ಮಕ್ಕಳನ್ನೆ ವಿದೇಶಗಳಿಗೆ ಧರ್ಮ ಪ್ರಚಾರಕ್ಕಾಗಿ ಕಳುಹಿಸಿಕೊಟ್ಟ ಬಗೆಯು ಆತನು ಬೌದ್ಧಧರ್ಮದ ಬಗೆಗೆ ತಳೆದ ನಿಲುವುಗಳನ್ನು ಅನಾವರಣಗೊಳಿಸುತ್ತವೆ. ಆದರೆ ವೈದಿಕಧಾರೆಗಳು ಈ ಎಲ್ಲ ವಾಸ್ತವಗಳನ್ನು ಮರೆಮಾಚುವ ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸುತ್ತವೆ. ಇದು ವೈದಿಕರ ಬೌದ್ಧ ವಿರೋಧಿ ನೀತಿಯ ರಾಜಕಾರಣಗಳಲ್ಲೊಂದಾಗಿದೆ.

ಭಾರತದಲ್ಲಿ ಸನಾತನವಾದವನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿ ಹಲವು ವೈದಿಕ ಚಿಂತನಧಾರೆಗಳು ಕಂಡುಬರುತ್ತವೆ. ಇವು ಸಮಾನತೆಯ ತತ್ವ ಸಿದ್ಧಾಂತಗಳಿಗೆ ತೀವ್ರವಾದ ಪ್ರತಿರೋಧವನ್ನು ವ್ಯಕ್ತಪಡಿಸುತ್ತ ಬಂದಿವೆ. ಒಂದು ವೇಳೆ ಪ್ರತಿರೋಧ ಮಾಡಲು ಸಾಧ್ಯವಾಗದ ಸಂದರ್ಭದಲ್ಲಿ ಅನುಸಂಧಾನಕ್ಕೂ ಮುಂದಾಗಿವೆ. ಇದು ಬ್ರಾಹ್ಮಣ ಧರ್ಮಕ್ಕಿರುವ ವಿಶೇಷ ಗುಣ. ಇದು ಚರಿತ್ರೆಯುದ್ಧಕ್ಕೂ ಬದಲಾದ ಕಾಲಕ್ಕೆ ತಕ್ಕಂತೆ ತನ್ನ ಗುಣಗಳನ್ನು ಬದಲಾಯಿಸಿಕೊಂಡು ಬಂದಿದೆ. ಬ್ರಾಹ್ಮಣಧರ್ಮದ ವಿರುದ್ಧ ಶಾಂತಿಯುತ ಸಮರ ಸಾರಿದ ಬುದ್ಧನನ್ನು ಹಾಗೂ ಬೌದ್ಧಧರ್ಮವನ್ನು ಕೂಡ ಆಕ್ರಮಣ ರಾಜಕಾರಣದಿಂದಾಗಿ ತನ್ನ ತೆಕ್ಕೆಯೊಳಗೆ ಸೇರಿಸಿಕೊಂಡಿದೆ. ಸಾಮಾಜಿಕ ಅಸಮಾನತೆಯು ತಾರಕಕ್ಕೆ ಹೋದ ಸಂದರ್ಭದಲ್ಲಿ ಬುದ್ಧನು ಧರ್ಮದ ವಿರುದ್ಧ ಹೋರಾಟಕ್ಕೆ ಮುಂದಾದನು. ಬುದ್ಧನ ಈ ಹೋರಾಟದ ಅಲೆಯಲ್ಲಿ ಬ್ರಾಹ್ಮಣ ಧರ್ಮಕ್ಕೆ ನೆಲೆಯೆ ಇಲ್ಲದಂತಾಯಿತು. ಆದರೆ ಈ ಬ್ರಾಹ್ಮಣಧಾರೆಗಳು ಬುದ್ಧನ ಈ ಹೋರಾಟವನ್ನು ಭಿನ್ನ ನೆಲೆಯಲ್ಲಿ ಅರ್ಥೈಸುವ ಮೂಲಕ, ತಮ್ಮ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿವೆ. ಈ ಕುರಿತು ಸಾನೆ ಗುರೂಜಿಯವರ ಪ್ರತಿಕ್ರಿಯೆ ಹೀಗಿದೆ; "ಯಾವ ಸಮಾಜದಲ್ಲಿ ತಪಸ್ಸು ಇದೆ? ಕಳಕಳಿ ಇದೆ? ಸತತ ಹೋರಾಟವಿದೆ? ಧ್ಯೇಯವನ್ನು ಕಾಣುವ ತೀವ್ರತೆ ಇದೆ? ಅಂಥ ಸಮಾಜದಲ್ಲಿಯೇ ಮಹಾಪುರುಷರ

ಉಗಮವು. ಭಗವಾನ್ ಬುದ್ಧನು ಜನ್ಮವೆತ್ತುವ ಮೊದಲು ನಮ್ಮೀ ಭಾರತವರ್ಷದಲ್ಲಿ ಒಂದು ಪ್ರಚಂಡ ವಿಚಾರ ಕ್ರಾಂತಿಯು ನಡೆದಿತ್ತು. ಅಖಂಡವಾಗಿ ಸತ್ಯದ ಶೋಧ ನಡೆದೇ ಇತ್ತು. ಆ ಸತ್ಯಶೋಧಕ್ಕಾಗಿ ಅಲ್ಲಲ್ಲಿ ಅನೇಕ ಅಭ್ಯಾಸಕೂಟಗಳು ಸತತ ಕೆಲಸ ನಡೆಸಿದ್ದವು. ಅಂತಹ ಪ್ರಚಂಡವಾದ ವಿಚಾರ ಕ್ರಾಂತಿಯ ಕಾಲದಲ್ಲಿ ಭಗವಾನ್ ಬುದ್ಧನು ಅವತರಿಸಿ ತಪ್ತ ಹೃದಯದ ಆಗಿನ ಆ ಸಮಾಜಕ್ಕೆ ಅನಂತ ಸಮಾಧಾನವನ್ನು ನೀಡಿದನು. ಆಗಿನ ಕ್ರಾಂತಿಯ ಮಹಾತೆರೆಯ ನೊರೆಯೆಂದರೆ ಭಗವಾನ್ ಬುದ್ಧ."[೧೩] ಕ್ರಿಸ್ತಪೂರ್ವದಲ್ಲಿ ಬ್ರಾಹ್ಮಣಧರ್ಮಕ್ಕೆ ಪರ್ಯಾಯವಾಗಿ ಸಮಾನತೆಯ ನೆಲೆಯಲ್ಲಿ ಜೀವಪರವಾದ ಧರ್ಮವನ್ನು ಬುದ್ಧ ಪರಿಚಯಿಸಿದನು. ಆದರೆ ಬುದ್ಧನ ವೈಚಾರಿಕತೆಯ ಎದುರು ತನ್ನ ಅಸ್ತಿತ್ವವನ್ನು ಕಳೆದುಕೊಂಡ ಬ್ರಾಹ್ಮಣ ಮತಕ್ಕೆ ತಾತ್ವಿಕ ನೆಲೆಯಲ್ಲಿ ಬುದ್ಧನನ್ನು ವಿರೋಧಿಸಿ ತನ್ನ ನೆಲೆಯನ್ನ ಕಂಡುಕೊಳ್ಳಲು ಸಾಧ್ಯವಾಗದೆ, ಬುದ್ಧನ ತತ್ವ ಸಿದ್ಧಾಂತಗಳೊಂದಿಗೆ ಅನುಸಂಧಾನಗೊಂಡಿದೆ. ಈ ಅನುಸಂಧಾನ ಕ್ರಮದಲ್ಲಿ ವೈದಿಕ ವಿರೋಧಿಯಾದ ಬುದ್ಧನನ್ನು, ವೈದಿಕ ಕಕ್ಷೆಯೊಳಗೆ ಸೆಳೆದುಕೊಳ್ಳುವ ನೆಲೆಗಳು ಕಂಡುಬರುತ್ತವೆ. ಆದ್ದರಿಂದ ಈ ಚಿಂತನಧಾರೆಗಳು ಬುದ್ಧನನ್ನು ವೈಚಾರಿಕ ಕ್ರಾಂತಿಯ 'ಮಹಾತೆರೆಯ ನೊರೆ' ಎಂದು ಗುರುತಿಸುತ್ತವೆ. ಆದರೆ ಈ ವೈಚಾರಿಕ ಕ್ರಾಂತಿಯು ಬ್ರಾಹ್ಮಣ (ವೈದಿಕ) ಧರ್ಮದ ವಿರುದ್ಧವಾಗಿತ್ತು ಎಂಬ ಅಂಶವನ್ನು ಎಲ್ಲಿಯೂ ಪ್ರಸ್ತಾಪಿಸುವುದಿಲ್ಲ. ಹೀಗಾಗಿ ಇವು ವೈದಿಕ ಸಂಸ್ಕೃತಿಯ ರಕ್ಷಣಾತ್ಮಕ ವಾದಗಳಾಗಿ ಕಾಣುತ್ತವೆ.

ಬೌದ್ಧಧರ್ಮವು ಸಾಮಾಜಿಕವಾಗಿ ಹಿಂದುಳಿದವರು ಹಾಗೂ ಅರಣ್ಯವಾಸಿಗಳಿಗೆ ಧರ್ಮವನ್ನು ಪ್ರಚಾರ ಮಾಡಲು ಮುಂದಾಗಿ, ಇದರ ಜೊತೆಯಲ್ಲಿಯೇ ಅವರ ಬದುಕನ್ನು ಆರ್ಥಿಕವಾಗಿ ಸದೃಢಗೊಳಿಸುವ ನೆಲೆಯಲ್ಲಿ ಶ್ರಮಿಸಿತು. ಈ ಕಾರ್ಯದಲ್ಲಿ ಬೌದ್ಧ ಭಿಕ್ಕುಗಳು ಪ್ರಮುಖ ಪಾತ್ರವನ್ನು ನಿರ್ವಹಿಸಿದರು. ಇದರಿಂದಾಗಿ ಅರಣ್ಯವಾಸಿ ಸಮುದಾಯಗಳು ಸುಧಾರಣೆಯನ್ನು ಕಂಡುಕೊಂಡು, ಸ್ವಯಂಪೋಷಕ ಗ್ರಾಮ ವ್ಯವಸ್ಥೆಯನ್ನು ಕಂಡುಕೊಂಡವು. ಈ ಸಂದರ್ಭಕ್ಕೆ ಬ್ರಾಹ್ಮಣರು ಬುಡಕಟ್ಟು ಸಮುದಾಯದ ಸ್ವಯಂ ಪೋಷಕ ಗ್ರಾಮದ ಜನರೊಂದಿಗೆ ಸಂಬಂಧಕ್ಕೆ ಮುಂದಾಗಿ, ಬೌದ್ಧರನ್ನು ಹತ್ತಿಕ್ಕುವ ಕಾರ್ಯಕ್ಕೆ ಮುಂದಾದರು. "ಬೌದ್ಧಕ್ಕೆ ಬದಲಾಗಿ ಬಂದ ಬ್ರಾಹ್ಮಣ ಕುಲವ್ಯವಸ್ಥೆಯು ಸ್ವಯಂ ಪೋಷಕ ಗ್ರಾಮಗಳಿಗೆ ಸರಿ ಹೊಂದಿಕೆಯೆನಿಸಿತ್ತಾದ್ದರಿಂದ ಅದು ಪ್ರಬಲಗೊಳ್ಳಲು ಮೊದಲಾಯಿತು. ಒಂದು ಸಾವಿರ ವರ್ಷಗಳ ಕಾಲ ಘರ್ಷಣೆ ನಡೆದು ಕೊನೆಗೊಮ್ಮೆ ಬೌದ್ಧವು ಇಲ್ಲವಾಗಿ ಬ್ರಾಹ್ಮಣವು ಉಳಿಯಿತು."[೧೪] ಹೀಗೆ ಬೌದ್ಧಧರ್ಮವನ್ನು ಹತ್ತಿಕ್ಕುವ ಮೂಲಕ ಆರ್ಥಿಕವಾಗಿ ತನ್ನ ನೆಲೆಯನ್ನು ಭದ್ರಪಡಿಸಿಕೊಳ್ಳುವ ಆಕ್ರಮಿತ ರಾಜಕಾರಣದ ಮಾದರಿಯು ವೈದಿಕಧರ್ಮದಲ್ಲಿ ಕಂಡುಬರುತ್ತದೆ.

ಸಮಕಾಲೀನ ಸಂದರ್ಭದಲ್ಲಿ ಪ್ರಗತಿಪರ ಧಾರೆಗಳು ವೈದಿಕತೆಯನ್ನು ವಿರೋಧಿಸಿ, ಅವೈದಿಕತೆಯನ್ನು ಎತ್ತಿಹಿಡಿಯುವುದಕ್ಕೆ ಬೌದ್ಧಧರ್ಮ ಹಾಗೂ ದರ್ಶನವನ್ನು ಪ್ರಬಲ ಅಸ್ತ್ರವಾಗಿ ಬಳಸಿಕೊಳ್ಳುತ್ತಿವೆ. ಈ ಅವೈದಿಕ ಧಾರೆಗಳಿಗೆ ಬೌದ್ಧದರ್ಶನವನ್ನು ಪರಿಚಯಿಸಿದ್ದು ಪಾಶ್ಚಿಮಾತ್ಯ ಚಿಂತನ ಕ್ರಮಗಳು.

ಬ್ರಿಟೀಷ್ ಶಿಕ್ಷಣ ಹಾಗೂ ಅವರ ಚಿಂತನೆಗಳ ಜಾಡುಹಿಡಿದು ಹೊರಟ ಅವೈದಿಕ ಧಾರೆಗಳು ತಮ್ಮ ಅಸ್ಮಿತೆಯನ್ನು ಬೌದ್ಧಧರ್ಮದ ಮೂಲಕ ಗುರುತಿಸಿಕೊಳ್ಳುವತ್ತ ಹೋರಾಟವನ್ನು ಮುಂದುವರೆಸಿವೆ. ಇದು ಸನಾತನವಾದಿಗಳಿಗೆ ಸಹಿಸದ ತುತ್ತಾಗಿ ಪರಿಣಮಿಸಿದೆ. ಆದ್ದರಿಂದಾಗಿ ವಸಾಹತುಶಾಹಿಯ ಈ ಕ್ರಮವನ್ನು ವಿರೋಧಿಸುವ ಧಾರೆಗಳು ಸಾಹಿತ್ಯ ವಲಯದಲ್ಲಿ ವ್ಯಕ್ತವಾಗುತ್ತಿವೆ. "೧೯ನೇ ಶತಮಾನದಲ್ಲಿ ಬುದ್ಧಿಸಂನ ಹುಟ್ಟಿಗೆ ಭಾರತೀಯ ವಸಾಹತು ಕೂಡ ಮತ್ತೊಂದು ಸಂದರ್ಭವನ್ನು ಸೃಷ್ಟಿಸಿತ್ತು. ಅದೇನೆಂದರೆ, ಪಾಶ್ಚಾತ್ಯರ ರಾಜ್ಯವಾದ ಭಾರತದಲ್ಲಿ ಕ್ರೈಸ್ತ ರಿಲಿಜನ್ನಿಗೆ ಎಷ್ಟರ ಮಟ್ಟಿಗಿನ ಪ್ರಸ್ತುತತೆ ಇದೆ? ಎಂಬ ಚರ್ಚೆ. ಸೆಕ್ಯುಲರಿಸಂನ ತತ್ವಗಳನ್ನಾಧರಿಸಿ ರೂಪಗೊಂಡ ವಸಾಹತು ಆಳ್ವಿಕೆಯಲ್ಲಿ ಎದ್ದ ಈ ಚರ್ಚೆಯು ಸಾಕಷ್ಟು ಗಹನವಾಗಿಯೇ ಇತ್ತು. ಕ್ರಿಶ್ಚಿಯಾನಿಟಿಯು ಮನುಕುಲದ ರಿಲಿಜನ್ನುಗಳಲ್ಲೇ ಒಂದು ಅತ್ಯುಚ್ಚ ಹಂತವೆಂಬುದರಲ್ಲಿ ಬ್ರಿಟನ್ನಿನ ಮಿಶನರಿಗಳಷ್ಟೇ ಅಲ್ಲ, ಯಾವ ಸೆಕ್ಯೂಲರ್ ವಿದ್ವಾಂಸರಿಗೂ, ಆಡಳಿತಗಾರರಿಗೂ ಸಂದೇಹವಿರಲಿಲ್ಲ ಎಂಬುದೇನೋ ನಿಜ. ಆದರೆ ಭಾರತದಲ್ಲಿರುವ ರಿಲಿಜನ್ನುಗಳ ಸತ್ಯಪ್ರತಿಪಾದನೆಯ ಕುರಿತು ತಟಸ್ಥವಾಗಿರುವ ನೀತಿಯನ್ನು ಅಳವಡಿಸಿಕೊಂಡ ವಸಾಹತು ಸರ್ಕಾರವು ಕ್ರೈಸ್ತ ಮಿಶನರಿಗಳ ಉತ್ಸಾಹಕ್ಕೆ ತಣ್ಣೀರೆರಚಿತು. ಆ ಮೂಲಕ ಭಾರತದಲ್ಲಿ ಕ್ರಿಶ್ಚಿಯಾನಿಟಿಯ ಪ್ರಸಾರಕ್ಕೂ, ಅದರ ಸಾರ್ವತ್ರಿಕ ಮಹತ್ವಕ್ಕೂ ಹಿನ್ನೆಡೆಯಾಯಿತು"[೧೫] ಎಂಬ ಚಿಂತನೆಗಳು ಕಂಡುಬರುತ್ತವೆ. ಇಲ್ಲಿ ವ್ಯಕ್ತವಾಗಿರುವ ಚಿಂತನೆಗಳು ಭಾರತದಲ್ಲಿ ವಸಾಹತು ನೆಲೆಯಲ್ಲಿ ಧರ್ಮ ಪ್ರಚಾರಕ್ಕೆ ಮುಂದಾದ ಬ್ರಿಟೀಷರ ಸೆಕ್ಯೂಲರಿಸಂ ನೆಲೆಯ ಹೋರಾಟವು ಸಂಪೂರ್ಣವಾಗಿ ಯಶಸ್ವಿಯಾಗಲಿಲ್ಲ ಎಂಬುದನ್ನು ತಿಳಿಸುತ್ತವೆ. ಪಾಶ್ಚಿಮಾತ್ಯರು ಭಾರತದಲ್ಲಿ ಕಣ್ಮರೆಯಾಗಿದ್ದ ಅವೈದಿಕ ಧಾರೆಯ ಜೀವಪರವಾದ ಬೌದ್ಧಧರ್ಮವನ್ನು ಕುರಿತು ಅಧ್ಯಯನ ಮಾಡಿ, ತಮ್ಮ ಮೂಲ ಉದ್ದೇಶವನ್ನು ಮರೆತು ಬ್ರಿಟೀಷ್ ಸರ್ಕಾರಕ್ಕೆ ದ್ರೋಹ ಬಗೆದರು ಎಂಬುದು ಕೂಡ ಈ ಚಿಂತನೆಗಳ ಸಾರವಾಗಿದೆ. ಭಾರತದಲ್ಲಿ ವಸಾಹತು ನೆಲೆಯ ಕ್ರೈಸ್ತಧರ್ಮ ಪ್ರಸಾರವಾದರೂ ಯಾವ ತೊಂದರೆಯಿಲ್ಲ, ಆದರೆ ತಳಸಮುದಾಯಗಳ ಪರವಾಗಿ ಹೋರಾಡಿದ ಈ ನಾಡಿನ ಮೂಲ ಧರ್ಮವಾದ ಬೌದ್ಧಧರ್ಮ ಮಾತ್ರ ಬೆಳಕಿಗೆ ಬರಬಾರದು ಎಂಬುದು ಈ ಬ್ರಾಹ್ಮಣಧಾರೆಗಳ ಆಶಯವಾಗಿದೆ. ಆದ್ದರಿಂದ ಪಾಶ್ಚಿಮಾತ್ಯ ಚಿಂತಕರು ತಮ್ಮ ಮೂಲ ಆಶಯವನ್ನು ಮರೆತು, ತಮ್ಮ ಸರ್ಕಾರಕ್ಕೆ ಮೊಸವೆಸಗಿದರು ಎಂಬುದಾಗಿ ಆಪಾದಿಸುವ ಚಿಂತನೆಗಳ ಹಿಂದೆ, ಬೌದ್ಧಧರ್ಮದ ಬಗೆಗೆ ಈ ವರ್ಗಕ್ಕಿರುವ ಅಸಹನೆ ತಿಳಿದುಬರುತ್ತದೆ. ಸೆಕ್ಯೂಲರಿಸಂ ನೆಲೆಯ ಕ್ರೈಸ್ತಧರ್ಮದಲ್ಲಿ ಬ್ರಾಹ್ಮಣಧರ್ಮಕ್ಕೆ ಅಸ್ತಿತ್ವವಿದೆ. ಆದರೆ ಜೀವಪರವಾದ ಬೌದ್ಧಧರ್ಮದಲ್ಲಿ ಮಾತ್ರ ಈ ಬ್ರಾಹ್ಮಣ ಧರ್ಮಕ್ಕೆ ಯಾವುದೇ ನೆಲೆ, ಬೆಲೆಯಿಲ್ಲ. ಈ ಕಾರಣದಿಂದಾಗಿ ಬೌದ್ಧಧರ್ಮದ ಶೋಧಕ್ಕೆ ಮುಂದಾದ ಪಾಶ್ಚಿಮಾತ್ಯರ ಚಿಂತನ ಕ್ರಮಗಳನ್ನು ವಿರೋಧಿಸುವ ಧಾರೆಗಳಲ್ಲಿ ಸನಾತನವಾದಿ ಧಾರ್ಮಿಕ ಅಸ್ತಿತ್ವದ ರಾಜಕೀಯ ಆಯಾಮವಿದೆ.

ಪ್ರಾಚೀನ ಕನ್ನಡದ ದಾಸ ಸಾಹಿತ್ಯದಲ್ಲಿಯೂ ಸಮಾನತೆಗಾಗಿ ಹಿಂದುತ್ವದ ವಿರುದ್ಧ ಸಮರ ಸಾರಿದ ಬುದ್ಧನನ್ನು ವೈದಿಕತೆಯು ತನ್ನ ಇಚ್ಛಾನುಸಾರವಾಗಿ ಬಳಸಿಕೊಂಡು ಧರ್ಮ ಪ್ರಸಾರಕ್ಕೆ

ಮುಂದಾಗಿದೆ. ದಾಸ ಸಾಹಿತ್ಯದ ವೈದಿಕಧಾರೆಗಳು ಬುದ್ಧನನ್ನು ವಿಷ್ಣು ಸ್ವರೂಪಿಯಾಗಿಯೇ ಸಮರ್ಥಿಸಿಕೊಳ್ಳುತ್ತ ಬಂದಿವೆ. "ಆಚಾರ್ಯ ಮಾಧ್ವರು ಗೌತಮ ಬುದ್ಧನಿಗಿಂತ ಅದೆಷ್ಟೋ ಈಚೆಯವರು. ಸಾಕ್ಷಾತ್ ವಿಷ್ಣುವೆಂದು ದೃಢವಾಗಿ ನಂಬಿದ ಬುದ್ಧನನ್ನು (ಗೌತಮ ಬುದ್ಧನಲ್ಲ) ಅವರು ಆ ರೂಪದಲ್ಲಿಯೇ 'ದೈತ್ಯ ವಿಮೋಹಕ' (ಅಂದರೆ ದೈತ್ಯರನ್ನು ನಗ್ನರೂಪ ಧರಿಸಿ ಭ್ರಾಂತಿಗೊಳಿಸಿದವ) ಎಂದು ಸ್ತುತಿಸಿ 'ಭವಮಮ ಶರಣಂ' ಎಂದು ರಕ್ಷಣೆ ಕೋರಿರುವರು. ಹರಿದಾಸರಂತೂ ಅವರಿಗಿಂತ ಇನ್ನೂ ಈಚೆಯವರು. ಅವರಾದರೂ ಅವನನ್ನು ಹೀಗೆಯೇ ಸ್ತುತಿಸಿರುವರು. ಅವರ ಸ್ತುತಿಯಲ್ಲಿ ಪುರಾಣೋಕ್ತ ತ್ರಿಪುರದಹನ ಆಖ್ಯಾನದಲ್ಲಿ ಬುದ್ಧನೆಂದು ನಗ್ನರೂಪದಲ್ಲಿ ಪ್ರಕಟನಾದ ವಿಷ್ಣು, ಅಲ್ಲಿನ ದೈತ್ಯರನ್ನು ವೈದಿಕ ಮತದ ವಿರುದ್ಧ ಇಲ್ಲದ ಸಲ್ಲದ ಮಾತುಗಳನ್ನು ಬೋಧಿಸಿ, ಆವರೆಗೆ ಆ ಮತ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದ, ಆದರೂ ತದ್ವಿರುದ್ಧ ಆಚಾರ ವಿಚಾರಗಳಿಂದ ಅದಕ್ಕೂ ಹೆಚ್ಚಾಗಿ ಲೋಕಕಂಟಕರಾಗಿದ್ದ ಅವರನ್ನು ಮತಿಗೆಡಿಸಿದನು(ಮೋಹಗೊಳಿಸಿದನು). ಅವರೊಂದಿಗೆ ತನ್ನ ನಗ್ನರೂಪ ದರ್ಶನದಿಂದ ಚಿತ್ತವಿಕಾರರನ್ನಾಗಿಸಿ ದೈತ್ಯ ಸ್ತ್ರೀಯರ ವ್ರತವನ್ನು ಭಂಗಿಸಿದನು ಎಂಬ ವರ್ಣನೆ ಕಂಡುಬರುತ್ತದೆ."[೧೬] ಇಲ್ಲಿ ವೈದಿಕ ನೆಲೆಗಳು ದೈತ್ಯರೆಂದು ಗುರುತಿಸುವುದು ಯಾರನ್ನು ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿದರೆ, ಆ ದೈತ್ಯರು ಮತ್ತಾರೂ ಅಲ್ಲ. ಅವರು ಈ ನಾಡಿನ ಮೂಲನಿವಾಸಿಗಳು. ಪ್ರಕೃತಿಯನ್ನೇ ನಂಬಿ ಬದುಕನ್ನು ಕಟ್ಟಿಕೊಂಡು ಬಂದ ಇವರು ಪ್ರಕೃತಿಪ್ರಿಯರು ಹೌದು. ಈ ಬುಡಕಟ್ಟು ಜನಾಂಗದವರು ದೃಢ ಕಾಯದವರಾಗಿದ್ದರು. ಆದ್ದರಿಂದ ಇವರನ್ನು ಬ್ರಾಹ್ಮಣವಾದಿಗಳು ರಾಕ್ಷಸರೆಂದು ಗುರುತಿಸಿಕೊಂಡು ಬಂದಿದ್ದಾರೆ. ಈ ಮೂಲನಿವಾಸಿ ಸಮುದಾಯಗಳು ಬೌದ್ಧ ಅನುಯಾಯಿಗಳಾಗಿದ್ದು, ಸಮಾನತೆಯ ತತ್ವದ ಅಡಿಯಲ್ಲಿ ತಮ್ಮ ಜೀವನವನ್ನು ರೂಪಿಸಿಕೊಂಡು ಬಂದಿದ್ದಾರೆ. ಆದರೆ ಬ್ರಾಹ್ಮಣಧರ್ಮವು ತನ್ನ ಯಜ್ಞ-ಯಾಗಗಳ ಮೂಲಕ ಕಾಡನ್ನು ನಾಶ ಮಾಡಿ, ಪ್ರಾಣಿಗಳನ್ನು ಹಿಂಸಿಸುತ್ತಿರುವುದನ್ನು ವಿರೋಧಿಸಿದ ಕಾರಣ ಇವರನ್ನು ದಸ್ಯುಗಳು, ಅಸುರರು ಎಂದೆಲ್ಲಾ ಗುರುತಿಸಿದ್ದಾರೆ. ಈ ಮೂಲನಿವಾಸಿಗಳನ್ನು ಹತ್ತಿಕ್ಕುವುದಕ್ಕೆ ಪೌರಾಣಿಕ ನೆಲೆಯಲ್ಲಿ ಬುದ್ಧನನ್ನೇ ಬಳಸಿಕೊಂಡು ತಮ್ಮ ಅಸ್ತಿತ್ವವನ್ನು ಕಂಡುಕೊಂಡಿದ್ದಾರೆ. ಬುದ್ಧನನ್ನು ವೈದಿಕ ನೆಲೆಯಲ್ಲಿ ವಿಷ್ಣುವಿನ ಅವತಾರಗಳಲ್ಲೊಂದಾಗಿಸಿ, ತಳಸಮುದಾಯಗಳನ್ನು ಹತ್ತಿಕ್ಕುವಲ್ಲಿ ದಾಸ ಸಾಹಿತ್ಯದ ಆದ್ಯರೆಂದು ಗುರುತಿಸಿಕೊಂಡಿರುವ ಶ್ರೀಪಾದರಿಂದ ಜಗನ್ನಾಥ ದಾಸರವರೆಗಿನ ಪ್ರಮುಖ ಹರಿದಾಸರೆಲ್ಲರೂ ಬುದ್ಧನನ್ನು ವಿಷ್ಣುವಿನ ಅವತಾರವೆಂದು ಸ್ವೀಕರಿಸಿ, ಆ ಮೂಲಕ ಮೂಲನಿವಾಸಿ ಬೌದ್ಧಧರ್ಮಿಯರನ್ನು ಬುದ್ಧನಿಂದಲೆ ನಿಂದಿಸುವ ತಂತ್ರಗಾರಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇದು ವೈದಿಕ ಚಿಂತನೆಧಾರೆಗಳು ಬೌದ್ಧ ಚಿಂತನೆಗಳನ್ನು ವಿರೂಪಗೊಳಿಸುತ್ತಿರುವ ಕ್ರಮವಾಗಿದೆ.

ದಾಸ ಸಾಹಿತ್ಯದಲ್ಲಿ ಪ್ರಮುಖವಾಗಿ ಕಂಡುಬರುವ ಬಹುತೇಕ 'ಹರಿದಾಸ' ಮಹಾಶಯರು ಬುದ್ಧನನ್ನು ವಿಷ್ಣುವಿನ ಅವತಾರವೆಂಬಂತೆ ಬಣ್ಣಿಸಿ ಸಾಹಿತ್ಯ ರಚನೆ ಮಾಡಿದ್ದಾರೆ. ಇಂತಹ ಸಾಹಿತ್ಯದಲ್ಲಿ ದರ್ಶನಗೊಳ್ಳುವ 'ವೈಷ್ಣವ ಬುದ್ಧ'ನ ಚಿತ್ರಣ ಈ ಮುಂದಿನಂತಿದೆ;

ಶ್ರೀಪಾದರಾಯರು ಬುದ್ಧನನ್ನು 'ಜೋ.. ಜೋ..' ಪದಗಳಲ್ಲಿ ಅನಾವರಣಗೊಳಿಸಿರುವ ಬಗೆಯು ಹೀಗಿದೆ; "ಬುದ್ಧನಾಗಿ ಪತಿವ್ರತೆಯರನಾಳಿದೆ" ಎಂಬುದಾಗಿ ಬುದ್ಧನನ್ನು ವಿಷ್ಣುವಿನೊಂದಿಗೆ ಸಮೀಕರಿಸಿದ್ದಾರೆ.

ದಾಸ ಸಾಹಿತ್ಯದಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡು, ಕರ್ನಾಟಕ ಸಂಗಿತದ ಪಿತಮಹಾನೆಂದು ಗುರುತಿಸಿಕೊಂಡಿರುವ ಪುರಂದರದಾಸರು 'ಆರತಿ ಪದ'ಗಳಲ್ಲಿ ಚಿತ್ರಿಸಿರುವ ವೈದಿಕಧಾರೆಯ ಬುದ್ಧನ ಚಿತ್ರಣದಲ್ಲಿ "ಬತ್ತಲೆ ನಿಂತ ಬೌದ್ಧನಿಗೆ" ಎಂಬುದಾಗಿ ಚಿತ್ರಿಸಿದ್ದು, 'ದಶಾವತಾರ ಸ್ತುತಿ' ಯಲ್ಲಿ ಮೂಲ ನಿವಾಸಿಗಳನ್ನು ಹತ್ತಿಕ್ಕುವ ನೆಲೆಯಲ್ಲಿ ಬುದ್ಧನನ್ನು ಬಳಸಿಕೊಂಡ ಚಿತ್ರಣ ಹೀಗಿದೆ;

"ದಾನವರಂದು ಖೇಚರದೊಳು ಮುಪ್ಪುರವ ರಚಿಸಿ ಮೂರು ಜಗಕೆ

ಉಪಹತಿ ಮಾಡುತಿರೆ। ಅಸಮರೂಪದಿ (ಬತ್ತಾಲೆ) ನಿಂದು...

ದೈತ್ಯ ಸ್ತ್ರೀಯರ ಪಾತಿವ್ರತ್ಯ ಭಂಗ ಮಾಡಿ ಮುಪ್ಪುರವನಳಿದ ನಿಸ್ಸೀಮ" ಎಂಬುದಾಗಿ ಚಿತ್ರಿಸಿದ್ದು, ವೈದಿಕ ನೆಲೆಗೊಳಪಡಿಸುವ ಮೂಲಕ, ಬುದ್ಧನ ಚಿತ್ರಣದ ಮೂಲಕವೇ ಈ ನಾಡಿನ ಮೂಲ ನಿವಾಸಿಗಳನ್ನು ಹತ್ತಿಕ್ಕುವ ಕ್ರಮವನ್ನು ಈ ದಾಸ ಮಹಾಶಯರು ಅನುಸರಿಸಿದ್ದಾರೆ.

ವಾದಿರಾಜರಂತೆ ದಶಾವತಾರ ಸ್ವರೂಪಿಯಾದ ವಿಷ್ಣುವನ್ನು ಚಿತ್ರಿಸಿರುವವರು ಮತ್ತೊಬ್ಬರಿಲ್ಲ. ಇವರು ವಿಷ್ಣುವಿನ ವರ್ಣನೆಯ ಸಂದರ್ಭದಲ್ಲಿ ಒಂದೆಡೆ ಸತ್ಯಭಾಮೆ-ಕೃಷ್ಣನ ನಡುವಿನ ಸಂಭಾಷಣೆಯಲ್ಲಿ ಸತ್ಯಭಾಮೆಯ ಮೂಲಕವಾಗಿ ಬುದ್ಧನನ್ನು ವರ್ಣಿಸಿರುವ ಬಗೆಯು ಹೀಗಿದೆ;

"ಮಂದಗಮನೆಯರ ಮುಂದೆ ನಿರ್ವಾಣದಿ (ಬತ್ತಲೆ) ನಿಂದೆ; ಸತ್ಯಭಾಮೆ-ಸತಿಯರ

ಮೋಹಿಸಿ ನೀನು, ರಂಗಯ್ಯ

ಬಲುಚತುರ ಬುದ್ಧನಾದೆ; ನಗೇಗೇಡು ಮಾಡಿಕೊಂಡು ದಿಗ್ವಸನನಾಗಿ ನಿಂತ।

ಹಗರಣವಿದೇನೊ ಪೇಳು ರಂಗಯ್ಯ।

ಕೃಷ್ಣ-ಮಿಗೆ ಮೂರು ಪುರದ ಸತಿಯರ ಕೆಡಿಸಿ।

ಜಗ ಮೋಹಿಸುವ ಬೌದ್ಧ ಎಲೆ ಸತ್ಯಭಾಮೆ।"

ಇಂದು ವಿಷ್ಣು ಸ್ವರೂಪಿಯಾಗಿ, ಪರಸ್ತ್ರೀಯರ ಶೀಲ ಹರಣ ಮಾಡಿದವನೆಂಬ ಹೆಗ್ಗಳಿಕೆಯಲ್ಲಿ ಬುದ್ಧನ ಚಿತ್ರಣವಿರುವುದು ಗಮನಾರ್ಹ.

ಗೋಪಾಲದಾಸರು ಬುದ್ಧನನ್ನು ಸ್ತುತಿಸಿರುವ ಬಗೆ ವೈದಿಕ ಧಾರೆಯನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿದೆ. ಇಲ್ಲಿ ಕಂಡುಬರುವ ಬುದ್ಧನ ಚಿತ್ರಣ ಹೀಗಿದೆ;

"ಬತ್ತಲೆನಿಂದು ತ್ರಿಪುರವ ಬಗೆದು ಮೆರೆದವ

ಬೌದ್ಧಾವತಾರನು। ನೀನು"

ಎಂಬುದಾಗಿ ಸ್ತುತಿಸಿರುವಲ್ಲಿ ಈ ನಾಡಿನ ಮೂಲನಿವಾಸಿಗಳ ವಾಸಸ್ಥಾನದ ತ್ರಿಪುರವನ್ನು ಬುದ್ಧನೇ ದಹಿಸಿದನು ಎಂದು ಬಣ್ಣಿಸಲಾಗಿದೆ.

ಜಗನ್ನಾಥದಾಸರು ಬುದ್ಧನನ್ನು ವಿಷ್ಣು ಸ್ವರೂಪಿಯಾಗಿ ಚಿತ್ರಿಸಿದ್ದಾರೆ. ಇವರು ಸ್ತುತಿ ಮತ್ತು ಕೋಲಾಟ ಪದಗಳಲ್ಲಿ ಬುದ್ಧನನ್ನು ಚಿತ್ರಿಸಿರುವ ಬಗೆಯು ಈ ಮುಂದಿನಂತಿವೆ;

"ಬುದ್ಧ ರೂಪದಿ ತ್ರಿಪುರ ಸತಿಯರ। ಬುದ್ಧಿ ಭೇದವ ಮಾಡ್ದನ" (ಸ್ತುತಿ)

"ಪಾವನ ಬುದ್ಧ ಬಾರೋ... ಚೆಲುವ ಮಂಗಳಮೂರ್ತಿ ಬಾರಯ್ಯ (ಸ್ತುತಿ)

"ಕೋಲು ಕೋಲೆನ್ನ ಕೋಲು... ಸಿರಿ ಕೃಷ್ಣರಾಯನ ಕೋಲೆ... ಬುದ್ಧನ ಕೋಲೆ" (ಕೋಲಾಟ ಪದ)

ಈ ಎಲ್ಲ ಚಿತ್ರಣಗಳು ಸಮಾಜ ಸುಧಾರಣೆಗಾಗಿ ಹೋರಾಟ ನಡೆಸಿ, ವೈದಿಕತೆಗೆ ಪರ್ಯಾಯವಾದ ಜೀವಪರ ಧರ್ಮವನ್ನು ನೀಡಿದ ಬುದ್ಧನನ್ನು ಮತ್ತೇ ವೈದಿಕತೆಯ ಬಂಧನಕ್ಕೆ ಒಳಪಡಿಸುವ ನೆಲೆಯಲ್ಲಿ ಹುಟ್ಟಿವೆ. ವೈದಿಕ ರಾಜಕಾರಣವು ಚರಿತ್ರೆಯುದ್ಧಕ್ಕೂ ನಡೆಸಿಕೊಂಡು ಬಂದಿರುವುದು ಇದೆ ಮಾದರಿಯನ್ನು. ತನ್ನ ವರ್ಣಧರ್ಮಕ್ಕೆ ಪೆಟ್ಟು ಬಂದಾಗ, ಪರ್ಯಾಯ ಮಾರ್ಗಗಳನ್ನು ಕಂಡುಕೊಂಡಿರುವ ಹಲವಾರು ನಿದರ್ಶನಗಳಲ್ಲಿ ಇದು ಒಂದಾಗಿದೆ. ವರ್ಣಧರ್ಮದ ಅಸಮಾನತೆಯಿಂದ ನೊಂದ ಸಾಮಾನ್ಯ ಜನತೆಯು ಸಮಾನತೆಯನ್ನು ನೀಡಿದ ಬುದ್ಧನ ಧರ್ಮಕ್ಕೆ ಮರಳುವುದನ್ನು ತಡೆಗಟ್ಟುವುದಕ್ಕೆ ಪರ್ಯಾಯ ನೆಲೆಯಲ್ಲಿ ಹುಟ್ಟಿಕೊಂಡಿದ್ದೆ ದಾಸಪಂಥ. ದಾಸ ಪರಂಪರೆಯು ವೈದಿಕತೆಯ ಆಕ್ರಮಣದ ನೆಲೆಯಲ್ಲಿ ತಳಸಮುದಾಯದ ಜನತೆಯನ್ನು ಮತ್ತೇ ತಮ್ಮತ್ತ ಸೆಳೆಯಲು, ತಳಸಮುದಾಯಗಳು ತಾವು ಇರುವಲ್ಲಿಯೇ ಮುಂದುವರೆಯಲು ಬುದ್ಧನನ್ನು ವೈದಿಕತೆಯ ವ್ಯಾಪ್ತಿಗೊಳಪಡಿಸಿಕೊಂಡು ಬಂದಿದೆ. ಆ ಮೂಲಕವಾಗಿ ತನ್ನ ಅಸ್ತಿತ್ವದ ಉಳಿವಿಗಾಗಿ ಶ್ರಮಿಸಿದೆ.

ಭಗವದ್ಗೀತೆ ಮತ್ತು ರಾಜಕಾರಣ:

ಸಮಕಾಲೀನ ಸಂದರ್ಭದಲ್ಲಿ ಭಗವದ್ಗೀತೆಯನ್ನು ಕೇಂದ್ರವಾಗಿಟ್ಟುಕೊಂಡು ಪರ ಮತ್ತು ವಿರೋಧಿ ನೆಲೆಯಲ್ಲಿ ಚಿಂತನೆಗಳು ವ್ಯಕ್ತವಾಗಿವೆ. ಈ ನೆಲೆಯಲ್ಲಿ ಕನ್ನಡ ಚಿಂತನ ಸಾಹಿತ್ಯದಲ್ಲೂ ಹಲವು ಬಗೆಯಲ್ಲಿ ಈ ಕುರಿತ ಚಿಂತನೆಗಳು ಪ್ರಕಟವಾಗಿವೆ. ಕನ್ನಡದಲ್ಲಿ ಭಗವದ್ಗೀತೆಯ ಕುರಿತು ವ್ಯಕ್ತವಾಗಿರುವ ಧಾರೆಗಳಲ್ಲಿ ವೈದಿಕ ಮತ್ತು ಅವೈದಿಕ ಧಾರೆಯ ಚಿಂತನೆಗಳು ಪ್ರಮುಖವಾಗಿವೆ. ಈ ಧಾರೆಗಳ ಹಿಂದೆ ರಾಜಕೀಯ ನೆಲೆಗಳು ಅಂತರ್ಗತವಾಗಿವೆ. ಬ್ರಾಹ್ಮಣಧಾರೆಗಳು ಸನಾತನ ಧಾರ್ಮಿಕ ಗ್ರಂಥವಾದ ಭಗವದ್ಗೀತೆಯನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿ ತಮ್ಮ ಚಿಂತನೆಯನ್ನು ಪ್ರಕಟಿಸಿವೆ. ಆದರೆ ಪ್ರಗತಿಪರ ನೆಲೆಯ ಅವೈದಿಕ ಧಾರೆಗಳು ಸನಾತನವಾದಿಗಳು ತಮ್ಮ ಅಸ್ತಿತ್ವಕ್ಕಾಗಿ ರೂಪಿಸಿಕೊಂಡು ಬಂದಿರುವ ಈ ಧರ್ಮಗ್ರಂಥವನ್ನು ವಿಮರ್ಶೆಗೊಳಪಡಿಸಿ, ತಳಸಮುದಾಯಗಳ ಅಸ್ಮಿತೆಯ ಶೋಧಕ್ಕೆ ಮುಂದಾಗಿರುವುದು ಕಂಡುಬರುತ್ತದೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನವನ್ನು ಪ್ರಧಾನವಾಗಿಟ್ಟುಕೊಂಡು, ಅವೈದಿಕಧಾರೆಯ ಚಿಂತನೆಗಳು ಭಗವದ್ಗೀತೆಯ ತಾತ್ವಿಕತೆಯನ್ನು ಖಂಡಿಸುವ ನೆಲೆಯಲ್ಲಿ ಪ್ರಕಟವಾಗಿವೆ. ಆ ಮೂಲಕ

ಬೌದ್ಧಧರ್ಮದ ತಾತ್ವಿಕ ನೆಲೆಗಳ ಅಡಿಯಲ್ಲಿ ಬಾಬಾಸಾಹೇಬ ಅಂಬೇಡ್ಕರರು ರಚಿಸಿದ 'ಭಾರತದ ಸಂವಿಧಾನ'ವನ್ನು ತಮ್ಮ ಧರ್ಮಗ್ರಂಥ ಎಂಬುದಾಗಿ ಸಮರ್ಥಿಸಿಕೊಳ್ಳುವ ನೆಲೆಯಲ್ಲಿ ಈ ಧಾರೆಗಳು ಒಡಮೂಡಿವೆ. ಸಮಕಾಲೀನ ಸಂದರ್ಭದಲ್ಲಿ ಕರ್ನಾಟಕದ ರಾಜಕಾರಣವು 'ಅಹಿಂದ' ಎಂಬ ನೆಲೆಯಲ್ಲಿ ತನ್ನ ಸಂಘಟನ ಸ್ವರೂಪವನ್ನು ಪಡೆದುಕೊಂಡಿರುವುದು ಬೌದ್ಧಧರ್ಮದ ತಾತ್ವಿಕ ಪ್ರೇರಣೆಗಳಿಂದ. ಪ್ರಗತಿಪರ ವಿಚಾರಧಾರೆಗಳ ಅಡಿಯಲ್ಲಿ ರಾಜಕೀಯ ನೆಲೆಯೊಂದನ್ನು ರೂಪಿಸಿಕೊಂಡಿರುವ ಕಾಂಗ್ರೆಸ್ ಸರ್ಕಾರಕ್ಕೆ ಅಂಬೇಡ್ಕರ್ ಅವರ ವಿಚಾರಧಾರೆಗಳ ಪ್ರಭಾವವಿದೆ. ಈ ಹಿನ್ನೆಲೆಯಲ್ಲಿ 'ಹಿಂದುತ್ವ'ದ ಪ್ರತಿನಿಧಿಯಾಗಿ ಸಮಾಜದಲ್ಲಿ ಕೋಮುವಾದವನ್ನು ಸೃಷ್ಟಿಸುತ್ತಿರುವ 'ಭಾರತೀಯ ಸಮಾಜವಾದಿ ಪಾರ್ಟಿ'ಗೆ ಪೈಪೋಟಿಯನ್ನು ನೀಡುವ ನೆಲೆಯಲ್ಲಿ 'ಅಹಿಂದ' ಎಂಬ ಸಂಘಟನಾತ್ಮಕ ಮಾರ್ಗವನ್ನು ಎಡಪಂಥೀಯ ನೆಲೆಯಲ್ಲಿ ಕಾಂಗ್ರೆಸ್ ಸರ್ಕಾರವು ತನ್ನ ತತ್ವ ಸಿದ್ಧಾಂತಗಳನ್ನು ರೂಪಿಸಿಕೊಂಡು ಬಂದಿದೆ. ಭಾರತದ ಇಂದಿನ ಕೇಂದ್ರ ಸರ್ಕಾರವಾದ 'ಭಾರತೀಯ ಜನತಾ ಪಾರ್ಟಿ' ಹಿಂದುತ್ವವನ್ನು ಎತ್ತಿಹಿಡಿಯುವ ನೆಲೆಯಲ್ಲಿ ವೈದಿಕ ಧರ್ಮಗ್ರಂಥಗಳು ಹಾಗೂ ಸನಾತನವಾದಿ ತತ್ವ ಸಿದ್ಧಾಂತಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತ ಬಂದಿದೆ. ಹಿಂದುತ್ವದ ಪ್ರತಿನಿಧಿಯಾದ ಬಿಜೆಪಿಗೆ ಭಗವದ್ಗೀತೆಯು ಪವಿತ್ರ ಗ್ರಂಥವಾಗಿದ್ದು, ಅದರಲ್ಲಿನ ಅಸಮಾನ ನೀತಿ ಮತ್ತು ನಿಯಮಗಳನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿ ತನ್ನ ವಾದವನ್ನು ಮಂಡಿಸುತ್ತದೆ. ಈ ಧರ್ಮಗ್ರಂಥವನ್ನು ಕೇಂದ್ರವಾಗಿಟ್ಟುಕೊಂಡು ತನ್ನ ರಾಜಕೀಯ ನೆಲೆಗಟ್ಟನ್ನು ಭದ್ರಪಡಿಸಿಕೊಳ್ಳಲು ಹೋರಾಡುತ್ತಿದೆ. ಇಂತಹ ಸಂದರ್ಭದಲ್ಲಿ ಹಿಂದುತ್ವದ ಅಸಮಾನತೆಯನ್ನು ವೈಜ್ಞಾನಿಕ ನೆಲೆಗಟ್ಟಿನಲ್ಲಿ ತೀವ್ರವಾಗಿ ವಿರೋಧಕ್ಕೆ ಗುರಿಪಡಿಸಿದ ಬುದ್ಧನ ವಿಚಾರಧಾರೆಗಳನ್ನು ವೈದಿಕ ನೆಲೆಯೊಳಗೆ ಬೆಸೆಯುವ ತಂತ್ರಗಳು ನಡೆಯುತ್ತಿವೆ. ಇದಕ್ಕೆ ಕಾರಣ ಬುದ್ಧನ ತತ್ವ ಸಿದ್ಧಾಂತಗಳನ್ನು ವೈಚಾರಿಕ ನೆಲೆಯಲ್ಲಿ ವಿರೋಧಿಸಲಿಕ್ಕಾಗದ ಕಾರಣ, ಬುದ್ಧನು ಕೂಡ ಹಿಂದುತ್ವದ ಒಂದು ಭಾಗ ಎಂಬಂತೆ ಬಳಸಿಕೊಳ್ಳಲಾಗುತ್ತಿದೆ. ಹಿಂದುತ್ವವನ್ನು ರಾಜಕೀಯ ನೆಲೆಗಟ್ಟಿನಲ್ಲಿ ಮುನ್ನೆಡೆಯುತ್ತಿರುವ ಇಂದಿನ ಭಾರತದ ಪ್ರಧಾನಿಯವರು ಬೌದ್ಧ ಕೇಂದ್ರಗಳಿಗೆ ಭೇಟಿ ನೀಡುತ್ತಿದ್ದು, ಬೌದ್ಧ ಭಂತೆಗಳ ಒಲವು ಪಡೆಯುವ ಪ್ರಯತ್ನಕ್ಕೆ ಮುಂದಾಗಿದ್ದಾರೆ. ತನ್ನ ಹಿಂದುತ್ವದ ವ್ಯಾಪ್ತಿಯೊಳಗೆ ಬೌದ್ಧಧರ್ಮವನ್ನು ಸೇರ್ಪಡೆಗೊಳಿಸಿಕೊಂಡು ರಾಜಕೀಯ ನೆಲೆಯನ್ನು ಭದ್ರಪಡಿಸಿಕೊಳ್ಳುವ ಕಾರ್ಯವು ಭಾರತೀಯ ಜನತಾ ಪಾರ್ಟಿಯ ಉದ್ದೇಶವಾಗಿದೆ. ಕನ್ನಡ ಚಿಂತನಧಾರೆಯ ವೈದಿಕ ಪರಂಪರೆಯಲ್ಲಿ ಭಗವದ್ಗೀತೆಯನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿ ಹಲವು ಚಿಂತಕರು ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸಿಕೊಂಡು ಬಂದಿದ್ದಾರೆ. ಅವರುಗಳಲ್ಲಿ ಎಸ್.ಎಲ್.ಭೈರಪ್ಪ, ಪೇಜಾವರ ಮಠದ ಶ್ರೀ ವಿಶ್ವೇಶ್ವರತೀರ್ಥ ಸ್ವಾಮಿ, ಚಕ್ರವರ್ತಿ ಸೂಲಿಬೆಲೆಯಂತಹ ಹಲವು ಸನಾತನವಾದಿಗಳು ತಮ್ಮ ಅಸ್ತಿತ್ವದ ಉಳಿವಿಗಾಗಿ, ಬೌದ್ಧಧರ್ಮದ ಎದುರು ಹಿಂದುತ್ವವನ್ನು ಸಮರ್ಥಿಸಿಕೊಳ್ಳುವ ಭಾಗವಾಗಿ ಭಗವದ್ಗೀತೆಯನ್ನು ಸಮರ್ಥಿಸಿಕೊಳ್ಳುವ ರಾಜಕೀಯ ಆಯಾಮವೊಂದನ್ನು ನಿರ್ಮಿಸಿಕೊಂಡಿದ್ದಾರೆ.

ಕರ್ನಾಟಕದಲ್ಲಿ ಆಡಳಿತ ರೂಢ ಪಕ್ಷವಾಗಿರುವ ಕಾಂಗ್ರೇಸ್ ಸರ್ಕಾರವು 'ಅಹಿಂದ' ರಾಜಕಾರಣವನ್ನು ಸೃಷ್ಟಿಸುವ ನೆಲೆಯಲ್ಲಿ ಯತ್ನಿಸುತ್ತಿದ್ದು, ಇಲ್ಲಿ ಕಂಡುಬರುವ ತಾತ್ವಿಕ ನಿಲುವುಗಳು ಕೆಲಮಟ್ಟಿಗೆ ಬೌದ್ಧದರ್ಶನದ ಸಾರವೇ ಆಗಿವೆ. ಆದರೆ ಪ್ರಗತಿಪರ ನೆಲೆಯಲ್ಲಿ ಹೋರಾಟಕ್ಕೆ ಮುಂದಾಗಿರುವ ಈ ಪಕ್ಷವು ಬೌದ್ಧಧರ್ಮವನ್ನು ಮಾತ್ರ ಮುಖ್ಯವೆಂದು ಪರಿಗಣಿಸುವುದಿಲ್ಲ. ಭಗವದ್ಗೀತೆಯನ್ನು ವಿರೋಧಿಸುವುದಿಲ್ಲ. ಆದರೆ ಕನ್ನಡ ಕೆಲವು ಪ್ರಗತಿಪರ ಚಿಂತಕರು ಮಾತ್ರ ಭಗವದ್ಗೀತೆಯನ್ನು ತೀವ್ರವಾಗಿ ವಿರೋಧಕ್ಕೆ ಒಳಪಡಿಸುವ ಮೂಲಕ, ಅಹಿಂದ ಸಮುದಾಯಗಳ ಪವಿತ್ರಗ್ರಂಥ 'ಸಂವಿಧಾನ'ವಾಗಿದೆ ಎಂಬುದಾಗಿ ಪ್ರತಿಪಾದಿಸುತ್ತಿವೆ. ಆ ಮೂಲಕವಾಗಿ ಭಗವದ್ಗೀತೆಯನ್ನು ವಿರೋಧಿಸುವ ಕಾರ್ಯಕ್ಕೆ ಕನ್ನಡದ ಹಲವು ಪ್ರಗತಿಪರ ಧಾರೆಗಳು ಮುಂದಾಗಿವೆ. ಇವರಲ್ಲಿ ಕೆ.ಎಸ್.ಭಗವಾನ್, ದೇವನೂರ ಮಹಾದೇವ, ಅರವಿಂದ ಮಾಲಗತ್ತಿ ಇನ್ನೂ ಹಲವು ಪ್ರಗತಿಪರ ವಿಚಾರವಾದಿಗಳು ಕಂಡುಬರುತ್ತಾರೆ. ಇವರು ಸಂಪೂರ್ಣವಾಗಿ ಭಗವದ್ಗೀತೆಯನ್ನು ತೀವ್ರವಾಗಿ ವಿಮರ್ಶೆಗೆ ಒಳಪಡಿಸಿದ್ದಾರೆ. ಆದರೆ ರಾಜಕೀಯ ನೆಲೆಗಳನ್ನು ಭದ್ರಪಡಿಸಿಕೊಳ್ಳಲು ಮುಂದಾಗಿರುವ ಕರ್ನಾಟಕದ 'ಅಹಿಂದ' ಸರ್ಕಾರವು ಮಾತ್ರ ಧರ್ಮಗ್ರಂಥದ ವಿಷಯದಲ್ಲಿ ಮೌನವಹಿಸಿದೆ.

ಆಹಾರ ಸಂಸ್ಕೃತಿ ಮತ್ತು ರಾಜಕಾರಣ:

ಭಾರತದಲ್ಲಿ ಸಮಕಾಲೀನ ಸಂದರ್ಭದಲ್ಲಿ 'ಗೋವು ಪವಿತ್ರ' ಎಂಬ ಧೋರಣೆಯೊಂದಿಗೆ ಸಂಘ ಪರಿವಾರವು ತನ್ನ ರಾಜಕೀಯ ಆಯಾಮವನ್ನು ವಿಸ್ತರಿಸಿಕೊಳ್ಳುವತ್ತ ಮುನ್ನೆಡೆಯುತ್ತಿದೆ. ಈ ಸಂದರ್ಭದಲ್ಲಿ ಗೋಮಾಂಸ ತಿಂದ ನೆಪವನ್ನು ಮುಂದಿಟ್ಟುಕೊಂಡು ಹಲವಾರು ದಲಿತರ ಮೇಲೆ ದೌರ್ಜನ್ಯವೆಸಗುತ್ತ ಬಂದಿದ್ದಾರೆ. ಆ ಮೂಲಕವಾಗಿ ದಲಿತರ ಆಹಾರ ಸಂಸ್ಕೃತಿಯ ಮೇಲೆ ಹಿಂದುತ್ವವಾದಿಗಳು ಬಲವಂತವಾಗಿ ಹಕ್ಕು ಚಲಾಯಿಸುತ್ತಿದ್ದಾರೆ. ಗೋಮಾಂಸ ತಿನ್ನುವವರೆಂಬ ನೆಪವೊಡ್ಡಿ ಶತಮಾನಗಳಿಂದ ಅಸ್ಪೃಶ್ಯರಾಗಿ ನಡೆಸಿಕೊಂಡಿದ್ದ ಈ ಸಮುದಾಯದ ಮೇಲೆ, ಇಂದು ಅವರ ಆಹಾರವನ್ನು ಕಿತ್ತುಕೊಳ್ಳುವ ನೆಲೆಯಲ್ಲಿ ನಿರ್ಬಂಧವನ್ನು ವಿಧಿಸುತ್ತಿದ್ದಾರೆ. ಹಿಂದುತ್ವವಾದಿಗಳು 'ಗೋವು ಪವಿತ್ರ' ಎಂಬ ಧೋರಣೆಯನ್ನು ಕೇಂದ್ರವಾಗಿಟ್ಟುಕೊಂಡು ನಡೆಸುತ್ತಿರುವ ಹೋರಾಟದಲ್ಲಿ ಕೇವಲ ದಲಿತರನ್ನು ಹತ್ತಿಕ್ಕುವ ನೆಲೆಯಲ್ಲಿ ತಮ್ಮ ಹೋರಾಟವನ್ನು ಮುಂದುವರೆಸುತ್ತಿಲ್ಲ. ಮುಸ್ಲಿಂ ಸಮುದಾಯದ ಮೇಲೂ ತಮ್ಮ ವಿರೋಧವನ್ನು ವ್ಯಕ್ತಪಡಿಸುವ ನೆಲೆಯಲ್ಲಿ ಈ ಹೋರಾಟವು ಮುಂದುವರೆದಿದೆ.

ಸನಾತನವಾದಿಗಳು ಆಹಾರ ಸಂಸ್ಕೃತಿಯ ಮೇಲೆ ವಿಧಿಸುತ್ತಿರುವ ನಿರ್ಬಂಧಗಳನ್ನು ಸಮರ್ಥಿಸಿಕೊಳ್ಳು ನೆಲೆಯಲ್ಲಿ ಬಲಪಂಥೀಯ ವಿಚಾರಧಾರೆಗಳು ಶ್ರಮಿಸಿದರೆ, ಅದಕ್ಕೆ ತೀವ್ರ ವಿರೋಧವನ್ನು ವ್ಯಕ್ತಪಡಿಸುವ ನೆಲೆಯಲ್ಲಿ ಪ್ರಗತಿಪರ ಧಾರೆಗಳು ಮೂಡಿಬಂದಿವೆ. ಕನ್ನಡದ ಪ್ರಗತಿಪರ ಧಾರೆಗಳು ತಳಸಮುದಾಯಗಳ ಮಾಂಸ ಆಹಾರ ಪದ್ಧತಿಯನ್ನು ಸಮರ್ಥಿಸಿಕೊಳ್ಳುವುದಕ್ಕೆ ಬೌದ್ಧ ದರ್ಶನದ ಅಡಿಯಲ್ಲಿ ಚಿಂತನೆಗಳನ್ನು ವ್ಯಕ್ತಪಡಿಸುತ್ತ ಬಂದಿದ್ದಾರೆ. ಹೀಗೆ ಕನ್ನಡ ಚಿಂತನ

ಸಾಹಿತ್ಯದಲ್ಲಿ ಆಹಾರ ಸಂಸ್ಕೃತಿಯಲ್ಲಿ ಮೇಲೆ ಸೃಷ್ಟಿಯಾಗಿರುವ ಚಿಂತನೆಗಳಲ್ಲಿ ಅಂತರ್ಗತವಾಗಿರುವ ರಾಜಕೀಯ ಆಯಾಮವನ್ನು ಈ ಮುಂದಿನಂತೆ ನೋಡಬಹುದು.

ವೈದಿಕಧಾರೆಯ ಚಿಂತನೆಗಳು ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಲು, ಆ ಮೂಲಕವಾಗಿ ಸಮಾಜದಲ್ಲಿ ತನ್ನ ನಿಯಂತ್ರಣ ಸಾಧಿಸುವ ಸಲುವಾಗಿ ತನ್ನದೇ ಆದ ನಿಯಮಗಳನ್ನು ರೂಪಿಸುತ್ತಿವೆ. ಇವು ಜಡ ಮಾದರಿಯವುಗಳಾದರು, ಬದಲಾದ ಕಾಲಕ್ಕೆ ತಕ್ಕಂತೆ, ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುವ 'ಅಪ್ಡೇಟ್ ಸಂಸ್ಕೃತಿ'ಯನ್ನು ಇದು ಅನಾದಿ ಕಾಲದಿಂದಲೂ ಮುಂದಿವರೆಸಿಕೊಂಡು ಬಂದಿದೆ. ಇದಕ್ಕೆ ಪೂರಕವೆಂಬಂತೆ, 'ಗೋವು ಪವಿತ್ರ' ಎಂಬುದು ಅವರ ಸಾಂಸ್ಕೃತಿಕ ಅಸ್ತಿತ್ವ ರಾಜಕಾರಣದ ಭಾಗವಾಗಿಯೇ ಕಂಡುಬರುತ್ತದೆ. ಸನಾತನ ಧಾರೆಗಳಿಗೆ ವೈದಿಕರೆ ಮೊದಲು ಯಜ್ಞ-ಯಾಗಗಳ ಸಂದರ್ಭದಲ್ಲಿ ಮಾಂಸಹಾರಿಗಳಾಗಿದ್ದರು ಎಂಬುದರ ಬಗೆಗೆ ಸ್ಪಷ್ಟವಾದ ನಿಲುವಿದ್ದರೂ ಅದನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿ, ಇಂದು ಗೋಮಾಂಸ ತಿನ್ನುವುದನ್ನು 'ಮಹಾಪಾಪ' ಎಂಬುದಾಗಿ ತಮ್ಮ ವಾದವನ್ನು ಮಂಡಿಸುತ್ತಿವೆ. "ಮಾಂಶಾಸನದ ವಿರುದ್ಧ ವಿಚಾರ ಪ್ರಚಾರವು ನಡೆದೇ ಇತ್ತು. ಒಮ್ಮೆಲೆ ಮಾಂಸವನ್ನು ಬಿಡುವದು ಅಸಾಧ್ಯವಾದದ್ದು. ಆದ್ದರಿಂದ ಅದನ್ನು ದಿನಾಲೂ ತಿನ್ನಬೇಡಿರಿ, ಯಜ್ಞದ ಕಾಲಕ್ಕೆ ಪಶುಹತ್ಯೆ ಮಾಡಲು ಅಡ್ಡಿ ಇಲ್ಲ, ಆ ಕಾಲಕ್ಕೆ ಮಾಂಸವನ್ನು ಗ್ರಹಿಸಬಹುದೆಂದು ಋಷಿಗಳು ಹೇಳುತ್ತಿದ್ದರು. ಇಷ್ಟು ಸವಲತ್ತು ಸಿಕ್ಕದ್ದು ಸಾಕಾಯಿತು. ಎಷ್ಟೋ ಜನರು ದಿನಾಲು ಯಜ್ಞ ಮಾಡಲಾರಂಭಿಸಿದರು. ಒಂದೇ ಸವನೆ ಹನ್ನೆರಡು ವರ್ಷಗಳವರೆಗೆ ನಡೆಯುವ ಯಜ್ಞಗಳನ್ನು ಮಾಡಲಾರಂಭಿಸಿದರು. ಮಾಂಸ ತಿನ್ನುವುದಕ್ಕಾಗಿ ದಿನಾಲು ಒಂದು ಹೊಸ ಯುಕ್ತಿ ಹುಡುಕಲಾರಂಭಿಸಿದರು ಜನರು! ಅಲ್ಲಲ್ಲಿ ಯಜ್ಞ ಮಾಡಲಾರಂಭಿಸಿದರು. ಮತ್ತು ಇದೆಲ್ಲ ಹಿಂಸೆ ದೇವರ ಹೆಸರಿನಲ್ಲಿ ಮಾಡಲಾಗುತ್ತಿತ್ತು. ಇಂತಹ ಒಂದು ಅವನತಿಯ ಕಾಲದಲ್ಲಿ ಭಾರತ ಭೂಷಣರಾದ ಭಗವಾನ್ ಬುದ್ಧರು ಅವತರಿಸಿದರು. ಶ್ರೀಕೃಷ್ಣನು ಗೋವನ್ನು ಉಳಿಸಿದನು. ಬುದ್ಧ ಭಗವಾನರು ಕುರಿಮರಿಗಳನ್ನು ಉಳಿಸಲು ಧಾವಿಸಿದರು. ಧರ್ಮದ ಹೆಸರನ್ನೆತ್ತಿ ಪಶುವಧೆ ಮಾಡಬೇಡಿರೆಂದು ಅವರ ಮುಖ್ಯವಾದ ಹೇಳಿಕೆ."[೧೭] ಯಜ್ಞಕ್ಕೆ ಬಳಸುತ್ತಿದ್ದ ಪಶುವಧೆಯನ್ನು ವೈದಿಕರು ಕಾಲಾನುಕ್ರಮದಲ್ಲಿ ಸಂಪೂರ್ಣವಾಗಿ ನಿಲ್ಲಿಸಿದರು. ಆದರೆ ತಳಸಮುದಾಯದ ಜನರು ಮಾತ್ರ ಈ ಕೊಲ್ಲುವ ಪ್ರವೃತ್ತಿಯನ್ನು ನಿಲ್ಲಿಸಲಿಲ್ಲ ಎಂಬುದು ಈ ವೈದಿಕಧಾರೆಗಳ ನಿಲುವಾಗಿದೆ.

ಬಾಬಾಸಾಹೇಬ್ ಅಂಬೇಡ್ಕರರು ಮಾಂಸಾ ಆಹಾರವನ್ನು ಬೌದ್ಧಧರ್ಮದ ತಾತ್ವಿಕ ನೆಲೆಯಲ್ಲಿ ಸಮರ್ಥಿಸಿಕೊಳ್ಳು ನಿಲುವು ಹೀಗಿದೆ: "ಸಿಂಹ ಎಂಬ ಬೌದ್ಧ ದಂಡನಾಯಕನೊಬ್ಬ ಬುದ್ಧ ಮತ್ತು ಅವರ ಶಿಷ್ಯರನ್ನು ಕರೆದು ವೈಶಾಲಿಯ ತನ್ನ ಮನೆಯಲ್ಲಿ ಔತಣ ನೀಡುತ್ತಾನೆ. ಆತ ನೀಡುವ ಊಟದಲ್ಲಿ ಊಟದಲ್ಲಿ ಸತ್ತ ಹೋರಿಯ ಮಾಂಸವನ್ನು ಬಡಿಸಲಾಗಿರುತ್ತದೆ. ಬೌದ್ಧರು ಅದನ್ನು ಸೇವಿಸಿರುತ್ತಾರೆ. ಆಗ ಜೈನರು ಇದನ್ನು ಖಂಡಿಸುತ್ತಾರೆ. ಆಗ ಬುದ್ಧ ಸ್ವತಃ ಭಿಕ್ಕುಗಳ ಮಾಂಸಾಹಾರ ಕುರಿತು ನಿಯಮ ರೂಪಿಸುತ್ತಾರೆ. ಆ ಪ್ರಕಾರ ಐದು ಬಗೆಯ ಮಾಂಸಗಳು ಭಿಕ್ಕುಗಳ ಸೇವನೆಗೆ ಅರ್ಹವೆಂದು ಪರಿಗಣಿಸಲಾಗುತ್ತದೆ. ಆ ಪೈಕಿ ತಾವಾಗೆ ಸತ್ತು ಹೋಗುವ ಪ್ರಾಣಿಯ ಮಾಂಸ

ಭಿಕ್ಕುಗಳ ಸೇವನೆಗೆ ಅರ್ಹ ಎನಿಸುತ್ತದೆ."[೧೮] ಆದರೆ ತಿನ್ನುವುದಕ್ಕಾಗಿಯೇ ಹಿಂಸೆ ಮಾಡುವುದು ಬೌದ್ಧಧರ್ಮದ ನಿಯಮವಾಗಿರಲಿಲ್ಲ. ಹೀಗಾಗಿ ಬೌದ್ಧಧರ್ಮದಲ್ಲಿ ಮಾಂಸಾಹಾರಕ್ಕೆ ಯಾವುದೇ ವಿರೋಧವಿಲ್ಲ ಎಂಬ ಚಿಂತನೆಯನ್ನು ಅಂಬೇಡ್ಕರ್ ಪ್ರತಿಪಾದಿಸುತ್ತಾರೆ. ಆ ಮೂಲಕವಾಗಿ ಬುದ್ಧನ ಈ ಅಹಿಂಸ ನೀತಿಯನ್ನು ಪಾಲಿಸಿಕೊಂಡು ಬಂದಿರುವ ದಲಿತ ಸಮುದಾಯವು ಮೂಲತಃ ಬೌದ್ಧರು ಎಂಬುದಾಗಿ ಪ್ರತಿಪಾದಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕನ್ನಡದ ಪ್ರಗತಿಪರ ಚಿಂತಕರು ಮಾಂಸಾಹಾರವನ್ನು ಬೌದ್ಧಧರ್ಮದ ತಾತ್ವಿಕ ನೆಲೆಯಲ್ಲಿ ಸಮರ್ಥಿಸಿಕೊಂಡಿದ್ದಾರೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಹಲವು ಚಿಂತನಧಾರೆಗಳು ದಲಿತರ ಸಾಂಸ್ಕೃತಿಕ ಆಹಾರ ಪದ್ಧತಿಯನ್ನು ಸಮರ್ಥಿಸಿಕೊಳ್ಳುವುದಕ್ಕೆ ಬೌದ್ಧ ದರ್ಶನದ ತಾತ್ವಿಕ ನಿಲುವುಗಳನ್ನು ಬಳಸಿಕೊಂಡಿವೆ. ಈ ನೆಲೆಯಲ್ಲಿ ಮಹಾದೇವ ಶಂಕನಪುರ ಅವರು ಕರ್ನಾಟಕದ ದಲಿತ ಪರಂಪರೆಯ ಸ್ಥಳೀಯ ಸಾಂಸ್ಕೃತಿಕ ದೈವಗಳಲ್ಲಿ ಅಂತರ್ಗತವಾಗಿರುವ ಬೌದ್ಧ ನೆಲೆಗಳನ್ನು ಮಾಂಸಾಹಾರದ ನೆಲೆಯಲ್ಲಿ ಗುರುತಿಸಿದ್ದಾರೆ. ಇವರು ಮಂಟೇಸ್ವಾಮಿ ಪರಂಪರೆಯಲ್ಲಿ ಕಂಡುಬರುವ ಬೌದ್ಧಧರ್ಮದ ಚಹರೆಗಳನ್ನು ಗುರುತಿಸುವ ಬಗೆಯು ಈ ಮುಂದಿನಂತಿದೆ: "ಮಂಟೇಸ್ವಾಮಿ ಸತ್ತ ಎಮ್ಮೆ ಕರುವನ್ನು ಹೊತ್ತುಕೊಂಡು ಹೋಗುವಂತೆ ಕಾವ್ಯ ಕಟ್ಟುವ ನೀಲಗಾರರು ದಲಿತ ಮತ್ತು ಬೌದ್ಧ ಸಂಸ್ಕೃತಿಯ ಸಾಂಕೇತಿಕ ಚಾರಿತ್ರಿಕ ಸುಳಿವನ್ನು ಕೊಡುತ್ತಾರೆ. ಈ ಪ್ರಸಂಗದಲ್ಲಿ ತಟ್ಟನೆ ನೆನಪಾಗುವುದು ದಲಿತರಲ್ಲಿ ಇಂದಿಗೂ ಇರುವ ಸತ್ತ ದನವನ್ನು ಹೊತ್ತು ತಂದು ಕೂದು ತಿನ್ನುವ ಪದ್ಧತಿ. ಹಾಗೇ ಬುದ್ಧರ ಕಾಲಕ್ಕೂ ಸಹ ಬೌದ್ಧ ಭಿಕ್ಕುಗಳಲ್ಲಿಯೂ ಮಾಂಸಹಾರಕ್ಕೆ ಸಂಬಂಧಿಸಿದಂತೆ ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನಲು ಅನುಮತಿ ಇದ್ದಂತಹ ಅಂಶ. ಇಲ್ಲಿ ಸತ್ತ ದನದ ಮಾಂಸ ತಿನ್ನುವುದನ್ನು ಹಾಗೂ ಆ ಪದ್ಧತಿಯು ಸರಿ ಎಂಬುದನ್ನು ನಾನು ಸಮರ್ಥಿಸುತ್ತಿಲ್ಲ. ಅವುಗಳನ್ನು ಬಿಡಲೇಬೇಕು. ಆದರೆ ದಲಿತರಲ್ಲಿರುವ ಈ ಆಚರಣೆ ಅಥವಾ ಪದ್ಧತಿ ಏನು ಹೇಳುತ್ತದೆ, ಇದು ಯಾರ ಪಳಿಯುಳಿಕೆ, ಈ ಅಂಶ ಏನನ್ನು ಪ್ರತಿಪಾದಿಸುತ್ತದೆ ಎಂಬುದು ಮುಖ್ಯವಾಗಿರುತ್ತದೆ."[೧೯] ಹೀಗೆ ದಲಿತರ ಸತ್ತ ಮಾಂಸಹಾರ ಸಂಸ್ಕೃತಿಯ ಹಿಂದೆ ಅಂತರ್ಗತವಾಗಿರುವ ಅಂಶಗಳನ್ನು ದಲಿತರ ಸ್ಥಳೀಯ ದೈವಗಳೊಂದಿಗೆ ಅನುಸಂಧಾನಗೊಳಿಸುವ ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸಿದ್ದಾರೆ.

ಹೀಗೆ ಮಾಂಸಹಾರ ಸಂಸ್ಕೃತಿಯನ್ನು ಸಮರ್ಥಿಸಿಕೊಳ್ಳುವುದಕ್ಕೆ ಮತ್ತು ವಿರೋಧಿಸುವುದಕ್ಕೆ ಬೌದ್ಧ ದರ್ಶನವನ್ನು ಆಧಾರವಾಗಿಟ್ಟುಕೊಂಡು ಹಲವು ಧಾರೆಗಳು ವ್ಯಕ್ತವಾಗಿರುವುದು ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುತ್ತದೆ. ಈ ಧಾರೆಗಳ ಹಿಂದೆ ರಾಜಕೀಯ ಆಯಾಮವಿದೆ. ಈ ರಾಜಕೀಯ ನೆಲೆಯು ವೈದಿಕಧಾರೆಗಳಿಗೆ ತಮ್ಮ ಸನಾತನಧರ್ಮ ಮತ್ತು ಸಂಸ್ಕೃತಿಯನ್ನು ವೈಭವೀಕರಣಗೊಳಿಸುವುದು, ಹಾಗೆಯೇ ತಮ್ಮ ಎದುರಾಳಿ ಎಂದು ಭಾವಿಸಿರುವ ದಲಿತರು ಮತ್ತು ಮುಸ್ಲಿಂ ಧರ್ಮವನ್ನು ಹತ್ತಿಕ್ಕುವ ನೆಲೆಯದಾಗಿದೆ. ಆದರೆ ಅವೈದಿಕ ಧಾರೆಯ ದಲಿತ ಸಮುದಾಯಗಳಿಗೆ ತಮ್ಮ ಸಾಂಸ್ಕೃತಿಕ ಆಹಾರ ಕ್ರಮವನ್ನು ಉಳಿಸಿಕೊಳ್ಳುವ ಮೂಲಕ, ವೈದಿಕತೆಯು ತಮ್ಮ ಮೇಲೆ ವಿಧಿಸುತ್ತಿರುವ ಧಾರ್ಮಿಕ ನಿರ್ಬಂಧಗಳನ್ನು ಮೀರುವ ನೆಲೆಯದಾಗಿದೆ.

ಕೊನೆ ಟಿಪ್ಪಣಿಗಳು

೧. ಹೆಚ್.ಟಿ.ಪೋತೆ, ವಿಚಾರ ಸಾಹಿತ್ಯ ೨೦೦೯, ೬೩

೨. ಹೊ.ಬ.ನಾಗ ಸಿದ್ದಾರ್ಥ ಹೊಲೆಯಾರು, ವಿಶ್ವರೂಪ, ಪು–೧೩

೩. ಮೂಡ್ನಾಕೂಡು ಚಿನ್ನಸ್ವಾಮಿ, ಮರಳಿ ಮನೆಗೆ, ಪು–೨೦೫

೪. ಶಿವಕುಮಾರ, ಅಂಬೇಡ್ಕರ್‌ವಾದ ಮತ್ತು ದಲಿತ ಸಾಹಿತ್ಯ, ಪು–೪, ೫

೫. ಧರ್ಮಾನಂದ ಕೊಸಾಂಬಿ, ಖುಲಾಸ ಮತ್ತು ಇತರ ಲೇಖನಗಳು, ಪು–೩೪

೬. ಮರಳಿ ಮನೆಗೆ, ಪು–೩೯

೭. ಓ. ರಾಜಣ್ಣ, ಬುದ್ಧಧಮ್ಮ ಹಾಗೂ ಸಾಮಾಜಿಕ ಚಿಂತನೆಗಳು, ಪು–೧೬, ೧೭

೮. ಮರಳಿ ಮನೆಗೆ, ಪು–೫೨

೯. ಸ್ವಾಮಿ ಧರ್ಮತೀರ್ಥ, ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ, ಪು–೧೩೦

೧೦. ಎಸ್.ಶ್ರೀಕಂಠಶಾಸ್ತ್ರಿ, ಸಂಶೋಧನ ಲೇಖನಗಳು, ಪು–೧೯೪

೧೧. ಸಂಶೋಧನ ಲೇಖನಗಳು, ಎಸ್.ಶ್ರೀಕಂಠಶಾಸ್ತ್ರಿ, ಪು–೧೯೯

೧೨. ಖುಲಾಸಾ ಮತ್ತು ಇತರ ಲೇಖನಗಳು, ಪು–೩೦

೧೩. ಸಾನೆ ಗುರೂಜಿ, ಭಾರತೀಯ ಸಂಸ್ಕೃತಿ, ಪು–೨೬೫,೨೬೬

೧೪. ಕೆ. ಬಾಲಗೋಪಾಲ್, ಪ್ರಾಚೀನ ಭಾರತದ ಚರಿತ್ರೆ, ಪು–೧೪೦

೧೫. ಎಸ್.ಎನ್.ಬಾಲಗಂಗಾಧರ, ಬುದ್ಧಿಜೀವಿಗಳ ಮೂಢನಂಬಿಕೆ, ಪು–೫೦

೧೬. ಭೀಮರಾವ್ ಚಿಟಗುಪ್ಪಿ, ದಾಸ ಸಾಹಿತ್ಯದಲ್ಲಿ ಬೌದ್ಧವತಾರ, ಪು–೧೯

೧೭. ಭಾರತೀಯ ಸಂಸ್ಕೃತಿ, ಪು–೨೧೩,೨೧೪

೧೮. ಮರಳಿ ಮನೆಗೆ, ಪು–೨೧೨

೧೯. ಅದೇ, ಪು–೨೧೨

* * *

అధ్యాయ: ಎಂಟು

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನದ ಆರ್ಥಿಕ ಆಯಾಮಗಳು

ಅಧ್ಯಾಯ : ಎಂಟು

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನದ ಆರ್ಥಿಕ ಆಯಾಮಗಳು

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನವನ್ನು ಕೇಂದ್ರವಾಗಿಟ್ಟುಕೊಂಡು ವಿಭಿನ್ನ ನೆಲೆಯ ಚಿಂತನಧಾರೆಗಳು ಪ್ರಕಟಗೊಂಡಿವೆ. ಈ ಧಾರೆಗಳು ಸಮಕಾಲೀನ ಸಂದರ್ಭದಲ್ಲಿ ಸಾಮಾಜಿಕವಾಗಿ ಹಿಂದುಳಿದಿರುವ ಸಮುದಾಯಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವ ಹಂಬಲಹೊತ್ತಿವೆ. ಈ ಹಿನ್ನೆಲೆಯಲ್ಲಿ ಬಾಬಾಸಾಹೇಬ ಅಂಬೇಡ್ಕರ್ ವಿಚಾರಧಾರೆಗಳಿಂದ ಪ್ರಭಾವಿತರಾದ ಪ್ರಗತಿಪರ ಚಿಂತಕ ವರ್ಗವು ಹಿಂದುಳಿದ ದಲಿತರಿಗೆ ಸ್ಪಂದಿಸುವ ನೆಲೆಯಲ್ಲಿ ಆರ್ಥಿಕ ಚಿಂತನೆಗಳನ್ನು ಪ್ರಕಟಿಸುತ್ತ ಬಂದಿದೆ. ಈ ಧಾರೆಗಳು ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕಾದರೆ ದಲಿತರು ಆರ್ಥಿಕವಾಗಿ ಸಬಲರಾಗಬೇಕು ಎಂಬ ನಿಲುವನ್ನು ತಾಳಿವೆ. ಆದ್ದರಿಂದ ಪುರೋಹಿತಶಾಹಿಯ ವರ್ಣಧರ್ಮ ನೀತಿಯಿಂದ ವಿಮೋಚನೆಯನ್ನು ಬಯಸಿ, ಬೌದ್ಧಧರ್ಮಕ್ಕೆ ಮತಾಂತರಗೊಳ್ಳುವ ಜನತೆಗೆ ಅವರ ಸಾಮಾಜಿಕ ಸ್ಥಾನಮಾನಗಳನ್ನು ಬದಲಾಯಿಸುವಂತಹ ಅವಕಾಶಗಳನ್ನು ಕಲ್ಪಿಸಿಕೊಟ್ಟಾಗ ಮಾತ್ರ ಮತಾಂತರ ಪ್ರಕ್ರಿಯೆಯು ಸಾರ್ಥಕವಾಗುತ್ತದೆಂಬುದು ಈ ಚಿಂತನೆಗಳ ಪ್ರಮುಖ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಧಮ್ಮದೀಕ್ಷೆಯನ್ನು ಸ್ವೀಕರಿಸಿದ ದಲಿತರಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳನ್ನು ಕಲ್ಪಿಸುವ ನೆಲೆಯಲ್ಲಿ ಅಭಿವ್ಯಕ್ತಿಗೊಂಡಿರುವ ಕನ್ನಡದ ಬೌದ್ಧ ಚಿಂತನೆಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚೆಗೆ ಒಳಪಡಿಸಲಾಗುವುದು.

ಕನ್ನಡ ಚಿಂತನ ಸಾಹಿತ್ಯದಲ್ಲಿ ಪ್ರಕಟಗೊಂಡಿರುವ ಬೌದ್ಧ ಧಾರೆಗಳು ಹಲವು ದಾರ್ಶನಿಕರ ವಿಚಾರಗಳೊಂದಿಗೆ ಅನುಸಂಧಾನಗೊಂಡಿವೆ. ಈ ಅನುಸಂಧಾನದಿಂದ ಕಂಡುಕೊಂಡ ಒಟ್ಟಾರೆ ಫಲಿತವನ್ನು ತನ್ನ ಸ್ಥಳೀಯ ಸಮಸ್ಯೆಗಳಿಗೆ ಪ್ರತಿಕ್ರಿಯಿಸುವ ನೆಲೆಯಲ್ಲಿ ಕನ್ನಡದ ವಿಚಾರವಾದಿಗಳು ತಮ್ಮ ನಿಲುವುಗಳನ್ನು ದಾಖಲಿಸಿದ್ದಾರೆ. ಹೀಗಾಗಿ ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುವ ಬೌದ್ಧ ಚಿಂತನೆಗಳು ಹಲವಾರು ದಾರ್ಶನಿಕ ವ್ಯಕ್ತಿ ಹಾಗೂ ಪಂಥಗಳಿಂದ ಪ್ರೇರಣೆಗೊಂಡವುಗಳಾಗಿವೆ. ಇಲ್ಲಿ ಆರ್ಥಿಕತೆಯನ್ನು ಕೇಂದ್ರವಾಗಿಟ್ಟುಕೊಂಡು ವ್ಯಕ್ತವಾಗಿರುವ ಚಿಂತನೆಗಳಿಗೆ ತಮ್ಮದೆ ಆದ ತಾತ್ವಿಕ ಆಯಾಮವಿದೆ. ಈ ಆಯಾಮವು ವಿಭಿನ್ನವಾದ ನೆಲೆಯಿಂದ ಕೂಡಿದೆ. ಇಂದು ಬೌದ್ಧಧಮ್ಮ ದೀಕ್ಷೆಯನ್ನು ಸ್ವೀಕರಿಸುತ್ತಿರುವವರ ಸಂಖ್ಯೆಯು ದಿನದಿಂದ ದಿನಕ್ಕೆ ಅಧಿಕವಾಗುತ್ತಿದೆ. ಆದರೆ ಧಮ್ಮದೀಕ್ಷೆಯನ್ನು ಸ್ವೀಕರಿಸಿದ ದಲಿತರ ಜೀವನ ಕ್ರಮದಲ್ಲಿ ಯಾವುದೇ ರೀತಿಯ ಬದಲಾವಣೆಗಳು

ಕಂಡುಬರುತ್ತಿಲ್ಲ. ಬಾಬಾಸಾಹೇಬರು ದಲಿತರಿಗೆ ಬೌದ್ಧಧರ್ಮದತ್ತ ಮಾರ್ಗ ತೋರಿದ್ದು ಒಂದು ಧರ್ಮವನ್ನು ತೊರೆದು ಮತ್ತೊಂದು ಧರ್ಮವನ್ನು ಸೇರುವುದಕ್ಕಾಗಿಯಲ್ಲ. ಮೂಲಭೂತವಾದಿ ನೆಲೆಯ ಹಿಂದುತ್ವದಲ್ಲಿ ದಲಿತರು ಸ್ವಾಭಿಮಾನದಿಂದ ಬದುಕಲು ಮತ್ತು ಸಾಮಾಜಿಕವಾಗಿ ಗೌರವಯುತ ಬದುಕನ್ನು ಕಟ್ಟಿಕೊಳ್ಳಲು ಅವಕಾಶವಿಲ್ಲವೆಂಬುದನ್ನರಿತು. ಈ ಕಾರಣದಿಂದ ಚರಿತ್ರೆಯಲ್ಲಿ ದಲಿತರ ಪರವಾಗಿ ನಿಂತಿದ್ದ ಬೌದ್ಧಧರ್ಮದ ದಾರಿಯನ್ನು ತೋರಿಸಿಕೊಟ್ಟರು ಮಾತ್ರವಲ್ಲ, ತಾವು ಕೂಡ ತಮ್ಮ ಲಕ್ಷಾಂತರ ಅನುಯಾಯಿಗಳೊಂದಿಗೆ ಬೌದ್ಧಧಮ್ಮ ದೀಕ್ಷೆ ಸ್ವೀಕರಿಸಿದರು. ಈ ಧಮ್ಮ ದೀಕ್ಷೆಯು ಜಾಗೃತ ಪ್ರಜ್ಞೆಯಿಂದ ಕೂಡಿತ್ತು. ಇದನ್ನು ಸ್ಪಷ್ಟವಾಗಿ ಅರಿತಿರುವ ಕನ್ನಡದ ಬಹುತೇಕ ಪ್ರಗತಿಪರ ಚಿಂತಕರು, ಈ ದೀಕ್ಷಾ ಪ್ರಕ್ರಿಯೆಯಿಂದಾಗಿ ದಲಿತರಲ್ಲಿ ಯಾವುದೇ ಬದಲಾವಣೆಗಳು ಕಂಡುಬರದಿರುವುದನ್ನು ಗಮನಿಸಿ, ನವಬೌದ್ಧರ ಪ್ರಗತಿಗಾಗಿ ಕೆಲವು ಆರ್ಥಿಕ ಕೇಂದ್ರಿತ ಚಿಂತನೆಗಳನ್ನು ಪ್ರಕಟಿಸಿದ್ದಾರೆ. ಈ ಚಿಂತನೆಗಳು ಸಾಮಾಜಿಕ ಕಾಳಜಿಯಿಂದ ಕೂಡಿದ್ದು, ಈ ಚಿಂತನೆಗಳ ಹಿಂದೆ ಬಾಬಾಸಾಹೇಬರ ತತ್ವಾದರ್ಶಗಳು ಅಂತರ್ಗತವಾಗಿರುವುದು ಕಂಡುಬರುತ್ತದೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುವ ಬೌದ್ಧಧರ್ಮ ಹಾಗೂ ದರ್ಶನ ಕೇಂದ್ರಿತವಾದ ಆರ್ಥಿಕ ಚಿಂತನೆಗಳು, ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಜನತೆಗೆ ಉತ್ತಮ ಸ್ಥಾನಮಾನಗಳನ್ನು ಕಟ್ಟಿಕೊಡುವ ನೆಲೆಯವುಗಳಾಗಿವೆ. ಇಲ್ಲಿನ ಪ್ರಗತಿಪರ ಚಿಂತಕರು ದಲಿತರು ಹಾಗೂ ಹಿಂದುಳಿದವರ ಪ್ರಗತಿಗಾಗಿ ಬೌದ್ಧಧರ್ಮವನ್ನೇ ಆಧಾರವಾಗಿಟ್ಟುಕೊಳ್ಳುವುದಕ್ಕೆ ಪ್ರಮುಖ ಕಾರಣ, ಪುರೋಹಿತಶಾಹಿ ಧರ್ಮದ ಅಸಮಾನತೆಯನ್ನು ಮೀರಿ ಸಮಾನತೆಯನ್ನು ಸಾರಿದವನು ಬುದ್ಧ. ಆದ್ದರಿಂದಾಗಿ ಇಂದು ಮೂಲಭೂತವಾದಿ ನೆಲೆಗಳನ್ನು ಮೀರಿ ಸಮಾನತೆಯ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಬೇಕಾದ ಅವಕಾಶಗಳು ಬೌದ್ಧಧರ್ಮದಲ್ಲಿವೆ ಎಂಬ ಕಾರಣದಿಂದಾಗಿ ಪ್ರಗತಿಪರ ಚಿಂತನಧಾರೆಗಳು ಈ ಧರ್ಮದತ್ತ ಹೆಚ್ಚು ಗಮನಹರಿಸುತ್ತಿವೆ. ಬೌದ್ಧಧರ್ಮವು ಪ್ರಾಚೀನ ದಿನಮಾನಗಳಲ್ಲಿ ಸಾಮಾಜಿಕವಾಗಿ ಹಿಂದುಳಿದವರನ್ನು ಸಮಾಜದ ಮುಂಚೂಣಿಗೆ ತರುವಲ್ಲಿ ಅವಿರತ ಶ್ರಮವನ್ನು ವ್ಯಕ್ತಪಡಿಸಿರುವ ಬಗ್ಗೆ ಹಲವಾರು ದಾರ್ಶನಿಕರು ತಮ್ಮ ಅಧ್ಯಯನ ಹಾಗೂ ಚಿಂತನೆಗಳ ಮೂಲಕ ಗುರುತಿಸಿದ್ದಾರೆ.

ಭಾರತದ ಮಾರ್ಕ್ಸ್‌ವಾದಿ ಚಿಂತಕರಾಗಿರುವ ಡಿ.ಡಿ.ಕೊಸಾಂಬಿಯವರು, ಬೌದ್ಧಧರ್ಮವು ಸಮಾಜದಲ್ಲಿ ತುಳಿತಕ್ಕೆ ಒಳಗಾಗಿರುವ ಆದಿಮ ಜನಾಂಗ ಮತ್ತು ಅಂದಿನ ಬುಡಕಟ್ಟು ಜನತೆಯ ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸುವಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸಿರುವ ಬಗ್ಗೆ ತಮ್ಮ ಅಧ್ಯಯನದಲ್ಲಿ ತಿಳಿಸಿದ್ದಾರೆ. ಇವರ ಪ್ರಕಾರ ಬೌದ್ಧಧರ್ಮವು ಜನಪರವಾದ ಧರ್ಮವಾಗಿದ್ದು, ಅವಕಾಶ ವಂಚಿತ ಜನರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುವಲ್ಲಿ ನಿರಂತರವಾಗಿ ಶ್ರಮಿಸಿದೆ. ಹೀಗಾಗಿ ಬೌದ್ಧಧರ್ಮದ ಪ್ರಚಾರಕ್ಕೆ ಮುಂದಾದ ಬೌದ್ಧ ಭಿಕ್ಕುಗಳು ಅರಣ್ಯವಾಸಿ ಸಮುದಾಯದ ಜನತೆಯಲ್ಲಿ ಧರ್ಮ ಪ್ರಚಾರದ ಜೊತೆಗೆ, ಅವರ ಆರ್ಥಿಕತೆ ಸ್ಥಿತಿಗತಿಯನ್ನು ಸುಧಾರಿಸುವತ್ತ ಶ್ರಮಿಸಿದ ಬಗೆಯನ್ನು ಇಲ್ಲಿ ಗುರುತಿಸಿದ್ದಾರೆ. ಕೊಸಾಂಬಿಯವರು ಬೌದ್ಧಧರ್ಮದ ಅಡಿಯಲ್ಲಿ ಗುರುತಿಸುವ ಆರ್ಥಿಕ ಆಯಾಮಗಳು ಹೀಗಿವೆ; "ಬೌದ್ಧಧರ್ಮವು ಪ್ರಚಾರಾತ್ಮಕವಾದುದು. ಪ್ರಾಣಿಗಳ

ಬಲಿ ಪದ್ಧತಿಯನ್ನು ಅನುಸರಿಸುತ್ತಿದ್ದ ಕಾಡು ಜನರಿಗೆ ಅಹಿಂಸೆಯನ್ನು, ಮಧ್ಯಮ ಮಾರ್ಗವನ್ನು ಬೋಧಿಸುವ ಪ್ರಧಾನ ಗುರಿಯನ್ನು ಬೌದ್ಧವು ಹೊಂದಿತ್ತು. ಇದಕ್ಕಾಗಿಯೇ ಪ್ರಾಣಿಬಲಿಗಳನ್ನು ಕೊಡುವ ಅರಣ್ಯಕರು ವಾಸಿಸುತ್ತಿದ್ದ ಕಾಡುಗಳಿಗೆ ಬೌದ್ಧ ಭಿಕ್ಕುಗಳು ಹುಡುಕಿಕೊಂಡು ಹೋಗುತ್ತಿದ್ದರು. ಬೌದ್ಧವನ್ನು ವರ್ತಕರು ಆಧರಿಸಿದರು. ಹಾಗಾಗಿ ಈ ಬೌದ್ಧ ಭಿಕ್ಕುಗಳು ವರ್ತಕರ ಮಾರ್ಗಗಳನ್ನೆ ಹಿಡಿದು, ಅವರಿಗೆ ಜೊತೆಯಾಗಿ, ಅರಣ್ಯ ಪ್ರಾಂತಗಳಿಗೆ ಹೋಗುತ್ತಿದ್ದರು. ಈ ವರ್ತಕರು ಬೌದ್ಧ ವಿಹಾರಗಳನ್ನು ಕಟ್ಟಿಸಿದರು. ಭಿಕ್ಷುಗಳು ಪ್ರಚಾರ ಕೆಲಸವನ್ನು ನಿಯೋಜನೆಯಿಂದ ನಡೆಸಲು ಅನುಕೂಲವಾಗುವಂತೆ ಅವರಿಗೆ ಮೂಲಧನಗಳನ್ನು ಕಲ್ಪಿಸಿಕೊಟ್ಟರು. ಈ ವಿಧಾನದಿಂದ ದಕ್ಕನ್ ಪ್ರಸ್ಥಭೂಮಿಯ ಮೇಲಿನ ಅರಣ್ಯ ಪ್ರದೇಶಗಳಲ್ಲಿ ವಿಪುಲ ಸಂಖ್ಯೆಯ ಬೌದ್ಧ ಆರಾಮಗಳು, ವರ್ತಕರ ವಿರಾಮ ಧಾಮಗಳು ನಿರ್ಮಾಣವಾದವು. ಈ ವರ್ತಕರ ಪ್ರಭಾವದಿಂದ ಅರಣ್ಯದ ಬುಡಕಟ್ಟುಗಳಲ್ಲಿ ವರ್ಗ ವಿಭಜನೆ ಮೊದಲಾಯಿತು. ಸಮುದಾಯದ ಪ್ರಮುಖರು ಶ್ರೀಮಂತರಾದರು. ವ್ಯವಸಾಯವನ್ನೂ, ಕಬ್ಬಿಣದ ಬಳಕೆಯನ್ನೂ ಭಿಕ್ಷುಗಳಿಂದ, ವರ್ತಕರಿಂದ ಅರಣ್ಯವಾಸಿಗಳು ಕಲಿತರು. ಹೊಸ ಸಮಾಜಕ್ಕೆ ಅಗತ್ಯವಾದ ಸಾಮಾಜಿಕ ನೀತಿಯನ್ನು ಸಹ ಭಿಕ್ಷುಗಳಿಂದ ಕಲಿತುಕೊಂಡರು"[೧] ಎಂಬುದು ಕೊಸಾಂಬಿಯವರ ನಿಲುವಾಗಿದೆ. ಬುದ್ಧನ ಸಮಕಾಲೀನ ಮತ್ತು ನಂತರದ ದಿನಗಳಲ್ಲಿ ಬೌದ್ಧ ಭಿಕ್ಕುಗಳು ಅರಣ್ಯ ವಾಸಿಗಳಿಗೆ ಧರ್ಮ ಪ್ರಚಾರ ಮಾಡುವುದರ ಜೊತೆಯಲ್ಲಿಯೇ, ಅವರ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಲು ಶ್ರಮಿಸಿದ ಬಗೆಯನ್ನು ತಮ್ಮ ಚಾರಿತ್ರಿಕ ಅಧ್ಯಯನದ ಮೂಲಕ ಗುರುತಿಸಿದ್ದಾರೆ. ವರ್ತಕರು ಮತ್ತು ಬೌದ್ಧ ಭಿಕ್ಕುಗಳು ಬುಡಕಟ್ಟುಗಳೊಂದಿಗೆ ಬೆರೆತು, ವ್ಯಾಪಾರ ಮತ್ತು ಧರ್ಮ ಬೋಧನೆಯನ್ನು ಮುಂದುವರೆಸಿದ್ದಾರೆ. ಈ ಪ್ರಕ್ರಿಯೆಯು ಬುಡಕಟ್ಟು ಜನತೆಯನ್ನು ಹೊಸ ಬದುಕಿನೆಡೆಗೆ ಕೊಂಡೊಯ್ಯುವುದಕ್ಕೆ ಸಹಕಾರಿಯಾಗಿತ್ತು. ಬ್ರಾಹ್ಮಣಧರ್ಮವು ತನ್ನ ಆಕ್ರಮಣ ಸಂಸ್ಕೃತಿಯಿಂದಾಗಿ, ಈ ನಾಡಿನ ಮೂಲ ನಿವಾಸಿಗಳಾದ ಆದಿಮ ಮತ್ತು ಬುಡಕಟ್ಟು ಸಮುದಾಯಗಳನ್ನು ಹತ್ತಿಕ್ಕುತ್ತ ಬಂದಿದೆ. ಆದರೆ ಬೌದ್ಧಧರ್ಮದ ಅಡಿಯಲ್ಲಿ ಪ್ರಾಚೀನ ದಿನಗಳಲ್ಲಿ ನಡೆದಿರುವ ಆರ್ಥಿಕ ಬೆಳವಣಿಗೆಯನ್ನು ಡಿ.ಡಿ.ಕೊಸಾಂಬಿಯವರು ತಮ್ಮ ಅಧ್ಯಯನದಲ್ಲಿ ಗುರುತಿಸಿದ್ದಾರೆ.

ಹಿಂದುತ್ವದ ಅಸಮಾನತೆಗೆ ಪರ್ಯಾಯವಾಗಿ ಸಮಾನತೆಯನ್ನು ಪ್ರತಿಪಾದಿಸಲು ಜನ್ಮತಳೆದ ಬೌದ್ಧಧರ್ಮ ಹಾಗೂ ಅದರ ಅನುಯಾಯಿ ಭಿಕ್ಕುಗಳು, ಮೂಲಭೂತವಾದ ಸ್ವರೂಪವನ್ನು ಪಡೆದುಕೊಂಡ ಬಗೆಯನ್ನು ಆರ್ಥಿಕ ಕೇಂದ್ರಿತ ನೆಲೆಯಲ್ಲಿ ಕೊಸಾಂಬಿಯವರು ಗುರುತಿಸಿದ್ದಾರೆ. ಬೌದ್ಧಧರ್ಮದಲ್ಲಿ ನೆಲೆಯನ್ನು ಕಂಡುಕೊಂಡಿರುವ ಮೂಲಭೂತವಾದವು ಬುದ್ಧನ ಕಾಲದ್ದಾಗಿರಲಿಲ್ಲ. ಬುದ್ಧನ ನಂತರ ಹಲವಾರು ಶತಮಾನಗಳ ತರುವಾಯದಲ್ಲಿ ಬೌದ್ಧ ಮತ್ತು ಹಿಂದೂಧರ್ಮದ ಸಂಘರ್ಷದಿಂದಾಗಿ, ಬೌದ್ಧಧರ್ಮವು ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡಿತು. "ಶಂಕರನ ಕಾಲಕ್ಕೆ ಬೌದ್ಧ ಮಠಗಳಲ್ಲಿ ಆಚರಣೆಯಲ್ಲಿದ್ದ ಬೌದ್ಧಧರ್ಮವು ತನ್ನ ಮೂಲ ತತ್ವಗಳನ್ನೆಲ್ಲಾ ಮರೆತು ಕೇವಲ ಒಂದು ಲಾಮಧರ್ಮವಾಗಿ ಅವನತಿ ಹೊಂದಿತು. ಈ ಅಸಂಖ್ಯಾತ ವಿಹಾರಗಳು ದೇಶದ ಖಜಾನೆಯನ್ನು ಬರಿದು ಮಾಡುತ್ತಿದ್ದವು. ಶಂಕರನ ಕ್ರಿಯೆ ಈ ವಿಹಾರಗಳ ನಿರ್ಮೂಲನೆಗೆ

ಪ್ರೇರಕವಾಯಿತು"[೨] ಎಂಬುದಾಗಿ ಬುದ್ಧನ ತರುವಾಯ ಹಲವಾರು ಶತಮಾನಗಳ ನಂತರ, ಆರ್ಥಿಕ ಕೇಂದ್ರಿತ ಶಕ್ತಿಯಾಗಿ ಬೆಳೆದ ಬೌದ್ಧ ಮಠಗಳ ಕಾರ್ಯವೈಖರಿಯನ್ನು ಕೊಸಾಂಬಿಯವರು ಗುರುತಿಸುತ್ತಾರೆ. ಇತಿಹಾಸಕಾರರು ಹಾಗೂ ದಾರ್ಶನಿಕ ಚಿಂತಕರಾದ ಕೊಸಾಂಬಿಯವರು ಬೌದ್ಧಧರ್ಮದ ಆರ್ಥಿಕ ನೆಲೆಗಳನ್ನು ಪ್ರಮುಖವಾಗಿ ಎರಡು ನೆಲೆಗಳಲ್ಲಿ ಗುರುತಿಸುತ್ತಾರೆ. ಒಂದು, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಸಮುದಾಯಗಳ ಪ್ರಗತಿಗಾಗಿ ಬೌದ್ಧಧರ್ಮ ಹಾಗೂ ಬೌದ್ಧ ಭಿಕ್ಕುಗಳು ಶ್ರಮಿಸುವ ಮೂಲಕ, ಬುಡಕಟ್ಟುಗಳ ಆರ್ಥಿಕ ಸ್ಥಿತಿಗತಿಯು ಸುಧಾರಣೆಯನ್ನು ಕಂಡುಕೊಂಡಿರುವುದು. ಎರಡು, ಧರ್ಮ ಪ್ರಚಾರದ ಜೊತೆಯಲ್ಲಿ ಆರ್ಥಿಕ ಪ್ರಗತಿಯನ್ನು ಸಾಧಿಸುವ ನೆಲೆಯಲ್ಲಿ ಸಾಮಾನ್ಯ ಜನತೆಗೆ ಅರಿವು ಮೂಡಿಸುತ್ತಿದ್ದ ಭಿಕ್ಕುಗಳ ಮಠಗಳು ಆರ್ಥಿಕ ಕೇಂದ್ರಿಕರಣದ ತಾಣಗಳಾಗಿ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡಿದ್ದು. ಹೀಗಾಗಿ ಈ ಬೌದ್ಧಧರ್ಮವು ಜನರ ವಿಶ್ವಾಸವನ್ನು ಗಳಿಸುವಲ್ಲಿ ವಿಫಲಗೊಂಡಿದ್ದರಿಂದ ಶಂಕರಾಚಾರ್ಯನ ಆಕ್ರಮಣಕ್ಕೆ ಸುಲಭವಾಗಿ ಬಲಿಯಾಯಿತು ಎಂಬುದು ಕೊಸಾಂಬಿಯವರ ಧೋರಣೆಯಾಗಿದೆ.

ಕೊಸಾಂಬಿಯವರು ಗುರುತಿಸುವ ಬೌದ್ಧಧರ್ಮದ ವಿಭಿನ್ನ ಆರ್ಥಿಕ ಆಯಾಮಗಳು ವೈರುಧ್ಯದಿಂದ ಕೂಡಿವೆ. ಒಂದು ಬೌದ್ಧಧರ್ಮದ ಉದಾರವಾದ ಆರ್ಥಿಕ ನೀತಿಯನ್ನು ಪ್ರತಿಪಾದಿಸುವುದು. ಎರಡನೆಯದು, ಆರ್ಥಿಕವಾಗಿ ಮೂಲಭೂತವಾದಿ ಸ್ವರೂಪದ್ದಾಗಿದೆ. ಎರಡನೆಯ ಆಯಾಮವು ಸಂಪೂರ್ಣವಾಗಿ ಬುದ್ಧನ ತತ್ವ ಚಿಂತನೆಗಳಿಂದ ದೂರವಾಗಿದೆ. ಇದಕ್ಕೆ ಪ್ರಮುಖವಾದ ಕಾರಣವೆಂದರೆ, ಬುದ್ಧನ ತತ್ವ ಸಿದ್ಧಾಂತಗಳ ಎದುರು ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುವ ಕಾರಣದಿಂದಾಗಿ ಬ್ರಾಹ್ಮಣಧರ್ಮವು ಬೌದ್ಧಧರ್ಮವನ್ನು ತನ್ನ ತೆಕ್ಕೆಯೊಳ್ಳಕ್ಕೆ ಸೆಳೆದುಕೊಂಡಿತು. ಇದರಿಂದ ಶಂಕರಚಾರ್ಯರ ಕಾಲಕ್ಕಾಗಲೇ ಬೌದ್ಧಧರ್ಮವು ಮೂಲಭೂತವಾದ ಹಿಂದೂಧರ್ಮದ ಒಂದು ಭಾಗವಾಗಿಯೇ ಬೆಳೆದಿತ್ತು. ಹೀಗಾಗಿ ಹಿಂದೂಧರ್ಮದ ಆಕ್ರಮಣಕ್ಕೆ ಬೌದ್ಧಧರ್ಮ ಸಂಪೂರ್ಣವಾಗಿ ಒಳಗಾಗಿ, ತನ್ನ ಮೂಲ ನೆಲೆಗಳನ್ನು ಕಳೆದುಕೊಳ್ಳುತ್ತ ಬಂದಿದೆ. ಆದರೆ ಕೊಸಾಂಬಿಯವರು ಈ ಸೂಕ್ಷ್ಮಗಳನ್ನು ಗುರುತಿಸಿದರು ಸಹ, ಬ್ರಾಹ್ಮಣ ಧರ್ಮವೇ ಇಲ್ಲಿನ ಮಠಗಳ ಐಶಾರಾಮಿ ಜೀವನಕ್ಕೆ ಕಾರಣವೆಂಬುದನ್ನು ನೇರವಾಗಿ ವ್ಯಕ್ತಪಡಿಸುವುದಿಲ್ಲ. ಇದನ್ನು ಬೌದ್ಧಧರ್ಮದ ಚೌಕಟ್ಟಿನೊಳಗೆ ಗುರುತಿಸುತ್ತಾರೆ.

ಕೊಸಾಂಬಿಯವರ ವಿಷಯಗಳಿಗೆ ಪೂರಕವಾದ ನೆಲೆಯಲ್ಲಿ ಕನ್ನಡದ ಚಿಂತಕರಾದ ಅಮರೇಶ ನುಗಡೋಣಿಯವರು, ಬೌದ್ಧಧರ್ಮದಲ್ಲಿ ಅಂತರ್ಗತವಾಗಿರುವ ಆರ್ಥಿಕ ಮೂಲಭೂತವಾದಿ ನೆಲೆಗಳನ್ನು ಗುರುತಿಸಿದ್ದಾರೆ. ಬೌದ್ಧಧರ್ಮದ ಅವನತಿಗೆ ಈ ಬೌದ್ಧ ಭಿಕ್ಕುಗಳಿಗೆ ಉಂಟಾದ ಆರ್ಥಿಕ ಕೇಂದ್ರೀಕೃತವಾದ ನೀತಿಯೇ ಕಾರಣ ಎಂಬುದಾಗಿ ತಮ್ಮ ಚಿಂತನೆಗಳನ್ನು ಎತ್ತಿಹಿಡಿದಿದ್ದಾರೆ. ರಾಜಪ್ರಭುತ್ವದಿಂದ ಬೌದ್ಧಧರ್ಮವು ಹತ್ತಿಕ್ಕಲ್ಪಟ್ಟ ಬಗೆಯನ್ನು ಈ ಮುಂದಿನಂತೆ ಗುರುತಿಸಿದ್ದಾರೆ; "ಶಾತವಾಹನರು ಬೌದ್ಧರಿಗೂ, ಜೈನರಿಗೂ ಪ್ರೋತ್ಸಾಹ ನೀಡಿದ್ದರು. ವೈದಿಕ ಧರ್ಮಕ್ಕೆ ಮಾನ್ಯತೆ ಇತ್ತು. ಆದರೂ ಶಾತವಾಹನರ ಆಳ್ವಿಕೆಯ ಕಾಲದಲ್ಲಿ ಬೌದ್ಧರೂ ಹಿನ್ನೆಲೆಗೆ ಸರಿಯತೊಡಗಿದ್ದರು. ಬೌದ್ಧ ಭಿಕ್ಷುಕರು ವರ್ತಕರ ಜೊತೆ, ಕೃಷಿಕರ ಜೊತೆ ಸಂಬಂಧವನ್ನು ಬೆಳೆಸಿ ವಿಹಾರವನ್ನು ಕಟ್ಟಿಸಿಕೊಂಡರು. ಬೌದ್ಧರ

ಈ ವಿಹಾರಗಳು ಆರಂಭದಲ್ಲಿ ಭೋಗದ ತಾಣಗಳಾಗಿ, ನಂತರ ಸಂಪತ್ತುಗಳ ನೆಲೆಯಾಗಿ ರೂಪಗೊಂಡವು. ಬುದ್ಧನ ಸಿದ್ಧಾಂತಗಳು, ಬೌದ್ಧ ಭಿಕ್ಷುಕರಲ್ಲಿ ಬೇರೆ ಸ್ವರೂಪವನ್ನು ಪಡೆದವು. ಜನ ಸಾಮಾನ್ಯರ ಪಾಲಿ ಭಾಷೆಯನ್ನು ಬಳಸದೇ ಸಂಸ್ಕೃತವನ್ನು ಬಳಸಿದರು. ಮೂರ್ತಿಪೂಜೆಗೆ ಮುಂದಾದರು. ತಕ್ಕ ಮಟ್ಟಿಗೆ ಬೌದ್ಧಧರ್ಮದ ಪ್ರಭಾವದಿಂದ ಹಿಂದೆ ಸರಿದಿದ್ದ ವೈದಿಕಧರ್ಮವು ತನ್ನಲ್ಲಿ ಸುಧಾರಣೆಯನ್ನು ತಂದುಕೊಂಡಿತ್ತು. ಶಾತವಾಹನರ ಪ್ರಸಿದ್ಧ ದೊರೆ ಗೌತಮಿಪುತ್ರ ಶಾತಕರ್ಣಿ ವೈದಿಕ ಧರ್ಮವನ್ನು ಪುನಃ ಬಲಪಡಿಸಲು ಹೆಚ್ಚಿನ ಮಾನ್ಯತೆ ನೀಡಿದನು. ೨-೩ನೇ ಶತಮಾನದಿಂದ ಪ್ರಭುತ್ವಗಳು ಸಂಸ್ಕೃತವನ್ನು ಬೆಂಬಲಿಸತೊಡಗಿದವು. ಕರ್ನಾಟಕದ ಇದೇ ಹೊತ್ತಿನಲ್ಲಿ ಜೈನಧರ್ಮ ಬಲಗೊಂಡು ಅದು ಬಸದಿ, ಜಿನಾಲಯಗಳನ್ನು ನಿರ್ಮಿಸಿಕೊಳ್ಳತೊಡಗಿತು."[೩] ಆದ್ದರಿಂದ ತನ್ನ ಮೂಲ ಸ್ವರೂಪದಿಂದ ದೂರಸರಿದ ಬೌದ್ಧಧರ್ಮವು ಅವನತಿಯತ್ತ ಸಾಗಿತು ಎಂಬುದು ಇವರ ಚಿಂತನೆಯ ಸಾರವಾಗಿದೆ. ಲೇಖಕರು ಇಲ್ಲಿ ಚರ್ಚೆಗೊಳಪಡಿಸಿರುವ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ವೈದಿಕಧರ್ಮವು ತನ್ನ ಆಕ್ರಮಣಕಾರಿ ದಾಳಿಯನ್ನು ಬೌದ್ಧಧರ್ಮದ ಮೇಲೆ ನಡೆಸಿರುವುದರ ಸ್ವರೂಪ ತಿಳಿದುಬರುತ್ತದೆ. ಪಾಲಿ ಭಾಷೆಗೆ ಬದಲಿಗೆ ಸಂಸ್ಕೃತದ ಬಳಕೆ, ಮೂರ್ತಿ ಪೂಜೆಯ ಪ್ರವೇಶ, ಇವೆಲ್ಲ ವೈದಿಕಧರ್ಮದ ಆಚರಣ ವಿಧಿಗಳು. ಬೌದ್ಧಧರ್ಮದ ಸಾರವು ಇದಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿತ್ತು. ಬೌದ್ಧಧರ್ಮದ ಮೇಲೆ ವೈದಿಕಶಾಹಿಯ ಆಕ್ರಮಣವಾದ ತರುವಾಯ ಮೂಲಭೂತವಾದ ಸ್ವರೂಪ ಪಡೆದುಕೊಂಡು, ತನ್ನ ಮೂಲದಿಂದ ದೂರ ಸರಿದಿದೆ. ಹೀಗಾಗಿ ಈ ಸೂಕ್ಷ್ಮಗಳನ್ನು ಗಮನಿಸದೆ, ಇಲ್ಲಿನ ಮೂಲಭೂತವಾದ ನೆಲೆಗಳನ್ನು ಬೌದ್ಧಧರ್ಮದೊಂದಿಗೆ ಸಮೀಕರಿಸಲಾಗಿದೆ. ಹೀಗೆ ಬೌದ್ಧಧರ್ಮದಲ್ಲಿ ಅಂತರ್ಗತವಾಗಿರುವ ವೈದಿಕ ಮೂಲಭೂತವಾದಿ ಧಾರೆಗಳನ್ನು ಗುರುತಿಸದೆ, ಇದನ್ನು ಬೌದ್ಧಧರ್ಮಕ್ಕೆ ತಳುಕು ಹಾಕುವ ಪ್ರಯತ್ನಕ್ಕೆ ಹಲವು ವಿಚಾರಧಾರೆಗಳು ಮುಂದಾಗಿವೆ.

ಬೌದ್ಧಧರ್ಮವನ್ನು ಆಳವಾಗಿ ಅಧ್ಯಯನ ಮಾಡಿದ್ದ ಬಾಬಾಸಾಹೇಬರು ಬೌದ್ಧ ಸಂಘಗಳಲ್ಲಿ ಅಸ್ತಿತ್ವದಲ್ಲಿದ್ದ ಆರ್ಥಿಕ ಸಿದ್ಧಾಂತವನ್ನು, ಈ ಮೇಲೆ ಪ್ರಸ್ತಾಪಿಸಿದ ಚಿಂತಕರಿಗಿಂತ ಭಿನ್ನವಾಗಿ ಅರ್ಥೈಸಿದ್ದಾರೆ. ಇವರು ಸಮಕಾಲೀನ ಸಂದರ್ಭದಲ್ಲಿ ಸೃಷ್ಟಿಸಿಕೊಂಡಿರುವ ಸಂವಿಧಾನಿಕ ನೆಲೆಯ ಆರ್ಥಿಕತೆಗೆ ಸಂಬಂಧಿಸಿದ ತತ್ವ ಸಿದ್ಧಾಂತಗಳನ್ನು, ಪ್ರಾಚೀನ ಕಾಲದಲ್ಲಿಯ ಬೌದ್ಧ ಭಿಕ್ಕುಗಳ ಸಂಘಗಳಲ್ಲಿ ಅಸ್ತಿತ್ವದಲ್ಲಿರುವ ಬಗ್ಗೆ ತಮ್ಮ ಅಧ್ಯಯನದಲ್ಲಿ ಗುರುತಿಸಿದ್ದಾರೆ. "ಆಧುನಿಕ ಯುಗದಲ್ಲಿನ ಸಂಪತ್ತುಗಳು ಯಾವ ವಿಧಾನಗಳನ್ನು ಅನುಸರಿಸಿ ರಚನೆಯಾಗುತ್ತದೆಯೋ, ಬೌದ್ಧ ಭಿಕ್ಷು ಸಂಘಗಳು ಕೂಡ ಅದೇ ಬಗೆಯ ವಿಧಿ ವಿಧಾನಗಳನ್ನು ಆಧರಿಸಿ ಕಾರ್ಯ ನಿರ್ವಹಿಸುತ್ತಿದ್ದವು. ಪ್ರಜಾಪ್ರಭುತ್ವ ವ್ಯವಸ್ಥೆ ಎನ್ನುವುದು ಅತ್ಯಂತ ಅರ್ಥಪೂರ್ಣವಾಗಿ ಬೌದ್ಧ ಭಿಕ್ಷುಗಳ ಸಂಘದಲ್ಲಿ ಅಸ್ತಿತ್ವದಲ್ಲಿದ್ದುದ್ದನ್ನು ಅಂಬೇಡ್ಕರ್ ಗುರುತಿಸುತ್ತಾರೆ."[೪] ಇದು ಅವರಿಗಿದ್ದ ಬೌದ್ಧಧರ್ಮದ ಬಗೆಗಿನ ಆಳವಾದ ತಿಳವಳಿಕೆ ಮತ್ತು ವೈದಿಕತೆಯು ಸೃಷ್ಟಿಸಿಕೊಂಡು ಬಂದಿರುವ ಪ್ರಮಾಣಗಳ ಬಗೆಗಿನ ಸೂಕ್ಷ್ಮ ಗ್ರಹಿಕೆಯದಾಗಿತ್ತು.

ಹೀಗಾಗಿ ಸಮಕಾಲೀನ ಸಂದರ್ಭದಲ್ಲಿ ಅಸ್ತಿತ್ವದಲ್ಲಿರುವ ಪ್ರಜಾಪ್ರಭುತ್ವ ನೆಲೆಗಳನ್ನು, ಬೌದ್ಧ ಬಿಕ್ಕುಗಳ ಸಂಘದಲ್ಲಿಯೇ ಅಸ್ತಿತ್ವದಲ್ಲಿದ್ದ ಬಗೆಯನ್ನು ತಮ್ಮ ಚಿಂತನೆಗಳಲ್ಲಿ ಪ್ರತಿಪಾದಿಸಿದ್ದಾರೆ.

ಕರ್ನಾಟಕದಲ್ಲಿ ಬೌದ್ಧಧರ್ಮವು ವಿಮೋಚನ ಹೋರಾಟಗಳ ಭಾಗವಾಗಿ, ಸಾಹಿತ್ಯದ ಸ್ವರೂಪ ಪಡೆದುಕೊಂಡಿದ್ದು ಬಾಬಾಸಾಹೇಬರು ಬೌದ್ಧಧರ್ಮಕ್ಕೆ ಮತಾಂತರಗೊಂಡ ತರುವಾಯದಲ್ಲಿ. ಕನ್ನಡದಲ್ಲಿ ಪ್ರಕಟವಾಗಿರುವ ಬೌದ್ಧದರ್ಶನವು ಕೇವಲ ಧಾರ್ಮಿಕ ನೆಲೆಯಲ್ಲಿ ಮಾತ್ರ ಪ್ರತಿಕ್ರಿಯಿಸುತ್ತ ಬಂದಿಲ್ಲ. ಸಾಮಾಜಿಕ ಅಸಮಾನತೆಗೆ ಪ್ರಮುಖ ಕಾರಣವೆಂದು ಕಂಡುಬರುವ ಬಡತನ ಹಾಗೂ ನಿರುದ್ಯೋಗದಂತಹ ಸಾಮಾಜಿಕ ಸಮಸ್ಯೆಗಳೊಂದಿಗೆ ಅಂತರ್ ಸಂಬಂಧವನ್ನು ಬೆಳೆಸಿಕೊಂಡು ಬಂದಿದೆ. ಬಾಬಾಸಾಹೇಬ್ ಅಂಬೇಡ್ಕರ್ ವಿಚಾರಧಾರೆಗಳಿಂದ ಪ್ರಭಾವಿತವಾದ ಕರ್ನಾಟಕದ ದಲಿತ ಬುದ್ಧಿಜೀವಿಗಳು, 'ಮರಳಿ ಮನೆಗೆ' ಎಂಬ ಘೋಷವಾಕ್ಯದೊಂದಿಗೆ ಬೌದ್ಧಧರ್ಮಕ್ಕೆ ಮತಾಂತಗೊಳ್ಳುತ್ತಿದ್ದಾರೆ. ಆದರೆ ಹೀಗೆ ಮತಾಂತರಗೊಂಡ ದಲಿತರನ್ನು ಆರ್ಥಿಕವಾಗಿ ಪ್ರಗತಿಯತ್ತ ಮುನ್ನೆಡೆಸುವ ನೆಲೆಯಲ್ಲಿ ಕನ್ನಡ ವಿಚಾರ ಸಾಹಿತ್ಯದಲ್ಲಿ ಚಿಂತನೆಗಳು ಪ್ರಕಟಗೊಂಡಿವೆ. ಈ ಚಿಂತನೆಗಳು ದಲಿತರು ಜಾತಿಯತೆಯ ಸೋಂಕಿನಿಂದ ಬಿಡುಗಡೆಗೊಳ್ಳುವ ನೆಲೆಗಟ್ಟಿನಿಂದ ಕೂಡಿವೆ.

ದಲಿತರು ಪ್ರತಿವರ್ಷ ಬುದ್ಧ ಪೂರ್ಣಿಮೆ, ಅಂಬೇಡ್ಕರ್ ಜಯಂತಿ, ಅಂಬೇಡ್ಕರರು ಬೌದ್ಧಧರ್ಮಕ್ಕೆ ಮತಾಂತರಗೊಂಡ ದಿನ ಹಾಗೂ ಅಂಬೇಡ್ಕರ್ ಪರಿನಿರ್ವಾಣ ಹೊಂದಿದ ದಿನದಂದು ಸಾಕಷ್ಟು ಸಂಖ್ಯೆಯಲ್ಲಿ ಬೌದ್ಧಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾರೆ. ಈ ಮತಾಂತರ ಪ್ರಕ್ರಿಯೆಗೆ ಕೆಲವು ಸಂಘ-ಸಂಸ್ಥೆ, ಸಂಘಟನೆ ಹಾಗೂ ಕೆಲವು ರಾಜಕೀಯ ಪಕ್ಷಗಳು ಪ್ರೇರಕ ಶಕ್ತಿಗಳಾಗಿ ಕಾರ್ಯನಿರ್ವಹಿಸುತ್ತಿವೆ. ಆದರೆ ಇಲ್ಲಿ ಮತಾಂತರಗೊಂಡ ದಲಿತರಿಗೆ ಯಾವುದೇ ರೀತಿಯ ಸಹಾಯ ಹಾಗೂ ಸಹಕಾರಗಳು ಲಭಿಸುತ್ತಿಲ್ಲ. ಇದನ್ನು ಗಮನಿಸಿದ ಕನ್ನಡದ ಪ್ರಗತಿಪರ ಚಿಂತಕರು, ಮತಾಂತರಗೊಂಡ ದಲಿತರಿಗೆ ಆರ್ಥಿಕವಾಗಿ ಸ್ಪಂದಿಸುವ ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ಬಿತ್ತರಿಸಿದ್ದಾರೆ. ಕನ್ನಡದ ದಲಿತ ಚಿಂತಕರಾದ ದೇವನೂರ ಮಹಾದೇವ ಅವರು, ಮತಾಂತರಗೊಂಡ ದಲಿತರ ಆರ್ಥಿಕ ಪ್ರಗತಿಗಾಗಿ ಕೆಲವು ಸಲಹೆ ಮತ್ತು ಸೂಚನೆಗಳನ್ನು ನೀಡಿದ್ದಾರೆ. "ಈಗ ದಸಂಸ ಮಾಡಬೇಕಾದ ಕೆಲಸವೆಂದರೆ, ತನ್ನೊಡನೆ ಎಲ್ಲಾ ಬಣಗಳನ್ನು ಸೇರಿಸಿಕೊಂಡು ತಾಲ್ಲೂಕು, ಹೋಬಳಿ, ಗ್ರಾಮ ಮಟ್ಟದಲ್ಲಿ ಬಂತೇಜಿಗಳ ಮಾರ್ಗದರ್ಶನ, ಆ ತಾಲ್ಲೂಕಿನ ದಲಿತ ನೌಕರರ ಸಹಕಾರದೊಡನೆ 'ಬುದ್ಧ ವಿಹಾರ' ಸ್ಥಾಪಿಸಿ, ಅಲ್ಲಿ ವಾಚನಾಲಯ, ಧ್ಯಾನಕೇಂದ್ರ ಇತ್ಯಾದಿ ಚಟುವಟಿಕೆಗಳನ್ನು ಆರಂಭಿಸಬೇಕಿದೆ."[3] ಇದರಿಂದ ಬಾಬಾಸಾಹೇಬರ ಆಶಯವು ಸಾರ್ಥಕವಾಗುತ್ತದೆ. ಮತಾಂತರ ಹೊಂದಿದ ದಲಿತ ಸಮುದಾಯದ ವಿಮೋಚನೆಗೆ ಆರ್ಥಿಕ ಸಹಕಾರ ಲಭಿಸುತ್ತದೆ ಎಂಬುದಾಗಿ ತಮ್ಮ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿ ಚಿಂತಕರು ತಮ್ಮ ಸಮಕಾಲೀನ ಸಮಾಜದ ಮುಂದೆ ಇರುವ ದಲಿತರ ಸಮಸ್ಯೆಗಳನ್ನು, ಈ ಸಮಾಜದಲ್ಲಿ ದಲಿತರು ಅನುಭವಿಸುತ್ತಿರುವ ಅಸ್ಪೃಶ್ಯತೆಯ ಆಯಾಮಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ನೆಲೆಯಲ್ಲಿ ತಮ್ಮ ಚಿಂತನಧಾರೆಗಳನ್ನು ಸಮಾಜದ ಮುಂದಿಟ್ಟಿದ್ದಾರೆ. ದೇವನೂರ ಮಹಾದೇವ ಅವರು ಕೇವಲ ಲೇಖಕರು ಮಾತ್ರವಲ್ಲ.

ಹೋರಾಟಗಳ ಹಿನ್ನೆಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಬಂದ ಸಮಾಜಮುಖಿ ಚಿಂತಕರು. ಹೀಗಾಗಿ ಹೋರಾಟವು ಯಶಸ್ವಿಯಾಗಬೇಕಾದರೆ ಕಾರ್ಯರೂಪಗೊಳ್ಳಬೇಕು ಎಂಬುದು ಇವರ ನಿಲುವಾಗಿದೆ. ಆದ್ದರಿಂದ 'ಮರಳಿ ಮನೆಗೆ' ಎಂಬ ಈ ನಡೆಯು ದಲಿತರ ಆರ್ಥಿಕ ಸಮಸ್ಯೆಗಳಿಗೆ ಸ್ಪಂದಿಸಬೇಕಾದ ನೆಲೆಯಲ್ಲಿ ತಮ್ಮ ಸಲಹೆ ಮತ್ತು ಸೂಚನೆಗಳನ್ನು ದಲಿತ ಸಂಘಟನೆಗಳ ಮುಂದಿಟ್ಟಿದ್ದಾರೆ.

ಕನ್ನಡದ ದಲಿತ ಚಿಂತಕರಾದ ಪಿ.ಮಹಾದೇವಯ್ಯನವರು ಬೌದ್ಧಧರ್ಮದ ಮತಾಂತರದ ಪ್ರಕ್ರಿಯೆ ಮೂಲಕವಾಗಿ ದಲಿತರ ಆರ್ಥಿಕತೆ ಸ್ಪಂದಿಸುವ ಚಿಂತನೆಗಳನ್ನು ಪ್ರಕಟಿಸಿದ್ದಾರೆ. ಇವರು ಈ ಮೇಲೆ ಗುರುತಿಸಿರುವ ಧಾರೆಗಳಿಗಿಂತ ಭಿನ್ನವಾಗಿ ತಮ್ಮ ನಿಲುವುಗಳನ್ನು ಮಂಡಿಸುತ್ತಾರೆ. ಇಂದು ದಲಿತರು ಅಸ್ಪೃಶ್ಯತೆಯಿಂದ, ಸಾಮಾಜಿಕ ಅಸಮಾನತೆಯಿಂದ ಹಾಗೂ ಆರ್ಥಿಕ ಪ್ರಗತಿಯ ಹಿನ್ನೆಲೆಯಲ್ಲಿ ಸನಾತನ ಹಿಂದೂಧರ್ಮವನ್ನು ತೊರೆದು ಕ್ರೈಸ್ತ, ಇಸ್ಲಾಂ, ಬೌದ್ಧಧರ್ಮಗಳಿಗೆ ಮತಾಂತರಗೊಳುತ್ತಿದ್ದಾರೆ. ಬೌದ್ಧಧರ್ಮವನ್ನು ಹೊರತುಪಡಿಸಿ ಉಳಿದೆಲ್ಲ ಧರ್ಮಗಳು ಮತಾಂತರಗೊಂಡವರ ಆರ್ಥಿಕ ಪ್ರಗತಿಗಾಗಿ ಶ್ರಮಿಸುತ್ತಿವೆ. ಆದರೆ ಬೌದ್ಧಧರ್ಮದಲ್ಲಿ ಮಾತ್ರ ಮತಾಂತರ ಹೊಂದಿದ ಜನತೆಗೆ ಯಾವುದೇ ಆರ್ಥಿಕ ಸಹಕಾರಗಳು ಲಭಿಸುತ್ತಿಲ್ಲ. ಈ ಕಾರಣದಿಂದಾಗಿ ಯುವಜನತೆಯನ್ನು ಬೌದ್ಧಧರ್ಮದ ಅಡಿಯಲ್ಲಿ ಸಬಲೀಕರಣಗೊಳಿಸುವ ನೆಲೆಯ ಆರ್ಥಿಕ ಆಯಾಮಗಳನ್ನು ಗರುತಿಸಿದ್ದಾರೆ. ಇವರು ಬೌದ್ಧಧರ್ಮಕ್ಕೆ ಮತ್ತು ಇತರೆ ಧರ್ಮಗಳಿಗೆ ಮತಾಂತರಗೊಂಡಿರುವ ದಲಿತರ ಕುರಿತು ಕ್ಷೇತ್ರಕಾರ್ಯ ಮಾಡಿದ ಅನುಭವ ಹೊಂದಿದ್ದು, ಮತಾಂತರ ಹೊಂದಿದವರ ಭಾವನೆಗಳನ್ನು ಕೇಂದ್ರವಾಗಿಟುಕೊಂಡು ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿ ದಲಿತ ಸಮುದಾಯದಲ್ಲಿ ಮತಾಂತರದ ಕುರಿತು ಮೂಡಿರುವ ಕೆಲವು ಪ್ರಶ್ನೆಗಳನ್ನು ಗುರುತಿಸುತ್ತಾರೆ. "ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದಲಿತರಿಗೆ ಹಿಂದೂ ಧರ್ಮದಲ್ಲಿನ ಈ ಒತ್ತಡದ ಅಂಶಗಳು ಬೌದ್ಧ ಧರ್ಮದಲ್ಲಿ ಆಕರ್ಷಕ ಅಂಶಗಳಾಗಬೇಕು. ಆಗ ಮಾತ್ರ ಬುದ್ಧನೆಡೆಗೆ ಮರಳಿ ಮನೆಗೆ ಅರ್ಥ ಬರುತ್ತದೆ ಎಂದು ಅಭಿಪ್ರಾಯಪಡುತ್ತಾರೆ. ಈ ಪ್ರಶ್ನೆಯನ್ನು ಅನೇಕ ದಲಿತರು ಕೇಳುತ್ತಿದ್ದಾರೆ. ಮುಂದುವರೆದು ಬುದ್ಧನೆಡೆಗೆ ಮರಳಿ ಮನೆಗೆ ಹೋಗುವುದರಿಂದ ನಿರುದ್ಯೋಗಿಗಳು ಉದ್ಯೋಗಿಗಳಾಗುವ, ಆರ್ಥಿಕವಾಗಿ ಬದಲಾವಣೆ ತರುವ, ಬಿತ್ತಲೆ ಸೇವೆಗೆ ಪರಿಹಾರ ಕಂಡುಕೊಳ್ಳುವ, ಜೀತಪದ್ಧತಿ ನಿರ್ಮೂಲನೆ ಮಾಡುವ ಹಸಿವು ಮತ್ತು ಅವಮಾನ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಪ್ರಯತ್ನ ಸಾಗಬೇಕಾಗಿದೆ ಎನ್ನುತ್ತಾರೆ. ಆದರೆ ಹಿಂದೂ ಧರ್ಮದಲ್ಲಿನ ಒತ್ತಡದ ಅಂಶಗಳು ಬೌದ್ಧ ಧರ್ಮದಲ್ಲಿ ಆಕರ್ಷಕ ಅಂಶಗಳಾಗಿ ಕಂಡರೆ ದಲಿತರೆಲ್ಲರೂ ಸಾಮೂಹಿಕವಾಗಿ ಬುದ್ಧನೆಡೆಗೆ ಮರಳಿ ಮನೆಗೆ ಹೋಗುತ್ತಾರೆ ಎಂದೆನಿಸುತ್ತದೆ. ಇಲ್ಲ ಅಂದರೆ ಬುದ್ಧನೆಡೆಗೆ ಮರಳಿ ಮನೆಗೆ ಕೇವಲ ವೈಯಕ್ತಿಕ ಲಾಭಕ್ಕಾಗಿ, ರಾಜಕೀಯ ಲಾಭಕ್ಕಾಗಿ ಆಗಬಾರದು ಎಂದೆನಿಸುತ್ತದೆ"[೬] ಎಂಬ ಚಿಂತನೆಯನ್ನು ಸಮಕಾಲೀನ ಸಂದರ್ಭದ ದಲಿತರ ಮುಂದಿರುವ ಸಮಸ್ಯೆಗಳನ್ನು ಆಧಾರವಾಗಿಟ್ಟುಕೊಂಡು ವ್ಯಕ್ತಪಡಿಸಿದ್ದಾರೆ.

ಸಮಕಾಲೀನ ಸಂದರ್ಭದಲ್ಲಿ ದಲಿತರ ಮುಂದಿರುವ ಸಮಸ್ಯೆಗಳನ್ನು ಕೇಂದ್ರವಾಗಿಟ್ಟುಕೊಂಡು ತಮ್ಮ ನಿಲುವುಗಳನ್ನು ಅಭಿವ್ಯಕ್ತಿಸುತ್ತಿರುವ ಇವರು, ಬೌದ್ಧಧರ್ಮದ ಮತಾಂತರ ಪ್ರಕ್ರಿಯೆಯು ದಲಿತರನ್ನು ಆರ್ಥಿಕವಾಗಿ ಸಬಲರನ್ನಾಗಿಸಬೇಕಾದ ಅನಿವಾರ್ಯತೆಯನ್ನು ಪ್ರತಿಪಾದಿಸುತ್ತಾರೆ. ಆರ್ಥಿಕ ಸ್ಥಾನಮಾನ ಉತ್ತಮವಾದರೆ ಅಸ್ಪೃಶ್ಯತೆಯ ನೋವು ಕಡಿಮೆಯಾಗಿ, ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳಲು ಸಹಕಾರಿಯಾಗುತ್ತದೆ. ದಲಿತರು ಆರ್ಥಿಕವಾಗಿ ಹಿಂದುಳಿದ ಕಾರಣ, ಅಸ್ಪೃಶ್ಯತೆ ಎನ್ನುವಂತಹದ್ದು ನಿರಂತರವಾಗಿ ಈ ಸಮುದಾಯಗಳನ್ನು ಕಾಡುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಆರ್ಥಿಕ ಶೋಷಣೆಯಿಂದ ಹಸಿವು ತಾಂಡವಾಡುತ್ತಿದ್ದು, ಜಾತಿ ಶೋಷಣೆಯಿಂದ ಅವಮಾನವನ್ನು ಎದುರಿಸುತ್ತಿದ್ದಾರೆ. ಈ ಹಸಿವು ಮತ್ತು ಅವಮಾನ ಎಂಬ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಬೌದ್ಧಧರ್ಮದಲ್ಲಿ ಸಿಗುವಂತಾಗಬೇಕು ಎಂಬುದು ಪಿ.ಮಹಾದೇವಯ್ಯನವರ ತಮ್ಮ ಚಿಂತನೆಯ ಸಾರವಾಗಿದೆ.

ಚಿಂತಕರಾದ ಎಸ್.ಚಂದ್ರಶೇಖರ್ ಅವರು ಬೌದ್ಧ ಚಿಂತನೆಗಳ ಅಡಿಯಲ್ಲಿ ಆರ್ಥಿಕ ನೆಲೆಗಳನ್ನು ಗುರುತಿಸಿದ್ದಾರೆ. ಇವರು ಬಾಬಾಸಾಹೇಬ್ ಅಂಬೇಡ್ಕರ್ ಹಾಗೂ ಕಾರ್ಲ್‌ಮಾರ್ಕ್ಸ್ ವಿಚಾರಗಳ ತೌಲನಿಕ ನೆಲೆಯಲ್ಲಿ ಚಿಂತನೆಗಳನ್ನು ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿ ಅಂಬೇಡ್ಕರ್ ಗುರುತಿಸುವ ಬೌದ್ಧ ತಾತ್ವಿಕತೆಯಲ್ಲಿನ ಆರ್ಥಿಕ ನಿಲುವುಗಳ ಬಗೆಗೆ ಹೆಚ್ಚು ಒತ್ತು ನೀಡಿರುವುದು ಇವರ ಚಿಂತನೆಯಲ್ಲಿ ಕಂಡುಬರುತ್ತದೆ. ಇವರು ಅಂಬೇಡ್ಕರ್ ಬೌದ್ಧದರ್ಶನದಲ್ಲಿ ಕಂಡುಕೊಂಡಿರುವ ಆರ್ಥಿಕ ನೆಲೆಗಳು ಈ ಮುಂದಿನಂತಿವೆ; "ಸಾಮಾಜಿಕ ಶೋಷಣೆಗೆ ಪರ್ಯಾಯವಾಗಿ ಅಂಬೇಡ್ಕರ್ ಬೌದ್ಧಧರ್ಮವನ್ನು ಒಪ್ಪಿಕೊಂಡರೂ ಅವರ ಅಸಮತೆ ಶೋಷಣೆಗಳನ್ನು ಹೋಗಲಾಡಿಸುವ ಕೆಲಸದ ಅಂಗವಾಗಿಯೇ. ಬೌದ್ಧಧರ್ಮವನ್ನು ಅವರು ಅರ್ಥೈಸಿದ್ದೂ ಈ ಹಿನ್ನೆಲೆಯಲ್ಲಿಯೇ. ಶೋಷಣೆಯೆಂಬ ಪದವನ್ನು ಬಳಸದಿದ್ದರೂ ಬುದ್ಧನು ಪ್ರಪಂಚದಲ್ಲಿ ದುಃಖವಿದೆ ಎಂದು ಹೇಳಿದ. 'ದುಃಖ' ಎನ್ನುವ ಪದವನ್ನು ಬುದ್ಧನು 'ಆಸ್ತಿ' ಎಂಬ ಅರ್ಥದಲ್ಲಿಯೇ ಬಳಸಿದ್ದಾನೆ. ಯಾವ ಬೌದ್ಧ ಭಿಕ್ಕುವು ಖಾಸಗಿ ಆಸ್ತಿಯನ್ನು ಹೊಂದಿರಬಾರದು ಎಂದೇ ವಿಧಿಸುತ್ತಾನೆ. ಕಾರ್ಲ್‌ಮಾರ್ಕ್ಸ್‌ನೂ ಶೋಷಣೆಯ ನಿರ್ಮೂಲನೆಗೆ ಉತ್ಪಾದನಾ ಅಂಶಗಳ ಮೇಲೆ ಸರ್ಕಾರಿ ಸ್ವಾಮ್ಯವಿರಬೇಕೆನ್ನುತ್ತಾನೆ. ಖಾಸಗಿ ಆಸ್ತಿಯ ಬಗೆಗಿನ ನಿಯಮಗಳು ಬುದ್ಧನ ತತ್ವಗಳಲ್ಲಿ ಅಡಕವಾಗಿವೆ. ದುಃಖ ನಿವಾರಣೆಗೆ, ಅಂದರೆ ಖಾಸಗಿ ಆಸ್ತಿಯ ನಿರ್ಮೂಲನೆ ಮಾಡಿ, ಶೋಷಣೆ ತಪ್ಪಿಸಲು ಮಾನವ ಜನಾಂಗ, ಮುಂದಿನ ಪೀಳಿಗೆಯ ಸಮಯಕ್ಕಾದರೂ ಬುದ್ಧನನ್ನಾಗಲೀ ಮಾರ್ಕ್ಸ್‌ವಾದವನ್ನಾಗಲೀ ಒಪ್ಪಬೇಕಾದದ್ದು ಅನಿವಾರ್ಯವೆಂದೇ ಅವರ ಖಚಿತ ಅಭಿಪ್ರಾಯವಾಗಿತ್ತು. ಹಾಗೆಯೇ ಸಂಸದೀಯ ಪ್ರಜಾಸತ್ತೆ ಕೇವಲ ಒಂದು ರೀತಿಯ ಸರ್ಕಾರವಲ್ಲ, ಅದೇ ಬದುಕು. ಒಂದು ಸಾಮಾಜಿಕ ಸಂಘಟನೆ. ಬಡತನ, ಅನಕ್ಷರತೆ, ಜಾತಿ ಆಧಾರಿತ ಅಸಮತೆ, ಜನತಂತ್ರದ ಶತ್ರುಗಳು; ಪ್ರಜಾಸತ್ತೆ ಯಶಸ್ವಿಯಾಗಬೇಕಾದರೆ ಇವುಗಳು ನಿರ್ಮೂಲವಾಗಬೇಕು. ಇಲ್ಲದಿದ್ದರೆ ಶೋಷಿತರು ವ್ಯವಸ್ಥೆಯ ವಿರುದ್ಧ ಬಂಡೇಳುತ್ತಾರೆ. ಭಾರತದಲ್ಲಿ ಸಂಸದೀಯ ಜನತಂತ್ರ ವಿಫಲವಾದರೆ ಅದರ ಫಲಿತಾಂಶ ಕ್ರಾಂತಿ, ಅರಾಜಕತೆ, ಕಮ್ಯುನಿಸಂ. ಇದು ಅಂಬೇಡ್ಕರ್ ಕಂಡ ಭವಿಷ್ಯತ್ ಸತ್ಯ"[೭] ಎಂಬುದಾಗಿ ಗುರುತಿಸಿದ್ದಾರೆ.

ಇಲ್ಲಿ ಕಮ್ಯುನಿಷ್ಟ್ ಧೋರಣೆಗಳಿಂದ ಕೂಡಿದ ಮಾರ್ಕ್ಸ್‌ವಾದವನ್ನು, ಬೌದ್ಧ ತಾತ್ವಿಕತೆಯ ಮೇಲೆ ರೂಪಿತವಾದ ಅಂಬೇಡ್ಕರ್‌ವಾದವನ್ನು ಅಧ್ಯಯನಕ್ಕೆ ಒಳಪಡಿಸಿರುವ ಎಸ್.ಚಂದ್ರಶೇಖರ್ ಅವರು, ಭಾರತದ ಸ್ಥಳೀಯ ಸಮಸ್ಯೆಗಳಿಗೆ ಮಾರ್ಕ್ಸ್‌ವಾದದಿಂದ ಎದುರಾಗಬಹುದಾದ ಸಮಸ್ಯೆಗಳನ್ನು ಗುರುತಿಸಿದ್ದಾರೆ. ಮಾರ್ಕ್ಸ್ ಪ್ರತಿಪಾದಿಸುವ ಆರ್ಥಿಕ ನೆಲೆಯ ಸಿದ್ಧಾಂತದಲ್ಲಿ ಶ್ರಮಿಕರು ಮತ್ತು ಶ್ರೀಮಂತರು ಪ್ರಮುಖವಾಗಿ ಎದುರಾಳಿಯಾಗಿ ಕಂಡುಬರುತ್ತಾರೆ. ವರ್ಗ ಅಸಮಾನತೆಯನ್ನು ಅಳಿಸಿಹಾಕಿ ಸಮಾನತೆಯನ್ನು ಪ್ರತಿಪಾದಿಸುವುದು ಮಾರ್ಕ್ಸ್ ಸಿದ್ಧಾಂತದ ಪ್ರಮುಖ ಗುರಿಯಾಗಿದೆ. ಆದರೆ ಭಾರತದಲ್ಲಿನ ಸಾಮಾಜಿಕ ಸಮಸ್ಯೆ ಇದಕ್ಕಿಂತ ಭಿನ್ನವಾಗಿದೆ. ಇಲ್ಲಿ ವರ್ಗ ಅಸಮಾನತೆಗಿಂತ ಜಾತಿಯತೆ ಪ್ರಮುಖವಾದ ಸಮಸ್ಯೆಯಾಗಿದೆ. ಈ ಜಾತಿಯತೆಯ ಸೋಂಕಿನಿಂದ ಹೊರಬಂದು, ಸಾಮಾಜಿಕ ಸಮಾನತೆಯನ್ನು ಪಡೆಯುವುದು ಬಾಬಾಸಾಹೇಬರ ಹೋರಾಟದ ಹಿಂದಿನ ಉದ್ದೇಶವಾಗಿತ್ತು. ಹೀಗಾಗಿ ಸಮಾಜವಾದಿ ನೆಲೆಯ ತಾತ್ವಿಕ ಸಿದ್ಧಾಂತವನ್ನು ಅವರು ಬೌದ್ಧದರ್ಶನದ ನೆಲೆಯಲ್ಲಿ ನಿರೂಪಿಸುತ್ತಾರೆ. ಹೀಗಾಗಿ ಆಸ್ತಿಯ ಒಡೆತನದ ಬಗ್ಗೆ ಬುದ್ಧ ಮತ್ತು ಮಾರ್ಕ್ಸ್ ಭಿನ್ನ ನಿಲುವುಗಳನ್ನು ತಾಳಿರುವ ಬಗೆಗೆ ಲೇಖಕರು ಗುರುತಿಸುತ್ತಾರೆ. ಮಾರ್ಕ್ಸ್ ಸರ್ಕಾರಿ ಸ್ವಾಮ್ಯದ ಉತ್ಪಾದನಾಂಗಗಳ ಮೇಲೆ ನಿಯಂತ್ರಣವಿರಬೇಕೆಂದು ಪ್ರತಿಪಾದಿಸುತ್ತಾರೆ. ಆದರೆ ಬುದ್ಧನು ಆಸ್ತಿ ಮತ್ತು ಸಂಪತ್ತಿನ ನಿಯಂತ್ರಣದ ಬಗ್ಗೆ ತನ್ನ ಸಂಘದ ಭಿಕ್ಕುಗಳ ಜೀವನ ಕ್ರಮದಲ್ಲಿಯೇ ನಿಯಮ ರೂಪಿಸಿದ್ದು, ಇದನ್ನು ಖಾಸಗಿ ಬದುಕಿನಿಂದ ಬದಲಾವಣೆ ತರಲು ಬಯಸುತ್ತಾನೆ. ಪ್ರತಿಯೊಬ್ಬರು ಮಿತವಾದ ಸಂಪತ್ತನ್ನು ಹೊಂದಿದರೆ, ಸಮಾನವಾದ ಆಸ್ತಿಯ ಹಂಚಿಕೆಯಾಗುತ್ತದೆ ಎಂಬುದು ಅವನ ನಿಲುವಾಗಿತ್ತು. ಮಾರ್ಕ್ಸ್ 'ಧರ್ಮ'ವನ್ನು 'ಅಫೀಮು' ಎಂದು ಕರೆದು, ಇದರಿಂದ ಆರ್ಥಿಕ ಸಮಾನತೆ ಸಾಧ್ಯವಿಲ್ಲವೆಂದು ತಿರಸ್ಕಾರಕ್ಕೆ ಒಳಪಡಿಸುತ್ತಾನೆ. ಆದರೆ ಅಂಬೇಡ್ಕರರು ಈ ನಾಡಿನ ಜನಪರವಾದ ಧರ್ಮವನ್ನು ಗುರುತಿಸಿ, ಅದರ ಅಡಿಯಲ್ಲಿ ಅಸ್ಪೃಶ್ಯ ಸಮುದಾಯಗಳ ವಿಮೋಚನೆಗಾಗಿ ಮಾರ್ಗವೊಂದನ್ನು ರೂಪಿಸುತ್ತಾರೆ. ಬಡತನ, ಅನಕ್ಷರತೆಯನ್ನು ತೊಡೆದು ಹಾಕಿ, ಆರ್ಥಿಕವಾಗಿ ಸಮಾನವಾದ ಬದುಕನ್ನು ಸರ್ವರಿಗೂ ಕಲ್ಪಿಸಿಕೊಡುವ ನೆಲೆಯಲ್ಲಿ ಬುದ್ಧನ ತತ್ವ ಸಿದ್ಧಾಂತಗಳನ್ನು ಸಂವಿಧಾನಾತ್ಮವಾಗಿ ರೂಪಿಸಿದ್ದಾರೆ ಎಂಬುದನ್ನು ಲೇಖಕರು ತಮ್ಮ ಚಿಂತನೆಗಳಲ್ಲಿ ಪ್ರಕಟಿಸಿದ್ದಾರೆ. ಇವರ ಚಿಂತನಧಾರೆಗಳು ಭಾರತದ ಪುರೋಹಿತಶಾಹಿ ಪ್ರಣೀತ ಧಾರೆಗಳು ಸೃಷ್ಟಿಸಿದ ಅಸಮಾನತೆ, ಅಸ್ಪೃಶ್ಯತೆಯಂತಹ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಂಡು, ದಲಿತರನ್ನು ಆರ್ಥಿಕವಾಗಿ ಮುನ್ನಡೆಸಲು ಬಾಬಾಸಾಹೇಬರು ಅನುಸರಿಸಿದ ಬೌದ್ಧ ತಾತ್ವಿಕತೆಯಲ್ಲಿನ ಆರ್ಥಿಕ ಸಿದ್ಧಾಂತವನ್ನು ಎತ್ತಿಹಿಡಿಯುವ ನೆಲೆಯಿಂದ ಕೂಡಿವೆ.

ಕನ್ನಡದ ದಲಿತ ಚಿಂತಕರು ಹಾಗೂ ಹೋರಾಟಗಾರರಾದ ಓ.ರಾಜಣ್ಣನವರು ಬೌದ್ಧಧಮ್ಮ ದೀಕ್ಷೆಯ ನೆಲೆಯಲ್ಲಿ ಆರ್ಥಿಕ ಚಿಂತನೆಗಳನ್ನು ಮಂಡಿಸುತ್ತಾರೆ. ಇವರು ಮತಾಂತರಗೊಳ್ಳದೆ ದಲಿತರ ಆರ್ಥಿಕ ಪ್ರಗತಿ ಸಾಧ್ಯವಿಲ್ಲ ಎಂಬುದನ್ನು ಪ್ರತಿಪಾದಿಸುವುದಕ್ಕೆ ಪ್ರೇರಣೆಯನ್ನು ನೀಡಿರುವುದು ಬಾಬಾಸಾಹೇಬರ ವಿಚಾರಧಾರೆಗಳು. "ಅಭಿವೃದ್ಧಿ ಪಥದಲ್ಲಿ ಸಾಗಲು ಅಸ್ಪೃಶ್ಯತೆಯು ಒಂದು ಶಾಶ್ವತ

ಅಂಗವೈಫಲ್ಯವೆನಿಸುತ್ತದೆ. ಅದನ್ನು ತಡೆಯದ ಹೊರತು ನಿಮ್ಮ ದಾರಿ ಸುರಕ್ಷಿತವಾಗುವುದಿಲ್ಲ. ಮತಾಂತರಗೊಳ್ಳದೆ ಈ ಬೇಲಿಯನ್ನು ತೆಗೆದುಹಾಕಲು ಸಾಧ್ಯವಿಲ್ಲ. ಆದ್ದರಿಂದ ನೀವು ನಿಮ್ಮ ವಿದ್ಯಾರ್ಹತೆಯು ಅದರ ಮೌಲ್ಯವನ್ನು ಪಡೆದುಕೊಳ್ಳಬೇಕೆಂದು ಬಯಸಿದರೆ, ನೀವು ಪಡೆದುಕೊಂಡ ಶಿಕ್ಷಣ ಕೊಂಚ ಉಪಯುಕ್ತವಾಗಬೇಕು ಎನಿಸಿದರೆ, ನೀವು ಅಸ್ಪೃಶ್ಯತೆಯ ಸಂಕೋಲೆಗಳನ್ನು ತೊಡೆದುಹಾಕಬೇಕು, ಅಂದರೆ ನಿಮ್ಮ ಧರ್ಮವನ್ನು ಬದಲಾಯಿಸಲೇಬೇಕು"[೮] ಎಂಬುದಾಗಿ ಬಾಬಾಸಾಹೇಬರು ಮತಾಂತರಗೊಳ್ಳುವುದಕ್ಕಿಂತ ಪೂರ್ವದಲ್ಲಿ ವ್ಯಕ್ತಪಡಿಸಿದ ಅಂಶಗಳನ್ನು ಕೇಂದ್ರವಾಗಿಟ್ಟುಕೊಂಡು, ಓ.ರಾಜಣ್ಣನವರು ಮತಾಂತರದ ನೆಲೆಯಲ್ಲಿ ದಲಿತರ ಆರ್ಥಿಕ ಪ್ರಗತಿಯ ಕುರಿತಾಗಿ ತಮ್ಮ ಚಿಂತನೆಗಳನ್ನು ಮಂಡಿಸುತ್ತಾರೆ.

ಭಾರತದಲ್ಲಿ ಅಸ್ಪೃಶ್ಯತೆಯಿಂದ ನರಳುತ್ತಿರುವ ದಲಿತರು ಸಾಮಾಜಿಕ ಅಪಮಾನಕ್ಕೆ ಒಳಗಾದವರು, ಆರ್ಥಿಕವಾಗಿ ದುರ್ಬಲರು. ಈ ಸಮುದಾಯವು ಅಸ್ಪೃಶ್ಯತೆಯಿಂದ ನರಳಾಡುತ್ತಿರುವುದಕ್ಕೆ ಪ್ರಮುಖವಾದ ಮೂರು ಕಾರಣಗಳಿವೆ. ಅವುಗಳೆಂದರೆ ಆರ್ಥಿಕತೆ, ಬಂಡವಾಳ ಮತ್ತು ಭೂಮಿಯಿಂದ ವಂಚಿತರಾಗಿರುವುದು. ಆರ್ಥಿಕ ಸ್ಥಾನಮಾನಗಳನ್ನು ಗಟ್ಟಿಗೊಳಿಸಬೇಕಾದ ಪ್ರಮುಖವಾದ ಅಂಶಗಳಿಂದ ಈ ವರ್ಗವು ವಂಚಿತವಾಗಿರುವ ಕಾರಣದಿಂದ ಇವರು ಅನಾದಿಕಾಲದಿಂದಲೂ ಸಾಮಾಜಿಕವಾಗಿ ತುಳಿತಕ್ಕೆ ಒಳಗಾಗಿದೆ. ಇಂದು ಬಾಬಾಸಾಹೇಬರು ಸಾಂವಿಧಾನಿಕ ನೆಲೆಯಲ್ಲಿ ಮೀಸಲಾತಿಯನ್ನು ಕಲ್ಪಿಸಿಕೊಟ್ಟಿರುವುದರಿಂದ ದಲಿತರು ಆರ್ಥಿಕವಾಗಿ ಮುನ್ನೆಲೆಗೆ ಬರುತ್ತಿದ್ದಾರೆ. ಆದರೆ ಸಾಮಾಜಿಕ ಅಪಮಾನಗಳಿಂದ ಬಿಡುಗಡೆಯಾಗದಂತಹ ಸ್ಥಿತಿಯಲ್ಲಿದ್ದಾರೆ. ಸಾಮಾಜಿಕ ಸಮಾನತೆಗಾಗಿ ಬೌದ್ಧಧಮ್ಮ ದೀಕ್ಷೆ ತೆಗೆದುಕೊಂಡು ಬಿಡುಗಡೆಗೊಳ್ಳಲು ಮುಂದಾಗುತ್ತಿರುವ ಸಂದರ್ಭದಲ್ಲಿ, ಸಂಘಪರಿವಾರ ಹಾಗೂ ಸನಾತನವಾದಿ ಮನಸ್ಥಿತಿಗಳು ಬೌದ್ಧಧರ್ಮಕ್ಕೆ ಮತಾಂತರಗೊಂಡರೆ ಮೀಸಲಾತಿಯನ್ನು ಕಳೆದುಕೊಳ್ಳಬೇಕಾಗುತ್ತದೆ ಎಂಬುದಾಗಿ ದಲಿತರನ್ನು ವಂಚಿಸುತ್ತಿದ್ದಾರೆ. ಇದರ ಪರಿಣಾಮವಾಗಿ ನವಬೌದ್ಧರ ಸಂಖ್ಯೆಯು ಇಳಿಮುಖವಾಗುತ್ತಿದೆ. ದಲಿತರು ಬೌದ್ಧಧರ್ಮಕ್ಕೆ ಮತಾಂತರವಾಗುವುದನ್ನು ತಪ್ಪಿಸುವುದಕ್ಕೆ ಸನಾತನವಾದಿಗಳು ರೂಪಿಸಿರುವ ಬ್ಲಾಕ್‌ಮೇಲ್ ತಂತ್ರಗಳನ್ನು ಬೌದ್ಧ ಚಿಂತಕರಾದ ಬುದ್ಧಘೋಷ್ ದೇವೇಂದ್ರ ಹೆಗ್ಗಡೆಯವರು ಗುರುತಿಸಿರುವ ಅಂಶಗಳು ಹೀಗಿವೆ:

೧. ದಲಿತರು ಮತಾಂತರ ಹೊಂದಿದರೆ ಮೀಸಲಾತಿ ಸಿಗುವುದಿಲ್ಲ.

೨. ಮತಾಂತರದಿಂದ ಶೈಕ್ಷಣಿಕ ಸೌಲಭ್ಯಗಳು ವಂಚಿತವಾಗುತ್ತವೆ.

೩. ಮತಾಂತರದಿಂದ ಬಿಟ್ಟಿ ಚಾಕರಿ ಮಾಡಿದ್ದಕ್ಕಾಗಿ ಹಿಂದೂಗಳು ದಲಿತರಿಗೆ ಕೊಟ್ಟ ಇನಾಮ್ ಭೂಮಿ ವಾಪಸ್ಸು ಹೋಗುತ್ತದೆ.

೪. ಮತಾಂತರದಿಂದ ರಾಜಕೀಯ ಹಕ್ಕು ನಷ್ಟವಾಗುತ್ತವೆ.

೫. ಮತಾಂತರ ಆಗಿ ಸತ್ತ ದನ ಎಳೆಯುವುದನ್ನು ಬಿಟ್ಟರೆ ದಲಿತರಿಗೆ ಆರ್ಥಿಕ ನಷ್ಟವಾಗುತ್ತದೆ.[೯]

ಎಂಬ ಅಂಶಗಳನ್ನು ಆಧಾರವಾಗಿಟ್ಟುಕೊಂಡು, ದಲಿತರು ಬೌದ್ಧಧಮ್ಮಕ್ಕೆ ಮತಾಂತರ ಹೊಂದುವುದರಿಂದ ಯಾವುದೇ ಮೀಸಲಾತಿ ಹಾಗೂ ಸರ್ಕಾರದ ಆರ್ಥಿಕ ಸವಲತ್ತುಗಳು ಕೈ ತಪ್ಪುವುದಿಲ್ಲ ಎಂಬುದನ್ನು ಬಾಬಾಸಾಹೇಬರ ವಿಚಾರಗಳ ಅಡಿಯಲ್ಲಿ ದೇವೇಂದ್ರ ಹೆಗ್ಗಡೆಯವರು ಸಮರ್ಥಿಸಿದ್ದಾರೆ. ಕರ್ನಾಟಕದಲ್ಲಿ ಸನಾತನಗಳು ಸೃಷ್ಟಿಸುತ್ತಿರುವ ಮೀಸಲಾತಿಯ ಗೊಂದಲದಿಂದ ಈ ಮತಾಂತರ ಪ್ರಕ್ರಿಯೆಯಲ್ಲಿ ಆಗುತ್ತಿರುವಂತಹ ಏರುಪೇರುಗಳನ್ನು ಹಾಗೂ ನವಬೌದ್ಧರು ಆರ್ಥಿಕತೆ ಹಾಗೂ ಮೀಸಲಾತಿಯ ಭದ್ರತೆ ಇಲ್ಲದ ಕಾರಣ ಮತ್ತೇ ಹಿಂದೂಧರ್ಮದತ್ತ ತೆರಳುತ್ತಿರುವ ಬಗೆಗೆ ಅಂಕಿ ಅಂಶಗಳ ಮೂಲಕವಾಗಿ ಸಮಕಾಲೀನ ಸಂದರ್ಭದ ವಾಸ್ತವ ಚಿತ್ರಣವನ್ನು ಗುರುತಿಸಿದ್ದಾರೆ. "೨೦೦೧ ರಲ್ಲಿ ೩೯೩೩೦೦ ಇದ್ದ ಕರ್ನಾಟಕದ ಬೌದ್ಧರ ಜನಸಂಖ್ಯೆ ದಲಿತ ಜಾತಿ ಉಪಜಾತಿಗಳ ರಾಜಕೀಯ ನಾಯಕರ, ಉನ್ನತ ಅಧಿಕಾರಿಗಳ ಮತ್ತು ಮಠ ಪೀಠ ಸ್ವಾಮಿಗಳ ಜಾತಿ ವ್ಯವಸ್ಥೆಯನ್ನು ಬಲಿಷ್ಠಗೊಳಿಸುವ ಅನಾರೋಗ್ಯಕರ ಪೈಪೋಟಿಗೆ ಬಲಿಯಾಗಿ ೯೫೭೧೦ ಕ್ಕೆ ಕುಸಿದಿದೆ. ೨೦೦೧ ರಲ್ಲಿ ತಮ್ಮನ್ನು ತಾವು ಬೌದ್ಧ ಧರ್ಮೀಯರೆಂದು ದಾಖಲಿಸಿಕೊಂಡ ೨೯೭೪೯೦ ಜನ ದಲಿತರು ಮತ್ತೇ ೨೦೧೧ ರ ಜನಗಣತಿಯಲ್ಲಿ ಪುನಃ ತಮ್ಮನ್ನು ತಾವು ಹಿಂದೂ ಧರ್ಮಿಯರೆಂದು ದಾಖಲಿಸಿದ್ದಾರೆ. ಹಿಂದೂ-ಚಲವಾದಿ, ಹಿಂದೂ-ಮಾದಿಗ, ಹಿಂದೂ-ಕೊರವ, ಹಿಂದೂ-ಕೊರಚ ಇತ್ಯಾದಿಯಾಗಿ ದಾಖಲಿಸಿಕೊಂಡಿದ್ದಾರೆ."[೧೦] ಈ ಪ್ರಕ್ರಿಯೆಗೆ ದಲಿತ ಸಮುದಾಯದೊಳಗಿನ ಸನಾತನವಾದಿ ಮನಸುಗಳು ಪ್ರಚೋದಕ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತಿರುವ ಬಗೆಯನ್ನು ದೇವೆಂದ್ರ ಹೆಗ್ಗಡೆಯವರು ಗುರುತಿಸಿದ್ದಾರೆ.

ಭಾರತದಲ್ಲಿನ ಸನಾತನ ಧರ್ಮದ ಜಾತಿಯತೆಯಿಂದ ಬಿಡುಗಡೆಯನ್ನು ಬಯಸುವಂತಹ ಶಿಕ್ಷಿತ ವರ್ಗವು ವಿವಿಧ ಧರ್ಮಗಳಿಗೆ ಮತಾಂತರಗೊಳ್ಳುತ್ತಿದೆ. ಹೀಗೆ ಮತಾಂತರಗೊಳ್ಳುತ್ತಿರುವವರಲ್ಲಿ ದಲಿತ ಸಮುದಾಯದ ಹೊಲೆಯ ಮತ್ತು ಮಾದಿಗ ಜನಾಂಗಗಳು ಹೆಚ್ಚಾಗಿ ಕಂಡಬರುತ್ತವೆ. ಈ ಮತಾಂತರ ಪ್ರಕ್ರಿಯೆಯ ಹಿಂದೆ ಈ ಸಮುದಾಯಗಳ ಬಡತನ ಮತ್ತು ನಿರುದ್ಯೋಗದಂತಹ ಸಾಮಾಜಿಕ ಸಮಸ್ಯೆಗಳು ಪ್ರಮುಖವಾಗಿವೆ. ತಮ್ಮನ್ನು ಕಾಡುತ್ತಿರುವ ಬಡತನ ಮತ್ತು ನಿರುದ್ಯೋಗದಂತಹ ಸಮಸ್ಯೆಗಳಿಂದ ಬಿಡುಗಡೆ ಬಯಸಿ, ಅಸ್ಪೃಶ್ಯ ಸಮುದಾಯಗಳು ಕ್ರೈಸ್ತ, ಇಸ್ಲಾಂಧರ್ಮಕ್ಕೆ ಮತಾಂತರಗೊಳ್ಳುವುದು ಬಹುದಿನಗಳಿಂದಲೂ ನಡೆದುಕೊಂಡು ಬಂದಿದೆ. ಹೀಗೆ ಮತಾಂತರ ಗೊಳ್ಳುವವರಿಗೆ ಧರ್ಮಕ್ಕಿಂತ ಆರ್ಥಿಕತೆ ಭದ್ರತೆ ಪ್ರಮುಖವಾಗಿರುತ್ತದೆ. ಬಾಬಾಸಾಹೇಬ ಅಂಬೇಡ್ಕರರು ಮೂಲಭೂತವಾದಿ ಹಿಂದುತ್ವದಲ್ಲಿ ಬದಲಾವಣೆ ಸಾಧ್ಯವಿಲ್ಲವೆಂಬುದನ್ನು ಅರಿತು ಮತಾಂತರಗೊಳ್ಳುವುದಾಗಿ ನಿರ್ಧಾರವನ್ನು ಪ್ರಕಟಿಸಿದಾಗ, ಹಲವಾರು ಧರ್ಮಗಳ ಮುಖಂಡರು ಇವರಿಗೆ ಹಾಗೂ ಇವರ ಅನುಯಾಯಿಗಳಿಗೆ ಸೂಕ್ತ ಸ್ಥಾನಮಾನಗಳನ್ನು ನೀಡುವುದಾಗಿ ಆಮಿಷವೊಡ್ಡಿದರು. ಆದರೆ ಅಂಬೇಡ್ಕರ್ ತಮ್ಮ ಕಳೆದು ಹೋದ ಗತದ ಬದುಕನ್ನು ಮರಳಿ ಪಡೆಯುವ ನೆಲೆಯಲ್ಲಿ ಬೌದ್ಧಧರ್ಮದ ಕುರಿತು ಆಳವಾದ ಅಧ್ಯಯನ ನಡೆಸಿ, ೧೯೫೬ ಅಕ್ಟೋಬರ್ ೧೪ರಂದು ಬೌದ್ಧಧರ್ಮಕ್ಕೆ ಮತಾಂತರ ಹೊಂದಿದರು. ಹೀಗೆ ಮತಾಂತರ ಹೊಂದಿದ ತರುವಾಯದಲ್ಲಿ, ಮತಾಂತರ ಹೊಂದಿದ ದಲಿತ

ಬೌದ್ಧರನ್ನು ಆರ್ಥಿಕವಾಗಿ ಪ್ರಬಲಗೊಳ್ಳುವ ನೆಲೆಯಲ್ಲಿ ಜಾಗೃತಗೊಳಿಸಿದರು. ಬಾಬಾಸಾಹೇಬರ ವಿಚಾರಗಳಿಂದ ಪ್ರಭಾವಿತರಾದ ಹಲವಾರು ಚಿಂತಕರು, ಇವರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆದಿದ್ದು, ಆ ಮೂಲಕವಾಗಿ ದಲಿತ ನವಬೌದ್ಧರ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸುವ ನೆಲೆಯಲ್ಲಿ ಕೆಲಸ ಮಾಡಿದರು ಮತ್ತು ಚಿಂತಿಸಿದರು. ಕರ್ನಾಟಕದಲ್ಲಿಯೂ ದಲಿತರು ಬಾಬಾಸಾಹೇಬರ ಮಾರ್ಗದರ್ಶನದಂತೆ ಬೌದ್ಧಧರ್ಮಕ್ಕೆ ಮತಾಂತರಗೊಳ್ಳುತ್ತಿದ್ದಾರೆ. ಹೀಗೆ ಮತಾಂತರಗೊಂಡ ದಲಿತರ ಆರ್ಥಿಕ ಮಟ್ಟವನ್ನು ಸುಧಾರಿಸುವ ನೆಲೆಯಲ್ಲಿ ಹಲವಾರು ಚಿಂತಕರು ತಮ್ಮ ಚಿಂತನೆಗಳನ್ನು ಪ್ರಕಟಿಸುತ್ತ ಬಂದಿದ್ದಾರೆ.

ಕರ್ನಾಟಕದಲ್ಲಿ ಸಮಕಾಲೀನ ಸಂದರ್ಭದಲ್ಲಿ ಬೌದ್ಧಧರ್ಮಕ್ಕಿಂತ ಹೆಚ್ಚಾಗಿ ಕ್ರೈಸ್ತಧರ್ಮಕ್ಕೆ ದಲಿತರು ಹೆಚ್ಚಾಗಿ ಮತಾಂತರಗೊಳ್ಳುತ್ತಿದ್ದಾರೆ. ಆದರೆ ಬೌದ್ಧಧರ್ಮಕ್ಕೆ ಮತಾಂತರಗೊಳ್ಳುತ್ತಿರುವವರ ಸಂಖ್ಯೆಯ ತೀರಾ ಕಡಿಮೆಯಾಗಿದೆ. ಇದಕ್ಕೆ ಕಾರಣ, ಮತಾಂತರಗೊಂಡ ದಲಿತ ಬೌದ್ಧರಿಗೂ, ಸನಾತನ ಧರ್ಮದ ಅಡಿಯಲ್ಲಿ ಶೋಷಣೆಯನ್ನು ಅನುಭವಿಸುತ್ತಿರುವ ದಲಿತರಿಗೂ ಯಾವುದೇ ಮೂಲಭೂತವಾದ ವ್ಯತ್ಯಾಸಗಳು ಹಾಗೂ ಆರ್ಥಿಕ ಪರಿಸ್ಥಿತಿಯು ಬದಲಾವಣೆಯನ್ನು ಕಾಣದಿರುವುದಾಗಿದೆ. ಕ್ರೈಸ್ತಧರ್ಮಕ್ಕೆ ಮತಾಂತರಗೊಳ್ಳುತ್ತಿರುವವರು ಹೆಚ್ಚಾಗಿ 'ಮಾದಿಗ' ಸಮುದಾಯದವರೇ ಆಗಿದ್ದಾರೆ. ಹೀಗಾಗಿ ಕ್ರೈಸ್ತಧರ್ಮಕ್ಕೆ ಮಾಂತರಗೊಳ್ಳುವವರಿಗೆ ಕಲ್ಪಿಸುವ ಆರ್ಥಿಕ ಮಾದರಿಗಳನ್ನು ಆಧಾರವಾಗಿಟ್ಟುಕೊಂಡು, ಕನ್ನಡದ ಚಿಂತನಧಾರೆಗಳು ಬೌದ್ಧಧರ್ಮಕ್ಕೆ ಮತಾಂತರಗೊಳ್ಳುವ ದಲಿತ ಬಹುಮುಖ್ಯ ಸಮಸ್ಯೆಗಳಾದ ಬಡತನ ಮತ್ತು ನಿರುದ್ಯೋಗ ಸಮಸ್ಯಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ನೆಲೆಯಲ್ಲಿ ಚಿಂತನೆಗಳನ್ನು ವ್ಯಕ್ತಪಡಿಸಿವೆ. ಮತಾಂತರಗೊಂಡ ದಲಿತರ ಆರ್ಥಿಕತೆಗೆ ಸಹಕಾರ ಲಭಿಸಿದರೆ, ಅಸ್ಪೃಶ್ಯತೆಯು ಸಡಿಲಗೊಂಡು ದಲಿತರು ಸ್ವಾಭಿಮಾನದಿಂದ ಬದುಕಲು ಸಾಧ್ಯವಾಗುತ್ತದೆ. ಈ ಅವಕಾಶಗಳು ದಲಿತರಿಗೆ ಬೌದ್ಧಧರ್ಮದ ಅಡಿಯಲ್ಲಿಯೇ ಲಭಿಸಿದರೆ, ಇದು ಮತಾಂತರವಾಗುವುದಿಲ್ಲ. ಮರಳಿ ಮನೆಗೆ ತೆರಳಿದಂತಾಗುತ್ತದೆ. ಆಗ ಬಾಬಾಸಾಹೇಬರ ಶ್ರಮ ಸಾರ್ಥಕವಾಗುತ್ತದೆ ಎಂಬ ಆರ್ಥಿಕ ಕೇಂದ್ರಿತ ಬೌದ್ಧ ಚಿಂತನೆಗಳು ಕನ್ನಡ ಚಿಂತನ ಸಾಹಿತ್ಯದಲ್ಲಿ ಕಾಣಿಸುತ್ತಿವೆ.

ಕೊನೆ ಟಿಪ್ಪಣಿಗಳು

೧. ಡಿ.ಡಿ.ಕೊಸಾಂಬಿ, ಪ್ರಾಚೀನ ಭಾರತದ ಚರಿತ್ರೆ, ಪು-೧೩೬, ೧೩೭

೨. ಪುರಾಣ ಮತ್ತು ವಾಸ್ತವ, ಡಿ.ಡಿ.ಕೊಸಾಂಬಿ, ಪು-೪೦

೩. ತತ್ವಪದ ಸಾಹಿತ್ಯ ಅಧ್ಯಯನ, ಅಮರೇಶ ನುಗಡೋಣಿ, ಪು-೮, ೯

೪. ವಿಚಾರ ಸಾಹಿತ್ಯ-೨೦೦೯, ಪು-೬೩, ೬೪

೫. ಎದೆಗೆ ಬಿದ್ದ ಅಕ್ಷರ, ಪು-೨೫

೬. ಮರಳಿ ಮನೆಗೆ ಪು-೧೯೬

೭. ಅದೇ, ಪು-೪೮

೮. ಓ. ರಾಜಣ್ಣ, ಬುದ್ಧ ಧಮ್ಮ ಹಾಗೂ ಸಾಮಾಜಿಕ ಚಿಂತನೆಗಳು, ಪು-೫೬

೯. ವಾರ್ತಾ ಭಾರತಿ, ದಿ: ೧೪ ಏಪ್ರಿಲ್ ೨೦೧೬, ಪು-೬

೧೦. ಬುದ್ಧ ಘೋಷ ದೇವೇಂದ್ರ ಹೆಗ್ಗಡೆ, ಈಶನ್ಯ ಟೈಮ್ಸ್, ದಿನ ಪತ್ರಿಕೆ, ೧೪-೦೪-೨೦೧೭, ಪು-೫

* * *

ಅಧ್ಯಾಯ: ಒಂಬತ್ತು

ಸಮಾರೋಪ

* ಫಲಿತಗಳು
* ಪರಾಮರ್ಶನ ಗ್ರಂಥಗಳು ಮತ್ತು ಲೇಖನಗಳು

ಅಧ್ಯಾಯ : ಒಂಬತ್ತು

ಸಮಾರೋಪ

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನದ ಆಯಾಮಗಳು ಎಂಬ ವಿಷಯವನ್ನು ಸಂಶೋಧನೆಗೆ ಆಯ್ದುಕೊಂಡಿದ್ದು, ಪ್ರಸ್ತುತ ಅಧ್ಯಯನದಲ್ಲಿ ಸಮಕಾಲೀನ ಸಮಾಜದ ತಲ್ಲಣಗಳನ್ನು ಬೌದ್ಧ ದರ್ಶನದ ಪರಿಧಿಯೊಳಗೆ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಬೌದ್ಧ ದರ್ಶನವು ಕನ್ನಡ ಸಾಹಿತ್ಯದಲ್ಲಿ ನವೋದಯ ಕಾಲದಿಂದಲೂ ತನ್ನ ಅಸ್ತಿತ್ವವನ್ನು ಪಡೆದುಕೊಂಡಿದೆ. (ಕ್ರಿ.ಶ. ಆರಂಭದ ಕಾಲದಿಂದಲೂ ಕನ್ನಡದಲ್ಲಿ ಬೌದ್ಧ ಸಾಹಿತ್ಯ ರಚನೆಯಾಗಿರುವ ಬಗೆಗೆ ಹಲವಾರು ವಿದ್ವಾಂಸರು ತಮ್ಮ ವಾದವನ್ನು ಮಂಡಿಸಿದ್ದಾರೆ. ಹಾಗೆಯೇ ಪ್ರಾಚೀನ ಕನ್ನಡದ ಸಾಹಿತ್ಯದ ವಿವಿಧ ಘಟ್ಟ ಹಾಗೂ ಪ್ರಕಾರಗಳಲ್ಲಿ ಬೌದ್ಧಧರ್ಮ ಹಾಗೂ ದರ್ಶನವನ್ನು ಪ್ರಧಾನವಾಗಿಟ್ಟುಕೊಂಡು ಸಾಹಿತ್ಯ ರಚನೆಯಾಗಿದೆ. ಪ್ರಾಚೀನ ಸಾಹಿತ್ಯದಲ್ಲಿಯೂ ಬೌದ್ಧ ದರ್ಶನವು ವಿವಿಧ ಆಯಾಮಗಳಲ್ಲಿ ಮೂಡಿಬಂದಿದೆ.) ಕನ್ನಡ ಸಾಹಿತ್ಯದಲ್ಲಿ ಬೌದ್ಧ ದರ್ಶನವು ನಿರಂತರವಾಗಿ ತನ್ನ ಅನನ್ಯತೆಯನ್ನು ಕಾಪಾಡಿಕೊಂಡಿದೆ. ಆದರೆ ಬದಲಾದ ಕಾಲಘಟ್ಟದಲ್ಲಿ ಭಿನ್ನ ಆಯಾಮಗಳ ಮೂಲಕ ಕನ್ನಡದ ಚಿಂತಕ ವರ್ಗವು ಬೌದ್ಧಧರ್ಮ ಹಾಗೂ ದರ್ಶನದೊಂದಿಗೆ ಅನುಸಂಧಾನಕ್ಕೆ ಮುಂದಾಗಿದೆ. ಕನ್ನಡದಲ್ಲಿ ಬಿ.ಎಂ.ಶ್ರೀ ಅವರಿಂದ ಸಮಕಾಲೀನ ಚಿಂತಕರಲ್ಲಿ ಭಿನ್ನ ಗ್ರಹಿಕೆಯ ಮೂಲಕವಾಗಿ ಬೌದ್ಧ ದರ್ಶನವನ್ನು ಕೇಂದ್ರವಾಗಿಟ್ಟುಕೊಂಡು ಸಾಹಿತ್ಯ ಬೆಳೆದು ಬಂದಿದೆ.

ಬೌದ್ಧ ದರ್ಶನವು ಭಾರತದಲ್ಲಿನ ಸಾಮಾಜಿಕ ಅಸಮಾನತೆಯನ್ನು ಮೆಟ್ಟಿನಿಂತು ಸಮಸಮಾಜದ ಹೋರಾಟಕ್ಕೆ ಒಂದು ಅಸ್ತ್ರವಾಗಿ ಬೆಳಕಿಗೆ ಬಂದಿದ್ದು ಅಂಬೇಡ್ಕರರಿಂದ. ಬಾಬಾಸಾಹೇಬರು ಕಂಡುಕೊಂಡ ಬೌದ್ಧಧರ್ಮ ಹಾಗೂ ದರ್ಶನವು ಕೇವಲ ಒಂದು ವರ್ಗ, ಒಂದು ಪ್ರಕಾರಕ್ಕೆ ಸೀಮಿತವಾಗಲಿಲ್ಲ. ಇದು ಬಹುತ್ವದ ಆಯಾಮದೊಂದಿಗೆ ಸಮಾಜದಲ್ಲಿ ತೆರೆದುಕೊಂಡಿತು. ಅಂಬೇಡ್ಕರ್ ಪರಿಚಯಿಸಿದ ಬೌದ್ಧತ್ವದ ಅಡಿಯಲ್ಲಿ ಹಲವು ಪ್ರಗತಿಪರ ಸಂಘಟನೆ, ಹೋರಾಟ, ಚಳವಳಿ ಮಾತ್ರವಲ್ಲ ಸಾಹಿತ್ಯದ ವಿವಿಧ ಪ್ರಕಾರಗಳು ಜೀವ ಪಡೆದುಕೊಂಡವು. ಹೀಗೆ ಸೃಷ್ಟಿಯಾದ ಸಾಹಿತ್ಯ ಪ್ರಕಾರಗಳು ತಮ್ಮ ಸುತ್ತಮುತ್ತಲಿನ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಮೂಲಭೂತವಾದಿ ಬ್ರಾಹ್ಮಣಧರ್ಮದ ಧಾರ್ಮಿಕ ಚೌಕಟ್ಟುಗಳನ್ನು ಮೀರುವ ನೆಲೆಯಲ್ಲಿ ಬೆಳೆದಬಂದಿವೆ. ಬಾಬಾಸಾಹೇಬರು ಬೌದ್ಧ ಧರ್ಮದ ಬಗೆಗೆ ಅರಿವು ಮೂಡಿಸುವ ಪೂರ್ವದಲ್ಲಿ ಭಾರತದಲ್ಲಿ ದರ್ಶನ ಕೇಂದ್ರಿತವಾದ ಚಿಂತನೆಗಳು ಇರಲಿಲ್ಲವೆ? ಎಂಬ ಪ್ರಶ್ನೆ ಸಹಜವಾಗಿ ಎದುರಾಗುತ್ತದೆ. ಈ ಕುರಿತು ನೋಡುವುದಾದರೆ,

ಭಾರತದಲ್ಲಿ ಬಾಬಾಸಾಹೇಬರ ವಿಚಾರಧಾರೆಗಳು ಬೌದ್ಧ ದರ್ಶನ ಕೇಂದ್ರಿತ ನೆಲೆಯಲ್ಲಿ ಪ್ರಚಾರವಾಗುವುದಕ್ಕಿಂತ ಪೂರ್ವದಲ್ಲಿ ಹಾಗೂ ಇವರು ಬೌದ್ಧಧಮ್ಮ ದೀಕ್ಷೆಯನ್ನು ಕೈಗೊಳ್ಳುವ ಪೂರ್ವದಲ್ಲಿ ಹಲವಾರು ದಾರ್ಶನಿಕರು ಪುರೋಹಿತಶಾಹಿಯ ಅಸಮಾನತೆಯಿಂದ ಹೊರಬರುವ ನೆಲೆಯಲ್ಲಿ ಬೌದ್ಧಧಮ್ಮ ದೀಕ್ಷೆಯನ್ನು ತೆಗೆದುಕೊಂಡ ನಿದರ್ಶನಗಳಿವೆ. ಹೀಗೆ ಸನಾತನವಾದಿ ಬ್ರಾಹ್ಮಣಧರ್ಮದಿಂದ ಹೊರಬಂದು ಧಮ್ಮ ದೀಕ್ಷೆಯನ್ನು ತೆಗೆದುಕೊಂಡವರಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರು ಇದ್ದಾರೆ. ಇವರಲ್ಲಿ ಸ್ವಾಮಿ ವಿವೇಕಾನಂದ, ಧರ್ಮಾನಂದ ಕೊಸಂಬಿ, ಅಯೋತಿದಾಸ್ ಇನ್ನು ಮುಂತಾದವರು ಬಾಬಾಸಾಹೇಬರಿಗಿಂತ ಪೂರ್ವದಲ್ಲಿಯೇ ಧಮ್ಮ ದೀಕ್ಷೆಗೆ ಮುಂದಾಗಿದ್ದಾರೆ. ಆದರೆ ಇವರು ಬೌದ್ಧಧಮ್ಮ ದೀಕ್ಷೆಯನ್ನು ಜಾಗೃತ ನೆಲೆಯಿಂದ ಸ್ವೀಕರಿಸಿದರು ಕೂಡ, ಇವರ ಧಮ್ಮದ ನೆಲೆಯ ಹೋರಾಟವು ಬಹುತ್ವದ ಆಯಾಮವನ್ನು ಪಡೆದುಕೊಳ್ಳಲಿಲ್ಲ. ಹೀಗಾಗಿ ಈ ಮಾದರಿಗಳು ಸಾಮಾನ್ಯ ಜನತೆಯನ್ನು ತಲುಪುವಲ್ಲಿ ವಿಫಲವಾದವು. ಇದಕ್ಕೆ ಹಲವಾರು ಕಾರಣಗಳಿವೆ. ಆದರೆ ಅಂಬೇಡ್ಕರರ ವಿಚಾರಗಳನ್ನು ಕೇಂದ್ರವಾಗಿಟ್ಟುಕೊಂಡು ಸಾಹಿತ್ಯ ರಚನೆಯಾಗಿರುವುದು ಇವರು ಧಮ್ಮ ದೀಕೆಯನ್ನು ಸ್ವೀಕರಿಸಿದ ತರುವಾಯದಲ್ಲಿ, ಅಂದರೆ ೧೯೫೬ ಅಕ್ಟೋಬರ್ ೧೪ ರ ನಂತರವೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನ ಚರ್ಚೆವಾಗಿರುವುದು ಎಪ್ಪತ್ತರ ದಶಕದ ಸುಮಾರಿನಲ್ಲಿ. ಕರ್ನಾಟಕದ ರಾಜಕೀಯ ಬದುಕಿನಲ್ಲಿ ಉಂಟಾದ ತಲ್ಲಣಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ನೆಲೆಯಲ್ಲಿ ಹೋರಾಟದ ಭಾಗವಾಗಿ ಅಂಬೇಡ್ಕರ್ ಮತ್ತು ಬೌದ್ಧದರ್ಶನಗಳು ಕನ್ನಡ ಸಾಹಿತ್ಯ ವಲಯವನ್ನು ಪ್ರವೇಶಿಸಿವೆ. ಬಿ.ಬಸವಲಿಂಗಪ್ಪನವರ 'ಬೂಸಾ ಸಾಹಿತ್ಯ ಪ್ರಕರಣ'ದಿಂದಾಗಿ ದಲಿತ ಶಿಕ್ಷಿತ ವರ್ಗಕ್ಕೆ ಬ್ರಾಹ್ಮಣಶಾಹಿತ್ವದ ಮನಸ್ಥಿತಿಯ ಅರಿವಾಗಿ, ತಮ್ಮ ಅಸ್ತಿತ್ವದ ರೂಪುರೇಷೆಗಾಗಿ ಅಂಬೇಡ್ಕರ್ ಅವರ ವಿಚಾರಗಳತ್ತ ಮುಖ ಮಾಡಿದರು. ಇದೇ ಸಂದರ್ಭದಲ್ಲಿ 'ಬುದ್ಧನೆಡೆಗೆ ಮರಳಿ' ಎಂಬ ತಾತ್ವಿಕ ಎಚ್ಚರದೊಂದಿಗೆ ಬೌದ್ಧಧರ್ಮ ಹಾಗೂ ದರ್ಶನದತ್ತ ಮುನ್ನಡೆದರು. ಕನ್ನಡ ಸಾಹಿತ್ಯ ಪ್ರಕಾರದ ಬಂಡಾಯ ಮತ್ತು ದಲಿತ ಸಾಹಿತ್ಯದ ವೈಚಾರಿಕ ಚಿಂತನೆಗಳ ಹಿಂದೆ ಅಂಬೇಡ್ಕರ್ ಹಾಗೂ ಬುದ್ಧತ್ವದ ನೇರ ಪ್ರಭಾವವಿದೆ. ಇದರ ಪರಿಣಾಮವಾಗಿ ಕರ್ನಾಟಕದಲ್ಲಿ ಬಂಡಾಯ ಸಾಹಿತ್ಯದ ವೇದಿಕೆ ರೂಪಗೊಂಡು, ಕರ್ನಾಟಕದ ದಲಿತ ಸಂಘರ್ಷ ಸಮಿತಿಯ ಉಗಮವಾಯಿತು.

ಬಾಬಾಸಾಹೇಬರಿಂದ ಪ್ರೇರಣೆ ಮತ್ತು ಪ್ರಭಾವಕ್ಕೆ ಒಳಗಾದ ಕನ್ನಡದ ಪ್ರಗತಿಪರ ಚಿಂತಕರು, ಸಾಮಾಜಿಕ ಅಸಮಾನತೆ ಹಾಗೂ ಸಾಮಾಜಿಕ ಸಮಸ್ಯೆಗಳಿಗೆ ಪ್ರತಿಕ್ರಿಯಿಸುವುದಕ್ಕೆ ಬೌದ್ಧ ದರ್ಶನವನ್ನು ಪ್ರಬಲವಾದ ಅಸ್ತ್ರವಾಗಿ ಬಳಸಿಕೊಂಡಿದ್ದಾರೆ. ಆ ಮೂಲಕ ಸನಾತನವಾದಿ ಬ್ರಾಹ್ಮಣವಾದವು ಸೃಷ್ಟಿಸಿಕೊಂಡು ಬಂದ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿದ್ಯಾಮಾನಗಳನ್ನು ವಿಮರ್ಶೆಗೊಳಪಡಿಸುವ ಮತ್ತು ಪರ್ಯಾಯ ಬದುಕನ್ನು ಕಟ್ಟಿಕೊಳ್ಳುವ ನೆಲೆಯ ಚಿಂತನೆಗಳು ಮೂಡಿಬಂದಿವೆ. ಇಲ್ಲಿನ ಬಹುತೇಕ ಚಿಂತನಧಾರೆಗಳು ಪುರೋಹಿತಶಾಹಿತ್ವದ ತಾತ್ವಿಕ ಚೌಕಟ್ಟಿನೊಳಗೆ ಅಸಮಾನತೆಯನ್ನು ಕಾಪಾಡಿಕೊಂಡು ಬಂದಿರುವ, ಮೂಲಭೂತವಾದಿ ಆಯಾಮಗಳನ್ನು ವಿರೋಧಿಸುವ

ಭಾಗವಾಗಿ ಬೆಳೆದುಬಂದಿವೆ. ಪ್ರಾಚೀನ ಕಾಲದಿಂದ ಸಮಕಾಲೀನ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಅಸಮಾನತೆಯ ಧೋರಣೆಗಳ ಹಿಂದೆ ಬ್ರಾಹ್ಮಣಶಾಹಿತ್ವ ಅಂತರ್ಗತವಾಗಿದೆ. ಇದು ಪರೋಕ್ಷವಾಗಿ ತನ್ನ ಪ್ರಯೋಗವನ್ನು ನಡೆಸುತ್ತ ಬಂದಿದೆ. ಆದರೆ ಸಮಕಾಲೀನ ಸಂದರ್ಭದಲ್ಲಿ ದಲಿತರ ಮೇಲೆ ನಡೆಯುತ್ತಿರುವ ಶೋಷಣೆ, ಆಕ್ರಮಣ, ದೌರ್ಜನ್ಯವನ್ನು ನಡೆಸುತ್ತ ಬಂದಿರುವವರು ಬ್ರಾಹ್ಮಣರು ಮಾತ್ರವಲ್ಲ. ಬ್ರಾಹ್ಮಣಶಾಹಿ ರೂಪಿಸಿದ ತಾತ್ವಿಕ ಚೌಕಟ್ಟನ್ನು ಮೈಗೂಡಿಸಿಕೊಂಡಿರುವ ಈ ನಾಡಿನ ಶೂದ್ರ ಸಮುದಾಯದ ಉನ್ನತ ಜಾತಿಗಳು, ಭೂ ಹಿಡುವಳಿದಾರರು, ಬಂಡವಾಳಶಾಹಿಗಳು. ಆದರೆ ಕನ್ನಡ ಚಿಂತನ ಸಾಹಿತ್ಯದಲ್ಲಿ ಕೆಲವು ಚಿಂತನಧಾರೆಗಳು ಈ ಸೂಕ್ಷ್ಮ ಆಯಾಮಗಳನ್ನು ಗುರುತಿಸದೆ, ಸನಾತನವಾದ ಧರ್ಮದ ನೆಲೆಯಲ್ಲಿ ಬ್ರಾಹ್ಮಣರನ್ನು ತಮ್ಮ ಎದುರಾಳಿ ಎಂದು ಭಾವಿಸಿರುವಂತೆ ಕಂಡುಬರುತ್ತದೆ. ಇದರಿಂದ ಉದಾರವಾದಿ ಬ್ರಾಹ್ಮಣರನ್ನು ಹಾಗೂ ಬ್ರಾಹ್ಮಣರಲ್ಲಿ ಕಂಡುಬರುವ ಪ್ರಗತಿಪರ ನಿಲುವುಗಳು ನಿರ್ಲಕ್ಷ್ಯಕ್ಕೆ ಗುರಿಯಾಗುವ ಸಾಧ್ಯತೆಗಳಿವೆ.

ಸಮಕಾಲೀನ ಸಂದರ್ಭದಲ್ಲಿ ಕೋಮುವಾದ ಮತ್ತು ಮೂಲಭೂತವಾದವು ಉತ್ತುಂಗದ ಸ್ಥಿತಿಯನ್ನು ತಲುಪುತ್ತಿದೆ. ಇದರ ಭಾಗವಾಗಿ ಮಂದಿರ, ಮಸೀದಿ, ಚರ್ಚುಗಳ ಮೇಲೆ ವಿಧ್ವಂಸಕ ಕೃತ್ಯಗಳನ್ನು ನಡೆಸುವ ಮಾದರಿಗಳು ನಮ್ಮ ಮುಂದಿವೆ. ಧರ್ಮ ಮತ್ತು ಧಾರ್ಮಿಕತೆಯ ನೆಪವೊಡ್ಡಿ ದಲಿತರು ಹಾಗೂ ದಮನಿತರ ಆಹಾರ ಪದ್ಧತಿ, ಅವರ ಬದುಕಿನ ಮೇಲೆ ಅತಿಕ್ರಮಣಗಳು ನಡೆಯುತ್ತಿವೆ. ಈ ಎಲ್ಲ ಕುತಂತ್ರಗಳ ಹಿಂದೆ ಬ್ರಾಹ್ಮಣಶಾಹಿತ್ವದ ಕೂಸಾದ 'ಸಂಘಪರಿವಾರ', ಹಾಗೂ ಅದರ ಉಪ ಸಂಘ, ಸಂಘಟನೆಗಳು ಕಾರ್ಯಪ್ರವೃತ್ತವಾಗಿವೆ. ಈ ಪರಿವಾರದ ವ್ಯಾಪ್ತಿಯಲ್ಲಿ ಕೇವಲ ಬ್ರಾಹ್ಮಣರು ಮಾತ್ರ ಭಾಗಿಗಳಲ್ಲ. ಇಲ್ಲಿ ಬ್ರಾಹ್ಮಣೇತರ ಶೂದ್ರ ಜಾತಿಯ ಎಲ್ಲ ವರ್ಗದ ಜನರು ಕಂಡುಬರುತ್ತಾರೆ. ಕರ್ನಾಟಕದಲ್ಲಿ ಈ ಸಂಘಪರಿವಾರಕ್ಕೆ ಲಿಂಗಾಯತ, ಒಕ್ಕಲಿಗರು ಮಾತ್ರವಲ್ಲ ತಳಸಮುದಾಯದ ಬೇಡ, ಕುರುಬರಾದಿಯಾಗಿ ಇತರೆ ಸಮುದಾಯಗಳು ಭಾಗಿಯಾಗಿವೆ.

ಸಂಘಪರಿವಾರಕ್ಕೆ ಪ್ರತಿ ಸ್ಪರ್ಧಿಯಾಗಿ ಕರ್ನಾಟಕದಲ್ಲಿ 'ದಲಿತ ಸಂಘರ್ಷ ಸಮಿತಿ'ಯು ಅಸ್ತಿತ್ವಕ್ಕೆ ಬಂದಿತು. ಈ ಸಂಘಟನೆಯು ಬಾಬಾಸಾಹೇಬರ ತತ್ವಾದರ್ಶ ಹಾಗೂ ಅವರು ಸ್ವೀಕರಿಸಿದ ಬೌದ್ಧಧರ್ಮದ ನೆಲೆಯಲ್ಲಿ ತನ್ನ ಹೋರಾಟವನ್ನು ಮುಂದುವರೆಸಿದೆ. ಕನ್ನಡದ ಪ್ರಗತಿಪರ ಚಿಂತಕರು ಸಂಘಪರಿವಾರವು ಸೃಷ್ಟಿಸುತ್ತಿರುವ ಅಸಮಾನತೆ, ಮೂಲಭೂತವಾದ, ಕೋಮುವಾದದಂತಹ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಮತ್ತು ಸಂಘಪರಿವಾರದ ಮೂಲಭೂತವಾದವನ್ನು ವಿರೋಧಿಸುವುದಕ್ಕೆ ಬೌದ್ಧ ದರ್ಶನದೊಂದಿಗೆ ಅನುಸಂಧಾನಕ್ಕೆ ಮುಂದಾಗಿದ್ದಾರೆ. ಕರ್ನಾಟಕದ ಸಂದರ್ಭದಲ್ಲಿ ಬಾಬಾಸಾಹೇಬರು ಸ್ವೀಕರಿಸಿದ ಬೌದ್ಧಧಮ್ಮವು ಪ್ರಮುಖವಾಗಿ ಎರಡು ನೆಲೆಯಲ್ಲಿ ಕಂಡುಬರುತ್ತದೆ. ಒಂದು, ಸನಾತನವಾದ ಹಿಂದೂಧರ್ಮದ ಜಾತಿ ವ್ಯವಸ್ಥೆಯಿಂದ ಬಿಡುಗಡೆಯ ಭಾಗವಾಗಿ ಬೌದ್ಧಧಮ್ಮಕ್ಕೆ ಮತಾಂತರಗೊಳ್ಳುವುದು. (ಇದನ್ನ ಮತಾಂತರವೆಂದು ಕೆಲವು ವಿಚಾರವಾಗಿಗಳು ಒಪ್ಪುವುದಿಲ್ಲ. ತಮ್ಮದೆ ಆದ ಧರ್ಮಕ್ಕೆ ಮರಳುವ ಪ್ರಕ್ರಿಯೆಯಾದ್ದರಿಂದ ಇದನ್ನು ಒಂದು 'ಧಮ್ಮ ದೀಕ್ಷೆ' ಎಂದು ಭಾವಿಸುತ್ತಾರೆ.) ಎರಡು, ಹಿಂದುತ್ವದ ಅಸಮಾನತೆಯ ಶ್ರೇಣೀಕೃತ ಮಾದರಿಯನ್ನು

ಮೀರುವ ಮೂಲಕ ವೈಚಾರಿಕ ಜಾಗೃತಿಯನ್ನು ಪಡೆಯಲು ಬೌದ್ಧ ದರ್ಶನದತ್ತ ಮುಖ ಮಾಡುತ್ತಿರುವುದು. ಈ ಎರಡು ನೆಲೆಯಲ್ಲಿ ಕರ್ನಾಟಕ ದಲಿತರು ಹಾಗೂ ಪ್ರಗತಿಪರರು ಬೌದ್ಧಧರ್ಮದತ್ತ ಆಕರ್ಷಿತರಾಗುತ್ತಿದ್ದಾರೆ. ಮೊದಲ ವರ್ಗಕ್ಕೆ ಬೌದ್ಧಧರ್ಮದ ಆಚಾರ, ಸಂಪ್ರದಾಯ, ನಂಬಿಕೆಗಳು ಮುಖ್ಯವಾದರೆ, ಎರಡನೇ ವರ್ಗಕ್ಕೆ ಆಚಾರಕ್ಕಿಂತ ಅಲ್ಲಿನ ವಿಚಾರ, ದರ್ಶನ ಮುಖ್ಯವಾಗಿ ಕಂಡುಬರುತ್ತದೆ. ಹೀಗಾಗಿ 'ಧರ್ಮ' ಮತ್ತು 'ದರ್ಶನ' ಎಂಬ ಈ ಎರಡು ಪರಿಕಲ್ಪನೆಯ ಮೂಲಕವಾಗಿ ಕರ್ನಾಟಕದಲ್ಲಿ ಬಾಬಾಸಾಹೇಬರ ವಿಚಾರಗಳ ಅಡಿಯಲ್ಲಿ ಬೌದ್ಧಧರ್ಮದತ್ತ ಮುಖ ಮಾಡುತ್ತಿದ್ದಾರೆ.

ಕರ್ನಾಟಕದಲ್ಲಿ ಬಾಬಾಸಾಹೇಬರ ತತ್ವಾದರ್ಶಗಳನ್ನು ಆಧಾರವಾಗಿಟ್ಟುಕೊಂಡು ದಲಿತ ಹಾಗೂ ದಮನಿತ ಸಮುದಾಯಗಳು ಬೌದ್ಧಧರ್ಮದ ಅಡಿಯಲ್ಲಿ ಜಾಗೃತ ಹೋರಾಟಕ್ಕೆ ಮುಂದಾಗಿವೆ. ಆದರೆ ಇಂದು ಒಳ ಮೀಸಲಾತಿ, ಜಾತಿ ಕೇಂದ್ರಿತವಾದ ಚಟುವಟಿಕೆಗಳಿಂದಾಗಿ ದಲಿತ ಸಮುದಾಯದಲ್ಲಿಯೇ ಬಿರುಕುಗಳು ಉಂಟಾಗುತ್ತಿವೆ. ಮತ್ತೊಂದೆಡೆ ದಲಿತ ಬೌದ್ಧರ ಮೀಸಲಾತಿಯನ್ನು ಹತ್ತಿಕ್ಕುವಲ್ಲಿ ಮೂಲಭೂತವಾದಿಗಳು ಹುನ್ನಾರಗಳನ್ನು ರೂಪಿಸಿತ್ತಿದ್ದಾರೆ. ಈ ಎಲ್ಲ ಸಮಸ್ಯೆಗಳಿಗೂ ಪರಿಹಾರವನ್ನು ಕಂಡುಕೊಳ್ಳುವ, ಸನಾತನವಾದಿ ಮನಸ್ಥಿತಿಗಳು ರೂಪಿಸುತ್ತಿರುವ ಜೀವವಿರೋಧಿ ಕೃತ್ಯಗಳಿಗೆ ಪರ್ಯಾಯ ನೆಲೆಯನ್ನು ಕಂಡುಕೊಳ್ಳಲು ಕನ್ನಡದ ಪ್ರಗತಿಪರರು ಬೌದ್ಧದರ್ಶನವನ್ನು ಆಧರಿಸುತ್ತಿದ್ದಾರೆ. ಬೌದ್ಧದರ್ಶನವನ್ನು ಕೇಂದ್ರವಾಗಿಟ್ಟುಕೊಂಡು ವ್ಯಕ್ತವಾಗಿರುವ ಚಿಂತನೆಗಳಿಗೆ ವಿಶಾಲವಾದ ದೃಷ್ಟಿಕೋನವಿದೆ. ಈ ವಿಶಾಲ ದೃಷ್ಟಿಕೋನದ ಅಡಿಯಲ್ಲಿ ಜಾಗತಿಕ ಮಟ್ಟದ ಸಮಸ್ಯೆಗಳಿಗೆ ಪರಿಹಾರವನ್ನು ನೀಡುವ ನೆಲೆಯಲ್ಲಿ ಕನ್ನಡದ ಚಿಂತಕ ವರ್ಗವು ತಮ್ಮ ಒಲವು ಮತ್ತು ನಿಲುವುಗಳನ್ನು ಸಮಾಜದ ಮುಂದಿಡುತ್ತಿದೆ.

ಕನ್ನಡ ಚಿಂತನ ಸಾಹಿತ್ಯದಲ್ಲಿ ವಿಭಿನ್ನ ನೆಲೆಯ ಬೌದ್ಧ ಚಿಂತನೆಗಳು ಮೂಡಿಬಂದಿದ್ದು, ಅವುಗಳು ಭಿನ್ನ ಆಯಾಮಗಳಲ್ಲಿ ತಮ್ಮ ಪ್ರತಿಕ್ರಿಯೆ ನೀಡುತ್ತ ಬಂದಿವೆ. ಆಕ್ರಮಣ ಸಂಸ್ಕೃತಿಯಿಂದ ದಮನಿತ ಸಮುದಾಯಗಳನ್ನು ರಕ್ಷಿಸಿಕೊಳ್ಳಲು ಬೌದ್ಧದರ್ಶನವು ಒಂದು ಅಸ್ತ್ರವಾಗಿ, ಮಾರ್ಗವಾಗಿ ಕಾರ್ಯಪ್ರವೃತ್ತವಾಗುತ್ತಿದೆ. ಹೀಗೆ ಅಂಬೇಡ್ಕರರ ಚಿಂತನಧಾರೆಗಳಿಂದ ಬೆಳಕಿಗೆ ಬಂದ ಬೌದ್ಧದರ್ಶನವು ಸಮಾಜದ ವಿವಿಧ ಸಮಸ್ಯೆಗಳಿಗೆ ಪ್ರತಿಕ್ರಿಯಿಸುತ್ತಿರುವುದನ್ನು ಕನ್ನಡ ಚಿಂತನ ಪ್ರಕಾರದಲ್ಲಿ ನೋಡಬಹುದಾಗಿದೆ.

ಫಲಿತಗಳು

'ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನದ ಆಯಾಮಗಳು' ಎಂಬ ವಿಷಯವನ್ನು ಸಂಶೋಧನೆಗೆ ಆಯ್ದುಕೊಂಡಿದ್ದು, ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡಿರುವ ಫಲಿತಗಳು ಈ ಮುಂದಿನಂತಿವೆ.

೧. ಕನ್ನಡ ಚಿಂತನ ಸಾಹಿತ್ಯದಲ್ಲಿ ಬುದ್ಧನ ಕುರಿತಾಗಿ ಧರ್ಮ, ದರ್ಶನ ಹಾಗೂ ಸಾಮಾಜಿಕ ಆಯಾಮ ಎಂಬ ಪ್ರಮುಖವಾದ ಮೂರು ಧಾರೆಗಳಲ್ಲಿ ವಿಚಾರಗಳು ವ್ಯಕ್ತವಾಗಿವೆ. ಧರ್ಮದ ನೆಲೆಯಲ್ಲಿ ಬುದ್ಧನನ್ನು ಗ್ರಹಿಸುತ್ತಿರುವ ಚಿಂತನೆಗಳು ಆರಾಧನೆ, ಸ್ವೀಕಾರ ಮತ್ತು ಮತಾಂತರದ ನೆಲೆಗಟ್ಟಿನಲ್ಲಿವೆ. ದರ್ಶನದ ಭಾಗವಾಗಿ ಕಂಡುಬರುವ ಚಿಂತನೆಗಳಲ್ಲಿ ಆಧ್ಯಾತ್ಮಿಕತೆ ಹಾಗೂ ವೈಚಾರಿಕತೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಸಾಮಾಜಿಕ ನೆಲೆಗಟ್ಟಿನಲ್ಲಿ ಕಂಡುಬರುವ ಬೌದ್ಧ ಚಿಂತನೆಗಳಲ್ಲಿ ಸಾಮಾಜಿಕ ಅಸಮಾನತೆಗಳಾದ ಜಾತೀಯತೆ, ಲಿಂಗ ತಾರತಮ್ಯ, 'ಮೇಲು-ಕೀಳು'ಗಳಂತಹ ಅಸಮಾನತೆಯನ್ನು ವಿರೋಧಿಸುವ ನೆಲೆಗಟ್ಟಿನಲ್ಲಿ ಚಿಂತನೆಗಳು ವ್ಯಕ್ತವಾಗಿವೆ.

೨. ಕನ್ನಡ ಚಿಂತನ ಸಾಹಿತ್ಯದಲ್ಲಿ ಬುದ್ಧನ ಧರ್ಮವನ್ನು 'ಧಮ್ಮ' ಎಂದು ಕರೆಯುವುದು ಸೂಕ್ತವಾದುದು, ಇದು ಮೂಲಭೂತವಾದಿ ಅಥವಾ ಸಂಪ್ರದಾಯವಾದಿ ಧರ್ಮಗಳ ನೆಲೆಯಿಂದ ಹೊರಗುಳಿದಿದೆ ಮತ್ತು ಪರ್ಯಾಯವಾಗಿದೆ ಎಂಬ ಚಿಂತನೆಗಳು ಕಂಡುಬರುತ್ತವೆ. ಈ ಚಿಂತನಧಾರೆಗಳು 'ಧರ್ಮ' ಮತ್ತು 'ಧಮ್ಮ' ಪರಿಕಲ್ಪನೆಗಳ ನಡುವೆ ತಾತ್ವಿಕ ವ್ಯತ್ಯಾಸವನ್ನು ಗುರುತಿಸುತ್ತವೆ. ಇಲ್ಲಿ 'ಧಮ್ಮ' ಎಂಬ ಪರಿಕಲ್ಪನೆಯನ್ನು ಪ್ರತಿಪಾದಿಸುವವರು ಹೆಚ್ಚಾಗಿ ಅಂಬೇಡ್ಕರ್ ಅನುಯಾಯಿಗಳಾಗಿದ್ದಾರೆ. ಇವರ ಪ್ರತಿಪಾದನೆಯ ಹಿಂದೆ ಅಂಬೇಡ್ಕರ್ ಅವರ ತಾರ್ಕಿಕ ಪ್ರೇರಣೆ ದಟ್ಟವಾಗಿರುವುದು ಕಂಡುಬರುತ್ತದೆ. ಈ ಕಾರಣದಿಂದ ಭಾಷಿಕವಾಗಿ ಉಚ್ಚಾರದಲ್ಲಿ ಭಿನ್ನತೆಗಳಿರುವ, ಆಶಯದಲ್ಲಿ ಸಮಾನತೆಯನ್ನು ಕಾಯ್ದುಕೊಂಡಿರುವ ಈ ಪರಿಕಲ್ಪನೆಯ ಅಡಿಯಲ್ಲಿ 'ಧಮ್ಮ'ವೆಂದರೆ ದಮನಿತರಿಗೆ ಮಿಡಿಯುವುದು, ಧಾರ್ಮಿಕ ಮೂಲಭೂತವಾದದಿಂದ ಹೊರಗುಳಿದುದು ಎಂಬ ನಿಲುವು ಕನ್ನಡ ವಿಚಾರ ಸಾಹಿತ್ಯದ ಒಂದು ಧಾರೆಯಲ್ಲಿ ಕಂಡುಬರುತ್ತದೆ. ಸಂಸ್ಕೃತ ಭಾಷೆಯ ಧರ್ಮ, ಪಾಳಿ ಭಾಷೆಯಲ್ಲಿ ಧಮ್ಮವೆಂದು ಬಳಕೆಯಲ್ಲಿರುವ ಈ ಪದಗಳನ್ನು ಆಧಾರವಾಗಿಟ್ಟುಕೊಂಡು ಭಿನ್ನತೆಯನ್ನು ಗುರುತಿಸುವುದರ ಹಿಂದೆ ಹಿಂದೂ ಮೂಲಭೂತವಾದದ ಬಗೆಗೆ ಅಸಹನೆಯಿರುವುದು ಕಂಡುಬರುತ್ತದೆ. ಸನಾತನ ಹಿಂದುತ್ವದ ಜೀವಾಳವಾಗಿರುವ 'ಧರ್ಮ'ಕ್ಕೆ ವಿರುದ್ಧವಾಗಿ ಪರ್ಯಾಯ ಮಾರ್ಗವನ್ನು ರೂಪಿಸಿಕೊಳ್ಳುವ ಭಾಗವಾಗಿ 'ಧಮ್ಮ' ಎಂಬ ಪರಿಭಾಷೆಯನ್ನು ಎತ್ತಿಹಿಡಿಯುವುದು ಈ ಧಾರೆಯ ವಿಶಿಷ್ಟತೆಯಾಗಿದೆ.

೩. ಕನ್ನಡ ಚಿಂತನ ಸಾಹಿತ್ಯದಲ್ಲಿ ಜಾಗತಿಕ ಧರ್ಮವಾಗಿ ಬೆಳೆದಿರುವ, ಭಾರತದ ಮಣ್ಣಿನಲ್ಲಿ ಜೀವತಳೆದ ಬೌದ್ಧ ದರ್ಶನವನ್ನು ಸ್ಥಳೀಯ ದೈವಗಳೊಂದಿಗೆ ಸಮೀಕರಿಸುವ ನೆಲೆಯ ಚಿಂತನೆಗಳು ಮೂಡಿಬಂದಿವೆ. ಇಲ್ಲಿ ಅಲ್ಲಮ, ಮಂಟೇಸ್ವಾಮಿ, ಮಲೆಯ ಮಾದಪ್ಪರಂತಹ ಸಾಂಸ್ಕೃತಿಕ ನಾಯಕರ ತಾತ್ವಿಕ ಚಿಂತನೆಗಳನ್ನು ಬುದ್ಧನ ತಾತ್ವಿಕತೆಯೊಂದಿಗೆ ಅನುಸಂಧಾನಗೊಳಿಸಲಾಗಿದೆ. ಕನ್ನಡ ಚಿಂತನ ಸಾಹಿತ್ಯದ ಒಂದು ಧಾರೆಯು ಬುದ್ಧನ ಚಿಂತನೆಗಳನ್ನು ಸ್ಥಳೀಯ ದೈವಗಳೊಂದಿಗೆ ಸಮೀಕರಿಸುವ ಮೂಲಕವಾಗಿ ಸ್ಥಳೀಕರಣ ಮತ್ತು

ಕಸಿಕರಣದಂತಹ ಪ್ರಯೋಗಾತ್ಮಕ ನೆಲೆಯಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತ ಬಂದಿದೆ. ಯಾವುದೇ ಧರ್ಮ ಅಥವಾ ದರ್ಶನವು ಜಾಗತಿಕವಾಗಿ ಎಷ್ಟೇ ವಿಸ್ತಾರತೆ ಮತ್ತು ಬಹುರೂಪತೆಯನ್ನು ಪಡೆದಿರಲಿ ಅದರ ನಿಜವಾದ ಉಪಯುಕ್ತತೆ ಕಸಿಕರಣ, ಸ್ಥಳೀಕರಣ ಹಾಗೂ ವರ್ತಮಾನಿಕರಣದಲ್ಲಿ ಇದೆ ಎಂಬುದಾಗಿ ಕನ್ನಡ ಚಿಂತನ ಸಾಹಿತ್ಯದ ಒಂದು ಧಾರೆಯು ಭಾವಿಸಿದೆ. ಈ ನೆಲೆಯಲ್ಲಿ ದೇವನೂರ ಮಹಾದೇವ, ಮಹಾದೇವ ಶಂಕನಪುರ, ನಟರಾಜ್ ಬೂದಾಳು ಹಾಗೂ ಇತರೆ ಚಿಂತಕ ವರ್ಗವು ಕಾರ್ಯಪ್ರವೃತ್ತವಾಗಿದೆ.

೪. ಕನ್ನಡ ಚಿಂತನ ಪರಂಪರೆಯಲ್ಲಿ ಜಾಗತಿಕ ಮಟ್ಟದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಬೌದ್ಧ ದರ್ಶನ ನೆರವಾಗುತ್ತದೆಂಬ ಚಿಂತನೆ ಮಾಡುವ ಧಾರೆಯು ಇದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿಯಲ್ಲಿ ಮಾನವ ಸಂಬಂಧಗಳು ಶಿಥಿಲವಾಗುತ್ತಿರುವ ಸಂದರ್ಭದಲ್ಲಿ ಜಾಗತಿಕ ಶಾಂತಿಯ ನೆಲೆಯಲ್ಲಿ ಬುದ್ಧನ ತತ್ವ- ಚಿಂತನೆಗಳು ಹೊಸ ಮಾನವ ಸಂಬಂಧವನ್ನು ಕಟ್ಟುವ ದಿಶೆಯಲ್ಲಿ ಒಳಪಡುತ್ತಿವೆ. ಹಿಗಾಗಿಯೇ ಬೌದ್ಧ ದರ್ಶನವು ತನ್ನಲ್ಲಿ ಅಂತರ್ಗತವಾಗಿರುವ ತತ್ವ ಚಿಂತನೆಗಳಿಂದಾಗಿ ಇಂದು ಜಾಗತಿಕ ಧರ್ಮವಾಗಿ ತನ್ನ ವಿಶ್ವ ಸಂಬಂಧಗಳನ್ನು ಪಡೆದುಕೊಳ್ಳುವ ಆಯಾಮ ಹೊಂದಿದೆ. ಕನ್ನಡ ಚಿಂತನ ಸಾಹಿತ್ಯವು ಅಂತರಾಷ್ಟ್ರೀಯ ಬೌದ್ಧ ಸಮುದಾಯದೊಂದಿಗೆ ಸಂಬಂಧ ಬೆಸೆಯುವ ದಿಶೆಯಲ್ಲಿ ಮುನ್ನಡೆಯುತ್ತಿದೆ. ಈ ದಿಶೆಯಲ್ಲಿ ಬೌದ್ಧ ದರ್ಶನವು ಸ್ಥಳೀಕರಣ ಮತ್ತು ಜಾಗತೀಕರಣದೊಂದಿಗೆ ಸಂಬಂಧವನ್ನು ಬೆಸೆಯುತ್ತಿದೆ.

೫. ಕನ್ನಡ ಚಿಂತನ ಸಾಹಿತ್ಯದಲ್ಲಿ ಒಂದು ಧಾರೆಯು ಹಿಂದೂ ಮೂಲಭೂತವಾದದ ವಿರುದ್ಧ ಹೋರಾಟಕ್ಕೆ ಬೌದ್ಧಧರ್ಮದ ತತ್ವ ಚಿಂತನೆಗಳನ್ನು ಪ್ರಮುಖವಾದ ಅಸ್ತ್ರವಾಗಿ ಬಳಸಿಕೊಂಡು ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸುತ್ತ ಬಂದಿದೆ. ಇದು ಬೌದ್ಧಿಕ ಸಂಘರ್ಷದ ಸ್ವರೂಪದಲ್ಲಿ ಜಾತೀಯತೆ ಮತ್ತು ಯಜಮಾನಿಕೆಯ ವಿರುದ್ಧ ತನ್ನ ಹೋರಾಟವನ್ನು ಮುಂದುವರೆಸಿಕೊಂಡು ಬಂದಿದೆ. ಇಲ್ಲಿ ಕೆ.ಎಸ್. ಭಗವಾನ್, ಮ.ನ. ಜವರಯ್ಯ, ಅರವಿಂದ ಮಾಲಗತ್ತಿ, ಸಿ.ಕೆ ಮಹೇಶ್ ಮುಂತಾದ ಚಿಂತಕರು ಪ್ರಮುಖವಾಗಿ ಕಂಡುಬರುತ್ತಾರೆ. ಇವರ ಚಿಂತನೆಗಳಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ನೆಲೆಯ ಅಸಮಾನತೆಯನ್ನು ಸೃಷ್ಟಿಸಿಕೊಂಡು ಬಂದ ಬ್ರಾಹ್ಮಣವಾದದ ಬಗ್ಗೆ ಅಸಮಾಧಾನವಿದೆ. ಆದ್ದರಿಂದ ಈ ಬ್ರಾಹ್ಮಣವಾದವನ್ನು ತಾತ್ವಿಕವಾಗಿ ಹತ್ತಿಕ್ಕುವ ಮೂಲಕ ದಲಿತರು ಹಾಗೂ ಅಸ್ಪೃಶ್ಯರಿಗೆ ಸಮಾನತೆಯನ್ನು ಕಲ್ಪಿಸಿಕೊಡಬೇಕೆಂಬ ನಿಲುವುಗಳು ಇವರ ವಿಚಾರಧಾರೆಗಳಲ್ಲಿ ಕಂಡುಬರುತ್ತವೆ.

೬. ಕನ್ನಡ ಚಿಂತನ ಸಾಹಿತ್ಯದಲ್ಲಿ ಬೌದ್ಧ ದರ್ಶನವನ್ನು ವೈದಿಕ ಪ್ರಮಾಣಗಳನ್ನು ನಿರಾಕರಿಸುವ ಭಾಗವಾಗಿ ಬಳಸಿಕೊಳ್ಳಲಾಗಿದೆ. ಆ ಮೂಲಕವಾಗಿ ವೈದಿಕ ಧರ್ಮಗ್ರಂಥಗಳನ್ನು ವಿಮರ್ಶೆಗೆ ಒಳಪಡಿಸುವ ಮಾದರಿಯನ್ನು ಕನ್ನಡ ಚಿಂತನ ಸಾಹಿತ್ಯದ ಒಂದು ಧಾರೆಯು ಮುಂದುವರೆಸಿಕೊಂಡು ಬಂದಿದೆ. ಇದರಿಂದ ವೈದಿಕ ಧರ್ಮಗ್ರಂಥಗಳಲ್ಲಿರುವ ಅವೈಚಾರಿಕ

ಮತ್ತು ಅವೈಜ್ಞಾನಿಕ ಅಂಶಗಳನ್ನು ಎತ್ತಿಹಿಡಿಯುವ ಪ್ರಯತ್ನಗಳು ಕಂಡುಬರುತ್ತವೆ. ಆದರೆ ಇಲ್ಲಿ ಕೆಲವು ಚಿಂತನೆಗಳು ಹಿಂದುತ್ವವನ್ನು ವಿಮರ್ಶೆಗೊಳಪಡಿಸುವ ಭರದಲ್ಲಿ ಬೌದ್ಧಧರ್ಮದಲ್ಲಿನ ವೈರುಧ್ಯಗಳನ್ನು ಮರೆಮಾಚುವ, ಇಲ್ಲವೇ ಇಲ್ಲಿನ ಮೂಲಭೂತವಾದಿ ಸ್ವರೂಪವನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿ ಮೂಡಿಬಂದಿವೆ.

೭. ಕನ್ನಡ ಚಿಂತನ ಸಾಹಿತ್ಯದಲ್ಲಿ ಎಡಪಂಥೀಯ ಮತ್ತು ಬಲಪಂಥೀಯ ವಿಚಾರ ಧಾರೆಗಳೆರಡರಲ್ಲೂ ಬೌದ್ಧಧರ್ಮ ಹಾಗೂ ದರ್ಶನ ಕುರಿತಾದ ಚಿಂತನೆಗಳು ಕಂಡುಬರುತ್ತವೆ. ಆದರೆ ಈ ಎರಡು ಧಾರೆಗಳು ಬುದ್ಧನ ಧರ್ಮ ಹಾಗೂ ದರ್ಶನವನ್ನು ಕುರಿತು ವ್ಯಾಖ್ಯಾನಿಸುವ ದೃಷ್ಟಿಕೋನದಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಬಲಪಂಥೀಯ ಚಿಂತನಧಾರೆಗಳು ಸನಾತನ ಧರ್ಮವು ಸೃಷ್ಟಿಸಿಕೊಂಡು ಬಂದಿರುವ ಅಸಮಾನತೆ ಹಾಗೂ ಮೂಲಭೂತವಾದವನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿ ಮೂಡಿಬಂದಿವೆ. ಎಡಪಂಥೀಯ ಚಿಂತನೆಗಳು ವೈದಿಕಧರ್ಮದ ಮೂಲಭೂತವಾದಿ ಧೋರಣೆಗಳನ್ನು ವಿರೋಧಿಸುವ ನೆಲೆಗಟ್ಟಿನಲ್ಲಿ ಬೌದ್ಧ ದರ್ಶನವನ್ನು ಪ್ರತಿಪಾದಿಸುತ್ತ ಬಂದಿವೆ. ಇಂತಹ ಸಂದರ್ಭದಲ್ಲಿ ಬಲಪಂಥೀಯ ವಿಚಾರಧಾರೆಯು ಹಿಂದುತ್ವವನ್ನು ಸಮರ್ಥಿಸಿಕೊಳ್ಳುವ ಹಾಗೂ ಬುದ್ಧನನ್ನು ಹಿಂದು ಧರ್ಮದೊಳಗೆ ಸಮೀಕರಿಸಿಕೊಳ್ಳುವ ನೆಲೆಯಲ್ಲಿ ತನ್ನ ವಿಚಾರಗಳನ್ನು ಮಂಡಿಸುತ್ತಿವೆ. ಇದಕ್ಕೆ ಪ್ರಮುಖವಾದ ಕಾರಣವೆಂದರೆ, ವೈಚಾರಿಕ ನೆಲೆಯ ಬೌದ್ಧ ದರ್ಶನದ ಅಡಿಯಲ್ಲಿ ದಲಿತ ಹಾಗೂ ಹಿಂದುಳಿದ ಚಿಂತಕ ವರ್ಗ ಕೇಂದ್ರಿತ ವಿಚಾರಧಾರೆಯು ಹಿಂದೂ ಧರ್ಮದಲ್ಲಿನ ಮೂಲಭೂತವಾದಿ ಧೋರಣೆಗಳನ್ನು ಕಟುವಾಗಿ ಟೀಕೆಗೆ ಒಳಪಡಿಸುತ್ತಿರುವುದು. ಈ ಸಂದರ್ಭದಲ್ಲಿ ತನ್ನ ಹುಸಿ ಏಕತೆ ಮತ್ತು ಅನನ್ಯತೆಯನ್ನು ಕಾಯ್ದುಕೊಳ್ಳುವ ನೆಲೆಯಲ್ಲಿ ಬೌದ್ಧಧರ್ಮವು ಕೂಡ ವಿರಾಟ್ ಹಿಂದೂಧರ್ಮದ ಶಾಖೆ ಎಂಬ ವಾದಗಳು ಬಲಪಂಥೀಯ ಚಿಂತನಧಾರೆಯಲ್ಲಿ ಕಂಡುಬರುತ್ತವೆ.

೮. ಕನ್ನಡದ ಹಾಗೂ ಭಾರತೀಯ ಕೆಲವು ಬಲಪಂಥೀಯ ವಿಚಾರ ಧಾರೆಗಳಲ್ಲೂ ಬೌದ್ಧಧರ್ಮದ ನೆಲೆಗಟ್ಟಿನಲ್ಲಿ ಸಮಾನತೆಯ ಸಮಾಜದ ಆಶಯಗಳು ಒಡಮೂಡಿವೆ. ಆದರೆ ಬಹುತೇಕ ಎಡಪಂಥೀಯ ಹಾಗೂ ದಲಿತ ಮಾದರಿಗಳು ಬಲಪಂಥೀಯರ ಚಿಂತನೆಗಳನ್ನು ಜಾತಿ ಕೇಂದ್ರಿತ ನೆಲೆಯಲ್ಲಿ ಟೀಕಿಸುತ್ತ ಬಂದಿವೆ. ಇದನ್ನು ಬೌದ್ಧದರ್ಶನದ ಸಾಮಾಜಿಕ ಪ್ರತಿರೋಧಿಕರಣ ಎನ್ನಬಹುದು. ಇದರಿಂದ ಬೌದ್ಧ ಚಿಂತನೆಗಳನ್ನು ಕೇವಲ ದಲಿತ ನೆಲೆಯಲ್ಲಿ ಸಂಕುಚಿತಗೊಳ್ಳುತ್ತಿರುವ ಸನ್ನಿವೇಶವು ಕನ್ನಡ ಚಿಂತನ ಪ್ರಕಾರದಲ್ಲಿ ಕಂಡುಬರುತ್ತದೆ.

೯. ಭಾರತದಲ್ಲಿ ಸನಾತನವಾದಿಗಳು ದಲಿತರು ಹಾಗೂ ಹಿಂದುಳಿದವರ ಆಹಾರ ಸಂಸ್ಕೃತಿಯ ಮೇಲೆ ಹೇರುತ್ತಿರುವ ಧಾರ್ಮಿಕ ನಿರ್ಬಂಧಕ್ಕೆ ಪ್ರತಿಕ್ರಿಯಿಸುವ ನೆಲೆಯಲ್ಲಿ ಅಂಬೇಡ್ಕರ್‌ವಾದಿ,

ಮಾರ್ಕ್ಸ್‌ವಾದಿ ಹಾಗೂ ಲೋಹಿಯಾವಾದಿಗಳು ಬೌದ್ಧ ದರ್ಶನದ ಅಡಿಯಲ್ಲಿ ದಾರಿಯನ್ನು ಕಂಡುಕೊಳ್ಳುತ್ತಿದ್ದಾರೆ. ಆ ಮೂಲಕವಾಗಿ ತಮ್ಮ ಮಾಂಸ ಆಹಾರ ಪದ್ಧತಿಯ ಅನಿವಾರ್ಯತೆಯನ್ನು ಸಮರ್ಥಿಸಿಕೊಳ್ಳುವ ಚಿಂತನೆಗಳು ಕನ್ನಡ ಚಿಂತನ ಪರಂಪರೆಯಲ್ಲಿ ಇಂದು ಹೆಚ್ಚಾಗಿ ಕಂಡುಬರುತ್ತಿವೆ. ಇಂದು ಧರ್ಮದ ನೆಪವೊಡ್ಡಿ ಆಹಾರ ಸಂಸ್ಕೃತಿಯ ಮೇಲೆ ಮತ್ತು ಮಾಂಸ ಆಹಾರವನ್ನು ಸೇವಿಸುವಂತಹ ಜನಾಂಗದ ಮೇಲೆ ಹಲ್ಲೆಗಳು ನಿರಂತರವಾಗಿ ನಡೆಯುತ್ತಿವೆ. ಪಶುವಧೆಯನ್ನು ನಿರಾಕರಿಸುವ ದೃಷ್ಟಿಕೋನವು ವಿವೇಚನೆರಹಿತವಾಗಿವೆ. ಈ ಪಶುವಧೆಯನ್ನು ನಿರಾಕರಿಸುವ ವಿಚಾರದ ಹಿಂದೆ ಯಾವುದೇ ಸ್ಪಷ್ಟತೆಗಳು ಕಂಡುಬರುವುದಿಲ್ಲ. ಕೇವಲ ಹಿಂದುತ್ವವನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿ 'ಗೋವು ಪವಿತ್ರ' ಎಂಬ ವಾದವನ್ನು ಹಿಂದುತ್ವವಾದಿಗಳು ಮಂಡಿಸುತ್ತ ಬಂದಿದ್ದಾರೆ. ಆದರೆ ಬೌದ್ಧಧರ್ಮ ಮಾಂಸಹಾರದ ಬಗೆಗೆ ಎಲ್ಲಿಯೂ ನಿಷೇಧಿಸಿಲ್ಲ. ಆದ ಕಾರಣ ಕನ್ನಡದ ಪ್ರಗತಿಪರ ಹಾಗೂ ದಲಿತ ಚಿಂತಕ ವರ್ಗವು ಬೌದ್ಧಧರ್ಮದ ಈ ಅಂಶಗಳನ್ನು ಆಧಾರವಾಗಿಟ್ಟುಕೊಂಡು ತಮ್ಮ ಆಹಾರ ಪದ್ಧತಿಯನ್ನು ಸಮರ್ಥಿಸಿಕೊಳ್ಳುವ ಬಗೆಯಲ್ಲಿ ಚಿಂತನೆಯನ್ನು ವ್ಯಕ್ತಪಡಿಸುತ್ತಿದೆ.

೧೦. ಅಂಬೇಡ್ಕರ್ ಅವರ ಪ್ರಭಾವದಿಂದ ಜಾಗೃತರಾದ ದಲಿತ ಬುದ್ಧಿಜೀವಿಗಳು ಹೋರಾಟದ ಭಾಗವಾಗಿ ಬೌದ್ಧಧರ್ಮವನ್ನು ಸ್ವೀಕರಿಸಿಕೊಂಡು ಮುನ್ನಡೆಯುತ್ತಿದ್ದಾರೆ. ಆದರೆ ಪ್ರಸ್ತುತದಲ್ಲಿ ಈ ಹೋರಾಟ ಹಾಗೂ ಸಂಘಟನೆಗಳು ಮೂಲಭೂತವಾದ ಸ್ವರೂಪವನ್ನು ಪಡೆದುಕೊಂಡು ಜಡಾವಸ್ಥೆಯನ್ನು ತಲುಪುತ್ತಿವೆ. ಈ ಕ್ರಿಯೆಯಿಂದಾಗಿ ಅಂಬೇಡ್ಕರರ ಮಾರ್ಗದಲ್ಲಿ ದಲಿತರು ಹಾಗೂ ಹಿಂದುಳಿದ ಸಮುದಾಯವನ್ನು ಮುನ್ನಡೆಸಬೇಕಾದ ಈ ಸಂಘಟನೆ ಹಾಗೂ ಚಳವಳಿಗಳು, ಬೌದ್ಧಧರ್ಮದ ಅಡಿಯಲ್ಲಿ ಸಾಮಾನ್ಯ ಜನತೆಯನ್ನು ತಮ್ಮ ಸ್ವಾರ್ಥಗಳಿಗಾಗಿ ಬಳಸಿಕೊಳ್ಳುವುದರ ಬಗೆಗೆ ಕಮ್ಯೂನಿಷ್ಟ್, ಸಮಾಜವಾದಿ ಹಾಗೂ ಅಂಬೇಡ್ಕರ್‌ವಾದಿ ವಿಚಾರಧಾರೆಗಳು ವಿರೋಧಿ ನೆಲೆಯಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿರುವುದು ಕನ್ನಡ ವಿಚಾರ ಸಾಹಿತ್ಯದಲ್ಲಿ ಕಂಡುಬರುತ್ತದೆ.

೧೧. ಕರ್ನಾಟಕದಲ್ಲಿ ದಲಿತ ಚಿಂತನಧಾರೆಯು 'ಮರಳಿ ಮನೆಗೆ' ಎಂಬ ಘೋಷ ವಾಕ್ಯದೊಂದಿಗೆ ಬೌದ್ಧಧರ್ಮದತ್ತ ಮುಖ ಮಾಡಿದೆ. ಇದು ರಾಜಕಿಯ ನೆಲೆಗಟ್ಟಿನಿಂದ ಮೂಡಿದ ಹೋರಾಟವಾಗಿದ್ದು, ದಲಿತರ ಮೇಲೆ ನಡೆಯುತ್ತಿರುವಂತಹ ಅನ್ಯಾಯ, ಆಕ್ರಮಣದಂತಹ ನೀತಿಗಳ ವಿರುದ್ಧ ಈ ಹೋರಾಟ ಆರಂಭವಾಗಿದೆ. ಈ ಹೋರಾಟಕ್ಕೆ ಅಂಬೇಡ್ಕರ್ ತತ್ವ ಚಿಂತನೆಗಳು ಸೈದ್ಧಾಂತಿಕ ನೆಲೆಯನ್ನು ರೂಪಿಸಿವೆ. ಈ ಹೋರಾಟದ ಆರಂಭದಲ್ಲಿ ದಲಿತ ಸಾಹಿತಿಗಳನ್ನು ಒಳಗೊಂಡಂತೆ ಬಿ. ಬಸವಲಿಂಗಪ್ಪ ಹಾಗೂ ಶ್ರೀನಿವಾಸ್ ಪ್ರಸಾದ್ ಅವರಂತಹ ರಾಜಕಾರಣಿಗಳ ಬೆಂಬಲವು ಇದಕ್ಕೆ ಲಭಿಸಿದೆ.

೧೨. ದಲಿತ ಹೋರಾಟದ ಸೋಲಿಗೆ ದಲಿತ ಸಾಹಿತ್ಯವೇ ಪ್ರಮುಖ ಕಾರಣ ಎಂಬ ವಾದಗಳು ಕನ್ನಡ ಚಿಂತನ ಸಾಹಿತ್ಯದ ಒಂದು ಧಾರೆಯಲ್ಲಿ ಕೇಳಿಬರುತ್ತಿದೆ. ಇದಕ್ಕೆ ಕಾರಣ ದಲಿತ ಸಾಹಿತಿಗಳು ಬಾಬಾಸಾಹೇಬ್ ಅಂಬೇಡ್ಕರ್ ಅವರ ವಾದವನ್ನು ಒಳಗೊಂಡಂತೆ ಮಾರ್ಕ್ಸ್‌ವಾದ, ಲೋಹಿಯಾವಾದ, ಗಾಂಧಿವಾದವನ್ನು ತಮ್ಮ ಸಾಹಿತ್ಯದ ಸೈದ್ಧಾಂತಿಕ ವಸ್ತುವಾಗಿ ಒಳಸಿಕೊಂಡ ಕಾರಣ ಅಂಬೇಡ್ಕರ್ ರೂಪಿಸಿದ ದಲಿತ ಹೋರಾಟಕ್ಕೆ ಹಿನ್ನಡೆಯಾಯಿತು. ಆದ್ದ ಕಾರಣ ದಲಿತ ಸಾಹಿತ್ಯವೇ ದಲಿತ ಸಂಘಟನೆ ಹಾಗೂ ಹೋರಾಟಗಳ ವೈಫಲ್ಯಕ್ಕೆ ಕಾರಣ ಎಂಬುದಾಗಿ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸಿರುವುದಾಗಿ ತಿಳಿದುಬರುತ್ತದೆ. ಈ ಧೋರಣೆಗಳಿಂದ ತಿಳಿದುಬರುವ ಪ್ರಮುಖ ಅಂಶವೆಂದರೆ, ದಲಿತ ಚಿಂತಕರು ಅಂಬೇಡ್ಕರ್ ಅವರ ವಿಚಾರಗಳಿಗಾಗಲಿ, ಅವರು ಸ್ವೀಕರಿಸಿದ ಬೌದ್ಧಧರ್ಮಕ್ಕಾಗಲಿ ಸೀಮಿತವಾಗದೆ ತಮಗೆ ಸೂಕ್ತವೆಂದು ತಿಳಿದ ಮತ್ತು ತಮ್ಮ ನಿಲುವು ಹಾಗೂ ಚಿಂತನೆಗಳಿಗೆ ಸೂಕ್ತವೆಂದು ಭಾವಿಸಿರುವ ಇತರೆ ಸಿದ್ಧಾಂತಗಳತ್ತ ಮುಖ ಮಾಡಿರುವುದು ತಿಳಿದುಬರುತ್ತದೆ.

೧೩. ಕನ್ನಡ ಚಿಂತನ ಸಾಹಿತ್ಯದಲ್ಲಿ ಮಾರ್ಕ್ಸ್‌ವಾದಿ ಚಿಂತನೆಗಳು ಅಂಬೇಡ್ಕರ್ ಅವರ ಚಿಂತನಧಾರೆಗಳನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತವೆ. ಆದರೆ ಅಂಬೇಡ್ಕರ್ ಅವರು ಸ್ವೀಕರಿಸಿದ ಬೌದ್ಧಧರ್ಮಕ್ಕೆ ಕೆಲವವು ಧಾರೆಗಳು ವಿರೋಧವನ್ನು ವ್ಯಕ್ತಪಡಿಸುತ್ತವೆ. ಮತ್ತೇ ಕೆಲವು ಚಿಂತನಧಾರೆಗಳು ಬೌದ್ಧಧರ್ಮದ ಬಗೆಗೆ ಮೌನವಹಿಸುತ್ತವೆ. ಈ ವಿರೋಧಕ್ಕೆ ಕಾರಣ ಮಾರ್ಕ್ಸ್‌ನ ಗ್ರಹಿಕೆಯಂತೆ 'ಧರ್ಮ' ಎಂಬುದನ್ನು 'ಅಫೀಮು' ಎಂಬ ನೆಲೆಯಲ್ಲಿ ಸ್ವೀಕರಿಸಿರುವಂತಿದೆ. ಆದ್ದರಿಂದ ಇವರು ಬೌದ್ಧಧರ್ಮವನ್ನು ನಿರಾಕರಣೆಗೆ ಗುರಿಪಡಿಸುತ್ತಾರೆ. ಹಾಗೆಯೇ ಬೌದ್ಧಧರ್ಮದ ಬಗೆಗೆ ಮೌನವಹಿಸುವುದರ ಹಿಂದಿನ ಉದ್ದೇಶವೆಂದರೆ, ಇಲ್ಲಿ ದಲಿತರನ್ನು ಅಂಬೇಡ್ಕರ್ ಚಿಂತನೆಗಳ ಮೂಲಕ ತಮ್ಮ ಹೋರಾಟಗಳತ್ತ ಸೆಳೆಯುವುದಾಗಿದೆ. ಆದ ಕಾರಣ ಇವರು ಈ ಧರ್ಮವನ್ನು ವಿರೋಧಿಸಲೂ ಆಗದೆ, ಸ್ವೀಕರಿಸಲೂ ಸಿದ್ಧರಿಲ್ಲದೆ ಮೌನ ಮಾರ್ಗವನ್ನು ಅನುಸರಿಸುತ್ತಾರೆ. ತಮ್ಮ ಸಂಘಟನೆ ಮತ್ತು ಹೋರಾಟಗಳಿಗೆ ಮಾರ್ಕ್ಸ್ ಚಿಂತನೆಗಳೊಂದಿಗೆ ಅಂಬೇಡ್ಕರರನ್ನು ಬಳಸಿಕೊಳ್ಳುತ್ತಾರೆಯೇ ಹೊರತು ಬೌದ್ಧಧರ್ಮದ ಪ್ರಸ್ತಾಪವಾಗಲಿ, ಲಾಂಛನವಾಗಲಿ ಕಂಡುಬರುವುದಿಲ್ಲ. ಇವರು ತಮ್ಮ ಸಂಘಟನೆ ಹಾಗೂ ಹೋರಾಟಗಳ ಕರಪತ್ರ ಹಾಗೂ ಭಿತ್ತಿಪತ್ರಗಳಲ್ಲಿ ಬಳಸುವ 'ಲಾಲ್ ಸಲಾಂ, ಜೈ ಭೀಮ್, ಎಂಬ ವಾಕ್ಯವು ಅಂಬೇಡ್ಕರ್ ಅವರನ್ನು ಸ್ವೀಕರಿಸಿ, ಬೌದ್ಧಧರ್ಮದ ಬಗೆಗೆ ತಾಳಿರುವ ಮೌನವನ್ನು ಎತ್ತಿಹಿಡಿಯುತ್ತದೆ.

೧೪. ಕನ್ನಡ ಚಿಂತನ ಸಾಹಿತ್ಯದಲ್ಲಿ ಅಂಬೇಡ್ಕರ್ ವಿಚಾರಗಳ ಅಡಿಯಲ್ಲಿ ಬೌದ್ಧದರ್ಶನವನ್ನು ವಿಶ್ಲೇಷಣೆಗೆ ಒಳಪಡಿಸಿರುವುದು ಹೆಚ್ಚಾಗಿ ಕಂಡುಬರುತ್ತದೆ. ಆದರೆ ಅಂಬೇಡ್ಕರ್ ಅವರಿಗಿಂತಲೂ ಪೂರ್ವದಲ್ಲಿ ಹಲವಾರು ದಾರ್ಶನಿಕರು ಬೌದ್ಧ ದರ್ಶನದ ಮಹತ್ವವನ್ನು ಕುರಿತಾಗಿ ತತ್ವ ಚಿಂತನೆಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಇವರ ಚಿಂತನೆಗಳನ್ನು ಮುಖ್ಯವಾಗಿ ಪರಿಗಣಿಸದೆ

ಅಂಬೇಡ್ಕರ್ ವಿಚಾರಗಳಿಗೆ ಪೂರಕವಾದ ನೆಲೆಯಲ್ಲಿ ತಮ್ಮ ಬೌದ್ಧ ಚಿಂತನೆಗಳನ್ನು ವ್ಯಕ್ತಪಡಿಸುತ್ತ ಬಂದಿದ್ದಾರೆ. ಇಲ್ಲಿ ಪ್ರಗತಿಪರ ಚಿಂತಕರು ಹಾಗೂ ದಾರ್ಶನಿಕರನ್ನು ಹಿಂದುತ್ವವಾದಿಗಳು ತಮ್ಮ ಸಂಘಟನೆಯ ಭಾಗವಾಗಿ ಪರಿವರ್ತಿಸಿಕೊಂಡಿರುವುದು ಕೂಡ ಇಲ್ಲಿ ನಿರಾಕರಣೆಗೆ ಕಾರಣವಿರಬಹುದು. ಕರ್ನಾಟಕಕ್ಕೆ ಅಂಬೇಡ್ಕರ್ ಚಿಂತನಧಾರೆಗಳು ಪರಿಚಯವಾಗುವುದಕ್ಕೂ ಪೂರ್ವದಲ್ಲಿ ಇಲ್ಲಿನ ದಲಿತ ಹಾಗೂ ಹಿಂದುಳಿದವರ ವಿಮೋಚನೆಯ ಹೋರಾಟಕ್ಕೆ ಬೇಕಾದ ತಾತ್ವಿಕ ನೆರವುಗಳನ್ನು ಬಸವಣ್ಣ ಹಾಗೂ ಸ್ವಾಮಿ ವಿವೇಕಾನಂದರಂತಹ ದಾರ್ಶನಿಕರ ವಿಚಾರಧಾರೆಗಳಿಂದ ಪಡೆದುಕೊಂಡಿದ್ದಾರೆ. ಆದರೆ ಬಾಬಾಸಾಹೇಬರು ಕರ್ನಾಟಕಕ್ಕೆ ಪರಿಚಯವಾದ ತರುವಾಯದಲ್ಲಿ ಬುದ್ಧನ ವಿಚಾರಧಾರೆಗಳನ್ನು ಕೇಂದ್ರವಾಗಿಟ್ಟುಕೊಂಡು ಈ ದಾರ್ಶನಿಕರನ್ನು ಮೂಲಭೂತವಾದಿ ನೆಲೆಯಲ್ಲಿ ಗ್ರಹಿಸುವ ಚಿಂತನೆಗಳು ಕನ್ನಡ ವಿಚಾರ ಸಾಹಿತ್ಯದಲ್ಲಿ ಕಂಡುಬರುತ್ತಿವೆ.

೧೫. ದಲಿತರು ಹಾಗೂ ದಮನಿತ ಸಮುದಾಯವನ್ನು ಅಸಮಾನತೆಯ ಹಿಂದುತ್ವದ ನೆಲೆಯಿಂದ ಬಿಡುಗಡೆಗೊಳಿಸುವ ಭಾಗವಾಗಿ ಅಂಬೇಡ್ಕರರು ಬೌದ್ಧಧರ್ಮವನ್ನು ಸ್ವೀಕರಿಸಿದರು. ಆದರೆ ಇಂದು ಅಂಬೇಡ್ಕರ್ ಅವರನ್ನು ಮುಂದಿಟ್ಟುಕೊಂಡು ದಲಿತರಲ್ಲಿಯೇ ಬಲಗೈ ಪಂಗಡದವರು ಬುದ್ಧನನ್ನು ತಮ್ಮ ಜಾತಿ, ಸಂಘಟನೆಯ ಲಾಂಛನವಾಗಿ ಬಳಸಿಕೊಂಡು, ಬುದ್ಧನನ್ನು ಹೊಲೆಯನನ್ನಾಗಿ ಮಾಡುತ್ತಿದ್ದಾರೆ ಎಂಬ ಅಸಮಾಧಾನ ಹಾಗೂ ಆರೋಪಗಳು ಕನ್ನಡದ ವಿಚಾರವಾದಿಗಳಲ್ಲಿ, ಅದರಲ್ಲೂ ವಿಶೇಷವಾಗಿ ಬಲಗೈ ಪಂಗಡದ ವಿಚಾರವಾದಿಗಳಲ್ಲಿಯೇ ಒಡಮೂಡುತ್ತಿರುವುದು ಕನ್ನಡ ಚಿಂತನ ಸಾಹಿತ್ಯದ ಒಂದು ಧಾರೆಯಲ್ಲಿ ಕಂಡುಬರುತ್ತಿದೆ. ದಲಿತರಲ್ಲಿಯೇ ಇಂದು ಎಡಗೈ ಮತ್ತು ಬಲಗೈ ಎಂಬ ಎರಡು ಬಣಗಳು ಸೃಷ್ಟಿಯಾಗಿವೆ. ಬಲಗೈ ಪರಂಪರೆಯವರು ಅಂಬೇಡ್ಕರ್ ಹಾಗೂ ಬುದ್ಧನನ್ನು ತಮ್ಮ ಹೋರಾಟ, ಸಂಘಟನೆ ಹಾಗೂ ಚಳವಳಿಗಳಿಗೆ ಲಾಂಛನವಾಗಿ ಬಳಸಿಕೊಳ್ಳುತ್ತಿದ್ದಾರೆ. ಇದರಿಂದ ಎಡಗೈ ಪರಂಪರೆಯವರು ಅಂಬೇಡ್ಕರ್ ಮತ್ತು ಬುದ್ಧರಿಗೆ ಪರ್ಯಾಯ ನೆಲೆಯಲ್ಲಿ ಬಾಬು ಜಗಜೀವನರಾಮ್ ಹಾಗೂ ಆದಿ ಜಾಂಬವ, ಮಾದಾರ ಚೆನ್ನಯ್ಯರಂತಹ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪುರುಷರನ್ನು ತಮ್ಮ ಸಂಘಟನೆಯ ಲಾಂಛನವಾಗಿ ಸ್ವೀಕರಿಕೊಂಡು ತಮ್ಮ ಹೋರಾಟವನ್ನು ಮುಂದುವರೆಸುತ್ತಿರುವುದು ಕಂಡುಬರುತ್ತದೆ. ಈ ರಾಜಕೀಯ ನೆಲೆಯನ್ನು ಪ್ರಗತಿಪರ ದಲಿತ ಚಿಂತನಧಾರೆಗಳು ವಿರೋಧಿಸಿ, ಸಂಘಟನಾತ್ಮಕ ನೆಲೆಯಲ್ಲಿ ಬಾಬಾಸಾಹೇಬರು ರೂಪಿಸಿಕೊಟ್ಟ ಬೌದ್ಧದರ್ಶನದ ಅಡಿಯಲ್ಲಿ ದಲಿತರೆಲ್ಲ ಒಗ್ಗಟ್ಟಿನಿಂದ ಮುನ್ನಡೆಯಬೇಕಾದ ಅನಿವಾರ್ಯತೆಯ ಕುರಿತು ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸಿದ್ದಾರೆ.

೧೬. ಕನ್ನಡ ಚಿಂತನ ಪರಂಪರೆಯಲ್ಲಿ ಬೌದ್ಧದರ್ಶನದ ಕುರಿತಾಗಿ ಬಹುತೇಕ ವಿಚಾರಧಾರೆಗಳು ಸ್ವೀಕಾರ ಹಾಗೂ ಆರಾಧನ ನಿಲುವನ್ನು ತಾಳಿವೆ. ಆದರೆ ಈ ಧೋರಣೆಗಳು ಬೌದ್ಧಧರ್ಮದ ಅಡಿಯಲ್ಲಿ ಹೊಸ ರೂಪ ತಳೆಯುತ್ತಿರುವ ಮೂಲಭೂತವಾದಿ ನೆಲೆಗಳನ್ನು ಮರೆಮಾಚುವ,

ಇಲ್ಲವೆ ಈ ಧರ್ಮವು ಮೂಲಭೂತವಾದದಿಂದ ದೂರವಿದೆ ಎಂಬುದನ್ನು ಸಮರ್ಥಿಸಿಕೊಳ್ಳುವ ನೆಲೆಗಟ್ಟಿನಲ್ಲಿ ಒಡಮೂಡಿವೆ.

೧೭. ಕನ್ನಡ ಚಿಂತನ ಸಾಹಿತ್ಯದಲ್ಲಿ ಕೆಲವು ದಲಿತ ಚಿಂತನೆಗಳು ಬೌದ್ಧಧರ್ಮಕ್ಕೆ ಮತಾಂತರ ಹೊಂದುವುದನ್ನು ಸಮರ್ಥಿಸಿಕೊಳ್ಳುವುದು ಕಂಡುಬರುತ್ತದೆ. ಈ ಪ್ರಕ್ರಿಯೆಯನ್ನು ಕೆಲವು ಪ್ರಗತಿಪರ ದಲಿತ ಚಿಂತನೆಗಳು ಮೂಲಭೂತವಾದಿ ನೆಲೆಯಲ್ಲಿ ಬೌದ್ಧಧರ್ಮ ರೂಪಗೊಳ್ಳುತ್ತದೆ ಎಂಬ ಆತಂಕವನ್ನು ವ್ಯಕ್ತಪಡಿಸುತ್ತಾರೆ. ಈ ಧರ್ಮಕ್ಕೆ ಮತಾಂತರಗೊಳ್ಳುವುದನ್ನು ವಿರೋಧಿಸುವುದಕ್ಕೆ ಪ್ರಮುಖ ಕಾರಣವೆಂದರೆ, ಕೆಲವು ಸಂಘಟನೆಗಳು ತಮ್ಮ ಬಲ ಪ್ರದರ್ಶನದ ರಾಜಕಾರಣಕ್ಕೆ ದಲಿತರನ್ನು ಗುಂಪುಗುಂಪಾಗಿ ಬೌದ್ಧಧರ್ಮಕ್ಕೆ ಮತಾಂತರಗೊಳಿಸುತ್ತಿದ್ದಾರೆ. ಈ ಮತಾಂತರಗೊಂಡ ನವಬೌದ್ಧರಿಗೆ ಧರ್ಮವನ್ನು ಅರ್ಥೈಸಿಕೊಳ್ಳುವುದರಲ್ಲಿ ಹಾಗೂ ಅನುಸರಿಸುವುದರಲ್ಲಿ ಎದುರಾಗುವ ಬಿಕ್ಕಟ್ಟುಗಳನ್ನು ಬಗೆಹರಿಸಿಕೊಳ್ಳಲು ಸೂಕ್ತವಾದ ವೇದಿಕೆ ಇಲ್ಲ. ಇದರಿಂದ ಸಾಮಾನ್ಯ ಜನತೆಗೆ ಯಾವುದೇ ಸ್ಪಂದನೆ ಸಿಗುತ್ತಿಲ್ಲ ಎಂಬ ವಿರೋಧಿ ನೆಲೆಯ ಚಿಂತನೆಗಳು ದಲಿತರಲ್ಲಿ ಒಡಮೂಡುತ್ತಿವೆ. ಆದರೆ ಇದರ ಬಗೆಗೆ ಕನ್ನಡ ಚಿಂತನ ಸಾಹಿತ್ಯದಲ್ಲಿ ದಾಖಲೆಗಳಿಲ್ಲ.

೧೮. ಬೌದ್ಧಧರ್ಮದಲ್ಲಿ ಮಹಿಳೆಯರಿಗೆ ಮುಕ್ತವಾದ ಅವಕಾಶಗಳನ್ನು ಕಲ್ಪಿಸಿಕೊಡಲಾಗಿತ್ತು. ಆದರೆ ಕನ್ನಡ ಚಿಂತನ ಪರಂಪರೆಯಲ್ಲಿ ಮಹಿಳೆಯರ ಸಹಭಾಗಿತ್ವವು ತುಂಬ ವಿರಳವಾಗಿದೆ. ಇಲ್ಲಿ ಮಹಿಳೆಯರು ಬೌದ್ಧಧರ್ಮ ಅಡಿಯಲ್ಲಿ ನಡೆಯುವಂತಹ ಆಚರಣ ನೆಲೆಯ ಸಭೆ ಸಮಾರಂಭಗಳಲ್ಲಿ ಮಾತ್ರ ಭಾಗವಹಿಸುತ್ತಾರೆಯೇ ಹೊರತು ಬೌದ್ಧಧರ್ಮ ಹಾಗೂ ದರ್ಶನದ ಕುರಿತಾಗಿ ಪ್ರತಿಕ್ರಿಯಿಸುವುದು ಹೆಚ್ಚಾಗಿ ಕಂಡುಬರುವುದಿಲ್ಲ. ಕನ್ನಡ ವಿಚಾರ ಸಾಹಿತ್ಯದಲ್ಲಿ ಮಹಿಳೆಯರ ಸಹಭಾಗಿತ್ವ ತುಂಬ ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತದೆ. ಇದಕ್ಕೆ ಕಾರಣವೆಂದರೆ, ಸಮಕಾಲೀನ ಸಂದರ್ಭದಲ್ಲಿ ಅಂಬೇಡ್ಕರ್ ಅವರ ವಿಚಾರಗಳನ್ನು ಆಧಾರವಾಗಿಟ್ಟುಕೊಂಡು ಬೌದ್ಧಧರ್ಮದ ನೆಲೆಯಲ್ಲಿ ಹೋರಾಟಕ್ಕೆ ಮುಂದಾಗಿರುವ ಸಂಘಟನೆ ಮತ್ತು ಚಳವಳಿಗಳು ದಲಿತರ ಹಾಗೂ ಅಸ್ಪೃಶ್ಯರ ಸಮಸ್ಯೆಗಳನ್ನು ಕೇಂದ್ರವಾಗಿಟ್ಟುಕೊಂಡು ತಮ್ಮ ಹೋರಾಟವನ್ನು ಮುಂದುವರೆಸುತ್ತಿವೆ. ಈ ಕಾರಣದಿಂದಾಗಿ ಇಲ್ಲಿ ಮಹಿಳಾ ಸಮಸ್ಯೆ, ಸಂವೇದನೆಗಳಿಗೆ ಸೂಕ್ತ ಸ್ಪಂದನೆ ಸಿಗುತ್ತಿಲ್ಲ ಎಂಬ ಕಾರಣದಿಂದ ಸ್ತ್ರೀವಾದಿಗಳು ಬೌದ್ಧಧರ್ಮದ ಕಡೆಗೆ ಹೆಚ್ಚು ಗಮನಹರಿಸಿದಂತೆ ಕಾಣುವುದಿಲ್ಲ. ಬುದ್ಧನು ತನ್ನ ಸಂಘಕ್ಕೆ ಮಹಿಳೆಯರನ್ನು ಸೇರಿಸಿಕೊಳ್ಳುವ ವಿಚಾರದಲ್ಲಿ ಕೆಲವು ದಿನಗಳ ಕಾಲ ಮೌನವಹಿಸಿದ ಬಗೆಯನ್ನು ಕುರಿತು ಒಲಪಂಥೀಯ ಚಿಂತನೆಗಳು ಬುದ್ಧನಿಗೆ ಮಹಿಳೆಯರನ್ನು ತನ್ನ ಸಂಘಕ್ಕೆ ಸೇರಿಸಿಕೊಳ್ಳಲು ಹಾಗೂ ಮಹಿಳೆಯರು ಭಿಕ್ಷಿಣಿಯರಾಗಿ ಸೇರಿಸಿಕೊಳ್ಳಲು ಸಹಮತವಿರಲಿಲ್ಲ ಎಂಬ ವಾದವನ್ನು ಮಂಡಿಸಿದರೆ, ದಲಿತ ಹಾಗೂ ಇತರೆ ಪ್ರಗತಿಪರ ಚಿಂತಕರು ಬುದ್ಧನ ಈ ಆರಂಭಿಕ ಧೋರಣೆಯನ್ನು ಸಮರ್ಥಿಸಿಕೊಳ್ಳು ನೆಲೆಯಲ್ಲಿ ತಮ್ಮ ಚಿಂತನೆಗಳನ್ನು ವ್ಯಕ್ತಪಡಿಸಿರುವುದು ಕನ್ನಡ ಚಿಂತನ ಪರಂಪರೆಯಲ್ಲಿ

ಕಂಡುಬರುತ್ತದೆ. ಇಲ್ಲಿನ ಬಹುತೇಕ ಚಿಂತನೆಗಳು ಮಹಿಳೆಯರ ಪರವಾಗಿರುವುದಕ್ಕಿಂತ ಬುದ್ಧನ ಧೋರಣೆಗಳನ್ನು ಸಮರ್ಥಿಸಿಕೊಳ್ಳುವ ನೆಲೆಯಲ್ಲಿ ಮೂಡಿಬಂದಿವೆ.

೧೯. ಕನ್ನಡ ಚಿಂತನ ಸಾಹಿತ್ಯದಲ್ಲಿ ವಿಭಿನ್ನ ತಾತ್ವಿಕ ಹಾಗೂ ಸೈದ್ಧಾಂತಿಕ ಆಯಾಮಗಳನ್ನು ಹೊಂದಿರುವ ಮಾರ್ಕ್ಸ್‌ವಾದ, ಲೋಹಿಯಾವಾದ ಹಾಗೂ ಅಂಬೇಡ್ಕರ್‌ವಾದಗಳು ಸಮಕಾಲೀನ ಸಂದರ್ಭದಲ್ಲಿನ ಸಾಮಾಜಿಕ ಅಸಮಾನತೆ ಹಾಗೂ ತಲ್ಲಣಗಳಿಗೆ ಪ್ರತಿಕ್ರಿಯಿಸುವ ನೆಲೆಗಟ್ಟಿನಲ್ಲಿ ಬೌದ್ಧದರ್ಶನ ತಾತ್ವಿಕತೆಯೊಂದಿಗೆ ಅನುಸಂಧಾನ ಹಾಗೂ ಮರುವ್ಯಾಖ್ಯಾನಕ್ಕೆ ಮುಂದಾಗಿವೆ. ಇದರ ಅಡಿಯಲ್ಲಿ ತಮ್ಮ ಮೂಲ ಸೈದ್ಧಾಂತಿಕ ಧೋರಣೆಗಳನ್ನು ಪರಿಷ್ಕರಿಸಿಕೊಳ್ಳುವತ್ತ ಗಮನಹರಿಸುತ್ತಿವೆ. ಆ ಮೂಲಕವಾಗಿ ನವಬೌದ್ಧ ದಾರ್ಶನಿಕತೆಯೊಂದಿಗೆ ತಮ್ಮ ತತ್ವ, ಪ್ರಣಾಳಿಕೆ, ಗುರಿ ಮತ್ತು ಉದ್ಧೇಶಗಳನ್ನು ಸಮನ್ವಯದ ನೆಲೆಗಟ್ಟಿನಲ್ಲಿ ಮರುಶೋಧಕ್ಕೆ ಒಳಪಡಿಸುತ್ತಿರುವುದು ಕಂಡುಬರುತ್ತದೆ.

೨೦. ಬೌದ್ಧದರ್ಶನವನ್ನು ಆಧಾರವಾಗಿಟ್ಟುಕೊಂಡು ದಲಿತ ಪ್ರಜ್ಞಾವಂತ ವರ್ಗವು ತನ್ನ ಸಮುದಾಯವನ್ನು ಪ್ರಗತಿಯ ಪಥದತ್ತ ಕೊಂಡೊಯ್ಯುವ ಕಾರ್ಯವನ್ನು ನಿರ್ವಹಿಸುತ್ತಿದೆ. ಇಲ್ಲಿ ಬೌದ್ಧ ದರ್ಶನವನ್ನು ಪ್ರಗತಿಪಥದ ಮಾದರಿಯಾಗಿ ಸ್ವೀಕರಿಸಿಕೊಂಡಿರುವ ಈ ವರ್ಗಕ್ಕೆ ಬೌದ್ಧಧರ್ಮವಾಗಲಿ, ಧರ್ಮವನ್ನು ಮುನ್ನಡೆಸುವ ಭಂತೆಗಳಾಗಲಿ ಮುಖ್ಯವಾಗುವುದಿಲ್ಲ. ಬುದ್ಧನ ವೈಚಾರಿಕತೆಯ ಅಡಿಯಲ್ಲಿ ಸಾಮಾಜಿಕ ಅಸಮಾನತೆಯನ್ನು ಅರಿಯುವ ಮೂಲಕ ಜಾಗೃತಿಯತ್ತ ತನ್ನ ಸಮುದಾಯವು ಮುಂದುವರೆಯಬೇಕೆಂಬುದು ಇಲ್ಲಿಯ ಪ್ರಮುಖ ಧೋರಣೆಯಾಗಿ ಕಂಡುಬರುತ್ತದೆ. ಈ ವರ್ಗವು ಬೌದ್ಧದರ್ಶನದ ಅಡಿಯಲ್ಲಿ ಅಲಕ್ಷಿತ ಸಮುದಾಯಕ್ಕೆ ಶಿಕ್ಷಣ, ತರಬೇತಿ, ಉದ್ಯೋಗದಂತಹ ಸಹಕಾರವನ್ನು ಪೂರೈಸುವತ್ತ ತನ್ನ ಕಾರ್ಯಯೋಜನೆಯನ್ನು ನಿರ್ವಹಿಸಿಕೊಂಡು ಬಂದಿದೆ. ಈ ವರ್ಗವು ಕನ್ನಡ ಚಿಂತನ ಸಾಹಿತ್ಯದ ನೆಲೆಗಟ್ಟಿನಲ್ಲಿ ಯಾವುದೇ ಸಾಹಿತ್ಯಕವಾದ ಚಿಂತನೆಗಳನ್ನು ವ್ಯಕ್ತಪಡಿಸದಿದ್ದರು ಸಹ ತನ್ನ ಉದ್ಧೇಶವನ್ನು ಕಾರ್ಯರೂಪಕ್ಕೆ ತರುವಂತಹ ಯೋಜನೆಗಳನ್ನು ರೂಪಿಸಿಕೊಂಡು ಬರುತ್ತಿದೆ. ಹಾಗೆಯೇ ಮತ್ತೊಂದು ಮಾದರಿಯು ಬೌದ್ಧದರ್ಶನವನ್ನು ಮುಂದಿಟ್ಟುಕೊಂಡು ಧಾರ್ಮಿಕ ನೆಲೆಗಟ್ಟನ್ನು ರೂಪಿಸಿಕೊಂಡು ಬರುತ್ತಿದೆ. ಇದು ಬೌದ್ಧದರ್ಶನವನ್ನು ವೈಚಾರಿಕ ನೆಲೆಯಲ್ಲಿ ಪ್ರಸ್ತಾಪಿಸುತ್ತಲೇ ಆಚರಣಾತ್ಮಕ ನೆಲೆಯ ಧರ್ಮದ ಪರಿಕಲ್ಪನೆಯನ್ನು ರೂಪಿಸುವತ್ತ ಮುನ್ನಡೆಯುತ್ತಿದೆ. ಇಲ್ಲಿ ಪ್ರಸ್ತಾಪ ಮಾಡಿರುವ ಈ ಎರಡು ಭಿನ್ನ ನೆಲೆಯ ಬೌದ್ಧದರ್ಶನದ ಮಾದರಿಗೆ ಸೂಕ್ತ ಉದಾಹರಣೆಯೆಂದರೆ, ಎಸ್. ಮರಿಸ್ವಾಮಿ ಮತ್ತು ಎಂ. ಮರಿಸ್ವಾಮಿ. ಎಸ್. ಮರಿಸ್ವಾಮಿಯವರು ಬೌದ್ಧ ದರ್ಶನದ ಅಡಿಯಲ್ಲಿ ಸಾಮಾಜಿಕ, ಆರ್ಥಿಕತೆಯ ಪ್ರಗತಿಯತ್ತ ಮುನ್ನಡೆದರೆ, ಎಂ. ಮರಿಸ್ವಾಮಿಯವರು ಆರಾಧನಾತ್ಮಕ ನೆಲೆಯಲ್ಲಿ ಬೌದ್ಧ ದರ್ಶನವನ್ನು ಪ್ರಗತಿಯತ್ತ ಕೊಂಡೊಯ್ಯುವ ಚಿಂತನೆಗಳನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿ ಆರ್ಥಿಕ, ಸಾಮಾಜಿಕ ತುರ್ತಿಗಿಂತ ದರ್ಶನ ಮಾತ್ರವೇ ಪ್ರಮುಖವಾಗಿ ಕಂಡುಬರುತ್ತದೆ.

೨೧. ಬೌದ್ಧ ದರ್ಶನವನ್ನು ಒಂದು ಜಾತಿ, ವರ್ಗದ ನೆಲೆಯಲ್ಲಿ ಅನುಸಂಧಾನಗೊಳಿಸುವ ಆಯಾಮಗಳು ಕನ್ನಡ ಚಿಂತನ ಸಾಹಿತ್ಯದಲ್ಲಿ ಕಂಡುಬರುತ್ತದೆ. ಹಾಗೆಯೇ ಜಾತಿ ಮತ್ತು ವರ್ಗರಹಿತವಾದ ವಿಶ್ವಾತ್ಮಕ ನೆಲೆಯಲ್ಲಿ ಬೌದ್ಧ ದರ್ಶನವನ್ನು ಪ್ರಸಾರ ಮಾಡುವ ನೆಲೆಗಳು ಕನ್ನಡ ಸಾಹಿತ್ಯ ಹಾಗೂ ಸಾಹಿತ್ಯೇತರ ಪ್ರಕಾರಗಳಲ್ಲಿ ಕಂಡುಬರುತ್ತವೆ. ಇಲ್ಲಿ ಜಾಗತಿಕ ಮಟ್ಟದ ಯುದ್ಧ, ಭಯೋತ್ಪಾದನೆ, ಹಿಂಸೆ, ವಂಚನೆಯಂತಹ ಜೀವ ವಿರೋಧಿ ಕೃತ್ಯಗಳನ್ನು ತಡೆಯುವ ನೆಲೆಯಲ್ಲಿ ಬೌದ್ಧ ದರ್ಶನವನ್ನು ಅನುಸಂಧಾನಗೊಳಿಸುವುದು ಕಂಡುಬರುತ್ತದೆ. ಈ ನಿಟ್ಟಿನಲ್ಲಿ ಬೌದ್ಧ ವಿಪ್ಪಾಶ್ಯನ ಕೇಂದ್ರವು ಯೋಗ, ಧ್ಯಾನದಂತಹ ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವ ಅಂಶಗಳನ್ನು ಬೌದ್ಧ ದರ್ಶನದ ಅಡಿಯಲ್ಲಿ ಪ್ರಸಾರ ಮಾಡುವಂತಹ ಜವಬ್ದಾರಿಯನ್ನು ಹೊತ್ತು ಮುನ್ನಡೆಯುತ್ತಿದೆ. ಈ ಪ್ರಕ್ರಿಯೆ ಯಾವುದೇ ಒಂದು ಜಾತಿ, ವರ್ಗಕ್ಕೆ ಸೀಮಿತವಾದುದಲ್ಲ. ಇಲ್ಲಿ ಸರ್ವಧರ್ಮಿಯರು ಸಮಾನ ನೆಲೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ.

೨೨. ಕನ್ನಡ ಚಿಂತನ ಸಾಹಿತ್ಯ ಹಾಗೂ ಸಾಹಿತ್ಯೇತರ ಪ್ರಕಾರದಲ್ಲಿ ಬೌದ್ಧ ದರ್ಶನವು ಬಿಡುಗಡೆಯ ಮಾರ್ಗವಾಗಿ ಕಾರ್ಯಪ್ರವೃತ್ತವಾಗುತ್ತಿದೆ. ಈ ಬಿಡುಗಡೆಯ ಮಾರ್ಗವು ಕೇವಲ ಒಂದು ವರ್ಗಕ್ಕೆ ಮಾತ್ರ ಸೀಮಿತವಾಗಿಲ್ಲ. ಹಾಗೆಯೇ ಈ ಬಿಡುಗಡೆಯ ಮಾರ್ಗವು ಭಿನ್ನ ಸ್ವರೂಪದಲ್ಲಿ ಕಂಡುಬರುತ್ತದೆ. ವಿಚಾರವಾದಿ ಬ್ರಾಹ್ಮಣ ಹಾಗೂ ಇತರೆ ಉನ್ನತ ವರ್ಗಗಳು ತಮ್ಮ ಜಾತಿಯ ಸಾಂಪ್ರದಾಯಿಕ ಕಟ್ಟುಪಾಡು ಹಾಗೂ ಮಾನಸಿಕ ಒತ್ತಡದಿಂದ ಬಿಡುಗಡೆಯನ್ನು ಬಯಸಿ ಬೌದ್ಧ ದರ್ಶನದತ್ತ ಮುಖ ಮಾಡಿದರೆ, ಸಾಮಾಜಿಕ ಅಸಮಾನತೆ ಹಾಗೂ ಅಸ್ಪೃಶ್ಯತೆಯನ್ನು ಅನುಭವಿಸುತ್ತಿರುವ ವರ್ಗವು ಜಾತಿಯ ಕೂಪದಿಂದ ಬಿಡುಗಡೆಯನ್ನು ಬಯಸಿ ಸ್ವಾಭಿಮಾನದ ಬದುಕಿಗಾಗಿ ಬೌದ್ಧ ದರ್ಶನದತ್ತ ಮುಖ ಮಾಡುವುದು ಕಂಡುಬರುತ್ತದೆ. ಹೀಗಾಗಿ ಬೌದ್ಧ ದರ್ಶನದ ಮುಖಾಂತರವಾಗಿ ವಿಭಿನ್ನ ನೆಲೆಯಲ್ಲಿ ವಿವಿಧ ವರ್ಗಗಳು ತನ್ನ ಸುತ್ತಮುತ್ತಲಿನ ಬೌದ್ಧಿಕ ಹಾಗೂ ಭೌತಿಕ ಒತ್ತಡದಿಂದ ಬಿಡುಗಡೆಗಾಗಿ ಶ್ರಮಿಸುತ್ತಿರುವುದು ಕಂಡುಬರುತ್ತದೆ.

೨೩. ಇಂದು ಬೌದ್ಧ ದರ್ಶನವನ್ನು ಹಾಗೂ ಬೌದ್ಧಧರ್ಮವನ್ನು ಹೆಚ್ಚಾಗಿ ಸ್ವೀಕರಿಸುತ್ತಿರುವ ವರ್ಗವೆಂದರೆ ಅದು ನಗರ ವಾಸಿಗಳು ಹಾಗೂ ಮಧ್ಯಮ ವರ್ಗದವರಾಗಿದ್ದಾರೆ. ತಳವರ್ಗದ ಜನತೆ ಎಷ್ಟೆಲ್ಲ ಅಸಮಾನತೆ, ಅಸ್ಪೃಶ್ಯತೆಯನ್ನು ಅನುಸರಿಸಿದರೂ ತಮ್ಮ ಮೂಲ ಪರಂಪರೆಯನ್ನು ಬಿಟ್ಟುಬರಲು ಸಿದ್ಧರಿಲ್ಲ. ಇದಕ್ಕೆ ಕಾರಣ ಅವರು ಕಟ್ಟಿಕೊಂಡಿರುವ ಸಾಮಾಜಿಕ ಸಂಬಂಧದಲ್ಲಿದೆ. ಹೀಗಾಗಿ ಈ ಬಂಧವನ್ನು ಬಿಡುವುದಕ್ಕೆ ಅವರಿಗೆ ಹಲವಾರು ಅಡ್ಡಿ ಆತಂಕಗಳಿವೆ. ಬೌದ್ಧ ದರ್ಶನವು ವೈಚಾರಿಕವಾದುದೆಂದು, ಇದೊಂದು ಪ್ರತ್ಯೇಕವಾದ ಧರ್ಮವಲ್ಲ ಎಂಬುದಾಗಿ ಮನವರಿಕೆ ಮಾಡಿಸಿದರೂ ತಮ್ಮ ಮೂಲ ಸಂಸ್ಕೃತಿಯ ದೈವಗಳೊಂದಿಗಿನ ಸಂಬಂಧಗಳನ್ನು ಕಡಿದುಕೊಳ್ಳಲು ಸಿದ್ಧರಿರುವುದಿಲ್ಲ. ಆದರೆ ನಗರ ವಾಸಿಗಳು ಹಾಗೂ ಮಧ್ಯಮ ವರ್ಗದವರು

ತಮ್ಮ ಮೂಲ ದೈವಗಳನ್ನು ತೊರೆದು ಬೌದ್ಧ ದರ್ಶನ ಮತ್ತು ಧರ್ಮದತ್ತ ಮುಖ ಮಾಡಿರುವುದು ಹೆಚ್ಚಾಗಿ ಕಂಡುಬರುತ್ತದೆ. ಈ ವರ್ಗಕ್ಕೆ ಸಾಮಾಜಿಕ ಸಂಬಂಧ ಮುಖ್ಯವಾಗುವುದಿಲ್ಲ. ಇವರ ಆರ್ಥಿಕತೆಯು ಇವರನ್ನು ಸ್ವಾವಲಂಭಿಗಳನ್ನಾಗಿ ಮಾಡಿರುವುದರಿಂದ ತಮಗೆ ಸೂಕ್ತವೆನಿಸಿದ ಧರ್ಮವನ್ನು ಸ್ವೀಕರಿಸಲು ಧೈರ್ಯದಿಂದ ಮುನ್ನುಗ್ಗುವುದು ಕಂಡುಬರುತ್ತದೆ. ಆದ್ದರಿಂದ ಆರ್ಥಿಕತೆಯು ಧಾರ್ಮಿಕ ನಂಬಿಕೆಗಳನ್ನು ನಿರ್ಧರಿಸುವ ಶಕ್ತಿಯನ್ನು ಪಡೆದುಕೊಂಡಿರುವ ಅಂಶವು ಇದರಿಂದ ತಿಳಿದುಬರುತ್ತದೆ.

೨೪. ಕನ್ನಡ ಚಿಂತನ ಸಾಹಿತ್ಯ ಪರಂಪರೆಯಲ್ಲಿ ದಲಿತರು ಅಂಬೇಡ್ಕರ್ ರೂಪಿಸಿದ ತತ್ವ ಚಿಂತನೆಗಳಿಂದಾಗಿ ಬೌದ್ಧಧರ್ಮ ಹಾಗೂ ದರ್ಶನದತ್ತ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಆದರೆ ಇಂದು ದಲಿತರಲ್ಲಿಯೇ ಸೃಷ್ಟಿಯಾಗಿರುವ ಎಡಗೈ ಮತ್ತು ಬಲಗೈ ಪಂಗಡಗಳ ನಡುವಿನ ಸಂಘರ್ಷದಿಂದಾಗಿ ಎಡಗೈ ಪಂಗಡದ ದಲಿತರು ತಮ್ಮ ಪರ್ಯಾಯ ಹೋರಾಟಕ್ಕೆ ಅಂಬೇಡ್ಕರ್ ಬದಲಿಗೆ ಬಾಬು ಜಗಜೀವನರಾಂ ಅವರನ್ನು ಬಳಸಿಕೊಳ್ಳುತ್ತಿದ್ದಾರೆ. ಆದರೆ ಅಂಬೇಡ್ಕರ್ ತೋರಿಸಿಕೊಟ್ಟ ಬೌದ್ಧಧರ್ಮದ ಬಗೆಗೆ ಈ ವರ್ಗದ ಚಿಂತಕರಿಗೆ ಯಾವುದೇ ವಿರೋಧಗಳು ಕಂಡುಬರುವುದಿಲ್ಲ. ಬಲಗೈನವರ ಕಾರ್ಯವೈಖರಿಯನ್ನು ವಿರೋಧಿಸುವ ನೆಲೆಯಲ್ಲಿ ಬೌದ್ಧಧರ್ಮ ಮತ್ತು ದರ್ಶನದ ಬಗೆಗೆ ಮೌನ ತಾಳುತ್ತಿದ್ದಾರೆ. ಆದರೆ ಇವರ ಅಂತರ್ಯದಲ್ಲಿ ಮಾತ್ರ ಅಂಬೇಡ್ಕರ್ ಹಾಗೂ ಬೌದ್ಧ ದರ್ಶನ ಜೀವಂತಿಕೆಯನ್ನು ಪಡೆದುಕೊಂಡಿದೆ.

೨೫. ಕನ್ನಡ ಸಾಹಿತ್ಯ ಪ್ರಕಾರದಲ್ಲಿ ಬೌದ್ಧ ದರ್ಶನವು ಕಾಲದಿಂದ ಕಾಲಕ್ಕೆ ತನ್ನ ಚಹರೆಗಳಲ್ಲಿ ವಿಕಾಸ, ಪಲ್ಲಟ, ಬದಲಾವಣೆಯೊಂದಿಗೆ ಅನುಸಂಧಾನಗೊಳ್ಳುತ್ತ ಬಂದಿದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬೌದ್ಧ ದರ್ಶನವು ಜಿ.ಪಿ. ರಾಜರತ್ನಂ ಅವರಿಂದ ಆರಂಭಗೊಂಡು ಸಮಕಾಲೀನ ಸಂದರ್ಭದ ತರುಣ ಬರಹಗಾರರ ಸಾಹಿತ್ಯ ಪ್ರಕಾರಗಳಲ್ಲಿ ವಿಭಿನ್ನ ಮಾದರಿಯಲ್ಲಿ ಬೆಳೆದು ಬಂದಿದೆ. ಈ ದರ್ಶನವು ನಿಂತ ನೀರಾಗದೆ ಕ್ರಿಯಾಶೀಲ ನೆಲೆಯಲ್ಲಿ ತನ್ನ ಬದಲಾವಣೆಯನ್ನು ಪಡೆದುಕೊಂಡು ಬಂದಿದೆ. ಹಾಗೆಯೇ ಆಯಾ ಕಾಲದ ಸಾಮಾಜಿಕ ಬದುಕಿಗೆ ಸ್ಪಂದಿಸುವ ಮೂಲಕ ತನ್ನ ಬಂಧವನ್ನು ಗಟ್ಟಿಗೊಳಿಸಿಕೊಂಡು ಬಂದಿದೆ. ಜಿ.ಪಿ. ರಾಜರತ್ನಂ ಅವರು ಆರಾಧನಾತ್ಮಕ ನೆಲೆಯಲ್ಲಿ ಬುದ್ಧನನ್ನು ಕನ್ನಡ ಸಾಹಿತ್ಯಕ್ಕೆ ಪರಿಚಯಿಸಿದರು. ನಂತರ ಬಿ.ಎಂ.ಶ್ರೀ. ಕುವೆಂಪು ಅವರು ದಾರ್ಶನಿಕ ನೆಲೆಯಲ್ಲಿ ಬುದ್ಧನ ವಿಚಾರಗಳನ್ನು ಸಮಕಾಲೀನ ಸಂದರ್ಭದ ಒತ್ತಡಗಳೊಂದಿಗೆ ಅನುಸಂಧಾನಗೊಳಿಸಿದರು. ನಂತರ ದಲಿತ ಬಂಡಾಯ ಸಾಹಿತ್ಯ ಪ್ರಕಾರದಲ್ಲಿ ಸಾಮಾಜಿಕ ಅಸಮಾನತೆಯನ್ನು ವಿರೋಧಿಸುವುದಕ್ಕೆ ಬೌದ್ಧದರ್ಶನವನ್ನು ಪ್ರಬಲ ಅಸ್ತ್ರವಾಗಿ ಬಳಸಿಕೊಂಡರು. ಹೀಗೆ ಬೆಳೆದುಬಂದ ಈ ಬೌದ್ಧದರ್ಶನವು ಧರ್ಮ, ದರ್ಶನ, ಚಾರಿತ್ರಿಕ ನೆಲೆಯಲ್ಲಿ ತನ್ನ ಪಲ್ಲಟದೊಂದಿಗೆ ಇಂದಿಗೂ ತನ್ನ ವಿಸ್ತಾರವನ್ನು ಮುಂದುವರೆಸುತ್ತಿರುವುದು ಕಂಡುಬರುತ್ತದೆ.

೨೬. ಕನ್ನಡ ಚಿಂತನ ಸಾಹಿತ್ಯದ ಒಂದು ಧಾರೆಯಾಗಿ ಬೆಳೆದು ಬಂದಿರುವ ಬೌದ್ಧ ದರ್ಶನವು ಕೇವಲ ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಇದರ ವ್ಯಾಪ್ತಿಯು ಸೀಮಿತವಾಗಿಲ್ಲ. ಈ ಬೌದ್ಧ ದರ್ಶನ ಹಾಗೂ ಧರ್ಮದ ವಿಕಾಸಕ್ಕೆ ಹಲವಾರು ಸಾಹಿತ್ಯಿಕ ಪತ್ರಿಕೆಗಳು, ಸಂಘ- ಸಂಸ್ಥೆಗಳು, ಹೋರಾಟ, ಚಳವಳಿಗಳು ಹಾಗೂ ಹಲವಾರು ವ್ಯಕ್ತಿಗಳ ಸಹಕಾರವನ್ನು ಪಡೆಯುವ ಮೂಲಕವಾಗಿ ಬೌದ್ದ ದರ್ಶನವು ಸಾಹಿತ್ಯದೊಂದಿಗೆ ಕ್ರಿಯಾಶೀಲ ನೆಲೆಯಲ್ಲಿ ತನ್ನ ಅಂತರ್ ಸಂಬಂಧವನ್ನು ಮುಂದುವರೆಸಿಕೊಂಡು ಬಂದಿದೆ.

೨೭. ಬೌದ್ಧಧರ್ಮದ ಮತಾಂತರ ಪ್ರಕ್ರಿಯೆಯ ಹಿಂದೆ ಆರ್ಥಿಕತೆ ಮತ್ತು ಮೀಸಲಾತಿಯ ನೆಲೆಗಳು ಕಂಡುಬರುತ್ತವೆ. ಸಮಕಾಲೀನ ಸಂದರ್ಭದಲ್ಲಿ ಮೀಸಲಾತಿಯಿಂದ ವಂಚಿತರಾಗುತ್ತೇವೆ ಎಂಬ ಧೋರಣೆಯಿಂದ ಮತಾಂತರಗೊಂಡ ಬಹುತೇಕ ದಲಿತರು ಮತ್ತೇ ತಮ್ಮನ್ನು ಹಿಂದೂಗಳೆಂದು ಗುರುತಿಸಿಕೊಂಡಿರುವುದು ತಿಳಿದುಬರುತ್ತದೆ.

೨೮. ಭಾರತದಲ್ಲಿ ದಲಿತರನ್ನು ಅಸ್ಪೃಶ್ಯತೆಯ ನೆಲೆಯಲ್ಲಿ ಶೋಷಣೆ ಒಳಪಡಿಸಿರುವವರು ಕೇವಲ ಬ್ರಾಹ್ಮಣರು ಮಾತ್ರವಲ್ಲ. ಬ್ರಾಹ್ಮಣಶಾಹಿಯು ರೂಪಿಸಿರುವ ಅಸಮಾನತೆಯ ಚೌಕಟ್ಟನ್ನು ಅಳವಡಿಸಿಕೊಂಡು ಬಂದಿರುವ ಶೂದ್ರ ಸಮುದಾಯದ ಪ್ರಬಲ ಜಾತಿಗಳು, ಭೂಹಿಡುವಳಿದಾರರು, ಬಂಡವಾಳಶಾಹಿ ಹಾಗೂ ಅಧಿಕಾರಶಾಹಿ ವರ್ಗವು ದಲಿತರನ್ನು ಶೋಷಣೆಗೆ ಒಳಪಡಿಸಿಕೊಂಡು ಬಂದಿದೆ. ಆದರೆ ಕನ್ನಡದ ಬೌದ್ಧ ನೆಲೆಯ ಚಿಂತನಧಾರೆಗಳು ಈ ಸೂಕ್ಷ್ಮಗಳನ್ನು ಗುರುತಿಸದೆ, ಕೇವಲ ಬ್ರಾಹ್ಮಣಶಾಹಿಯೊಂದನ್ನೆ ದೂರಿಕರಿಸಿಕೊಂಡು ಬಂದಿವೆ.

ಪರಾಮರ್ಶನ ಸಾಹಿತ್ಯ

ಅ. ಗ್ರಂಥಗಳು

೧. ಅನಂತ ನಾಗೇಂದ್ರ ಭಟ್ಟ, ಭಾರತೀಯ ತತ್ವಶಾಸ್ತ್ರ, ತಳಗವಾದಿ ಪ್ರಕಾಶನ, ಮೈಸೂರು, ೨೦೦೬

೨. ಅಮರೇಶ ನುಗಡೋಣಿ, ತತ್ವಪದ ಸಾಹಿತ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪

೩. ಅರವಿಂದ ಮಾಲಗತ್ತಿ, ಭಗವದ್ಗೀತೆಗೆ ನಮಸ್ಕಾರ, ವಿಸ್ಮಯ ಪ್ರಕಾಶನ, ಮೈಸೂರು, ೨೦೧೫

೪. ಆನಂದಮೂರ್ತಿ ಜಿ.ವಿ., ಬುದ್ಧ ತೋರಿದ ದಾರಿ, ಬೋಧಿಶ್ರೀ ಪ್ರಕಾಶನ, ತುಮಕೂರು, ೧೯೯೭

೫. ಎಲೋಶಿಯಸ್ ಜಿ., ತಮಿಳು ಬೌದ್ಧ ದಲಿತ ಹೋರಾಟಗಾರ ಅಯೋತಿದಾಸ್, (ಅನು) ಬಿ.ಸುಜ್ಞಾನಮೂರ್ತಿ, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೨

೬. ಓಬಳೇಶ್ ಘಟ್ಟಿ ಆರ್., ಬುದ್ಧನ ಧಮ್ಮ ಮತ್ತು ಇತರ ಧರ್ಮಗಳ ಒಂದು ವಿವೇಚನೆ, ಶಿವಗಂಗಾ ಪ್ರಕಾಶನ, ಸಕಲೇಶಪುರ, ೨೦೦೭

೭. ಕವಿತಾ ಕೃಷ್ಣ, ಜಗದ ಬೆಳಕು, ತನುಮನ ಪ್ರಕಾಶನ, ಮೈಸೂರು, ೨೦೦೭

೮. ಕಾಳೇಗೌಡ ನಾಗವಾರ, ಸೃಜನಶೀಲ ವೈಚಾರಿಕತೆ, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ೨೦೦೮

೯. ಕುಮಾರಕಕ್ಕಯ್ಯ ಪೋಳ, ಚಾತುರ್ವರ್ಣ ದರ್ಶನ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೧೦

೧೦. ಕೃಷ್ಣಮೂರ್ತಿ ಮ.ಸು., ಸೂಫೀ ಪ್ರೇಮಕಾವ್ಯ, ಮೈಸೂರು ವಿಶ್ವವಿದ್ಯಾಲಯ, ೧೯೯೫

೧೧. ಕೃಷ್ಣಮೂರ್ತಿ ಮ.ಸು., ಸಿದ್ಧಸಾಹಿತ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

೧೨. ಕೃಷ್ಣಯ್ಯ ಎ.ಡಿ., ಬೌದ್ಧೀಯತೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೯೭

೧೩. ಗಂಗಾಧರನ್ ಹೆಚ್., ಬುದ್ಧ ಭಗವಾನ್, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೯೭

೧೪. ಗಂಗಾಧರನ್ ಹೆಚ್., ಚಿಂತನ ಗಂಗೋತ್ರಿ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೪

೧೫. ಗಂಗೋಪಾಧ್ಯಾಯ ಎಂ.ಕೆ., ಭಾರತದಲ್ಲಿ ತತ್ವಶಾಸ್ತ್ರ, (ಅನು) ಬಿ.ಎನ್.ಸುಮಿತ್ರಾಬಾಯಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೫

೧೬. ಗಣೇಶ ಚಿಕ್ಕಮಗಳೂರು., ಕೇಡಿಲ್ಲದ ಹಾಡು, ರೂಪ ಪ್ರಕಾಶನ, ಮೈಸೂರು, ೨೦೧೩

೧೭. ಗೀತಾ ಬಿ.ಎಸ್., ಕರ್ನಾಟಕದ ಸಾಂಸ್ಕೃತಿಕ ಸಂಘರ್ಷ ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮

೧೮. ಗುರು ಅಜಾನ್ ಸುಮೇಧೊ (ಮೂಲ), ನಾಲ್ಕು ಶ್ರೇಷ್ಠಸತ್ಯಗಳು, (ಅನು)ಕೆ.ಬಿ.ಸಿದ್ಧಯ್ಯ, ವೀಚಿ, ಚಲನ ಪ್ರಕಾಶನ, ತುಮಕೂರು, ೧೯೯೪

೧೯. ಗುರುಪ್ರಸಾದ್ ಎಸ್., ಬುದ್ಧನ ಜಾತಕ ಕತೆಗಳ ಸಮೀಕ್ಷೆ, ರೋಹಿಣಿ ಎಂಟರ್ ಪ್ರೈಸಸ್, ಬೆಂಗಳೂರು, ೨೦೦೮

೨೦. ಚಂದ್ರಯ್ಯ ಬಿ.ನಂ., ಬುದ್ಧನ ಜಾತಕ ಕತೆಗಳು, ಸಂಪುಟ-೧, ವಿಶ್ವಮೈತ್ರಿ ಸಂಶೋಧನ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ (ರಿ), ಮೈಸೂರು, ೨೦೦೪

೨೧. ಚನ್ನಬಸಪ್ಪ ಕೋ., ಭಾರತದಲ್ಲಿ ಕೋಮುದ್ವೇಷ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೧೦

೨೨. ಚಿದಾನಂದಮೂರ್ತಿ ಎಂ., ಹೊಸತು-ಹೊಸತು, ಸ್ವಪ್ನಬುಕ್‌ಹೌಸ್, ಬೆಂಗಳೂರು, ೨೦೧೦

೨೩. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ೨೦೧೧

೨೪. ಜವರಯ್ಯ ಮ.ನ., ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ, ಸಿದ್ದಾರ್ಥ ಗ್ರಂಥಮಾಲೆ, ಮೈಸೂರು, ೧೯೯೫

೨೫. ಜವರಯ್ಯ ಮ.ನ., ಅಂಬೇಡ್ಕರ್:ಶೂದ್ರರು ಮತ್ತು ಮಹಿಳೆಯರು, ಬಹುಜನ ಮಾಧ್ಯಮ ಕೇಂದ್ರ (ರಿ), ಮೈಸೂರು, ೨೦೧೦

೨೬. ತೀರ್ಥರಾಂ ವಳಲಂಬೆ, ವಿಚಾರವಾದ ವಿಜ್ಞಾನ ಆಧ್ಯಾತ್ಮ ಮತ್ತು ದೇವರು, ಯಾನ ಪ್ರಕಾಶನ, ಮಂಗಳೂರು, ೨೦೦೭

೨೭. ತಿಪ್ಪೇಸ್ವಾಮಿ ಜಿ.ಆರ್. (ಸಂ), ವಿಚಾರ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೬

೨೮. ಥಿಯೋಡೋರ್ ಶೆರ್‌ಬಾತ್‌ಸ್ಕಿ, ಬೌದ್ಧಧರ್ಮದ ಕೇಂದ್ರದ ಪರಿಕಲ್ಪನೆ, (ಅನು) ಬಿ.ಆರ್.ಜಯರಾಮರಾಜೇ ಅರಸ್, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ೨೦೧೧

೨೯. ದತ್ತೋಪಂತ ಠೇಗಡಿ, ಸಾಮಾಜಿಕ ಕ್ರಾಂತಿ ಸೂರ್ಯ, (ಅನು) ಚಂದ್ರಶೇಖರ ಭಂಡಾರಿ, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, ೨೦೧೧

೩೦. ದೇವನೂರ ಮಹಾದೇವ, ಎದೆಗೆ ಬಿದ್ದ ಅಕ್ಷರ, ಅಭಿನವ ಪ್ರಕಾಶನ, ಬೆಂಗಳೂರು, ೨೦೧೩

೩೧. ದೇವರಾಜು ಬಿ.ಎಸ್., ಮಹಾಬೌದ್ಧ ದೀಕ್ಷಾ ಭಾಷಣ, ಆವರಣ ಪ್ರಕಾಶನ, ೨೦೧೩

೩೨. ದೇವಿಪ್ರಸಾದ್ ಚಟ್ಟೋಪಾಧ್ಯಾಯ, ಲೋಕಾಯತ, (ಅನು) ಜಿ.ರಾಮಕೃಷ್ಣ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೧

೩೩. ದೇವಿಪ್ರಸಾದ ಚಟ್ಟೋಪಾಧ್ಯಾಯ, ಭಾರತೀಯ ದರ್ಶನಗಳು, (ಅನು) ಬಿ.ವಿ.ಕಕ್ಕಿಲಾಯ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೪

೩೪. ಧರ್ಮಾನಂದ ಕೊಸಾಂಬಿ, ಭಗವಾನ್ ಬುದ್ಧ, (ಅನು) ಆದ್ಯರಂಗಚಾರ್ಯ, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೯೮

೩೫. ಧರ್ಮಾನಂದ ಕೊಸಾಂಬಿ, ಖುಲಾಸ ಮತ್ತು ಇತರ ಲೇಖನಗಳು, (ಅನು) ಗೀತಾ ಶೆಣೈ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೬

೩೬. ನಂಜುಂಡಸ್ವಾಮಿ ಎಂ., ಭಾರತದ ಮೊದಲ ದೊರೆಗಳು, ಮಾಳವ ಫಿಲೋಲಾಜಿಕಲ್ ಅಕಾಡೆಮಿ, ಬೆಂಗಳೂರು, ೨೦೧೧

೩೭. ನಂದನ ವೈ.ಬಿ., ಭಗವಾನ್ ಬುದ್ಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೩೮. ನಂದನ ವೈ.ಬಿ., ಬುದ್ಧಸಾಸನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೩೯. ನಂದನ ವೈ.ಬಿ., ಗೋತಮವಂಸ, ಬುದ್ಧವಚನ ಟ್ರಸ್ಟ್, ಬೆಂಗಳೂರು, ೨೦೧೩

೪೦. ನಂದನ ವೈ.ಬಿ., ಬುದ್ಧ ಧಮ್ಮದರ್ಶನ, ಬುದ್ಧವಚನ ಟ್ರಸ್ಟ್, ಬೆಂಗಳೂರು, ೨೦೦೬

೪೧. ನಂದಿಮಠ ಎಸ್.ಸಿ., ಕರ್ನಾಟಕದ ಧರ್ಮಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೬೭

೪೨. ನಟರಾಜ ಬೂದಾಳು ಎಸ್., ನಾಗಾರ್ಜುನ ಅಲ್ಲಮ ಒಂದು ತೌಲನಿಕ ಅಧ್ಯಯನ, ಗೋಧೂಳಿ ಪ್ರಕಾಶನ, ಬೆಂಗಳೂರು, ೨೦೧೦

೪೩. ನಟರಾಜ ಬೂದಾಳು ಎಸ್., ನಾಗಾರ್ಜುನ, ಮೂಲ ಮಧ್ಯಮಕಾರಿಕ, ಗೋಧೂಳಿ ಪ್ರಕಾಶನ, ಬೆಂಗಳೂರು, ೨೦೧೨

೪೪. ನಟರಾಜ್ ಹುಳಿಯಾರ್, ಇಂತಿ ನಮಸ್ಕಾರಗಳು, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೪

೪೫. ನಾಗರಾಜ್ ಡಿ.ಆರ್., ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೯

೪೬. ನಾಗರಾಜ್ ಡಿ.ಆರ್., ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೬

೪೭. ನಾಗರಾಜ್ ಡಿ.ಆರ್., ಸಂಸ್ಕೃತಿ ಕಥನ (ಸಂ), ಅಗ್ರಹಾರ ಕೃಷ್ಣಮೂರ್ತಿ, ಸ್ವಪ್ನಬುಕ್‌ಹೌಸ್, ಬೆಂಗಳೂರು, ೨೦೦೮

೪೮. ನಾಗರಾಜ್ ರಾವ್ ಆರ್. ಶಿವಮೊಗ್ಗ., ಏಷಿಯಾದ ಹಣತೆಗಳು, (ಅನು) ಕಮಲಾ ಹಂಪನಾ, ಪ್ರಾರ್ಥನಾ ಫೌಂಡೇಶನ್, ಮಹಾರಾಷ್ಟ್ರ, ೨೦೦೦

೪೯. ಪೋತೆ ಹೆಚ್.ಟಿ., ಮತ್ತು ಜಗನ್ನಾಥ್ ಸಿಂಧೆ (ಸಂ), ಮೀಸಲಾತಿ ಸಮಸ್ಯೆ ಸವಾಲುಗಳು, ತಿಪ್ಪಣಂಬು ಪ್ರಕಾಶನ, ಗುಲಬರ್ಗಾ, ೨೦೦೬

೫೦. ಪೋತೆ ಹೆಚ್.ಟಿ., ಸಂಸ್ಕೃತಿ ಸಂಕ್ರಮಣ, ಕುಟುಂಬ ಪ್ರಕಾಶನ, ಗುಲಬರ್ಗಾ, ೨೦೦೭

೫೧. ಪೋತೆ ಹೆಚ್.ಟಿ., ವಿಚಾರ ಸಾಹಿತ್ಯ ೨೦೦೬, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೭

೫೨. ಪ್ರಭುಶಂಕರ, ವಿಶ್ವಧರ್ಮ ದರ್ಶನ ಸಂಪುಟ-೧, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೨೦೦೩

೫೩. ಬರಗೂರು ರಾಮಚಂದ್ರಪ್ಪ, ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೦

೫೪. ಬರಗೂರು ರಾಮಚಂದ್ರಪ್ಪ, ಮರ್ಯಾದಸ್ಥ ಮನುಷ್ಯರಾಗೋಣ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೦

೫೫. ಬಸವರಾಜು ಎಲ್., ಬುದ್ಧಚರಿತೆ, ಮುದ್ದುಶ್ರೀ ಗ್ರಂಥಮಾಲೆ, ಬೆಂಗಳೂರು, ೨೦೧೦

೫೬. ಬಾಲಗೋಪಾಲ್ ಕೆ., ಪ್ರಾಚೀನ ಭಾರತದ ಚರಿತ್ರೆ, (ಅನು) ಎಚ್.ಎಸ್.ಶ್ರೀಮತಿ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೧೨

೫೭. ಬಾಲಗಂಗಾಧರ ಎಸ್.ಎನ್., ಬೌದ್ಧಿಕ ದಾಸ್ಯದಲ್ಲಿ ಭಾರತ, (ಅನು) ರಾಜರಾಮ ಹೆಗಡೆ, ನಿಲುಮೆ ಪ್ರಕಾಶನ, ಉತ್ತರ ಕನ್ನಡ, ೨೦೧೫

೫೮. ಭಗವಾನ್ ಕೆ.ಎಸ್., ಅನನ್ಯತೆ, ಮಹಿಮ ಪ್ರಕಾಶನ, ಮೈಸೂರು, ೨೦೧೧

೫೯. ಭಗವಾನ್ ಕೆ.ಎಸ್., ಶಂಕರಾಚಾರ್ಯ ಮತ್ತು ಪ್ರತಿಗಾಮಿತನ, ಮಹಿಮ ಪ್ರಕಾಶನ, ಮೈಸೂರು, ೨೦೧೩

೬೦. ಭಾಸ್ಕರ್ ಟಿ.ಎಂ., ಸಂಬುದ್ಧ, ಮರುಗ ಪ್ರಕಾಶನ, ಗುಲಬರ್ಗಾ, ೨೦೦೧

೬೧. ಭಾಸ್ಕರ್ ಟಿ.ಎಂ., ಬುದ್ಧನ ಚಿಂತನೆ, ಮರುಗ ಪ್ರಕಾಶನ, ಗುಲಬರ್ಗಾ, ೨೦೦೪

೬೨. ಮಂಜಪ್ಪ ಶೆಟ್ಟಿ ಎಂ.ಪಿ.,(ಸಂ), ತುಂಬಿದ ಕೊಡ, ಕಾಶಿವಿಶ್ವನಾಥ ಶೆಟ್ಟಿ ಸಂಸ್ಮರಣ ಗ್ರಂಥ ಸಮಿತಿ, ಚಿಕ್ಕಮಗಳೂರು, ೧೯೯೨

೬೩. ಮಣಿ ಭೌಮಿಕ್., ದೇವರು ಎಂಬ ಸಂಕೇತನಾಮ, (ಅನು) ಪುಟ್ಟಸ್ವಾಮಿ, ಅಭಿನವ ಪ್ರಕಾಶನ, ಬೆಂಗಳೂರು, ೨೦೧೩

೬೪. ಮಧು ವೆಂಕಾರೆಡ್ಡಿ., ಥೇರಿಗಾಥಾ, ಮಹಿಳಾ ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೧೯೯೬

೬೫. ಮನಿಯಾಲ್ ಗಣೇಶ್ ಶೆಣೈ, ಸಾವಿರ ಪಗೋಡಗಳ ನಾಡಿನಲ್ಲಿ, ಎಸ್.ಆರ್ ಎ.ಎಮ್.ಎಚ್.ಪ್ರಕಾಶನ, ಕೋಟೇಶ್ವರ, ೨೦೧೦

೬೬. ಮರಿಸ್ವಾಮಿ ಎಂ., ಬೆಳಕಿನ ಧರ್ಮ, ರೂಪ ಪ್ರಕಾಶನ, ಮೈಸೂರು, ೨೦೦೫

೬೭. ಮಹಾದೇವಿ ಮತ್ತು ಒಡೆಯರ್ ಡಿ.ಹೆಗ್ಗಡೆ., ಧರ್ಮ, ಮಾನವಾಭಿವೃದ್ಧಿ ಅಧ್ಯಯನಗಳ ಕೇಂದ್ರ, ಮೈಸೂರು, ೨೦೦೯

೬೮. ಮಹೇಶ್ ಸಿ.ಕೆ., ದಲಿತ ಚರಿತೆ ಮತ್ತು ಬುದ್ಧ ಧಮ್ಮ, ವಿಮೋಚನಾ ಪ್ರಕಾಶನ, ಚಿತ್ರದುರ್ಗ, ೨೦೦೬

೬೯. ಮಹೇಶ್ ಸಿ.ಕೆ., ಧರ್ಮಾಂತರ, ವಿಮೋಚನಾ ಪ್ರಕಾಶನ, ಚಿತ್ರದುರ್ಗ, ೨೦೦೯

೭೦. ಮಾರುತಿ ಎಸ್.(ಸಂ), ವಿಚಾರ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೬

೭೧. ಮುನಿವೆಂಕಟಪ್ಪ ವಿ (ಸಂ), ದಲಿತ ಚಳವಳಿ ಚರಿತ್ರೆ, ತನುಮನು ಪ್ರಕಾಶನ, ಮೈಸೂರು, ೨೦೦೯

೭೨. ಮುನಿಶಾಮಪ್ಪ ಎ., ಸಾಮಾಜಿಕ ಚಳವಳಿಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ, ಕಾಲ ಪ್ರಕಾಶನ, ಬೆಂಗಳೂರು, ೨೦೦೯

೭೩. ಮೂಡ್ನಾಕೂಡು ಚಿನ್ನಸ್ವಾಮಿ, (ಸಂ), ಮರಳಿ ಮನೆಗೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೬

೭೪. ಮೂಡ್ನಾಕೂಡು ಚಿನ್ನಸ್ವಾಮಿ, ಒಂದು ಕೊಡ ಹಾಲಿನ ಸಮರ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೧

೭೫. ಮೊಳಕಾಲ್ಮೂರು ಶ್ರೀನಿವಾಸಮೂರ್ತಿ, ಸುಂದರ ಬದುಕಿಗೆ ಬುದ್ಧನ ದೀವಿಗೆ, ಕ್ರಾಂತಿಸಿರಿ ಪ್ರಕಾಶನ, ಬೆಂಗಳೂರು, ೨೦೦೮

೭೬. ಯತೀಶ್ವರ ಸೀ.ಚ.(ಸಂ), ಶಂಕರಾಚಾರ್ಯ ಮತ್ತು ಪ್ರತಿಗಾಮಿತನ ಕೃತಿ ಸಮೀಕ್ಷೆ, ಮಾನವ ಪ್ರಕಾಶನ, ಹಾಸನ, ೨೦೧೧

೭೭. ಯಮನೂರಪ್ಪ ಅಣ್ಣಿಗೇರಿ, ಧರ್ಮ ನಿರಪೇಕ್ಷತೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

೭೮. ಯಳನಾಡು ಅಂಜನಪ್ಪ, ಧರ್ಮ ಮತ್ತು ಮುಕ್ತ ವಿಚಾರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

೭೯. ರಹಮತ್ ತರೀಕೆರೆ, ಧರ್ಮಪರೀಕ್ಷೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೮

೮೦. ರಾಘವೇಂದ್ರರಾವ್, ಸಹಜ ಮಾರ್ಗ ಸಮೀಕ್ಷೆ, (ಅನು) ಆ.ಸರ್ನಾಡ, ಶ್ರೀರಾಮ ಚಂದ್ರಮಿಷನ್, ಷಹಜನ್‌ಪೂರ್ (ಉ.ಪ್ರ), ೧೯೭೭

೮೧. ರಾಜಣ್ಣ ಓ., ಬುದ್ಧಧಮ್ಮ ಹಾಗೂ ಸಾಮಾಜಿಕ ಚಿಂತನೆಗಳು, ಲೈಟ್ ಆಫ್ ಏಷಿಯ ಪಬ್ಲಿಕೇಷನ್ಸ್, ಬೆಂಗಳೂರು, ೨೦೧೨

೮೨. ರಾಮಲಿಂಗಪ್ಪ ಟಿ. ಬೇಗೂರ, ಅಲ್ಲಮಪ್ರಭು ಕುರಿತ ಅನುಸಂಧಾನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦

೮೩. ರಾಜಾರಾಂ ಬಿ.ವಿ., ಧಮ್ಮಪದ, ಬುದ್ಧವಚನ ಟ್ರಸ್ಟ್, ಬೆಂಗಳೂರು, ೧೯೮೯

೮೪. ರಾಜಾರಾಂ ಬಿ.ವಿ., ಮಹಾಬೋಧಿ ಸಂಸ್ಥೆಗಳು, ಬುದ್ಧವಚನ ಟ್ರಸ್ಟ್, ಬೆಂಗಳೂರು, ೨೦೧೪

೮೫. ರಾಮಕೃಷ್ಣ ಜಿ., ವೈಚಾರಿಕ ಜಾಗೃತಿ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೯೨

೮೬. ರಾಮಕೃಷ್ಣ ಜಿ., ದೇವಿಪ್ರಸಾದ್ ಮತ್ತು ಲೋಕಾಯತ ದರ್ಶನ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೪

೮೭. ರಾಮಚಂದ್ರಾಚಾರ್ ಡಿ.ಬಿ., ಧಮ್ಮಪದಸಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮

೮೮. ರಾಯಮಾನೆ ಎಂ.ಎಲ್., ಮಹಾಪುರುಷ ಬುದ್ಧನ ಧರ್ಮೋಪದೇಶಗಳು, ದಿವ್ಯಚಂದ್ರ ಪ್ರಕಾಶನ, ಬೆಂಗಳೂರು, ೨೦೦೧

೮೯. ಲಂಕೇಶ್ ಪಿ., ಟೀಕೆ–ಟಿಪ್ಪಣಿ–೩, ಲಂಕೇಶ್ ಪ್ರಕಾಶನ, ಬೆಂಗಳೂರು, ೨೦೧೦

೯೦. ವೀರೇಂದ್ರ ಹೆಗ್ಗಡೆ ಡಿ., ಧರ್ಮ ಮತ್ತು ಸಮಾಜ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೮

೯೧. ತಾಳ್ತಜೆ ವಸಂತ ಕುಮಾರ್, ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ, ವಿನಯ ಪ್ರಕಾಶನ, ಬೆಂಗಳೂರು, ೧೯೮೮

೯೨. ತಾಳ್ತಜೆ ವಸಂತ ಕುಮಾರ್, ಬೌದ್ಧಾಯನ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ, ೨೦೦೫

೯೩. ವೆಂಕಟಯ್ಯ ಅಪ್ಪಗೆರೆ., ಚಾರ್ವಾಕ, ಬಯಲು ಸೀಮೆ ಪ್ರಕಾಶನ, ಚನ್ನಪಟ್ಟಣ, ೧೯೯೨

೯೪. ವೆಂಕಟೇಶ್ ಕೆ (ಸಂ), ಅಂಬೇಡ್ಕರ್ ಒಂದು ಮರುವ್ಯಾಖ್ಯಾನ, ಸಂಸ್ಕೃತಿ ಪ್ರಕಾಶನ, ಬಳ್ಳಾರಿ, ೨೦೦೫

೯೫. ವೇದವ್ರತ (ಸಂ), ಭಾರತೀಯ ತತ್ವ ಚಿಂತನೆಯ ಆಕರಗಳು, ಭಾರತೀಯ ತತ್ವ ಚಿಂತನ ಪ್ರಕಾಶನ, ಮೈಸೂರು, ೨೦೦೬

೯೬. ಶತಾವಧಾನಿ ಆರ್.ಗಣೇಶ್ (ಸಂ), ಮಾಣಿಕ್ಯ ಮಾಧುರ್ಯ, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೨೦೧೦

೯೭. ಶಿವಕುಮಾರ, ಅಂಬೇಡ್ಕರ್‌ವಾದ ಮತ್ತು ದಲಿತಸಾಹಿತ್ಯ, ಸುಮೇಧ ಪ್ರಕಾಶನ, ಗುಲ್ಬರ್ಗ, ೨೦೧೨

೯೮. ಶಿವರುದ್ರಪ್ಪ ಜಿ.ಎಸ್ (ಸಂ)., ಚಿಂತನ ದೀಪ್ತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೪

೯೯. ಶೆಟ್ಟಿ ಸಿ.ಎನ್., ಗೌತಮ ಬುದ್ಧ ಬುದ್ಧ ಧಮ್ಮ, ಜ್ಞಾನಜ್ಯೋತಿ ಪ್ರಕಾಶನ, ಮಂಗಳೂರು, ೨೦೦೮

೧೦೦. ಶೇಷನವರತ್ನ., ಜಾಗತಿಕ ಧರ್ಮಗಳು, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೮

೧೦೧. ಶ್ರೀ ಅರವಿಂದರು., ಧರ್ಮ ಹಾಗೂ ರಾಷ್ಟ್ರೀಯತೆ, (ಅನು) ಸಿಂಪಿ ಲಿಂಗಣ್ಣ, ಬಾಳಾಚಾರ್ಯ ಗುರಾಚಾರ್ಯ ಅವಧಾನಿ ಮಿಂಚಿನಬಳ್ಳಿ, ಧಾರವಾಡ, ೧೯೮೪

೧೦೨. ಶ್ರೀಕಂಠಯ್ಯ ಬಿ.ಎಂ., ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ, ಕಾವ್ಯಾಲಯ ಪ್ರಕಾಶನ, ಮೈಸೂರು, ೧೯೭೦

೧೦೩. ಶ್ರೀ ಕುಮಾರಸ್ವಾಮಿಗಳು, ಬುದ್ಧ ಮತ್ತು ಬಸವ, (ಅನು) ಮಹಾದೇವಯ್ಯ ಟಿ.ಆರ್, ಭಾಗ್ಯರವಿ ಪ್ರಕಾಶನ, ಬೆಂಗಳೂರು, ೧೯೯೫

೧೦೪. ಶ್ರೀನಿವಾಸನ್ ಎಂ., ದೇವರು, ಅಂಕಿತ ಪುಸ್ತಕ, ಬೆಂಗಳೂರು, ೨೦೦೮

೧೦೫. ಸರದೇಸಾಯಿ ಎಸ್.ಜಿ.,(ಮೂಲ), ಭಾರತೀಯ ತತ್ವಜ್ಞಾನ: ವೈಚಾರಿಕ ಮತ್ತು ಸಾಮಾಜಿಕ ಸಂಘರ್ಷ, (ಅನು) ಗೌರೀಶ್ ಕಾಯ್ಕಿಣಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೮೨

೧೦೬. ಸರದೇಸಾಯಿ ಎಸ್.ಜಿ.(ಮೂಲ), ಪ್ರಾಚೀನ ಭಾರತದಲ್ಲಿ ದಾರ್ಶನಿಕ ಸಂಘರ್ಷ ಮತ್ತು ಅದರ ಸಾಮಾಜಿಕ ಮಹತ್ವ, (ಅನು) ಗೋಪಾಲ ಕೃಷ್ಣರಾವ್, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೨

೧೦೭. ಸರ್ವಪಲ್ಲಿ ರಾಧಾಕೃಷ್ಣನ್ (ಸಂ), ತತ್ವಶಾಸ್ತ್ರ: ಪ್ರಾಚ್ಯ ಮತ್ತು ಪಾಶ್ಚಾತ್ಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೦

೧೦೮. ಸೊಂದಲಗೆರೆ ಲಕ್ಷ್ಮಿಪತಿ, ಜಗತ್ತಿನ ಉದಾತ್ತ ಚಿಂತಕರು, ಕಾವ್ಯ ಕಲಾ ಪ್ರಕಾಶನ, ಬೆಂಗಳೂರು, ೨೦೧೦

೧೦೯. ಸುಮುಖಾನಂದ ಜಲವಳ್ಳಿ, ಮಾನವೀಯ ಮೌಲ್ಯ ಮತ್ತು ಧರ್ಮ, ಕಾವ್ಯಶ್ರೀ ಪ್ರಕಾಶನ, ದಕ್ಷಿಣ ಕನ್ನಡ ೧೯೯೯

೧೧೦. ಸುಷ್ಮಾ ಎನ್. ಹಾಗರಗಿ, ಕನ್ನಡದಲ್ಲಿ ಬೌದ್ಧ ಸಾಹಿತ್ಯ, ಸುಷ್ಮಾ ಎನ್.ಹಾಗರಗಿ ಪ್ರಕಾಶನ, ಗುಲಬರ್ಗಾ, ೨೦೧೨

೧೧೧. ಸ್ವಾಮಿ ಧರ್ಮತೀರ್ಥ, ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ, (ಅನು) ಕೆ.ಎಸ್.ಭಗವಾನ್, ಮಹಿಮ ಪ್ರಕಾಶನ, ಮೈಸೂರು, ೨೦೧೩

೧೧೨. ಸ್ವಾಮಿ ರಾಮ, ಹಿಮಾಲಯದ ಮಹಾತ್ಮರ ಸನ್ನಿಧಿಯಲ್ಲಿ, ಕಾಮಧೇನು ಪುಸ್ತಕ ಭವನ, ಬೆಂಗಳೂರು, ೨೦೧೩

೧೧೩. ಸ್ವಾಮಿ ಶ್ರೀ ವಿಜಯಿಂದ್ರ, ತತ್ವೋಪನ್ಯಾಸಗಳು, ತತ್ವಸೇವಾ ಸಮಿತಿ ಪ್ರಕಾಶನ, ಆದವಾನಿ, ೧೯೫೭

೧೧೪. ಹನುಮಂತರಾವ್ ಜಿ., ಆಧುನಿಕ ತತ್ವಶಾಸ್ತ್ರದ ಸಮಸ್ಯೆಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೫೬

೧೧೫. ಹನುಮಂತರಾವ್ ಜಿ., ಚಾರ್ವಾಕ ಲೋಕಾಯತ ಮತ್ತು ಸ್ವಾಭಾವವಾದ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೧೯೭೩

೧೧೬. ಹರಿಪ್ರಿಯ, ಸಮಗ್ರ ವಿಚಾರ ವಿಮರ್ಶೆ, ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು, ೧೯೯೮

೧೧೭. ಹಿರಿಯಣ್ಣ ಎಂ., ಭಾರತೀಯ ತತ್ವಶಾಸ್ತ್ರದ ಮೂಲಾಂಶಗಳು, (ಅನು) ರಾಮಕೃಷ್ಣರಾವ್ ಕೆ.ಬಿ., ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೧

೧೧೮. ಹಿರಿಯಣ್ಣ ಎಂ., ಭಾರತೀಯ ತತ್ವಶಾಸ್ತ್ರದ ರೂಪುರೇಖೆಗಳು, (ಅನು) ಪ್ರಭುಶಂಕರ, ಅಭಿನವ ಪ್ರಕಾಶನ, ಬೆಂಗಳೂರು, ೨೦೦೪

೧೧೯. ಹಿರೇಮಠ ಎಸ್.ಎಸ್., ಸಾಂಖ್ಯದರ್ಶನ, ಸಮತಾ ಪ್ರಕಾಶನ, ಹರಪನಹಳ್ಳಿ, ೨೦೦೩

೧೨೦. ಹಿರೇಮಠ ಎಸ್.ಎಸ್., ಲೋಕಾಯತ ದರ್ಶನ, ಸಮತಾ ಪ್ರಕಾಶನ, ಹರಪನಹಳ್ಳಿ, ೨೦೦೬

ಆ. ಲೇಖನಗಳು

೧. ಇಂದೂಧರ ಹೊನ್ನಾಪುರ (ಸಂ), ಸಂವಾದ, ಸಂಪುಟ ೧೪, ಸಂಚಿಕೆ ೧೨, ಅಕ್ಟೋಬರ್ ೨೦೧೬

೨. ದೇವೇಂದ್ರ ಹೆಗ್ಗಡೆ, ಈಶನ್ಯ ಟೈಮ್ಸ್, ದಿನ ಪತ್ರಿಕೆ, ೧೪ ಏಪ್ರಿಲ್ ೨೦೧೭,

೩. ದೇವೇಂದ್ರ ಹೆಗ್ಗಡೆ, ವಾರ್ತಾ ಭಾರತಿ, ದಿ: ೧೪ ಏಪ್ರಿಲ್ ೨೦೧೬,

೪. ಮೋಹನ್‌ರಾಜ್ ಆರ್. (ಸಂ), ಭೀಮವಾದ, ಸಂಪುಟ ೫, ಸಂಚಿಕೆ ೫, ಜನವರಿ ೨೦೧೫

೫. ಶ್ರೀನಿವಾಸ ಪಿಚ್ಚಳ್ಳಿ (ಸಂ), ಲೋಕ ಜಾನಪದ, ಸಂಪುಟ ೦೨, ಸಂಚಿಕೆ ೦೧, ಜನವರಿ–ಮಾರ್ಚ್ ೨೦೧೫

೬. ಯರ್ರಿಸ್ವಾಮಿ ಈ. (ಸಂ), ಅಚಲ, ಸಂಪುಟ ೨, ಸಂಚಿಕೆ ೨೭ ಏಪ್ರಿಲ್– ಜೂನ್ ೨೦೧೬.

* * *

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ